ವಿಷಯಾನುಕ್ರಮಣಿಕೆ

|| ಓಂ ಶ್ರೀ ದುರ್ಗಾಯೈ ನಮಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂಖ್ಯಾ-೫೭)

ಮಾರ್ಕಂಡೇಯ ಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೧

ಅನುವಾದಕ

ಆಸ್ಥಾನವಿದ್ವಾನ್, ಪಾಟಣಕರ ಚಂದ್ರಶೇಖರಭಟ್ಟ

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1953

ಪ್ರಸ್ತಾವನೆ

ಪ್ರತಿಯೊಂದು ಪ್ರಾಣಿಯು ಅನುಭವಿಸುತ್ತಿರುವ ಸುಖ-ದುಃಖಗಳು ಆಕಾಶದಿಂದ ಕಳಚಿಬೀಳುವುವು ಅಲ್ಲ. ತಾನು ಅದೇ ಜನ್ಮದಲ್ಲಿ ಅಥವಾ ಹಿಂದೆ ಕಳೆದ ನೂರಾರು ಜನ್ಮಗಳಲ್ಲಿ ಮಾಡಿದ್ದ ಪುಣ್ಯ-ಪಾಪಗಳ ಪರಿಣಾಮವಾಗಿರುವುವು. ಇದು ಆಸ್ತಿಕ ಜನರ ಅಚಲವಾದ ನಂಬಿಕೆ. ಇದನ್ನು ಮಹಾಮಹಿಮರಾದ ಮಹರ್ಷಿವರ್ಯರು ಸಾರಿ ಹೇಳಿರುವರು. ಆ ನಂಬಿಕೆಯು ಭರತಖಂಡದ ಮಾನವರ ರಕ್ತನಾಳಗಳಲ್ಲಿ ತುಂಬಿಹೋಗುವಂತೆ ಮಹಾಪುರುಷರು ತಮ್ಮ ಆದರ್ಶಪ್ರಾಯವಾದ ನಡತೆಗಳಿಂದಲೂ, ಉಪದೇಶಮಯವಾದ ನುಡಿಗಳಿಂದಲೂ ಪ್ರಸಾರಮಾಡಿರುವರು. ಇಂದಿನ ಜನಾಂಗವು ಇದಕ್ಕೆ ವಿರುದ್ಧವಾದ, ಬಗೆಬಗೆಯ ಸಿದ್ಧಾಂತಗಳಿಗೆ ತಲೆಬಾಗಿದ ಜನರ ಸಹವಾಸದಿಂದ ಅಚಲವಾಗಿದ್ದ ನಂಬಿಕೆಯನ್ನು ಕಳೆದುಕೊಳ್ಳುತ್ತಿದೆ. ಬೇರೊಂದು ಸ್ಥಿರವಾದ ಯಾವ ನಂಬಿಕೆಯನ್ನೂ ಹೊಂದುವಂತೆ ಇಲ್ಲ. ಹೀಗಿದ್ದರೂ ಸಹಿಸಲಾಗದ ದುಃಖಪರಂಪರೆಗಳು ಒದಗಿದಾಗ ಅದಕ್ಕೆ ಸಿಲುಕಿದ ಮಾನವನು "ಅಯ್ಯೋ! ವಿಧಿಯೆ!" ಎಂದು ಗೋಳಾಡುವುದನ್ನು ಕಾಣುತ್ತಿದ್ದೇವೆ. ದುಃಖಪರಂಪರೆಗೆ ಕಾರಣವಾಗಿ ವಿಧಿಯು ಇರುವುದಾದರೆ ಸುಖಪರಂಪರೆಗೆ ವಿಧಿಯು ಇಲ್ಲದೇ ಇಲ್ಲ.

"ಸುವರ್ಣಮಣಿರತ್ನಾದಿ ವಾಹನಂ ಗೃಹಮಾಸನಮ್ ।
ಸ್ತ್ರಿಯೋಽನ್ನಪಾನಂ ಪುತ್ರಾಶ್ಚ ಚಾರುಮಾಲ್ಯಾನುಲೇಪನಮ್ ॥
ಏತೇ ಚ ವಿವಿಧಾ ಭೋಗಾ ಗೀತವಾದ್ಯಾದಿಕಂ ಚ ಯತ್ ।
ಸರ್ವಮೇತನ್ಮಮ ಮತಂ ಫಲಂ ಪುಣ್ಯವನಸ್ಪತೇಃ ॥
ತಸ್ಮಾನ್ನರೇಣ ತನ್ಮೂಲಸೇಕೇ ಯತ್ನಃ ಕೃತಾತ್ಮನಾ ।
ಕರ್ತವ್ಯಃ ಪುಣ್ಯಸಕ್ತಾನಾಂ ನ ಕಿಂಚಿದ್ಭುವಿ ದುರ್ಲಭಮ್ ॥"

ಈ ಪುರಾಣವಚನಗಳಿಂದ ಅಖಂಡ-ಐಶ್ವರ್ಯ, ವಸ್ತುವಾಹನಾದಿ ವಿಭವ, ಮತ್ತು ಅಪ್ಸರೆಯಂತಹ ಸುಂದರಾಂಗಿಯಾದ ಕಾಂತೆಯೊಡನೆ ಭೋಗ ಮುಂತಾದುವುಗಳು ಪುಣ್ಯವೆಂಬ ವೃಕ್ಷದಲ್ಲಿ ಲಭಿಸುವ ಫಲಗಳೆಂದು ತಿಳಿಯುವುದು. ಹಾಗು ಪಾಪಿಗಳು ನರಕದಲ್ಲಿ ಎಷ್ಟೋ ಯಾತನೆಗಳನ್ನು ಅನುಭವಿಸಿ ಕಡೆಗೂ ಪಾಪಶೇಷದಿಂದ ಪ್ರಬಲವಾದ ವ್ಯಾಧಿ ಅಥವಾ ಅಂಗಹೀನತೆ ಮುಂತಾದ

ಚಿಹ್ನೆಗಳಿಂದ ಕೂಡಿ ಹುಟ್ಟುವರೆಂದು ಪುರಾಣವಚನಗಳಲ್ಲಿ ಕಾಣುವುದು. ವಿಧಿಯನ್ನು ಬಿಟ್ಟು ಬರಿಯದಾದ ಪೌರುಷದಿಂದ ಮಾನವನು ಸುಖವನ್ನು ಹೊಂದಲಾರನು. ವಿಧಿಯ ಅನುಕೂಲತೆಯನ್ನು ಹೊಂದಿದ ಪೌರುಷವು ಮಾತ್ರ ಫಲಕಾರಿಯಾಗುವುದು.

“ ಆರಭೇತ ನರಃ ಕರ್ಮ ಸ್ವಪೌರುಷಮುಹಾಪಯನ್ ।
ನಿಷ್ಪತ್ತಿಃ ಕರ್ಮಣಾಂ ದೈವೇ ಪೌರುಷೇ ಚ ವ್ಯವಸ್ಥಿತಾ ॥ ”

ಮಾನವನು ಪೌರುಷದಿಂದ ಕೂಡಿ ಉದ್ಯಮವನ್ನು ಮಾಡಬೇಕು. ಮತ್ತು ಹಿಂದಿನ ಪುಣ್ಯಪ್ರಭಾವವೆಂಬ ವಿಧಿಯ ಅನುಕೂಲತೆಯಿಂದ ಕಾರ್ಯ-ಸಿದ್ಧಿಯನ್ನು ಹೊಂದಬೇಕು. ಕಾರ್ಯಸಿದ್ಧಿಯು ವಿಧಿಗೆ ಪರತಂತ್ರವಾದುದು. ಹೀಗೆ ತಾನು ತನ್ನ ಸುಖಸಾಧನೆಯಲ್ಲಿಯೆ ಪರತಂತ್ರನಾಗಿದ್ದರೆ ಸ್ವಪೌರುಷದಿಂದ ಬೇರೊಬ್ಬ ವ್ಯಕ್ತಿಯನ್ನು ಅಥವಾ ಸಮಾಜವನ್ನು ಸುಖಮಯವನ್ನಾಗಿ ಮಾಡಲು ಸಾಧ್ಯವೆ? ಹಾಗೆ ಮಾಡಲು ಬಯಸುವವನು ಪಾಪ-ಪುಣ್ಯಗಳ ಅರಿವನ್ನು ಮಾಡಿಕೊಟ್ಟು ಪಾಪಮಾರ್ಗವನ್ನು ಬಿಟ್ಟು ಪುಣ್ಯಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಿದರೆ ಆಗ ಮಾತ್ರ ತನ್ನ ಗುರಿಯನ್ನು ಸಾಧಿಸಿಕೊಳ್ಳಬಹುದು. ಅದೇ ಸಂಸ್ಕೃತಿಪ್ರಸಾರಕಾರ್ಯವೆನಿಸುವುದು.

ನಾವು ಇಂದು ಅಪೇಕ್ಷಿಸುವ ಅರಣ್ಯಸಂಪತ್ತು, ಖನಿಜಸಂಪತ್ತು ಇವೆಲ್ಲ ಪ್ರಕೃತಿದೇವಿಯಿಂದ ದತ್ತವಾದುವಲ್ಲವೆ? ಕಾಲಕ್ಕೆ ಸರಿಯಾಗಿ ಮಳೆ-ಬೆಳೆಗಳು ಆಗುವುದಕ್ಕೆ ಪ್ರಕೃತಿದೇವಿಯ ಅನುಗ್ರಹವು ಬೇಡವೆ? ನಾವಿಂದು ಸ್ವಪೌರುಷ-ಬುದ್ಧಿಬಲಗಳನ್ನು ತೋರಿಸುತ್ತ ಸ್ವಚ್ಛಂದವಾದ ವರ್ತನೆಯಿಂದ ಪ್ರಕೃತಿ-ಮಾತೆಯನ್ನು ಮನನೋಯಿಸುತ್ತಿದ್ದೇವೆ. ಶಿಶುವು ಅತ್ತು, ಹಿಸುಕಿ, ಪೀಡಿಸಿ ಸ್ತನ್ಯಪಾನಮಾಡುವಾಗ ಜನನಿಯು ವಾತ್ಸಲ್ಯದಿಂದ ಅಷ್ಟು ಮಾತ್ರ ಪೀಡೆಯನ್ನು ಸಹಿಸಿದರೂ ಪ್ರೌಢನೂ, ಶಕ್ತಿವಂತನೂ ಆದಮೇಲೆ ಅದೇ ಮಗನು ವಿಧವಿಧವಾಗಿ ಪೀಡಿಸತೊಡಗಿದರೆ ಆಗಲೂ ಜನನಿಯು ಪುತ್ರನಲ್ಲಿ ಸೌಮನಸ್ಯದಿಂದ ಇರಲು ಸಾಧ್ಯವೆ?

ಇಂದಿನ ಜನತೆಯಲ್ಲಿ ಬಹುಸಂಖ್ಯೆಯು ರಾಜಕೀಯ-ಸಾಂಗ್ರಾಮಿಕ-ಸಾಮಾಜಿಕ ವ್ಯವಹಾರಗಳ ರಂಗದಲ್ಲಿಳಿದು ಚಿಂತೆಯಿಂದ ಬೇಸತ್ತುಹೋಗಿದೆ. ಇಂತಹ ಜನತೆಗೆ ಕೂಡಲೆ ಸುಖಭೋಗವು ದೊರಕಿದಂತಾಗುವುದು ಹಿಂಸಾ-

ವೃತ್ತಿಯಿಂದ ಮಾತ್ರವೇ ಸಾಧ್ಯ. ಧರ್ಮಾನುಷ್ಠಾನವು ಕೂಡಲೆ ಫಲಿಸುವುದಿಲ್ಲ. ಕೃಷಿ ಮುಂತಾದ ಉದ್ಯಮಗಳು ವರ್ಷ-ಅರ್ಧವರ್ಷ ಅಂತದಲ್ಲಿ ಫಲಕೊಡುವುವು. ನೌಕರಿಯು ತಿಂಗಳು ಪೂರ್ತಿಯಾದ ಮೇಲೆ ಸೇವಾಪ್ರತಿಫಲವನ್ನು ಕೊಡುವುದು. ಹಸಿದ ಹೊಟ್ಟೆಯು ಕೂಡಲೆ ತುಂಬುವುದು ಯಾವುದರಿಂದ? ಇನ್ನೊಬ್ಬರು ಕೂಡಿಟ್ಟ ಅನ್ನವನ್ನು ಕಿತ್ತು ತಿನ್ನುವುದರಿಂದ. ಇದನ್ನು ಅರಿತು ಹಾಗೆ ಆಶಿಪಟ್ಟ ಜನಾಂಗವು ಅದರಂತೆ ವರ್ತಿಸುವುದರಲ್ಲಿ ಆಶ್ಚರ್ಯವೇನು?

ಆದರೆ ಈ ವೃತ್ತಿಯು ಅರಣ್ಯದಲ್ಲಿ ಬೆಳೆದ ಹುಲಿ, ಕರಡಿ ಮುಂತಾದ ಕ್ರೂರಜಂತುವಿಗೆ ಹೇಳಿಸಿದುದು. ಅದು ಪ್ರತಿದಿನವೂ ಇನ್ನೊಂದು ಜಂತುವನ್ನು ಹುಡುಕಿ ಅದನ್ನು ಕೊಂದು ತಿಂದು ತೇಗಿ ನೆಲದಲ್ಲಿ ಬಿದ್ದು ಹೊರಳಾಡಿ ಸುಖಪಡುವುದು. ಕಡೆಗಾಲದಲ್ಲಿ ತಾನು ಯಾವನೊ ಬೇಟೆಗಾರನಿಗೆ ಆಹುತಿ-ಯಾಗುವುದು. ಅದೇ ಹಿಂಸಾವೃತ್ತಿಯಿಂದ ವರ್ತಿಸುವ ಮಾನವರೆಂಬ ದುಷ್ಟ ಪಶುಗಳನ್ನು ಆಹುತಿಯಾಗಿ ತೆಗೆದುಕೊಳ್ಳಲು ಬೇಟೆಗಾರನಿಲ್ಲವೆ? ಪ್ರಕೃತಿ-ಮಾತೆಯೊ, ದುಷ್ಕಾಲವೊ ಬಂದು ಬೇಟೆಯಾಡಿ ನುಂಗುವುದರೊಳಗಾಗಿ ಜನತೆಯು ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

ಹುಲಿ ಮುಂತಾದುವುಗಳ ಹಿಂಸಾಕರ್ಮಕ್ಕೆ ಧರ್ಮಕಂಚುಕದ ಆವರಣ-ವಿಲ್ಲ. ವಂಚನೆಯ ಸುಳಿವೂ ಇಲ್ಲ. ದುಷ್ಟಮಾನವರ ಹಿಂಸಾಕರ್ಮವು ಆತ್ಮ-ಸಾಕ್ಷಿಗೆ ವಿರುದ್ಧವಾದ ಧರ್ಮಘೋಷಣೆಗಳಿಂದಲೂ, ನ್ಯಾಯಮೂರ್ತಿಗಳಿಂದ ಪರಿಹಾರವನ್ನು ಗಳಿಸುವಂತಹ ದಿಟ್ಟತನದಿಂದಲೂ ಮತ್ತು ಗಣ್ಯವ್ಯಕ್ತಿಗಳ ಮೆಚ್ಚುಗೆಯಿಂದಲೂ ಪ್ರಶಂಸನೀಯವಾಗಿ ತೋರಿಸಲ್ಪಡುವುದು. ಆದುದರಿಂದ ಹುಲಿ-ಕರಡಿಗಳ ಬಾಳಿಗಿಂತಲೂ ಅಂತಹ ಮಾನವರ ಬಾಳು ಅಧಮವಾದುದೆಂದು ಮತ್ತೆ ಹೇಳಬೇಕಾಗಿಲ್ಲ.

ಇಂತಹ ಅನೇಕ ಹೀನವೃತ್ತಿಗಳಿಂದ ಒರಟಾದ ಮಾನಸವನ್ನು ಹದ-ಮಾಡಲು ವೇದ-ಶಾಸ್ತ್ರ-ಪುರಾಣರೂಪವಾಗಿ ಅನೇಕ ವಾಙ್ಮಯಗಳು ಹೊರಟಿವೆ. ಇವುಗಳಲ್ಲಿ ಪುರಾಣ-ಇತಿಹಾಸರೂಪವಾದ ವಾಙ್ಮಯವು ಮಿತ್ರನಂತೆ ಸದ್ವೃತ್ತಿ-ಯನ್ನು ಉಪದೇಶಮಾಡುವುದು. ಸಾಧುಗಳ ಚರಿತ್ರೆಯನ್ನು ನಿದರ್ಶನಗೊಳಿಸು-ವುದು. ಮಹಾತ್ಮರ ಜೀವನಕ್ರಮವನ್ನು ಪ್ರತಿಬಿಂಬಿಸುವುದು. ಇಂತಹ ವಾಙ್ಮಯವ್ಯಾಸಂಗದಿಂದ ಜನತೆಯ ಮನಸ್ಸು ಅನುಭವಪಥಾರೂಢವಾಗುವುದು. ಆಗ ಎಚ್ಚರವಾಗುವುದು. ಹೀಗೆ ಪುರಾಣದಿಂದಾಗುವ ಉಪದೇಶವು ಕಟ್ಟಪ್ಪಣೆ-

ಯಂತೆ ಇರುವುದಲ್ಲ. ಅಥವಾ ಸತ್ಯಾಸತ್ಯವಿವೇಚನೆಯ ಅವಕಾಶವಿಲ್ಲದ ತತ್ಕಾಲದ ಪರಮಾನಂದಭೋಗವನ್ನು ಮಾತ್ರ ಉಂಟುಮಾಡುವಂತಹ ಉಪದೇಶವೂ ಅಲ್ಲ.

ಮಹರ್ಷಿ ವೇದವ್ಯಾಸರು ತಮ್ಮ ಅಗಾಧಪ್ರಯತ್ನದಿಂದ ಜನತೆಯನ್ನು ಉದ್ಧಾರಮಾಡಲು ಅನೇಕ ಮಹಾಪುರಾಣಗಳನ್ನು ಮಾಡಿ ಉಪದೇಶವನ್ನಿತ್ತಿರುವರು. ಅಮೂಲ್ಯವಾದ ಆ ಉಪದೇಶವು ಇಂದು ಉಪಯೋಗಕ್ಕೆ ಅರ್ಹವಾಗುತ್ತಿದೆ. ಅಗ್ನಿಶಮನಯಂತ್ರವು ಆಸ್ತಿಗಳಿಗೆ ಬೆಂಕಿಯು ಹತ್ತಿ ಉರಿಯುತ್ತಿರುವಾಗಲೇ ಉಪಯೋಗಕ್ಕೆ ಅರ್ಹವಾಗುವುದಲ್ಲವೆ?

ಅಂತಹ ಅನೇಕ ಪುರಾಣಗಳಲ್ಲಿ ಮಾರ್ಕಂಡೇಯ ಮಹಾಪುರಾಣವು ಒಂದಾಗಿದೆ. ಇದರಲ್ಲಿ ಅನೇಕ ಮಹಾತ್ಮರ ಉದಾತ್ತ ಚರಿತ್ರೆಗಳು ವರ್ಣಿಸಲ್ಪಟ್ಟಿವೆ. ಪ್ರಾರಂಭದಲ್ಲಿ ಹರಿಶ್ಚಂದ್ರರಾಜನ ಚರಿತ್ರೆಯು ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಆ ರಾಜನಿಗೆ ಸತ್ಯ-ಹರಿಶ್ಚಂದ್ರನೆಂಬ ಖ್ಯಾತಿಯನ್ನು ತಂದಿರುವ ಚರಿತ್ರೆಯನ್ನು ಕೇಳುವುದು ಸುಲಭ. ಆತನೂ ತನ್ನ ಸತ್ಯ ಧರ್ಮವನ್ನು ರಕ್ಷಿಸಿಕೊಳ್ಳಲು ಎಂತೆಂತಹ ಕಷ್ಟಪರಂಪರೆಗಳನ್ನು ಸಹಿಸಿರುವನು. ಮುನಿಗೆ ಕೊಟ್ಟ ವಚನವು ಭಂಗಹೊಂದಬಾರದೆಂದು ತನ್ನ ಮಾನಸವೆಂಬ ನ್ಯಾಯಸ್ಥಾನದ ತೀರ್ಪನ್ನು ಅನುಸರಿಸಿ ಭಾರ್ಯೆಯನ್ನೂ ಪುತ್ರನನ್ನೂ ವಿಕ್ರಯಿಸಿದನು. ಆತನ ಭಾರ್ಯೆಯು ತನ್ನ ಪತಿಗೆ ಸತ್ಯಧರ್ಮಚ್ಯುತಿಯಾಗಬಾರದೆಂದು ತನ್ನನ್ನು ವಿಕ್ರಯಿಸುವಂತೆ ಕೇಳಿಕೊಳ್ಳುವಳು. ಅವಳೆಂತಹ ಸದ್ಗೃಹಿಣಿ! "ಸುಖ-ದುಃಖಗಳಿಗೆ ಕಾರಣವಾಗಿ ಧರ್ಮವೆಂಬುದು ಇದೆಯೆ?" ಎಂಬ ಚಿಂತಾತರಂಗಗಳು ಆಕೆಯ ಹೃದಯದಲ್ಲಿ; ಆಕೆಯ ಹೃದಯದಲ್ಲಿ ಮಾತ್ರವಲ್ಲ; ಓದುಗರ ಹೃದಯದಲ್ಲಿ ಕೂಡ ನಡುನಡುವೆ ಪರಿವರ್ತಿಸುತ್ತಿವೆ. ಆದರೆ ಪರಿಣಾಮದಲ್ಲಿ ಅನೇಕ ಪ್ರಜಾಕೋಟಿಯ ಸಮೇತನಾಗಿ ಹರಿಶ್ಚಂದ್ರರಾಜನಿಗೆ ಸದ್ಗತಿಯು ಲಭಿಸಿರಬೇಕಾದರೆ ಮೊದಲಿನ ಕಷ್ಟಗಳು ಮಹತ್ತರವಾಗಿ ತೋರಲಾರವು. ಒಂದು ವ್ಯಕ್ತಿಗೆ ಸ್ವರ್ಗಸೌಖ್ಯವು ಲಭಿಸಬೇಕಾದರೆ ಎಷ್ಟು ಕರ್ಮಾಚರಣೆಯ ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಬೇಕಾಗುವುದು. ಹೀಗಿರಲು ಪ್ರಜಾಕೋಟಿಯ ಸದ್ಗತಿ ಪ್ರಾಪ್ತಿಗೆ ಅನುರೂಪವಾಗುವಂತಹ ಕಷ್ಟಪರಂಪರೆಗಳನ್ನು ಹರಿಶ್ಚಂದ್ರದಂಪತಿಗಳು ಅನುಭವಿಸಿರಬೇಕು. ಮನಕರಗುವಂತೆ ಬಲುದೂರ ಬೆಳೆದ ಈ ಚರಿತ್ರೆಗೆ ವಿಶ್ವಾಮಿತ್ರಮುನಿಯ ಛಲವೊ;

ಧರ್ಮಪ್ರಜಾಪತಿಯ ಮಾಯೆಯೊ-ಕಾರಣವೆಂದು ಭಾಸವಾಗುವುದು. ಆದರೆ ಪರಿಣಾಮದಲ್ಲಿ ರಾಜನ ಉನ್ನತಿಗೆ ಏರ್ಪಟ್ಟಿರುವ ಕಷ್ಟಸಾಧ್ಯವಾದ ಸೋಪಾನ-ಪಂಕ್ತಿಯೆಂದು ಅನ್ನಿಸುವುದು. ಎಂತಹ ವಿಷಮಾವಸ್ಥೆಯಲ್ಲಿಯೂ ಧರ್ಮವನ್ನು ತ್ಯಜಿಸಬಾರದೆಂಬುದನ್ನು ತೋರಿಸಲು ಈ ಚರಿತ್ರೆಯು ಬಹಳ ಸಹಾಯವಾಗಿದೆ.

ಈ ಪುರಾಣವು ದತ್ತಾತ್ರೇಯೋಪಾಖ್ಯಾನ, ಪತಿವ್ರತಾಮಾಹಾತ್ಮ್ಯ ಮುಂತಾದ ಹಲವಾರು ಉತ್ತಮವಾದ ಅಂಶಗಳಿಂದ ಕೂಡಿದೆ. ಮೊದಲನೆಯ ಸಂಚಿಕೆಯಲ್ಲಿ ಮೊದಲಿನಿಂದ ಇಪ್ಪತ್ತೆರಡನೆಯ ಅಧ್ಯಾಯಗಳು ಪೂರ್ತಿಯಾಗಿವೆ. ಕುವಲಯಾಶ್ವನೆಂಬ ರಾಜಕುಮಾರನ ಧರ್ಮಪತ್ನಿ ಮದಾಲಸೆಯು ಮರಣ ಹೊಂದಿದ್ದರೂ ಮತ್ತೆ ಸಂಜೀವನ ಹೊಂದಿ ಪತಿಶುಶ್ರೂಷಾನಿರತಳಾದಳೆಂಬ ಅಘಟಿತಘಟನೆಯು ಕಥೆಯ ಕಡೆಯ ಭಾಗವನ್ನು ಅಲಂಕರಿಸಿದೆ.

ಆಳುವ ಮಹಾಸ್ವಾಮಿಯವರು **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಬಿ., ಜಿ. ಸಿ. ಎಸ್. ಐ.,** ರವರ ಆಜ್ಞೆಯಂತೆ ಸಂಸ್ಕೃತದಲ್ಲಿದ್ದ ಈ ಗ್ರಂಥವನ್ನು ಕನ್ನಡಿಗರ ತಿಳಿವಳಿಕೆಗಾಗಿ ಕನ್ನಡಕ್ಕೆ ಪರಿವರ್ತನ ಮಾಡಿರುತ್ತೇನೆ. ಆಸ್ತಿಕಶಿರೋಮಣಿಗಳಾದ ಮಹಾಪ್ರಭುಗಳವರು ಪವಿತ್ರ ವಾಙ್ಮಯದ ಪ್ರಸಾರದಿಂದ ಸರಸ್ವತೀದೇವಿಯ ಉಪಾಸಕರಾಗಿ ಲೋಕಕ್ಕೆ ಮಹೋಪಕಾರವನ್ನು ಮಾಡುತ್ತ ಭರತಖಂಡದ ರಾಜಾಧಿರಾಜರಲ್ಲಿ ಅದ್ವಿತೀಯ-ರೆಂದು ಖ್ಯಾತಿಗಳಿಸಿರುವರು. ಕರ್ಣಾಟಕದ ಪ್ರಜಾಕೋಟಿಯ ಭಾಗ್ಯದೇವತೆ-ಯಂತಿರುವ ಮಹಾಸ್ವಾಮಿಯವರು ಸತ್ಪತ್ನೀ-ಪುತ್ರರತ್ನ-ಪರಿವಾರಸಮೇತರಾಗಿ ದೀರ್ಘಾಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನು ಚಿರಕಾಲ ಅನುಭವಿಸು-ವಂತೆ ಕರುಣಿಸಲೆಂದು ಶ್ರೀ ಚಾಮುಂಡಾಂಬಿಕೆಯನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಹೀಗೆ ಈ ಗ್ರಂಥವು ಪ್ರಕಾಶಕ್ಕೆ ಬಂದು ಸಜ್ಜನರ ಸೇವೆಮಾಡಲು ಅವಕಾಶಮಾಡಿಕೊಟ್ಟ ಮಹನೀಯರಲ್ಲಿ ಕೃತಜ್ಞತೆಯನ್ನು ಅರ್ಪಿಸುತ್ತ ವಾಚಕರ ಹೃದಯದಲ್ಲಿ ಜ್ಞಾನಪ್ರಕಾಶವನ್ನು ಬೀರುವ ಈ ಗ್ರಂಥದಿಂದ ರಾಜಮನೆತನದ ಕೀರ್ತಿಯು ಆಚಂದ್ರಾರ್ಕವಾಗಿ ಉಜ್ವಲವಾಗಿರಲೆಂದು ಕೋರುತ್ತೇನೆ.

ಮೈಸೂರು
10—8—1953

ಅನುವಾದಕ
ಪಾಟಣಕರ ಚಂದ್ರಶೇಖರಭಟ್ಟ

ವಿಷಯಾನುಕ್ರಮಣಿಕೆ

ಅಧ್ಯಾಯ	ವಿಷಯ	ಪುಟ
೧.	ಜೈಮಿನಿಮುನಿಯು ಮಾರ್ಕಂಡೇಯ ಮಹಾಮುನಿಯ ಬಳಿಗೆ ಬಂದು ಭಾರತಕಥೆಯಲ್ಲಿನ ಸಂದೇಹಗಳನ್ನು ಪ್ರಶ್ನಿಸುವುದು. ಮಾರ್ಕಂಡೇಯಮುನಿಯು ವಿಂಧ್ಯಾದ್ರಿಯಲ್ಲಿದ್ದ ಪಕ್ಷೀಂದ್ರ-ರನ್ನು ಕೇಳಿಕೊಳ್ಳುವಂತೆ ತಿಳಿಸಿ ಆ ಪ್ರಸಂಗದಿಂದ ವಪು ಎಂಬ ಅಪ್ಸರಾಂಗನೆಗೆ ಶಾಪಪ್ರಾಪ್ತಿಯಾದುದನ್ನು ತಿಳಿಸುವುದು.	೧
೨.	ಕಂಕಪಕ್ಷಿ-ವಿದ್ಯುದ್ರೂಪ ರಾಕ್ಷಸರ ಯುದ್ಧಪ್ರಸ್ತಾವ, ಕಂಕನು ಹತನಾದ ಬಳಿಕ ಅವನ ಭ್ರಾತೃವಾದ ಕಂಧರನಿಂದ ರಾಕ್ಷಸನ ವಧೆ. ಮತ್ತು ಕಂಧರನು ಪರಿಗ್ರಹಿಸಿದ ರಾಕ್ಷಸಪತ್ನಿಯಲ್ಲಿ ತಾರ್ಕ್ಷಿ ಎಂಬ ಕನ್ಯೆಯ ಉತ್ಪತ್ತಿ. ತಾರ್ಕ್ಷಿಯು ದ್ರೋಣ ಪತ್ನಿಯಾಗಿ ನಾಲ್ಕು ಮಹಾನುಭಾವರನ್ನು ಪಕ್ಷಿರೂಪದ ಪುತ್ರರನ್ನಾಗಿ ಪಡೆದುದು.	೧೬
೩.	ಮಹಾನುಭಾವರಾದ ಪಿಂಗಾಕ್ಷ ಮುಂತಾದವರಿಗೆ ಪಕ್ಷಿಜನ್ಮ-ವನ್ನು ಕೊಟ್ಟ ಶಾಪವು ಸಂಭವಿಸಲು ಕಾರಣ ಮತ್ತು ಆ ಪಕ್ಷೀಂದ್ರರು ವಿಂಧ್ಯಗಿರಿಗೆ ಹೋದುದು.	೩೩
೪.	ನಿರ್ಗುಣನಾದ ಜನಾರ್ದನಸ್ವಾಮಿಯು ಮರ್ತ್ಯಜನ್ಮವನ್ನು ಹೊಂದುವ ಕಾರಣವನ್ನು ಜೈಮಿನಿಮುನಿಯು ಪ್ರಶ್ನಿಸಲು ಪಕ್ಷೀಂದ್ರರು ಚತುರ್ವ್ಯೂಹವರ್ಣನೆಯ ಮೂಲಕ ಉತ್ತರ-ವನ್ನು ಹೇಳಿರುವುದು.	೫೫
೫.	ಐದುಮಂದಿ ಪಾಂಡವರಿಗೆ ಧರ್ಮಪತ್ನಿಯಾದ ದ್ರೌಪದಿಯಲ್ಲಿ ಏಕಪತ್ನೀತ್ವ ಸಮರ್ಥನೆ. ಇಂದ್ರನ ಮಹಿಮೆಗೆ ಭ್ರಂಶ-ವುಂಟಾಗಿ ಆಯಾಯ ಇಂದ್ರಾಂಶಗಳಿಂದ ಪಂಚಪಾಂಡವರು ಉತ್ಪತ್ತಿಯಾದುದು.	೭೦

ಅಧ್ಯಾಯ	ವಿಷಯ	ಪುಟ
೬.	ಬಲರಾಮನು ಬ್ರಹ್ಮಹತ್ಯಾ ಪಾತಕಕ್ಕೆ ಗುರಿಯಾಗಿ ಪ್ರಾಯಶ್ಚಿತ್ತರೂಪವಾಗಿ ತೀರ್ಥಯಾತ್ರೆಯನ್ನು ಕೈಗೊಂಡಿರುವುದು.	೭೭
೭.	ಹರಿಶ್ಚಂದ್ರರಾಜನನ್ನು ವಿಶ್ವಾಮಿತ್ರಮುನಿಯು ಕಾಡುತ್ತಿರಲು ಮುನಿಯನ್ನು ನಿಂದಿಸಿದ ವಿಶ್ವೇದೇವತೆಗಳಿಗೆ ಮುನಿಶಾಪದಿಂದ ಮಾನವಜನ್ಮಪ್ರಾಪ್ತಿ. ಮತ್ತು ದ್ರೌಪದೀಪುತ್ರರಾಗಿ ಅವರು ಜನಿಸುವುದು.	೮೬
೮.	ಹರಿಶ್ಚಂದ್ರೋಪಾಖ್ಯಾನ, ರಾಜನು ಪ್ರಜಾಕೋಟಿಯ ಸಮೇತನಾಗಿ ಪುಷ್ಪವೃಷ್ಟಿಯಾಗುತ್ತಿದ್ದ ಹಾಗೆ ಸ್ವರ್ಗಕ್ಕೆ ತೆರಳಿದುದು.	೧೦೪
೯.	ವಸಿಷ್ಠ-ವಿಶ್ವಾಮಿತ್ರಮುನಿಗಳು ಪರಸ್ಪರ ಶಾಪದಿಂದ ಆಡಿ-ಬಕ ಎಂಬ ಪಕ್ಷಿಭಾವವನ್ನು ಹೊಂದಿ ಯುದ್ಧಮಾಡುವುದು. ಬ್ರಹ್ಮದೇವನು ಸಂಧಾನಮಾಡುವುದು.	೧೭೭
೧೦.	ಜೈಮಿನಿಯು ಪಕ್ಷೀಂದ್ರರಲ್ಲಿ ಪ್ರಾಣಿಗಳ ಗರ್ಭವಾಸ-ಜನ್ಮಾದಿ ವಿಷಯಗಳನ್ನು ಪ್ರಶ್ನಿಸುವುದು. ಆ ಪ್ರಸಂಗದಲ್ಲಿ ಜಡಪುತ್ರನಾದ ಸುಮತಿ ಮತ್ತು ಅವನ ತಂದೆಯ ಸಂವಾದ ವರ್ಣನೆ.	೧೮೬
೧೧.	ಸುಮತಿಯು ತಂದೆಗೆ ನಿಷೇಕಸಂಸ್ಕಾರದಿಂದ ಮೊದಲಾಗಿ ಗರ್ಭೋತ್ಪತ್ತಿಯನ್ನು ವರ್ಣಿಸಿದುದು.	೨೧೧
೧೨.	ಮಹಾರೌರವ ಮುಂತಾದ ನರಕಯಾತನೆಗಳ ವರ್ಣನೆ.	೨೧೯
೧೩.	ಯಮಪುರುಷ-ವೈಶ್ಯರಾಜರ ಸಂವಾದ.	೨೩೧
೧೪.	ಯಮಪುರುಷನು ವೈಶ್ಯರಾಜನಿಗೆ ಪುಣ್ಯ ಪಾಪ ಕರ್ಮಗಳ ಫಲಪ್ರಾಪ್ತಿಯನ್ನು ವರ್ಣಿಸಿದುದು.	೨೩೭
೧೫.	ಕರ್ಮಫಲವನ್ನು ಕೇಳಿದ ವೈಶ್ಯರಾಜನು ನರಕಜಂತುಗಳನ್ನು ಉದ್ಧಾರಮಾಡುತ್ತ ತಾನು ಸದ್ಗತಿಯನ್ನು ಹೊಂದಿರುವುದು.	೨೬೦

ಅಧ್ಯಾಯ	ವಿಷಯ	ಪುಟ
೧೬.	ಕೌಶಿಕನೆಂಬ ವಿಪ್ರ ದಂಪತಿಗಳ ವೃತ್ತಾಂತ, ಪತಿವ್ರತಾ-ಮಾಹಾತ್ಮ್ಯವರ್ಣನೆ, ತ್ರಿಮೂರ್ತಿಗಳು ಪುತ್ರರಾಗಿ ಜನಿಸು-ವಂತೆ ಸತಿ ಅನಸೂಯೆಗೆ ದೇವತೆಗಳಿಂದ ವರಪ್ರಾಪ್ತಿ. ದತ್ತಾತ್ರೇಯ ರೂಪದಿಂದ ವಿಷ್ಣುವು ಅನಸೂಯೆಗೆ ಪುತ್ರನಾಗಿ ಜನಿಸಿದುದು. ಗರ್ಗಮುನಿಯು ಕಾರ್ತವೀರ್ಯಾರ್ಜುನನಿಗೆ ದತ್ತಾತ್ರೇಯ ಮಹಿಮೆಯನ್ನು ಹೇಳುವುದು.	೨೮೧
೧೭.	ಕಾರ್ತವೀರ್ಯಾರ್ಜುನನು ದತ್ತಾತ್ರೇಯಮುನಿಯನ್ನು ಶುಶ್ರೂಷೆ ಮಾಡಿ ಕೃತಾರ್ಥನಾಗಿ ರಾಜ್ಯಭಾರಮಾಡುವುದು.	೩೨೭
೧೮.	ಇಬ್ಬರು ನಾಗಕುಮಾರರು ತಮ್ಮ ತಂದೆಯಾದ ನಾಗರಾಜ ಅಶ್ವತರನಲ್ಲಿ ಕುವಲಯಾಶ್ವನ ವೃತ್ತಾಂತವನ್ನು ಹೇಳಲು ಉಪಕ್ರಮಿಸುವುದು.	೩೩೮
೧೯.	ಕುವಲಯಾಶ್ವನು ಪಾತಾಲಕೇತು ದಾನವನನ್ನು ಅಟ್ಟಿಸಿ-ಕೊಂಡುಹೋಗಿ ಪಾತಾಲವನ್ನು ಪ್ರವೇಶಮಾಡುವುದು. ಅಲ್ಲಿ ಕುವಲಯಾಶ್ವನಿಗೆ ಮದಾಲಸೆಯ ಪಾಣಿಗ್ರಹಣ. ಮತ್ತು ರಾಜಕುಮಾರನಿಂದ ದಾನವರ ವಧವರ್ಣನೆ.	೩೫೨
೨೦.	ಮದಾಲಸೆಯು ತಾಲಕೇತು ರಾಕ್ಷಸನ ಮಾಯೆಯಿಂದ ಪತಿಯು ಮೃತನಾದಂತೆ ತಿಳಿದು ಪ್ರಾಣತ್ಯಾಗಮಾಡುವುದು. ವಿಯೋಗ ದುಃಖದಿಂದ ಕುವಲಯಾಶ್ವನು ತಪಿಸುತ್ತ ಸ್ತ್ರೀಭೋಗನನ್ನು ತ್ಯಜಿಸಿ ಪ್ರತಿಜ್ಞೆಮಾಡುವುದು.	೩೭೮
೨೧.	ಅಶ್ವತರ ನಾಗರಾಜನು ಈಶ್ವರವರಪ್ರಭಾವದಿಂದ ಮದಾಲಸೆ-ಯನ್ನು ಪುತ್ರಿಯನ್ನಾಗಿ ಹೊಂದಿರುವುದು. ಕುವಲಯಾಶ್ವನು ನಾಗರಾಜನ ಮನೆಗೆ ಹೋಗುವುದು.	೩೯೦

ಅಧ್ಯಾಯ	ವಿಷಯ	ಪುಟ
೨೨.	ಮತ್ತೆ ಪಾತಾಲದಲ್ಲಿ ಕುವಲಯಾಶ್ವನಿಗೆ ಮದಾಲಸಾಪ್ರಾಪ್ತಿ. ಕುವಲಯಾಶ್ವನು ಪತ್ನೀಸಮೇತನಾಗಿ ನಗರ ಪ್ರವೇಶ ಮಾಡಿದುದು.	೪೨೧

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪ್ರಥಮೋಽಧ್ಯಾಯಃ

(ವಪುನಾಮ್ನ್ಯಾ ಅಪ್ಸರಸಃ ಶಾಪಪ್ರಾಪ್ತಿಃ)

ಯದ್ಯೋಗಿಭಿರ್ಭವಭಯಾರ್ತಿವಿನಾಶಯೋಗ್ಯ-
ಮಾಸಾದ್ಯ ವನ್ದಿತಮತೀವ ವಿವಿಕ್ತಚಿತ್ತೈಃ ।
ತದ್ವಃ ಪುನಾತು ಹರಿಪಾದಸರೋಜಯುಗ್ಮ-
ಮಾವಿರ್ಭವತ್ಕ್ರಮವಿಲಙ್ಘಿತಭೂರ್ಭುವಃಸ್ವಃ ||೧||

ಪಾಯಾತ್ಸ ವಃ ಸಕಲಕಲ್ಮಷಭೇದದಕ್ಷಃ
ಕ್ಷೀರೋದಕುಕ್ಷಿಫಣಿಭೋಗನಿವಿಷ್ಟಮೂರ್ತಿಃ ।
ಶ್ವಾಸಾವಧೂತಸಲಿಲೋತ್ಕಣಿಕಾಕರಾಲಃ
ಸಿನ್ಧುಃ ಪ್ರನೃತ್ಯಮಿವ ಯಸ್ಯ ಕರೋತಿ ಸಙ್ಗಾತ್ ||೨||

ಮಾರ್ಕಂಡೇಯ ಮಹಾಪುರಾಣ ಕನ್ನಡ ಅನುವಾದ

ಮೊದಲನೆಯ ಅಧ್ಯಾಯ

೧. ತ್ರಿವಿಕ್ರಮಾವತಾರದಲ್ಲಿ ಕ್ರಮವಾಗಿ ಭೂಲೋಕ, ಭುವರ್ಲೋಕ ಮತ್ತು ಸ್ವರ್ಲೋಕಗಳನ್ನು ಮೀರಿ ಬೆಳೆದ ಯಾವ ಹರಿಯ ಪಾದಾರವಿಂದಗಳು ಸಂಸಾರದುಃಖ ಯಾತನೆಯನ್ನು ಪರಿಹರಿಸಲು ಸಮರ್ಥವಾದುವೆಂದು ಅರಿತು ಪರಮಾರ್ಥತತ್ತ್ವದಲ್ಲಿ ಏಕಾಗ್ರಚಿತ್ತವುಳ್ಳ ಯೋಗಿಗಳಿಂದ ವಂದಿಸಲ್ಪಟ್ಟುವೊ ; ಅಂತಹ ಹರಿಯ ಪಾದಾರವಿಂದಗಳು ನಮ್ಮನ್ನು ಪವಿತ್ರರನ್ನಾಗಿ ಮಾಡಲಿ.

೨. ವಾಯುವಿನ ವೇಗದಿಂದ ಮೇಲಕ್ಕೆದ್ದು ಹೊಡೆಯುತ್ತಿರುವ ಅಲೆಗಳಿಂದ ಭಯಂಕರವಾದ ಸಮುದ್ರವು ಕ್ಷೀರಸಮುದ್ರದ ಮಧ್ಯದಲ್ಲಿ ಆದಿಶೇಷನ ದೇಹದಲ್ಲಿ ಶಯನಮಾಡಿರುವ ಮೂರ್ತಿಯುಳ್ಳವನೂ, ಭಕ್ತಜನರ ಸಕಲ ಪಾಪಗಳನ್ನು ಭಂಜಿಸುವವನೂ ಆದ ಯಾವ ವಿಷ್ಣುಪರಮಾತ್ಮನ ಸಾನ್ನಿಧ್ಯದಿಂದ ನರ್ತನ ಮಾಡುವಂತೆ ತೋರುವುದೋ, ಅಂತಹ ವಿಷ್ಣುಪರಮಾತ್ಮನು ನಮ್ಮನ್ನು ರಕ್ಷಿಸಲಿ.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥೧॥

ತಪಃಸ್ವಾಧ್ಯಾಯನಿರತಂ ಮಾರ್ಕಣ್ಡೇಯಂ ಮಹಾಮುನಿಮ್ ।
ವ್ಯಾಸಶಿಷ್ಯೋ ಮಹಾತೇಜಾ ಜೈಮಿನಿಃ ಪರ್ಯಪೃಚ್ಛತ ॥೨॥

ಭಗವನ್ ಭಾರತಾಖ್ಯಾನಂ ವ್ಯಾಸೇನೋಕ್ತಂ ಮಹಾತ್ಮನಾ ।
ಪೂರ್ಣಮಸ್ತಮಲೈಃ ಶುಭ್ರೈರ್ನಾನಾಶಾಸ್ತ್ರಸಮುಚ್ಚಯೈಃ ॥೩॥

ಜಾತಿಶುದ್ಧಿಸಮಾಯುಕ್ತಂ ಸಾಧುಶಬ್ದೋಪಶೋಭಿತಮ್ ।
ಪೂರ್ವಪಕ್ಷೋಕ್ತಿಸಿದ್ಧಾನ್ತಪರಿನಿಷ್ಠಾಸಮನ್ವಿತಮ್ ॥೪॥

---

೧. ಪುರುಷೋತ್ತಮನಾದ ನರ ಮತ್ತು ನಾರಾಯಣ—ಎಂಬ ಈರ್ವರು ಮುನಿಗಳನ್ನೂ, ಸರಸ್ವತೀದೇವಿಯನ್ನೂ ಹಾಗು ಸರ್ವಜ್ಞನಾದ ವ್ಯಾಸಮುನಿಯನ್ನೂ ವಂದಿಸಿ ಇಷ್ಟಾರ್ಥಸಿದ್ಧಿ ರೂಪವಾದ ಜಯಕ್ಕೆ ಸಾಧನವಾದ ಪುರಾಣಾಖ್ಯಾನವನ್ನು ಪಠಿಸಬೇಕು.

೨. ವ್ಯಾಸಮುನಿಯ ಶಿಷ್ಯನೂ, ಮಹಾತೇಜಸ್ವಿಯೂ ಆದ ಜೈಮಿನಿಮಹರ್ಷಿಯು ತಪಶ್ಚರ್ಯೆ, ವೇದಾಧ್ಯಯನಗಳಲ್ಲಿ ನಿಷ್ಠೆಹೊಂದಿದ ಮಾರ್ಕಂಡೇಯನೆಂಬ ಮುನಿವರ್ಯನನ್ನು ನೋಡಿ ಪ್ರಶ್ನಿಸಿದನು.

೩. ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಮಾರ್ಕಂಡೇಯ ಮುನಿಯೆ! ಮಹಾತ್ಮರೆನಿಸಿದ ವ್ಯಾಸಮಹರ್ಷಿಯಿಂದ ನಿಷ್ಕಲಂಕವೂ, ಪರಿಶುದ್ಧವೂ ಆದ ಅನೇಕ ಶಾಸ್ತ್ರೀಯತತ್ತ್ವಸಮುಚ್ಚಯಗಳ ನಿರೂಪಣೆಯಿಂದ ಕೂಡಿದ ಮಹಾಭಾರತವೆಂಬ ಇತಿಹಾಸವು ರಚಿಸಲ್ಪಟ್ಟಿದೆ.

೪. ಅಂತಹ ಮಹಾಭಾರತವು ಅಲ್ಲಲ್ಲಿ ಉದ್ಭವಿಸುವ ಪ್ರಶ್ನೆಗಳಿಗೆ ಸಮಂಜಸವಾದ ಸಮಾಧಾನೋಕ್ತಿಗಳಿಂದ ಕೂಡಿರುವುದೂ, ಸುಸಂಸ್ಕೃತವಾದ ಶಬ್ದಗಳಿಂದ ಅಲಂಕರಿಸಲ್ಪಟ್ಟಿರುವುದೂ ಮತ್ತು ಪೂರ್ವಪಕ್ಷಗಳನ್ನು ಪ್ರಕಾಶಪಡಿಸುತ್ತ ಸಿದ್ಧಾಂತಗಳನ್ನು ಸಮರ್ಥಿಸುವ ಧೋರಣೆಯಿಂದ ಕೂಡಿರುವುದೂ ಆಗಿದೆ.

ತ್ರಿದಶಾನಾಂ ಯಥಾ ವಿಷ್ಣುರ್ದ್ವಿಪದಾಂ ಬ್ರಾಹ್ಮಣೋ ಯಥಾ ।
ಭೂಷಣಾನಾಂ ಚ ಸರ್ವೇಷಾಂ ಯಥಾ ಚೂಡಾಮಣಿರ್ವರಃ ॥೭॥

ಯಥಾಯುಧಾನಾಂ ಕುಲಿಶಮಿನ್ದ್ರಿಯಾಣಾಂ ಯಥಾ ಮನಃ ।
ತಥೇಹ ಸರ್ವಶಾಸ್ತ್ರಾಣಾಂ ಮಹಾಭಾರತಮುತ್ತಮಮ್ ॥೮॥

ಅತ್ರಾರ್ಥಶ್ಚೈವ ಧರ್ಮಶ್ಚ ಕಾಮೋ ಮೋಕ್ಷಶ್ಚ ವರ್ಣ್ಯತೇ ।
ಪರಸ್ಪರಾನುಬನ್ಧಾಶ್ಚ ಸಾನುಬನ್ಧಾಶ್ಚ ತೇ ಪೃಥಕ್ ॥೯॥

ಧರ್ಮಶಾಸ್ತ್ರಮಿದಂ ಶ್ರೇಷ್ಠಮರ್ಥಶಾಸ್ತ್ರಮಿದಂ ಪರಮ್ ।
ಕಾಮಶಾಸ್ತ್ರಮಿದಂ ಚಾಗ್ರ್ಯಂ ಮೋಕ್ಷಶಾಸ್ತ್ರಂ ತಥೋತ್ತಮಮ್ ॥೧೦॥

---

೭. ಆದುದರಿಂದ ಪುರಾಣೇತಿಹಾಸಗಳಲ್ಲಿ ಮಹಾಭಾರತವು ಶ್ರೇಷ್ಠ ವಾಗಿದೆ. ದೇವತೆಗಳಲ್ಲಿ ವಿಷ್ಣುವು ಹೇಗೋ, ಮಾನವವರ್ಗದಲ್ಲಿ ಬ್ರಾಹ್ಮಣನು ಹೇಗೋ, ಎಲ್ಲ ಒಡವೆಗಳ ರಾಶಿಯಲ್ಲಿ ಸರ್ವೋತ್ತಮವಾದ ಚೂಡಾಮಣಿಯು ಹೇಗೋ, ಹಾಗೆಯೆ ಪುರಾಣ-ಇತಿಹಾಸಗಳಲ್ಲಿ ಭಾರತವು ಶ್ರೇಷ್ಠವೆಂದು ಅರಿಯ ಬೇಕು.

೮. ಆಯುಧಶ್ರೇಣಿಯಲ್ಲಿ ವಜ್ರಾಯುಧವೂ, ಇಂದ್ರಿಯಗಳ ಗುಂಪಿನಲ್ಲಿ ಮನವೂ ಉತ್ತಮವೆನಿಸಿದಂತೆ ಹಿತೋಪದೇಶವನ್ನು ಮಾಡುವ ಶಾಸ್ತ್ರಗ್ರಂಥಗಳಲ್ಲಿ ಮಹಾಭಾರತವು ಉತ್ತಮವೆನಿಸಿರುವುದು.

೯. ಇಂತಹ ಭಾರತದಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂದು ಪ್ರಸಿದ್ಧವಾದ ನಾಲ್ಕು ಪುರುಷಾರ್ಥಗಳು ವರ್ಣಿಸಲ್ಪಟ್ಟಿವೆ. ಇಷ್ಟೇ ಅಲ್ಲ, ಈ ಪುರುಷಾರ್ಥಗಳಲ್ಲಿ ಪರಸ್ಪರ ವಿರೋಧವನ್ನು ತ್ಯಜಿಸಿರುವ ಸಾಧ್ಯ-ಸಾಧನ ಭಾವ, ಹಾಗು ಇವುಗಳ ಸಾಧನಪರಂಪರೆಗಳು ವರ್ಣಿಸಲ್ಪಟ್ಟಿವೆ.

೧೦. ವಾಙ್ಮಯದಲ್ಲಿ ಶ್ಲಾಘ್ಯವಾದ ಮಹಾಭಾರತವು ಶ್ರೇಷ್ಠವಾದ ಧರ್ಮಶಾಸ್ತ್ರರೂಪವಾಗಿಯೂ ಪ್ರಶಸ್ತವಾದ ಅರ್ಥಶಾಸ್ತ್ರರೂಪವಾಗಿಯೂ, ಗಣ್ಯವಾದ ಕಾಮಶಾಸ್ತ್ರರೂಪವಾಗಿಯೂ ಮತ್ತು ಸರ್ವೋತ್ತಮವಾದ ಮೋಕ್ಷ ಶಾಸ್ತ್ರರೂಪವಾಗಿಯೂ ಇರುವುದು.

ಚತುರಾಶ್ರಮಧರ್ಮಾಣಾಮಾಚಾರಸ್ಥಿತಿಸಾಧನಮ್ ।
ಪ್ರೋಕ್ತಮೇತನ್ಮಹಾಭಾಗ ವೇದವ್ಯಾಸೇನ ಧೀಮತಾ ॥೧೧॥

ತಥಾ ತಾತ ಕೃತಂ ಹ್ಯೇತದ್ವ್ಯಾಸೇನೋದಾರಕರ್ಮಣಾ ।
ಯಥಾ ವ್ಯಾಪ್ತಂ ಮಹಾಶಾಸ್ತ್ರಂ ವಿರೋಧೈರ್ನಾಭಿಭೂಯತೇ ॥೧೨॥

ವ್ಯಾಸವಾಕ್ಯಜಲೌಘೇನ ಕುತರ್ಕತರುಹಾರಿಣಾ ।
ವೇದಶೈಲಾವತೀರ್ಣೇನ ನೀರಜಸ್ಕಾ ಮಹೀ ಕೃತಾ ॥೧೩॥

ಕಲಶಬ್ದಮಹಾಹಂಸಂ ಮಹಾಖ್ಯಾನಪರಾಮ್ಬುಜಮ್ ।
ಕಥಾವಿಸ್ತೀರ್ಣಸಲಿಲಂ ಕಾರ್ಷ್ಣಂ ವೇದಂ ಮಹಾಹ್ರದಮ್ ॥೧೪॥

---

೧೧. ಮಹಾತ್ಮನೆ ! ಸರ್ವಜ್ಞನಾದ ವೇದವ್ಯಾಸಮುನಿಯಿಂದ ಮಹಾಭಾರತದಲ್ಲಿ ಬ್ರಹ್ಮಚರ್ಯ ಮುಂತಾದ ನಾಲ್ಕು ಆಶ್ರಮಗಳಲ್ಲಿ ವಿಹಿತವಾದ ಧರ್ಮಗಳನ್ನು ಆಚರಿಸುವ ಮಾರ್ಗಸಾಧನೆಯು ಉಪದೇಶಿಸಲ್ಪಟ್ಟಿದೆ.

೧೨. ಪೂಜ್ಯನೇ ! ವಿರೋಧಗಳಿಂದ ಆಕ್ಷೇಪಿಸಲು ಅವಕಾಶವಿಲ್ಲದ, ಎಲ್ಲೆಲ್ಲಿಯೂ ವ್ಯಾಪಿಸಿರುವ ಮಹಾಭಾರತವೆಂಬ ಮಹಾಶಾಸ್ತ್ರವು ಅತ್ಯುದಾರವಾದ ಲೋಕೋಪಕಾರವುಳ್ಳ ವೇದವ್ಯಾಸಮುನಿಯಿಂದ ರಚಿಸಲ್ಪಟ್ಟಿದೆ.

೧೩. ಹೀಗೆ ಮಹರ್ಷಿ ವೇದವ್ಯಾಸರ ವಾಣಿಯೆಂಬ ಜಲಪ್ರವಾಹವುಳ್ಳ, ಕುಚೋದ್ಯಗಳೆಂಬ ವೃಕ್ಷಗಳನ್ನು ಕಿತ್ತು ಒಯ್ಯುವ ಮತ್ತು ವೇದಗಳೆಂಬ ಪರ್ವತಗಳಲ್ಲಿ ಉದ್ಭವಿಸಿ ಹರಿಯುವ ನದೀ ತೀರ್ಥದಿಂದ ಭೂಮಿಯಲ್ಲಿ ರಜೋಗುಣವೆಂಬ ಧೂಲಿಯು ಶಮನವಾಗುವಂತೆ ಮಾಡಲ್ಪಟ್ಟಿದೆ.

೧೪. ವಿಷ್ಣು ಪರಮಾತ್ಮನ ಅವತಾರಸ್ವರೂಪನಾದ ವ್ಯಾಸಮುನಿಯಿಂದ ರಚಿಸಲ್ಪಟ್ಟ ಪಂಚಮವೇದವೆಂದು ಪ್ರಖ್ಯಾತವಾದ ಮಹಾಭಾರತವು ಮಧುರ ಶಬ್ದಶ್ರೇಣಿಯೆಂಬ ಹಂಸಗಳಿಂದ ಶೋಭಿತವೂ, ಪವಿತ್ರವಾದ ಆಖ್ಯಾನಕಗಳೆಂಬ ಸುಂದರ ತಾವರೆಗಳಿಂದ ರಮ್ಯವೂ ಮತ್ತು ವಿಸ್ತಾರವಾದ ಕಥಾಭಾಗಗಳೆಂಬ ಪುಣ್ಯತೀರ್ಥದಿಂದ ಪರಿಪೂರ್ಣವೂ ಆದ ಅಗಾಧವಾದ ಜಲಾಶಯವಾಗಿರುವುದು.

ತದಿದಂ ಭಾರತಾಖ್ಯಾನಂ ಬಹ್ವರ್ಥಂ ಶ್ರುತಿವಿಸ್ತರಮ್ ।
ತತ್ತ್ವತೋ ಜ್ಞಾತುಕಾಮೋಽಹಂ ಭಗವಂಸ್ತ್ವಾಮುಪಸ್ಥಿತಃ ॥೧೫॥

ಕಸ್ಮಾನ್ಮಾನುಷತಾಂ ಪ್ರಾಪ್ತೋ ನಿರ್ಗುಣೋಽಪಿ ಜನಾರ್ದನಃ ।
ವಾಸುದೇವೋ ಜಗತ್ಸೂತಿಸ್ಥಿತಿಸಂಯಮಕಾರಣಮ್ ॥೧೬॥

ಕಸ್ಮಾಚ್ಚ ಪಾಣ್ಡುಪುತ್ರಾಣಾಮೇಕಾ ಸಾ ದ್ರುಪದಾತ್ಮಜಾ ।
ಪಞ್ಚಾನಾಂ ಮಹಿಷೀ ಕೃಷ್ಣಾ ಹ್ಯತ್ರ ನಃ ಸಂಶಯೋ ಮಹಾನ್ ॥೧೭॥

ಭೇಷಜಂ ಬ್ರಹ್ಮಹತ್ಯಾಯಾ ಬಲದೇವೋ ಮಹಾಬಲಃ ।
ತೀರ್ಥಯಾತ್ರಾಪ್ರಸಙ್ಗೇನ ಕಸ್ಮಾಚ್ಚಕ್ರೇ ಹಲಾಯುಧಃ ॥೧೮॥

---

೧೫. ಪೂಜ್ಯನೆ! ವೇದಾರ್ಥಗಳನ್ನು ಪರಿಪೋಷಿಸುವ ಮತ್ತು ಅನೇಕಾರ್ಥಗಳಿಂದ ಕೂಡಿದ ಆ ಪವಿತ್ರ ಭಾರತಾಖ್ಯಾನವನ್ನು ತತ್ತ್ವಾಂಶ-ಗಳಿಂದ ತಿಳಿಯಬೇಕೆಂಬ ಕುತೂಹಲವುಳ್ಳ ನಾನು ನಿನ್ನ ಬಳಿಗೆ ಬಂದಿರುವೆನು.

೧೬. ಗುಣಸಂಗರಹಿತನೂ, ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನೂ ಆದ ವಿಷ್ಣುಪರಮಾತ್ಮನು ಯಾವ ನಿಮಿತ್ತದಿಂದ ವಸುದೇವ-ಕುಮಾರನಾಗಿ ಜನಿಸಿ ಮನುಷ್ಯತ್ವವನ್ನು ಹೊಂದಿದನು ?

೧೭. ದ್ರುಪದಮಹಾರಾಜನ ಕುವರಿಯಾದ ದ್ರೌಪದಿಯು ಪಾಂಡು-ರಾಜನ ಪುತ್ರರಾದ ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವ ಎಂಬ ಐದು ಮಂದಿ ಗಂಡಂದರಿಗೆ ಪಟ್ಟಮಹಿಷಿಯು ಹೇಗಾದಳು ? ಈ ವಿಷಯದಲ್ಲಿ ನನಗೆ ಮಹತ್ತಾದ ಸಂಶಯವು ಉಂಟಾಗಿದೆ.

೧೮. ಮಹಾಬಲಿಷ್ಠನಾದ ಬಲರಾಮನು ತೀರ್ಥಯಾತ್ರೆಯನ್ನು ಕೈಗೊಳ್ಳುವ ಪ್ರಸಂಗದಿಂದ ಬ್ರಹ್ಮಹತ್ಯಾಪಾತಕಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಂತಹ ಆವಶ್ಯಕತೆಯು ಏಕೆ ಉಂಟಾಯಿತು ?

ಕಥಂ ಚ ದ್ರೌಪದೇಯಾಸ್ತೇಽಕೃತದಾರಾ ಮಹಾರಥಾಃ ।
ಪಾಣ್ಡುನಾಥಾ ಮಹಾತ್ಮಾನೋ ವಧಮಾಪುರನಾಥವತ್ ॥೧೯॥

ಏತತ್ಸರ್ವಂ ವಿಸ್ತರಶೋ ಮಮಾಖ್ಯಾತುಮಿಹಾರ್ಹಸಿ ।
ಭವನ್ತೋ ಮೂಢಬುದ್ಧೀನಾಮುಪಬೋಧಕರಾಃ ಸದಾ ॥೨೦॥

ಇತಿ ತಸ್ಯ ವಚಃ ಶ್ರುತ್ವಾ ಮಾರ್ಕಣ್ಡೇಯೋ ಮಹಾಮುನಿಃ ।
ದಶಾಷ್ಟದೋಷರಹಿತೋ ವಕ್ತುಂ ಸಮುಪಚಕ್ರಮೇ ॥೨೧॥

ಮಾರ್ಕಣ್ಡೇಯ ಉವಾಚ :—

ಕ್ರಿಯಾಕಾಲೋಽಯಮಸ್ಮಾಕಂ ಸಂಪ್ರಾಪ್ತೋ ಮುನಿಸತ್ತಮ ।
ವಿಸ್ತರೇ ಚಾಪಿ ವಕ್ತವ್ಯೇ ನೈಷ ಕಾಲಃ ಪ್ರಶಸ್ಯತೇ ॥೨೨॥

---

೧೯. ಮಹಾತ್ಮರೂ ಮಹಾರಥಿಕರೂ ಆದ ದ್ರೌಪದಿಯ ಪುತ್ರರಾದ ಪ್ರತಿವಿಂಧ್ಯ ಮುಂತಾದವರು ಪಾಂಡವರನ್ನೆ ರಕ್ಷಕರನ್ನಾಗಿ ಹೊಂದಿದ್ದರೂ ವಿವಾಹವು ಕೂಡ ನಡೆಯದಿರುವ ಚಿಕ್ಕವಯಸ್ಸಿನಲ್ಲಿ ಅನಾಥರಂತೆ ಏಕೆ ಮೃತ್ಯುವಶರಾದರು?

೨೦. ಇದೆಲ್ಲ ವಿಷಯವನ್ನೂ ನೀನು ನನಗೆ ವಿಸ್ತಾರವಾಗಿ ಹೇಳಬೇಕಾಗಿದೆ. ಮೂಢಬುದ್ಧಿಗಳಾಗಿರುವ ನಮಗೆ ನಿಮ್ಮಂತಹವರು ಯಾವಾಗಲೂ ಉಪದೇಶಮಾಡತಕ್ಕವರಲ್ಲವೆ!

೨೧. ನಿದ್ರಾ, ಆಲಸ್ಯ ಮುಂತಾದ ಹದಿನೆಂಟು ದೋಷಗಳಿಲ್ಲದ ಪವಿತ್ರಾತ್ಮನಾದ ಮಾರ್ಕಂಡೇಯ ಮುನಿಯು ಜೈಮಿನಿಮಹರ್ಷಿಯ ಈ ಪ್ರಾರ್ಥನೆಯನ್ನು ಲಾಲಿಸಿ ಇಂತು ನುಡಿದನು.

ಮಾರ್ಕಂಡೇಯ ಮುನಿಯು ಇಂತೆಂದನು :—

೨೨. ಮುನಿವರ್ಯನೆ! ನಮಗೀಗ ನಿತ್ಯಕರ್ಮಾನುಷ್ಠಾನ ಕಾಲವು ಪ್ರಾಪ್ತವಾಗಿರುವುದು. ನೀನು ತಿಳಿಯಬೇಕೆಂದಿರುವ ವಿಷಯವನ್ನು ವಿಸ್ತಾರವಾಗಿ ಪ್ರತಿಪಾದಿಸಲು ಈ ಸಮಯವು ಅಷ್ಟು ಪ್ರಶಸ್ತವಾಗಿಲ್ಲ,

ಯೇ ತು ವಕ್ಷ್ಯನ್ತಿ ವಕ್ಷ್ಯೇಽದ್ಯ ತಾನಹಂ ಜೈಮಿನೇ ತವ ।
ತಥಾ ಚ ನಷ್ಟಸನ್ದೇಹಂ ತ್ವಾಂ ಕರಿಷ್ಯನ್ತಿ ಪಕ್ಷಿಣಃ ॥೨೩॥

ಪಿಙ್ಗಾಕ್ಷಶ್ಚ ವಿಬೋಧಶ್ಚ ಸುಪುತ್ರಃ ಸುಮುಖಸ್ತಥಾ ।
ದ್ರೋಣಪುತ್ರಾಃ ಖಗಶ್ರೇಷ್ಠಾಸ್ತತ್ತ್ವಜ್ಞಾಃ ಶಾಸ್ತ್ರಚಿನ್ತಕಾಃ ॥೨೪॥

ವೇದಶಾಸ್ತ್ರಾರ್ಥವಿಜ್ಞಾನೇ ಯೇಷಾಮವ್ಯಾಹತಾ ಮತಿಃ ।
ವಿನ್ಧ್ಯಕನ್ದರಮಧ್ಯಸ್ಥಾಸ್ತಾನುಪಾಸ್ಯ ಚ ಪೃಚ್ಛ ಚ ॥೨೫॥

ಏವಮುಕ್ತಸ್ತದಾ ತೇನ ಮಾರ್ಕಣ್ಡೇಯೇನ ಧೀಮತಾ ।
ಪ್ರತ್ಯುವಾಚರ್ಷಿಶಾರ್ದೂಲೋ ವಿಸ್ಮಯೋತ್ಫುಲ್ಲಲೋಚನಃ ॥೨೬॥

---

೨೩. ಜೈಮಿನಿಮುನಿಯೆ ! ಇಂದು ಈ ವಿಷಯಗಳನ್ನು ನಿನಗೆ ಇನ್ನಾರು ಉಪದೇಶಿಸಬಹುದೊ; ಅವರನ್ನು ಸೂಚಿಸುವೆನು. ನಿನಗೆ ಉಪದೇಶಕರಾಗಬಲ್ಲ ಪಕ್ಷಿಗಳು ನಿನ್ನನ್ನು ಸಂದೇಹರಹಿತನನ್ನಾಗಿ ಮಾಡುವುವು.

೨೪. ಪಿಂಗಾಕ್ಷ, ವಿಬೋಧ, ಸುಪುತ್ರ ಮತ್ತು ಸುಮುಖ ಎಂಬ ನಾಮಾಂಕಿತಗಳೂ, ದ್ರೋಣಪುತ್ರರೂ ಆದ ನಾಲ್ಕು ಪಕ್ಷಿಗಳು ಸಂತತವಾಗಿ ಶಾಸ್ತ್ರಾರ್ಥವನ್ನು ಚಿಂತಿಸುವ ತತ್ತ್ವಜ್ಞಾನಿಗಳಾಗಿರುವುವು.

೨೫. ಯಾವ ಪಕ್ಷಿಗಳಿಗೆ ವೇದಶಾಸ್ತ್ರಗಳಲ್ಲಿ ಪ್ರತಿಪಾದಿಸಿರುವ ಅರ್ಥಗಳ ವಿಜ್ಞಾನದಲ್ಲಿ ಅಕುಂಠಿತವಾದ ಬುದ್ಧಿಯಿದೆಯೊ; ವಿಂಧ್ಯಪರ್ವತದ ಗವಿಯ ಮಧ್ಯದಲ್ಲಿ ವಾಸಮಾಡಿರುವ ಆ ಪಕ್ಷಿಗಳನ್ನು ಉಪಾಸನೆಮಾಡಿ ಕೇಳಿಕೊ.

೨೬. ಪ್ರತಿಭಾನ್ವಿತನಾದ ಮಾರ್ಕಂಡೇಯ ಮುನಿಯಿಂದ ಈ ರೀತಿಯಾಗಿ ನುಡಿಯಲ್ಪಟ್ಟಿರುವ ಮುನಿವರೇಣ್ಯನಾದ ಜೈಮಿನಿಯು ಆಗ ಆಶ್ಚರ್ಯದಿಂದ ಅರಳಿದ ಕಣ್ಣುಗಳುಳ್ಳವನಾಗಿ ಹೀಗೆ ಪ್ರತ್ಯುತ್ತರವಿತ್ತನು.

ಜೈಮಿನಿರುವಾಚ :—

ಅತ್ಯದ್ಭುತಮಿದಂ ಬ್ರಹ್ಮನ್ ಖಗವಾಗಿವ ಮಾನುಷೀ ।
ಯತ್ಪಕ್ಷಿಣಸ್ತೇ ವಿಜ್ಞಾನಮವಾಪುರತ್ಯನ್ತದುರ್ಲಭಮ್ ॥೨೭॥

ತಿರ್ಯಗ್ಯೋನ್ಯಾಂ ಯದಿ ಭವಸ್ತೇಷಾಂ ಜ್ಞಾನಂ ಕುತೋಽಭವತ್ ।
ಕಥಂ ಚ ದ್ರೋಣತನಯಾಃ ಪ್ರೋಚ್ಯನ್ತೇ ತೇ ಪತತ್ರಿಣಃ ॥೨೮॥

ಕಶ್ಚ ದ್ರೋಣಃ ಪ್ರವಿಖ್ಯಾತೋ ಯಸ್ಯ ಪುತ್ರಚತುಷ್ಟಯಮ್ ।
ಜಾತಂ ಗುಣವತಾಂ ತೇಷಾಂ ಧರ್ಮಜ್ಞಾನಂ ಮಹಾತ್ಮನಾಮ್॥೨೯॥

ಮಾರ್ಕಣ್ಡೇಯ ಉವಾಚ :—

ಶೃಣುಷ್ವಾವಹಿತೋ ಭೂತ್ವಾ ಯದ್ವೃತ್ತಂ ನನ್ದನೇ ಪುರಾ ।
ಶಕ್ರಸ್ಯಾಪ್ಸರಸಾಂ ಚೈವ ನಾರದಸ್ಯ ಚ ಸಂಗಮೇ ॥೩೦॥

ಜೈಮಿನಿಮುನಿಯು ಇಂತು ನುಡಿದನು :—

೨೭. ಬ್ರಹ್ಮರ್ಷಿಯೆ ! ಪಕ್ಷಿಗಳು ಮಾನವರಿಗೂ ಅತಿದುರ್ಲಭವಾದ ಜ್ಞಾನ ಸಂಪತ್ತಿಯನ್ನು ಹೊಂದಿರುವುದು ಮನುಷ್ಯನ ವಾಣಿಯನ್ನು ಅನುಕರಿಸುವ ಪಕ್ಷಿನಾದವನ್ನು ಕೇಳಿದರೆ ಎಂತಹ ಆಶ್ಚರ್ಯವೊ ಹಾಗೆ ಆಶ್ಚರ್ಯವೆನಿಸುವುದು.

೨೮. ಮೂಕಪ್ರಾಣಿಗಳ ಜಾತಿಯಲ್ಲಿ ಜನ್ಮವೆತ್ತಿದ ಆ ಪಕ್ಷಿಗಳಿಗೆ ಜ್ಞಾನವು ಹೇಗೆ ಉದಯಿಸಿತು ? ಮತ್ತು ಆ ಪಕ್ಷಿಗಳು ದ್ರೋಣಮುನಿಯ ಪುತ್ರರೆಂದು ಹೇಗೆ ಗಣಿಸುವಂತಾಯಿತು ?

೨೯. ಗುಣವಂತರೂ, ಮಹಾತ್ಮರೂ ಮಾತ್ರವಲ್ಲದೆ ನಿರುಪಮವಾದ ಧರ್ಮಜ್ಞಾನವನ್ನೂ ಹೊಂದಿರುವ ಆ ಪಕ್ಷಿರೂಪದ ನಾಲ್ಕುಮಂದಿ ಪುತ್ರರು ಯಾವ ದ್ರೋಣಮುನಿಯಿಂದ ಜನ್ಮವೆತ್ತಿದರೊ ; ಅಂತಹ ಜನಕನಾಗಿ ಪ್ರಸಿದ್ಧಿ ಹೊಂದಿದ ದ್ರೋಣಮುನಿಯು ಯಾರು ?

ಮಾರ್ಕಂಡೇಯ ಮುನಿಯು ಇಂತೆಂದನು :—

೩೦. ಪೂರ್ವಕಾಲದಲ್ಲಿ ದೇವೇಂದ್ರನು ಅಪ್ಸರಸ್ತ್ರೀಯರೊಡನೆ ನಂದನ ವನದಲ್ಲಿ ವಿಹರಿಸುತ್ತಿರುವಾಗ ನಾರದಮುನಿಯು ಅಲ್ಲಿಗೆ ಬರಲು ಅಲ್ಲಿ ಮುಂದೇನು ಪ್ರಸಂಗ ನಡೆಯಿತೆಂಬುದನ್ನು ಗಮನವಿಟ್ಟು ಕೇಳುವವನಾಗು.

ನಾರದೋ ನನ್ದನೇಽಪಶ್ಯತ್ಸ್ವಂಶ್ಚಲೀಗಣಮಧ್ಯಗಮ್ ।
ಶಕ್ರಂ ಸುರಾಧಿರಾಜಾನಂ ತನ್ಮುಖಾಸಕ್ತಲೋಚನಮ್ ॥೩೧॥

ಸ ತೇನರ್ಷಿ ವರಿಷ್ಠೇನ ದೃಷ್ಟಮಾತ್ರಃ ಶಚೀಪತಿಃ ।
ಸಮುತ್ತಸ್ಥೌ ಸ್ವಕಂ ಚಾಸ್ಮೈ ದದಾವಾಸನಮಾದರಾತ್ ॥೩೨॥

ತಂ ದೃಷ್ಟ್ವಾ ಬಲವೃತ್ರಘ್ನಮುತ್ಥಿತಂ ತ್ರಿದಶಾಙ್ಗನಾಃ ।
ಪ್ರಣೇಮುಸ್ತಾಶ್ಚ ದೇವರ್ಷಿಂ ವಿನಯಾವನತಾಃ ಸ್ಥಿತಾಃ ॥೦೩॥

ತಾಭಿರಭ್ಯರ್ಚಿತಃ ಸೋಽಥ ಉಪವಿಷ್ಟೇ ಶತಕ್ರತೌ ।
ಯಥಾರ್ಹಂ ಕೃತಸಂಭಾಷಃ ಕಥಾಶ್ಚಕ್ರೇ ಮನೋರಮಾಃ ॥೩೪॥

---

೩೧. ನಾರದಮುನಿಯು ನಂದನವನದಲ್ಲಿ ಅಪ್ಸರಾಂಗನೆಯರ ಮಧ್ಯದಲ್ಲಿ ಸೇರಿ ಆಕೆಯರ ಮುಖವಿಲಾಸಭಂಗಿಯಿಂದ ಸೆಳೆಯಲ್ಪಟ್ಟ ಕಣ್ಣುಗಳುಳ್ಳ, ದೇವರಾಜನಾದ ಇಂದ್ರನನ್ನು ಒಂದು ಸಮಯದಲ್ಲಿ ನೋಡಿದನು.

೩೨. ಮುನಿವರ್ಯನಾದ ನಾರದನು ತನ್ನನ್ನು ಕಂಡೊಡನೆ ಶಚೀಪತಿಯಾದ ಇಂದ್ರನು ಆಸನದಿಂದ ಮೇಲಕ್ಕೆ ಎದ್ದು ಅತ್ಯಾದರದಿಂದ ತನ್ನ ಆಸನವನ್ನು ನಾರದಮುನಿಗೆ ಅರ್ಪಿಸಿ ಉಪಚರಿಸಿದನು.

೩೩. ಬಲಾಸುರ, ವೃತ್ರಾಸುರ ಮುಂತಾದ ವೀರರಕ್ಕಸರನ್ನು ಕೊಂದಿರುವ ದೇವರಾಜನು ನಾರದ ಮುನಿಯ ಗೌರವದಿಂದ ಎದ್ದು ನಿಂತಿರುವುದನ್ನು ಕಂಡ ದೇವಲೋಕದ ಅಪ್ಸರಾಂಗನೆಯರು ತಾವೂ ಎದ್ದು ವಿನಯದಿಂದ ನಮ್ರರಾಗಿ ನಿಂತು ನಾರದಮುನಿಗೆ ವಂದಿಸಿದರು.

೩೪. ಹೀಗೆ ಅಪ್ಸರಸ್ತ್ರೀಯರಿಂದಲೂ ಸತ್ಕರಿಸಲ್ಪಟ್ಟ ನಾರದಮುನಿಯು ತನ್ನ ಅನುಮತಿಯಂತೆ ಇಂದ್ರನು ಆಸನದಲ್ಲಿ ಕುಳಿತುಕೊಂಡ ತರುವಾಯ ಕಾಲೋಚಿತವಾಗಿ ಮಾತನಾಡಲು ತೊಡಗಿ ಹೃದಯರಂಜಕವಾಗಿ ಅನೇಕ ಸಂಭಾಷಣೆಗಳನ್ನು ನಡೆಸಿದನು.

ತತಃ ಕಥಾನ್ತರೇ ಶಕ್ರಸ್ತಮುವಾಚ ಮಹಾಮುನಿಮ್ ॥೩೫॥

ಶಕ್ರ ಉವಾಚ :—

ದೇಹ್ಯಾಜ್ಞಾಂ ನೃತ್ಯತಾಮಾಸಾಂ ತವ ಯಾಭಿಮತೇತಿ ವೈ ॥೩೬॥

ರಮ್ಭಾ ವಾ ಕರ್ಕಶಾ ವಾಥ ಉರ್ವಶ್ಯಥ ತಿಲೋತ್ತಮಾ ।
ಘೃತಾಚೀ ಮೇನಕಾ ವಾಪಿ ಯತ್ರ ವಾ ಭವತೋ ರುಚಿಃ ॥೩೭॥

ಏತಚ್ಛ್ರುತ್ವಾ ದ್ವಿಜಶ್ರೇಷ್ಠೋ ವಾಚಂ ಶಕ್ರಸ್ಯ ನಾರದಃ ।
ವಿಚಿನ್ತ್ಯಾಪ್ಸರಸಃ ಪ್ರಾಹ ವಿನಯಾವನತಾಃ ಸ್ಥಿತಾಃ ॥೩೮॥

---

೩೫. ಹೀಗೆ ಸ್ವಲ್ಪ ಹೊತ್ತು ಕಾಲೋಚಿತವಾದ ಸಂಭಾಷಣೆಯು ನಡೆದು ಅದು ಮುಗಿಯಲು ದೇವೇಂದ್ರನು ನಾರದಮುನಿಯನ್ನು ಕುರಿತು ಈರೀತಿಯಾಗಿ ವಿಜ್ಞಾಪಿಸಿದನು.

ಇಂದ್ರನು ಹೀಗೆ ನುಡಿದನು :—

೩೬. ನೃತ್ಯಕಲಾನಿಪುಣರಾದ ಈ ಅಪ್ಸರೆಯರಲ್ಲಿ ಯಾರ ನೃತ್ಯವನ್ನು ನೋಡಲು ನಿನ್ನ ಮನಸ್ಸು ಒಪ್ಪುವುದೊ ಅವಳಿಂದ ನೃತ್ಯವಾಗುವಂತೆ ಆಜ್ಞೆ-ಯಿತ್ತು ಅನುಗ್ರಹಿಸು.

೩೭. ಮುಂದೆ ನಿಂತಿರುವ ವರಾಂಗನೆಯರ ಗುಂಪಿನಲ್ಲಿ ರಂಭಾ, ಕರ್ಕಶಾ, ಊರ್ವಶೀ, ತಿಲೋತ್ತಮಾ, ಘೃತಾಚೀ ಮತ್ತು ಮೇನಕಾ ಮುಂತಾದ ನೃತ್ಯಕಲಾಕೋವಿದರು ಅನೇಕಮಂದಿ ಇರುವರು. ಇವರ ನೃತ್ಯವನ್ನು ನೋಡಲು ನಿನ್ನ ಮನಸ್ಸು ಒಪ್ಪುವುದೆ? ಅಥವಾ ಇನ್ನಾವ ಸ್ತ್ರೀಯ ನರ್ತನ-ವನ್ನು ನೋಡುವ ರುಚಿಯಿದೆ?

೩೮. ಮುನಿವರ್ಯನಾದ ನಾರದನು ಇಂದ್ರನ ಈ ವಾಣಿಯನ್ನು ಕೇಳಿ ಸ್ವಲ್ಪಹೊತ್ತು ಮನಸ್ಸಿನಲ್ಲಿ ಯೋಚಿಸಿ ವಿನಯದಿಂದ ನಮ್ರರಾಗಿ ಮುಂದೆ ನಿಂತಿದ್ದ ಅಪ್ಸರೆಯರನ್ನು ನೋಡಿ ಹೀಗೆ ಹೇಳಿದನು.

ಯುಷ್ಮಾಕಮಿಹ ಸರ್ವಾಸಾಂ ರೂಪೌದಾರ್ಯಗುಣಾಧಿಕಮ್ ।
ಆತ್ಮಾನಂ ಮನ್ಯತೇ ಯಾ ತು ಸಾ ನೃತ್ಯತು ಮಮಾಗ್ರತಃ ॥೩೯॥

ಗುಣರೂಪವಿಹೀನಾಯಾಃ ಸಿದ್ಧಿರ್ನಾಟ್ಯಸ್ಯ ನಾಸ್ತಿ ವೈ ।
ಚಾರ್ವಧಿಷ್ಠಾನವನ್ನೃತ್ಯಂ ನೃತ್ಯಮನ್ಯದ್ವಿಡಮ್ಬನಮ್ ॥೪೦॥

ಮಾರ್ಕಣ್ಡೇಯ ಉವಾಚ :—

ತದ್ವಾಕ್ಯಸಮಕಾಲಂ ಚ ಏಕೈಕಾಸ್ತಾ ನತಾಸ್ತತಃ ।
ಅಹಂ ಗುಣಾಧಿಕಾ ನ ತ್ವಂ ನ ತ್ವಂ ಚಾನ್ಯಾಬ್ರವೀದಿದಮ್ ॥೪೧॥

ತಾಸಾಂ ಸಂಭ್ರಮಮಾಲೋಕ್ಯ ಭಗವಾನ್ ಪಾಕಶಾಸನಃ ।
ಪೃಚ್ಛ್ಯತಾಂ ಮುನಿರಿತ್ಯಾಹ ವಕ್ತಾ ಯಾಂ ವೋ ಗುಣಾಧಿಕಾಮ್ ॥೪೨॥

---

೩೯. ನಿಮ್ಮೆಲ್ಲರಲ್ಲಿ ಸೌಂದರ್ಯ, ಔದಾರ್ಯ ಮುಂತಾದ ವಿಶಿಷ್ಟ ಗುಣಗಳಲ್ಲಿ ಎಲ್ಲರಿಗಿಂತಲೂ ನಾನೇ ಮೇಲಾದವಳೆಂದು ಯಾರು ನಂಬಿರುವಳೊ; ಅವಳು ನನ್ನ ಮುಂದೆ ನಿಂತು ನರ್ತನ ಮಾಡಲಿ.

೪೦. ಸದ್ಗುಣ ಮತ್ತು ಸೌಂದರ್ಯ, ಇವುಗಳಿಲ್ಲದ ನಾರಿಗೆ ನಾಟ್ಯ-ಕಲಾಸಿದ್ಧಿಯಾಗಲಾರದು. ನೃತ್ಯವಿದ್ಯೆಯು ಸೌಂದರ್ಯಗುಣಸಂಪನ್ನವಾದ ವ್ಯಕ್ತಿಯ ಆಧಾರದಿಂದಲೆ ಶೋಭಿಸುವುದು. ಸೌಂದರ್ಯಗುಣಶೂನ್ಯವಾದ ವ್ಯಕ್ತಿಯ ನೃತ್ಯವು ಆಭಾಸವಾದುದು.

ಮಾರ್ಕಂಡೇಯಮುನಿಯು ಇಂತೆಂದನು :—

೪೧. ನಾರದಮುನಿಯು ಈ ಮಾತನ್ನು ಆಡುವಷ್ಟರಲ್ಲಿ ಆ ಅಪ್ಸರೆಯರ ಗುಂಪಿನಲ್ಲಿ ಪ್ರತಿಯೊಬ್ಬಳೂ ಮುಂದೆ ಬಂದು ಮುನಿಗೆ ವಂದಿಸಿ ಮತ್ತೊಬ್ಬಳನ್ನು ನೋಡಿ "ನಾನು ಅಧಿಕಗುಣವುಳ್ಳವಳು; ನೀನಲ್ಲ," ಎಂದು ಅನ್ಯೋನ್ಯವಾಗಿ ಹೇಳಿಕೊಂಡರು.

೪೨. ಆ ಅಪ್ಸರೆಯರ ಸ್ಪರ್ಧೆಯನ್ನು ಕಂಡು ದೇವವಂದ್ಯನಾದ ಇಂದ್ರನು, "ನಿಮ್ಮಲ್ಲಿ ಅಧಿಕಗುಣವತಿಯು ಯಾರೆಂದು ತೀರ್ಮಾನಿಸಿ ಹೇಳು-ವಂತೆ ನಾರದಮುನಿಯನ್ನು ಕೇಳಿಕೊಳ್ಳಿರಿ" ಎಂದು ಅವರಿಗೆ ಆದೇಶವಿತ್ತನು.

ಶಕ್ರಾಚ್ಛನ್ದಾನುಯಾತಾಭಿಃ ಪೃಷ್ಟಸ್ತಾಭಿಃ ಸ ನಾರದಃ ।
ಪ್ರೋವಾಚ ಯತ್ತದಾ ವಾಕ್ಯಂ ಜೈಮಿನೇ ತನ್ನಿಬೋಧ ಮೇ ॥೪೩॥

ತಪಸ್ಯನ್ತಂ ನಗೇನ್ದ್ರಸ್ಥಂ ಯಾ ವಃ ಕ್ಷೋಭಯತೇ ಬಲಾತ್ ।
ದುರ್ವಾಸಸಂ ಗುಣಶ್ರೇಷ್ಠಂ ತಾಂ ಮೋ ಮನ್ಯೇ ಗುಣಾಧಿಕಾಮ್ ॥೪೪॥

ಮಾರ್ಕಣ್ಡೇಯ ಉವಾಚ :—

ತಸ್ಯ ತದ್ವಚನಂ ಶ್ರುತ್ವಾ ಸರ್ವಾ ವೇಪಿತಕನ್ಧರಾಃ ।
ಅಶಕ್ಯಮೇತದಸ್ಮಾಕಮಿತಿ ತಾಶ್ಚಕ್ರಿರೇ ಕಥಾಃ ॥೪೫॥

ತತ್ರಾಪ್ಸರಾ ವಪುರ್ನಾಮ ಮುನಿಕ್ಷೋಭಣಗರ್ವಿತಾ ।
ಪ್ರತ್ಯುವಾಚಾನುಯಾಸ್ಯಾಮಿ ಯತ್ರಾಸೌ ಸಂಸ್ಥಿತೋ ಮುನಿಃ ॥೪೬॥

---

೪೩. ದೇವೇಂದ್ರನ ಅಭಿಮತದಂತೆ ವರ್ತಿಸಿದ ಅಪ್ಸರಾಂಗನೆಯರು ನಾರದಮುನಿಯನ್ನು ಹಾಗೆ ಪ್ರಶ್ನಿಸಲು ಆಗ ನಾರದಮುನಿಯು ಯಾವ ಪ್ರತ್ಯುತ್ತರವನ್ನು ಅವರಿಗೆ ಹೇಳಿದನೊ; ಅದನ್ನು ನಾನು ಹೇಳುವೆನು; ಕೇಳು.

೪೪. ಗಿರಿರಾಜನಾದ ಹಿಮಾಲಯಪರ್ವತದಲ್ಲಿ ತಪಸ್ಸನ್ನು ಆಚರಿಸುತ್ತಿದ್ದ ಮುನಿಶ್ರೇಷ್ಠನಾದ ದುರ್ವಾಸಮಹರ್ಷಿಯನ್ನು ಬಲಾತ್ಕಾರದಿಂದ ಇಂದ್ರಿಯಕ್ಷೋಭಕ್ಕೆ ಗುರಿಮಾಡಲು ನಿಮ್ಮಲ್ಲಿ ಯಾರಿಗೆ ಸಾಮರ್ಥ್ಯವಿರುವುದೊ; ಅವಳು ನಿಮ್ಮೆಲ್ಲರಲ್ಲಿ ಅಧಿಕಗುಣವತಿಯೆಂದು ನಾನು ಭಾವಿಸುವೆನು.

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು:—

೪೫. ನಾರದಮುನಿಯ ಆ ಮಾತನ್ನು ಕೇಳಿ ಅಪ್ಸರಸ್ತ್ರೀಯರೆಲ್ಲರೂ ಕತ್ತನ್ನಲ್ಲಾಡಿಸುತ್ತ ಇದು ನಮಗೆ ಅಸಾಧ್ಯವೆಂದು ಒಬ್ಬರಿಗೊಬ್ಬರು ಹೇಳಿಕೊಂಡರು.

೪೬. ಹೀಗಿರಲು ಅವರಲ್ಲಿ ವಪು ಎಂಬ ನಾಮಾಂಕಿತಳಾದ ಅಪ್ಸರೆಯೋರ್ವಳು ದುರ್ವಾಸಮುನಿಯನ್ನು ಕ್ಷೋಭಗೊಳಿಸುವ ಅಹಂಕಾರದಿಂದ ಕೂಡಿದವಳಾಗಿ "ಯಾವ ಸ್ಥಳದಲ್ಲಿ ದುರ್ವಾಸಮುನಿಯು ನೆಲೆಸಿರುವನೊ; ಅಲ್ಲಿಗೆ ನಾನು ಹೋಗಲು ಸಿದ್ಧಳಾಗಿದ್ದೇನೆ" ಎಂದಳು.

ಅದ್ಯ ತಂ ದೇಹಯನ್ತಾರಂ ಪ್ರಯುಕ್ತೇನ್ದ್ರಿಯವಾಜಿನಮ್ ।
ಸ್ಮರಶಸ್ತ್ರಗಲದ್ರಶ್ಮಿಂ ಕರಿಷ್ಯಾಮಿ ಕುಸಾರಥಿಮ್ ॥೪೭॥

ಬ್ರಹ್ಮಾ ಜನಾರ್ದನೋ ವಾಪಿ ಯದಿ ವಾ ನೀಲಲೋಹಿತಃ ।
ತಮಪ್ಯದ್ಯ ಕರಿಷ್ಯಾಮಿ ಕಾಮಬಾಣಕ್ಷತಾನ್ತರಮ್ ॥೪೮॥

ಇತ್ಯುಕ್ತ್ವಾ ಪ್ರಜಗಾಮಾಥ ಪ್ರಾಲೇಯಾದ್ರಿಂ ವಪುಸ್ತದಾ ।
ಮುನೇಸ್ತಪಃಪ್ರಭಾವೇಣ ಪ್ರಶಾನ್ತಶ್ವಾಪದಾಶ್ರಮಮ್ ॥೪೯॥

ಸಾ ಪುಂಸ್ಕೋಕಿಲಮಾಧುರ್ಯಾ ಯತ್ರಾಸ್ತೇ ಸ ಮಹಾಮುನಿಃ ।
ಕ್ರೋಶಮಾತ್ರಂ ಸ್ಥಿತಾ ತಸ್ಮಾದಗಾಯತ ವರಾಪ್ಸರಾಃ ॥೫೦॥

---

೪೭. ಅಲ್ಲದೆ ದುರ್ವಾಸಮುನಿಯ ಬಳಿಗೆ ಹೋಗಿ ಇಂದ್ರಿಯಗಳೆಂಬ ಕುದುರೆಗಳನ್ನು ಓಡಿಸುತ್ತ ದೇಹರಥವನ್ನು ಒಯ್ಯುತ್ತಿದ್ದ ಮುನಿಯ ಬುದ್ಧಿ ಸಾರಥಿಗೆ ಕಾಮಶಸ್ತ್ರಪ್ರಯೋಗದಿಂದ ಕುದುರೆಗಳ ಲಗಾಮು ತಪ್ಪಿಹೋಗುವಂತೆ ಮಾಡುವೆನು.

೪೮. ಬ್ರಹ್ಮದೇವನೊ; ನಾರಾಯಣನೊ; ಅಥವಾ ರುದ್ರಮೂರ್ತಿಯೊ ಯಾರೇ ಆಗಲಿ ಎಲ್ಲರನ್ನೂ ಮದನಬಾಣದಿಂದ ಸೋತು ಹೋದ ಅಂತಃಕರಣವುಳ್ಳವರನ್ನಾಗಿ ಈಗಲೆ ಮಾಡುವೆನು.

೪೯. ಹೀಗೆಂದು ಹೇಳಿ ಆ ವಪು ಎಂಬ ಅಪ್ಸರೆಯು ಕೂಡಲೆ ದುರ್ವಾಸಮುನಿಯ ತಪಶ್ಚರ್ಯೆಯ ಪ್ರಭಾವದಿಂದ ಶಾಂತಿಯಿಂದ ಕೂಡಿದ ಹುಲಿ ಮುಂತಾದ ಹಿಂಸಕಪ್ರಾಣಿಗಳುಳ್ಳ ಆಶ್ರಮಗಳಿಂದ ಶೋಭಿಸುವ ಹಿಮಾಲಯ ಪರ್ವತಕ್ಕೆ ಹೊರಟಳು.

೫೦. ಹಿಮಾಲಯ ಪರ್ವತವನ್ನು ತಲುಪಿದ ಆ ಅಪ್ಸರಾಂಗನಾಮಣಿಯು ದುರ್ವಾಸಮುನಿಯು ವಾಸಮಾಡುತ್ತಿದ್ದ ಸ್ಥಳದಿಂದ ಹರದಾರಿ ದೂರದಲ್ಲಿ ನಿಂತು ಅಲ್ಲಿಂದಲೆ ಕೋಗಿಲೆಯಂತೊಪ್ಪುವ ಗಾನಮಾಧುರ್ಯದಿಂದ ಹಾಡಲು ತೊಡಗಿದಳು.

ತದ್ಗೀತಧ್ವನಿಮಾಕರ್ಣ್ಯ ಮುನಿರ್ವಿಸ್ಮಿತಮಾನಸಃ ।
ಜಗಾಮ ತತ್ರ ಯತ್ರಾಸ್ತೇ ಸಾ ಬಾಲಾ ರುಚಿರಾನನಾ ॥೫೧॥

ತಾಂ ದೃಷ್ಟ್ವಾ ಚಾರುಸರ್ವಾಙ್ಗೀಂ ಮುನಿಃ ಸಂಸ್ತಭ್ಯ ಮಾನಸಮ್।
ಕ್ಷೋಭಣಾಯಾಗತಾಂ ಜ್ಞಾತ್ವಾ ಕೋಪಾಮರ್ಷಸಮನ್ವಿತಃ ॥೫೨॥

ಉವಾಚೇದಂ ತತೋ ವಾಕ್ಯಂ ಮಹರ್ಷಿಸ್ತಾಂ ಮಹಾತಪಾಃ ॥೫೩॥

ಯಸ್ಮಾದ್ದುಃಖಾರ್ಜಿತಸ್ಯೇಹ ತಪಸೋ ವಿಘ್ನಕಾರಣಾತ್ ।
ಆಗತಾಸಿ ಮದೋನ್ಮತ್ತೇ ಮಮ ದುಃಖಾಯ ಖೇಚರಿ ॥೫೪॥

ತಸ್ಮಾತ್ಸುಪರ್ಣಗೋತ್ರೇ ತ್ವಂ ಮತ್ಕ್ರೋಧಕಲುಷೀಕೃತಾ ।
ಜನ್ಮ ಪ್ರಾಪ್ಸ್ಯಸಿ ದುಷ್ಪ್ರಜ್ಞೇ ಯಾವದ್ವರ್ಷಾಣಿ ಷೋಡಶ ॥೫೫॥

---

೫೧. ಆ ಗೀತದ ಧ್ವನಿಯನ್ನು ಕೇಳಿ ವಿಸ್ಮಯಗೊಂಡ ಮಾನಸವುಳ್ಳ ದುರ್ವಾಸಮುನಿಯು ಸುಂದರಮುಖಿಯಾದ ಅಪ್ಸರಾಂಗನೆಯು ಇದ್ದ ಸ್ಥಳಕ್ಕೆ ಬಂದನು.

೫೨. ಮನಸೆಳೆಯುವ ಸುಂದರಮೂರ್ತಿಯಿಂದ ಕೂಡಿದ ಆಕೆಯನ್ನು ಕಂಡು ಮುನಿಯು ವಿಕಾರಹೊಂದುತ್ತಿದ್ದ ಮನವನ್ನು ಬಿಗಿಹಿಡಿದು ಆ ಅಪ್ಸರೆಯು ತನ್ನ ಇಂದ್ರಿಯಗಳನ್ನು ಕ್ಷೋಭಗೊಳಿಸಲು ಬಂದಿರುವಳೆಂದು ತಿಳಿದು ಸಹಿಸಲಾಗದ ಕೋಪೋದ್ರೇಕ ತಾಳಿದನು.

೫೩. ಮತ್ತು ಮಹಾತಪಸ್ವಿಯಾದ ದುರ್ವಾಸಮಹರ್ಷಿಯು ಅವಳನ್ನು ಕುರಿತು ಈರೀತಿಯಾಗಿ ಹೇಳಿದನು.

೫೪. ಮದೋನ್ಮತ್ತಳೂ ಗಗನಸಂಚಾರಿಣಿಯೂ ಆದ ಅಪ್ಸರಾಂಗನೆಯೆ! ದುಃಖದಿಂದ ಆರ್ಜಿಸಿದ ತಪವನ್ನು ಭಂಗಪಡಿಸಿ ನನ್ನನ್ನು ದುಃಖದಲ್ಲಿ ಮುಳುಗಿಸುವ ಕಾರಣದಿಂದ ನೀನು ಇಲ್ಲಿಗೆ ಬಂದಿರುವೆಯಲ್ಲವೆ!

೫೫. ಪ್ರಜ್ಞಾಹೀನಳೆ! ಆ ಕಾರಣದಿಂದ ನನ್ನ ಕ್ರೋಧಾಗ್ನಿಜ್ವಾಲೆಗೆ ತುತ್ತಾದ ನೀನು ಹದಿನಾರು ವರ್ಷಗಳು ಪೂರ್ಣವಾಗುವ ವರೆಗೆ ಪಕ್ಷಿವಂಶದಲ್ಲಿ ಜನ್ಮವೆತ್ತಿ ವಾಸಮಾಡುವವಳಾಗು.

ನಿಜರೂಪಂ ಪರಿತ್ಯಜ್ಯ ಪಕ್ಷಿಣೀರೂಪಧಾರಿಣೀ ।
ಚತ್ವಾರಸ್ತೇ ಚ ತನಯಾ ಜನಿಷ್ಯನ್ತೇಽಧಮಾಪ್ಸರಾಃ ॥೫೬॥

ಅಪ್ರಾಪ್ಯ ತೇಷು ಚ ಪ್ರೀತಿಂ ಶಸ್ತ್ರಪೂತಾ ಪುನರ್ದಿವಿ ।
ವಾಸಮಾಪ್ಸ್ಯಸಿ ವಕ್ತವ್ಯಂ ನೋತ್ತರಂ ತೇ ಕಥಂಚನ ॥೫೭॥

ಇತಿ ವಚನಮುಸಹ್ಯಂ ಕೋಪಸಂರಕ್ತದೃಷ್ಟಿ-
ಶ್ಚಲಕಲವಲಯಾಂ ತಾಂ ಮಾನಿನೀಂ ಶ್ರಾವಯಿತ್ವಾ ।
ತರಲತರತರಙ್ಗಾಂ ಗಾಂ ಪರಿತ್ಯಜ್ಯ ವಿಪ್ರಃ
ಪ್ರಥಿತಗುಣಗಣೌಘಾಂ ಸಂಪ್ರಯಾತಃ ಖಗಙ್ಗಾಮ್ ॥೫೮॥

ಇತಿ ಶ್ರೀ ಮಾರ್ಕಂಡೇಯ ಮಹಾಪುರಾಣೇ ವಪುಶಾಪಕಥನಂ ನಾಮ ಪ್ರಥಮೋಽಧ್ಯಾಯಃ

---

೫೬. ಈ ಮಹಾಪರಾಧವನ್ನು ಎಸಗಿದ ನೀನು ನಿಜರೂಪವನ್ನು ಬಿಟ್ಟು ಪಕ್ಷಿರೂಪವನ್ನು ಧರಿಸುವವಳಾಗುತ್ತೀಯೆ. ನೀಚಳಾದ ಅಪ್ಸರೆಯೆ! ಆ ದಶೆಯಲ್ಲಿ ನೀನು ನಾಲ್ಕು ಮಂದಿ ಪುತ್ರರಿಗೆ ಜನನಿಯಾಗುತ್ತೀಯೆ.

೫೭. ಪುತ್ರರಿಂದ ಅನುಭವಿಸಬೇಕಾದ ಪ್ರೀತಿಯನ್ನು ಹೊಂದದೆ ಶಸ್ತ್ರ-ವಧದಿಂದ ಪಾವಿತಳಾಗಿ ಮತ್ತೆ ದೇವಲೋಕವನ್ನು ಸೇರಿ ನಿಜರೂಪದಿಂದ ವಾಸಮಾಡುತ್ತೀಯೆ. ಇದು ನಿನ್ನ ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತವು. ಇದನ್ನು ಅವಶ್ಯವಾಗಿ ಅನುಭವಿಸಲೆಬೇಕು. ಇದಕ್ಕೆ ವಿರುದ್ಧವಾಗಿ ಏನೂ ಹೇಳಲಾಗದು.

೫೮. ಕೋಪದಿಂದ ಕೆಂಪಾದ ಕಣ್ಣುಗಳುಳ್ಳ, ಬ್ರಹ್ಮರ್ಷಿಯಾದ ದುರ್ವಾಸಮುನಿಯು ಚಲಿಸಿ ಮುದ್ದಾಗಿ ಶಬ್ದಮಾಡುವ ಬಳೆಗಳನ್ನು ತೊಟ್ಟಿರುವ ಅಪ್ಸರಾಂಗನೆಗೆ ಈರೀತಿಯಾಗಿ ಕಠಿನವಾದ ಶಾಪವನ್ನು ಕೊಟ್ಟು ಕೂಡಲೆ ಭೂಮಿಯನ್ನು ಬಿಟ್ಟು ಪ್ರಸಿದ್ಧವಾದ ಅನೇಕ ಗುಣಗಳಿಂದ ಪೂರ್ಣವೂ, ಚಂಚಲವಾದ ತರಂಗಗಳಿಂದ ಶೋಭಿತವೂ ಆದ ದೇವಗಂಗೆಯ ಬಳಿಗೆ ಹೊರಟುಹೋದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಪ್ರಥಮಾಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಿತೀಯೋಽಧ್ಯಾಯಃ

(ಕನ್ಧರ.ವಿದ್ಯುದ್ರೂಪಯೋರ್ಯುದ್ಧಮ್)

ಮಾರ್ಕಣ್ಡೇಯ ಉವಾಚ :—

ಅರಿಷ್ಟನೇಮಿ ಪುತ್ರೋಽಭೂದ್ಗರುಡೋ ನಾಮ ಪಕ್ಷಿರಾಟ್ ।
ಗರುಡಸ್ಯಾಭವತ್ಪುತ್ರಃ ಸಮ್ಪಾತಿರಿತಿ ವಿಶ್ರುತಃ ॥೧॥

ತಸ್ಯಾಪ್ಯಾಸೀತ್ಸುತಃ ಶೂರಃ ಸುಪಾರ್ಶ್ವೋ ವಾಯುವಿಕ್ರಮಃ ।
ಸುಪಾರ್ಶ್ವತನಯಃ ಕುನ್ತಿಃ ಕುನ್ತಿಪುತ್ರಃ ಪ್ರಲೋಲುಪಃ ॥೨॥

ತಸ್ಯಾಪಿ ತನಯಾವಾಸ್ತಾಂ ಕಙ್ಕಃ ಕನ್ಧರ ಏವ ಚ ॥೩॥

ಎರಡನೆಯ ಅಧ್ಯಾಯ

೧. ಅರಿಷ್ಟನೇಮಿಗೆ ಪಕ್ಷಿರಾಜನಾದ ಗರುಡನೆಂಬ ಪುತ್ರನಿದ್ದನು. ಆ ಗರುಡನಿಗೆ ಸಂಪಾತಿಯೆಂಬ ನಾಮಾಂಕನದಿಂದ ಪ್ರಸಿದ್ಧಿ ಹೊಂದಿದ ಮಗನಿದ್ದನು.

೨. ಆ ಸಂಪಾತಿಗೆ ಶೂರನೂ ವಾಯುದೇವನಂತಹ ವಿಕ್ರಮವುಳ್ಳವನೂ ಆದ ಸುಪಾರ್ಶ್ವ ಎಂಬ ಪುತ್ರನೂ ಸುಪಾರ್ಶ್ವ ಎಂಬುವನಿಗೆ ಕುಂತಿ ಎಂಬ ಪುತ್ರನೂ ಮತ್ತು ಕುಂತಿ ಎಂಬುವನಿಗೆ ಪ್ರಲೋಲುಪ ಎಂಬ ಪುತ್ರನೂ ಇದ್ದರು.

೩. ಹಿಂದೆ ವರ್ಣಿಸಿದ ಪುತ್ರಸಂತತಿಯಲ್ಲಿ ಕಡೆಯವನಾದ ಪ್ರಲೋಲುಪ ಎಂಬುವನಿಗೆ ಕಂಕ, ಕಂಧರ ಎಂಬ ಈರ್ವರು ಪುತ್ರರು ಜನಿಸಿದರು.

ಕಙ್ಕಃ ಕೈಲಾಸಶಿಖರೇ ವಿದ್ಯುದ್ರೂಪೇತಿ ವಿಶ್ರುತಮ್ ।
ದದರ್ಶಾಮ್ಬುಜಪತ್ರಾಕ್ಷಂ ರಾಕ್ಷಸಂ ಧನದಾನುಗಮ್ ॥೪॥

ಆಪಾನಸಕ್ತಮಮಲಸ್ರಗ್ದಾಮಾಮ್ಬರಧಾರಿಣಮ್ ।
ಭಾರ್ಯಾಸಹಾಯಮಾಸೀನಂ ಶಿಲಾಪಟ್ಟೇಽಮಲೇ ಶುಭೇ ॥೫॥

ತದ್ದೃಷ್ಟಮಾತ್ರಂ ಕಙ್ಕೇನ ರಕ್ಷಃ ಕ್ರೋಧಸಮನ್ವಿತಮ್ ।
ಪ್ರೋವಾಚ ಕಸ್ಮಾದಾಯಾತಸ್ತ್ವಮಿತೋ ಹ್ಯಣ್ಡಜಾಧಮ ॥೬॥

ಸ್ತ್ರೀಸನ್ನಿಕರ್ಷೇ ತಿಷ್ಠನ್ತಂ ಕಸ್ಮಾನ್ಮಾಮುಪಸರ್ಪಸಿ ।
ನೈಷ ಧರ್ಮಃ ಸುಬುದ್ಧೀನಾಂ ಮಿಥೋ ನಿಷ್ಪಾದ್ಯವಸ್ತುಷು ॥೭॥

---

೪. ಕಂಕ ಎಂಬುವನು ಒಂದು ಸಮಯ ಕೈಲಾಸಗಿರಿಯ ಶಿಖರದಲ್ಲಿ ಕುಬೇರನಿಗೆ ಸೇವಕನಾದ, ತಾವರೆಯ ದಳದಂತೆ ಸುಂದರವಾದ ಕಣ್ಣುಗಳುಳ್ಳ ಮತ್ತು ವಿದ್ಯುದ್ರೂಪ ಎಂಬ ನಾಮಾಂಕಿತನಾದ ಒಬ್ಬ ರಾಕ್ಷಸನನ್ನು ಕಂಡನು.

೫. ಆ ವಿದ್ಯುದ್ರೂಪನು ಉಜ್ವಲವಾದ ಪುಷ್ಪಮಾಲೆಯನ್ನೂ ನಿರ್ಮಲವಾದ ವಸ್ತ್ರವನ್ನೂ ಧರಿಸಿದವನೂ ಮತ್ತು ಸ್ವಚ್ಛ ಹಾಗು ಸುಂದರವಾದ ಶಿಲಾಪಟ್ಟದಲ್ಲಿ ಪ್ರಿಯೆಯೊಡನೆ ಕುಳಿತು ಮದ್ಯಪಾನಸುಖವನ್ನು ಅನುಭವಿಸುವವನೂ ಆಗಿದ್ದನು.

೬. ಕಂಕನು ರಾಕ್ಷಸನನ್ನು ಕಂಡ ಕೂಡಲೆ ಕೋಪೋದ್ರೇಕಗೊಂಡಿರುವ ಆ ರಾಕ್ಷಸನು ಹೀಗೆ ಹೇಳುತ್ತ ಕಂಕನನ್ನು ಗದರಿಸಿದನು. ಎಲೆ ವಿಹಗಾಧಮನೆ ! ನೀನೇಕೆ ಇಲ್ಲಿಗೆ ಬಂದೆಯೊ ?

೭. ಪ್ರಿಯೆಯೊಡನೆ ಏಕಾಂತಭೋಗದಲ್ಲಿದ್ದ ನನ್ನೆಡೆಗೆ ನೀನು ಬರಬಹುದೆ ? ಏಕಾಂತದಲ್ಲಿ ಸ್ತ್ರೀ-ಪುರುಷರು ಸೇರಿ ರತಿಸುಖವನ್ನು ಅನುಭವಿಸುವ ಪ್ರಸಂಗಕ್ಕೆ ಅಡ್ಡಿ ತರುವುದು ಪ್ರಾಜ್ಞರಿಗೆ ಧರ್ಮವಲ್ಲ.

ಕಙ್ಕ ಉವಾಚ :—

ಸಾಧಾರಣೋಽಯಂ ಶೈಲೇನ್ದ್ರೋ ಯಥಾ ತವ ತಥಾ ಮಮ ।
ಅನ್ಯೇಷಾಂ ಚೈವ ಜನ್ತೂನಾಂ ಮಮತಾ ಭವತೋಽತ್ರ ಕಾ ॥೮॥

ಮಾರ್ಕಣ್ಡೇಯ ಉವಾಚ :—

ಬ್ರುವಾಣಮಿತ್ಥಂ ಖಡ್ಗೇನ ಕಙ್ಕಂ ಚಿಚ್ಛೇದ ರಾಕ್ಷಸಃ ।
ಕ್ಷರತ್ಕ್ಷತಜಬೀಭತ್ಸಂ ವಿಸ್ಫುರನ್ತಮಚೇತನಮ್ ॥೯॥

ಕಙ್ಕಂ ವಿನಿಹತಂ ಶ್ರುತ್ವಾ ಕನ್ಧರಃ ಕ್ರೋಧಮೂರ್ಛಿತಃ ।
ವಿದ್ಯುದ್ರೂಪವಧಾಯಾಶು ಮನಶ್ಚಕ್ರೇಽಣ್ಡಜೇಶ್ವರಃ ॥೧೦॥

ಸ ಗತ್ವಾ ಶೈಲಶಿಖರಂ ಕಙ್ಕೋ ಯತ್ರ ಹತಃ ಸ್ಥಿತಃ ।
ತಸ್ಯ ಸಙ್ಕಲನಂ ಚಕ್ರೇ ಭ್ರಾತುರ್ಜ್ಯೇಷ್ಠಸ್ಯ ಖೇಚರಃ ॥೧೧॥

ಕಂಕನು ಹೀಗೆ ನುಡಿದನು :—

೮. ಈ ಪರ್ವತವು ನಿನಗೆ ಹೇಗೊ ಹಾಗೆಯೆ ನನಗೂ ಸಾಮಾನ್ಯವಾದುದಲ್ಲವೆ? ನಿನಗೆ ಮತ್ತು ನನಗೆ ಮಾತ್ರವಲ್ಲದೆ, ಸ್ವೇಚ್ಛೆಯಿಂದ ಬರುವ ಇತರ ಸಮಸ್ತ ಜಂತುಗಳಿಗೂ ಸಾಮಾನ್ಯವಾದುದು. ಹೀಗಿರಲು ನಿನಗೆ ಈ ಪರ್ವತದಲ್ಲಿ ಮಮತ್ವವು ಎಂತಹುದು?

ಮಾರ್ಕಂಡೇಯ ಮುನಿಯು ಇಂತೆಂದನು :—

೯. ವಿದ್ಯುದ್ರೂಪ ರಾಕ್ಷಸನು ಈ ರೀತಿಯಾಗಿ ನಿರ್ಭಯವಾಗಿ ಹೇಳುತ್ತಿದ್ದ ಕಂಕನನ್ನು ರಕ್ತಸುರಿದು ಅಸಹ್ಯಾಕಾರದಿಂದ ಪ್ರಜ್ಞೆತಪ್ಪಿ ಅತ್ತಿತ್ತ ಹೊರಳಾಡಿ ಒದ್ದಾಡುತ್ತ ಬೀಳುವ ಹಾಗೆ ಕತ್ತಿಯಿಂದ ಕತ್ತರಿಸಿಹಾಕಿದನು.

೧೦. ಸಹೋದರನಾದ ಕಂಕನು ಹತನಾದುದನ್ನು ಕೇಳಿ ಉಕ್ಕಿಬಂದ ಕೋಪವುಳ್ಳ ಕಂಧರನೆಂಬ ಪಕ್ಷಿರಾಜನು ಕೂಡಲೆ ಕಂಕವಧೆಗೆ ಪ್ರತೀಕಾರವಾಗಿ ವಿದ್ಯುದ್ರೂಪನನ್ನು ವಧಿಸಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಿದನು.

೧೧. ಕಂಕನು ಹತನಾಗಿ ಬಿದ್ದಿರುವಂತಹ ಗಿರಿಶಿಖರಕ್ಕೆ ಕಂಧರ ಪಕ್ಷಿಯು ಹೋಗಿ ಅಲ್ಲಿ ತುಂಡುತುಂಡಾಗಿ ಬಿದ್ದಿರುವ ತನ್ನ ಜ್ಯೇಷ್ಠ ಸಹೋದರನಾದ ಕಂಕನ ಸಂಸ್ಕಾರವನ್ನು ಮಾಡಿದನು.

ಕೋಪಾಮರ್ಷವಿವೃತ್ತಾಕ್ಷೋ ನಾಗೇನ್ದ್ರ ಇವ ನಿಶ್ವಸನ್ ।
ಜಗಾಮಾಥ ಸ ಯತ್ರಾಸ್ತೇ ಭ್ರಾತೃಹಾ ತಸ್ಯ ರಾಕ್ಷಸಃ ॥೧೨॥

ಪಕ್ಷವಾತೇನ ಮಹತಾ ಚಾಲಯನ್ ಭೂಧರಾನ್ ವರಾನ್ ।
ವೇಗಾತ್ಪಯೋದಜಾಲಾನಿ ವಿಕ್ಷಿಪನ್ ಕ್ಷತಜೇಕ್ಷಣಃ ॥೧೩॥

ಕ್ಷಣಾತ್ಕ್ಷಯಿತಶತ್ರುಃ ಸ ಪಕ್ಷಾಭ್ಯಾಂ ಕ್ರಾನ್ತಭೂಧರಃ ।
ಪಾನಾಸಕ್ತಮತಿಂ ತತ್ರ ತಂ ದದರ್ಶ ನಿಶಾಚರಮ್ ॥೧೪॥

ಆತಾಮ್ರವಕ್ತ್ರನಯನಂ ಹೇಮಪರ್ಯಙ್ಕಮಾಶ್ರಿತಮ್ ।
ಸ್ರಗ್ದಾಮಾಪೂರಿತಶಿಖಂ ಹರಿಚನ್ದನಭೂಷಿತಮ್ ॥೧೫॥

---

೧೨. ತರುವಾಯ ಸಹನಾತೀತವಾದ ಕೋಪದಿಂದ ಗುಂಡಗೆ ಸುತ್ತುವ ಕಣ್ಣುಳ್ಳವನೂ, ಸಿಟ್ಟಗೆದ್ದ ಸರ್ಪರಾಜನಂತೆ ಬುಸುಗುಟ್ಟುವವನೂ ಆದ ಕಂಧರನು ತನ್ನ ಭ್ರಾತೃವನ್ನು ಕೊಂದ ರಾಕ್ಷಸನು ಇದ್ದ ಸ್ಥಳಕ್ಕೆ ಧಾವಿಸಿದನು.

೧೩. ರೆಕ್ಕೆಗಳಿಂದ ಹುಟ್ಟಿದ ಭಾರಿಯಾದ ಗಾಳಿಯಿಂದ ದೊಡ್ಡ ದೊಡ್ಡ ಬೆಟ್ಟಗಳನ್ನು ಅಲ್ಲಾಡಿಸುತ್ತ ತನ್ನ ವೇಗದಿಂದ ಅಡ್ಡಲಾಗಿದ್ದ ಮೋಡಗಳನ್ನು ದೂರ ತಳ್ಳುತ್ತ ರಕ್ತದಂತೆ ಕೆಂಪು ಕಣ್ಣುಗಳಿಂದ ಕೂಡಿದ ಕಂಧರನು ಮುಂದೆ ಹೋದನು.

೧೪. ತನ್ನ ಶಕ್ತಿ-ಸಾಮರ್ಥ್ಯಗಳಿಂದ ಶತ್ರುಗಳನ್ನು ಸದೆಬಡೆದ ಆ ಕಂಧರನು ರೆಕ್ಕೆಗಳ ಹೊಡೆತದಿಂದ ಮುಂದೆ ಹೋಗುತ್ತ ಅನೇಕ ಬೆಟ್ಟಗಳನ್ನು ಲಂಘಿಸಿ ಮೊದಲಿನಂತೆ ಮದ್ಯಪಾನದಲ್ಲಿ ಆಸಕ್ತಿಹೊಂದಿದ ಬುದ್ಧಿಯುಳ್ಳ ಆ ವಿದ್ಯುದ್ರೂಪರಕ್ಕಸನನ್ನು ನೋಡಿದನು.

೧೫. ಆಗ ರಾಕ್ಷಸನು ತುಂಬ ಕೆಂಪೇರಿದ ಮುಖ-ಕಣ್ಣುಗಳುಳ್ಳವನೂ, ಸುವರ್ಣಮಯ ಮಂಚವನ್ನು ಏರಿ ಕುಳಿತವನೂ, ಪುಷ್ಪಮಾಲೆಗಳಿಂದ ತುಂಬಿದ ಶಿಖೆಯುಳ್ಳವನೂ ಮತ್ತು ಹರಿಚಂದನ ಗಂಧಲೇಪನದಿಂದ ಸುಂದರನೂ ಆಗಿ ಕಂಗೊಳಿಸುತ್ತಿದ್ದನು.

ಕೇತಕೀಪತ್ರಗರ್ಭಾಭೈರ್ದನ್ತೈರ್ಘೋರತರಾನನಮ್ ॥೧೬॥

ವಾಮೋರುಮಾಶ್ರಿತಾಂ ಚಾಸ್ಯ ದದರ್ಶಾಯತಲೋಚನಾಮ್ ।
ಪತ್ನೀಂ ಮದನಿಕಾಂ ನಾಮ ಪುಂಸ್ಕೋಕಿಲಕಲಸ್ವನಾಮ್ ॥೧೭॥

ತತೋ ರೋಷಪರೀತಾತ್ಮಾ ಕನ್ಧರಃ ಕನ್ದರಸ್ಥಿತಮ್ ।
ತಮುವಾಚ ಸುದುಷ್ಟಾತ್ಮನ್ನೇಹಿ ಯುಧ್ಯಸ್ವ ವೈ ಮಯಾ ॥೧೮॥

ಯಸ್ಮಾಜ್ಜ್ಯೇಷ್ಠೋ ಮಮ ಭ್ರಾತಾ ವಿಶ್ರಬ್ಧೋ ಘಾತಿತಸ್ತ್ವಯಾ ।
ತಸ್ಮಾತ್ತ್ವಾಂ ಮದಸಂಸಕ್ತಂ ನಯಿಷ್ಯೇ ಯಮಸಾದನಮ್ ॥೧೯॥

ವಿಶ್ವಸ್ತಘಾತಿನಾಂ ಲೋಕಾ ಯೇ ಚ ಸ್ತ್ರೀಬಾಲಘಾತಿನಾಮ್ ।
ಯಾಸ್ಯಸೇ ನಿರಯಾನ್ ಸರ್ವಾಂಸ್ತಾಂಸ್ತ್ವಮದ್ಯ ಮಯಾ ಹತಃ ॥೨೦॥

---

೧೬. ಮತ್ತು ತಾಳೆಹೂಗಳ ದಳದ ಗರ್ಭದಂತೆ ಹೊಳೆಯುವ ಕರಾಳವಾದ ಹಲ್ಲುಗಳಿಂದ ಭಯಂಕರವಾದ ಮುಖವುಳ್ಳವನಾಗಿ ಕಾಣುತ್ತಿದ್ದನು.

೧೭. ಅವನ ಎಡತೊಡೆಯ ಮೇಲೆ ವಿಶಾಲವಾದ ಕಣ್ಣು ಮತ್ತು ಕೋಗಿಲೆಯಂತೆ ಮಧುರವಾದ ಕಂಠನಾದಗಳಿಂದ ಕೂಡಿದ ಮದನಿಕೆ ಎಂಬ ಪ್ರಿಯೆಯು ಕುಳಿತುಕೊಂಡಿರುವುದನ್ನು ಕಂಡನು.

೧೮. ರಾಕ್ಷಸನನ್ನು ಕಂಡೊಡನೆ ಕೋಪಾವೇಶದಿಂದ ಕೂಡಿದ ಮಾನಸವುಳ್ಳ ಕಂಧರನು ಗವಿಯಲ್ಲಿ ಕುಳಿತಿದ್ದ ರಾಕ್ಷಸನನ್ನು ನೋಡಿ ಹೀಗೆಂದನು. ಎಲೆ ನೀಚನೆ! ಬಾ, ನನ್ನ ಸಂಗಡ ಯುದ್ಧಮಾಡು.

೧೯. ನೀನು ಇಲ್ಲಿಗೆ ನೆಮ್ಮದಿಯಿಂದ ಬಂದ ನನ್ನ ಜ್ಯೇಷ್ಠಭ್ರಾತೃವಾದ ಕಂಕನನ್ನು ಕೊಂದ ಅಪರಾಧಿಯಾಗಿದ್ದೀಯೆ. ಆದುದರಿಂದ ಮದ್ಯಪಾನದ ರುಚಿಯಿಂದ ಮೆರೆಯುವ ನಿನ್ನನ್ನು ಈಗಲೆ ಮೃತ್ಯುಲೋಕಕ್ಕೆ ಕಳುಹಿಸುವೆನು.

೨೦. ನಂಬಿಸಿ ಕೊಲ್ಲುವುದು, ಅಬಲೆ ಅಥವಾ ಬಾಲಕರನ್ನು ವಧಿಸುವುದು ಮುಂತಾದ ಪಾಪವನ್ನು ಗಳಿಸುವವರಿಗೆ ಯಾತನೆಯನ್ನು ಕೊಡುವ ಯಾವ ಯಾವ ನರಕಲೋಕಗಳಿವೆಯೊ ಆ ಎಲ್ಲ ನರಕಗಳಲ್ಲಿಯೂ ಈಗಲೆ ನನ್ನಿಂದ ವಧಿಸಲ್ಪಡುವ ನೀನು ಬೀಳುತ್ತೀಯೆ.

ಮಾರ್ಕಣ್ಡೇಯ ಉವಾಚ :—

ಇತ್ಯೇವಂ ಪತಗೇನ್ದ್ರೇಣ ಪ್ರೋಕ್ತಂ ಪ್ರೀಸನ್ನಿಧೌ ತದಾ ।
ರಕ್ಷಃ ಕ್ರೋಧಸಮಾವಿಷ್ಟಂ ಪ್ರತ್ಯಭಾಷತ ಪಕ್ಷಿಣಮ್ ॥೨೧॥

ಯದಿ ತೇ ನಿಹತೋ ಭ್ರಾತಾ ಪೌರುಷಂ ತದ್ಧಿ ದರ್ಶಿತಮ್ ।
ತ್ವಾಮಪ್ಯದ್ಯ ಹನಿಷ್ಯೇಽಹಂ ಖಡ್ಗೇನಾನೇನ ಖೇಚರ ॥೨೨॥

ತಿಷ್ಠ ಕ್ಷಣಂ ನಾತ್ರ ಜೀವನ್ ಪತಗಾಧಮ ಯಾಸ್ಯಸಿ ।
ಇತ್ಯುಕ್ತ್ವಾಞ್ಜನಪುಞ್ಜಾಭಂ ವಿಮಲಂ ಖಡ್ಗಮಾದದೇ ॥೨೩॥

ತತಃ ಪತಗರಾಜಸ್ಯ ಯಕ್ಷಾಧಿಪಭಟಸ್ಯ ಚ ।
ಬಭೂವ ಯುದ್ಧಮತುಲಂ ಯಥಾ ಗರುಡಶಕ್ರಯೋಃ ॥೨೪॥

ಮಾರ್ಕಂಡೇಯಮುನಿಯು ಹೀಗೆಂದನು :—

೨೧. ಪ್ರಿಯೆಯ ಸಮೀಪದಲ್ಲಿ ವಿಲಾಸದಿಂದ ಕುಳಿತ ವಿದ್ಯುದ್ರೂಪ ರಾಕ್ಷಸನು ಕಂಧರನಿಂದ ಹೇಳಲ್ಪಟ್ಟ ಮಾತುಗಳನ್ನು ಕೇಳಿ ಕೋಪಾವೇಶವುಳ್ಳವನಾಗಿ ಕಂಧರನನ್ನು ಕುರಿತು ಈ ರೀತಿಯಾಗಿ ಪ್ರತ್ಯುತ್ತರವಿತ್ತನು.

೨೨. ನಿನ್ನ ಜ್ಯೇಷ್ಠಭ್ರಾತೃವನ್ನು ನಾನು ಕೊಂದಿದ್ದರೆ ಆ ನೆಪದಿಂದ ನನ್ನ ಪೌರುಷವನ್ನು ತೋರಿಸಿದಂತಾಯಿತು. ಅದೇನು ತಪ್ಪು? ಕಂಧರಪಕ್ಷಿಯೇ ! ಇಗೊ, ಈ ಖಡ್ಗದಿಂದ ಈಗ ನಿನ್ನನ್ನೂ ವಧಿಸುವೆನು.

೨೩. ಎಲೊ ! ನೀಚ ಕಂಧರನೆ ! ಸ್ವಲ್ಪಹೊತ್ತು ಮುಂದೆ ನಿಲ್ಲು, ಜೀವಂತನಾಗಿ ಹಿಂದೆ ಹೋಗಲಾರೆ, ಎಂದು ಹೇಳುತ್ತ ಕಾಡಿಗೆ ರಾಶಿಯಂತೆ ಕಪ್ಪಾಗಿ ಹೊಳೆಯುವ ನಿರ್ಮಲವಾದ ಕತ್ತಿಯನ್ನು ಹಿಡಿದುಕೊಂಡನು.

೨೪. ತರುವಾಯ ಪಕ್ಷಿರಾಜನಾದ ಕಂಧರನಿಗೂ ಕುಬೇರನ ಸೇವಕನಾದ ವೀರರಾಕ್ಷಸನಿಗೂ ಪೂರ್ವಕಾಲದಲ್ಲಿ ಗರುಡ-ದೇವೇಂದ್ರರಿಗೆ ಆದಂತೆ ಘೋರವಾದ ಸಂಗ್ರಾಮವು ನಡೆಯಿತು.

ತತಃ ಸ ರಾಕ್ಷಸಃ ಕ್ರೋಧಾತ್ ಖಡ್ಗಮಾವಿಧ್ಯ ವೇಗವತ್ ।
ಚಿಕ್ಷೇಪ ಪತಗೇನ್ದ್ರಾಯ ನಿರ್ವಾಣಾಙ್ಗಾರವರ್ಚಸಮ್ ॥೨೫॥

ಪತಗೇನ್ದ್ರಶ್ಚ ತಂ ಖಡ್ಗಂ ಕಿಞ್ಚಿದುತ್ಪ್ಲುತ್ಯ ಭೂತಲಾತ್ ।
ವಕ್ತ್ರೇಣ ಜಗ್ರಾಹ ತದಾ ಗರುಡಃ ಪನ್ನಗಂ ಯಥಾ ॥೨೬॥

ವಕ್ತ್ರಪಾದತಲೈರ್ಭಙ್ಕ್ತ್ವಾ ಚಕ್ರೇ ಕ್ಷೋಭಮಥಾಣ್ಡಜಃ ।
ತಸ್ಮಿನ್ ಭಗ್ನೇ ತತಃ ಖಡ್ಗೇ ಬಾಹುಯುದ್ಧಮವರ್ತತ ॥೨೭॥

ತತಃ ಪತಗರಾಜೇನ ವಕ್ಷಸ್ಯಾಕ್ರಮ್ಯ ರಾಕ್ಷಸಃ ।
ಹಸ್ತಪಾದಕರೈರಾಶು ಶಿರಸಾ ಚ ವಿಯೋಜಿತಃ ॥೨೮॥

ತಸ್ಮಿನ್ ವಿನಿಹತೇ ಸಾ ಸ್ತ್ರೀ ಖಗಂ ಶರಣಮಭ್ಯಗಾತ್ ।
ಕಿಞ್ಚಿತ್ಸಞ್ಜಾತಸನ್ತ್ರಾಸಾ ಪ್ರಾಹ ಭಾರ್ಯಾ ಭವಾಮಿ ತೇ ॥೨೯॥

---

೨೫. ಆಗ ರಾಕ್ಷಸನು ತನ್ನ ಕತ್ತಿಯನ್ನು ವೇಗವಾಗಿ ಬೀಸಿ ಬೆಂಕಿಯಾರಿದ ಕಪ್ಪು ಇಜ್ಜಲಿನಂತೆ ಹೊಳೆಯುವ ಆ ಕತ್ತಿಯನ್ನು ಪಕ್ಷೀಂದ್ರನಾದ ಕಂಧರನ ಮೇಲೆ ಎಸೆದನು.

೨೬. ಆ ಸಮಯದಲ್ಲಿ ಪಕ್ಷಿರಾಜನಾದ ಕಂಧರನು ನೆಲದಿಂದ ಸ್ವಲ್ಪ ಮೇಲಕ್ಕೆ ನೆಗೆದು ಗರುಡನು ಹಾವನ್ನು ಕಚ್ಚಿಕೊಳ್ಳುವಂತೆ ಆ ಖಡ್ಗವನ್ನು ಮುಖದಿಂದ ಹಿಡಿದುಕೊಂಡನು.

೨೭. ಆಮೇಲೆ ಮುಖ ಮತ್ತು ಪಾದಾಗ್ರ ಇವುಗಳಿಂದ ಆ ಖಡ್ಗವನ್ನು ಚೂರುಮಾಡಿ ಮಹಾಕ್ಷೋಭವನ್ನುಂಟುಮಾಡಿದನು. ಹೀಗೆ ರಾಕ್ಷಸನ ಖಡ್ಗವು ಭಂಗಹೊಂದಿದ ಬಳಿಕ ಈರ್ವರಿಗೂ ಬಾಹುಯುದ್ಧವು ಜರುಗಿತು.

೨೮. ಅನಂತರ ಪಕ್ಷಿರಾಜನಾದ ಕಂಧರನು ಆ ರಾಕ್ಷಸನ ಎದೆಯನ್ನಾಕ್ರಮಿಸಿ ಬಗೆಯುತ್ತ ಕ್ರಮವಾಗಿ ಆ ರಾಕ್ಷಸನ ಕೈ, ಕಾಲುಗಳನ್ನೂ ಮತ್ತು ಶಿರವನ್ನೂ ಕತ್ತರಿಸಿದನು.

೨೯. ಹೀಗೆ ಪತಿಯಾದ ರಾಕ್ಷಸನು ಹತನಾಗಿ ಬೀಳಲು ಆತನ ಪ್ರಿಯೆಯಾದ ಮದನಿಕೆಯು ಸ್ವಲ್ಪ ಭಯಹುಟ್ಟಿದವಳಾಗಿ ಕಂಧರನನ್ನು ಶರಣುಹೊಂದಿ " ನಾನು ನಿನಗೆ ಪತ್ನಿಯಾಗಿರುವೆನು " ಎಂದು ಕೇಳಿಕೊಂಡಳು.

ತಾಮಾದಾಯ ಖಗಶ್ರೇಷ್ಠಃ ಸ್ವಕಂ ಗೃಹಮಗಾತ್ಪುನಃ ।
ಗತ್ವಾ ಸ ನಿಷ್ಕೃತಿಂ ಭ್ರಾತುರ್ವಿದ್ಯುದ್ರೂಪನಿಪಾತನಾತ್ ॥೩೦॥

ಕನ್ಧರಸ್ಯ ಚ ಸಾ ವೇಶ್ಮ ಪ್ರಾಪ್ಯೇಚ್ಛಾರೂಪಧಾರಿಣೀ ।
ಮೇನಕಾತನಯಾ ಸುಭ್ರೂಃ ಸೌಪರ್ಣಂ ರೂಪಮಾದದೇ ॥೩೧॥

ತಸ್ಯಾಂ ಸ ಜನಯಾಮಾಸ ತಾರ್ಕ್ಷೀಂ ನಾಮ ಸುತಾಂ ತದಾ ।
ಮುನಿಶಾಪಾಗ್ನಿವಿಪ್ಲುಷ್ಟವಪುಮಪ್ಸರಸಾಂ ವರಾಮ್ ॥೩೨॥

ತಸ್ಯಾ ನಾಮ ತದಾ ಚಕ್ರೇ ತಾರ್ಕ್ಷೀಮಿತಿ ವಿಹಙ್ಗಮಃ ॥೩೩॥

ಮನ್ದಪಾಲಸುತಾಶ್ಚಾಸಂಶ್ಚತ್ವಾರೋಽಮಿತಬುದ್ಧಯಃ ।
ಜರಿತಾರಿಪ್ರಭೃತಯೋ ದ್ರೋಣಾನ್ತಾ ದ್ವಿಜಸತ್ತಮಾಃ ॥೩೪॥

---

೩೦. ಆಗ ವಿಹಗರಾಜನಾದ ಕಂಧರನು ವಿದ್ಯುದ್ರೂಪನನ್ನು ವಧಿಸಿ ಭ್ರಾತೃವನ್ನು ಕೊಂದ ಅಪರಾಧಕ್ಕೆ ಪ್ರತೀಕಾರವನ್ನು ಮಾಡಿ ಮತ್ತೆ ಮದನಿಕೆಯನ್ನು ಕರೆದುಕೊಂಡು ತನ್ನ ಮನೆಗೆ ಹಿಂದಿರುಗಿಹೋದನು.

೩೧. ಮೇನಕೆಯ ಮಗಳಾದ ಮದನಿಕೆಯು ಕಂಧರನ ಮನೆಗೆ ಹೋಗಿ ಸ್ವೇಚ್ಛಾರೂಪವನ್ನು ಧರಿಸುವ ತನ್ನ ಶಕ್ತಿಯಿಂದ ಪಕ್ಷಿರೂಪವನ್ನು ಧರಿಸಿ ಕಂಧರನ ಸಂಗಡ ವಾಸಮಾಡಿದಳು.

೩೨. ದೂರ್ವಾಸಮುನಿಯ ಶಾಪಾಗ್ನಿಜ್ವಾಲೆಯಿಂದ ಬೆಂದುಹೋದ ವಪುವೆಂಬ ಅಪ್ಸರೋತ್ತಮೆಯು ತಾರ್ಕ್ಷೀ ಎಂಬ ನಾಮಾಂಕಿತಳಾಗಿ ಕಂಧರನಿಂದ ಮದನಿಕೆಗೆ ಮಗಳಾಗಿ ಜನಿಸಿದಳು.

೩೩. ಮದನಿಕೆಯಲ್ಲಿ ಪ್ರಸವಿಸಿದ ಕನ್ಯೆಗೆ ಜನಕನಾದ ಕಂಧರನು ತಾರ್ಕ್ಷಿ ಎಂದು ಹೆಸರಿಟ್ಟನು.

೩೪. ಜರಿತಾರಿ ಎಂಬ ಜ್ಯೇಷ್ಠ ಪುತ್ರನೂ ದ್ರೋಣ ಎಂಬ ಕನಿಷ್ಠ ಪುತ್ರನೂ ಸೇರಿ ನಾಲ್ಕು ಮಂದಿ ಅಪಾರವಾದ ಪ್ರಜ್ಞೆಯಿಂದ ಕೂಡಿದ ದ್ವಿಜೋತ್ತಮರು ಮಂದಪಾಲಮುನಿಯ ಪುತ್ರರಾಗಿದ್ದರು.

ತೇಷಾಂ ಜಘನ್ಯೋ ಧರ್ಮಾತ್ಮಾ ವೇದವೇದಾಙ್ಗಪಾರಗಃ ।
ಉಪಯೇಮೇ ಸ ತಾಂ ತಾರ್ಕ್ಷೀಂ ಕನ್ಧರಾನುಮತೇ ಶುಭಾಮ್॥೩೫॥

ತಸ್ಯ ಚಿತ್ತ್ವಥ ಕಾಲಸ್ಯ ತಾರ್ಕ್ಷೀ ಗರ್ಭಮವಾಪ ಹ ।
ಸಪ್ತಪಕ್ಷಾಹಿತೇ ಗರ್ಭೇ ಕುರುಕ್ಷೇತ್ರಂ ಜಗಾಮ ಸಾ ॥೩೬॥

ಕುರುಪಾಣ್ಡವಯೋರ್ಯುದ್ಧೇ ವರ್ತಮಾನೇ ಸುದಾರುಣೇ ।
ಭಾವಿತ್ವಾಚ್ಚೈವ ಕಾರ್ಯಸ್ಯ ರಥಮಧ್ಯೇ ವಿವೇಶ ಸಾ ॥೩೭॥

ತತ್ರಾಪಶ್ಯತ ಯುದ್ಧಂ ಸಾ ಸರ್ವೇಷಾಂ ಪೃಥಿವೀಕ್ಷಿತಾಮ್ ।
ಶರಶಕ್ತ್ಯೃಷ್ಟಿಭಿರ್ಭೀಮಂ ಯಥಾ ದೇವಾಸುರಂ ರಣಮ್ ॥೩೮॥

---

೩೫. ವೇದ, ವೇದಾಂಗಗಳಲ್ಲಿ ಪಾರಂಗತನೂ ಧರ್ಮಾತ್ಮನೂ ಆದ, ಕನಿಷ್ಠನಾದ ದ್ರೋಣಮುನಿಯು ಕಂಧರನ ಇಷ್ಟದಂತೆ ಮಂಗಳಕರಳಾದ ತಾರ್ಕ್ಷಿ ಎಂಬ ಕನ್ಯೆಯನ್ನು ಮದುವೆಯಾದನು.

೩೬. ತರುವಾಯ ಕೆಲವು ಕಾಲ ಕಳೆದು ಆ ತಾರ್ಕ್ಷಿಯು ಗರ್ಭವನ್ನು ಧರಿಸಿದಳು. ಆಕೆಯ ಜಠರದಲ್ಲಿ ಗರ್ಭವು ಮೂರುವರೆ ತಿಂಗಳು ಬೆಳೆಯಲಾಗಿ ತಾರ್ಕ್ಷಿಯು ಕುರುಕ್ಷೇತ್ರಕ್ಕೆ ಹೋದಳು.

೩೭. ಆ ಸಮಯದಲ್ಲಿ ಕೌರವ, ಪಾಂಡವರಿಗೆ ಭಯಂಕರವಾದ ಸಂಗ್ರಾಮವು ನಡೆಯುತ್ತಿರಲು ಆ ತಾರ್ಕ್ಷಿಯು ವಿಧಿಪ್ರೇರಿತವಾದ ಭಾವಿಕಾರ್ಯವು ತಪ್ಪದೆ ನಡೆಯಬೇಕಾಗಿರುವುದರಿಂದ ಒಂದು ರಥದ ಮಧ್ಯವನ್ನು ಹೊಕ್ಕು ಕುಳಿತುಕೊಂಡಳು.

೩೮. ರಥದ ಒಳಹೊಕ್ಕಿರುವ ತಾರ್ಕ್ಷಿಯು ದೇವ, ದಾನವರ ಯುದ್ಧದಂತೆ ಬಲು ಭಯಂಕರವಾಗಿರುವ ಶರ, ಶಕ್ತಿ, ಋಷ್ಟಿ ಮುಂತಾದ ವಿವಿಧ ಶಸ್ತ್ರಗಳನ್ನು ಪ್ರಯೋಗಿಸಿ ಎಲ್ಲ ವೀರರಾಜರು ಸ್ಪರ್ಧೆಯಿಂದ ಮಾಡುತ್ತಿದ್ದ ಯುದ್ಧವನ್ನು ನೋಡಿದಳು.

ತತ್ರಾಪಶ್ಯತ್ತದಾ ಯುದ್ಧಂ ಭಗದತ್ತಕಿರೀಟಿನೋಃ ।
ನಿರನ್ತರಂ ಶರೈರಾಸೀದಾಕಾಶಂ ಶಲಭೈರಿವ ॥೩೯॥

ಪಾರ್ಥಕೋದಣ್ಡನಿರ್ಮುಕ್ತಮಾಸನ್ನಮತಿವೇಗವತ್ ।
ತಸ್ಯಾ ಭಲ್ಲಮಸಿಶ್ಯಾಮಂ ತ್ವಚಂ ಚಿಚ್ಛೇದ್ಯಜಾಠರೀಮ್ ॥೪೦॥

ಭಿನ್ನೇ ಕೋಷ್ಠೇ ಶಶಾಙ್ಕಾಭಂ ಭೂಮಾವಣ್ಡಚತುಷ್ಟಯಮ್ ।
ಆಯುಷಃ ಸಾವಶೇಷತ್ವಾತ್ತೂಲರಾಶಾವಿವಾಪತತ್ ॥೪೧॥

ತತ್ಪಾತಸಮಕಾಲಂ ಚ ಸುಪ್ರತೀಕಾದ್ಗಜೋತ್ತಮಾತ್ ।
ಪಪಾತ ಮಹತೀ ಘಣ್ಟಾ ಬಾಣಸಂಛಿನ್ನಬನ್ಧನಾ ॥೪೨॥

ಸಮಂ ಸಮನ್ತಾತ್ಪ್ರಾಪ್ತಾ ತು ನಿರ್ಭಿನ್ನಧರಣೀತಲಾ ।
ಛಾದಯನ್ತೀ ಖಮಣ್ಡಾನಿ ಸ್ಥಿತಾನಿ ಪಿಶಿತೋಪರಿ ॥೪೩॥

---

೩೯. ಆಗ ಶಲಭಗಳಿಂದ ಹೇಗೋ ಹಾಗೆ ಬಾಣಗಳಿಂದ ಆಕಾಶವನ್ನು ಮುಚ್ಚಿಹಾಕುವಂತಹ ವೀರರಾದ ಭಗದತ್ತ-ಅರ್ಜುನರಿಗೆ ನಡೆದ ಭೀಕರ ಯುದ್ಧವನ್ನು ನೋಡಿದಳು.

೪೦. ಅರ್ಜುನನ ಗಾಂಡೀವ ಬಿಲ್ಲಿನಿಂದ ಪ್ರಯೋಗಿಸಲ್ಪಟ್ಟ ಬಲು ವೇಗದಿಂದ ಸಮೀಪಕ್ಕೆ ಬಂದ ಮತ್ತು ಕೃಷ್ಣಸರ್ಪದಂತೆ ಕಪ್ಪಾದ ಒಂದು ಭಲ್ಲಾಯುಧವು ತಾರ್ಕ್ಷಿಗೆ ತಗುಲಿ ಅವಳ ಹೊಟ್ಟೆಯ ಚರ್ಮವನ್ನು ಕತ್ತರಿಸಿತು.

೪೧. ತಾರ್ಕ್ಷಿಯ ಹೊಟ್ಟೆಯು ಸೀಳಿಹೋಗಲು ಹೊಟ್ಟೆಯೊಳಗಿದ್ದ, ಚಂದ್ರಬಿಂಬದಂತೆ ಬೆಳ್ಳಗೆ ಕಾಣುವ ನಾಲ್ಕು ಮೊಟ್ಟೆಗಳು ಆಯುಷ್ಯದ ಶೇಷ ವಿರುವುದರಿಂದ ಹತ್ತಿಯರಾಶಿಯ ಮೇಲೆ ಬಿದ್ದಂತೆ ಏನೂ ಅಪಾಯವಿಲ್ಲದೆ ಕೆಳಗೆ ಬಿದ್ದುವು.

೪೨. ಮೊಟ್ಟೆಗಳು ನೆಲಕ್ಕೆ ಬೀಳುವ ಹೊತ್ತಿಗೆ ಸರಿಯಾಗಿ ಸುಪ್ರತೀಕ ವೆಂಬ ಭಗದತ್ತನ ಶ್ರೇಷ್ಠವಾದ ಆನೆಯ ಮೇಲಿನಿಂದ ಬಾಣದ ಏಟಿನಿಂದ ಕತ್ತರಿಸಿಹೋದ ಕಟ್ಟುಳ್ಳ ದೊಡ್ಡದಾದ ಒಂದು ಘಂಟೆಯು ಕೆಳಗೆ ಬಿತ್ತು.

೪೩. ಆ ಘಂಟೆಯು ಮಾಂಸರಾಶಿಯ ಮೇಲೆ ಬಿದ್ದಿದ್ದ ಆ ಮೊಟ್ಟೆಗಳು ಇರುವ ಅವಕಾಶವನ್ನು ಮುಚ್ಚುವಂತೆ ಸುತ್ತಲೂ ಸಮವಾಗಿ ಬಿದ್ದು ನೆಲವನ್ನು ಭೇದಿಸುತ್ತ ಸ್ವಲ್ಪ ಒಳಗೆ ವ್ಯಾಪಿಸಿ ಹೂತುಕೊಂಡಿತು.

ಹತೇ ಚ ತಸ್ಮಿನ್ನೃಪತೌ ಭಗದತ್ತೇ ನರೇಶ್ವರೇ ।
ಬಹೂನ್ಯಹಾನ್ಯಭೂದ್ಯುದ್ಧಂ ಕುರುಪಾಣ್ಡವಸೈನ್ಯಯೋಃ ॥೪೪॥

ವೃತ್ತೇ ಯುದ್ಧೇ ಧರ್ಮಪುತ್ರೇ ಗತೇ ಶಾನ್ತನವಾನ್ತಿಕಮ್ ।
ಭೀಷ್ಮಸ್ಯ ಗದತೋಽಶೇಷಾನ್ ಶ್ರೋತುಂ ಧರ್ಮಾನ್ ಮಹಾತ್ಮನಃ ॥೪೫॥

ಘಣ್ಟಾಗತಾನಿ ತಿಷ್ಠನ್ತಿ ಯತ್ರಾಣ್ಡಾನಿ ದ್ವಿಜೋತ್ತಮ ।
ಆಜಗಾಮ ತಮುದ್ದೇಶಂ ಶಮೀಕೋ ನಾಮ ಸಂಯಮೀ ॥೪೬॥

ಸ ತತ್ರ ಶಬ್ದಮಶೃಣೋಚ್ಚೀಚೀ ಕೂಚೀತಿ ವಾಶತಾಮ್ ।
ಬಾಲ್ಯಾದಸ್ಫುಟವಾಕ್ಯಾನಾಂ ವಿಜ್ಞಾನೇಽಪಿ ಪರೇ ಸತಿ ॥೪೭॥

---

೪೪. ಮಹಾವೀರನಾದ ಭಗದತ್ತರಾಜನು ಹತನಾದ ಬಳಿಕ ಕೌರವ, ಪಾಂಡವ ಸೈನ್ಯಗಳಿಗೆ ಮತ್ತೂ ಎಷ್ಟೋ ಹೆಚ್ಚು ದಿವಸಗಳವರೆಗೆ ಯುದ್ಧವು ನಡೆಯಿತು.

೪೫. ಯುದ್ಧವು ಸಮಾಪ್ತಿಗೊಂಡು ಧರ್ಮಪುತ್ರನಾದ ಯುಧಿಷ್ಠಿರನು ಮಹಾತ್ಮರಾದ ಭೀಷ್ಮಾಚಾರ್ಯರಿಂದ ಅಶೇಷ ಧರ್ಮಗಳ ಉಪದೇಶವನ್ನು ಕೇಳಲು ಶಂತನುಪುತ್ರರಾದ ಭೀಷ್ಮಾಚಾರ್ಯರ ಬಳಿಗೆ ಹೋದನು.

೪೬. ದ್ವಿಜವರ್ಯನಾದ ಜೈಮಿನಿಯೆ! ಯಾವಸ್ಥಳದಲ್ಲಿ ನಾಲ್ಕು ಪಕ್ಷಿಯ ಮೊಟ್ಟೆಗಳು ಘಂಟೆಯೊಳಗೆ ಸೇರಿಕೊಂಡಿದ್ದುವೊ; ಆ ಸ್ಥಳಕ್ಕೆ ಆಕಸ್ಮಿಕವಾಗಿ ಶಮೀಕ ಎಂಬ ಒಬ್ಬ ತಪಸ್ವಿಯು ಬಂದನು.

೪೭. ಸರ್ವೋತ್ತಮವಾದ ಜ್ಞಾನಸಂಪತ್ತಿಯಿದ್ದರೂ ಬಾಲ್ಯಾವಸ್ಥೆಯ ನಿಮಿತ್ತದಿಂದ ಸ್ಫುಟವಾಗಿ ಮಾತನಾಡುವ ಶಕ್ತಿಯಿಲ್ಲದೆ ಕೂಗುತ್ತಿದ್ದ ಪಕ್ಷಿಶಿಶುಗಳ ಚೀಚೀಕೂಚೀ ಶಬ್ದವನ್ನು ಅಲ್ಲಿಗೆ ಬಂದ ಶಮೀಕಮುನಿಯು ಕೇಳಿದನು.

ಅಥರ್ಷಿಃ ಶಿಷ್ಯಸಹಿತೋ ಘಂಟಾಮುತ್ಪಾಟ್ಯ ವಿಸ್ಮಿತಃ ।
ಅಮಾತೃಪಿತೃಪಕ್ಷಾಣಿ ಶಿಶುಕಾನಿ ದದರ್ಶ ಹ ॥೪೮॥

ತಾನಿ ತತ್ರ ತಥಾ ಭೂಮೌ ಶಮೀಕೋ ಭಗವಾನ್ಮುನಿಃ ।
ದೃಷ್ಟ್ವಾ ಸ ವಿಸ್ಮಯಾವಿಷ್ಟಃ ಪ್ರೋವಾಚಾನುಗತಾನ್ ದ್ವಿಜಾನ್ ॥೪೯॥

ಸಮ್ಯಗುಕ್ತಂ ದ್ವಿಜಾಗ್ರ್ಯೇಣ ಶುಕ್ರೇಣೋಶನಸಾ ಸ್ವಯಮ್ ।
ಪಲಾಯನಪರಂ ದೃಷ್ಟ್ವಾ ದೈತ್ಯಸೈನ್ಯಂ ಸುರಾರ್ದಿತಮ್ ॥೫೦॥

ನ ಗನ್ತವ್ಯಂ ನಿವರ್ತಧ್ವಂ ಕಸ್ಮಾದ್ವ್ರಜತ ಕಾತರಾಃ ।
ಉತ್ಸೃಜ್ಯ ಶೌರ್ಯಯಶಸೀ ಕ್ವ ಗತಾ ನ ಮರಿಷ್ಯಥ ॥೫೧॥

---

೪೮. ಅನಂತರ ವಿಸ್ಮಯಗೊಂಡ ಶಮೀಕಮುನಿಯು ತನ್ನ ಶಿಷ್ಯಜನರ ಸಮೇತವಾಗಿ ಆ ಘಂಟೆಯನ್ನು ಕಿತ್ತು ಮೇಲಕ್ಕೆ ತೆಗೆದು, ಮಾತಾಪಿತೃಗಳಿಂದ ವಿಯೋಗಹೊಂದಿದ ಮತ್ತು ರೆಕ್ಕೆಗಳು ಹುಟ್ಟದಿರುವ, ಪಕ್ಷಿಶಿಶುಗಳನ್ನು ನೋಡಿದನು.

೪೯. ಹಾಗೆ ಆ ಸ್ಥಳದಲ್ಲಿ ನೆಲದಲ್ಲಿ ಬಿದ್ದಿದ್ದ ಪಕ್ಷಿಶಿಶುಗಳನ್ನು ನೋಡಿ ವಿಸ್ಮಯಾವೇಶಹೊಂದಿದ ಪೂಜ್ಯನಾದ ಶಮೀಕಮುನಿಯು ತನ್ನನ್ನು ಹಿಂಬಾಲಿಸಿ ಬಂದ ದ್ವಿಜರನ್ನು ಕುರಿತು ಇಂತೆಂದನು.

೫೦. ದೇವತೆಗಳಿಂದ ಪೀಡಿಸಲ್ಪಟ್ಟ ದಾನವಸೈನ್ಯವು ಭಯದಿಂದ ಓಡಿಹೋಗುತ್ತಿದ್ದುದನ್ನು ಕಂಡು ದ್ವಿಜೋತ್ತಮನೂ, ಸರ್ವಜ್ಞನೂ ಆದ ಶುಕ್ರಾಚಾರ್ಯನು ಸಾಕ್ಷಾತ್ತಾಗಿ ದಾನವರಿಗೆ ಮಾಡಿದ ಉಪದೇಶವಾಣಿಯು ನಿಜವಾದುದು.

೫೧. ಎಲೈ ದೈತ್ಯರೆ! ರಣರಂಗದಿಂದ ಓಡಿಹೋಗಬಾರದು. ಮತ್ತೆ ಎದುರಾಗಿ ಬನ್ನಿರಿ. ನಿಮ್ಮ ಶೌರ್ಯವನ್ನೂ ಮತ್ತು ಕೀರ್ತಿಯನ್ನೂ ಬಿಟ್ಟು, ಭಯಪಟ್ಟು ಏಕೆ ಹೋಗುವಿರಿ? ಮೃತ್ಯುಕಾಲ ಒದಗಿದ್ದರೆ ಎಲ್ಲಿ ಹೋದರೆ ನೀವು ಸಾಯದೇ ಇರುವಿರಿ?

ನಶ್ಯತೋ ಯುಧ್ಯತೋ ವಾಪಿ ತಾವದ್ಭವತಿ ಜೀವಿತಮ್ ।
ಯಾವದ್ಧಾತಾಸೃಜತ್ಪೂರ್ವಂ ನ ಯಾವನ್ಮನಸೇಪ್ಸಿತಮ್ ॥೫೨॥

ಏಕೇ ಮ್ರಿಯನ್ತೇ ಸ್ವಗೃಹೇ ಪಲಾಯನ್ತೋಽಪರೇ ಜನಾಃ ।
ಭುಞ್ಜನ್ತೋಽನ್ನಂ ತಥೈವಾಪಃ ಪಿಬನ್ತೋ ನಿಧನಂ ಗತಾಃ ॥೫೩॥

ವಿಲಾಸಿನಸ್ತಥೈವಾನ್ಯೇ ಕಾಮಯಾನಾ ನಿರಾಮಯಾಃ ।
ಅವಿಕ್ಷತಾಙ್ಗಾಃ ಶಸ್ತ್ರೈಶ್ಚ ಪ್ರೇತರಾಜವಶಂ ಗತಾಃ ॥೫೪॥

ಅನ್ಯೇ ತಪಸ್ಯಭಿರತಾ ನೀತಾಃ ಪ್ರೇತನೃಪಾನುಗೈಃ ।
ಯೋಗಾಭ್ಯಾಸೇ ರತಾಶ್ಚಾನ್ಯೇ ನೈವ ಪ್ರಾಪುರಮೃತ್ಯುತಾಮ್ ॥೫೫॥

---

೫೨. ರಣರಂಗದಿಂದ ಓಡಿದವನಿಗೂ, ಅಲ್ಲಿಯೆ ನಿಂತು ಯುದ್ಧಮಾಡಿದವನಿಗೂ ಬ್ರಹ್ಮನು ಹಿಂದೆಯೆ ಕೊಟ್ಟಿದ್ದ ಆಯುಷ್ಯವು ಪೂರ್ತಿಯಾಗುವವರೆಗೂ ಬದುಕು ಇದ್ದೇಇರುವುದು. ಯಾರಿಗೂ ತನ್ನ ಮನಬಂದಷ್ಟು ಜೀವಿಸಲು ಸಾಧ್ಯವಿಲ್ಲ.

೫೩. ಕೆಲವರು ಮನೆಯಲ್ಲಿ ಸುಖವಾಗಿರುವಾಗಲೆ ಮರಣಹೊಂದುವರು. ಮತ್ತೆಕೆಲವರು ಓಡಿಹೋಗುತ್ತ ಮೃತರಾಗುವರು. ಇನ್ನೂ ಕೆಲವರು ಅನ್ನವನ್ನು ಭುಂಜಿಸುತ್ತಿರುವಾಗಲೂ ನೀರನ್ನು ಕುಡಿಯುತ್ತಿರುವಾಗಲೂ ನಿಧನ ಹೊಂದಿರುವರು.

೫೪. ಮತ್ತೆಕೆಲವರು ವಿಲಾಸಿಗಳೂ, ವಿಧವಿಧ ಭೋಗವನ್ನು ಆಶಿಸುವವರೂ, ಅರೋಗ-ದೃಢಕಾಯರೂ ಮತ್ತು ಶಸ್ತ್ರದಿಂದ ಸ್ವಲ್ಪವೂ ಗಾಯವಾಗದ ದೇಹವುಳ್ಳವರೂ ಆಗಿದ್ದು ಇದ್ದಕ್ಕಿದ್ದಹಾಗೆ ಮೃತ್ಯುವಶರಾಗುವರು.

೫೫. ಹಲವುಮಂದಿ ತಪಶ್ಚರ್ಯೆಯಲ್ಲಿ ಆಸಕ್ತರಾಗಿರುವಾಗ ಪ್ರೇತರಾಜನಾದ ಯಮನ ಕಿಂಕರರಿಂದ ಒಯ್ಯಲ್ಪಟ್ಟಿರುವರು. ಮತ್ತೆ ಕೆಲವರು ಯೋಗಾಭ್ಯಾಸದಲ್ಲಿ ತತ್ಪರರಾಗಿದ್ದರೂ ಅಮರತ್ವವನ್ನು ಹೊಂದಲಾಗಲಿಲ್ಲ.

ಶಮ್ಬರಾಯ ಪುರಾ ಕ್ಷಿಪ್ತಂ ವಜ್ರಂ ಕುಲಿಶಪಾಣಿನಾ ।
ಹೃದಯೇಽಭಿಹತಸ್ತೇನ ತಥಾಪಿ ನ ಮೃತೋಽಸುರಃ ॥೫೬॥

ತೇನೈವ ಖಲು ವಜ್ರೇಣ ತೇನೈವೇನ್ದ್ರೇಣ ದಾನವಾಃ ।
ಪ್ರಾಪ್ತೇ ಕಾಲೇ ಹತಾ ದೈತ್ಯಾಸ್ತತ್ಕ್ಷಣಾನ್ನಿಧನಂ ಗತಾಃ ॥೫೭॥

ವಿದಿತ್ವೈವಂ ನ ಸನ್ತ್ರಾಸಃ ಕರ್ತವ್ಯೋ ವಿನಿವರ್ತತ ।
ತತೋ ನಿವೃತ್ತಾಸ್ತೇ ದೈತ್ಯಾಸ್ತ್ಯಕ್ತ್ವಾ ಮರಣಜಂ ಭಯಮ್ ॥೫೮॥

ಇತಿ ಶುಕ್ರವಚಃ ಸತ್ಯಂ ಕೃತಮೇಭಿಃ ಖಗೋತ್ತಮೈಃ ।
ಯೇ ಯುದ್ಧೇಽಪಿ ನ ಸಂಪ್ರಾಪ್ತಾಃ ಪಞ್ಚತ್ವಮತಿಮಾನುಷೇ ॥೫೯॥

---

೫೬. ವಜ್ರಾಯುಧಧಾರಿಯಾದ ದೇವೇಂದ್ರನು ವೈರಿಯಾದ ಶಂಬರಾಸುರನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು. ಹೃದಯದಲ್ಲಿ ಪ್ರಹರಿಸಲ್ಪಟ್ಟಿದ್ದರೂ ಆ ಶಂಬರಾಸುರನು ಅದರಿಂದ ಮೃತ್ಯುವನ್ನು ಹೊಂದಲಿಲ್ಲ.

೫೭. ಅದೇ ಇಂದ್ರನು ಅದೇ ವಜ್ರಾಯುಧವನ್ನು ಮೃತ್ಯುಕಾಲವು ಸನ್ನಿಹಿತವಾಗಿರುವಾಗ ಯಾವ ದೈತ್ಯರಮೇಲೆ ಪ್ರಯೋಗಿಸಿದನೊ ; ಆ ದೈತ್ಯರು ತಕ್ಷಣದಲ್ಲಿ ನಿಧನಹೊಂದಿದರು.

೫೮. ಇದೆಲ್ಲವನ್ನೂ ವಿಚಾರಮಾಡಿ ಭಯವನ್ನು ದೂರಮಾಡಿಕೊಳ್ಳಬೇಕು. ನೀವೆಲ್ಲರೂ ಯುದ್ಧಕ್ಕೆ ಬಂದು ನಿಲ್ಲಿರಿ. ಹೀಗೆಂದು ಶುಕ್ರಾಚಾರ್ಯರ ಉಪದೇಶವನ್ನು ಕೇಳಿ ದೈತ್ಯರು ಮರಣಭಯವನ್ನು ಬಿಟ್ಟು ಮತ್ತೆ ರಣಭೂಮಿಗೆ ಹಿಂತಿರುಗಿದರು.

೫೯. ಮಾನವಯುದ್ಧವನ್ನು ಮೀರಿರುವ ಘೋರವಾದ ಭಾರತಯುದ್ಧದಲ್ಲಿ ಮೃತ್ಯುವನ್ನು ಹೊಂದದಿರುವ ಈ ಶ್ರೇಷ್ಠ ಪಕ್ಷಿಗಳಿಂದ ಶುಕ್ರಾಚಾರ್ಯರು ದಾನವರಿಗಿತ್ತ ಉಪದೇಶವು ಸತ್ಯವೆಂದೆನಿಸಲ್ಪಟ್ಟಿತು.

ಕ್ವಾಣ್ಡಾನಾಂ ಪತನಂ ವಿಪ್ರಾಃ ಕ್ವ ಘಣ್ಟಾಪತನಂ ಸಮಮ್ ।
ಕ್ವ ಚ ಮಾಂಸವಸಾರಕ್ತೈರ್ಭೂಮೇರಾಸ್ತರಣಕ್ರಿಯಾ ॥೬೦॥

ತೇ ಕೇ ಯೇ ಸರ್ವಥಾ ವಿಪ್ರಾ ನೈತೇ ಸಾಮಾನ್ಯಪಕ್ಷಿಣಃ ।
ದೈವಾನುಕೂಲತಾ ಲೋಕೇ ಮಹಾಭಾಗ್ಯಪ್ರದರ್ಶಿನೀ ॥೬೧॥

ಏವಮುಕ್ತ್ವಾ ಸ ತಾನ್ವೀಕ್ಷ್ಯ ಪುನರ್ವಚನಮಬ್ರವೀತ್ ।
ನಿವರ್ತತಾಶ್ರಮಂ ಯಾತ ಗೃಹೀತ್ವಾ ಪಕ್ಷಿಬಾಲಕಾನ್ ॥೬೨॥

ಮಾರ್ಜಾರಾಖುಭಯಂ ಯತ್ರ ನೈಷಾಮಣ್ಡಜಜನ್ಮನಾಮ್ ।
ಶ್ಯೇನತೋ ನಕುಲಾದ್ವಾಪಿ ಸ್ಥಾಪ್ಯನ್ತಾಂ ತತ್ರ ಪಕ್ಷಿಣಃ ॥೬೩॥

---

೬೦. ಮೊಟ್ಟೆಗಳು ಬೀಳುವುದೇನು! ಅದೇ ಹೊತ್ತಿನಲ್ಲಿ ಘಂಟೆಯು ಬಿದ್ದು ಮೊಟ್ಟೆಗಳನ್ನು ಆವರಿಸಿ ರಕ್ಷಿಸುವುದೇನು! ಮತ್ತು ಮೊದಲೆ ನೆಲವು ವಸಾ-ಧಾತು-ರಕ್ತ-ಮಾಂಸಗಳಿಂದ ಮುಚ್ಚಿ ಮೃದುವಾಗಿರುವುದೇನು! ಇದೆಂತಹ ಆಶ್ಚರ್ಯ!

೬೧. ವಿಪ್ರರೇ! ಇಲ್ಲಿ ಇರುವ ಈ ಪಕ್ಷಿಗಳು ಖಂಡಿತವಾಗಿ ಸಾಮಾನ್ಯವಾದ ಪಕ್ಷಿಗಳೆಂದು ಹೇಳಲಾಗುವುದಿಲ್ಲ. ಲೋಕದಲ್ಲಿ ದೈವಾನುಕೂಲ್ಯ ಒದಗುವುದು ಮಹಾಭಾಗ್ಯವನ್ನು ಸೂಚಿಸುತ್ತದೆ.

೬೨. ಶಮೀಕಮುನಿಯು ಜೊತೆಯಲ್ಲಿದ್ದ ದ್ವಿಜರಿಗೆ ಹೀಗೆಂದು ಹೇಳಿ ಮತ್ತೆ ಅವರಿಗೆ ಇಂತೆಂದನು. ನೀವೆಲ್ಲರೂ ಹಿಂತಿರುಗಿ ಬನ್ನಿ. ಈ ಪಕ್ಷಿಶಿಶುಗಳನ್ನು ಎತ್ತಿಕೊಂಡು ಆಶ್ರಮಕ್ಕೆ ಹೋಗಿ.

೬೩. ಪಕ್ಷಿಜಾತಿಯಲ್ಲಿ ಜನಿಸಿದ ಇವುಗಳಿಗೆ ಯಾವ ಸ್ಥಳದಲ್ಲಿ ಇಲಿ, ಬೆಕ್ಕುಗಳಿಂದ ಭಯವುಂಟಾಗಲಾರದೊ; ಅಥವಾ ಎಲ್ಲಿ ಗಿಡಗ, ಮುಂಗಸಿಗಳಿಂದ ಭಯವಿಲ್ಲವೊ ಆ ಸ್ಥಳದಲ್ಲಿ ಇವುಗಳನ್ನು ಇರಿಸಿರಿ.

ದ್ವಿಜಾಃ ಕಿಂ ವಾತಿಯತ್ನೇನ ಮಾರ್ಯನ್ತೇ ಕರ್ಮಭಿಃ ಸ್ವಕೈಃ ।
ರಕ್ಷ್ಯನ್ತೇ ಚಾಖಿಲಾ ಜೀವಾ ಯಥೈತೇ ಪಕ್ಷಿಬಾಲಕಾಃ ॥೬೪॥

ತಥಾಪಿ ಯತ್ನಃ ಕರ್ತವ್ಯೋ ನರೈಃ ಸರ್ವೇಷು ಕರ್ಮಸು ।
ಕುರ್ವನ್ ಪುರುಷಕಾರಂ ತು ವಾಚ್ಯತಾಂ ಯಾತಿ ನೋ ಸತಾಮ್ ॥೬೫॥

ಇತಿ ಮುನಿವರಚೋದಿತಾಸ್ತತಸ್ತೇ
ಮುನಿತನಯಾಃ ಪರಿಗೃಹ್ಯ ಪಕ್ಷಿಣಸ್ತಾನ್ ।
ತರುವಿಟಪಸಮಾಶ್ರಿತಾಲಿಸಙ್ಘಂ
ಯಯುರಥ ತಾಪಸರಮ್ಯಮಾಶ್ರಮಂ ಸ್ವಮ್ ॥೬೬॥

ಸ ಚಾಪಿ ವನ್ಯಂ ಮನಸಾಭಿಕಾಮಿತಂ
ಪ್ರಗೃಹ್ಯ ಮೂಲಂ ಕುಸುಮಂ ಫಲಂ ಕುಶಾನ್ ।
ಚಕಾರ ಚಕ್ರಾಯುಧರುದ್ರವೇಧಸಾಂ
ಸುರೇನ್ದ್ರವೈವಸ್ವತಜಾತವೇದಸಾಮ್ ॥೬೭॥

---

೬೪. ದ್ವಿಜರೆ! ಪುರುಷಪ್ರಯತ್ನದಿಂದೇನಾದೀತು? ಈ ಪಕ್ಷಿಶಿಶುಗಳಂತೆ ಅಖಿಲ ಜೀವಜಂತುಗಳು ತಮ್ಮ ಪುರಾತನ ಕರ್ಮದಿಂದ ರಕ್ಷಿಸಲ್ಪಡುವುವು; ಅಂತೆಯೇ ಕರ್ಮದಿಂದ ಮರಣವನ್ನು ಹೊಂದುವುವು.

೬೫. ಆದರೂ ಮಾನವರು ತಮ್ಮ ಪ್ರತಿಯೊಂದು ಕರ್ತವ್ಯದಲ್ಲಿಯೂ ಯತ್ನವನ್ನು ಮಾಡಲೇಬೇಕು. ಪುರುಷಪ್ರಯತ್ನವನ್ನು ಆಚರಿಸುವ ಮಾನವನು ಸಾಧುಗಳ ಅಪವಾದಕ್ಕೆ ಗುರಿಯಾಗುವುದಿಲ್ಲ.

೬೬. ಅನಂತರ ಮುನಿವರ್ಯನಾದ ಶಮೀಕನಿಂದ ನಿಯೋಜಿಸಲ್ಪಟ್ಟ ಇತರ ಮುನಿಕುಮಾರರು ಆ ಪಕ್ಷಿಗಳನ್ನು ಎತ್ತಿಕೊಂಡು ಮರಗಳ ರೆಂಬೆಗಳ ಮೇಲೆ ಗೂಡುಕಟ್ಟಿರುವ ದುಂಬಿಗಳ ಗುಂಪಿನಿಂದಲೂ ಅನೇಕ ತಪಸ್ವಿಗಳ ವಾಸದಿಂದಲೂ ರಮ್ಯವಾದ ತಮ್ಮ ಆಶ್ರಮಕ್ಕೆ ಹೋದರು.

೬೭. ಆ ಶಮೀಕಮುನಿಯು ತನ್ನ ಮನಸ್ಸಿಗೆ ಒಪ್ಪಿದ, ಕಾಡಿನಲ್ಲಿ ಬೆಳೆದ ಗೆಡ್ಡೆ, ಗೆಣಸು, ಪತ್ರ, ಪುಷ್ಪ, ಫಲ, ದರ್ಭ ಮುಂತಾದುವುಗಳಿಂದ ಬ್ರಹ್ಮ, ವಿಷ್ಣು, ರುದ್ರ, ಇಂದ್ರ, ಅಗ್ನಿ, ಯಮ ಮುಂತಾದ ದೇವತೆಗಳನ್ನು ಆರಾಧಿಸಿದನು.

ಅಪಾಂಪತೇರ್ಗೀಷ್ಪತಿವಿತ್ತರಕ್ಷಿಣೋಃ
ಸಮೀರಣಸ್ಯಾಪಿ ತಥಾ ದ್ವಿಜೋತ್ತಮಃ ।
ಧಾತುರ್ವಿಧಾತುಸ್ತ್ವಥ ವೈಶ್ವದೇವಿಕಾಃ
ಶ್ರುತಿಪ್ರಯುಕ್ತಾ ವಿವಿಧಾಸ್ತು ಸತ್ಕ್ರಿಯಾಃ ||೬೮||

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಚಟಕೋತ್ಪತ್ತಿಕಥನಂ ನಾಮ ದ್ವಿತೀಯೋಽಧ್ಯಾಯಃ

---

೬೮. ಮತ್ತು ದ್ವಿಜೋತ್ತಮನಾದ ಶಮೀಕಮುನಿಯು ವರುಣ, ಬೃಹಸ್ಪತಿ, ಕುಬೇರ, ವಾಯು, ಧಾತಾ, ವಿಧಾತಾ ಮುಂತಾದ ದೇವತೆಗಳನ್ನೂ ಆರಾಧಿಸಿ ವೇದದಲ್ಲಿ ವಿಧಿಸಲ್ಪಟ್ಟ ವೈಶ್ವದೇವ ಮುಂತಾದ ವಿವಿಧ ನಿತ್ಯಕರ್ಮವನ್ನು ಆಚರಿಸಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಎರಡನೆಯ ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ತೃತೀಯೋऽಧ್ಯಾಯಃ

(ಧರ್ಮಪಕ್ಷಿಣಾಂ ಶಾಪಪ್ರಾಪ್ತಿಃ)

ಮಾರ್ಕಣ್ಡೇಯ ಉವಾಚ :—

ಅಹನ್ಯಹನಿ ವಿಪ್ರೇನ್ದ್ರ ಸ ತೇಷಾಂ ಮುನಿಸತ್ತಮಃ ।
ಚಕಾರಾಹಾರಪಯಸಾ ತಥಾ ಗುಪ್ತ್ಯಾ ಚ ಪೋಷಣಮ್ ॥೧॥

ಮಾಸಮಾತ್ರೇಣ ಜಗ್ಮುಸ್ತೇ ಭಾನೋಃ ಸ್ಯನ್ದನವರ್ತ್ಮನಿ ।
ಕೌತೂಹಲವಿಲೋಲಾಕ್ಷೈರ್ದೃಷ್ಟಾ ಮುನಿಕುಮಾರಕೈಃ ॥೨॥

ದೃಷ್ಟ್ವಾ ಮಹೀಂ ಸನಗರಾಂ ಸಾಮ್ಭೋನಿಧಿಸರಿದ್ವರಾಮ್ ।
ರಥಚಕ್ರಪ್ರಮಾಣಾನ್ತೇ ಪುನರಾಶ್ರಮಮಾಗತಾಃ ॥೩॥

ಮೂರನೆಯ ಅಧ್ಯಾಯವು

ಮಾರ್ಕಂಡೇಯ ಮುನಿಯು ಇಂತೆಂದನು :—

೧. ವಿಪ್ರೋತ್ತಮನಾದ ಜೈಮಿನಿಯೆ! ಆ ಮುನಿಶ್ರೇಷ್ಠನಾದ ಶಮೀಕನು ಪ್ರತಿದಿನವೂ ಆಹಾರ-ಪಾನೀಯಗಳನ್ನು ಕೊಡುವುದರಿಂದಲೂ ಏನೂ ಭಯವಿಲ್ಲದಂತೆ ನೋಡಿಕೊಳ್ಳುವುದರಿಂದಲೂ ಆ ಪಕ್ಷಿಗಳನ್ನು ಸಲಹಿದನು.

೨. ಆ ಪಕ್ಷಿಗಳು ಒಂದು ತಿಂಗಳು ಪೂರ್ಣವಾಗುವಷ್ಟರಲ್ಲಿ ಕುತೂಹಲ-ದಿಂದ ಚಂಚಲವಾದ ಕಣ್ಣುಗಳುಳ್ಳ ಮುನಿಕುಮಾರರು ನೋಡುತ್ತಿರುವ ಹಾಗೆ ಸೂರ್ಯನು ಸಂಚರಿಸುವ ಮಾರ್ಗದಲ್ಲಿ ಹಾರಾಡಿದುವು.

೩. ಹಾರಿಹೋದ ಆ ಪಕ್ಷಿಗಳು ಅನೇಕ ನಗರ, ಸಮುದ್ರ, ನದಿಗಳಿಂದ ಕೂಡಿ ಒಂದು ರಥಚಕ್ರದ ಪರಿಮಾಣವಿದ್ದಂತೆ ದೂರದಿಂದ ಕಂಡುಬರುವ ವಿಶಾಲವಾದ ಭೂಮಂಡಲವನ್ನು ನೋಡಿ ಮತ್ತೆ ಆಶ್ರಮಕ್ಕೆ ಬಂದು ಸೇರಿದುವು.

ಶ್ರಮುಕ್ತಾಸ್ತ್ವಾನ್ತರಾತ್ಮಾನೋ ಮಹಾತ್ಮಾನೋ ವಿಯೋನಿಜಾಃ ।
ಜ್ಞಾನಂ ಚ ಪ್ರಕಟೀಭೂತಂ ತತ್ರ ತೇಷಾಂ ಪ್ರಭಾವತಃ ॥೪॥

ಋಷೇಃ ಶಿಷ್ಯಾನುಕಮ್ಪಾರ್ಥಂ ವದತೋ ಧರ್ಮನಿಶ್ಚಯಮ್ ।
ಕೃತ್ವಾ ಪ್ರದಕ್ಷಿಣಂ ಸರ್ವೇ ಚರಣಾವಭ್ಯವಾದಯನ್ ॥೫॥

ಊಚುಶ್ಚ ಮರಣಾದ್ಘೋರಾನ್ಮೋಕ್ಷಿತಾಃ ಸ್ಮಸ್ತ್ವಯಾ ಮುನೇ ।
ಆವಾಸಭಕ್ಷ್ಯಪಯಸಾಂ ತ್ವಂ ನೋ ದಾತಾ ಪಿತಾ ಗುರುಃ ॥೬॥

ಗರ್ಭಸ್ಥಾನಾಂ ಮೃತಾ ಮಾತಾ ಪಿತ್ರಾ ನೈವಾಪಿ ಪಾಲಿತಾಃ ।
ತ್ವಯಾ ನೋ ಜೀವಿತಂ ದತ್ತಂ ಶಿಶವೋ ಯೇನ ರಕ್ಷಿತಾಃ ॥೭॥

ಕ್ಷಿತಾವಕ್ಷತತೇಜಾಸ್ತ್ವಂ ಕೃಮೀಣಾಮಿವ ಶುಷ್ಯತಾಮ್ ।
ಗಜಘಣ್ಟಾಂ ಸಮುತ್ಪಾಟ್ಯ ಕೃತವಾನ್ ದುಃಖರೇಚನಮ್ ॥೮॥

---

೪. ಭಿನ್ನಯೋನಿಯಲ್ಲಿ ಜನಿಸಿದ ಆ ಮಹಾತ್ಮರು ಆಯಾಸದಿಂದ ಬಳಲಿದ ಅಂತರಂಗವುಳ್ಳವರಾದರು. ಅಷ್ಟರಲ್ಲಿ ಅವರಿಗೆ ತಂದೆಯ ಅನುಗ್ರಹ ಪ್ರಭಾವದಿಂದ ಜ್ಞಾನವು ಪ್ರಕಟವಾಯಿತು.

೫. ಆಗ ಆ ಪಕ್ಷಿಗಳು ಎಲ್ಲವೂ ಶಿಷ್ಯರ ಮೇಲಿನ ಕರುಣೆಯಿಂದ ಧರ್ಮನಿರ್ಣಯವನ್ನು ಬೋಧಿಸುತ್ತಿದ್ದ ಶಮೀಕಮುನಿಗೆ ಪ್ರದಕ್ಷಿಣೆಮಾಡಿ ಪಾದಗಳಿಗೆ ವಂದಿಸಿದುವು.

೬. ಮತ್ತು ಪಕ್ಷಿಗಳು ಮುನಿಯಲ್ಲಿ ಹೀಗೆ ಹೇಳಿಕೊಂಡುವು :— ಮುನಿಯೆ ! ನೀನು ನಮ್ಮನ್ನು ಘೋರವಾದ ಮರಣದುಃಖದಿಂದ ಬಿಡುಗಡೆ ಮಾಡಿದ್ದೀಯೆ. ಮತ್ತು ಅನ್ನ, ನೀರು, ವಾಸಸ್ಥಳಗಳನ್ನು ಕೊಟ್ಟಿರುವೆ. ಆದ್ದರಿಂದ ನಮಗೆ ನೀನೆ ತಂದೆ ! ನೀನೆ ಗುರು !

೭. ನಾವು ಗರ್ಭವಾಸದಲ್ಲಿದ್ದಾಗಲೆ ಜನನಿಯು ಮೃತಳಾದಳು. ತಂದೆಯಿಂದಲೂ ನಾವು ರಕ್ಷಿತರಾಗಲಿಲ್ಲ. ಶಿಶುಗಳಾಗಿದ್ದ ನಮ್ಮನ್ನು ರಕ್ಷಿಸಿ ನಮಗೆ ನೀನು ಜೀವದಾನ ಮಾಡಿದ್ದೀಯೆ.

೮. ಅಖಂಡ ತೇಜಃಪುಂಜರೂಪಿಯಾದ ನೀನು ನೆಲದಲ್ಲಿ ಹುಳುಗಳಂತೆ ಒಣಗಿಹೋಗುತ್ತಿದ್ದ ನಮ್ಮ ಮೇಲಿದ್ದ ಘಂಟೆಯನ್ನು ಕಿತ್ತು ನಮ್ಮನ್ನು ದುಃಖಮುಕ್ತರನ್ನಾಗಿ ಮಾಡಿದ್ದೀಯೆ.

ಕಥಂ ವರ್ಧೇಯುರಬಲಾಃ ಸ್ವಸ್ಥಾನ್ ದ್ರಕ್ಷ್ಯಾಮ್ಯಹಂ ಕದಾ ।
ಕದಾ ಭೂಮೇರ್ದ್ರುಮಂ ಪ್ರಾಪ್ತಾನ್ ದ್ರಕ್ಷ್ಯೇ ವೃಕ್ಷಾನ್ತರಂ ಗತಾನ್ ॥೯॥

ಕದಾ ಮೇ ಸಹಜಾ ಕಾನ್ತಿಃ ಪಾಂಶುನಾ ನಾಶಮೇಷ್ಯತಿ ।
ಏಷಾಂ ಪಕ್ಷಾನಿಲೋತ್ಥೇನ ಮತ್ಸಮೀಪವಿಚಾರಿಣಾಮ್ ॥೧೦॥

ಇತಿ ಚಿನ್ತಯತಾ ತಾತ ಭವತಾ ಪ್ರತಿಪಾಲಿತಾಃ ।
ತೇ ಸಾಮ್ಪ್ರತಂ ಪ್ರವೃದ್ಧಾಃ ಸ್ಮಃ ಪ್ರಬುದ್ಧಾಃ ಕರವಾಮ ಕಿಮ್ ॥೧೧॥

ಇತ್ಯೃಷಿರ್ವಚನಂ ತೇಷಾಂ ಶ್ರುತ್ವಾ ಸಂಸ್ಕಾರವತ್ ಸ್ಫುಟಮ್ ।
ಶಿಷ್ಯೈಃ ಪರಿವೃತಃ ಸರ್ವೈಃ ಸಹ ಪುತ್ರೇಣ ಶೃಙ್ಗಿಣಾ ॥೧೨॥

---

೯. ದುರ್ಬಲವಾದ ಈ ಪಕ್ಷಿಗಳು ಬಲವನ್ನು ಹೊಂದಿ ಯಾವಾಗ ವೃದ್ಧಿಹೊಂದುವುವು? ಇವು ಆಕಾಶದಲ್ಲಿ ಹಾರಾಡುವುದನ್ನು ನಾನು ಯಾವಾಗ ನೋಡುವೆನು? ನೆಲದಿಂದ ಮರಕ್ಕೆ ಹಾರಿ ಅಲ್ಲಿಂದ ಮತ್ತೊಂದು ಮರಕ್ಕೆ ಹಾರಿ ಹೋಗುವುದನ್ನು ಎಂದು ನೋಡಲಿ?

೧೦. ಈ ಹಕ್ಕಿಗಳು ನನ್ನ ಹತ್ತಿರ ಹಾರಾಡುತ್ತಿರುವಾಗ ರೆಕ್ಕೆಗಳ ಗಾಳಿಯಿಂದ ಮೇಲಕ್ಕೆ ಎದ್ದ ಧೂಳಿಯು ನನ್ನ ದೇಹವನ್ನು ಮುಚ್ಚಿ ಅದರಿಂದ ದೇಹದ ಸ್ವಾಭಾವಿಕ ಕಾಂತಿಯು ಯಾವಾಗ ಅಡಗಿಹೋಗುವುದು?

೧೧. ತಾತನೆ! ಈ ವಿಧವಾಗಿ ಚಿಂತಿಸುತ್ತ ನೀನು ನಮ್ಮನ್ನು ಸಾಕಿ-ಸಲಹಿದ್ದೀಯೆ. ಅದರಿಂದ ನಾವೀಗ ಬೆಳವಣಿಗೆ ಮತ್ತು ತಿಳಿವಳಿಕೆಗಳನ್ನು ಹೊಂದಿದ್ದೇವೆ. ನಾವೀಗ ಏನು ಮಾಡಬೇಕು?

೧೨. ಶುದ್ಧಸಂಸ್ಕಾರದಿಂದ ಕೂಡಿ ಸ್ಪಷ್ಟವಾದ ಪಕ್ಷಿಗಳ ಆ ವಚನ-ವನ್ನು ಅನೇಕ ಶಿಷ್ಯರಿಂದಲೂ ಮತ್ತು ಶೃಂಗಿ ಎಂಬ ನಾಮಾಂಕಿತನಾದ ಪುತ್ರ-ನಿಂದಲೂ ಸಮೇತನಾದ ಶಮೀಕಮುನಿಯು ಕೇಳಿದನು.

ಕೌತೂಹಲಪರೋ ಭೂತ್ವಾ ರೋಮಾಂಚಪಟಸಂವೃತಃ ।
ಉವಾಚ ತತ್ತ್ವತೋ ಬ್ರೂತ ಪ್ರವೃತ್ತೇಃ ಕಾರಣಂ ಗಿರಃ ॥೧೩॥

ಕಸ್ಯ ಶಾಪಾದಿಯಂ ಪ್ರಾಪ್ತಾ ಭವದ್ಭಿರ್ವಿಕ್ರಿಯಾ ಪರಾ ।
ರೂಪಸ್ಯ ವಚಸಶ್ಚೈವ ತನ್ಮೇ ವಕ್ತುಮಿಹಾರ್ಹಥ ॥೧೪॥

ಪಕ್ಷಿಣ ಊಚುಃ :—

ವಿಪುಲಸ್ವಾನಿತಿ ಖ್ಯಾತಃ ಪ್ರಾಗಾಸೀನ್ಮುನಿಸತ್ತಮಃ ।
ತಸ್ಯ ಪುತ್ರದ್ವಯಂ ಜಜ್ಞೇ ಸುಕೃಷಸ್ತುಮ್ಬುರುಸ್ತಥಾ ॥೧೫॥

ಸುಕೃಷಸ್ಯ ವಯಂ ಪುತ್ರಾಶ್ಚತ್ವಾರಃ ಸಂಯತಾತ್ಮನಃ ।
ತಸ್ಯರ್ಷೇರ್ವಿನಯಾಚಾರಭಕ್ತಿನಮ್ರಾಃ ಸದೈವ ಹಿ ॥೧೬॥

---

೧೩. ಕುತೂಹಲದಿಂದ ತುಂಬಿದವನೂ ಮತ್ತು ಬಟ್ಟೆಯನ್ನು ಹೊದ್ದು ಕೊಂಡಂತಿರುವ ರೋಮಾಂಚದಿಂದ ಕೂಡಿದವನೂ ಆದ ಶಮೀಕಮುನಿಯು " ನಿಮಗೆ ಮಾನವರಂತೆ ಮಾತನಾಡಲು ಬರುವುದಕ್ಕೆ ಕಾರಣವನ್ನು ನಿಜವಾಗಿ ಹೇಳಿ " ಎಂದು ಕೇಳಿದನು.

೧೪. ನಿಮ್ಮ ಈ ರೂಪಕ್ಕೂ ಮತ್ತು ಮಾತಿಗೂ ಇರುವ ಹೆಚ್ಚಿನ ಅನ್ಯೋನ್ಯ ವಿಕಾರವು ಯಾವ ಮಹಾತ್ಮನ ಶಾಪದಿಂದ ಉಂಟಾಗಿದೆ ಎಂಬು-ದನ್ನು ನೀವು ಹೇಳಬೇಕು.

ಪಕ್ಷಿಗಳು ಇಂತೆಂದುವು :—

೧೫. ಪೂರ್ವಕಾಲದಲ್ಲಿ ವಿಪುಲಸ್ವಾನ್ ಎಂದು ಪ್ರಸಿದ್ಧಿ ಹೊಂದಿದ ಒಬ್ಬ ಮುನಿವರ್ಯನಿದ್ದನು. ಅವನಿಗೆ ಸುಕೃಷ, ತುಂಬುರು ಎಂಬ ಹೆಸರಿನ ಇಬ್ಬರು ಪುತ್ರರು ಜನಿಸಿದರು.

೧೬. ಯಾವಾಗಲೂ ವಿನಯ-ಸದಾಚಾರ-ಭಕ್ತಿ ಇವುಗಳಿಂದ ನಮ್ರರೂ ಜಿತೇಂದ್ರಿಯರೂ ಆದ ನಾವು ನಾಲ್ಕು ಮಂದಿ ಆ ಸುಕೃಷನೆಂಬ ಮುನಿಯ ಪುತ್ರರಾಗಿದ್ದೆವು.

ತಪಶ್ಚರಣಸಕ್ತಸ್ಯ ಶಾಸ್ಯಮಾನೇನ್ದ್ರಿಯಸ್ಯ ಚ ।
ಯಥಾಭಿಮತಮಸ್ಮಾಭಿಸ್ತದಾ ತಸ್ಯೋಪಪಾದಿತಮ್ ॥೧೭॥

ಸಮಿತ್ಪುಷ್ಪಾದಿಕಂ ಸರ್ವಂ ಯಚ್ಚೈವಾಭ್ಯವಹಾರಿಕಮ್ ॥೧೮॥

ಏವಂ ತತ್ರಾಥ ವಸತಾಂ ತಸ್ಯಾಸ್ಮಾಕಂ ಚ ಕಾನನೇ ॥೧೯॥

ಆಜಗಾಮ ಮಹಾವರ್ಷ್ಮಾ ಭಗ್ನಪಕ್ಷೋ ಜರಾನ್ವಿತಃ ।
ಆತಾಮ್ರನೇತ್ರಃ ಸ್ರಸ್ತಾತ್ಮಾ ಪಕ್ಷೀಭೂತ್ವಾ ಸುರೇಶ್ವರಃ ॥೨೦॥

ಸತ್ಯಶೌಚಕ್ಷಮಾಚಾರಮತೀವೋದಾರಮಾನಸಮ್ ।
ಜಿಜ್ಞಾಸುಸ್ತಮೃಷಿಶ್ರೇಷ್ಠಮಸ್ಮಚ್ಛಾಪಭವಾಯ ಚ ॥೨೧॥

---

೧೭. ಇಂದ್ರಿಯಗಳನ್ನು ನಿಗ್ರಹಿಸಿ ಕಠಿನವಾದ ತಪಶ್ಚರ್ಯೆಯಲ್ಲಿ ತತ್ಪರನಾದ ತಂದೆ ಸುಕೃಷನಿಗೆ ಇಷ್ಟವಾದ ಉಪಕರಣಗಳನ್ನು ಆಗ ನಾವು ಒದಗಿಸುತ್ತಿದ್ದೆವು.

೧೮. ತಪಶ್ಚರ್ಯೆಗೆ ಅಂಗವಾದ ಸಮಿತ್ತು, ಪತ್ರ-ಪುಷ್ಪ ಮುಂತಾದುವುಗಳನ್ನೂ ಕಂದಮೂಲಾದಿ ಆಹಾರ ಸಾಮಗ್ರಿಯನ್ನೂ ತಂದೆಯ ಇಷ್ಟದಂತೆ ಸಿದ್ಧಪಡಿಸಿದೆವು.

೧೯. ಹೀಗೆ ನಾವು ತಪಸ್ವಿಯಾದ ತಂದೆಯನ್ನು ಸೇವಿಸುತ್ತ ಆ ಕಾಡಿನಲ್ಲಿ ತಂದೆಯೊಡನೆ ಕೆಲವುಕಾಲ ವಾಸಮಾಡಿಕೊಂಡಿದ್ದೆವು.

೨೦. ಹೀಗಿರಲು ದೇವೇಂದ್ರನು ಮಹಾಪರಿಮಾಣದ ದೇಹ, ಸಡಿಲವಾಗಿ ಬಿಟ್ಟುಹೋದ ರೆಕ್ಕೆ-ಪುಕ್ಕ, ಮುಪ್ಪಿನ ವಯಸ್ಸು ಮತ್ತು ಸುತ್ತಲೂ ಕೆಂಪಾದ ಕಣ್ಣು ಇವುಗಳಿಂದ ಕೂಡಿದ ಜೀರ್ಣದೇಹವುಳ್ಳ ಪಕ್ಷಿರೂಪದಿಂದ ಅಲ್ಲಿಗೆ ಬಂದನು.

೨೧. ಸತ್ಯ-ಶೌಚ-ತಾಳ್ಮೆ- ಸದಾಚಾರಗಳಿಂದ ಸಂಪನ್ನನೂ ಮತ್ತು ಅತಿಯಾಗಿ ಉದಾರವಾದ ಮಾನಸವುಳ್ಳವನೂ ಆದ ಆ ಋಷಿಶ್ರೇಷ್ಠನನ್ನು ಪರೀಕ್ಷಿಸುವುದಕ್ಕೂ ಮತ್ತು ನಮಗೆ ಈ ವಿಧವಾದ ಶಾಪಪ್ರಾಪ್ತಿಯಾಗುವುದಕ್ಕೂ ದೇವೇಂದ್ರನು ಪಕ್ಷಿರೂಪದಿಂದ ಬಂದಂತಾಯಿತು.

ಪಕ್ಷ್ಯುವಾಚ :—

ದ್ವಿಜೇನ್ದ್ರ ಮಾಂ ಕ್ಷುಧಾವಿಷ್ಟಂ ಪರಿತ್ರಾತುಮಿಹಾರ್ಹಸಿ ।
ಭಕ್ಷಣಾರ್ಥೀ ಮಹಾಭಾಗ ಗತಿರ್ಭವ ಮಮಾತುಲಾ ॥೨೨॥

ವಿನ್ಧ್ಯಸ್ಯ ಶಿಖರೇ ತಿಷ್ಠನ್ ಪತ್ರಿಪತ್ರೈರಿತೇನ ವೈ ।
ಪತಿತೋಽಸ್ಮಿ ಮಹಾಭಾಗ ಶ್ವಸನೇನಾತಿರಂಹಸಾ ॥೨೩॥

ಸೋಽಹಂ ಮೋಹಸಮಾವಿಷ್ಟೋ ಭೂಮೌ ಸಪ್ತಾಹಮಸ್ಮೃತಿಃ ।
ಸ್ಥಿತಸ್ತತ್ರಾಷ್ಟಮೇನಾಹ್ನಾ ಚೇತನಾಂ ಪ್ರಾಪ್ತವಾನಹಮ್ ॥೨೪॥

ಪ್ರಾಪ್ತಚೇತಾಃ ಕ್ಷುಧಾವಿಷ್ಟೋ ಭವನ್ತಂ ಶರಣಂ ಗತಃ ।
ಭಕ್ಷ್ಯಾರ್ಥೀ ವಿಗತಾನನ್ದೋ ದೂಯಮಾನೇನ ಚೇತಸಾ ॥೨೫॥

ಪಕ್ಷಿಯು ಹೀಗೆ ನುಡಿಯಿತು :—

೨೨. ದ್ವಿಜೋತ್ತಮನೆ ! ಹಸಿವಿನಿಂದ ಬಳಲಿ ಬಂದ ನನ್ನನ್ನು ನೀನು ರಕ್ಷಿಸಲು ಅರ್ಹನಾಗಿದ್ದೀಯೆ. ಮಹಾತ್ಮನೆ ! ನಾನು ಆಹಾರಾರ್ಥಿಯಾಗಿರುವೆನು. ನೀನು ನನಗೆ ಅಲಭ್ಯನಾದಂತಹ ಶರಣನಾಗಿರುವೆ.

೨೩. ಮಹಾಭಾಗ್ಯಶಾಲಿಯೆ ! ವಿಂಧ್ಯಗಿರಿಯಲ್ಲಿ ವಾಸಮಾಡುತ್ತಿದ್ದ ನಾನು ಪಕ್ಷಿಗಳು ಹಾರಿಹೋಗುವಾಗ ರೆಕ್ಕೆಗಳಿಂದ ಎದ್ದ ಪ್ರಬಲವಾದ ಗಾಳಿಯಿಂದ ಗಿರಿಶಿಖರದಿಂದ ಕೆಳಕ್ಕೆ ಬಿದ್ದೆನು.

೨೪. ಗಿರಿಶಿಖರದಿಂದ ನೆಲದಲ್ಲಿ ಬಿದ್ದ ನಾನು ಮೂರ್ಛೆಯನ್ನು ಹೊಂದಿ ಪ್ರಜ್ಞೆಯಿಲ್ಲದೆ ಏಳು ದಿವಸಗಳ ವರೆಗೆ ಅಲ್ಲಿಯೆ ಬಿದ್ದಿದ್ದು ಎಂಟನೆಯ ದಿವಸದಲ್ಲಿ ಹೇಗೋ ಪ್ರಜ್ಞೆಯನ್ನು ಹೊಂದಿದೆನು.

೨೫. ಮೂರ್ಛೆಯಿಂದ ಎಚ್ಚೆತ್ತು ಪ್ರಜ್ಞೆಯನ್ನು ಹೊಂದಿದ ನಾನು ಹಸಿವಿನಿಂದ ಕೂಡಿ ತಿಂಡಿಯನ್ನು ಹುಡುಕುತ್ತ ಏನೂ ಸಿಕ್ಕದೆ ನೊಂದಿರುವ ಮನಸ್ಸುಳ್ಳವನಾಗಿ ಸ್ವಲ್ಪ ಮಾತ್ರವೂ ಆನಂದವಿಲ್ಲದೆ ನಿನ್ನನ್ನು ಶರಣು ಹೊಂದಿರುವೆನು.

ತತ್ಕುರುಷ್ವಾಮಲಮತೇ ಮತ್ತ್ರಾಣಾಯಾಚಲಾಂ ಮತಿಮ್ ।
ಪ್ರಯಚ್ಛ ಭಕ್ಷ್ಯಂ ವಿಪ್ರರ್ಷೇ ಪ್ರಾಣಯಾತ್ರಾಕ್ಷಮಂ ಮಮ ॥೨೬॥

ಸ ಏವಮುಕ್ತಃ ಪ್ರೋವಾಚ ತಮಿನ್ದ್ರಂ ಪಕ್ಷಿರೂಪಿಣಮ್ ।
ಪ್ರಾಣಸನ್ಧಾರಣಾರ್ಥಾಯ ದಾಸ್ಯೇ ಭಕ್ಷ್ಯಂ ತವೇಪ್ಸಿತಮ್ ॥೨೭॥

ಇತ್ಯುಕ್ತ್ವಾ ಪುನರಪ್ಯೇನಮಪೃಚ್ಛತ್ಸ ದ್ವಿಜೋತ್ತಮಃ ।
ಆಹಾರಃ ಕಸ್ತವಾರ್ಥಾಯ ಉಪಕಲ್ಪ್ಯೋ ಭವೇನ್ಮಯಾ ॥೨೮॥

ಸ ಚಾಹ ನರಮಾಂಸೇನ ತೃಪ್ತಿರ್ಭವತಿ ಮೇ ಪರಾ ॥೨೯॥

ಋಷಿರುವಾಚ :—

ಕೌಮಾರಂ ತೇ ವ್ಯತಿಕ್ರಾನ್ತಮತೀತಂ ಯೌವನಂ ಚ ತೇ ।
ವಯಸಃ ಪರಿಣಾಮಸ್ತೇ ವರ್ತತೇ ನೂನಮಣ್ಡಜ ॥೩೦॥

---

೨೬. ಸುಸಂಸ್ಕೃತವಾದ ಬುದ್ಧಿಯುಳ್ಳವನೇ! ಆದಕಾರಣ ಅನಾಥನಾದ ನನ್ನನ್ನು ರಕ್ಷಿಸಲು ಸ್ಥಿರಬುದ್ಧಿಯನ್ನು ಮಾಡು. ಬ್ರಹ್ಮರ್ಷಿಯೆ! ನನಗೆ ಪ್ರಾಣವಾಯು ಉಳಿಯಲು ಸಾಕಾದಷ್ಟು ಭಕ್ಷ್ಯವನ್ನು ಕೊಡು.

೨೭. ಪಕ್ಷಿಯಿಂದ ಈ ರೀತಿಯಾಗಿ ಪ್ರಾರ್ಥಿಸಲ್ಪಟ್ಟ ಸುಕೃಷಮುನಿಯು ಪಕ್ಷಿರೂಪದಿಂದ ಇರುವ ಇಂದ್ರನನ್ನು ಕುರಿತು ಹೇಳಿದನು. ಪ್ರಾಣಧಾರಣೆಗೆ ತಕ್ಕ ನಿನಗೆ ಇಷ್ಟವಾದ ಭಕ್ಷ್ಯವನ್ನು ಕೊಡುವೆನು.

೨೮. ಹೀಗೆಂದು ಹೇಳಿ ಆ ದ್ವಿಜೋತ್ತಮನು ಪಕ್ಷಿಯನ್ನು ಕುರಿತು ಮತ್ತೆ ಪ್ರಶ್ನಮಾಡಿದನು. ಇಷ್ಟವಾದ ಯಾವ ಆಹಾರವು ನಿನಗೆ ನನ್ನಿಂದ ಸಜ್ಜುಗೊಳಿಸಲ್ಪಡಬೇಕು ?

೨೯. ಆಗ ಆ ಪಕ್ಷಿಯು ನುಡಿಯಿತು :—ಎಲ್ಲ ಆಹಾರಕ್ಕಿಂತಲೂ ನರಮಾಂಸಾಹಾರದಿಂದ ನನಗೆ ಅತ್ಯುತ್ತಮವಾದ ತೃಪ್ತಿಯುಂಟಾಗುವುದು.

ಋಷಿಯು ಹೀಗೆಂದನು :—

೩೦. ಪಕ್ಷಿಯೆ! ನಿನಗೆ ಈಗ ಕುಮಾರಾವಸ್ಥೆಯು ಕಳೆದುಹೋಗಿದೆ. ತಾರುಣ್ಯವು ಹೊರಟುಹೋಯಿತು. ಮತ್ತು ವಯಸ್ಸಿನ ಪರಿಣಾಮರೂಪವಾದ ಮುಪ್ಪು ನಿನ್ನನ್ನು ಆವರಿಸಿದೆ.

ಯಸ್ಮಿನ್ನರಾಣಾಂ ಸರ್ವೇಷಾಮಶೇಷೇಚ್ಛಾ ನಿವರ್ತತೇ ।
ಸ ಕಸ್ಮಾದ್ವೃದ್ಧಭಾವೇಽಪಿ ಸುನೃಶಂಸಾತ್ಮಕೋ ಭವಾನ್ ॥೩೧॥

ಕ್ವ ಮಾನುಷಸ್ಯ ಪಿಶಿತಂ ಕ್ವ ವಯಶ್ಚರಮಂ ತವ ।
ಸರ್ವಥಾ ದುಷ್ಟಭಾವಾನಾಂ ಪ್ರಶಮೋ ನೋಪಪದ್ಯತೇ ॥೩೨॥

ಅಥವಾ ಕಿಂ ಮಯ್ಯೈತೇನ ಪ್ರೋಕ್ತೇನಾಸ್ತಿ ಪ್ರಯೋಜನಮ್ ।
ಪ್ರತಿಶ್ರುತ್ಯ ಸದಾ ದೇಯಮಿತಿ ನೋ ಭಾವಿತಂ ಮನಃ ॥೩೩॥

ಇತ್ಯುಕ್ತ್ವಾ ತಂ ಸ ವಿಪ್ರೇನ್ದ್ರಸ್ತಥೇತಿ ಕೃತನಿಶ್ಚಯಃ ।
ಶೀಘ್ರಮಸ್ಮಾನ್ ಸಮಾಹೂಯ ಗುಣತೋಽನುಪ್ರಶಸ್ಯ ಚ ॥೩೪॥

---

೩೧. ಸಮಸ್ತ ಜಂತುಗಳಿಗೆ ವೃದ್ಧಾಪ್ಯದಲ್ಲಿ ಸಂಪೂರ್ಣವಾಗಿ ಆಶೆಯು ಅಡಗಿಹೋಗುವುದು. ನೀನು ಮಾತ್ರ ಇಂತಹ ವೃಧ್ಧಾಪ್ಯದಲ್ಲಿ ಕೂಡ ಕ್ರೂರ-ಸ್ವಭಾವವುಳ್ಳವನಾಗಿ ಏಕೆ ಇದ್ದೀಯೆ?

೩೨. ನರಮಾಂಸವನ್ನು ಭುಂಜಿಸುವುದೇನು? ಕಡೆಗಾಲದ ಈ ನಿನ್ನ ವಯಸ್ಸೇನು? ಕ್ರೂರಸ್ವಭಾವದ ಪ್ರಾಣಿಗಳಿಗೆ ಎಂದಿಗೂ ಶಾಂತಿಯು ಉಂಟಾಗದು.

೩೩. ಅಥವಾ ಇದೆಲ್ಲ ನನಗೇಕೆ? ಈಗ ಮಾತನಾಡಿ ಏನೂ ಪ್ರಯೋಜನವಿಲ್ಲ. ಒಪ್ಪಿಕೊಂಡಿದ್ದನ್ನು ಯಾವಾಗಲೂ ಕೊಡಲೇಬೇಕೆಂದು ನಮ್ಮ ಮನಸ್ಸಿನ ದೃಢವಾದ ಸಂಸ್ಕಾರವು.

೩೪. ಆ ವಿಪ್ರೋತ್ತಮನು ಪಕ್ಷಿಗೆ ಹೀಗೆಂದು ಹೇಳಿ ಪಕ್ಷಿಯು ಕೇಳಿ-ದಂತೆ ನರಮಾಂಸವನ್ನು ಕೊಡಬೇಕೆಂದು ತೀರ್ಮಾನಿಸಿಕೊಂಡವನಾಗಿ ನಮ್ಮನ್ನು ಕೂಡಲೆ ಕರೆದು ನಮ್ಮ ಗುಣಗಳನ್ನು ಕೊಂಡಾಡುತ್ತ ಹೇಳಿದನು.

ಉವಾಚ ಕ್ಷುಬ್ಧಹೃದಯೋ ಮುನಿರ್ವಾಕ್ಯಂ ಸುನಿಷ್ಠುರಮ್ ।
ವಿನಯಾವನತಾನ್ ಸರ್ವಾನ್ ಭಕ್ತಿಯುಕ್ತಾನ್ ಕೃತಾಞ್ಜಲೀನ್ ||೩೫||

ಕೃತಾತ್ಮಾನೋ ದ್ವಿಜಶ್ರೇಷ್ಠಾ ಋಣೈರ್ಮುಕ್ತಾ ಮಯಾ ಸಹ ।
ಜಾತಂ ಶ್ರೇಷ್ಠಮಪತ್ಯಂ ವೋ ಯೂಯಂ ಮಮ ಯಥಾ ದ್ವಿಜಾಃ ||೩೬||

ಗುರುಃ ಪೂಜ್ಯೋ ಯದಿ ಮತೋ ಭವತಾಂ ಪರಮಃ ಪಿತಾ ।
ತತಃ ಕುರುತ ಮೇ ವಾಕ್ಯಂ ನಿರ್ವ್ಯಲೀಕೇನ ಚೇತಸಾ ||೩೭||

ತದ್ವಾಕ್ಯಸಮಕಾಲಂ ಚ ಪ್ರೋಕ್ತಮಸ್ಮಾಭಿರಾದೃತೈಃ ।
ಯದ್ವಕ್ಷ್ಯತಿ ಭವಾಂಸ್ತದ್ವೈ ಕೃತಮೇವಾವಧಾರ್ಯತಾಮ್ ||೩೮||

---

೩೫. ಆ ಸನ್ನಿವೇಶದಿಂದ ಕ್ಷೋಭಹೊಂದಿದ ಹೃದಯವುಳ್ಳ ಮುನಿಯಾದ ಜನಕನು ವಿನಯದಿಂದ ನಮ್ರರೂ, ಭಕ್ತಿಯುಳ್ಳವರೂ, ಮತ್ತು ಕೈ ಜೋಡಿಸಿ ನಿಂತವರೂ ಆದ ನಮ್ಮೆಲ್ಲರಿಗೂ ಬಹುಕಠಿನವಾದ ಮಾತನ್ನು ಹೇಳಿದನು.

೩೬. ದ್ವಿಜವಂಶದಲ್ಲಿ ಶ್ರೇಷ್ಠರಾಗಿ ಜನಿಸಿದ ನಿಮ್ಮಿಂದ ನಾನು ಪಿತೃ-ಋಣದಿಂದ ಮುಕ್ತನಾದಂತೆ ನಿಮಗೆ ಉತ್ತಮ ಸಂತತಿಯು ಜನಿಸಿರುವುದರಿಂದ ನೀವು ಋಣಮುಕ್ತರಾಗಿ ಕೃತಕೃತ್ಯರಾಗಿರುವಿರಿ.

೩೭: ಜನಕರೂಪನಾದ ಸರ್ವೋತ್ತಮ ಗುರುವು ಪೂಜ್ಯನೆಂದು ನಿಮಗೆ ಇಷ್ಟವಿದ್ದ ಪಕ್ಷದಲ್ಲಿ ಮುಂದೆ ನಾನು ಹೇಳುವ ವಚನವನ್ನು ಸ್ವಲ್ಪವೂ ಕೊರತೆ-ಯಿಲ್ಲದ ಮನಸ್ಸಿನಿಂದ ನಡೆಸಿರಿ.

೩೮. ತಂದೆಯು ಆ ಮಾತನ್ನು ಹೇಳಿ ಮುಗಿಸುವಷ್ಟರಲ್ಲಿ ಹೆಚ್ಚಾದ ಭಕ್ತಿ-ಗೌರವಗಳಿಂದ ಕೂಡಿ ನಾವು ಹೇಳಿಕೊಂಡೆವು. ನೀನು ಏನು ಆಜ್ಞಾಪಿಸುವೆಯೊ ; ನಾವು ಅದನ್ನು ಮಾಡಿ ಮುಗಿಸಿದಂತೆ ಭಾವಿಸು.

ಋಷಿರುವಾಚ :—

ಮಾಮೇಷ ಶರಣಂ ಪ್ರಾಪ್ತೋ ವಿಹಙ್ಗಃ ಕ್ಷುತ್ತೃಷಾನ್ವಿತಃ ।
ಯುಷ್ಮನ್ಮಾಂಸೇನ ಯೇನಾಸ್ಯ ಕ್ಷಣಂ ತೃಪ್ತಿರ್ಭವೇತ ವೈ ॥೩೯॥

ತೃಷ್ಣಾಕ್ಷಯಶ್ಚ ರಕ್ತೇನ ತಥಾ ಶೀಘ್ರಂ ವಿಧೀಯತಾಮ್ ॥೪೦॥

ತತೋ ವಯಂ ಪ್ರವ್ಯಥಿತಾಃ ಪ್ರಕಮ್ಪೋದ್ಭೂತಸಾಧ್ವಸಾಃ ।
ಕಷ್ಟಂ ಕಷ್ಟಮಿತಿ ಪ್ರೋಚ್ಯ ನೈತತ್ಕುರ್ಮೇತಿ ಚಾಬ್ರುವನ್ ॥೪೧॥

ಕಥಂ ಪರಶರೀರಸ್ಯ ಹೇತೋರ್ದೇಹಂ ಸ್ವಕಂ ಬುಧಃ ।
ವಿನಾಶಯೇದ್ಘಾತಯೇದ್ವಾ ಯಥಾ ಹ್ಯಾತ್ಮಾ ತಥಾ ಸುತಃ ॥೪೨॥

ಋಷಿಯು ಹೀಗೆಂದನು :—

೩೯. ಈ ಪಕ್ಷಿಯು ಹಸಿವು-ನೀರಡಿಕೆಗಳನ್ನು ಸಹಿಸಲಾರದೆ ನನ್ನನ್ನು ಶರಣುಹೊಂದಿರುವುದು. ನಿಮ್ಮ ಮಾಂಸವನ್ನು ಕೊಟ್ಟು ಈ ಪಕ್ಷಿಗೆ ಸ್ವಲ್ಪ ತೃಪ್ತಿಯನ್ನುಂಟುಮಾಡಲು ಬಯಸುತ್ತೇನೆ.

೪೦. ಮಾಂಸವನ್ನು ಭುಂಜಿಸಿದ ತರುವಾಯ ಹಾಗೆಯೆ ರಕ್ತವನ್ನು ಕುಡಿದು ನೀರಡಿಕೆಯು ಶಾಂತವಾಗುವುದು. ಹಾಗೆ ರಕ್ತ-ಮಾಂಸಗಳನ್ನು ಕೊಟ್ಟು ಹಸಿವು-ನೀರಡಿಕೆಗಳು ಹೋಗುವಂತೆ ಕೂಡಲೆ ನೀವೆಲ್ಲರೂ ಮಾಡ-ಬೇಕು.

೪೧. ಈ ಮಾತನ್ನು ಕೇಳಿ ನಾವೆಲ್ಲರೂ ಬಹಳ ದುಃಖಗೊಂಡವರೂ, ಮೈನಡುಗುವಂತೆ ಉಂಟಾದ ಮಹಾಭಯವುಳ್ಳವರೂ ಆಗಿ ಅಯ್ಯೋ ! ಕಷ್ಟ ! ಎನ್ನುತ್ತ ಇದನ್ನು ನಾವು ಮಾಡುವುದಿಲ್ಲ, ಎಂದು ಹೇಳಿದೆವು.

೪೨. ಇನ್ನೊಂದು ಪ್ರಾಣಿಯ ಶರೀರವನ್ನು ಉಳಿಸುವುದಕ್ಕೋಸ್ಕರ ಪ್ರಾಜ್ಞನು ತನ್ನ ಶರೀರವನ್ನು ಹೇಗೆ ಕೆಡಿಸಿಕೊಳ್ಳುವುದು ಅಥವಾ ವಧಿಸಿ-ಕೊಳ್ಳುವುದು? ನಿನ್ನ ಮಕ್ಕಳು ನಿನಗೆ ಆತ್ಮಭೂತರಲ್ಲವೆ !

ಪಿತೃದೇವಮನುಷ್ಯಾಣಾಂ ಯಾನ್ಯುಕ್ತಾನಿ ಋಣಾನಿ ವೈ ।
ತಾನ್ಯಪಾಕುರುತೇ ಪುತ್ರೋ ನ ಶರೀರಪ್ರದಃ ಸುತಃ ॥೪೩॥

ತಸ್ಮಾನ್ನೈತತ್ಕರಿಷ್ಯಾಮೋ ನೋ ಚೀರ್ಣಂ ಯತ್ಪುರಾತನೈಃ ।
ಜೀವನ್ಭದ್ರಾಣ್ಯವಾಪ್ನೋತಿ ಜೀವನ್ಪುಣ್ಯಂ ಕರೋತಿ ಚ ॥೪೪॥

ಮೃತಸ್ಯ ದೇಹನಾಶಶ್ಚ ಧರ್ಮಾದ್ಯುಪರತಿಸ್ತಥಾ ।
ಆತ್ಮಾನಂ ಸರ್ವತೋ ರಕ್ಷ್ಯಮಾಹುರ್ಧರ್ಮವಿದೋ ಜನಾಃ ॥೪೫॥

ಇತ್ಥಂ ಶ್ರುತ್ವಾ ವಚೋಽಸ್ಮಾಕಂ ಮುನಿಃ ಕ್ರೋಧಾದಿವ ಜ್ವಲನ್ ।
ಪ್ರೋವಾಚ ಪುನರಪ್ಯಸ್ಮಾನ್ನಿರ್ದಹನ್ನಿವ ಲೋಚನೈಃ ॥೪೬॥

---

೪೩. ಹುಟ್ಟುವ ಮನುಷ್ಯನಿಗೆ ಜೊತೆಯಲ್ಲಿ ಬಂದ ಪಿತೃ, ದೇವ, ಮನುಷ್ಯ ಋಣಗಳನ್ನು ಕಳೆಯುವಂತೆ ಮಾಡುವುದು ಪುತ್ರನ ಕರ್ತವ್ಯವಹುದು, ಪುತ್ರನು ಅದಕ್ಕಾಗಿ ದೇಹವನ್ನು ಕೊಡುವವನಲ್ಲ.

೪೪. ಆದುದರಿಂದ ಪುರಾತನರಿಂದ ಎಂದೂ ಮಾಡಲ್ಪಡದಿರುವ, ಪಕ್ಷಿಯ ಆಹಾರಕ್ಕಾಗಿ ದೇಹ ದಾನರೂಪವಾದ ಕರ್ತವ್ಯವನ್ನು ನಾವು ಮಾಡುವವರಲ್ಲ. ಜೀವಂತನಾಗಿದ್ದು ಎಷ್ಟೋ ಕಲ್ಯಾಣಗಳನ್ನು ಹೊಂದಬಹುದು ಜೀವಂತನಾಗಿದ್ದು ಎಷ್ಟೋ ಪುಣ್ಯವನ್ನು ಆರ್ಜಿಸಬಹುದು.

೪೫. ಮರಣಹೊಂದಿದವನಿಗೆ ದೇಹವು ನಾಶವಾಗುವುದು ; ಹಾಗೆಯೆ ಧರ್ಮಾನುಷ್ಠಾನವೂ ನಿಂತುಹೋಗುವುದು. ಆದ್ದರಿಂದ ಧರ್ಮವೇತ್ತರಾದ ಜನರು ಎಲ್ಲಬಗೆಯಿಂದಲೂ ಆತ್ಮವನ್ನು ರಕ್ಷಿಸಿಕೊಳ್ಳಬೇಕೆಂದು ಹೇಳುವರು.

೪೬. ನಮ್ಮ ಈ ಮಾತನ್ನು ಕೇಳಿ ಮುನಿಯಾದ ತಂದೆಯು ಕೋಪದಿಂದ ಉರಿಯುವವನಂತೆಯೂ ಕ್ರೂರದೃಷ್ಟಿಯಿಂದ ಭಸ್ಮಮಾಡುವವನಂತೆಯೂ ಆಗಿ ಮತ್ತೆ ನಮ್ಮನ್ನು ಕುರಿತು ಈ ರೀತಿಯಾಗಿ ಹೇಳಿದನು.

ಪ್ರತಿಜ್ಞಾತಂ ವಚೋ ಮಹ್ಯಂ ಯಸ್ಮಾನ್ನೈತತ್ ಕರಿಷ್ಯಥ ।
ತಸ್ಮಾನ್ಮಚ್ಛಾಪನಿರ್ದಗ್ಧಾಸ್ತಿರ್ಯಗ್ಯೋನೌ ಪ್ರಯಾಸ್ಯಥ ॥೪೭॥

ಏವಮುಕ್ತ್ವಾ ತದಾ ಸೋಽಸ್ಮಾಂಸ್ತಂ ವಿಹಙ್ಗಮಮಬ್ರವೀತ್ ।
ಅನ್ತ್ಯೇಷ್ಟಿಮಾತ್ಮನಃ ಕೃತ್ವಾ ಶಾಸ್ತ್ರತಶ್ಚೌರ್ಧ್ವದೇಹಿಕಮ್ ॥೪೮॥

ಭಕ್ಷಯಸ್ವ ಸುವಿಶ್ರಬ್ಧೋ ಮಾಮತ್ರ ದ್ವಿಜಸತ್ತಮ ।
ಆಹಾರೀಕೃತಮೇತತ್ತೇ ಮಯಾ ದೇಹಮಿಹಾತ್ಮನಃ ॥೪೯॥

ಏತಾವದೇವ ವಿಪ್ರಸ್ಯ ಬ್ರಾಹ್ಮಣತ್ವಂ ಪ್ರಚಕ್ಷ್ಯತೇ ।
ಯಾವತ್ಪತಗಜಾತ್ಯಗ್ರ್ಯ ಸ್ವಸತ್ಯಪರಿಪಾಲನಮ್ ॥೫೦॥

ನ ಯಜ್ಞೈರ್ದಕ್ಷಿಣಾವದ್ಭಿಸ್ತತ್ಪುಣ್ಯಂ ಪ್ರಾಪ್ಯತೇ ಮಹತ್ ।
ಕರ್ಮಣಾನ್ಯೇನ ವಾ ವಿಪ್ರೈರ್ಯತ್ಸತ್ಯಪರಿಪಾಲನಾತ್ ॥೫೧॥

---

೪೭. ಯಾವಕಾರಣದಿಂದ ನನಗೆ ಪ್ರತಿಜ್ಞೆಮಾಡಿ ಒಪ್ಪಿಕೊಂಡ ಮಾತನ್ನು ನೀವು ನಡೆಯಿಸಲಿಲ್ಲವೊ ಆ ಕಾರಣದಿಂದ ನನ್ನ ಶಾಪಾಗ್ನಿಯಿಂದ ದಗ್ಧರಾಗಿ ನೀವು ಮೂಕಪ್ರಾಣಿ ಜನ್ಮವನ್ನು ಎತ್ತುವಿರಿ.

೪೮. ಹೀಗೆ ನಮಗೆ ಪಕ್ಷಿಜನ್ಮಬರುವಂತೆ ಶಾಪಕೊಟ್ಟು ಆ ಮುನಿಯು ತನ್ನ ಆತ್ಮಕ್ಕೆ ಅಂತ್ಯೇಷ್ಟಿ ಮುಂತಾದ ಶಾಸ್ತ್ರೀಯ ಔರ್ಧ್ವದೇಹಿಕ ಸಂಸ್ಕಾರವನ್ನು ಮಾಡಿಕೊಂಡು ಆ ಪಕ್ಷಿಯನ್ನು ಕುರಿತು ಹೇಳಿದನು.

೪೯. ಪಕ್ಷಿಶ್ರೇಷ್ಠನೆ! ನೀನು ನೆಮ್ಮದಿಯಿಂದ ಈಗ ನನ್ನನ್ನು ಭಕ್ಷಿಸು. ಈ ನನ್ನ ದೇಹವನ್ನು ನಿನಗೆ ಆಹಾರವಾಗಿ ನಾನು ಒಪ್ಪಿಸಿರುವೆನು.

೫೦. ಪಕ್ಷಿಜಾತಿಯಲ್ಲಿ ಉತ್ತಮನಾದವನೆ! ಬ್ರಾಹ್ಮಣ ಜಾತಿಯಲ್ಲಿ ಜನಿಸಿದ ವ್ಯಕ್ತಿಯಲ್ಲಿರುವ ಬ್ರಾಹ್ಮಣತ್ವವು ಸತ್ಯಪರಿಪಾಲನರೂಪವಾದುದಷ್ಟೆ—ಎಂದು ಪ್ರಾಜ್ಞರಿಂದ ಹೇಳಲ್ಪಟ್ಟಿದೆ.

೫೧. ವಿಪ್ರರು ಸತ್ಯವಚನವನ್ನು ಪಾಲಿಸುವುದರಿಂದ ಲಭಿಸುವ ಮಹತ್ತಾದ ಪುಣ್ಯವನ್ನು ಉದಾರ ದಕ್ಷಿಣೆಯಿಂದ ಕೂಡಿದ ಯಜ್ಞಗಳಿಂದಾಗಲಿ, ಇತರ ಸತ್ಕರ್ಮದಿಂದಲಾಗಲಿ ಹೊಂದಲಾರರು.

ಇತ್ಯೃಷೇರ್ವಚನಂ ಶ್ರುತ್ವಾ ಸೋಽನ್ತರ್ವಿಸ್ಮಯನಿರ್ಭರಃ ।
ಪ್ರತ್ಯುವಾಚ ಮುನಿಂ ಶಕ್ರಃ ಪಕ್ಷಿರೂಪಧರಸ್ತದಾ ॥೫೨॥

ಯೋಗಮಾಸ್ಥಾಯ ವಿಪ್ರೇನ್ದ್ರ ತ್ಯಜೇದಂ ಸ್ವಕಲೇವರಮ್ ।
ಜೀವಜ್ಜನ್ತುಂ ಹಿ ವಿಪ್ರೇನ್ದ್ರ ನ ಭಕ್ಷಾಮಿ ಕದಾಚನ ॥೫೩॥

ತಸ್ಯ ತದ್ವಚನಂ ಶ್ರುತ್ವಾ ಯೋಗಯುಕ್ತೋಽಭವನ್ಮುನಿಃ ।
ತಂ ತಸ್ಯ ನಿಶ್ಚಯಂ ಜ್ಞಾತ್ವಾ ಶಕ್ರೋಽಪ್ಯಾಹ ಸ್ವದೇಹಭೃತ್ ॥೫೪॥

ಭೋ ಭೋ ವಿಪ್ರೇನ್ದ್ರ ಬುದ್ಧ್ಯಸ್ವ ಬುದ್ಧ್ಯಾ ಬೋಧ್ಯಂ ಬುಧಾತ್ಮಕ ।
ಜಿಜ್ಞಾಸಾರ್ಥಂ ಮಯಾಯಂ ತೇ ಅಪರಾಧಃ ಕೃತೋಽನಘ ॥೫೫॥

---

೫೨. ಮುನಿಯ ಆ ಮಾತನ್ನು ಕೇಳಿ ಹೃದಯದಲ್ಲಿ ಅಪಾರ ವಿಸ್ಮಯದಿಂದ ತುಂಬಿದ, ಪಕ್ಷಿರೂಪದಿಂದ ಇದ್ದ ಇಂದ್ರನು ಆಗ ಮುನಿಯನ್ನು ನೋಡಿ ಮತ್ತೆ ಇಂತು ಹೇಳಿದನು.

೫೩. ಬ್ರಹ್ಮರ್ಷಿಯೆ! ಸಮಾಧಿಯನ್ನು ಕೈಗೊಂಡು ಯೋಗಾಗ್ನಿಯಿಂದ ನೀನು ನಿನ್ನ ದೇಹವನ್ನು ತ್ಯಜಿಸು. ವಿಪ್ರೋತ್ತಮನೆ! ನಾನು ಜೀವಿಸುತ್ತಿದ್ದ ಪ್ರಾಣಿಯನ್ನು ಯಾವಾಗಲೂ ತಿನ್ನುವುದಿಲ್ಲ.

೫೪. ಪಕ್ಷಿಯ ಆ ಮಾತನ್ನು ಕೇಳಿ ಮಹರ್ಷಿಯು ಸಮಾಧಿನಿಷ್ಠೆಯನ್ನು ಅವಲಂಬಿಸಿದನು. ಇಂದ್ರನು ಮುನಿಯ ಈ ನಿಶ್ಚಯವನ್ನು ತಿಳಿದು ತನ್ನ ನಿಜಮೂರ್ತಿಯನ್ನು ಧರಿಸಿ ಬಂದು ಮುನಿಗೆ ಹೇಳಿದನು.

೫೫. ಎಲೈ ಮುನಿವರ್ಯ! ತತ್ತ್ವಜ್ಞ! ಸಮಾಧಿಯಿಂದ ಎಚ್ಚರಹೊಂದು. ಬುದ್ಧಿಪೂರ್ವಕವಾಗಿ ಮುಂದಿನ ವ್ಯವಹಾರವನ್ನು ನಡೆಯಿಸು. ನಿಷ್ಕಲಂಕನೆ! ನಾನು ನಿನ್ನನ್ನು ಪರೀಕ್ಷಿಸಲು ಬಂದು ಈ ಅಪರಾಧ ಮಾಡಿರುವೆನು.

ತತ್ ಕ್ಷಮಸ್ವಾಮಲಮತೇ ಕಾ ಚೇಚ್ಛಾ ಕ್ರಿಯತಾಂ ತವ ।
ಪಾಲನಾತ್ಸತ್ಯವಾಕ್ಯಸ್ಯ ಪ್ರೀತಿರ್ಮೇ ಪರಮಾ ತ್ವಯಿ ॥೫೬॥

ಅದ್ಯಪ್ರಭೃತಿ ತೇ ಜ್ಞಾನಮೈಂದ್ರಂ ಪ್ರಾದುರ್ಭವಿಷ್ಯತಿ ।
ತಪಸ್ಯಥ ತಥಾ ಧರ್ಮೇ ನ ತೇ ವಿಘ್ನೋ ಭವಿಷ್ಯತಿ ॥೫೭॥

ಇತ್ಯುಕ್ತ್ವಾ ತು ಗತೇ ಶಕ್ರೇ ಪಿತಾ ಕೋಪಸಮನ್ವಿತಃ ।
ಪ್ರಣಮ್ಯ ಶಿರಸಾಸ್ಮಾಭಿರಿದಮುಕ್ತೋ ಮಹಾಮುನಿಃ ॥೫೮॥

ಬಿಭ್ಯತಾಂ ಮರಣಾತ್ತಾತ ತ್ವಮಸ್ಮಾಕಂ ಮಹಾಮತೇ ।
ಕ್ಷಂತುಮರ್ಹಸಿ ದೀನಾನಾಂ ಜೀವಿತಪ್ರಿಯತಾ ಹಿ ನಃ ॥೫೯॥

---

೫೬. ನಿರ್ಮಲವಾದ ಬುದ್ಧಿಯುಳ್ಳ ಮುನಿಯೆ! ನನ್ನ ಅಪರಾಧ-ವನ್ನು ಕ್ಷಮಿಸು. ನಾನು ನಿನಗೆ ಏನು ಪ್ರಿಯವನ್ನು ಸಾಧಿಸಿಕೊಡಲಿ. ಸತ್ಯ-ವಾಕ್ಯವನ್ನು ಪಾಲಿಸಿದ್ದರಿಂದ ನನಗೆ ನಿನ್ನಲ್ಲಿ ಅತಿಶಯವಾದ ಪ್ರೀತಿಯುಂಟಾಗಿರುವುದು.

೫೭. ಇಂದಿನಿಂದ ನಿನಗೆ ಇಂದ್ರವಿದ್ಯಾಸಿದ್ಧಿಯು ಪ್ರಾದುರ್ಭವಿಸುವುದು. ಮತ್ತು ತಪಶ್ಚರ್ಯೆಯಲ್ಲಿಯೂ ಧರ್ಮಾನುಷ್ಠಾನದಲ್ಲಿಯೂ ನಿನಗೆ ಅಡ್ಡಿಯು ಸಂಭವಿಸುವುದಿಲ್ಲ.

೫೮. ಹೀಗೆಂದು ಹೇಳಿ ದೇವೇಂದ್ರನು ಹೊರಟುಹೋಗಲಾಗಿ ನಾವು ಕೋಪಾವೇಶದಿಂದ ಕೂಡಿದ ಮಹಾಮುನಿಯಾದ ತಂದೆಯ ಬಳಿಗೆ ಹೋಗಿ ತಲೆಬಾಗಿಸಿ ನಮಸ್ಕಾರಮಾಡಿ ಹೇಳಿಕೊಂಡೆವು.

೫೯. ಸರ್ವಜ್ಞನಾದ ತಂದೆಯೆ! ಮೃತ್ಯುವಿಗೆ ಭಯಪಟ್ಟ ನಮ್ಮ ಅಪರಾಧವನ್ನು ಮನ್ನಿಸಬೇಕು. ದೀನರಾದ ನಮಗೆ ಬದುಕಿನ ಆಶೆಯು ಅತಿಯಾಗಿ ಆವರಿಸಿದೆ.

ತ್ವಗಸ್ಥಿಮಾಂಸಸಂಘಾತೇ ಪೂಯಶೋಣಿತಪೂರಿತೇ ।
ಕರ್ತವ್ಯಾ ನ ರತಿರ್ಯತ್ರ ತತ್ರಾಸ್ಮಾಕಮಿಯಂ ರತಿಃ ॥೬೦॥

ಶ್ರೂಯತಾಂ ಚ ಮಹಾಭಾಗ ಯಥಾ ಲೋಕೋ ವಿಮುಹ್ಯತಿ ।
ಕಾಮಕ್ರೋಧಾದಿಭಿರ್ದೋಷೈರವಶಃ ಪ್ರಬಲಾರಿಭಿಃ ॥೬೧॥

ಪ್ರಜ್ಞಾಪ್ರಾಕಾರಸಂಯುಕ್ತಮಸ್ಥಿಸ್ಥೂಣಂ ಪರಂ ಮಹತ್ ।
ಚರ್ಮಭಿತ್ತಿಮಹಾರೋಧಂ ಮಾಂಸಶೋಣಿತಲೇಪನಮ್ ॥೬೨॥

ನವದ್ವಾರಂ ಮಹಾಯಾಸಂ ಸರ್ವತಃ ಸ್ನಾಯುವೇಷ್ಟಿತಮ್ ।
ನೃಪಶ್ಚ ಪುರುಷಸ್ತತ್ರ ಚೇತನಾವಾನವಸ್ಥಿತಃ ॥೬೩॥

---

೬೦. ಚರ್ಮ-ಮೂಳೆ-ಮಾಂಸಗಳ ರಾಶಿಯಾದ ಮತ್ತು ಕೀವು-ರಕ್ತ-ಗಳಿಂದ ತುಂಬಿದ ಯಾವ ದೇಹದಲ್ಲಿ ಪ್ರೀತಿಯನ್ನು ಇರಿಸಬಾರದೋ ಅದೇ ದೇಹದಲ್ಲಿ ನಮಗೆ ಅತ್ಯಾಶೆಯು ಉದಯಿಸಿದೆ.

೬೧. ಮಹಾತ್ಮನೆ! ಅಜ್ಞಾನಿಯು ಪ್ರಬಲ ಶತ್ರುಗಳಂತಿರುವ ಕಾಮ-ಕ್ರೋಧ ಮುಂತಾದ ದೋಷಗಳಿಂದ ಪರತಂತ್ರನಾಗಿ ಹೇಗೆ ಮೋಹಹೊಂದುವನೋ, ಆ ಬಗೆಯು ಕೇಳಲ್ಪಡಲಿ.

೬೨. ಪ್ರಜ್ಞೆಯೆಂಬ ಪ್ರಾಕಾರ, ಎಲುಬುಗಳೆಂಬ ಕಂಬ, ಚರ್ಮವೆಂಬ ಗೋಡೆಯ ಆವರಣ ಮತ್ತು ರಕ್ತ-ಮಾಂಸಗಳೆಂಬ ಗಾರೆಗಿಲಾವುಗಳಿಂದ ಕೂಡಿದ ಈ ದೇಹವು ಒಂದು ಮಹಾನಗರ ರೂಪವಾದುದು.

೬೩. ನವರಂಧ್ರಗಳೆಂಬ ನವದ್ವಾರಗಳಿಂದ ಕೂಡಿರುವುದೂ, ಮಹಾ-ಯಾಸದಿಂದ ನಿರ್ಮಿಸಲ್ಪಟ್ಟಿರುವುದೂ ಮತ್ತು ಸುತ್ತಲೂ ಸ್ನಾಯುಧಾತುವಿನ ವೇಷ್ಟನವುಳ್ಳದ್ದೂ ಆದ ದೇಹವೆಂಬ ಪುರದಲ್ಲಿ ಜ್ಞಾನಶಕ್ತಿಯಿಂದ ಕೂಡಿದ ಜೀವಾತ್ಮನು ರಾಜನಾಗಿ ಆಳುತ್ತಿರುವನು.

ಮನ್ತ್ರಿಣೌ ತಸ್ಯ ಬುದ್ಧಿಶ್ಚ ಮನಶ್ಚೈವ ವಿರೋಧಿನೌ ।
ಯತೇತೇ ವೈರನಾಶಾಯ ತಾವುಭಾವಿತರೇತರಮ್ ॥೬೪॥

ನೃಪಸ್ಯ ತಸ್ಯ ಚತ್ವಾರೋ ನಾಶಮಿಚ್ಛನ್ತಿ ವಿದ್ವಿಷಃ ।
ಕಾಮಃ ಕ್ರೋಧಸ್ತಥಾ ಮೋಹೋ ಲೋಭಶ್ಚಾನ್ಯಸ್ತಥಾರಿಪುಃ॥೬೫॥

ಯದಾ ತು ಸ ನೃಪಸ್ತಾನಿ ದ್ವಾರಾಣ್ಯಾವೃತ್ಯ ತಿಷ್ಠತಿ ।
ಸದಾ ಸುಸ್ಥಬಲಶ್ಚೈವ ನಿರಾತಙ್ಕಶ್ಚ ಜಾಯತೇ ॥೬೬॥

ಜಾತಾನುರಾಗೋ ಭವತಿ ಶತ್ರುಭಿರ್ನಾಭಿಭೂಯತೇ ॥೬೭॥

ಯದಾ ತು ಸರ್ವದ್ವಾರಾಣಿ ವಿವೃತಾನಿ ಸ ಮುಞ್ಚತಿ ।
ರಾಗೋ ನಾಮ ತದಾ ಶತ್ರುರ್ನೇತ್ರಾದಿದ್ವಾರಮೃಚ್ಛತಿ ॥೬೮॥

---

೬೪. ಆ ರಾಜನ ಶ್ರೇಯೋಮಾರ್ಗಕ್ಕೆ ವಿರೋಧಿಗಳಾದ ಮನಸ್ಸು ಮತ್ತು ಬುದ್ಧಿ ಎಂಬ ಇಬ್ಬರು ಮಂತ್ರಿಗಳು ಇರುವರು. ಅವರಿಬ್ಬರು ಅನ್ಯೋನ್ಯವಾಗಿ ವೈರವನ್ನು ಬಿಡಲು ಯತ್ನಿಸುವರು.

೬೫. ಕಾಮ-ಕ್ರೋಧ-ಲೋಭ ಮತ್ತು ನಾಲ್ಕನೆಯ ಶತ್ರುವಾದ ಮೋಹ—ಈ ನಾಲ್ಕು ಮಂದಿ ಶತ್ರುಗಳು ಆ ರಾಜನ ನಾಶವನ್ನು ಬಯಸುತ್ತಿರುವರು.

೬೬. ರಾಜನು ಯಾವಾಗ ಆ ನವದ್ವಾರಗಳನ್ನು ಮುಚ್ಚಿ ಜಾಗರೂಕತೆಯಿಂದ ವರ್ತಿಸುವನೊ; ಆಗ ಸ್ವಸ್ಥವಾದ ಬಲವುಳ್ಳವನೂ ನಿರಾತಂಕನೂ ಆಗಿರುವನು.

೬೭. ಮತ್ತು ಹುಟ್ಟಿದ ಶಾಂತಿಸುಖವುಳ್ಳವನಾಗಿರುವನು. ಶತ್ರುಗಳಿಂದ ಅಪಜಯವನ್ನು ಎಂದೂ ಹೊಂದುವುದಿಲ್ಲ.

೬೮. ರಾಜನು ಯಾವಾಗ ಎಲ್ಲ ದ್ವಾರಗಳನ್ನೂ ತೆರೆದುಬಿಡುವನೊ ; ಆಗ ರಾಗ ಎಂಬ ಶತ್ರುವು ಕಣ್ಣು ಮುಂತಾದ ಇಂದ್ರಿಯದ್ವಾರದಿಂದ ನುಗ್ಗುವನು.

ಸರ್ವವ್ಯಾಪೀ ಮಹಾಯಾಮಃ ಪಞ್ಚದ್ವಾರಪ್ರವೇಶನಃ ।
ತಸ್ಯಾನುಮಾರ್ಗಂ ವಿಶತಿ ತದ್ವೈ ಘೋರಂ ರಿಪುತ್ರಯಮ್ ॥೧೯॥

ಪ್ರವಿಶ್ಯಾಥ ಸ ವೈ ತತ್ರ ದ್ವಾರೈರಿನ್ದ್ರಿಯಸಂಜ್ಞಕೈಃ ।
ರಾಗಃ ಸಂಶ್ಲೇಷಮಾಯಾತಿ ಮನಸಾ ಚ ಸಹೇತರೈಃ ॥೨೦॥

ಇನ್ದ್ರಿಯಾಣಿ ಮನಶ್ಚೈವ ವಶೇ ಕೃತ್ವಾ ದುರಾಸದಃ ।
ದ್ವಾರಾಣಿ ಚ ವಶೇ ಕೃತ್ವಾ ಪ್ರಾಕಾರಂ ನಾಶಯತ್ಯಥ ॥೨೧॥

ಮನಸ್ತಸ್ಯಾಶ್ರಿತಂ ದೃಷ್ಟ್ವಾ ಬುದ್ಧಿರ್ನಶ್ಯತಿ ತತ್ಕ್ಷಣಾತ್ ॥೨೨॥

ಅಮಾತ್ಯರಹಿತಸ್ತತ್ರ ಪೌರವರ್ಗೋಜ್ಝಿತಸ್ತಥಾ ।
ರಿಪುಭಿರ್ಲಬ್ಧವಿವರಃ ಸ ನೃಪೋ ನಾಶಮಿಚ್ಛತಿ ॥೨೩॥

---

೧೯. ಪಂಚೇಂದ್ರಿಯಗಳೆಂಬ ಪ್ರವೇಶ ದ್ವಾರವುಳ್ಳವನೂ, ಮಹಾಕಾರನೂ ಮತ್ತು ಸರ್ವವ್ಯಾಪಿಯೂ ಆದ ರಾಗ ಶತ್ರುವನ್ನು ಹಿಂಬಾಲಿಸಿ ಉಗ್ರರಾದ ಮೂರುಮಂದಿ ಶತ್ರುಗಳು ಪುರವನ್ನು ಪ್ರವೇಶಿಸುವರು.

೨೦. ರಾಗವೆಂಬ ಶತ್ರುವು ಇಂದ್ರಿಯರೂಪವಾದ ದ್ವಾರಗಳಿಂದ ಒಳಗೆ ಪ್ರವೇಶಮಾಡಿದ ತರುವಾಯ ಕ್ರೋಧ ಮುಂತಾದ ಇತರ ಶತ್ರುಗಳೊಡನೆ ಮನಸ್ಸಿನ ಸಂಪರ್ಕವನ್ನು ಹೊಂದುವುದು.

೨೧. ಆ ಮೇಲೆ ಹಿಮ್ಮೆಟ್ಟಿಸಲಾಗದ ರಾಗ ಶತ್ರುವು ಕ್ರಮವಾಗಿ ಇಂದ್ರಿಯಗಳನ್ನೂ ಮತ್ತು ಮನಸ್ಸನ್ನೂ ವಶಮಾಡಿಕೊಂಡು ಎಲ್ಲ ದ್ವಾರಗಳನ್ನೂ ತಾನು ಆಕ್ರಮಿಸಿ ಪ್ರಜ್ಞಾಪ್ರಾಕಾರವನ್ನು ಭಂಗಗೊಳಿಸುವುದು.

೨೨. ಮನಸ್ಸೆಂಬ ಮಂತ್ರಿಯು ರಾಗಶತ್ರುವಿನ ಅಧೀನವಾದುದನ್ನು ನೋಡಿ ಬುದ್ಧಿ ಎಂಬ ಎರಡನೆಯ ಮಂತ್ರಿಯು ಆ ಕ್ಷಣದಲ್ಲಿಯೇ ನಾಶಹೊಂದುವನು.

೨೩. ಈ ರೀತಿಯಾಗಿ ಅಮಾತ್ಯರನ್ನು ಕಳೆದುಕೊಂಡು ಪೌರವರ್ಗದಿಂದಲೂ ತ್ಯಜಿಸಲ್ಪಟ್ಟ ರಾಜನು ಶತ್ರುಪ್ರವೇಶಕ್ಕೆ ಆಸ್ಪದವನ್ನು ಕೊಟ್ಟವನಾಗಿ ತಾನು ನಾಶವಾಗುವನು.

ಏವಂ ರಾಗಸ್ತಥಾ ಮೋಹೋ ಲೋಭಃ ಕ್ರೋಧಸ್ತಥೈವ ಚ ।
ಪ್ರವರ್ತನ್ತೇ ದುರಾತ್ಮಾನೋ ಮನುಷ್ಯಸ್ಮೃತಿನಾಶಕಾಃ ॥೭೪॥

ರಾಗಾತ್ಕ್ರೋಧಃ ಪ್ರಭವತಿ ಕ್ರೋಧಾಲ್ಲೋಭೋಽಭಿಜಾಯತೇ ।
ಲೋಭಾದ್ಭವತಿ ಸಂಮೋಹಸ್ಸಂಮೋಹಾತ್ಸ್ಮೃತಿವಿಭ್ರಮಃ ॥೭೫॥

ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ॥೭೬॥

ಏವಂ ಪ್ರಣಷ್ಟಬುದ್ಧೀನಾಂ ರಾಗಲೋಭಾನುವರ್ತಿನಾಮ್ ।
ಜೀವಿತೇ ಚ ಸಲೋಭಾನಾಂ ಪ್ರಸಾದಂ ಕುರು ಸತ್ತಮ ॥೭೭॥

ಯೋಽಯಂ ಶಾಪೋ ಭಗವತಾ ದತ್ತಃ ಸ ನ ಭವೇತ್ತಥಾ ।
ನ ತಾಮಸೀಂ ಗತಿಂ ಕಷ್ಟಾಂ ವ್ರಜೇಮ ಮುನಿಸತ್ತಮ ॥೭೮॥

---

೭೪. ಹೀಗೆ ರಾಗ, ಮೋಹ, ಲೋಭ ಮತ್ತು ಕ್ರೋಧ ಎಂಬ ನಾಲ್ಕು ಮಂದಿ ಮಾನವನ ಸ್ಮೃತಿಯನ್ನು ನಾಶಮಾಡುವ ನೀಚಾತ್ಮರಾದ ಶತ್ರುಗಳು ತಮ್ಮ ಕರ್ತವ್ಯವನ್ನು ಈಡೇರಿಸುತ್ತಾರೆ.

೭೫. ರಾಗದಿಂದ ಕೋಪವುಂಟಾಗುವುದು; ಅತಿಶಯವಾದ ಕೋಪದಿಂದ ಲೋಭವು ಹುಟ್ಟುತ್ತದೆ; ಲೋಭದಿಂದ ಮೋಹವು ಜನಿಸುವುದು. ಹಾಗು ಮೋಹದಿಂದ ಸ್ಮೃತಿಯು ಭಂಗಹೊಂದುವುದು.

೭೬. ರಾಗಾದಿ ಶತ್ರುಗಳ ಉತ್ಕರ್ಷದ ಪರಿಣಾಮವಾಗಿ ಸ್ಮೃತಿಭಂಗದಿಂದ ಬುದ್ಧಿಯು ನಾಶವಾಗಿ ಮಾನವನು ಪುರುಷಾರ್ಥವನ್ನು ಆರ್ಜಿಸುವ ಶಕ್ತಿಯನ್ನು ಕಳೆದುಕೊಂಡು ನಾಶವಾಗುವನು.

೭೭. ಸಾಧೂತ್ತಮನೆ! ಈರೀತಿಯಾಗಿ ನಷ್ಟವಾದ ಬುದ್ಧಿಯುಳ್ಳವರೂ, ರಾಗ, ಲೋಭಾದಿ ಶತ್ರುಗಳನ್ನು ಅನುವರ್ತಿಸುವವರೂ ಮತ್ತು ಬದುಕಿನಲ್ಲಿ ವಿಶೇಷವಾದ ಆಸೆಯನ್ನು ಹೊಂದಿರುವವರೂ ಆದ ನಮ್ಮಲ್ಲಿ ಅನುಗ್ರಹವನ್ನು ತೋರು.

೭೮. ಪೂಜ್ಯನಾದ ನಿನ್ನಿಂದ ನಮಗೆ ಕೊಡಲ್ಪಟ್ಟ ಶಾಪವು ನಿನ್ನ ಅನುಗ್ರಹದಿಂದ ಫಲಿಸದಂತೆ ಆಗಲಿ. ಎಲೈ ಮುನಿಶ್ರೇಷ್ಠನೆ! ತಮೋಗುಣದ ವ್ಯಾಪ್ತಿಯಿಂದ ಕ್ಲೇಶವನ್ನು ಉಂಟುಮಾಡುವ ಮೂಕಪ್ರಾಣಿಯೋನಿಯಲ್ಲಿ ನಾವು ಹುಟ್ಟುವುದು ಬೇಡ.

ಋಷಿರುವಾಚ :—

ಯನ್ಮಯೋಕ್ತಂ ನ ತನ್ಮಿಥ್ಯಾ ಭವಿಷ್ಯತಿ ಕದಾಚನ ।
ನ ಮೇ ವಾಗನೃತಂ ಪ್ರಾಹ ಯಾವದದ್ಯೇತಿ ಪುತ್ರಕಾಃ ॥೭೯॥

ದೈವಮಾತ್ರಂ ಪರಂ ಮನ್ಯೇ ಧಿಕ್ಪೌರುಷಮನರ್ಥಕಮ್ ।
ಅಕಾರ್ಯಂ ಕಾರಿತೋ ಯೇನ ಬಲಾದಹಮಚಿನ್ತಿತಮ್ ॥೮೦॥

ಯಸ್ಮಾಚ್ಚ ಯುಷ್ಮಾಭಿರಹಂ ಪ್ರಣಿಪತ್ಯ ಪ್ರಸಾದಿತಃ ।
ತಸ್ಮಾತ್ತಿರ್ಯಕ್ತ್ವಮಾಪನ್ನಾಃ ಪರಂ ಜ್ಞಾನಮವಾಪ್ಸ್ಯಥ ॥೮೧॥

ಜ್ಞಾನದರ್ಶಿತಮಾರ್ಗಾಶ್ಚ ನಿರ್ಧೂತಕ್ಲೇಶಕಲ್ಮಷಾಃ ।
ಮತ್ಪ್ರಸಾದಾದಸನ್ದಿಗ್ಧಾಃ ಪರಾಂ ಸಿದ್ಧಿಮವಾಪ್ಸ್ಯಥ ॥೮೨॥

ಮಹರ್ಷಿಯು ಇಂತೆಂದನು :—

೭೯. ಪುತ್ರರೆ! ನಾನು ನುಡಿದಿರುವ ಮಾತು ಎಂದಿಗೂ ಮಿಥ್ಯೆಯಾಗತಕ್ಕುದಲ್ಲ. ಇಂದಿನವರೆಗೂ ನನ್ನ ವಾಗಿಂದ್ರಿಯವು ಅನೃತವಚನವನ್ನು ಉಚ್ಚಾರಮಾಡಲಿಲ್ಲ.

೮೦. ಈ ಪ್ರಸಂಗದಲ್ಲಿ ದೈವವೇ ದೊಡ್ಡದೆಂದು ನಾನು ಅರಿತಿದ್ದೇನೆ. ವ್ಯರ್ಥವಾದ ಪೌರುಷಕ್ಕೆ ಧಿಕ್ಕಾರವು. ಪ್ರಬಲವಾದ ದೈವದಿಂದ ಬಲಾತ್ಕಾರವಾಗಿ ನಾನು ಇಂತಹ ಯೋಚಿಸಲಾಗದ ಅಕಾರ್ಯವನ್ನು ಮಾಡಿದವನಾದೆನು.

೮೧. ಯಾವ ಕಾರಣ ನೀವು ನನ್ನನ್ನು ಭಕ್ತಿಯಿಂದ ನಮಸ್ಕರಿಸಿ ಒಲಿಸಿಕೊಂಡಿರೊ, ಅದರಿಂದ ಮೂಕಪ್ರಾಣಿಜನ್ಮವನ್ನು ಎತ್ತಿದ ನಿಮಗೆ ಉತ್ತಮವಾದ ಜ್ಞಾನವುಂಟಾಗುವಂತೆ ಅನುಗ್ರಹಿಸಿರುವೆನು.

೮೨. ಜ್ಞಾನದಿಂದ ಪ್ರಕಾಶಿಸಿದ ಕರ್ತವ್ಯವುಳ್ಳವರೂ, ಕರ್ಮಾನುಷ್ಠಾನದಿಂದ ಕ್ಲೇಶ-ಪಾಪಗಳನ್ನು ಕಳೆದುಕೊಂಡವರೂ ಆದ ನೀವು ನನ್ನ ಅನುಗ್ರಹದಿಂದ ನಿಸ್ಸಂಶಯವಾಗಿ ಉತ್ತಮವಾದ ಸಿದ್ಧಿಯನ್ನು ಹೊಂದುಪಿರಿ.

ಏವಂ ಶಪ್ತಾಃ ಸ್ಮ ಭಗವನ್ ಪಿತ್ರಾ ದೈವವಶಾತ್ ಪುರಾ ।
ತತಃ ಕಾಲೇನ ಮಹತಾ ಯೋನ್ಯನ್ತರಮುಪಾಗತಾಃ ॥೮೩॥

ಜಾತಾಶ್ಚ ರಣಮಧ್ಯೇ ವೈ ಭವತಾ ಪರಿಪಾಲಿತಾಃ ।
ವಯಮಿತ್ಥಂ ದ್ವಿಜಶ್ರೇಷ್ಠ ಖಗತ್ವಂ ಸಮುಪಾಗತಾಃ ॥೮೪॥

ನಾಸ್ತ್ಯಸಾವಿಹ ಸಂಸಾರೇ ಯೋ ನ ದಿಷ್ಟೇನ ಬಾಧ್ಯತೇ ।
ಸರ್ವೇಷಾಮೇವ ಜನ್ತೂನಾಂ ದೈವಾಧೀನಂ ಹಿ ಚೇಷ್ಟಿತಮ್ ॥೮೫॥

ಮಾರ್ಕಣ್ಡೇಯ ಉವಾಚ :—

ಇತಿ ತೇಷಾಂ ವಚಃ ಶ್ರುತ್ವಾ ಶಮೀಕೋ ಭಗವಾನ್ಮುನಿಃ ।
ಪ್ರತ್ಯುವಾಚ ಮಹಾಭಾಗಃ ಸಮೀಪಸ್ಥಾಯಿನೋ ದ್ವಿಜಾನ್ ॥೮೬॥

---

೮೩. ಪೂಜ್ಯನೆ! ಹಿಂದೆ ನಾವು ದುರ್ದೈವವಿಲಾಸದಿಂದ ತಂದೆಯಿಂದ ಈರೀತಿಯಾಗಿ ಶಪಿಸಲ್ಪಟ್ಟೆವು. ತರುವಾಯ ದೀರ್ಘಕಾಲವು ಕಳೆಯಲಾಗಿ ಪಕ್ಷಿಜನ್ಮವನ್ನು ತಾಳಿದೆವು.

೮೪. ದ್ವಿಜೋತ್ತಮನೆ! ರಣರಂಗದ ಮಧ್ಯದಲ್ಲಿ ಜನ್ಮವೆತ್ತಿದ ನಾವು ನಿನ್ನಿಂದ ಪಾಲಿಸಲ್ಪಟ್ಟೆವು. ಈರೀತಿಯಾಗಿ ಮಾನವಜನ್ಮವನ್ನು ಬಿಟ್ಟು ನಾವು ಪಕ್ಷಿರೂಪವನ್ನು ಹೊಂದಿದೆವು.

೮೫. ಈ ಸಂಸಾರದಲ್ಲಿ ದುರ್ದೈವದಿಂದ ಪೀಡಿಸಲ್ಪಡದ ಜಂತುವು ಯಾವುದೂ ಇಲ್ಲ. ಪ್ರಾಣಿಗಳ ಪ್ರವೃತ್ತಿಯು ದೈವವನ್ನುಲ್ಲಂಘಿಸದೆ ನಡೆಯುವುದು.

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು:—

೮೬. ಮಹಾಭಾಗ್ಯವಂತನೂ ಪೂಜ್ಯನೂ ಆದ ಶಮೀಕಮುನಿಯು ಪಕ್ಷಿಗಳು ನುಡಿದ ಮಾತನ್ನು ಕೇಳಿ ತನ್ನ ಹತ್ತಿರವಿರುವ ದ್ವಿಜರನ್ನು ಕುರಿತು ಈ ರೀತಿಯಾಗಿ ಉತ್ತರವಿತ್ತನು.

ಪೂರ್ವಮೇವ ಮಯಾ ಪ್ರೋಕ್ತಂ ಭವತಾಂ ಸನ್ನಿಧಾವಿದಮ್॥೮೭॥

ಸಾಮಾನ್ಯಪಕ್ಷಿಣೋ ನೈತೇ ಕೇಽಪ್ಯೇತೇ ದ್ವಿಜಸತ್ತಮಾಃ।
ಯೇ ಯುದ್ಧೇಽಪಿ ನ ಸಂಪ್ರಾಪ್ತಾಃ ಪಞ್ಚತ್ವಮತಿಮಾನುಷೇ ॥೮೮॥

ತತಃ ಪ್ರೀತಿಮತಾ ತೇನ ತೇಽನುಜ್ಞಾತಾ ಮಹಾತ್ಮನಾ।
ಜಗ್ಮುಃ ಶಿಖರಿಣಾಂ ಶ್ರೇಷ್ಠಂ ವಿನ್ಧ್ಯಂ ದ್ರುಮಲತಾಯುತಮ್ ॥೮೯॥

ಯಾವದದ್ಯ ಸ್ಥಿತಾಸ್ತಸ್ಮಿನ್ನಚಲೇ ಧರ್ಮಪಕ್ಷಿಣಃ।
ತಪಃಸ್ವಾಧ್ಯಾಯನಿರತಾಃ ಸಮಾಧೌ ಕೃತನಿಶ್ಚಯಾಃ ॥೯೦॥

---

೮೭. ನಾನು ಈ ಪಕ್ಷಿಗಳನ್ನು ಕಂಡ ಕೂಡಲೆ ಇವುಗಳ ವಿಷಯದಲ್ಲಿ ನಿಮಗೆ ಹೇಳಿರುವೆನಷ್ಟೆ.

೮೮. ಮಾನವಯುದ್ಧವನ್ನು ಮೀರಿಸಿ ಅತಿಭಯಂಕರವಾದ ಯುದ್ಧದಲ್ಲಿ ಮಡಿಯದಿರುವ ಈ ಪಕ್ಷಿಗಳು ಸಾಮಾನ್ಯಪಕ್ಷಿಗಳೆಂದು ಭಾವಿಸಲಾಗದು. ಯಾರೊ ಮಹಾತ್ಮರಾದ ದ್ವಿಜರು ಈ ರೂಪದಿಂದ ಇರುವರು.

೮೯. ತರುವಾಯ ಮಹಾತ್ಮನಾದ ಆ ಶಮೀಕಮುನಿಯಿಂದ ಪ್ರೀತಿಪೂರ್ವಕವಾಗಿ ಅನುಮತಿಯನ್ನು ಹೊಂದಿ ಆ ಪಕ್ಷಿಗಳು ಅನೇಕ ವೃಕ್ಷಗಳಿಂದಲೂ, ಲತೆಗಳಿಂದಲೂ ಶೋಭಾಯಮಾನವಾದ ಪರ್ವತೋತ್ತಮವಾದ ವಿಂಧ್ಯಗಿರಿಗೆ ಹೋದುವು.

೯೦. ಆ ಧರ್ಮಪಕ್ಷಿಗಳು ತಪಸ್ಸು, ಸ್ವಾಧ್ಯಾಯ ಇವುಗಳಲ್ಲಿಯೂ ಮತ್ತು ಯೋಗಾಭ್ಯಾಸದಲ್ಲಿಯೂ ಆಸಕ್ತಿ ಹೊಂದಿದ ಬುದ್ಧಿಯುಳ್ಳವುಗಳಾಗಿ ಇದುವರೆಗೂ ಆ ವಿಂಧ್ಯಪರ್ವತದಲ್ಲಿ ವಾಸಮಾಡಿಕೊಂಡಿವೆ.

ಇತಿ ಮುನಿವರಲಬ್ಧಸತ್ಕ್ರಿಯಾಸ್ತೇ
ಮುನಿತನಯಾ ವಿಹಗತ್ವಮಭ್ಯುಪೇತಾಃ ।
ಗಿರಿವರಗಹನೇಽತಿಪುಣ್ಯತೋಯೇ
ಯತಮನಸೋ ನಿವಸನ್ತಿ ವಿನ್ಧ್ಯಪೃಷ್ಠೇ ॥೯೦॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ವಿನ್ಧ್ಯಪ್ರಾಪ್ತಿಕಥನಂ ನಾಮ ತೃತೀಯೋಽಧ್ಯಾಯಃ

---

೯೧. ಈ ರೀತಿಯಾಗಿ ಶಮೀಕಮುನಿಯಿಂದ ಹೊಂದಿದ ಶ್ರೇಷ್ಠವಾದ ಸತ್ಕಾರವುಳ್ಳ, ಶಾಪದಿಂದ ಪಕ್ಷಿಜನ್ಮವನ್ನು ಹೊಂದಿದ ಸುಕೃಷಮುನಿಯ ನಾಲ್ವರು ಪುತ್ರರು ಪವಿತ್ರವಾದ ತೀರ್ಥೋದಕವುಳ್ಳ ವಿಂಧ್ಯಗಿರಿ ಶಿಖರದಲ್ಲಿರುವ ಗಹನವಾದ ಅರಣ್ಯದಲ್ಲಿ ಜಿತೇಂದ್ರಿಯಗಳಾಗಿ ವಾಸಮಾಡುತ್ತಿವೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುರ್ಥೋಽಧ್ಯಾಯಃ

(ಧರ್ಮಪಕ್ಷಿಭಿಃ ಚತುರ್ವ್ಯೂಹಕಥನಮ್)

ಮಾರ್ಕಣ್ಡೇಯ ಉವಾಚ :—

ಏವಂ ತೇ ದ್ರೋಣತನಯಾಃ ಪಕ್ಷಿಣೋ ಜ್ಞಾನಿನೋಽಭವನ್ ।
ವಸನ್ತಿ ಹ್ಯಚಲೇ ವಿನ್ಧ್ಯೇ ತಾನುಪಾಸ್ಯ ಚ ಪೃಚ್ಛ ಚ ॥೧॥

ಇತ್ಯೃಷೇರ್ವಚನಂ ಶ್ರುತ್ವಾ ಮಾರ್ಕಣ್ಡೇಯಸ್ಯ ಜೈಮಿನಿಃ ।
ಜಗಾಮ ವಿನ್ಧ್ಯಶಿಖರಂ ಯತ್ರ ತೇ ಧರ್ಮಪಕ್ಷಿಣಃ ॥೨॥

ತನ್ನಗಾಸನ್ನಭೂತಶ್ಚ ಶುಶ್ರಾವ ಪಠತಾಂ ಧ್ವನಿಮ್ ।
ಶ್ರುತ್ವಾ ಚ ವಿಸ್ಮಯಾವಿಷ್ಟಶ್ಚಿನ್ತಯಾಮಾಸ ಜೈಮಿನಿಃ ॥೩॥

ನಾಲ್ಕನೆಯ ಅಧ್ಯಾಯವು

ಮಾರ್ಕಂಡೇಯ ಮುನಿಯು ಇಂತೆಂದನು :—

೧. ದ್ರೋಣಮುನಿಯ ಪುತ್ರರಾದ ಆ ಪಕ್ಷಿಗಳು ಈ ಕಾರಣದಿಂದ ಜ್ಞಾನಿಗಳಾಗಿರುವರು. ಅವು ವಿಂಧ್ಯಪರ್ವತದಲ್ಲಿ ವಾಸಮಾಡಿಕೊಂಡಿವೆ. ನೀನು ಅವುಗಳನ್ನು ಸೇವಿಸಿ ಈ ಸಂಶಯಗಳನ್ನು ಪ್ರಶ್ನಿಸು.

೨. ಜೈಮಿನಿಮುನಿಯು ಮಾರ್ಕಂಡೇಯ ಮಹರ್ಷಿಯ ಈ ಮಾತನ್ನು ಕೇಳಿ ಧರ್ಮಪಕ್ಷಿಗಳು ವಾಸಮಾಡಿಕೊಂಡಿರುವ ವಿಂಧ್ಯಗಿರಿಯ ಶಿಖರಕ್ಕೆ ತೆರಳಿದನು.

೩. ವಿಂಧ್ಯಪರ್ವತದ ಸಮೀಪವನ್ನು ಹೊಂದಿದ ಜೈಮಿನಿಮುನಿಯು ವೇದವನ್ನು ಪಠಿಸುತ್ತಿದ್ದ ಪಕ್ಷಿಗಳ ಧ್ವನಿಯನ್ನು ಕೇಳಿ ವಿಸ್ಮಯಗೊಂಡವನಾಗಿ ಈ ರೀತಿಯಾಗಿ ಚಿಂತಿಸತೊಡಗಿದನು.

ಸ್ಥಾನಸೌಷ್ಠವಸಂಪನ್ನಂ ಜಿತಶ್ವಾಸಮವಿಶ್ರಮಮ್ ।
ವಿಸ್ಪಷ್ಟಮಪದೋಷಂ ಚ ಪಠ್ಯತೇ ದ್ವಿಜಸತ್ತಮೈಃ ॥೪॥

ವಿಯೋನಿಮಪಿ ಸಂಪ್ರಾಪ್ತಾನೇತಾನ್ಮುನಿಕುಮಾರಕಾನ್ ।
ಚಿತ್ರಮೇತದಹಂ ಮನ್ಯೇ ನ ಜಹಾತಿ ಸರಸ್ವತೀ ॥೫॥

ಬನ್ಧುವರ್ಗಸ್ತಥಾ ಮಿತ್ರಂ ಯಚ್ಚೇಷ್ಟಮಪರಂ ಗೃಹೇ ।
ತ್ಯಕ್ತ್ವಾ ಗಚ್ಛತಿ ತತ್ಸರ್ವಂ ನ ಜಹಾತಿ ಸರಸ್ವತೀ ॥೬॥

ಇತಿ ಸಂಚಿನ್ತಯನ್ನೇವ ವಿವೇಶ ಗಿರಿಕನ್ದರಮ್ ।
ಪ್ರವಿಶ್ಯ ಚ ದದರ್ಶಾಸೌ ಶಿಲಾಪಟ್ಟಗತಾನ್ ದ್ವಿಜಾನ್ ॥೭॥

ಪಠತಸ್ತಾನ್ ಸಮಾಲೋಕ್ಯ ಮುಖದೋಷವಿವರ್ಜಿತಾನ್ ।
ಸೋಽಥ ಶೋಕೇನ ಹರ್ಷೇಣ ಸರ್ವಾನೇವಾಭ್ಯಭಾಷತ ॥೮॥

---

೪. ಈ ಶ್ರೇಷ್ಠವಾದ ಪಕ್ಷಿಗಳಿಂದ ಆಯಾಯ ಸ್ಥಾನಗಳಲ್ಲಿ ವರ್ಣಗಳು ಉತ್ಪತ್ತಿಯಾಗುವ ಸೌಷ್ಠವದಿಂದಲೂ, ಶ್ವಾಸಜಯದಿಂದಲೂ, ನಡುವೆ ವಿಶ್ರಮವಿಲ್ಲದ ರೀತಿಯಿಂದಲೂ ಮತ್ತು ದೋಷಗಳಿಲ್ಲದೆ ಸ್ಪಷ್ಟವಾಗಿ ಕೇಳಿಸುವ ಉಚ್ಚಾರಣೆಯಿಂದಲೂ ಕೂಡಿ ಮಧುರವಾಗಿ ಪಠಿಸಲ್ಪಡುತ್ತಿದೆ.

೫. ಪಕ್ಷಿಯೋನಿಯಲ್ಲಿ ಜನಿಸಿದ್ದರೂ ಈ ಮುನಿಕುಮಾರಕರನ್ನು ಈ ವಿಧವಾದ ದಿವ್ಯವಾಣಿಯು ಬಿಡದೇ ಇರುವುದನ್ನು ಅತ್ಯಾಶ್ಚರ್ಯವೆಂದು ಭಾವಿಸುವೆನು.

೬. ಬಂಧುಗಳ ಗುಂಪು, ಮಿತ್ರವರ್ಗ, ಅಥವಾ ಇನ್ನಾವುದಾದರೂ ಮನೆಯಲ್ಲಿ ಇರುವ ಇಷ್ಟವಸ್ತು ಇವೆಲ್ಲವೂ ದೇಹಾಂತರವನ್ನು ಹೊಂದುವಾಗ ಬಿಟ್ಟುಹೋಗುವುದು. ವಿದ್ಯೆಯು ಮಾತ್ರ ಬಿಡದೆ ಹಿಂಬಾಲಿಸುವುದು.

೭. ಈ ರೀತಿಯಾಗಿ ಯೋಚಿಸುತ್ತ ಪಕ್ಷಿಗಳಿದ್ದ ಬೆಟ್ಟದ ಗವಿಯನ್ನು ಪ್ರವೇಶಿಸಿದನು. ಜೈಮಿನಿಯು ಗವಿಯನ್ನು ಪ್ರವೇಶಿಸಿ ಶಿಲಾಫಲಕದಲ್ಲಿ ಕುಳಿ-ತಿದ್ದ ಪಕ್ಷಿಗಳನ್ನು ಕಂಡನು.

೮. ಏನೂ ಮುಖದೋಷವಿಲ್ಲದಂತೆ ವೇದವನ್ನು ಪಠಿಸುತ್ತಿದ್ದ ಆ ಪಕ್ಷಿಗಳನ್ನು ನೋಡಿ ಜೈಮಿನಿಯು ಶೋಕ-ಹರ್ಷಗಳಿಂದ ಕೂಡಿದವನಾಗಿ ಎಲ್ಲ ಪಕ್ಷಿಗಳನ್ನು ಕುರಿತು ಮಾತನಾಡಿದನು.

ಸ್ವಸ್ತ್ಯಸ್ತು ವೋ ದ್ವಿಜಶ್ರೇಷ್ಠಾ ಜೈಮಿನಿಂ ಮಾಂ ನಿಬೋಧತ ।
ವ್ಯಾಸಶಿಷ್ಯಮನುಪ್ರಾಪ್ತಂ ಭವತಾಂ ದರ್ಶನೋತ್ಸುಕಮ್ ॥೯॥

ಮನ್ಯುರ್ನ ಖಲು ಕರ್ತವ್ಯೋ ಯಚ್ಛಿತ್ರಾತೀವ ಮನ್ಯುನಾ ।
ಶಪ್ತಾಃ ಖಗತ್ವಮಾಪನ್ನಾಃ ಸರ್ವಥಾ ದಿಷ್ಟಮೇವ ತತ್ ॥೧೦॥

ಸ್ಫೀತದ್ರವ್ಯೇ ಕುಲೇ ಕೇಚಿಜ್ಜಾತಾಃ ಕಿಲ ಮನಸ್ವಿನಃ ।
ದ್ರವ್ಯನಾಶೇ ದ್ವಿಜೇನ್ದ್ರಾಸ್ತೇ ಶಬರೇಣ ಸುಸಾನ್ತ್ವಿತಾಃ ॥೧೧॥

ದತ್ವಾ ಯಾಚನ್ತಿ ಪುರುಷಾ ಹತ್ವಾ ಬಧ್ಯನ್ತಿ ಚಾಪರೇ ।
ಪಾತಯಿತ್ವಾ ಚ ಪಾತ್ಯನ್ತೇ ತ ಏವ ತಪಸಃ ಕ್ಷಯಾತ್ ॥೧೨॥

---

೯. ಪಕ್ಷಿಶ್ರೇಷ್ಠರೆ! ನಿಮಗೆ ಕಲ್ಯಾಣವಾಗಲಿ. ನನ್ನನ್ನು ಜೈಮಿನಿಯೆಂದು ತಿಳಿಯಿರಿ. ವ್ಯಾಸಮುನಿಯ ಶಿಷ್ಯನಾದ ನಾನು ನಿಮ್ಮ ದರ್ಶನದ ಕುತೂಹಲವುಳ್ಳವನಾಗಿ ಇಲ್ಲಿಗೆ ಬಂದಿರುವೆನು.

೧೦. ನೀವು ತಂದೆಯ ಕೋಪಕ್ಕೆ ಗುರಿಯಾಗಿ ತಂದೆಯಿಂದ ಶಪಿಸಲ್ಪಟ್ಟು ಹೀಗೆ ಪಕ್ಷಿರೂಪವನ್ನು ಹೊಂದಿರುವಿರಿ. ಇದಕ್ಕಾಗಿ ಮನಸ್ಸಿನಲ್ಲಿ ಶೋಕಪಡಲಾಗದು. ಇದು ದೈವವಿಲಾಸವೇ ಹೊರತು ಬೇರೆ ಅಲ್ಲ.

೧೧. ಸಮೃದ್ಧಿಯಾದ ಐಶ್ವರ್ಯವುಳ್ಳ ವಂಶದಲ್ಲಿ ಜನಿಸಿದ ಗಭೀರ ಸ್ವಭಾವವುಳ್ಳ ಕೆಲವರು ದ್ವಿಜೋತ್ತಮರು ದ್ರವ್ಯವು ನಾಶವಾಗಿ ಶೋಕಪಡುತ್ತಿದ್ದಾಗ ಅವರನ್ನು ಶಬರನು ಸಮಾಧಾನ ಮಾಡಿರುವನು.

೧೨. ತಪಸ್ಸಿನ ಬಲದಿಂದ ದಾನಮಾಡುತ್ತಿದ್ದವರು ತಪಸ್ಸು ಕ್ಷಯಿಸಿ ಹೋದರೆ ತಾವೇ ಭಿಕ್ಷುಕರಾಗುವರು. ಇನ್ನೊಬ್ಬರನ್ನು ವಧಿಸುವಂತಿರುವವರು ತಾವೇ ವಧಿಸಲ್ಪಡುವರು. ಮತ್ತು ಬೇರೊಬ್ಬರನ್ನು ಕೆಳಗೆ ತಳ್ಳುವವರು ತಾವೇ ತಳ್ಳಲ್ಪಡುವರು.

ಏತದ್ದೃಷ್ಟಂ ಸುಬಹುಶೋ ವಿಪರೀತಂ ತಥಾ ಮಯಾ ।
ಭಾವಾಭಾವಸಮುಚ್ಛೇದೈರಜಸ್ರಂ ವ್ಯಾಕುಲಂ ಜಗತ್ ॥೧೩॥

ಇತಿ ಸಂಚಿನ್ತ್ಯ ಮನಸಾ ನ ಶೋಕಂ ಕರ್ತುಮರ್ಹಥ ।
ಜ್ಞಾನಸ್ಯ ಫಲಮೇತಾವಚ್ಛೋಕಹರ್ಷೈರಧೃಷ್ಯತಾ ॥೧೪॥

ತತಸ್ತೇ ಜೈಮಿನಿಂ ಸರ್ವೇ ಪಾದ್ಯಾರ್ಘ್ಯಾಭ್ಯಾಮಪೂಜಯನ್ ।
ಅನಾಮಯಂ ಚ ಪಪ್ರಚ್ಛುಃ ಪ್ರಣಿಪತ್ಯ ಮಹಾಮುನಿಮ್ ॥೧೫॥

ಅಥೋಚುಃ ಖಗಮಾಃ ಸರ್ವೇ ವ್ಯಾಸಶಿಷ್ಯಂ ತಪೋನಿಧಿಮ್ ।
ಸುಖೋಪವಿಷ್ಟಂ ವಿಶ್ರಾನ್ತಂ ಪಕ್ಷಾನಿಲಹತಕ್ಲಮಮ್ ॥೧೬॥

---

೧೩. ಹೀಗೆ ಬದಲಾಯಿಸುತ್ತಿರುವುದನ್ನು ನಾನು ಎಷ್ಟೋ ಸಲ ಕಂಡಿರುವೆನು. ಈ ಜಗತ್ತು ತನ್ನಲ್ಲಿರುವ ಭಾವ-ಅಭಾವ ವಸ್ತುಗಳಿಗೆ ಆಗಾಗ ವಿಪತ್ತು ಒದಗಿದಂತೆ ಯಾವಾಗಲೂ ಬದಲಾಯಿಸುತ್ತಿರುವ ಸ್ವಭಾವವನ್ನು ಹೊಂದಿದೆ.

೧೪. ಇದನ್ನು ಚನ್ನಾಗಿ ಯೋಚಿಸಿ ನೀವು ಮನಸ್ಸಿನಲ್ಲಿ ಶೋಕಪಡಲಾಗದು. ಆಯಾಯ ನಿಮಿತ್ತಗಳು ಒದಗಿದರೂ ಶೋಕ-ಹರ್ಷಗಳಿಂದ ಕದಲದಿರುವುದೆ ಜ್ಞಾನದ ಫಲವಲ್ಲವೆ?

೧೫. ತರುವಾಯ ಆ ಎಲ್ಲ ಪಕ್ಷಿಗಳು ಪಾದ್ಯ-ಅರ್ಘ್ಯ ಉಪಚಾರಗಳನ್ನು ಅರ್ಪಿಸಿ ಜೈಮಿನಿ ಮುನಿಯನ್ನು ಪೂಜಿಸಿದುವು ಮತ್ತು ಮಹಾಮುನಿಗೆ ನಮಸ್ಕಾರಮಾಡಿ ಕುಶಲಪ್ರಶ್ನೆಯನ್ನು ಮಾಡಿದುವು.

೧೬. ಅನಂತರ ಆ ಎಲ್ಲ ಪಕ್ಷಿಗಳು ವ್ಯಾಸಮುನಿಯ ಶಿಷ್ಯನೂ, ತಪೋನಿಧಿಯೂ ಆದ ಜೈಮಿನಿಮುನಿಯು ರೆಕ್ಕೆಗಳ ಗಾಳಿಯಿಂದ ದಣುವನ್ನಾರಿಸಿ ವಿಶ್ರಮಿಸುತ್ತ ಸುಖವಾಗಿ ಕುಳಿತುಕೊಂಡ ಬಳಿಕ ಅವನನ್ನು ಕುರಿತು ಮಾತನಾಡಿದುವು.

ಪಕ್ಷಿಣ ಊಚುಃ :—

ಅದ್ಯ ನಃ ಸಫಲಂ ಜನ್ಮ ಜೀವಿತಂ ಚ ಸುಜೀವಿತಮ್ ।
ಯತ್ಪಶ್ಯಾಮಃ ಸುರೈರ್ವನ್ದ್ಯಂ ತವ ಪಾದಾಮ್ಬುಜದ್ವಯಮ್ ॥೧೭॥

ಪಿತೃಕೋಪಾಗ್ನಿರುದ್ಭೂತೋ ಯೋ ನೋ ದೇಹೇಷು ವರ್ತತೇ ।
ಸೋಽದ್ಯ ಶಾನ್ತಿಂ ಗತೋ ವಿಪ್ರ ಯುಷ್ಮದ್ದರ್ಶನವಾರಿಣಾ ॥೧೮॥

ಕಚ್ಚಿತ್ತೇ ಕುಶಲಂ ಬ್ರಹ್ಮನ್ನಾಶ್ರಮೇ ಮೃಗಪಕ್ಷಿಷು ।
ವೃಕ್ಷೇಷ್ವಥ ಲತಾಗುಲ್ಮತ್ವಕ್ಸಾರತೃಣಜಾತಿಷು ॥೧೯॥

ಅಥವಾ ನೈತದುಕ್ತಂ ಹಿ ಸಮ್ಯಗಸ್ಮಾಭಿರಾದೃತೈಃ ।
ಭವತಾ ಸಂಗಮೋ ಯೇಷಾಂ ತೇಷಾಮಕುಶಲಂ ಕುತಃ ॥೨೦॥

ಪಕ್ಷಿಗಳು ಇಂತೆಂದುವು :—

೧೭. ಇಂದು ನಮ್ಮ ಜನ್ಮವು ಸಾರ್ಥಕವಾಯಿತು. ಇಂದು ನಮ್ಮ ಜೀವನವು ಶ್ರೇಯಸ್ಕರವಾದ ಜೀವನವಾಗಿದೆ. ದೇವತೆಗಳಿಗೂ ವಂದ್ಯವಾದ ನಿನ್ನ ಪಾದಕಮಲಗಳನ್ನು ಸಂದರ್ಶಿಸಿದ್ದೇವೆ.

೧೮. ವಿಪ್ರನೆ! ನಮ್ಮ ಈ ದೇಹದಲ್ಲಿ ಶಾಪದಿಂದ ಹುಟ್ಟಿ ಉರಿಯುವ ಯಾವ ಪಿತೃಕೋಪಾಗ್ನಿಯಿದೆಯೊ ಅದು ನಿಮ್ಮ ಸೌಮ್ಯದರ್ಶನವೆಂಬ ನೀರಿನಿಂದ ಶಾಂತವಾಯಿತು.

೧೯. ಬ್ರಹ್ಮರ್ಷಿಯೆ! ನಿನ್ನ ಆಶ್ರಮದಲ್ಲಿರುವ ಮೃಗ, ಪಕ್ಷಿ, ವೃಕ್ಷ, ಲತಾ, ಪೊದೆ, ಬಿದುರು ಮತ್ತು ಅನೇಕ ಜಾತಿಯ ಹುಲ್ಲು ಮುಂತಾದ ನಿನ್ನ ಪರಿವಾರವು ಕುಶಲಿಯಾಗಿದೆಯೇ ?

೨೦. ಅಥವಾ ನಿನ್ನಲ್ಲಿ ಆದರಾತಿಶಯದಿಂದ ಪರತಂತ್ರರಾದ ನಾವು ಕೇಳಿದ ಪ್ರಶ್ನವಾಕ್ಯವು ಸಮಂಜಸವಾದುದಲ್ಲ. ಮಹಾತ್ಮನಾದ ನಿನ್ನ ಸಹವಾಸವುಳ್ಳ ಪ್ರಾಣಿಗಳಿಗೆ ಅಕುಶಲವೆಲ್ಲಿಯದು ?

ಪ್ರಸಾದಂ ಚ ಕುರುಷ್ವಾತ್ರ ಬ್ರೂಹ್ಯಾಗಮನಕಾರಣಮ್ ।
ದೇವಾನಾಮಿವ ಸಂಸರ್ಗೋ ಭವತೋಽಭ್ಯುದಯೋ ಮಹಾನ್॥೨೧॥

ಕೇನಾಸ್ಮದ್ಭಾಗ್ಯಗುರುಣಾ ಆನೀತೋ ದೃಷ್ಟಿಗೋಚರಮ್ ॥೨೨॥

ಜೈಮಿನಿರುವಾಚ :—

ಶ್ರೂಯತಾಂ ದ್ವಿಜಶಾರ್ದೂಲಾಃ ಕಾರಣಂ ಯೇನ ಕನ್ದರಮ್ ।
ವಿನ್ಧ್ಯಸ್ಯೇಹಾಗತೋ ರಮ್ಯೇ ರೇವಾವಾರಿಕಣೋಕ್ಷಿತಮ್ ॥೨೩॥

ಸನ್ದೇಹಾನ್ಭಾರತೇ ಶಾಸ್ತ್ರೇ ತಾನ್ ಪ್ರಷ್ಟುಂ ಗತವಾನಹಮ್ ।
ಮಾರ್ಕಣ್ಡೇಯಂ ಮಹಾತ್ಮಾನಂ ಪೂರ್ವಂ ಭೃಗುಕುಲೋ-
ದ್ವಹಮ್ ॥೨೪॥

---

೨೧. ನೀನು ಇಲ್ಲಿಗೆ ಬಂದಿರುವ ಕಾರಣವನ್ನು ಹೇಳು. ನಮ್ಮ ಮೇಲೆ ಅನುಗ್ರಹವಿಡು. ದೇವತೆಗಳ ಸಂಪರ್ಕದಂತೆ ನಿನ್ನ ಸಂಸರ್ಗ ಲಭಿಸಿದುದು ಮಹತ್ತಾದ ಅಭ್ಯುದಯವೇ ಸರಿ.

೨೨. ನಿನ್ನ ದರ್ಶನವು ಪುಣ್ಯಮಾತ್ರದಿಂದ ಲಭ್ಯವಾದುದು. ಇಲ್ಲಿಗೆ ನಿನ್ನನ್ನು ತಂದು ದರ್ಶನವನ್ನೊದಗಿಸಿದ ನಮ್ಮ ಅಂತಹ ಮಹತ್ತಾದ ಭಾಗ್ಯ ಯಾವುದು ?

ಜೈಮಿನಿಯು ನುಡಿದನು :—

೨೩. ಪಕ್ಷಿಶ್ರೇಷ್ಠರೆ! ರೇವಾನದಿಯ ಪವಿತ್ರತೀರ್ಥಕಣಗಳಿಂದ ನೆನೆದಿರುವ ವಿಂಧ್ಯಪರ್ವತದ ಈ ಗವಿಯ ಬಳಿಗೆ ಯಾವ ಕಾರಣದಿಂದ ನಾನು ಬಂದಿರುವೆನೊ ; ಅದನ್ನು ಹೇಳುವೆನು, ಕೇಳಿರಿ.

೨೪. ನಾನು ಶಾಸ್ತ್ರರೂಪವಾದ ಮಹಾಭಾರತದಲ್ಲಿ ಉಂಟಾದ ವಿವಿಧ ಸಂದೇಹಗಳನ್ನು ಪ್ರಶ್ನಿಸಲು ಚಿರಂಜೀವಿಯೂ ಭೃಗುಕುಲವನ್ನು ಬೆಳಗಿದವನೂ ಮತ್ತು ಮಹಾತ್ಮನೂ ಆದ ಮಾರ್ಕಂಡೇಯಮುನಿಯ ಬಳಿಗೆ ಹೋದೆನು.

ತಮಹಂ ಪೃಷ್ಟವಾನ್ ಪ್ರಾಪ್ಯ ಸನ್ದೇಹಾನ್ ಭಾರತಂ ಪ್ರತಿ ||೨೫||

ಸ ಚ ಪೃಷ್ಟೋ ಮಯಾ ಪ್ರಾಹ ಸನ್ತಿ ವಿನ್ಧ್ಯೇ ಮಹಾಚಲೇ ।
ದ್ರೋಣಪುತ್ರಾ ಮಹಾತ್ಮಾನಸ್ತೇ ವಕ್ಷ್ಯನ್ತ್ಯರ್ಥವಿಸ್ತರಮ್ ||೨೬||

ತದ್ವಾಕ್ಯಚೋದಿತಶ್ಚೇಮಮಾಗತೋಽಹಂ ಮಹಾಗಿರಿಮ್ ।
ತಚ್ಛೃಣುಧ್ವಮಶೇಷೇಣ ಶ್ರುತ್ವಾ ವ್ಯಾಖ್ಯಾತುಮರ್ಹಥ ||೨೭||

ಪಕ್ಷಿಣ ಊಚುಃ :—

ವಿಷಯೇ ಸತಿ ವಕ್ಷ್ಯಾಮೋ ನಿರ್ವಿಶಙ್ಕಃ ಶೃಣುಷ್ವ ತತ್ ।
ಕಥಂ ತನ್ನ ವದಿಷ್ಯಾಮೋ ಯದಸ್ಮದ್ಬುದ್ಧಿಗೋಚರಮ್ ||೨೮||

---

೨೫. ವಿನಯಪೂರ್ವಕವಾಗಿ ಮಾರ್ಕಂಡೇಯ ಮುನಿಯ ಬಳಿಯಲ್ಲಿ ನನಗೆ ಭಾರತ ಇತಿಹಾಸದಲ್ಲಿ ಉಂಟಾದ ಸಂಶಯಗಳನ್ನು ಕ್ರಮವಾಗಿ ಪ್ರಶ್ನಿಸಿದೆನು.

೨೬. ನನ್ನಿಂದ ಪ್ರಶ್ನಿಸಲ್ಪಟ್ಟ ಮಾರ್ಕಂಡೇಯ ಮುನಿಯು "ವಿಂಧ್ಯವೆಂಬ ಮಹಾಪರ್ವತದಲ್ಲಿ ಮಹಾತ್ಮರಾದ ದ್ರೋಣಮುನಿ ಪುತ್ರರು ನಾಲ್ಕು ಮಂದಿ ಇದ್ದಾರೆ. ಅವರು ನಿನಗೆ ವಿಸ್ತಾರವಾಗಿ ಈ ವಿಷಯಗಳನ್ನು ತಿಳಿಸುವರು" ಎಂದು ಹೇಳಿದನು.

೨೭. ಮಾರ್ಕಂಡೇಯ ಮುನಿಯ ವಚನದಿಂದ ಪ್ರೇರೇಪಿಸಲ್ಪಟ್ಟ ನಾನು ಈ ಮಹಾಗಿರಿಗೆ ಬಂದಿದ್ದೇನೆ. ಆ ಸಂಶಯಗಳನ್ನೆಲ್ಲ ನೀವು ಕೇಳಿರಿ. ಕೇಳಿ ಅವುಗಳನ್ನು ವಿವರಿಸಬೇಕೆಂದು ಪ್ರಾರ್ಥಿಸುವೆನು.

ಪಕ್ಷಿಗಳು ಇಂತೆಂದುವು :—

೨೮. ನಮ್ಮ ಬುದ್ಧಿ ಗೋಚರವಾದ ವಿಷಯವನ್ನು ಹೇಳುವೆವು. ಏನೂ ಶಂಕೆಯಿಲ್ಲದಹಾಗೆ ನೀನು ಅದನ್ನು ಕೇಳು. ನಮ್ಮ ಬುದ್ಧಿಗೆ ವೇದ್ಯವಾದುದನ್ನು ಜಿಜ್ಞಾಸುಗಳಿಗೆ ನಾವು ಹೇಳದೆ ಇರಲಾರೆವು.

ಚತುರ್ಷ್ವಪಿ ಹಿ ವೇದೇಷು ಧರ್ಮಶಾಸ್ತ್ರೇಷು ಚೈವ ಹಿ ।
ಸಮಸ್ತೇಷು ತಥಾಙ್ಗೇಷು ಯಚ್ಚಾನ್ಯದ್ವೇದಸಮ್ಮಿತಮ್ ॥೨೯॥

ಏತೇಷು ಗೋಚರೋಽಸ್ಮಾಕಂ ಬುದ್ಧೇರ್ಬ್ರಾಹ್ಮಣಸತ್ತಮ ।
ಪ್ರತಿಜ್ಞಾಂ ತು ಸಮಾರೋಢುಂ ತಥಾಪಿ ನ ಹಿ ಶಕ್ನುಮಃ ॥೩೦॥

ತಸ್ಮಾದ್ಭವದಸ್ಯ ವಿಶ್ರಬ್ಧಂ ಸನ್ದಿಗ್ಧಂ ಯದ್ಧಿ ಭಾರತೇ ।
ವಕ್ಷ್ಯಾಮಸ್ತವ ಧರ್ಮಜ್ಞ ನ ಚೇನ್ಮೋಹೋ ಭವಿಷ್ಯತಿ ॥೩೧॥

ಜೈಮಿನಿರುವಾಚ :—

ಸನ್ದಿಗ್ಧಾನೀಹ ವಸ್ತೂನಿ ಭಾರತಂ ಪ್ರತಿ ಯಾನಿ ಮೇ ।
ಶೃಣುಧ್ವಮಮಲಾಸ್ತಾನಿ ಶ್ರುತ್ವಾ ವ್ಯಾಖ್ಯಾತುಮರ್ಹಥ ॥೩೨॥

---

೨೯. ನಾಲ್ಕು ವೇದಗಳಲ್ಲಿಯೂ, ಅಖಿಲಧರ್ಮಶಾಸ್ತ್ರಗಳಲ್ಲಿಯೂ, ಎಲ್ಲ ಅಂಗ-ಉಪಾಂಗ ಗ್ರಂಥಗಳಲ್ಲಿಯೂ ಮತ್ತು ವೇದ ತುಲ್ಯವಾದ ಇತರ ವಾಙ್ಮಯಗಳಲ್ಲಿಯೂ ನಮ್ಮ ಬುದ್ಧಿಯ ಪ್ರಸಾರವುಂಟು.

೩೦. ಬ್ರಾಹ್ಮಣೋತ್ತಮನೆ! ಈ ವಾಙ್ಮಯಗಳಲ್ಲಿ ಪ್ರತಿಪಾದ್ಯವಾದ ವಿಷಯವು ನಮ್ಮ ಬುದ್ಧಿಗೆ ಗೋಚರವಾಗಿದೆ. ಆದರೂ ನೀನು ಕೇಳಿದ್ದನ್ನೆಲ್ಲ ಹೇಳುವಷ್ಟು ಸರ್ವಜ್ಞರಾಗಿದ್ದೇವೆಂದು ಪ್ರತಿಜ್ಞೆಯನ್ನು ಕೈಗೊಳ್ಳಲು ನಾವು ಶಕ್ತರಲ್ಲ.

೩೧. ಧರ್ಮವನ್ನರಿತವನೆ! ಮಹಾಭಾರತವಿಷಯದಲ್ಲಿ ಯಾವ ಸಂದೇಹವಿದ್ದರೂ ನಿಶ್ಶಂಕನಾಗಿ ಅದನ್ನು ಹೇಳು. ನಮಗೂ ಅಜ್ಞಾನವಿಲ್ಲದಿದ್ದರೆ ಅದನ್ನು ನಿನಗೆ ವ್ಯಾಖ್ಯಾನಮಾಡುವೆವು.

ಜೈಮಿನಿ ಮುನಿಯು ಹೀಗೆ ನುಡಿದನು :—

೩೨. ನಿಷ್ಕಲಂಕರೆ! ಮಹಾಭಾರತದ ವಿಷಯದಲ್ಲಿ ಯಾವ ಯಾವ ವಸ್ತುಗಳು ನನಗೆ ಸಂದಿಗ್ಧವಾಗಿರುವುವೊ; ಅವುಗಳನ್ನು ಕೇಳಿರಿ. ಮತ್ತು ಕೇಳಿ ಅವುಗಳನ್ನು ವಿವರಿಸಿ ನನಗೆ ಬೋಧಿಸಿರಿ.

ಕಸ್ಮಾನ್ಮಾನುಷತಾಂ ಪ್ರಾಪ್ತೋ ನಿರ್ಗುಣೋಽಪಿ ಜನಾರ್ದನಃ ।
ವಾಸುದೇವೋಽಖಿಲಾಧಾರಃ ಸರ್ವಕಾರಣಕಾರಣಮ್ ॥೩೩॥

ಕಸ್ಮಾಚ್ಚ ಪಾಣ್ಡುಪುತ್ರಾಣಾಮೇಕಾ ಸಾ ದ್ರುಪದಾತ್ಮಜಾ ।
ಪಞ್ಚಾನಾಂ ಮಹಿಷೀ ಕೃಷ್ಣಾ ಸುಮಹಾನತ್ರ ಸಂಶಯಃ ॥೩೪॥

ಭೇಷಜಂ ಬ್ರಹ್ಮಹತ್ಯಾಯಾ ಬಲದೇವೋ ಮಹಾಬಲಃ ।
ತೀರ್ಥಯಾತ್ರಾಪ್ರಸಙ್ಗೇನ ಕಸ್ಮಾಚ್ಚಕ್ರೇ ಹಲಾಯುಧಃ ॥೩೫॥

ಕಥಂ ಚ ದ್ರೌಪದೇಯಾಸ್ತೇಽಕೃತದಾರಾ ಮಹಾರಥಾಃ ।
ಪಾಣ್ಡುನಾಥಾ ಮಹಾತ್ಮಾನೋ ವಧಮಾಪುರನಾಥವತ್ ॥೩೬॥

ಏತತ್ ಸರ್ವಂ ಕಥ್ಯತಾಂ ಮೇ ಸನ್ದಿಗ್ಧಂ ಭಾರತಂ ಪ್ರತಿ ।
ಕೃತಾರ್ಥೋಽಹಂ ಸುಖಂ ಯೇನ ಗಚ್ಛೇಯಂ ನಿಜಮಾಶ್ರಮಮ್ ॥೩೭॥

---

೩೩. ಎಲ್ಲ ಕಾರಣವಸ್ತುಗಳಿಗೆ ಕಾರಣನಾದ, ಅಖಿಲಜಗತ್ತಿಗೆ ಆಧಾರನಾದ-ಶ್ರೀಮನ್ನಾರಾಯಣನು ನಿರ್ಗುಣನಾಗಿದ್ದರೂ ವಸುದೇವಪುತ್ರನಾಗಿ ಜನಿಸಿ ಮನುಷ್ಯತ್ವವನ್ನು ಏಕೆ ಹೊಂದಿದನು?

೩೪. ಕೃಷ್ಣಾ ಎಂಬ ನಾಮಾಂಕಿತಳೂ ದ್ರುಪದ ಮಹಾರಾಜನ ಪುತ್ರಿಯೂ ಆದ ಪಾಂಚಾಲಿಯು ಐದು ಮಂದಿ ಪಾಂಡವರಿಗೆ ರಾಣಿಯಾದುದು ಏಕೆ? ಈ ವಿಷಯದಲ್ಲಿ ನನಗೆ ಮಹತ್ತಾದ ಸಂಶಯವುಂಟಾಗಿದೆ.

೩೫. ನೇಗಿಲನ್ನು ಆಯುಧವಾಗಿ ಧರಿಸಿದ ಮಹಾಬಲಿಷ್ಠನಾದ ಬಲರಾಮನು ತೀರ್ಥಯಾತ್ರೆಯನ್ನು ಕೈಕೊಂಡು ಬ್ರಹ್ಮಹತ್ಯಾಪಾತಕಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಂತೆ ಆದುದು ಏಕೆ?

೩೬. ಮಹಾತ್ಮರೂ, ಮಹಾರಥರೂ ಮತ್ತು ಪಾಂಡವರನ್ನು ನಾಥರನ್ನಾಗಿ ಹೊಂದಿದವರೂ ಆದ ದ್ರೌಪದಿಯ ಐದು ಮಂದಿ ಕುಮಾರರು ಪಾಣಿಗ್ರಹಣವನ್ನು ಮಾಡದೆ ಅನಾಥರಂತೆ ವಧವನ್ನು ಹೊಂದಿರುವುದು ಏಕೆ?

೩೭. ಮಹಾಭಾರತದಲ್ಲಿ ಸಂದೇಹಕ್ಕೆ ವಿಷಯವಾದ ಈ ವಿಷಯಗಳೆಲ್ಲ ನಿಮ್ಮಿಂದ ಹೇಳಲ್ಪಡಲಿ. ನಿಮ್ಮ ಉಪದೇಶದಿಂದ ಕೃತಾರ್ಥನಾಗಿ ನಾನು ನನ್ನ ಆಶ್ರಮಕ್ಕೆ ಹೋಗುವೆನು.

ಪಕ್ಷಿಣ ಊಚುಃ :—

ನಮಸ್ಕೃತ್ಯ ಸುರೇಶಾಯ ವಿಷ್ಣವೇ ಪ್ರಭವಿಷ್ಣವೇ ।
ಪುರುಷಾಯಾಪ್ರಮೇಯಾಯ ಶಾಶ್ವತಾಯಾವ್ಯಯಾಯ ಚ ॥೩೮॥

ಚತುರ್ವ್ಯೂಹಾತ್ಮನೇ ತಸ್ಮೈ ತ್ರಿಗುಣಾಯಾಗುಣಾಯ ಚ ।
ವರಿಷ್ಠಾಯ ಗರಿಷ್ಠಾಯ ವರೇಣ್ಯಾಯಾಮೃತಾಯ ಚ ॥೩೯॥

ಯಸ್ಮಾದಣುತರಂ ನಾಸ್ತಿ ಯಸ್ಮಾನ್ನಾಸ್ತಿ ಬೃಹತ್ತರಮ್ ।
ಯೇನ ವಿಶ್ವಮಿದಂ ವ್ಯಾಪ್ತಮಜೇನ ಜಗದಾದಿನಾ ॥೪೦॥

ಆವಿರ್ಭಾವತಿರೋಭಾವದೃಷ್ಟಾದೃಷ್ಟವಿಲಕ್ಷಣಮ್ ।
ವದನ್ತಿ ಯತ್ಸೃಷ್ಟಮಿದಂ ತಥೈವಾನ್ತೇ ಚ ಸಂಹೃತಮ್ ॥೪೧॥

ಪಕ್ಷಿಗಳು ಹೇಳಿದುವು:—

೩೮. ಏರಿಳಿತಗಳಿಲ್ಲದವನೂ, ಶಾಶ್ವತನೂ, ಅಳೆಯಲಾಗದವನೂ, ಪೂರ್ಣನೂ, ಪ್ರಪಂಚಕ್ಕೆ ಪ್ರಭುವೂ ಮತ್ತು ವ್ಯಾಪಕನೂ ಆದ ದೇವೋತ್ತಮ ಶ್ರೀಮನ್ನಾರಾಯಣನಿಗೆ ವಂದಿಸುವೆವು.

೩೯. ವ್ಯಷ್ಟಿಯಾಗಿ ನಾಲ್ಕು ಮೂರ್ತಿಯನ್ನು ಧರಿಸಿದವನೂ, ತ್ರಿಗುಣಮಯನೂ, ಪರಮಾರ್ಥರೂಪದಿಂದ ಗುಣಶೂನ್ಯನೂ, ಸರ್ವೋತ್ತಮನೂ, ಗುರುಸ್ವರೂಪನೂ, ಭಜಿಸಲು ಅರ್ಹನೂ ಮತ್ತು ಅಮೃತಸ್ವರೂಪನೂ ಆದ ಸ್ವಾಮಿಯನ್ನು ವಂದಿಸುವೆವು.

೪೦. ಯಾವ ಪರಮಾತ್ಮನಿಗಿಂತ ಅಣುವಸ್ತು ಬೇರೊಂದಿಲ್ಲವೊ, ಯಾವ ಪರಮಾತ್ಮನಿಗಿಂತ ಬೃಹದ್ವಸ್ತು ಬೇರೊಂದಿಲ್ಲವೊ ಮತ್ತು ಯಾವ ಪರಮಾತ್ಮನಿಂದ ಎಲ್ಲ ವಿಶ್ವವೂ ವ್ಯಾಪಿಸಲ್ಪಟ್ಟಿದೆಯೊ ಅಂತಹ ಜಗತ್ತಿಗೆ ಆದಿಯಲ್ಲಿರುವವನೂ ಜನ್ಮವಿಕಾರವಿಲ್ಲದವನೂ ಆದ ಪರಮಾತ್ಮನನ್ನು ವಂದಿಸುವೆವು.

೪೧. ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿದ್ದೂ ಪ್ರಲಯದಲ್ಲಿ ಸಂಹರಿಸಲ್ಪಟ್ಟಿದ್ದೂ ಆದ ಈ ವಿಶ್ವವನ್ನು ಪ್ರಾಜ್ಞರು ಆವಿರ್ಭಾವ-ತಿರೋಭಾವಗಳಿಂದ ಕಂಡುಕಾಣದಿರುವ ವಸ್ತುಗಳಿಗೆ ವಿಲಕ್ಷಣರೂಪವಾದುದೆಂದು ವರ್ಣಿಸುವರು.

ಬ್ರಹ್ಮಣೇ ಚಾದಿದೇವಾಯ ನಮಸ್ಕೃತ್ಯ ಸಮಾಧಿನಾ ।
ಋಕ್ಸಾಮಾನ್ಯುದ್ಗಿರನ್ ವಕ್ತ್ರೈರ್ಯಃ ಪುನಾತಿ ಜಗತ್ತ್ರಯಮ್॥೪೨॥

ಪ್ರಣಿಪತ್ಯ ತಥೇಶಾನಮೇಕಬಾಣವಿನಿರ್ಜಿತೈಃ ।
ಯಸ್ಯಾಸುರಗಣೈರ್ಯಜ್ಞಾ ವಿಲುಪ್ಯನ್ತೇ ನ ಯಜ್ವಿನಾಮ್ ॥೪೩॥

ಪ್ರವಕ್ಷ್ಯಾಮೋ ಮತಂ ಕೃತ್ಸ್ನಂ ವ್ಯಾಸಸ್ಯಾದ್ಭುತಕರ್ಮಣಃ ।
ಯೇನ ಭಾರತಮುದ್ದಿಶ್ಯ ಧರ್ಮಾದ್ಯಾಃ ಪ್ರಕಟೀಕೃತಾಃ ॥೪೪॥

ಆಪೋ ನಾರಾ ಇತಿ ಪ್ರೋಕ್ತಾ ಮುನಿಭಿಸ್ತತ್ತ್ವದರ್ಶಿಭಿಃ ।
ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ ॥೪೫॥

---

೪೨. ಋಗ್ವೇದ-ಸಾಮವೇದ ಮುಂತಾದುವುಗಳನ್ನು ಚತುರ್ಮುಖಗಳಿಂದ ಹೇಳುತ್ತ ಯಾವ ಬ್ರಹ್ಮದೇವನು ಮೂರು ಜಗತ್ತನ್ನು ಪವಿತ್ರಗೊಳಿಸುವನೊ, ಆದಿದೇವನಾದ ಆ ಬ್ರಹ್ಮನಿಗೆ ಏಕಾಗ್ರತೆಯಿಂದ ನಮಸ್ಕರಿಸುತ್ತೇವೆ.

೪೩. ಯಾವ ಪರಶಿವನ ಒಂದು ಬಾಣದಿಂದ ಹತರಾಗಿ ಅಸುರರಿಂದ ಯಜ್ಞಾನುಷ್ಠಾನ ಪರರ ಯಜ್ಞಕರ್ಮಗಳು ಭಂಗಹೊಂದದಂತೆ ಆಗಿವೆಯೊ ಅಂತಹ ಸರ್ವೇಶ್ವರನನ್ನು ವಂದಿಸುತ್ತೇವೆ.

೪೪. ಅದ್ಭುತವಾದ ಉಪಕಾರವನ್ನು ಮಾಡಿರುವ ವ್ಯಾಸಮುನಿಯ ಸಂಪೂರ್ಣಾಭಿಪ್ರಾಯವನ್ನು ಹೇಳುತ್ತೇವೆ. ಆ ಮಹಾತ್ಮನಿಂದ ಭಾರತವನ್ನು ರಚಿಸುವ ನೆಪದಿಂದ ಧರ್ಮ ಮುಂತಾದ ಸಕಲ ತತ್ತ್ವಗಳು ಪ್ರಕಾಶಗೊಳಿಸಲ್ಪಟ್ಟಿವೆ.

೪೫. ತತ್ತ್ವಜ್ಞರಾದ ಮುನಿಗಳು ನೀರೆಂಬ ತತ್ತ್ವವನ್ನು ನಾರಾ ಎಂಬ ನಾಮಾಂಕನದಿಂದ ಕರೆಯುವರು. ಹಾಗೆ ನಾರಾ ಎಂದು ಕರೆಯಲ್ಪಡುವ ಜಲವು ಸೃಷ್ಟಿಯ ಪೂರ್ವದಲ್ಲಿ ವಿಷ್ಣುವಿಗೆ ಸ್ಥಾನವಾಗಿದ್ದುದರಿಂದ ವಿಷ್ಣುವು ನಾರಾಯಣನೆಂದು ಸ್ಮರಿಸಲ್ಪಡುವನು.

ಸ ದೇವೋ ಭಗವಾನ್ ಸರ್ವಂ ವ್ಯಾಪ್ಯ ನಾರಾಯಣೋ ವಿಭುಃ ।
ಚತುರ್ಧಾ ಸಂಸ್ಥಿತೋ ಬ್ರಹ್ಮನ್ ಸಗುಣೋ ನಿರ್ಗುಣಸ್ತಥಾ ॥೪೬॥

ಏಕಾ ಮೂರ್ತಿರನಿರ್ದೇಶ್ಯಾ ಶುಕ್ಲಾಂ ಪಶ್ಯನ್ತಿ ತಾಂ ಬುಧಾಃ ।
ಜ್ವಾಲಾಮಾಲೋಪರುದ್ಧಾಙ್ಗೀ ನಿಷ್ಠಾ ಸಾ ಯೋಗಿನಾಂ ಪರಾ॥೪೭॥

ದೂರಸ್ಥಾ ಚಾನ್ತಿಕಸ್ಥಾ ಚ ವಿಜ್ಞೇಯಾ ಸಾ ಗುಣಾತಿಗಾ ।
ವಾಸುದೇವಾಭಿಧಾನೋಽಸೌ ನಿರ್ಮಮತ್ವೇನ ದೃಶ್ಯತೇ ॥೪೮॥

ರೂಪವರ್ಣಾದಯಸ್ತಸ್ಯ ನ ಭಾವಾಃ ಕಲ್ಪನಾಮಯಾಃ ।
ಅಸ್ತ್ಯೇವ ಸಾ ಸದಾ ಶುದ್ಧಾ ಸುಪ್ರತಿಷ್ಠೈಕರೂಪಿಣೀ ॥೪೯॥

---

೪೬. ಬ್ರಹ್ಮರ್ಷಿಯೆ! ಗುಣಶೂನ್ಯನೂ ಸರ್ವವ್ಯಾಪಕನೂ ಷಡ್ಗುಣೈಶ್ವರ್ಯಸಂಪನ್ನನೂ ಆದ ಶ್ರೀಮನ್ನಾರಾಯಣನು ಗುಣಮಯನಾಗಿ ಸರ್ವಜಗತ್ತನ್ನು ವ್ಯಾಪಿಸಿ ನಾಲ್ಕು ವ್ಯಷ್ಟಿರೂಪಗಳನ್ನು ತೆಗೆದುಕೊಂಡಿರುವನು.

೪೭. ಅವುಗಳಲ್ಲಿ ಒಂದು ಮೂರ್ತಿಯು ನಿರ್ದೇಶಿಸಲು ಅಶಕ್ಯವಾದುದು. ಜ್ಞಾನಿಗಳು ಬೆಳ್ಳಗಿರುವ ಆ ಮೂರ್ತಿಯನ್ನು ಸಾಕ್ಷಾತ್ಕರಿಸುವರು. ಜ್ವಾಲಾಮಾಲೆಗಳಿಂದ ಆವರಿಸಿದಂತೆ ಕಾಣುವ ಆ ಮೂರ್ತಿಯು ಯೋಗಿಗಳಿಗೆ ಉಪಾಸ್ಯವಾದ ವಸ್ತು.

೪೮. ಆ ಮೂರ್ತಿಯು ಸತ್ತ್ವಾದಿ ಗುಣಗಳ ಸಂಕೋಲೆಯಿಂದ ಮುಕ್ತವಾದುದರಿಂದ ದೂರವಿರುವುದೂ ಸಮೀಪದಲ್ಲಿರುವುದೂ ಆಗಿದೆ. ವಾಸುದೇವ ಎಂಬ ನಾಮಧೇಯವುಳ್ಳ ಆ ಮೂರ್ತಿಯು ಮಮತಾದಿ ದೋಷಗಳನ್ನು ತ್ಯಜಿಸಿದ ಮುಮುಕ್ಷುವಿಗೆ ಗೋಚರವಾಗುವುದು.

೪೯. ಕಲ್ಪನಾಸಿದ್ಧವಾದ ಆಕಾರ-ವರ್ಣ ಮುಂತಾದ ಭಾವವಿಕಾರಗಳು ಆ ಶುದ್ಧಮೂರ್ತಿಯಲ್ಲಿ ಇರುವುದಿಲ್ಲ. ಅದ್ವಿತೀಯವೂ, ಸಮಸ್ತಕಲ್ಪನೆಗಳಿಗೆ ಆಧಾರವೂ, ಶುದ್ಧವೂ ಆದ ಅಂತಹ ಮೂರ್ತಿಯು ಯಾವಾಗಲೂ ಏಕರೂಪವಾಗಿರುವುದು.

ದ್ವಿತೀಯಾ ಪೃಥಿವೀಂ ಮೂರ್ಧ್ನಾ ಶೇಷಾಖ್ಯಾ ಧಾರಯತ್ಯಧಃ ।
ತಾಮಸೀ ಸಾ ಸಮಾಖ್ಯಾತಾ ತಿರ್ಯಕ್ತ್ವಂ ಸಮುಪಾಶ್ರಿತಾ ॥೫೦॥

ತೃತೀಯಾ ಕರ್ಮ ಕುರುತೇ ಪ್ರಜಾಪಾಲನತತ್ಪರಾ ।
ಸತ್ತ್ವೋದ್ರಿಕ್ತಾ ತು ಸಾ ಜ್ಞೇಯಾ ಧರ್ಮಸಂಸ್ಥಾನಕಾರಿಣೀ ॥೫೧॥

ಚತುರ್ಥೀ ಜಲಮಧ್ಯಸ್ಥಾ ಶೇತೇ ಪನ್ನಗತಲ್ಪಗಾ ।
ರಜಸ್ತಸ್ಯಾ ಗುಣಃ ಸರ್ಗಂ ಸಾ ಕರೋತಿ ಸದೈವ ಹಿ ॥೫೨॥

ಯಾ ತೃತೀಯಾ ಹರೇರ್ಮೂರ್ತಿಃ ಪ್ರಜಾಪಾಲನತತ್ಪರಾ ।
ಸಾ ತು ಧರ್ಮವ್ಯವಸ್ಥಾನಂ ಕರೋತಿ ನಿಯತಂ ಭುವಿ ॥೫೩॥

ಪ್ರೋದ್ಭೂತಾನಸುರಾನ್ ಹನ್ತಿ ಧರ್ಮವಿಚ್ಛಿತ್ತಿಕಾರಿಣಃ ।
ಪಾತಿ ದೇವಾನ್ ಸತಶ್ಚಾನ್ಯಾನ್ ಧರ್ಮರಕ್ಷಾಪರಾಯಣಾನ್ ॥೫೪॥

---

೫೦. ಆದಿಶೇಷನರೂಪವಾದ ದ್ವಿತೀಯ ಮೂರ್ತಿಯು ಕೆಳಭಾಗದಲ್ಲಿ ನಿಂತು ತಲೆಯಿಂದ ಭೂಮಿಯನ್ನು ಹೊತ್ತುಕೊಂಡಿದೆ. ತಮೋಗುಣಪೂರ್ಣವಾದ ಆ ರೂಪವು ತಿರ್ಯಕ್ಪ್ರಾಣಿಯ ಭಾವವನ್ನು ಹೊಂದಿಕೊಂಡಿದೆ.

೫೧. ಮೂರನೆಯ ವ್ಯೂಹವು ಪ್ರಜಾಪಾಲನದಲ್ಲಿ ನಿರತವಾಗಿ ಆಯಾಯ ಚರಿತ್ರೆಯನ್ನು ನಡೆಸುತ್ತಿದೆ. ಧರ್ಮವನ್ನು ಸ್ಥಾಪಿಸಲು ಆವಿರ್ಭವಿಸುವ ಆ ವ್ಯೂಹವು ಸತ್ತ್ವಗುಣದಿಂದ ಪರಿಪೂರ್ಣವೆಂದು ಅರಿಯಬೇಕು.

೫೨. ನಾಲ್ಕನೆಯ ಮೂರ್ತಿಯು ಸಮುದ್ರ ಜಲರಾಶಿಯ ಮಧ್ಯದಲ್ಲಿ ಆದಿಶೇಷನೆಂಬ ಶಯನದಲ್ಲಿ ಮಲಗಿ ನಿದ್ರೆಮಾಡುತ್ತಿದೆ. ಆ ಮೂರ್ತಿಯಲ್ಲಿ ರಜೋಗುಣವು ವ್ಯಾಪಿಸಿದೆ. ಅದು ಯಾವಾಗಲೂ ಪ್ರಪಂಚ ಸೃಷ್ಟಿಯನ್ನು ಮಾಡುವುದು.

೫೩. ಪ್ರಜೆಗಳನ್ನು ಪಾಲಿಸುವ ಕರ್ಮದಲ್ಲಿ ತತ್ಪರವಾದ ನಾರಾಯಣನ ಮೂರನೆಯ ಮೂರ್ತಿಯು ಧರ್ಮವು ಲುಪ್ತವಾಗಿ ಹೋದಾಗ ತಪ್ಪದೆ ಭೂಮಿಯಲ್ಲಿ ಅವತರಿಸಿ ಧರ್ಮಸಂಸ್ಥಾಪನೆಯನ್ನು ಮಾಡುವುದು.

೫೪. ಆ ಮೂರ್ತಿಯು ಧರ್ಮಾನುಷ್ಠಾನಕ್ಕೆ ಭಂಗವನ್ನು ತರುವ ಮದಾಂಧರಾದ ಅಸುರರನ್ನು ಕೊಲ್ಲುವುದು. ಮತ್ತು ದೇವತೆಗಳನ್ನೂ ಧರ್ಮ ರಕ್ಷಣೆಯಲ್ಲಿ ಬದ್ಧಾದರರಾದ ಸಾಧುಗಳನ್ನೂ ರಕ್ಷಿಸುವುದು.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಜೈಮಿನೇ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜತ್ಯಸೌ ॥೫೫॥

ಭೂತ್ವಾ ಪುರಾ ವರಾಹೇಣ ತುಣ್ಡೇನಾಪೋ ನಿರಸ್ಯ ಚ ।
ಏಕಯಾ ದಂಷ್ಟ್ರಯೋತ್ಖಾತಾ ನಲಿನೀವ ವಸುನ್ಧರಾ ॥೫೬॥

ಕೃತ್ವಾ ನೃಸಿಹ್ಮರೂಪಂ ಚ ಹಿರಣ್ಯಕಶಿಪುರ್ಹತಃ ।
ವಿಪ್ರಚಿತ್ತಿಮುಖಾಶ್ಚಾನ್ಯೇ ದಾನವಾ ವಿನಿಪಾತಿತಾಃ ॥೫೭॥

ವಾಮನಾದೀಂಸ್ತಥೈವಾನ್ಯಾನ್ನ ಸಂಖ್ಯಾತುಮಿಹೋತ್ಸಹೇ ।
ಅವತಾರಾಂಶ್ಚ ತಸ್ಯೇಹ ಮಾಥುರಃ ಸಾಮ್ಪ್ರತಂ ತ್ವಯಮ್ ॥೫೮॥

ಇತಿ ಸಾ ಸಾತ್ವಿಕೀ ಮೂರ್ತಿರವತಾರಾನ್ ಕರೋತಿ ವೈ ।
ಪ್ರದ್ಯುಮ್ನೇತಿ ಚ ಸಾ ಖ್ಯಾತಾ ರಕ್ಷಾಕರ್ಮಣ್ಯವಸ್ಥಿತಾ ॥೫೯॥

---

೫೫. ಜೈಮಿನಿಮುನಿಯೆ ! ಯಾವ ಯಾವ ಸಮಯದಲ್ಲಿ ಧರ್ಮಕ್ಕೆ ಲೋಪವುಂಟಾಗಿ ಅಧರ್ಮಕ್ಕೆ ಪ್ರಾಬಲ್ಯ ದೊರೆಯುವುದೋ, ಆಗಾಗ ಈ ಮೂರ್ತಿಯು ಧರ್ಮಸ್ಥಾಪನೆಗೆ ಅವತಾರವಾಗಿ ಬರುವುದು.

೫೬. ಪೂರ್ವಕಾಲದಲ್ಲಿ ಈ ಮೂರ್ತಿಯು ವರಾಹ ರೂಪವನ್ನು ಸ್ವೀಕರಿಸಿ ಮುಖದಿಂದ ನೀರನ್ನು ಭೇದಿಸಿ ತಾವರೆಯ ಬಳ್ಳಿಯಂತೆ ಭೂಮಿಯನ್ನು ಒಂದು ಕೋರೇಹಲ್ಲಿನಿಂದ ಮೇಲಕ್ಕೆ ಎತ್ತಿರುವುದು.

೫೭. ಹಾಗು ನೃಸಿಹ್ಮಾವತಾರವನ್ನು ಮಾಡಿ ಧರ್ಮದ್ರೋಹಿಯಾದ ಹಿರಣ್ಯಕಶಿಪುರಾಕ್ಷಸನು ವಧಿಸಲ್ಪಟ್ಟಿರುವನು, ಮತ್ತು ವಿಪ್ರಚಿತ್ತಿ ಮುಂತಾದ ಅನೇಕ ದಾನವರು ವಧಿಸಲ್ಪಟ್ಟಿರುವರು.

೫೮. ಹಾಗೆಯೆ ವಾಮನ ಮುಂತಾದ ಇನ್ನು ಅನೇಕ ಅವತಾರಗಳನ್ನು ಈಗ ನಾವು ಎಣಿಸಿ ಹೇಳುವಂತಿಲ್ಲ. ಹೀಗೆ ಮಾಡುವ ಅನೇಕ ಅವತಾರಗಳಲ್ಲಿ ಮಥುರಾವಾಸಿಯಾದ ಕೃಷ್ಣನ ಅವತಾರವು ಈಗ ಪ್ರಸಕ್ತವಾಗಿರುವುದು.

೫೯. ಸತ್ತ್ವಗುಣದಿಂದ ಪೂರ್ಣವಾದ ಆ ಮೂರ್ತಿಯು ನಾನಾ ಅವತಾರಗಳನ್ನು ಕೈಗೊಳ್ಳುವುದು. ಜಗತ್ತಿನ ರಕ್ಷಣವನ್ನು ನೆರವೇರಿಸುವ ಆ ಮೂರ್ತಿಯು ಪ್ರದ್ಯುಮ್ನಮೂರ್ತಿ ಎಂದು ಪ್ರಸಿದ್ಧಿಹೊಂದಿದೆ.

ದೇವತ್ವೇಽಥ ಮನುಷ್ಯತ್ವೇ ತಿರ್ಯಗ್ಯೋನೌ ಚ ಸಂಸ್ಥಿತಾ ।
ಗೃಹ್ಣಾತಿ ತತ್ಸ್ವಭಾವಂ ಚ ವಾಸುದೇವೇಚ್ಛಯಾ ಸದಾ ॥೬೦॥

ಇತ್ಯೇತತ್ತೇ ಸಮಾಖ್ಯಾತಂ ಕೃತಕೃತ್ಯೋಽಪಿ ಯತ್ಪ್ರಭುಃ ।
ಮಾನುಷತ್ವಂ ಗತೋ ವಿಷ್ಣುಃ ಶೃಣುಷ್ವಾಸ್ಯೋತ್ತರಂ ಪುನಃ ॥೬೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಚತುರ್ವ್ಯೂಹಾವತಾರ-ನಿರೂಪಣಂ ನಾಮ ಚತುರ್ಥೋಽಧ್ಯಾಯಃ

---

೬೦. ನಿರ್ಗುಣಮೂರ್ತಿಯ ಸಂಕಲ್ಪದಂತೆ ಸಾತ್ವಿಕಮೂರ್ತಿಯು ಆಯಾಯ ಅವತಾರಗಳಲ್ಲಿ ದೇವತ್ವ-ಮನುಷ್ಯತ್ವ ಅಥವಾ ತಿರ್ಯಗ್ರೂಪ ಇವು-ಗಳಿಗೆ ತಕ್ಕಂತೆ ಆಯಾಯ ಸ್ವಭಾವವನ್ನು ಹೊಂದಿಕೊಂಡಿರುವುದು.

೬೧. ಸರ್ವೇಶ್ವರನಾದ ಪರಮಾತ್ಮನು ಕೃತಕೃತ್ಯನಾಗಿದ್ದರೂ ಮಾನವತ್ವವನ್ನು ಏಕೆ ಹೊಂದಿದನೆಂಬುದನ್ನು ನಿನಗೆ ಹೇಳಿದಂತಾಯಿತು. ಹಾಗೆಯೆ ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಂಚಮೋಽಧ್ಯಾಯಃ

(ದ್ರೌಪದ್ಯಾ ಏಕಪತ್ನೀತ್ವಮ್)

ತ್ವಷ್ಟೃಪುತ್ರೇ ಹತೇ ಪೂರ್ವಂ ಬ್ರಹ್ಮನ್ನಿಂದ್ರಸ್ಯ ತೇಜಸಃ ।
ಬ್ರಹ್ಮಹತ್ಯಾಭಿಭೂತಸ್ಯ ಪರಾ ಹಾನಿರಜಾಯತ ॥೧॥

ತದ್ಧರ್ಮಂ ಪ್ರವಿವೇಶಾಥ ಶಾಕ್ರಂತೇಜೋಽಪಚಾರತಃ ।
ನಿಸ್ತೇಜಾಶ್ಚಾಭವಚ್ಛಕ್ರೋ ಧರ್ಮೇ ತೇಜಸಿ ನಿರ್ಗತೇ ॥೨॥

ತತಃ ಪುತ್ರಂ ಹತಂ ಶ್ರುತ್ವಾ ತ್ವಷ್ಟಾ ಕ್ರುದ್ಧಃ ಪ್ರಜಾಪತಿಃ ।
ಅವಲುಞ್ಚ್ಯ ಜಟಾಮೇಕಾಮಿದಂ ವಚನಮಬ್ರವೀತ್ ॥೩॥

ಐದನೆಯ ಅಧ್ಯಾಯ

ಪಕ್ಷಿಗಳು ಇಂತೆಂದುವು :—

೧. ಬ್ರಹ್ಮರ್ಷಿಯೆ ! ಪೂರ್ವಕಾಲದಲ್ಲಿ ತ್ವಷ್ಟೃಪುತ್ರನಾದ ವಿಶ್ವರೂಪನು ಇಂದ್ರನಿಂದ ಹತನಾಗಲು ಬ್ರಹ್ಮಹತ್ಯೆಯಿಂದ ಆವರಿಸಲ್ಪಟ್ಟ ಇಂದ್ರನ ತೇಜಸ್ಸಿಗೆ ತುಂಬ ಹಾನಿಯು ಉಂಟಾಯಿತು.

೨. ತರುವಾಯ ಪಾಪಸಂಪರ್ಕದಿಂದ ಇಂದ್ರನನ್ನು ಬಿಟ್ಟ ಐಂದ್ರ ತೇಜಸ್ಸು ಯಮಧರ್ಮನನ್ನು ಪ್ರವೇಶಿಸಿತು. ನೈಜತೇಜಸ್ಸು ಧರ್ಮವನ್ನು ಪ್ರವೇಶಿಸಲು ಇಂದ್ರನು ನಿಸ್ತೇಜನಾದನು.

೩. ಅನಂತರ ತ್ವಷ್ಟೃಪ್ರಜಾಪತಿಯು ಪುತ್ರನ ವಧವನ್ನು ಕೇಳಿ ಕೋಪಾವೇಶವುಳ್ಳವನಾಗಿ ತನ್ನ ತಲೆಯಿಂದ ಒಂದು ಜಡೆಯನ್ನು ಕಿತ್ತು ಹಿಡಿದು ಕೊಂಡು ಈ ಮಾತನ್ನು ಹೇಳಿದನು.

ಅದ್ಯ ಪಶ್ಯನ್ತು ಮೇ ವೀರ್ಯಂ ತ್ರಯೋ ಲೋಕಾಃ ಸದೇವತಾಃ ।
ಸ ಚ ಪಶ್ಯತು ದುರ್ಬುದ್ಧಿರ್ಬ್ರಹ್ಮಹಾ ಪಾಕಶಾಸನಃ ॥೪॥

ಸ್ವಕರ್ಮಾಭಿರತೋ ಯೇನ ಮತ್ಸುತೋ ವಿನಿಪಾತಿತಃ ।
ಇತ್ಯುಕ್ತ್ವಾ ಕೋಪರಕ್ತಾಕ್ಷೋ ಜಟಾಮಗ್ನೌ ಜುಹಾವ ತಾಮ್ ॥೫॥

ತತೋ ವೃತ್ರಃ ಸಮುತ್ತಸ್ಥೌ ಜ್ವಾಲಾಮಾಲೀ ಮಹಾಸುರಃ ।
ಮಹಾಕಾಯೋ ಮಹಾದಂಷ್ಟ್ರೋ ಭಿನ್ನಾಞ್ಜನಚಯಪ್ರಭಃ ॥೬॥

ಇನ್ದ್ರಶತ್ರುರಮೇಯಾತ್ಮಾ ತ್ವಷ್ಟೃತೇಜೋಪಬೃಂಹಿತಃ ।
ಅಹನ್ಯಹನಿ ಸೋಽವರ್ಧದಿಷುಪಾತಂ ಮಹಾಬಲಃ ॥೭॥

---

೪. ದೇವತೆಗಳಿಂದ ಕೂಡಿದ ಮೂರು ಲೋಕವು ಇಂದು ನನ್ನ ವೀರ್ಯವನ್ನು ನೋಡಲಿ. ಅವಿವೇಕಿಯಾಗಿ ಬ್ರಹ್ಮಹತ್ಯೆಯನ್ನು ಮಾಡಿದ ಆ ಇಂದ್ರನೂ ನನ್ನ ವೀರ್ಯವನ್ನು ನೋಡಿ ತಿಳಿಯಲಿ.

೫. ಆ ದೇವೇಂದ್ರನು ಸ್ವಕರ್ಮಾನುಷ್ಠಾನಪರನಾದ ನನ್ನ ಪುತ್ರನನ್ನು ವಧಿಸಿದನಲ್ಲವೆ? ಹೀಗೆಂದು ಹೇಳಿ ಕೋಪದಿಂದ ಕೆಂಗಣ್ಣುಳ್ಳವನಾಗಿ ಆ ಜಡೆಯನ್ನು ಅಗ್ನಿಯಲ್ಲಿ ಹೋಮಮಾಡಿದನು.

೬. ಆಗ ಅಗ್ನಿಕುಂಡದಿಂದ ಜ್ವಾಲೆಗಳ ಮಾಲೆಯಿಂದ ಸುತ್ತಲ್ಪಟ್ಟವನೂ ಮಹಾಕಾಯನೂ ದೊಡ್ಡ ಕೋರೆಹಲ್ಲುಗಳುಳ್ಳವನೂ ಮತ್ತು ಭೇದಿಸಿದ ಕಾಡಿಗೆ ರಾಶಿಯಂತೆ ಕಪ್ಪು ಪ್ರಭೆಯುಳ್ಳವನೂ ಆದ ವೃತ್ರನೆಂಬ ಮಹಾ ಅಸುರನು ಎದ್ದು ಬಂದನು.

೭. ಇಂದ್ರನ ಶತ್ರುವಾಗಿ ಜನಿಸಿದವನೂ, ಅಳೆಯಲಾಗದ ಸಾಹಸವುಳ್ಳವನೂ, ತ್ವಷ್ಟೃಪ್ರಜಾಪತಿಯ ತೇಜಸ್ಸಿನಿಂದ ತುಂಬಿದವನೂ ಮತ್ತು ಮಹಾಬಲಿಷ್ಠನೂ ಆದ ಆ ಅಸುರನು ಪ್ರತಿದಿನ ಬಿಟ್ಟ ಬಾಣವು ಹೋಗುವಷ್ಟು ದೀರ್ಘ ಆಕಾರದಿಂದ ಬೆಳೆಯುತ್ತಿದ್ದನು.

ವಧಾಯ ಚಾತ್ಮನೋ ದೃಷ್ಟ್ವಾ ವೃತ್ರಂ ಶಕ್ರೋ ಮಹಾಸುರಮ್ ।
ಪ್ರೇಷಯಾಮಾಸ ಸಪ್ತರ್ಷೀನ್ ಸನ್ಧಿಮಿಚ್ಛನ್ ಭಯಾತುರಃ ॥೮॥

ಸಖ್ಯಂ ಚಕ್ರುಸ್ತತಸ್ತಸ್ಯ ವೃತ್ರೇಣ ಸಮಯಾಂಸ್ತಥಾ ।
ಋಷಯಃ ಪ್ರೀತಮನಸಃ ಸರ್ವಭೂತಹಿತೇ ರತಾಃ ॥೯॥

ಸಮಯಸ್ಥಿತಿಮುಲ್ಲಙ್ಘ್ಯ ಯದಾ ಶಕ್ರೇಣ ಘಾತಿತಃ ।
ವೃತ್ರೋ ಹತ್ಯಾಭಿಭೂತಸ್ಯ ತದಾ ಬಲಮಶೀರ್ಯತ ॥೧೦॥

ತಚ್ಛಕ್ರದೇಹವಿಭ್ರಷ್ಟಂ ಬಲಂ ಮಾರುತಮಾವಿಶತ್ ।
ಸರ್ವವ್ಯಾಪಿನಮವ್ಯಕ್ತಂ ಬಲಸ್ಯೈವಾಧಿದೈವತಮ್ ॥೧೧॥

ಅಹಲ್ಯಾಂ ಚ ಯದಾ ಶಕ್ರೋ ಗೌತಮಂ ರೂಪಮಾಸ್ಥಿತಃ ।
ಧರ್ಷಯಾಮಾಸ ದೇವೇನ್ದ್ರಸ್ತದಾ ರೂಪಮಹೀಯತ ॥೧೨॥

---

೮. ಇಂದ್ರನು ತನ್ನ ವಧೆಗಾಗಿ ವೃತ್ರಾಸುರನು ಜನಿಸಿದ್ದನ್ನು ಕಂಡು ಭಯದಿಂದ ಕೂಡಿ ಅಸುರನ ಸಂಗಡ ಸಂಧಿಯನ್ನು ಬಯಸಿ ಸಂಧಿಯನ್ನು ಏರ್ಪಡಿಸಲೋಸ್ಕರ ಸಪ್ತರ್ಷಿಗಳನ್ನು ಕಳುಹಿಸಿದನು.

೯. ತರುವಾಯ ಸಮಸ್ತಪ್ರಾಣಿಗಳ ಹಿತದಲ್ಲಿ ದೃಷ್ಟಿಯುಳ್ಳವರೂ, ಸಂತುಷ್ಟ ಅಂತಃಕರಣವುಳ್ಳವರೂ ಆದ ಋಷಿಗಳು ಅನೇಕ ಶಪಥಪೂರ್ವಕವಾಗಿ ವೃತ್ರಾಸುರನೊಡನೆ ಇಂದ್ರನಿಗೆ ಸ್ನೇಹವನ್ನು ಬೆಳೆಸಿದರು.

೧೦. ವೃತ್ರಾಸುರನಿಗೆ ಇತ್ತ ಸಮಯಸ್ಥಿತಿಯನ್ನು ಉಲ್ಲಂಘಿಸಿ ಇಂದ್ರನು ಯಾವಾಗ ಅಸುರನನ್ನು ವಧಿಸಿದನೋ ಆಗ ಬ್ರಹ್ಮಹತ್ಯೆಯಿಂದ ಆವರಿಸಲ್ಪಟ್ಟ ಇಂದ್ರನ ಬಲವು ಚ್ಯುತವಾಯಿತು.

೧೧. ಇಂದ್ರನ ದೇಹದಿಂದ ಭ್ರಷ್ಟವಾದ ಬಲವು ಸರ್ವವ್ಯಾಪಿಯೂ ಅಮೂರ್ತನಾದುದರಿಂದ ಅಪ್ರಕಾಶನೂ ಮತ್ತು ಬಲಕ್ಕೆ ಅಭಿಮಾನದೇವತೆಯೂ ಆದ ವಾಯುದೇವನನ್ನು ಪ್ರವೇಶಿಸಿತು.

೧೨. ದೇವೇಂದ್ರನು ಯಾವಾಗ ಗೌತಮಮುನಿಯ ರೂಪವನ್ನು ಧರಿಸಿ ಗೌತಮಪತ್ನಿಯಾದ ಅಹಲ್ಯೆಯನ್ನು ಸಂಗಮಾಡಿದನೊ ಆಗ ತನ್ನ ರೂಪವನ್ನು ಕಳೆದುಕೊಂಡನು.

ಅಙ್ಗಪ್ರತ್ಯಙ್ಗಲಾವಣ್ಯಂ ಯದತೀವ ಮನೋರಮಮ್ ।
ವಿಹಾಯ ದುಷ್ಟಂ ದೇವೇನ್ದ್ರಂ ನಾಸತ್ಯಾವಗಮತ್ತತಃ ॥೧೩॥

ಧರ್ಮೇಣ ತೇಜಸಾ ತ್ಯಕ್ತಂ ಬಲಹೀನಮರೂಪಿಣಮ್ ।
ಜ್ಞಾತ್ವಾ ಸುರೇಶಂ ದೈತೇಯಾಸ್ತಜ್ಜಯೇ ಚಕ್ರುರುದ್ಯಮಮ್ ॥೧೪॥

ರಾಜ್ಞಾಮುದ್ರಿಕ್ತವೀರ್ಯಾಣಾಂ ದೇವೇನ್ದ್ರವಿಜಿಗೀಷವಃ ।
ಕುಲೇಷ್ವತಿಬಲಾ ದೈತ್ಯಾ ಅಜಾಯನ್ತ ಮಹಾಮುನೇ ॥೧೫॥

ಕಸ್ಯ ಚಿತ್ತ್ವಥ ಕಾಲಸ್ಯ ಧರಣೀ ಭಾರಪೀಡಿತಾ ।
ಜಗಾಮ ಮೇರುಶಿಖರಂ ಸದೋ ಯತ್ರ ದಿವೌಕಸಾಮ್ ॥೧೬॥

ತೇಷಾಂ ಸಾ ಕಥಯಾಮಾಸ ಭೂರಿಭಾರಾವಪೀಡಿತಾ ।
ದನುಜಾತ್ಮಜದೈತ್ಯೋತ್ಥಂ ಖೇದಕಾರಣಮಾತ್ಮನಃ ॥೧೭॥

---

೧೩. ಆ ಕಾರಣದಿಂದ ಇಂದ್ರನಲ್ಲಿದ್ದ ಅತಿಸುಂದರವಾದ ಅಂಗೋ-ಪಾಂಗಗಳಲ್ಲಿದ್ದ ಸೌಂದರ್ಯರಾಶಿಯು ದೋಷಿಯಾದ ಇಂದ್ರನನ್ನು ಬಿಟ್ಟು ಅಶ್ವಿನೀದೇವಕುಮಾರರನ್ನು ಆಶ್ರಯಿಸಿತು.

೧೪. ಆಗ ದೈತ್ಯರು ಆಯಾಯ ಕಾರಣಗಳಿಂದ ಧರ್ಮತೇಜಸ್ಸಿ-ನಿಂದಲೂ ಬಲದಿಂದಲೂ ಮತ್ತು ಸೌಂದರ್ಯದಿಂದಲೂ ಶೂನ್ಯನಾದ ಇಂದ್ರ-ನನ್ನು ತಿಳಿದು ಇಂದ್ರನನ್ನು ಗೆಲ್ಲಲು ಉತ್ತಮಸಾಹಸವನ್ನು ಕೈಗೊಂಡರು.

೧೫. ಮಹಾಮುನಿಯೆ! ಮಹಾಬಲಿಷ್ಠರಾದ ದೈತ್ಯರು ದೇವೇಂದ್ರ-ನನ್ನು ಜಯಿಸಲು ಇಷ್ಟವುಳ್ಳವರಾಗಿ ಉದ್ರೇಕಗೊಂಡ ವೀರ್ಯವುಳ್ಳ ರಾಜರ ವಂಶಗಳಲ್ಲಿ ಜನಿಸಿದರು.

೧೬. ಕೆಲವು ಕಾಲ ಕಳೆಯಲಾಗಿ ದುಷ್ಟರ ಭಾರದಿಂದ ಪೀಡಿಸಲ್ಪಟ್ಟ ಭೂದೇವಿಯು ದೇವತೆಗಳ ಸಭೆಯಿಂದ ಅಲಂಕರಿಸಲ್ಪಟ್ಟ ಮೇರುಗಿರಿಯ ಶಿಖರಕ್ಕೆ ಹೋದಳು.

೧೭. ಸಹಿಸಲಾಗದ ದುಷ್ಟಭಾರದಿಂದ ನೊಂದ ಭೂದೇವಿಯು ರಾಜ-ವಂಶದಲ್ಲಿ ಜನಿಸಿದ ದೈತ್ಯಕುಮಾರರಿಂದ ತನಗೆ ಉಂಟಾದ ಖೇದದ ಕಾರಣ-ವನ್ನು ದೇವತೆಗಳಿಗೆ ವಿಸ್ತಾರವಾಗಿ ಹೇಳಿದಳು.

ಏತೇ ಭವದ್ಭಿರಸುರಾ ನಿಹತಾಃ ಪೃಥುಲೌಜಸಃ ।
ತೇ ಸರ್ವೇ ಮಾನುಷೇ ಲೋಕೇ ಜಾತಾ ಗೇಹೇಷು ಭೂಭೃತಾಮ್ ॥೧೮॥

ಅಕ್ಷೌಹಿಣ್ಯೋ ಹಿ ಬಹುಲಾಸ್ತದ್ಭಾರಾರ್ತಾ ವ್ರಜಾಮ್ಯಧಃ ।
ತಥಾ ಕುರುಧ್ವಂ ತ್ರಿದಶಾ ಯಥಾ ಶಾನ್ತಿರ್ಭವೇನ್ಮಮ ॥೧೯॥

ಪಕ್ಷಿಣ ಊಚುಃ :—

ತೇಜೋಭಾಗೈಸ್ತತೋ ದೇವಾ ಅವತೇರುರ್ದಿವೋ ಮಹೀಮ್ ।
ಪ್ರಜಾನಾಮುಪಕಾರಾರ್ಥಂ ಭೂಭಾರಹರಣಾಯ ಚ ॥೨೦॥

ಯದಿನ್ದ್ರದೇಹಜಂ ತೇಜಸ್ತನ್ಮುಮೋಚ ಸ್ವಯಂ ವೃಷಃ ।
ಕುನ್ತ್ಯಾಂ ಜಾತೋ ಮಹಾತೇಜಾಸ್ತತೋ ರಾಜಾ ಯುಧಿಷ್ಠಿರಃ॥೨೧॥

---

೧೮. ನಿಮ್ಮಿಂದ ಹತರಾದ ಮತ್ತು ಮಹಾವಿಕ್ರಮಶಾಲಿಗಳಾದ ಅಸುರರೆಲ್ಲರೂ ಮನುಷ್ಯಲೋಕದಲ್ಲಿ ವೀರ್ಯೋದ್ಧತರಾದ ರಾಜರ ವಂಶಗಳಲ್ಲಿ ಮತ್ತೆ ಜನಿಸಿರುವರು.

೧೯. ದೇವತೆಗಳೆ ! ಹಾಗೆ ಜನಿಸಿದ ದುಷ್ಟವೀರರ ಸಂಖ್ಯೆಯು ಅನೇಕ ಅಕ್ಷೌಹಿಣಿಗಳಾಗಿರುವುದು. ಆ ಭಾರದಿಂದ ನೊಂದ ನಾನು ನಿಲ್ಲಲಾರದೆ ಕೆಳಕ್ಕೆ ಇಳಿಯುವಂತೆ ಆಗಿದೆ. ನನಗೆ ಶಾಂತಿಯುಂಟಾಗುವಂತೆ ಮಾಡಿರಿ.

ಪಕ್ಷಿಗಳು ಇಂತೆಂದುವು :—

೨೦. ತರುವಾಯ ದೇವತೆಗಳು ಪ್ರಜೆಗಳಿಗೆ ಉಪಕಾರ ಮಾಡುವುದಕ್ಕೂ ಮತ್ತು ಭೂದೇವಿಯ ಭಾರವನ್ನು ಇಳಿಸುವುದಕ್ಕೂ ತಮ್ಮ ತೇಜಸ್ಸಿನ ಅಂಶಗಳಿಂದ ಸ್ವರ್ಗದಿಂದ ಭೂಮಿಗೆ ಅವತರಿಸಿದರು.

೨೧. ಧರ್ಮದೇವತೆಯು ಇಂದ್ರನ ದೇಹದಿಂದ ತನ್ನಲ್ಲಿ ಸೇರಿದ ತೇಜಸ್ಸಿನ ಅಂಶವನ್ನು ತ್ಯಜಿಸಲು ಕುಂತಿದೇವಿಯಲ್ಲಿ ಆ ಅಂಶದಿಂದ ಮಹಾತೇಜಸ್ವಿಯಾದ ಯುಧಿಷ್ಠಿರ ರಾಜನು ಜನಿಸಿದನು.

ಬಲಂ ಮುಮೋಚ ಪವನಸ್ತತೋ ಭೀಮೋ ವ್ಯಜಾಯತ ।
ಶಕ್ರವೀರ್ಯಾರ್ಧತಶ್ಚೈವ ಜಜ್ಞೇ ಪಾರ್ಥೋ ಧನಞ್ಜಯಃ ॥೨೨॥

ಉತ್ಪನ್ನೌ ಯಮಜೌ ಮಾದ್ರ್ಯಾಂ ಶಕ್ರರೂಪೌ ಮಹಾದ್ಯುತೀ ।
ಪಞ್ಚಧಾ ಭಗವಾನಿತ್ಥಮವತೀರ್ಣಃ ಶತಕ್ರತುಃ ॥೨೩॥

ತಸ್ಯೋತ್ಪನ್ನಾ ಮಹಾಭಾಗಾ ಪತ್ನೀ ಕೃಷ್ಣಾ ಹುತಾಶನಾತ್ ॥೨೪॥

ಶಕ್ರಸ್ಯೈಕಸ್ಯ ಸಾ ಪತ್ನೀ ಕೃಷ್ಣಾ ನಾನ್ಯಸ್ಯ ಕಸ್ಯಚಿತ್ ।
ಯೋಗೀಶ್ವರಾಃ ಶರೀರಾಣಿ ಕುರ್ವನ್ತಿ ಬಹುಲಾನ್ಯಪಿ ॥೨೫॥

---

೨೨. ವಾಯುದೇವನು ತನ್ನಲ್ಲಿದ್ದ ಇಂದ್ರಬಲವನ್ನು ತ್ಯಜಿಸಲಾಗಿ ಆ ಅಂಶದಿಂದ ಭೀಮನು ಜನಿಸಿದನು. ಇಂದ್ರನ ವೀರ್ಯದಲ್ಲಿ ಅರ್ಧವೀರ್ಯಾಂಶದಿಂದ ಧನಂಜಯನೆಂಬ ಕುಂತೀಪುತ್ರನು ಹುಟ್ಟಿದನು.

೨೩. ಇಂದ್ರನ ರೂಪಲಾವಣ್ಯ ಅಂಶಗಳಿಂದ ಮಹಾಸುಂದರರಾದ ನಕುಲ-ಸಹದೇವರೆಂಬ ಯಮಳ ಕುಮಾರರು ಅಶ್ವಿನೀದೇವತೆಗಳಿಂದ ಮಾದ್ರೀ ದೇವಿಯಲ್ಲಿ ಜನಿಸಿದರು. ಪೂಜ್ಯನಾದ ಇಂದ್ರನು ಈ ಕಾರಣದಿಂದ ಐದುವಿಧವಾಗಿ ಅವತಾರ ಮಾಡಿದನು.

೨೪. ಅಗ್ನಿಕುಂಡದಿಂದ ಜನ್ಮವೆತ್ತಿ ಅಯೋನಿಜೆಯಾದ ಮತ್ತು ಮಹಾಭಾಗ್ಯವತಿಯಾದ ದ್ರೌಪದಿಯು ಐದು ರೂಪದಿಂದ ಅವತರಿಸಿದ ಇಂದ್ರನೊಬ್ಬನಿಗೆ ಪತ್ನಿಯಾಗಿರುವಳು.

೨೫. ಯೋಗಸಿದ್ಧಿಯುಳ್ಳ ಯೋಗೀಶ್ವರರು ತಮ್ಮ ಮಹಿಮೆಯಿಂದ ಅನೇಕ ದೇಹಗಳನ್ನು ಪರಿಗ್ರಹಿಸಬಲ್ಲರು. ಹಾಗೆ ಐದು ದೇಹಗಳನ್ನು ಪರಿಗ್ರಹಿಸಿದ ಒಬ್ಬನೇ ಇಂದ್ರನಿಗೆ ದ್ರೌಪದಿಯು ಪತ್ನಿಯಾಗಿರುವಳೇ ಹೊರತು ಪರಪುರುಷನ ಪತ್ನೀತ್ವವನ್ನು ಹೊಂದಿಲ್ಲ.

ಪಞ್ಚಾನಾಮೇಕಪತ್ನೀತ್ವಮಿತ್ಯೇತತ್ಕಥಿತಂ ತವ ।
ಶ್ರೂಯತಾಂ ಬಲದೇವೋಽಪಿ ಯಥಾ ಯಾತಃ ಸರಸ್ವತೀಮ್ ॥೨೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಇನ್ದ್ರವಿಕ್ರಿಯಾ ನಾಮ ಪಞ್ಚಮೋಽಧ್ಯಾಯಃ

---

೨೬. ಮುನಿಯೆ ! ದ್ರೌಪದಿಯು ಐದು ಮಂದಿಗೆ ಪತ್ನಿಯಾದ ವಿಷಯದಲ್ಲಿ ನಿನಗಿದ್ದ ಸಂದೇಹಕ್ಕೆ ಸಮಾಧಾನವನ್ನು ಹೇಳಿದೆವು. ಬಲರಾಮನು ಯಾವ ನಿಮಿತ್ತದಿಂದ ಸರಸ್ವತೀನದೀತೀರಕ್ಕೆ ಬ್ರಹ್ಮಹತ್ಯಾ ನಿವಾರಣೆಗಾಗಿ ಹೋದನೊ ಆ ವಿಷಯವನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಐದನೆಯ ಅಧ್ಯಾಯವು ಸಮಾಪ್ತವು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಷ್ಠೋಽಧ್ಯಾಯಃ

(ಬಲರಾಮಸ್ಯ ತೀರ್ಥಯಾತ್ರಾಪ್ರಸಙ್ಗಃ)

ಪಕ್ಷಿಣ ಊಚುಃ :—

ರಾಮಃ ಪಾರ್ಥೇ ಪರಾಂ ಪ್ರೀತಿಂ ಜ್ಞಾತ್ವಾ ಕೃಷ್ಣಸ್ಯ ಲಾಙ್ಗಲೀ ।
ಚಿನ್ತಯಾಮಾಸ ಬಹುಧಾ ಕಿಂ ಕೃತಂ ಸುಕೃತಂ ಭವೇತ್ ॥೧॥

ಕೃಷ್ಣೇನ ಹಿ ವಿನಾ ನಾಹಂ ಯಾಸ್ಯೇ ದುರ್ಯೋಧನಾನ್ತಿಕಮ್ ।
ಪಾಣ್ಡವಾನ್ವಾ ಸಮಾಶ್ರಿತ್ಯ ಕಥಂ ದುರ್ಯೋಧನಂ ನೃಪಮ್ ॥೨॥

ಜಾಮಾತರಂ ತಥಾ ಶಿಷ್ಯಂ ಘಾತಯಿಷ್ಯೇ ನರೇಶ್ವರಮ್ ।
ತಸ್ಮಾನ್ನ ಪಾರ್ಥಂ ಯಾಸ್ಯಾಮಿ ನಾಪಿ ದುರ್ಯೋಧನಂ ನೃಪಮ್॥೩॥

ಆರನೆಯ ಅಧ್ಯಾಯವು

ಪಕ್ಷಿಗಳು ಇಂತೆಂದುವು :—

೧. ನೇಗಿಲನ್ನು ಆಯುಧವನ್ನಾಗಿ ಧರಿಸಿದ ಬಲರಾಮನು ಶ್ರೀಕೃಷ್ಣನಿಗೆ ಪಾರ್ಥನಲ್ಲಿ ಅತಿಶಯವಾದ ಪ್ರೀತಿಯನ್ನು ಕಂಡು ತನ್ನ ಕರ್ತವ್ಯದ ವಿಷಯದಲ್ಲಿ ಏನು ಮಾಡಿದರೆ ಸರಿಯಾದೀತೆಂದು ಬಹುವಿಧವಾಗಿ ಚಿಂತಿಸಿದನು.

೨. ಶ್ರೀಕೃಷ್ಣನನ್ನು ಬಿಟ್ಟು ನಾನೊಬ್ಬನು ದುರ್ಯೋಧನನ ಸಹಾಯಕ್ಕೆ ಹೋಗಲಾರೆನು. ಪಾಂಡವರ ಜೊತೆಯಲ್ಲಿದ್ದು ದುರ್ಯೋಧನರಾಜನಿಗೆ ಹೇಗೆ ವಿರೋಧಮಾಡಲಿ.

೩. ಪಾಂಡವರಿಗೆ ಆಶ್ರಯವನ್ನು ಕೊಟ್ಟು ಅಳಿಯನೂ ಮತ್ತು ಶಿಷ್ಯನೂ ಆದ ದುರ್ಯೋಧನರಾಜನನ್ನು ಹೇಗೆ ವಧಮಾಡಿಸಲಿ. ಆದುದರಿಂದ ನಾನು ಪಾಂಡವರ ಬಳಿಗೂ ಹೋಗುವುದಿಲ್ಲ. ದುರ್ಯೋಧನನ ಬಳಿಗೂ ಹೋಗುವುದಿಲ್ಲ.

ತೀರ್ಥೇಷ್ವಾಪ್ಲಾವಯಿಷ್ಯಾಮಿ ತಾವದಾತ್ಮಾನಮಾತ್ಮನಾ ।
ಕುರೂಣಾಂ ಪಾಣ್ಡವಾನಾಂ ಚ ಯಾವದನ್ತಾಯ ಕಲ್ಪತೇ ॥೪॥

ಇತ್ಯಾಮನ್ತ್ರ್ಯ ಹೃಷೀಕೇಶಂ ಪಾರ್ಥದುರ್ಯೋಧನಾವಪಿ ।
ಜಗಾಮ ದ್ವಾರಕಾಂ ಶೌರಿಃ ಸ್ವಸೈನ್ಯಪರಿವಾರಿತಃ ॥೫॥

ಗತ್ವಾ ದ್ವಾರವತೀಂ ರಾಮೋ ಹೃಷ್ಟಪುಷ್ಟಜನಾಕುಲಾಮ್ ।
ಶ್ವೋ ಗನ್ತವ್ಯೇಷು ತೀರ್ಥೇಷು ಪಪೌ ಪಾನಂ ಹಲಾಯುಧಃ ॥೬॥

ಪೀತಪಾನೋ ಜಗಾಮಾಥ ರೈವತೋದ್ಯಾನಮೃದ್ಧಿಮತ್ ।
ಹಸ್ತೇ ಗೃಹೀತ್ವಾ ಸಮದಾಂ ರೇವತೀಮಪ್ಸರೋಪಮಾಮ್ ॥೭॥

---

೪. ಕೌರವ-ಪಾಂಡವರ ಯುದ್ಧವು ಸಮಸ್ತ ವೀರಪುರುಷರ ಕ್ಷಯದಲ್ಲಿ ಸಮಾಪ್ತಿಹೊಂದುವವರೆಗೆ ನಾನು ನನ್ನ ಪಾಡಿಗೆ ತೀರ್ಥಯಾತ್ರೆಯಿಂದ ಆತ್ಮ-ವನ್ನು ಪಾವನಗೊಳಿಸುವೆನು.

೫. ಬಲರಾಮನು ಹೀಗೆಂದು ಯೋಚಿಸಿ ಕೃಷ್ಣನನ್ನು ಕೇಳಿಕೊಂಡು ಹಾಗು ಪಾರ್ಥ-ದುರ್ಯೋಧನರಿಂದ ಅನುಮತಿಯನ್ನು ಪಡೆದು ತನ್ನ ಸೈನ್ಯ ಪರಿವಾರಸಮೇತನಾಗಿ ದ್ವಾರಕಾನಗರಕ್ಕೆ ತೆರಳಿದನು.

೬. ನೇಗಿಲಿನ ಆಯುಧದಿಂದ ಕೂಡಿದ ಬಲರಾಮನು ಸಂತುಷ್ಟರೂ ಪುಷ್ಟರೂ ಆದ ಪ್ರಜೆಗಳಿಂದ ಪೂರ್ಣವಾದ ದ್ವಾರಕೆಗೆ ಹೋಗಿ ತೀರ್ಥಯಾತ್ರೆಗೆ ನಾಳೆ ಹೊರಡಬೇಕೆಂದಿರಲು ಹಿಂದಿನ ದಿನ ಮದ್ಯವನ್ನು ಸೇವಿಸಿದನು.

೭. ಮದ್ಯಪಾನಮಾಡಿದವನಾಗಿ ತರುವಾಯ ಮದದಿಂದ ಕೂಡಿದ ಮತ್ತು ಅಪ್ಸರಾಂಗನೆಯಂತೆ ಇರುವ ತನ್ನ ಪ್ರಿಯೆಯಾದ ರೇವತಿಯನ್ನು ಕೈಯಲ್ಲಿ ಹಿಡಿದುಕೊಂಡು ಸಮಸ್ತ ವೈಭವದಿಂದ ಕೂಡಿದ ರೇವತೋದ್ಯಾನಕ್ಕೆ ಹೋದನು.

ಸ್ತ್ರೀಕದಮ್ಬಕಮಧ್ಯಸ್ಥೋ ಯಯೌ ಮತ್ತಃ ಪದಾ ಸ್ಖಲನ್ ।
ದದರ್ಶ ಚ ವನಂ ವೀರೋ ರಮಣೀಯಮನುತ್ತಮಮ್ ॥೮॥

ಸರ್ವರ್ತುಫಲಪುಷ್ಪಾಢ್ಯಂ ಶಾಖಾಮೃಗಗಣಾಕುಲಮ್ ।
ಪುಣ್ಯಂ ಪದ್ಮವನೋಪೇತಂ ಸಪಲ್ವಲಮಹಾವನಮ್ ॥೯॥

ಸ ಶೃಣ್ವನ್ ಪ್ರೀತಿಜನನಾನ್ ಬಹೂನ್ಮದಕಲಾನ್ ಶುಭಾನ್ ।
ಶ್ರೋತ್ರರಮ್ಯಾನ್ ಸುಮಧುರಾನ್ ಶಬ್ದಾನ್ ಖಗಮುಖೇರಿತಾನ್ ॥೧೦॥

ಸರ್ವರ್ತುಫಲಭಾರಾಢ್ಯಾನ್ಸರ್ವರ್ತುಕುಸುಮೋಜ್ಜ್ವಲಾನ್ ।
ಅಪಶ್ಯತ್ಪಾದಪಾಂಸ್ತತ್ರ ವಿಹಗೈರನುನಾದಿತಾನ್ ॥೧೧॥

---

೮. ವೀರನಾದ ಬಲರಾಮನು ಸ್ತ್ರೀಯರ ಗುಂಪಿನ ಮಧ್ಯದಲ್ಲಿದ್ದವನೂ, ಮದಿಸಿದವನೂ ಮತ್ತು ಹೆಜ್ಜೆಯಿಡುವಾಗ ತಡವರಿಸುವವನೂ ಆಗಿ ವನಕ್ಕೆ ಹೋದನು. ಮತ್ತು ನಿರುಪಮವೂ ವಿಶೇಷ ರಮಣೀಯವೂ ಆದ ವನವನ್ನು ಕಂಡನು.

೯. ಎಲ್ಲ ಋತುಗಳ ಫಲಪುಷ್ಪಗಳಿಂದ ಕೂಡಿರುವುದೂ, ವಾನರ ಗುಂಪಿನಿಂದ ಸೇವಿಸಲ್ಪಟ್ಟಿರುವುದೂ ಆದ ಪದ್ಮವನ, ಜಲಾಶಯ ಮತ್ತು ಅನೇಕ ವೃಕ್ಷಶ್ರೇಣಿ ಇವುಗಳಿಂದ ಶೋಭಿಸುವ ಪವಿತ್ರವಾದ ವನವನ್ನು ನೋಡಿದನು.

೧೦. ಆ ಬಲರಾಮನು ಕುತೂಹಲವನ್ನು ಉಂಟುಮಾಡುವ, ಮದದಿಂದ ಅಸ್ಫುಟವಾದ, ಮಂಗಳಕರವಾದ, ಕಿವಿಗೆ ಇಂಪಾದ ಮತ್ತು ಮಧುರವಾದ ಪಕ್ಷಿಮುಖದಿಂದ ಉಚ್ಚಾರವಾದ ಧ್ವನಿಯನ್ನು ಕೇಳುತ್ತ ನಡೆದನು.

೧೧. ಆ ಉದ್ಯಾನವನದಲ್ಲಿ ಸರ್ವಋತುಗಳ ಫಲರಾಶಿಯಿಂದ ತುಂಬಿರುವ, ಸರ್ವಋತುಗಳ ಪುಷ್ಪಗಳಿಂದ ಶೋಭಿಸುವ ಮತ್ತು ಪಕ್ಷಿಗಳ ಧ್ವನಿಯಿಂದ ಮನವನ್ನು ಆಕರ್ಷಿಸುವ ಮರಗಳ ಸಾಲನ್ನು ನೋಡಿದನು.

ಆಮ್ರಾನಾಮ್ರಾತಕಾನ್ಭವ್ಯಾನ್ನಾರಿಕೇಲಾನ್ಸತಿನ್ದುಕಾನ್ ।
ಆಬಿಲ್ವಕಾಂಸ್ತಥಾ ಜೀರಾನ್ದಾಡಿಮಾನ್ಬೀಜಪೂರಕಾನ್ ॥೧೨॥

ಪನಸಾಂಲ್ಲಕುಚಾನ್ಮೋಚಾನ್ನೀಪಾಂಶ್ಚಾತಿಮನೋಹರಾನ್ ।
ಪಾರಾವತಾಂಶ್ಚ ಕಙ್ಕೋಲಾನ್ನಲಿನಾನಮ್ಲವೇತಸಾನ್ ॥೧೩॥

ಭಲ್ಲಾತಕಾನಾಮಲಕಾಂಸ್ತಿನ್ದುಕಾಂಶ್ಚ ಮಹಾಫಲಾನ್ ।
ಇಙ್ಗುದಾನ್ ಕರಮರ್ದಾಂಶ್ಚ ಹರೀತಕವಿಭೀತಕಾನ್ ॥೧೪॥

ಏತಾನನ್ಯಾಂಶ್ಚ ಸ ತರೂನ್ದದರ್ಶ ಯದುನನ್ದನಃ ।
ತಥೈವಾಶೋಕಪುನ್ನಾಗಕೇತಕೀಬಕುಲಾನಥ ॥೧೫॥

ಚಮ್ಪಕಾನ್ಸಪ್ತಪರ್ಣಾಂಶ್ಚ ಕರ್ಣಿಕಾರಾನ್ಸಮಾಲತೀನ್ ।
ಪಾರಿಜಾತಾನ್ಕೋವಿದಾರಾನ್ಮನ್ದಾರಾನ್ಬದರಾಂಸ್ತಥಾ ॥೧೬॥

---

೧೨. ಆ ವನದಲ್ಲಿ ಮಾವು, ಆಮ್ರಾತಕ, ನಾಲಿಕೇರ, ತಿಂದುಕ, ಬಿಲ್ವ, ಜೀರಕ, ದಾಡಿಂಬ ಮತ್ತು ಬೀಜಪೂರ-ಎಂಬ ಅನೇಕ ಮಂಗಳಕರವಾದ ವೃಕ್ಷ-ಗಳಿದ್ದುವು.

೧೩. ಹಲಸು, ನಿಂಬೆ, ಬಾಳೆ, ಈಚಲು, ಪಾರಾವತ, ಕಂಕೋಲ, ನಳಿನ, ಅಮ್ಲ ಮತ್ತು ವೇತಸವೆಂದು ಕರೆಯಲ್ಪಡುವ ಅನೇಕ ಮನೋಹರ ವೃಕ್ಷಗಳಿದ್ದುವು.

೧೪. ಮತ್ತು ಗೇರು, ನೆಲ್ಲಿ, ತಿಂದುಕ, ಮಹಾಫಲ, ಇಂಗುದ, ಕರಮರ್ದ, ಹರೀತಕ, ವಿಭೀತಕ ಎಂಬ ಹಲವಾರು ಬಗೆಯ ವೃಕ್ಷಗಳು ಇದ್ದುವು.

೧೫. ಹಾಗೆಯೆ ಅಶೋಕ, ಪುನ್ನಾಗ, ತಾಳೆ ಮತ್ತು ಬಕುಲ ಎಂಬ ಸುಗಂಧಪುಷ್ಪಗಳಿಂದ ಅಲಂಕೃತವಾದ ವೃಕ್ಷಗಳನ್ನೂ ಇನ್ನೂ ಅನೇಕ ಬಗೆಯ ವೃಕ್ಷಗಳನ್ನೂ ಯದುಕುಮಾರನಾದ ಬಲರಾಮನು ವೀಕ್ಷಿಸಿದನು.

೧೬. ಮತ್ತು ಸಂಪಿಗೆ, ಏಳೆಲೆಯಬಾಳೆ, ಕರ್ಣಿಕಾರ, ಮಾಲತಿ, ಪಾರಿಜಾತ, ಕೋವಿದಾರ, ಮಂದಾರ ಹಾಗು ಬದರ ಎಂಬೀ ಮರಗಳನ್ನು ನೋಡಿ ಆನಂದಿಸಿದನು.

ಪಾಟಲಾನ್ಪುಷ್ಪಿತಾನ್ ರಮ್ಯಾನ್ ದೇವದಾರುದ್ರುಮಾಂಸ್ತಥಾ ।
ಸಾಲಾಂಸ್ತಾಲಾಂಸ್ತಮಾಲಾಂಶ್ಚ ಕಿಂಶುಕಾನ್ವಞ್ಜುಲಾನ್ವರಾನ್ ॥೧೭॥

ಚಕೋರೈಃ ಶಾತಪತ್ರೈಶ್ಚ ಭೃಙ್ಗರಾಜೈಸ್ತಥಾ ಶುಕೈಃ ।
ಕೋಕಿಲೈಃ ಕಲವಿಙ್ಕೈಶ್ಚ ಹಾರೀತೈರ್ಜೀವಜೀವಕೈಃ ॥೧೮॥

ಪ್ರಿಯಪುತ್ರೈಶ್ಚಾತಕೈಶ್ಚ ತಥಾನ್ಯೈರ್ವಿವಿಧೈಃ ಖಗೈಃ ।
ಶ್ರೋತ್ರರಮ್ಯಂ ಸುಮಧುರಂ ಕೂಜದ್ಭಿಶ್ಚಾಪ್ಯಧಿಷ್ಠಿತಮ್ ॥೧೯॥

ಸರಾಂಸಿ ಚ ಮನೋಜ್ಞಾನಿ ಪ್ರಸನ್ನಸಲಿಲಾನಿ ಚ ।
ಕುಮುದೈಃ ಪುಣ್ಡರೀಕೈಶ್ಚ ತಥಾ ನೀಲೋತ್ಪಲೈಃ ಶುಭೈಃ ॥೨೦॥

ಕಲ್ಹಾರೈಃ ಕಮಲೈಶ್ಚಾಪಿ ಆಚಿತಾನಿ ಸಮನ್ತತಃ ।
ಕಾದಮ್ಬೈಶ್ಚಕ್ರವಾಕೈಶ್ಚ ತಥೈವ ಜಲಕುಕ್ಕುಟೈಃ ॥೨೧॥

---

೧೭. ಮತ್ತು ಅರಳಿದ ಹೂಗಳಿಂದ ರಮ್ಯವಾದ ಪಾದರಿಗಿಡಗಳನ್ನೂ ದೇವದಾರುವೃಕ್ಷಗಳನ್ನೂ ಸಾಲ-ತಾಲ-ತಮಾಲ-ಕಿಂಶುಕ-ವಂಜುಲ ಎಂಬ ಉತ್ತಮ ವೃಕ್ಷಗಳನ್ನೂ ನೋಡಿದನು.

೧೮. ಚಕೋರ,ಶಾತಪತ್ರ, ಹೆದ್ದುಂಬಿ, ಗಿಣಿ, ಕೋಗಿಲೆ, ಕಲವಿಂಕ, ಹಾರೀತ ಮತ್ತು ಜೀವಜೀವಕ ಎಂಬ ಬಗೆಬಗೆಯ ಪಕ್ಷಿಗಳ ವಾಸದಿಂದ ಆ ವನವು ರಮ್ಯವಾಗಿತ್ತು.

೧೯. ಪ್ರಿಯಪುತ್ರ, ಚಾತಕ ಎಂಬ ಪಕ್ಷಿಗಳು ಮಾತ್ರವಲ್ಲದೆ ಕಿವಿಗೆ ಇಂಪಾಗಿಯೂ, ಮಧುರವಾಗಿಯೂ ಕೂಗುವ ಹಲವಾರು ಪಕ್ಷಿಗಳಿಂದ ಆ ವನವು ಸೇವಿಸಲ್ಪಟ್ಟಿತ್ತು.

೨೦. ನೈದಿಲೆ, ಪುಂಡರೀಕ ಮತ್ತು ಕನ್ನೈದಿಲೆ ಮುಂತಾದ ಮಂಗಳ-ಪುಷ್ಪಗಳಿಂದ ಸುಂದರವೂ ನಿರ್ಮಲವಾದ ನೀರಿನಿಂದ ತುಂಬಿರುವುದೂ ಆದ ಸರೋವರಗಳು ಉದ್ಯಾನದಲ್ಲಿ ಶೋಭಿಸುತ್ತಿದ್ದುವು.

೨೧. ಮತ್ತು ಆ ಸರೋವರಗಳು ಕಲ್ಹಾರ-ಕಮಲಪುಷ್ಪಗಳಿಂದ ಸುತ್ತಲು ತುಂಬಿಕೊಂಡಿದ್ದುವು. ಹಾಗು ಕಾದಂಬ, ಚಕ್ರವಾಕ, ಜಲಕುಕ್ಕುಟ-ವೆಂಬ ಜಲಚರಪಕ್ಷಿಗಳಿಂದ ರಮ್ಯವಾಗಿದ್ದುವು.

ಕಾರಣ್ಡವೈಃ ಪ್ಲವೈರ್ಹಂಸೈಃ ಕೂರ್ಮೈರ್ಮದ್ಗುಭಿರೇವ ಚ ।
ಏಭಿಶ್ಚಾನ್ಯೈಶ್ಚ ಕೀರ್ಣಾನಿ ಸಮನ್ತಾಜ್ಜಲಚಾರಿಭಿಃ ॥೨೨॥

ಕ್ರಮೇಣೇತ್ಥಂ ವನಂ ಶೌರಿರ್ವೀಕ್ಷಮಾಣೋ ಮನೋರಮಮ್ ।
ಜಗಾಮಾನುಗತಃ ಸ್ತ್ರೀಭಿರ್ಲತಾಗೃಹಮನುತ್ತಮಮ್ ॥೨೩॥

ಸ ದದರ್ಶ ದ್ವಿಜಾಂಸ್ತತ್ರ ವೇದವೇದಾಙ್ಗಪಾರಗಾನ್ ।
ಕೌಶಿಕಾನ್ ಭಾರ್ಗವಾಂಶ್ಚೈವ ಭಾರದ್ವಾಜಾನ್ಸಗೌತಮಾನ್ ॥೨೪॥

ವಿವಿಧೇಷು ಚ ಸಂಭೂತಾನ್ವಂಶೇಷು ದ್ವಿಜಸತ್ತಮಾನ್ ।
ಕಥಾಶ್ರವಣಬದ್ಧೋತ್ಕಾನುಪವಿಷ್ಟಾನ್ಮಹತ್ಸು ಚ ॥೨೫॥

ಕೃಷ್ಣಾಜಿನೋತ್ತರೀಯೇಷು ಕುಶೇಷು ಚ ಬೃಸೀಷು ಚ ।
ಸೂತಂ ಚ ತೇಷಾಂ ಮಧ್ಯಸ್ಥಂ ಕಥಯಾನಂ ಕಥಾಃ ಶುಭಾಃ ॥೨೬॥

---

೨೨. ಮತ್ತು ಕಾರಂಡವ, ಪ್ಲವ, ಹಂಸ, ಆಮೆ, ಮದ್ಗು ಎಂಬ ಪ್ರಾಣಿಗಳಿಂದಲೂ ಇನ್ನೂ ಅನೇಕ ವಿಧವಾದ ಜಲಚರ ಪ್ರಾಣಿಗಳಿಂದಲೂ ಸುತ್ತಲೂ ಸರೋವರಗಳು ತುಂಬಿದ್ದುವು.

೨೩. ಬಲರಾಮನು ಈರೀತಿಯಾಗಿ ಮನರಂಜಕವಾದ ಉದ್ಯಾನ-ವನವನ್ನು ಕ್ರಮವಾಗಿ ನೋಡುತ್ತ ತರುಣಿಯರಿಂದ ಹಿಂಬಾಲಿಸಲ್ಪಟ್ಟವನಾಗಿ ಸರ್ವೋತ್ತಮವಾದ ಲತಾಗೃಹಕ್ಕೆ ಪ್ರವೇಶಿಸಿದನು.

೨೪. ಅಲ್ಲಿ ಆ ಬಲರಾಮನು ವೇದ-ವೇದಾಂಗಗಳಲ್ಲಿ ನಿಷ್ಣಾತರಾದ ಕೌಶಿಕ-ಭಾರ್ಗವ-ಭಾರದ್ವಾಜ-ಗೌತಮ ಮುಂತಾದ ಅನೇಕ ಗೋತ್ರಸಂಭೂತ-ರಾದ ಮಹರ್ಷಿಗಳನ್ನು ನೋಡಿದನು.

೨೫. ವಿವಿಧವಾದ ಪವಿತ್ರವಂಶಗಳಲ್ಲಿ ಜನಿಸಿರುವ, ಕಥಾಶ್ರವಣದಲ್ಲಿ ಬದ್ಧಾದರರಾದ ಮತ್ತು ಶ್ರೇಷ್ಠವಾದ ಆಸನಗಳಲ್ಲಿ ಕುಳಿತಿರುವ ಅನೇಕ ಮಂದಿ ದ್ವಿಜೋತ್ತಮರನ್ನು ನೋಡಿದನು.

೨೬. ಕೃಷ್ಣಾಜಿನ, ಉತ್ತರೀಯವಸ್ತ್ರ, ದರ್ಭಾಸನ, ಕಂಬಲಾಸನ ಮುಂತಾದ ಪವಿತ್ರ ಆಸನಗಳಲ್ಲಿ ಕುಳಿತುಕೊಂಡ ದ್ವಿಜೋತ್ತಮರ ಮಧ್ಯದಲ್ಲಿ ಅನೇಕ ಪವಿತ್ರ ಕಥೆಗಳನ್ನು ಹೇಳುತ್ತ ಕುಳಿತಿದ್ದ ಸೂತಪುರಾಣೀಕರನ್ನು ಕಂಡನು.

ಪೌರಾಣಿಕೈಃ ಸುರರ್ಷೀಣಾಮಾದ್ಯಾನಾಂ ಚರಿತಾಶ್ರಯಾಃ ।
ದೃಷ್ಟ್ವಾ ರಾಮಂ ದ್ವಿಜಾಃ ಸರ್ವೇ ಮಧುಪಾನಾರುಣೇಕ್ಷಣಮ್ ॥೨೭॥

ಮತ್ತೋಽಯಮಿತಿ ಮನ್ವಾನಾಃ ಸಮುತ್ತಸ್ಥುಸ್ತ್ವರಾನ್ವಿತಾಃ ।
ಪೂಜಯನ್ತೋ ಹಲಧರಮೃತೇ ತಂ ಸೂತವಂಶಜಮ್ ॥೨೮॥

ತತಃ ಕ್ರೋಧಸಮಾವಿಷ್ಟೋ ಹಲೀ ಸೂತಂ ಮಹಾಬಲಃ ।
ನಿಜಘಾನ ವಿವೃತ್ತಾಕ್ಷಃ ಕ್ಷೋಭಿತಾಶೇಷದಾನವಃ ॥೨೯॥

ಅಧ್ಯಾಸ್ಯತಿ ಪದಂ ಬ್ರಾಹ್ಮಂ ತಸ್ಮಿನ್ ಸೂತೇ ನಿಪಾತಿತೇ ।
ನಿಷ್ಕ್ರಾನ್ತಾಸ್ತೇ ದ್ವಿಜಾಃ ಸರ್ವೇ ವನಾತ್ಕೃಷ್ಣಾಜಿನಾಮ್ಬರಾಃ ॥೩೦॥

ಅವಧೂತಂ ತಥಾತ್ಮಾನಂ ಮನ್ಯಮಾನೋ ಹಲಾಯುಧಃ ।
ಚಿನ್ತಯಾಮಾಸ ಸುಮಹನ್ಮಯಾ ಪಾಪಮಿದಂ ಕೃತಮ್ ॥೩೧॥

---

೨೭. ದೇವತೆಗಳು-ಋಷಿಗಳಿಗೆ ಸಂಬಂಧಿಸಿದ ಪ್ರಾಚೀನ ಚರಿತ್ರೆಯನ್ನು ಪ್ರಕಾಶಪಡಿಸುವ ಪುರಾಣಕಥೆಗಳನ್ನು ಸೂತಪುರಾಣೀಕರು ಹೇಳುತ್ತಿದ್ದಾಗ ಎಲ್ಲ ದ್ವಿಜರು ಮದ್ಯಪಾನದಿಂದ ಕೆಂಪುಕಣ್ಣಿನಿಂದ ಕೂಡಿದ ರಾಮನನ್ನು ನೋಡಿದರು.

೨೮. ಆಗ ಸೂತಪುರಾಣೀಕರನ್ನು ಹೊರತು ಅಲ್ಲಿದ್ದ ಎಲ್ಲ ವಿಪ್ರರೂ ಈ ಬಲರಾಮನು ಮದ್ಯಪಾನದಿಂದ ಮದಿಸಿದವನೆಂದು ಅರಿತು ಬಲು ಬೇಗ ಬಲರಾಮನನ್ನು ಗೌರವಿಸುವವರಾಗಿ ತಮ್ಮ ಆಸನಗಳಿಂದ ಎದ್ದರು.

೨೯. ತರುವಾಯ ಅಶೇಷ ದಾನವರನ್ನು ಕ್ಷೋಭಗೊಳಿಸಿದ ಮಹಾ ವಿಕ್ರಮಿಯಾದ ಬಲರಾಮನು ಕೋಪೋದ್ರೇಕವುಳ್ಳವನಾಗಿ ಕಣ್ಣುಗಳನ್ನು ತಿರುಗಿಸುತ್ತ ಬಂದು ಸೂತಪುರಾಣೀಕರನ್ನು ಕೊಂದುಹಾಕಿದನು.

೩೦. ಆತ್ಮಮಹಿಮೆಯಿಂದ ಬ್ರಾಹ್ಮ ಪದವನ್ನು ಏರಿರುವ ಆ ಸೂತ-ಮುನಿಯನ್ನು ಕೊಂದುಹಾಕಲು ಎಲ್ಲ ದ್ವಿಜರು ತಮ್ಮ ಕೃಷ್ಣಾಜಿನ-ವಸ್ತ್ರಗಳನ್ನು ಧರಿಸಿಕೊಂಡು ಆ ವನದಿಂದ ಹೊರಟು ಹೋದರು.

೩೧. ಆಗ ಬಲರಾಮನು ಹಾಗೆ ತಿರಸ್ಕೃತನಾದಂತೆ ತನ್ನನ್ನು ಭಾವಿ-ಸುತ್ತ "ಅಯ್ಯೋ! ನಾನು ಇಂತಹ ಮಹಾಪಾತಕವನ್ನು ಮಾಡಿದೆನಲ್ಲ" ಎಂದು ಅತಿಯಾಗಿ ಚಿಂತಾಗ್ರಸ್ತನಾದನು.

ಬ್ರಾಹ್ಮಂ ಸ್ಥಾನಂ ಗತೋ ಹ್ಯೇಷ ಯತ್ಸೂತೋ ವಿನಿಪಾತಿತಃ ।
ತಥಾ ಹೀಮೇ ದ್ವಿಜಾಃ ಸರ್ವೇ ಮಾಮವೇಕ್ಷ್ಯ ವಿನಿರ್ಗತಾಃ ॥೩೨॥

ಶರೀರಸ್ಯ ಚ ಮೇ ಗನ್ಧೋ ಲೋಹಸ್ಯೇವಾಸುಖಾವಹಃ ।
ಆತ್ಮಾನಂ ಚಾವಗಚ್ಛಾಮಿ ಬ್ರಹ್ಮಘ್ನಮಿವ ಕುತ್ಸಿತಮ್ ॥೩೩॥

ಧಿಗಮರ್ಷಂ ತಥಾ ಮದ್ಯಮತಿಮಾನಮಭೀರುತಾಮ್ ।
ಯೈರಾವಿಷ್ಟೇನ ಸುಮಹನ್ಮಯಾ ಪಾಪಮಿದಂ ಕೃತಮ್ ॥೩೪॥

ತತ್ಕ್ಷಯಾರ್ಥಂ ಕರಿಷ್ಯಾಮಿ ವ್ರತಂ ದ್ವಾದಶವಾರ್ಷಿಕಮ್ ।
ಸ್ವಕರ್ಮಖ್ಯಾಪನಂ ಕುರ್ವನ್ ಪ್ರಾಯಶ್ಚಿತ್ತಮನುತ್ತಮಮ್ ॥೩೫॥

ಅಥ ಯೇಯಂ ಸಮಾರಬ್ಧಾ ತೀರ್ಥಯಾತ್ರಾ ಮಯಾಧುನಾ ।
ಏತಾಮೇವ ಪ್ರಯಾಸ್ಯಾಮಿ ಪ್ರತಿಲೋಮಾಂ ಸರಸ್ವತೀಮ್ ॥೩೬॥

---

೩೨. ಬ್ರಹ್ಮಪದವಿಯನ್ನು ಹೊಂದಿರುವ ಸೂತಮುನಿಯನ್ನು ನಾನು ವಧಿಸಿರುವೆನು. ಈ ದ್ವಿಜರೆಲ್ಲರೂ ನನ್ನನ್ನು ನೋಡಿ ಈ ಸ್ಥಳವನ್ನು ಬಿಟ್ಟು ಹೋದರು.

೩೩. ಲೋಹದಲ್ಲಿರುವಂತೆ ಅಸಹ್ಯವಾದ ದುರ್ಗಂಧವು ನನ್ನ ಶರೀರವನ್ನು ಆವರಿಸಿದೆ. ನನ್ನ ಆತ್ಮವು ಬ್ರಹ್ಮಹತ್ಯಾಪಾತಕದಿಂದ ನಿಂದ್ಯವಾದಂತೆ ನನಗೆ ಭಾಸವಾಗುವುದು.

೩೪. ಅಸಹನೆ, ಮದ್ಯಪಾನ, ಅಹಂಕಾರ ಮತ್ತು ನಿರ್ಭಯತ್ವ ಇವುಗಳನ್ನು ನಾನು ಧಿಕ್ಕರಿಸುವೆನು. ಇವುಗಳಿಂದ ಜಿತನಾದ ನಾನು ಈ ಮಹಾಪಾತಕವನ್ನು ಮಾಡಿದೆನು.

೩೫. ಈ ಮಹಾಪಾತಕದ ಮೋಚನೆಗೆ ಹನ್ನೆರಡುವರ್ಷಗಳ ವರೆಗೆ ನನ್ನ ಪಾಪಕರ್ಮವನ್ನು ಪ್ರಕಾಶಪಡಿಸುತ್ತ ಸರ್ವೋತ್ತಮ ಪ್ರಾಯಶ್ಚಿತ್ತ ರೂಪವಾದ ವ್ರತವನ್ನು ಆಚರಿಸುವೆನು.

೩೬. ನಾನು ಈಗ ಯಾವ ತೀರ್ಥಯಾತ್ರೆಯನ್ನು ಕೈಗೊಂಡಿರುವೆನೊ; ಅದನ್ನೆ ಮುಂದುವರೆಯಿಸಿ ತದಂಗವಾಗಿ ಪಶ್ಚಿಮಕ್ಕೆ ಹರಿಯುವ ಸರಸ್ವತೀ ಮಹಾನದಿಗೆ ಹೋಗುತ್ತೇನೆ.

ಅತೋ ಜಗಾಮ ರಾಮೋऽಸೌ ಪ್ರತಿಲೋಮಾಂ ಸರಸ್ವತೀಮ್ ।
ತತಃ ಪರಂ ಶೃಣುಷ್ವೇದಂ ಪಾಣ್ಡವೇಯಕಥಾಶ್ರಯಮ್ ॥೩೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಬಲದೇವ ಬ್ರಹ್ಮಹತ್ಯಾ-ಕಥನಂ ನಾಮ ಷಷ್ಠೋऽಧ್ಯಾಯಃ

---

೩೭. ಆದ್ದರಿಂದ ಬಲರಾಮನು ಪಶ್ಚಿಮಕ್ಕೆ ಹರಿಯುವ ಮಹಾತೀರ್ಥ-ವಾದ ಸರಸ್ವತೀ ನದಿಯ ಸನ್ನಿಧಿಗೆ ಹೊರಟನು. ಇನ್ನು ಮುಂದೆ ಹೇಳುವ ದ್ರೌಪದೀ ಪುತ್ರರ ಕಥಾನಕವನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಆರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತಮೋಽಧ್ಯಾಯಃ

(ವಿಶ್ವೇದೇವಾನಾಂ ದ್ರೌಪದೀ ಗರ್ಭಸಂಭವೇ ನಿಮಿತ್ತಮ್)

ಧರ್ಮಪಕ್ಷಿಣ ಊಚುಃ:—

ಹರಿಶ್ಚಂದ್ರೇತಿ ರಾಜರ್ಷಿರಾಸೀತ್ತ್ರೇತಾಯುಗೇ ಪುರಾ ।
ಧರ್ಮಾತ್ಮಾ ಪೃಥಿವೀಪಾಲಃ ಪ್ರೋಲ್ಲಸತ್ಕೀರ್ತಿರುತ್ತಮಃ ॥೧॥

ನ ದುರ್ಭಿಕ್ಷಂ ನ ಚ ವ್ಯಾಧಿರ್ನಾಕಾಲಮರಣಂ ನೃಣಾಮ್ ।
ನಾಧರ್ಮರುಚಯಃ ಪೌರಾಸ್ತಸ್ಮಿನ್ ಶಾಸತಿ ಪಾರ್ಥಿವೇ ॥೨॥

ಬಭೂವುರ್ನ ತಥೋನ್ಮತ್ತಾ ಧನವೀರ್ಯತಪೋಮದೈಃ ।
ನಾಜಾಯನ್ತ ಸ್ತ್ರಿಯಶ್ಚೈವ ಕಾಶ್ಚಿದಪ್ರಾಪ್ತಯೌವನಾಃ ॥೩॥

ಏಳನೆಯ ಅಧ್ಯಾಯ

ಧರ್ಮಪಕ್ಷಿಗಳು ಇಂತು ಹೇಳಿದುವು:—

೧. ಪೂರ್ವಕಾಲದಲ್ಲಿ ತ್ರೇತಾಯುಗದಲ್ಲಿ ಧರ್ಮಾತ್ಮನೂ, ಭೂಮಂಡಲವನ್ನು ರಕ್ಷಿಸುವವನೂ, ಪ್ರಕಾಶಿಸುವ ಕೀರ್ತಿಯುಳ್ಳವನೂ ಮತ್ತು ನೃಪೋತ್ತಮನೂ ಆದ ಹರಿಶ್ಚಂದ್ರನೆಂಬ ರಾಜರ್ಷಿಯಿದ್ದನು.

೨. ಆ ಹರಿಶ್ಚಂದ್ರ ರಾಜನು ರಾಜ್ಯವನ್ನಾಳುತ್ತಿರಲು ಪ್ರಜೆಗಳಿಗೆ ದುರ್ಭಿಕ್ಷ, ರೋಗ ಮತ್ತು ಅಕಾಲಮೃತ್ಯುಗಳ ಭಯವು ಇರಲಿಲ್ಲ. ಪುರಜನರು ಅಧರ್ಮಾಚರಣೆಯ ಅಭಿರುಚಿಯಿಲ್ಲದೆ ಧಾರ್ಮಿಕರಾಗಿದ್ದರು.

೩. ಹಾಗು ಪ್ರಜೆಗಳು ಅತಿಶಯವಾದ ಧನ-ವೀರ್ಯ-ತಪಗಳಿಂದ ಕೂಡಿದ್ದರೂ ಮದೋನ್ಮತ್ತರಾಗಿರಲಿಲ್ಲ. ತಾರುಣ್ಯವನ್ನು ಹೊಂದುವುದಕ್ಕೆ ಮೊದಲು ಯಾವ ಸ್ತ್ರೀಯರೂ ಸಂತತಿಯನ್ನು ಪ್ರಸವಿಸುತ್ತಿರಲಿಲ್ಲ.

ಸ ಕದಾಚಿನ್ಮಹಾಬಾಹುರರಣ್ಯೇಽನುಸರನ್ಮೃಗಮ್ ।
ಶುಶ್ರಾವ ಶಬ್ದಮಸಕೃತ್ತ್ರಾಯಸ್ವೇತಿ ಚ ಯೋಷಿತಾಮ್ ॥೪॥

ಸ ವಿಹಾಯ ಮೃಗಂ ರಾಜಾ ಮಾ ಭೈಷೀರಿತ್ಯಭಾಷತ ।
ಮಯಿ ಶಾಸತಿ ದುರ್ಮೇಧಾಃ ಕೋಽಯಮನ್ಯಾಯವೃತ್ತಿಮಾನ್ ॥೫॥

ತತ್ಕ್ರನ್ದಿತಾನುಸಾರೀ ಚ ಸರ್ವಾರಮ್ಭವಿಘಾತಕೃತ್ ।
ಏತಸ್ಮಿನ್ನನ್ತರೇ ರೌದ್ರೋ ವಿಘ್ನರಾಟ್ ಸಮಚಿನ್ತಯತ್ ॥೬॥

ವಿಶ್ವಾಮಿತ್ರೋಽಯಮತುಲಂ ತಪ ಆಸ್ಥಾಯ ವೀರ್ಯವಾನ್ ।
ಪ್ರಾಗಸಿದ್ಧಾ ಭವಾದೀನಾಂ ವಿದ್ಯಾಃ ಸಾಧಯತಿ ವ್ರತೀ ॥೭॥

ಸಾಧ್ಯಮಾನಾಃ ಕ್ಷಮಾಮೌನಚಿತ್ತಸಂಯಮಿನಾಮುನಾ ।
ತಾ ವೈ ಭಯಾರ್ತಾಃ ಕ್ರನ್ದನ್ತಿ ಕಥಂ ಕಾರ್ಯಮಿದಂ ಮಯಾ ॥೮॥

---

೪. ಬಾಹುಬಲಶಾಲಿಯಾದ ಆ ಹರಿಶ್ಚಂದ್ರರಾಜನು ಒಂದಾನೊಂದು ಸಮಯದಲ್ಲಿ ಬೇಟೆಯಾಡುತ್ತ ಕಾಡಿನಲ್ಲಿ ಒಂದು ಪ್ರಾಣಿಯನ್ನು ಹಿಂಬಾಲಿಸುತ್ತಿರಲು "ನಮ್ಮನ್ನು ಕಾಪಾಡು" ಎಂದು ಸ್ತ್ರೀಯರ ಆರ್ತನಾದವನ್ನು ಅನೇಕಾವರ್ತಿಯಾಗಿ ಕೇಳಿದನು.

೫. ಆ ರಾಜನು "ನಾನು ರಾಜ್ಯವಾಳುತ್ತಿರಲು ಯಾವ ಅವಿವೇಕಿಯು ಅನ್ಯಾಯ ವೃತ್ತಿಯನ್ನು ತಾಳುವನು? ಹೆದರಬೇಡಿ" ಎಂದು ಗಟ್ಟಿಯಾಗಿ ಕೂಗಿದನು.

೬. ಈ ಸಮಯದಲ್ಲಿ ಸ್ತ್ರೀಯರ ಆರ್ತನಾದ ಕೇಳಿಸಿದ ಕೂಡಲೆ ಸಮಸ್ತ ಕಾರ್ಯಗಳಿಗೆ ವಿಘ್ನವನ್ನು ಉಂಟುಮಾಡುವ ರೌದ್ರಾಕಾರದ ವಿಘ್ನರಾಜನು ಹೀಗೆಂದು ಯೋಚಿಸಿದನು.

೭. ವೀರ್ಯವಂತನೂ ಮಹಾತಪಸ್ವಿಯೂ ಆದ ಈ ವಿಶ್ವಾಮಿತ್ರಮುನಿಯು ಕಠಿನ ತಪವನ್ನು ಕೈಗೊಂಡು ಹಿಂದೆ ಸಿದ್ಧಿಯಾಗದಿರುವ ಈಶಾನ ಮುಂತಾದ ದೇವತೆಗಳ ಮಂತ್ರಸಿದ್ಧಿಯನ್ನು ಬಯಸುತ್ತಿರುವನು.

೮. ತಾಳ್ಮೆ, ಮೌನ, ಮನಸ್ಸಿನ ಏಕಾಗ್ರತೆ ಈ ಗುಣಗಳಿಂದ ಕೂಡಿದ ವಿಶ್ವಾಮಿತ್ರಮುನಿಯಿಂದ ಬಲಾತ್ಕಾರವಾಗಿ ಸಾಧಿಸಲ್ಪಡುತ್ತಿದ್ದ ವಿದ್ಯೆಗಳು ಭಯಪಟ್ಟವುಗಳಾಗಿ ಕೂಗುತ್ತಿವೆ. ನಾನು ಈಗ ಏನು ಮಾಡಲಿ.

ತೇಜಸ್ವೀ ಕೌಶಿಕಶ್ರೇಷ್ಠೋ ವಯಮಸ್ಯ ಸುದುರ್ಬಲಾಃ ।
ಕ್ರೋಶನ್ತ್ಯೇತಾಸ್ತಥಾ ಭೀತಾ ದುಷ್ಪಾರಂ ಪ್ರತಿಭಾತಿ ಮೇ ॥೯॥

ಅಥವಾಯಂ ನೃಪಃ ಪ್ರಾಪ್ತೋ ಮಾ ಭೈರಿತಿ ವದನ್ಮುಹುಃ ।
ಇಮಮೇವ ಪ್ರವಿಶ್ಯಾಶು ಸಾಧಯಿಷ್ಯೇ ಯಥೇಪ್ಸಿತಮ್ ॥೧೦॥

ಇತಿ ಸಂಚಿನ್ತ್ಯ ರೌದ್ರೇಣ ವಿಘ್ನರಾಜೇನ ವೈ ತತಃ ।
ತೇನಾವಿಷ್ಟೋ ನೃಪಃ ಕೋಪಾದಿದಂ ವಚನಮಬ್ರವೀತ್ ॥೧೧॥

ಕೋಽಯಂ ಬಧ್ನಾತಿ ವಸ್ತ್ರಾನ್ತೇ ಪಾವಕಂ ಪಾಪಕೃನ್ನರಃ ।
ಬಲೋಷ್ಣತೇಜಸಾ ದೀಪ್ತೇ ಮಯಿ ಪತ್ಯಾವುಪಸ್ಥಿತೇ ॥೧೨॥

ಸೋಽದ್ಯ ಮತ್ಕಾರ್ಮುಕಾಕ್ಷೇಪವಿದೀಪಿತದಿಗನ್ತರೈಃ ।
ಶರೈರ್ವಿಭಿನ್ನಸರ್ವಾಙ್ಗೋ ದೀರ್ಘನಿದ್ರಾಂ ಪ್ರವೇಕ್ಷ್ಯತಿ ॥೧೩॥

---

೯. ಮುನಿಶ್ರೇಷ್ಠನಾದ ವಿಶ್ವಾಮಿತ್ರ ಮಹರ್ಷಿಯು ಮಹಾತೇಜಸ್ವಿಯು. ನಾವು ಮಹಾದುರ್ಬಲರು. ಎಂದು ಈ ವಿದ್ಯೆಗಳು ಭಯಾರ್ತವಾಗಿ ಕೂಗುತ್ತಿವೆ. ಇದಕ್ಕೆ ಯಾವ ಪ್ರತೀಕಾರವೂ ಇಲ್ಲವೆಂದು ನನಗೆ ತೋರುತ್ತಿದೆ.

೧೦. ಅಥವಾ " ಹೆದರಬೇಡಿ " ಎಂದು ಮತ್ತೆ ಮತ್ತೆ ಹೇಳಿ ಅಭಯದಾನ ಮಾಡುತ್ತ ಈ ಹರಿಶ್ಚಂದ್ರರಾಜನು ಬಂದಿರುವನು. ಇವನಲ್ಲಿ ನಾನು ಆವೇಶಮಾಡಿ ಬೇಗ ನನ್ನ ಇಷ್ಟವನ್ನು ಸಾಧಿಸಿಕೊಳ್ಳುವೆನು.

೧೧. ಹೀಗೆಂದು ಯೋಚಿಸಿ ತರುವಾಯ ರೌದ್ರರೂಪದಿಂದ ಕೂಡಿದ ಆ ವಿಘ್ನರಾಜನಿಂದ ಆವೇಶಿಸಲ್ಪಟ್ಟ ಹರಿಶ್ಚಂದ್ರರಾಜನು ಕೋಪದಿಂದ ಈ ಮಾತನ್ನು ಆಡಿದನು.

೧೨. ಬಲವೆಂಬ ಅಗ್ನಿ ಪ್ರತಾಪದಿಂದ ಕಂಗೊಳಿಸುವ ಭೂಪತಿಯಾದ ನಾನು ಬಂದಿರಲು ಯಾವ ಪಾಪಿಯಾದ ಮಾನವನು ಬಟ್ಟೆಯ ಸೆರಗಿನಲ್ಲಿ ಬೆಂಕಿಯನ್ನು ಕಟ್ಟಿಕೊಳ್ಳುತ್ತಾನೆ ?

೧೩. ಆ ಪಾಪಿಯು ಈಗ ನನ್ನ ಬಿಲ್ಲಿನಲ್ಲಿಟ್ಟು ಪ್ರಯೋಗಿಸಿದ, ಜ್ವಾಲೆಗಳಿಂದ ಬೆಳಗಿದ ದಿಗಂತರವುಳ್ಳ ಬಾಣಗಳಿಂದ ಭೇದಿಸಲ್ಪಟ್ಟ ಸರ್ವಾಂಗವುಳ್ಳವನಾಗಿ ಮೃತ್ಯುವನ್ನೈದುವನು.

ವಿಶ್ವಾಮಿತ್ರಸ್ತತಃ ಕ್ರುದ್ಧಃ ಶ್ರುತ್ವಾ ತಸ್ಯ ನೃಪತೇರ್ವಚಃ ।
ಕ್ರುದ್ಧೇ ಚರ್ಷಿವರೇ ತಸ್ಮಿನ್ನೇಶುರ್ವಿದ್ಯಾಃ ಕ್ಷಣೇನ ತಾಃ ॥೧೪॥

ಸ ಚಾಪಿ ರಾಜಾ ತಂ ದೃಷ್ಟ್ವಾ ವಿಶ್ವಾಮಿತ್ರಂ ತಪೋನಿಧಿಮ್ ।
ಭೀತಃ ಪ್ರಾವೇಪತಾತ್ಯರ್ಥಂ ಸಹಸಾಶ್ವತ್ಥಪರ್ಣವತ್ ॥೧೫॥

ಸ ದುರಾತ್ಮನ್ನಿತಿ ಯದಾ ಮುನಿಸ್ತಿಷ್ಠೇತಿ ಚಾಬ್ರವೀತ್ ।
ತತಃ ಸ ರಾಜಾ ವಿನಯಾತ್ಪ್ರಣಿಪತ್ಯಾಭ್ಯಭಾಷತ ॥೧೬॥

ಭಗವನ್ನೇಷ ಧರ್ಮೋ ಮೇ ನಾಪರಾಧೋಽಸ್ತಿ ಮಮ ಪ್ರಭೋ ।
ನ ಕ್ರೋದ್ಧುಮರ್ಹಸಿ ಮುನೇ ನಿಜಧರ್ಮರತಸ್ಯ ಮೇ ॥೧೭॥

ದಾತವ್ಯಂ ರಕ್ಷಿತವ್ಯಂ ಚ ಧರ್ಮಜ್ಞೇನ ಮಹೀಕ್ಷಿತಾ ।
ಚಾಪಂ ಚೋದ್ಯಮ್ಯ ಯೋದ್ಧವ್ಯಂ ಧರ್ಮಶಾಸ್ತ್ರಾನುಸಾರತಃ ॥೧೮॥

---

೧೪. ತರುವಾಯ ಹರಿಶ್ಚಂದ್ರ ರಾಜನ ಆ ವಚನವನ್ನು ಕೇಳಿ ವಿಶ್ವಾಮಿತ್ರ ಮುನಿಯು ಕೋಪಗೊಂಡನು. ಮುನಿವರನಾದ ವಿಶ್ವಾಮಿತ್ರನು ಕೋಪಗೊಂಡು ಚಿತ್ತಶಾಂತಿಗೆ ಭಂಗವುಂಟಾಗಲು ಆ ವಿದ್ಯೆಗಳು ಕ್ಷಣಮಾತ್ರದಿಂದ ದೂರವಾದುವು.

೧೫. ಆಗ ಹರಿಶ್ಚಂದ್ರ ರಾಜನು ತಪೋನಿಧಿಯಾದ ವಿಶ್ವಾಮಿತ್ರಮುನಿಯನ್ನು ಕಂಡು ಭಯಪಟ್ಟು ಕೂಡಲೆ ಅಶ್ವತ್ಥವೃಕ್ಷದ ಎಲೆಯಂತೆ ಅತಿಯಾಗಿ ನಡುಗಿದನು.

೧೬. ಆ ವಿಶ್ವಾಮಿತ್ರಮುನಿಯು "ನೀಚನೆ! ಎದುರು ನಿಲ್ಲು" ಎಂದು ಯಾವಾಗ ಗರ್ಜಿಸಿದನೊ ಆಗ ಹರಿಶ್ಚಂದ್ರನು ವಿನಯದಿಂದ ಮುನಿಗೆ ನಮಸ್ಕಾರ ಮಾಡಿ ಹೇಳಿದನು.

೧೭. ಷಡ್ಗುಣೈಶ್ವರ್ಯಸಂಪನ್ನನಾದ ಮುನಿಯೆ! ಇದು ನನ್ನ ಧರ್ಮವು. ಪ್ರಭುವೆ! ನನ್ನ ಅಪರಾಧವೇನೂ ಇಲ್ಲ. ಮುನಿಯೆ! ಸ್ವಧರ್ಮದಲ್ಲಿ ನಿರತನಾದ ನನ್ನ ವಿಷಯದಲ್ಲಿ ನೀನು ಕೋಪಿಸಲಾಗದು.

೧೮. ಧರ್ಮವನ್ನು ಅರಿತ ರಾಜನು ಧರ್ಮಶಾಸ್ತ್ರದ ವಿಧಾನವನ್ನು ಅನುಸರಿಸಿ ದಾನಮಾಡುವುದು, ರಕ್ಷಿಸುವುದು ಮತ್ತು ಬಿಲ್ಲನ್ನು ಹೆದೆಯೇರಿಸಿ ಯುದ್ಧಮಾಡುವುದು ಈ ಕರ್ತವ್ಯ ಧರ್ಮಗಳನ್ನು ಆಚರಿಸಬೇಕು.

ವಿಶ್ವಾಮಿತ್ರ ಉವಾಚ :—

ದಾತವ್ಯಂ ಕಸ್ಯ ಕೇ ರಕ್ಷ್ಯಾಃ ಕೈರ್ಯೋದ್ಧವ್ಯಂ ಚ ತೇ ನೃಪ ।
ಕ್ಷಿಪ್ರಮೇತತ್ಸಮಾಚಕ್ಷ್ವ ಯದ್ಯಧರ್ಮಭಯಂ ತವ ॥೧೯॥

ಹರಿಶ್ಚನ್ದ್ರ ಉವಾಚ :—

ದಾತವ್ಯಂ ವಿಪ್ರಮುಖ್ಯೇಭ್ಯೋ ಯೇ ಚಾನ್ಯೇ ಕೃಶವೃತ್ತಯಃ ।
ರಕ್ಷ್ಯಾ ಭೀತಾಃ ಸದಾ ಯುದ್ಧಂ ಕರ್ತವ್ಯಂ ಪರಿಪನ್ಥಿಭಿಃ ॥೨೦॥

ವಿಶ್ವಾಮಿತ್ರ ಉವಾಚ :—

ಯದಿ ರಾಜಾ ಭವಾನ್ ಸಮ್ಯಗ್ರಾಜಧರ್ಮಮವೇಕ್ಷತೇ ।
ನಿರ್ವೇಷ್ಟುಕಾಮೋ ವಿಪ್ರೋಽಹಂ ದೀಯತಾಮಿಷ್ಟದಕ್ಷಿಣಾ ॥೨೧॥

ವಿಶ್ವಾಮಿತ್ರ ಮುನಿಯು ಹೀಗೆ ಹೇಳಿದನು :—

೧೯. ಹರಿಶ್ಚಂದ್ರರಾಜನೆ! ನೀನು ಯಾರಿಗೆ ದಾನಮಾಡುವುದು? ಯಾರನ್ನು ರಕ್ಷಿಸುವುದು? ಮತ್ತು ಯಾರಸಂಗಡ ಯುದ್ಧಮಾಡುವುದು? ನಿನಗೆ ಅಧರ್ಮಭಯವು ಅಷ್ಟಾಗಿ ಇದ್ದರೆ ಇದಕ್ಕೆ ಉತ್ತರವನ್ನು ಬೇಗ ಹೇಳು.

ಹರಿಶ್ಚಂದ್ರ ರಾಜನು ಇಂತೆಂದನು :—

೨೦. ವಿಪ್ರೋತ್ತಮರಿಗೂ ವೃತ್ತಿಕ್ಷಯದಿಂದ ನಿರ್ಗತಿಕರಾದವರಿಗೂ ದಾನಮಾಡಬೇಕು. ಭಯಾರ್ತರನ್ನು ರಕ್ಷಿಸಬೇಕು. ಮತ್ತು ಶತ್ರುಗಳ ಸಂಗಡ ಯುದ್ಧಮಾಡಬೇಕು. ಇದು ನನ್ನ ಧರ್ಮವು.

ವಿಶ್ವಾಮಿತ್ರಮುನಿಯು ಮತ್ತೆ ಹೇಳಿದನು :—

೨೧. ರಾಜನಾದ ನೀನು ರಾಜಧರ್ಮವನ್ನು ಲೋಪವಿಲ್ಲದ ಹಾಗೆ ಆಚರಿಸುತ್ತಿರುವೆಯಾದರೆ ನಾನು ಮದುವೆಯಾಗಬೇಕೆಂದಿರುವ ಬ್ರಾಹ್ಮಣನಾಗಿರುವೆನು. ನನಗೆ ಇಷ್ಟವಾದ ದಕ್ಷಿಣೆಯನ್ನು ದಾನಮಾಡು,

ಪಕ್ಷಿಣ ಊಚುಃ :—

ಏತದ್ರಾಜಾ ವಚಃ ಶ್ರುತ್ವಾ ಪ್ರಹೃಷ್ಟೇನಾನ್ತರಾತ್ಮನಾ ।
ಪುನರ್ಜಾತಮಿವಾತ್ಮಾನಂ ಮೇನೇ ಪ್ರಾಹ ಚ ಕೌಶಿಕಮ್ ॥೨೨॥

ಉಚ್ಯತಾಂ ಭಗವನ್ಯತ್ತೇ ದಾತವ್ಯಮವಿಶಙ್ಕಿತಮ್ ।
ದತ್ತಮಿತ್ಯೇವ ತದ್ವಿದ್ಧಿ ಯದ್ಯಪಿ ಸ್ಯಾತ್ಸುದುರ್ಲಭಮ್ ॥೨೩॥

ಹಿರಣ್ಯಂ ವಾ ಸುವರ್ಣಂ ವಾ ಪುತ್ರಃ ಪುತ್ರೀ ಕಲೇವರಮ್ ।
ಪ್ರಾಣಾ ರಾಜ್ಯಂ ಪುರಂ ಲಕ್ಷ್ಮೀರ್ಯದಭಿಪ್ರೇತಮಾತ್ಮನಃ ॥೨೪॥

ವಿಶ್ವಾಮಿತ್ರ ಉವಾಚ :—

ರಾಜನ್ಪ್ರತಿಗೃಹೀತೋಽಯಂ ಯಸ್ತೇ ದತ್ತಃ ಪ್ರತಿಗ್ರಹಃ ।
ಪ್ರಯಚ್ಛ ಪ್ರಥಮಂ ತಾವದ್ದಕ್ಷಿಣಾಂ ರಾಜಸೂಯಿಕೀಮ್ ॥೨೫॥

ಪಕ್ಷಿಗಳು ಇಂತೆಂದುವು :—

೨೨. ರಾಜನು ಈ ಮಾತನ್ನು ಕೇಳಿ ಸಂತೋಷಗೊಂಡ ಅಂತಃಕರಣವುಳ್ಳವನಾಗಿ ತನ್ನನ್ನು ಪುನರ್ಜನ್ಮಹೊಂದಿರುವವನಂತೆ ಭಾವಿಸಿದನು. ಮತ್ತು ವಿಶ್ವಾಮಿತ್ರಮುನಿಯನ್ನು ಕಂಡು ಹೀಗೆ ಹೇಳಿದನು.

೨೩. ಪೂಜ್ಯನೆ! ನಾನು ನಿನಗೆ ಏನು ಕೊಡಬೇಕೆಂಬ ಇಷ್ಟವಿದೆಯೊ, ಅದನ್ನು ಶಂಕೆಯಿಲ್ಲದಂತೆ ಹೇಳು. ಒಂದು ವೇಳೆ ದುರ್ಲಭವಾಗಿದ್ದರೂ ಆ ವಸ್ತುವು ನಿನಗೆ ದತ್ತವಾಯಿತೆಂದು ಭಾವಿಸು.

೨೪. ಹಿರಣ್ಯ, ಸುವರ್ಣ, ಪುತ್ರ-ಪುತ್ರೀ-ದೇಹ-ಪ್ರಾಣ-ರಾಜ್ಯ - ನಗರ ಅಥವಾ ಲಕ್ಷ್ಮೀ-ಇವುಗಳಲ್ಲಿ ನಿನಗೆ ಇಷ್ಟವಾದುದನ್ನು ಹೇಳು.

ವಿಶ್ವಾಮಿತ್ರನು ಹೇಳಿದನು :—

೨೫. ರಾಜನೆ! ನೀನು ನನಗೆ ಅರ್ಪಿಸಿದ ಈ ದಾನದ ಪ್ರತಿಗ್ರಹವು ನನ್ನಿಂದ ಅಂಗೀಕರಿಸಲ್ಪಟ್ಟಿತು. ಇವುಗಳಲ್ಲಿ ಮೊದಲನೆಯದಾಗಿ ರಾಜಸೂಯ-ಯಾಗಕ್ಕೆ ಪರ್ಯಾಪ್ತವಾಗುವ ದಕ್ಷಿಣಾಧನವನ್ನು ಕೊಡು.

ರಾಜೋವಾಚ :—

ಬ್ರಹ್ಮಂಸ್ತ್ವಾಮಪಿ ದಾಸ್ಯಾಮಿ ದಕ್ಷಿಣಾಂ ಭವತೋ ಹ್ಯಹಮ್ ।
ವ್ರಿಯತಾಂ ದ್ವಿಜಶಾರ್ದೂಲ ಯಸ್ತ್ವಮೇಷ್ಟಃ ಪ್ರತಿಗ್ರಹಃ ॥೨೬॥

ವಿಶ್ವಾಮಿತ್ರ ಉವಾಚ :—

ಸಸಾಗರಾಂ ಧರಾಮೇತಾಂ ಸಭೂಭೃದ್ಗ್ರಾಮಪತ್ತನಾಮ್ ।
ರಾಜ್ಯಂ ಚ ಸಕಲಂ ವೀರ ರಥಾಶ್ವಗಜಸಂಕುಲಮ್ ॥೨೭॥

ಕೋಷ್ಠಾಗಾರಂ ಚ ಕೋಶಂ ಚ ಯಚ್ಚಾನ್ಯದ್ವಿದ್ಯತೇ ತವ ।
ವಿನಾ ಭಾರ್ಯಾಂ ಚ ಪುತ್ರಂ ಚ ಶರೀರಂ ಚ ತವಾನಘ ॥೨೮॥

ಧರ್ಮಂ ಚ ಸರ್ವಧರ್ಮಜ್ಞ ಯೋ ಯಾನ್ತಮನುಗಚ್ಛತಿ ।
ಬಹುನಾ ವಾ ಕಿಮುಕ್ತೇನ ಸರ್ವಮೇತತ್ಪ್ರದೀಯತಾಮ್ ॥೨೯॥

ರಾಜನು ಹೀಗೆ ನುಡಿದನು :—

೨೬. ವಿಪ್ರನೆ! ನಾನು ನಿನಗೆ ರಾಜಸೂಯದ ದಕ್ಷಿಣೆಯನ್ನೂ ಕೊಡುವೆನು. ದ್ವಿಜೋತ್ತಮನೆ! ನೀನು ಸ್ವೀಕರಿಸಬೇಕೆಂದಿರುವ ಇಷ್ಟವಸ್ತು-ವನ್ನು ಕೇಳು.

ವಿಶ್ವಾಮಿತ್ರನು ಇಂತೆಂದನು :—

೨೭. ವೀರನಾದ ರಾಜನೆ! ಸಮುದ್ರದಿಂದ ಆವರಿಸಲ್ಪಟ್ಟ, ಬೆಟ್ಟ-ಗ್ರಾಮ-ನಗರಗಳಿಂದ ಕೂಡಿದ ಈ ಅಖಂಡಭೂಮಿಯನ್ನೂ ಮತ್ತು ರಥ-ಗಜ-ತುರಗಗಳಿಂದ ಶೋಭಿಸುವ ಸಕಲ ರಾಜ್ಯವನ್ನೂ ಕೊಡು.

೨೮. ಮತ್ತು ನಿನ್ನ ಧನಾಗಾರ-ಧಾನ್ಯಾಗಾರಗಳನ್ನೂ ಇನ್ನು ಯಾವು-ದೊಂದು ಐಶ್ವರ್ಯವಿದ್ದರೂ ಅದೆಲ್ಲವನ್ನೂ ಕೊಡು. ಎಲೈ! ನಿಷ್ಕಲಂಕನೆ! ಪತ್ನೀ, ಪುತ್ರ ಮತ್ತು ಶರೀರ ಇವುಗಳು ಮಾತ್ರ ಅದೇಯವಸ್ತುಗಳು.

೨೯. ಧರ್ಮಜ್ಞನೆ! ಲೋಕಾಂತರಕ್ಕೆ ಹೋಗುವಾಗ ಹಿಂಬಾಲಿಸಿ ಬರುವ ಧರ್ಮವೂ ಅದೇಯವಾದ ವಸ್ತುವು. ಹೆಚ್ಚು ಮಾತು ಏಕೆ? ನಿನ್ನಲ್ಲಿರುವ ಎಲ್ಲ ಸಂಪತ್ತನ್ನೂ ಕೊಡು.

ಪಕ್ಷಿಣ ಊಚುಃ :—

ಪ್ರಹೃಷ್ಟೇನೈವ ಮನಸಾ ಸೋಽವಿಕಾರಮುಖೋ ನೃಪಃ ।
ತಸ್ಯರ್ಷೇರ್ವಚನಂ ಶ್ರುತ್ವಾ ತಥೇತ್ಯಾಹ ಕೃತಾಞ್ಜಲಿಃ ॥೩೦॥

ವಿಶ್ವಾಮಿತ್ರ ಉವಾಚ :—

ಸರ್ವಸ್ವಂ ಯದಿ ಮೇ ದತ್ತಂ ರಾಜ್ಯಮುರ್ವೀ ಬಲಂ ಧನಮ್ ।
ಪ್ರಭುತ್ವಂ ಕಸ್ಯ ರಾಜರ್ಷೇ ರಾಜ್ಯಸ್ಥೇ ತಾಪಸೇ ಮಯಿ ॥೩೧॥

ಹರಿಶ್ಚನ್ದ್ರ ಉವಾಚ :—

ಯಸ್ಮಿನ್ನಪಿ ಮಯಾ ಕಾಲೇ ಬ್ರಹ್ಮನ್ ದತ್ತಾ ವಸುನ್ಧರಾ ।
ತಸ್ಮಿನ್ನಪಿ ಭವಾನ್ ಸ್ವಾಮೀ ಕಿಮುತಾದ್ಯ ಮಹೀಪತಿಃ ॥೩೨॥

ಪಕ್ಷಿಗಳು ಹೇಳಿದುವು :—

೩೦. ಆ ಋಷಿಯ ಮಾತನ್ನು ಕೇಳಿ ಯಾವ ವಿಕಾರವನ್ನೂ ಹೊಂದದಿರುವ ಮುಖವುಳ್ಳ ರಾಜನು ಸಂತೋಷದ ಮನಸ್ಸಿನಿಂದಲೆ ಕೈಜೋಡಿಸಿಕೊಂಡು " ಹಾಗೇ ಆಗಲಿ " ಎಂದು ಹೇಳಿದನು.

ವಿಶ್ವಾಮಿತ್ರನು ಈ ರೀತಿಯಾಗಿ ಹೇಳಿದನು :—

೩೧. ರಾಜರ್ಷಿಯೆ! ತಪಸ್ವಿಯಾದ ನಾನು ರಾಜ್ಯದಲ್ಲಿರಲು ರಾಜ್ಯ-ಭೂಮಿ-ಬಲ-ಧನ ಮುಂತಾದ ಸರ್ವಸ್ವವನ್ನೂ ನೀನು ನನ್ನಲ್ಲಿ ಒಪ್ಪಿಸಿರಲಾಗಿ ಈಗ ಇದರ ಪ್ರಭುತ್ವವು ಯಾರಿಗೆ ಸೇರಿರುವುದು ? ಹೇಳು.

ಹರಿಶ್ಚಂದ್ರನು ಇಂತೆಂದನು :—

೩೨. ಬ್ರಹ್ಮರ್ಷಿಯೆ! ಯಾವ ಸಮಯದಲ್ಲಿ ನನ್ನಿಂದ ನಿನಗೆ ಭೂಮಿಯು ದಾನಮಾಡಲ್ಪಟ್ಟಿತೊ; ಆ ದಾನಮಾಡುವ ಸಮಯದಲ್ಲಿ ಕೂಡ ನೀನು ಎಲ್ಲಕ್ಕೂ ಪ್ರಭುವಾಗಿರುತ್ತೀಯೆ. ಈಗ ಭೂಮಿಯ ಪತಿಯಾದ ಮೇಲೆ ಹೇಳತಕ್ಕದ್ದೇನಿದೆ?

ವಿಶ್ವಾಮಿತ್ರ ಉವಾಚ :—

ಯದಿ ರಾಜಂಸ್ತ್ವಯಾ ದತ್ತಾ ಮಮ ಸರ್ವಾ ವಸುನ್ಧರಾ ।
ಯತ್ರ ಮೇ ವಿಷಯೋ ಸ್ವಾಮ್ಯಂ ತಸ್ಮಾನ್ನಿಷ್ಕ್ರಾನ್ತುಮರ್ಹಸಿ ॥೩೩॥

ಶ್ರೋಣೀಸೂತ್ರಾದಿ ಸಕಲಂ ಮುಕ್ತ್ವಾ ಭೂಷಣಸಂಗ್ರಹಮ್ ।
ತರುವಲ್ಕಲಮಾಬಧ್ಯ ಸಹ ಪತ್ನ್ಯಾ ಸುತೇನ ಚ ॥೩೪॥

ಪಕ್ಷಿಣ ಊಚುಃ :—

ತಥೇತಿ ಚೋಕ್ತ್ವಾ ಕೃತ್ವಾ ಚ ರಾಜಾ ಗನ್ತುಂ ಪ್ರಚಕ್ರಮೇ ।
ಸ್ವಪತ್ನ್ಯಾ ಶೈಬ್ಯಯಾ ಸಾರ್ಧಂ ಬಾಲಕೇನಾತ್ಮಜೇನ ಚ ॥೩೫॥

ವ್ರಜತಃ ಸ ತತೋ ರುದ್ಧ್ವಾ ಪನ್ಥಾನಂ ಪ್ರಾಹ ತಂ ನೃಪಮ್ ।
ಕ್ವ ಯಾಸ್ಯಸೀತ್ಯದತ್ವಾ ಮೇ ದಕ್ಷಿಣಾಂ ರಾಜಸೂಯಿಕೀಮ್ ॥೩೬॥

ವಿಶ್ವಾಮಿತ್ರನು ಇಂತೆಂದನು :—

೩೩. ರಾಜರ್ಷಿಯೆ! ನಿನ್ನಿಂದ ಎಲ್ಲ ಭೂಮಿಯು ನನಗೆ ದಾನ ಮಾಡಲ್ಪಟ್ಟಿರುವುದು ನಿಜವಾದರೆ ಎಲ್ಲೆಲ್ಲಿ ನನ್ನ ಸ್ವಾಮಿತ್ವವಿದೆಯೊ ಆ ಸ್ಥಳ-ದಿಂದ ಕೂಡಲೆ ಹೊರಡುವವನಾಗು.

೩೪. ಉಡಿದಾರ ಮೊದಲಾಗಿ ಸಮಸ್ತ ಸುವರ್ಣಾದಿ ಆಭರಣಗಳನ್ನೂ ಬಿಟ್ಟು ಮರದ ತೊಗಟೆಗಳನ್ನು ವಸ್ತ್ರವನ್ನಾಗಿ ಧರಿಸಿ ಪತ್ನೀ-ಪುತ್ರರೊಂದಿಗೆ ಈ ಸ್ಥಳವನ್ನು ಬಿಟ್ಟು ಹೊರಡು.

ಪಕ್ಷಿಗಳು ಹೀಗೆ ನುಡಿದುವು :—

೩೫. ಹರಿಶ್ಚಂದ್ರನು ಹಾಗೇ ಆಗಲಿ ಎಂದು ಹೇಳಿ ಅದರಂತೆ ಒಡವೆ-ಗಳನ್ನು ತೆಗೆದಿರಿಸಿ ಶೈಬ್ಯೆಯೆಂಬ ಪತ್ನಿಯಿಂದಲೂ ಬಾಲಕನಾದ ಪುತ್ರನಿಂದಲೂ ಸಹಿತನಾಗಿ ನಡೆಯಲು ಆರಂಭಿಸಿದನು.

೩೬. ತರುವಾಯ ವಿಶ್ವಾಮಿತ್ರಮುನಿಯು ಹೊರಟಿರುವ ರಾಜನ ದಾರಿಯನ್ನು ಅಡ್ಡಗಟ್ಟಿ ರಾಜಸೂಯಯಾಗಕ್ಕೆ ಪರ್ಯಾಪ್ತವಾದ ದಕ್ಷಿಣೆಯನ್ನು ನನಗೆ ಕೊಡದೆ ಎಲ್ಲಿಗೆ ಹೋಗುತ್ತೀಯೆ? ಎಂದು ಆ ರಾಜನನ್ನು ಆಕ್ಷೇಪಿಸಿದನು.

ಹರಿಶ್ಚಂದ್ರ ಉವಾಚ :—

ಭಗವನ್ರಾಜ್ಯಮೇತತ್ತೇ ದತ್ತಂ ನಿಹತಕಣ್ಟಕಮ್ ।
ಅವಶಿಷ್ಟಮಿದಂ ಬ್ರಹ್ಮನ್ನದ್ಯ ದೇಹತ್ರಯಂ ಮಮ ॥೩೭॥

ವಿಶ್ವಾಮಿತ್ರ ಉವಾಚ :—

ತಥಾಪಿ ಖಲು ದಾತವ್ಯಾ ತ್ವಯಾ ಮೇ ಯಜ್ಞದಕ್ಷಿಣಾ ।
ವಿಶೇಷತೋ ಬ್ರಾಹ್ಮಣಾನಾಂ ಹನ್ತ್ಯದತ್ತಂ ಪ್ರತಿಶ್ರುತಮ್ ॥೩೮॥

ಯಾವತ್ತೋಷೋ ರಾಜಸೂಯೇ ಬ್ರಾಹ್ಮಣಾನಾಂ ಭವೇನ್ನೃಪ ।
ತಾವದೇವ ತು ದಾತವ್ಯಾ ದಕ್ಷಿಣಾ ರಾಜಸೂಯಿಕೀ ॥೩೯॥

ಪ್ರತಿಶ್ರುತ್ಯ ಚ ದಾತವ್ಯಂ ಯೋದ್ಧವ್ಯಂ ಚಾತತಾಯಿಭಿಃ ।
ರಕ್ಷಿತವ್ಯಾಸ್ತಥಾ ಚಾರ್ತಾಸ್ತ್ವಯೈವ ಪ್ರಾಕ್ಪ್ರತಿಶ್ರುತಮ್ ॥೪೦॥

ಹರಿಶ್ಚಂದ್ರರಾಜನು ಹೀಗೆ ನುಡಿದನು :—

೩೭. ಪೂಜ್ಯನೆ! ನಾಶಮಾಡಿದ ಶತ್ರುಕಂಟಕವುಳ್ಳ ಈ ರಾಜ್ಯವೆಲ್ಲವೂ ನನ್ನಿಂದ ನಿನಗೆ ಅರ್ಪಿಸಲ್ಪಟ್ಟಿದೆ. ಬ್ರಹ್ಮರ್ಷಿಯೆ! ಈಗ ನನ್ನಲ್ಲಿ ನನ್ನ ಮತ್ತು ಈ ಪತ್ನೀ-ಪುತ್ರರ ಮೂರು ದೇಹಗಳು ಮಾತ್ರ ಉಳಿದಿವೆ.

ವಿಶ್ವಾಮಿತ್ರಮುನಿಯು ಮತ್ತೆ ಹೇಳಿದನು :—

೩೮. ಆದರೂ ನೀನು ನನಗೆ ಯಜ್ಞದಕ್ಷಿಣೆಯನ್ನು ಕೊಟ್ಟೇಕೊಡಬೇಕು. ವಿಶೇಷವಾಗಿ ಬ್ರಾಹ್ಮಣರಿಗೆ ಕೊಡಲು ಒಪ್ಪಿಕೊಂಡಿದ್ದ ಧನವನ್ನು ಕೊಡದಿರುವುದು ಕುಲವನ್ನು ನಾಶಮಾಡುವುದು.

೩೯. ರಾಜೋತ್ತಮನೆ! ರಾಜಸೂಯಯಾಗದಲ್ಲಿ ಎಷ್ಟು ಐಶ್ವರ್ಯವನ್ನು ದಾನಮಾಡಿದರೆ ವಿಪ್ರಸಮಷ್ಟಿಗೆ ಸಂತೋಷವಾದೀತೊ ಅಷ್ಟು ರಾಜಸೂಯಪರ್ಯಾಪ್ತದಕ್ಷಿಣೆಯನ್ನು ಕೊಡಬೇಕು.

೪೦. ವಾಗ್ದಾನಮಾಡಿದಂತೆ ದಾನಮಾಡಲೇಬೇಕು. ಬೆಂಕಿಯಿಟ್ಟವನೆ ಮುಂತಾದ ಆತತಾಯಿಗಳೊಡನೆ ಯುದ್ಧಮಾಡಲೇಬೇಕು. ನೊಂದವರನ್ನು ರಕ್ಷಿಸಲೇಬೇಕು. ಇದೆಲ್ಲವೂ ಕ್ಷತ್ರಿಯ ಧರ್ಮವೆನ್ನುವುದನ್ನು ನೀನು ಒಪ್ಪಿಕೊಂಡಿದ್ದೀಯೆ.

ಹರಿಶ್ಚನ್ದ್ರ ಉವಾಚ :—

ಭಗವನ್ ಸಾಮ್ಪ್ರತಂ ನಾಸ್ತಿ ದಾಸ್ಯೇ ಕಾಲಕ್ರಮೇಣ ತೇ ।
ಪ್ರಸಾದಂ ಕುರು ವಿಪ್ರರ್ಷೇ ಸದ್ಭಾವಮನುಚಿನ್ತ್ಯ ಚ ॥೪೧॥

ವಿಶ್ವಾಮಿತ್ರ ಉವಾಚ :—

ಕಿಮ್ಪ್ರಮಾಣೋ ಮಯಾ ಕಾಲಃ ಪ್ರತೀಕ್ಷ್ಯಸ್ತೇ ಜನಾಧಿಪ ।
ಶೀಘ್ರಮಾಚಕ್ಷ್ವ ಶಾಪಾಗ್ನಿರನ್ಯಥಾ ತ್ವಾಂ ಪ್ರಧಕ್ಷ್ಯತಿ ॥೪೨॥

ಹರಿಶ್ಚನ್ದ್ರ ಉವಾಚ :—

ಮಾಸೇನ ತವ ವಿಪ್ರರ್ಷೇ ಪ್ರದಾಸ್ಯೇ ದಕ್ಷಿಣಾಧನಮ್ ।
ಸಾಮ್ಪ್ರತಂ ನಾಸ್ತಿ ಮೇ ವಿತ್ತಮನುಜ್ಞಾಂ ದಾತುಮರ್ಹಸಿ ॥೪೩॥

ಹರಿಶ್ಚಂದ್ರರಾಜನು ಹೇಳಿದನು :—

೪೧. ಪೂಜ್ಯನಾದ ಬ್ರಹ್ಮರ್ಷಿಯೆ! ಕೊಡಬೇಕಾದ ಧನವು ಈಗ ನನ್ನ ಬಳಿಯಲ್ಲಿ ಇಲ್ಲ. ಕಾಲಕ್ರಮವಾಗಿ ನಿನಗೆ ಕೊಡುವೆನು. ಸೌಜನ್ಯವನ್ನು ತೋರಿಸಿ ನನ್ನಲ್ಲಿ ಅನುಗ್ರಹಮಾಡಬೇಕು.

ವಿಶ್ವಾಮಿತ್ರಮುನಿಯು ನುಡಿದನು :—

೪೨. ರಾಜನೆ! ನಿನ್ನಿಂದ ದಕ್ಷಿಣಾದ್ರವ್ಯವನ್ನು ತೆಗೆದುಕೊಳ್ಳಲು ಎಷ್ಟುಕಾಲ ನಿರೀಕ್ಷಿಸಲಿ? ಬೇಗ ಹೇಳು. ಹಾಗಿಲ್ಲದಿದ್ದರೆ ನನ್ನ ಶಾಪಾಗ್ನಿಯು ನಿನ್ನನ್ನು ಸುಟ್ಟುಬಿಡುವುದು.

ಹರಿಶ್ಚಂದ್ರನು ಹೇಳಿದನು :—

೪೩. ಬ್ರಹ್ಮರ್ಷಿಯೆ! ನಾನು ನಿನಗೆ ಒಂದು ತಿಂಗಳಿನೊಳಗೆ ದಕ್ಷಿಣಾ ಧನವನ್ನು ಕೊಡುವೆನು. ಈಗ ನನ್ನಲ್ಲಿ ಧನವು ಇಲ್ಲ. ಕಾಲಕ್ರಮದಿಂದ ಕೊಡುವಂತೆ ಅನುಮತಿಯನ್ನು ಕೊಟ್ಟು ಅನುಗ್ರಹಮಾಡು.

ವಿಶ್ವಾಮಿತ್ರ ಉವಾಚ :—

ಗಚ್ಛ ಗಚ್ಛ ನೃಪಶ್ರೇಷ್ಠ ಸ್ವಧರ್ಮಮನುಪಾಲಯ ।
ಶಿವಶ್ಚ ತೇಽಧ್ವಾ ಭವತು ಮಾ ಸನ್ತು ಪರಿಪನ್ಥಿನಃ ॥೪೪॥

ಪಕ್ಷಿಣ ಊಚುಃ :—

ಅನುಜ್ಞಾತಃ ಸ ಗಚ್ಛೇತಿ ಜಗಾಮ ವಸುಧಾಧಿಪಃ ।
ಪದ್ಭ್ಯಾಮನುಚಿತಾ ಗನ್ತುಮನ್ವಗಚ್ಛತ ತಂ ಪ್ರಿಯಾ ॥೪೫॥

ತಂ ಸಭಾರ್ಯಂ ನೃಪಶ್ರೇಷ್ಠಂ ನಿರ್ಯಾನ್ತಂ ಸಸುತಂ ಪುರಾತ್ ।
ದೃಷ್ಟ್ವಾ ಪ್ರಚುಕ್ರುಶುಃ ಪೌರಾ ರಾಜ್ಞಶ್ಚೈವಾನುಯಾಯಿನಃ॥೪೬॥

ಹಾ ನಾಥ ಕಿಂ ಜಹಾಸ್ಯಸ್ಮಾನ್ನಿತ್ಯಾರ್ತಿಪರಿಪೀಡಿತಾನ್ ।
ತ್ವಂ ಧರ್ಮತತ್ಪರೋ ರಾಜನ್ ಪೌರಾನುಗ್ರಹಕೃತ್ತಥಾ ॥೪೭॥

ವಿಶ್ವಾಮಿತ್ರಮುನಿಯು ಹೇಳಿದನು :—

೪೪. ರಾಜಶ್ರೇಷ್ಠನೆ! ನಡಿ, ಹೊರಡು. ಸ್ವಧರ್ಮವನ್ನು ಲೋಪವಿಲ್ಲದಂತೆ ಪರಿಪಾಲಿಸು. ನಿನಗೆ ಮಾರ್ಗವು ಶುಭಪ್ರದವಾಗಲಿ. ನಿನಗೆ ಶತ್ರುಪೀಡೆಯಾಗುವುದು ಬೇಡ.

ಪಕ್ಷಿಗಳು ಹೀಗೆ ನುಡಿದುವು :—

೪೫. ಮುನಿಯಿಂದ "ಹೋಗು" ಎಂದು ಸಮ್ಮತಿಯನ್ನು ಪಡೆದ ಹರಿಶ್ಚಂದ್ರನು ಮುಂದೆ ನಡೆದನು. ಪಾದಚಾರದಿಂದ ಹೋಗಲು ಅರ್ಹಳಲ್ಲದ ಪ್ರಿಯೆಯು ಅವನನ್ನು ಹಿಂಬಾಲಿಸಿ ನಡೆದಳು.

೪೬. ನಗರವನ್ನು ಬಿಟ್ಟು ಹೊರಟ ಪತ್ನೀ-ಪುತ್ರರಿಂದ ಕೂಡಿದ ರಾಜಾಧಿರಾಜನನ್ನು ನೋಡಿ ಪುರಜನರೂ ಮತ್ತು ರಾಜಾನುವರ್ತಿಜನರೂ ದುಃಖದಿಂದ ಕೂಗಿಕೊಂಡರು.

೪೭. ಒಡೆಯನೆ! ಯಾವಾಗಲೂ ಸಂಕಟದಿಂದ ತಪಿಸುತ್ತಿದ್ದ ನಮ್ಮನ್ನು ಏಕೆ ಬಿಟ್ಟುಹೋಗುತ್ತೀಯೆ? ರಾಜನೆ! ನೀನು ಧರ್ಮಪರನೂ ಮತ್ತು ಪೌರರಲ್ಲಿ ಅನುಗ್ರಹದಿಂದ ಕೂಡಿದವನೂ ಆಗಿದ್ದೀಯೆ.

ನಯಾಸ್ಮಾನಪಿ ರಾಜರ್ಷೇ ಯದಿ ಧರ್ಮಮವೇಕ್ಷಸೇ ।
ಮುಹೂರ್ತಂ ತಿಷ್ಠ ರಾಜೇನ್ದ್ರ ಭವತೋ ಮುಖಪಙ್ಕಜಮ್ ॥೪೮॥
ಪಿಬಾಮೋ ನೇತ್ರಭ್ರಮರೈಃ ಕದಾ ದ್ರಕ್ಷ್ಯಾಮಹೇ ಪುನಃ ॥೪೯॥

ಯಸ್ಯ ಪ್ರಯಾತಸ್ಯ ಪುರೋ ಯಾನ್ತಿ ಪೃಷ್ಠೇ ಚ ಪಾರ್ಥಿವಾಃ ।
ತಸ್ಯಾನುಯಾತಿ ಭಾರ್ಯೇಯಂ ಗೃಹೀತ್ವಾ ಬಾಲಕಂ ಸುತಮ್॥೫೦॥

ಯಸ್ಯ ಭೃತ್ಯಾಃ ಪ್ರಯಾತಸ್ಯ ಯಾನ್ತ್ಯಗ್ರೇ ಕುಞ್ಜರಸ್ಥಿತಾಃ ।
ಸ ಏಷ ಪದ್ಭ್ಯಾಂ ರಾಜೇನ್ದ್ರೋ ಹರಿಶ್ಚನ್ದ್ರೋಽದ್ಯ ಗಚ್ಛತಿ ॥೫೧॥

ಹಾ ರಾಜನ್ ಸುಕುಮಾರಂ ತೇ ಸುಭ್ರು ಸುತ್ವಚಮುನ್ನಸಮ್ ।
ಪಥಿ ಪಾಂಸುಪರಿಕ್ಲಿಷ್ಟಂ ಮುಖಂ ಕೀದೃಗ್ಭವಿಷ್ಯತಿ ॥೫೨॥

---

೪೮. ರಾಜರ್ಷಿಯೆ! ನಿನಗೆ ಧರ್ಮದೃಷ್ಟಿಯಿರುವುದಾದರೆ ನಮ್ಮನ್ನೂ ಕರೆದುಕೊಂಡು ಹೋಗು. ರಾಜೇಂದ್ರನೆ! ಒಂದು ಮುಹೂರ್ತಕಾಲವಾದರೂ ನಿಲ್ಲು. ಮತ್ತು ನಿನ್ನ ಮುಖಕಮಲವನ್ನು ತೋರಿಸು.

೪೯. ರಾಜರ್ಷಿಯೆ! ನಿನ್ನ ಮುಖವೆಂಬ ತಾವರೆಯನ್ನು ನಮ್ಮ ಕಣ್ಣುಗಳೆಂಬ ದುಂಬಿಗಳಿಂದ ಸಾರವನ್ನು ಹೀರಿ ಆನಂದಿಸುತ್ತೇವೆ. ಮತ್ತೆ ಎಂದು ಈ ಮುಖತಾವರೆಯನ್ನು ಕಾಣುವೆವೊ!

೫೦. ಯಾವ ಹರಿಶ್ಚಂದ್ರರಾಜನು ಹೊರಹೊರಟರೆ ಹಿಂಭಾಗ-ಮುಂಭಾಗಗಳಲ್ಲಿ ರಾಜರು ಹೊರಡುವರೊ ಅಂತಹ ರಾಜನನ್ನು ಇಂದು ಎಳೆ-ಗೂಸನ್ನು ಎತ್ತಿಕೊಂಡ ಪತ್ನಿಯು ಹಿಂಬಾಲಿಸುತ್ತಿರುವಳು.

೫೧. ಯಾವ ರಾಜನು ಹೊರಟಾಗ ಮುಂದುಗಡೆಯಲ್ಲಿ ಅನೇಕ ಸೇವಕರು ಆನೆಯ ಮೇಲೆ ಕುಳಿತು ಹೋಗುವರೊ ಅಂತಹ ಹರಿಶ್ಚಂದ್ರ ರಾಜೇಂದ್ರನು ಇಂದು ಪಾದಚಾರದಿಂದ ಹೋಗುತ್ತಿರುವನು.

೫೨. ಅಯ್ಯೋ! ರಾಜನೆ! ಸುಕುಮಾರವೂ, ಸುಂದರವಾದ ಹುಬ್ಬು-ಗಳುಳ್ಳದ್ದೂ, ಉತ್ತಮವಾದ ಚರ್ಮವುಳ್ಳದ್ದೂ ಮತ್ತು ಲಕ್ಷಣವಾದ ಮೂಗಿನಿಂದ ಕೂಡಿರುವುದೂ ಆದ ನಿನ್ನ ಮುಖವು ದಾರಿಯಲ್ಲಿ ಧೂಳಿಯಿಂದ ಮಲಿನವಾಗಿ ಎಂತಹದಾಗುವುದೊ!

ತಿಷ್ಠ ತಿಷ್ಠ ನೃಪಶ್ರೇಷ್ಠ ಸ್ವಧರ್ಮಮನುಪಾಲಯ ।
ಆನೃಶಂಸ್ಯಂ ಪರೋ ಧರ್ಮಃ ಕ್ಷತ್ರಿಯಾಣಾಂ ವಿಶೇಷತಃ ॥೫೩॥

ಕಿಂ ದಾರೈಃ ಕಿಂ ಸುತೈರ್ನಾಥ ಧನೈರ್ಧಾನ್ಯೈರಥಾಪಿ ವಾ ।
ಸರ್ವಮೇತತ್ಪರಿತ್ಯಜ್ಯ ಛಾಯಾಭೂತಾ ವಯಂ ತವ ॥೫೪॥

ಹಾ ನಾಥ ಹಾ ಮಹಾರಾಜ ಹಾ ಸ್ವಾಮಿನ್ ಕಿಂ ಜಹಾಸಿ ನಃ ॥೫೫॥

ಯತ್ರ ತ್ವಂ ತತ್ರ ಹಿ ವಯಂ ತತ್ಸುಖಂ ಯತ್ರ ವೈ ಭವಾನ್ ।
ನಗರಂ ತದ್ಭವಾನ್ ಯತ್ರ ಸ ಸ್ವರ್ಗೋ ಯತ್ರ ನೋ ನೃಪಃ ॥೫೬॥

ಇತಿ ಪೌರವಚಃ ಶ್ರುತ್ವಾ ರಾಜಾ ಶೋಕಪರಿಪ್ಲುತಃ ।
ಅತಿಷ್ಠತ್ಸ ತದಾ ಮಾರ್ಗೇ ತೇಷಾಮೇವಾನುಕಮ್ಪಯಾ ॥೫೭॥

---

೫೩. ರಾಜೇಂದ್ರ ! ಹೋಗಬೇಡ, ನಿನ್ನ ಸ್ವಧರ್ಮವನ್ನು ಪಾಲಿಸು, ಕ್ಷತ್ರಿಯರಿಗೆ ವಿಶೇಷವಾಗಿ ಕ್ರೂರತನವಿಲ್ಲದಂತೆ ಮನಮೆಚ್ಚಿಸುವ ಸೌಮ್ಯತೆಯು ಉತ್ತಮವಾದ ಧರ್ಮವು.

೫೪. ಸ್ವಾಮಿಯೆ! ಹೆಂಡಿರು-ಮಕ್ಕಳಿಂದ ಏನು ಭಾಗ್ಯ? ಅಥವಾ ಧನ-ಧಾನ್ಯಗಳು ಏಕೆ ಬೇಕು. ಇದೆಲ್ಲವನ್ನೂ ಬಿಟ್ಟು ನಾವು ನಿನ್ನನ್ನು ಛಾಯೆಯಂತೆ ಅನುವರ್ತಿಸುತ್ತೇವೆ-

೫೫. ಅಯ್ಯೊ ! ಪ್ರಭುವೆ ! ಅಯ್ಯೋ ! ಮಹಾರಾಜನೆ ! ಅಯ್ಯೋ ! ಸ್ವಾಮಿಯೆ ! ಅನಾಥರಾದ ನಮ್ಮನ್ನು ಬಿಟ್ಟು ನಿರ್ದಯನಾಗಿ ಹೋಗುವಿಯಾ ?

೫೬. ನೀನು ಎಲ್ಲಿರುವೆಯೊ ನಾವು ಅಲ್ಲಿರುವೆವು. ನೀನು ಇರುವ ಸ್ಥಳದಲ್ಲಿಯೆ ನಮಗೆ ಸೌಖ್ಯವು. ನೀನು ಇರುವ ಪ್ರದೇಶವು ನಮಗೆ ನಗರವು. ರಾಜನು ಇದ್ದ ಸ್ಥಳವು ನಮಗೆ ಸ್ವರ್ಗವು.

೫೭. ಹೀಗೆಂಬ ಪುರಜನರ ವಚನವನ್ನು ಕೇಳಿ ಶೋಕೋದ್ರೇಕವುಳ್ಳವನಾದ ಆ ರಾಜನು ಪುರಜನರಲ್ಲಿರುವ ದಯಾಪರವಶನಾಗಿ ಆಗ ಮಾರ್ಗದಲ್ಲಿ ನಿಂತುಕೊಂಡನು.

ವಿಶ್ವಾಮಿತ್ರೋಽಪಿ ತಂ ದೃಷ್ಟ್ವಾ ಪೌರವಾಕ್ಯಾಕುಲೀಕೃತಮ್ ।
ರೋಷಾಮರ್ಷವಿವೃತ್ತಾಕ್ಷಃ ಸಮಾಗಮ್ಯ ವಚೋಽಬ್ರವೀತ್ ॥೫೮॥

ಧಿಕ್ತ್ವಾಂ ದುಷ್ಟಸಮಾಚಾರಮನೃತಂ ಜಿಹ್ಮಚಾರಿಣಮ್ ।
ಮಮ ರಾಜ್ಯಂ ಚ ದತ್ವಾಯಃ ಪುನಃ ಪ್ರಾಕೃಷ್ಟುಮಿಚ್ಛಸಿ ॥೫೯॥

ಇತ್ಯುಕ್ತಃ ಪರುಷಂ ತೇನ ಗಚ್ಛಾಮೀತಿ ಸವೇಪಥುಃ ।
ಬ್ರುವನ್ನೇವಂ ಯಯೌ ಶೀಘ್ರಮಾಕರ್ಷನ್ದಯಿತಾಂ ಕರೇ ॥೬೦॥

ಕರ್ಷತಸ್ತಾಂ ತತೋ ಭಾರ್ಯಾಂ ಸುಕುಮಾರೀಂ ಶ್ರಮಾತುರಾಮ್ ।
ಸಹಸಾ ದಣ್ಡಕಾಷ್ಠೇನ ತಾಡಯಾಮಾಸ ಕೌಶಿಕಃ ॥೬೧॥

ತಾಂ ತಥಾ ತಾಡಿತಾಂ ದೃಷ್ಟ್ವಾ ಹರಿಶ್ಚನ್ದ್ರೋ ಮಹೀಪತಿಃ ।
ಗಚ್ಛಾಮೀತ್ಯಾಹ ದುಃಖಾರ್ತೋ ನಾನ್ಯತ್ಕಿಂಚಿದುದಾಹರತ್ ॥೬೨॥

---

೫೮. ವಿಶ್ವಾಮಿತ್ರಮುನಿಯು ಪುರಜನರ ಮಾತಿನಿಂದ ಕಂಗೆಟ್ಟನಿಂತ ಹರಿಶ್ಚಂದ್ರರಾಜನನ್ನು ನೋಡಿ ಕೋಪ-ಅಸಹನೆಗಳಿಂದ ತಿರುಗಿಸುತ್ತಿದ್ದ ಕಣ್ಣುಳ್ಳವನಾಗಿ ಅಲ್ಲಿಗೆ ಬಂದು ಹೀಗೆ ಹೇಳಿದನು.

೫೯. ನನಗೆ ರಾಜ್ಯವನ್ನು ಕೊಟ್ಟು ಮತ್ತೆ ನನ್ನಿಂದ ಹಿಂದಕ್ಕೆ ಅಪಹರಿಸಿಕೊಳ್ಳಲು ನೀನು ಯತ್ನಿಸುತ್ತಿದ್ದೀಯೆ. ಹೀಗೆ ಅಯುಕ್ತವಾದ ವರ್ತನೆಯುಳ್ಳವನೂ, ಅನೃತಮಯನೂ ಮತ್ತು ಕುಟಿಲಭಾಷಿಯೂ ಆದ ನಿನಗೆ ಧಿಕ್ಕಾರವು.

೬೦. ವಿಶ್ವಾಮಿತ್ರಮುನಿಯಿಂದ ಹೀಗೆ ಕಠಿನವಾಗಿ ಬೆದರಿಸಲ್ಪಟ್ಟ ರಾಜನು ನಡುಗುತ್ತ "ನಿಲ್ಲುವುದಿಲ್ಲ; ಹೋಗುತ್ತೇನೆ" ಎಂದು ಹೇಳುತ್ತ ಪ್ರಿಯೆಯನ್ನು ಕೈಹಿಡಿದು ಮುಂದೆ ಸೆಳೆಯುತ್ತ ಬೇಗ ಮುಂದೆ ನಡೆದನು.

೬೧. ತರುವಾಯ ಕೋಮಲಾಂಗಿಯಾದ ಮತ್ತು ಮುಂದೆ ನಡೆಯಲಾರದೆ ಶ್ರಮದಿಂದ ಕಷ್ಟಪಡುತ್ತಿದ್ದ ಆ ಪತ್ನಿಯನ್ನು ರಾಜನು ಎಳೆಯುತ್ತಿರಲು ಮುನಿಯು ಬೇಗ ಹತ್ತಿರ ಬಂದು ದಂಡಕಾಷ್ಠದಿಂದ ಆಕೆಯನ್ನು ಹೊಡೆದನು.

೬೨. ಹಾಗೆ ವಿಶ್ವಾಮಿತ್ರಮುನಿಯಿಂದ ಹೊಡೆಯಲ್ಪಟ್ಟ ಪ್ರಿಯೆಯನ್ನು ನೋಡಿ ಹರಿಶ್ಚಂದ್ರರಾಜೇಂದ್ರನು ಬೇರೆ ಯಾವ ಮಾತನ್ನೂ ಆಡದೆ ಮುಂದಕ್ಕೆ ಹೋಗುವೆನೆಂದು ಹೇಳಿದನು.

ಅಥ ವಿಶ್ವೇ ತದಾ ದೇವಾಃ ಪಞ್ಚ ಪ್ರಾಹುಃ ಕೃಪಾಲವಃ ||೬೩||

ವಿಶ್ವಾಮಿತ್ರಃ ಸುಪಾಪೋಽಯಂ ಲೋಕಾನ್ಕಾನ್ ಸಮವಾಪ್ಸ್ಯತಿ ।
ಯೇನಾಯಂ ಯಜ್ವನಾಂ ಶ್ರೇಷ್ಠಃ ಸ್ವಾರಾಜ್ಯಾದವರೋಪಿತಃ ||೬೪||

ಕಸ್ಯ ವಾ ಶ್ರದ್ಧಯಾ ಪೂತಂ ಸುತಂ ಸೋಮಂ ಮಹಾಧ್ವರೇ ।
ಪೀತ್ವಾ ವಯಂ ಪ್ರಯಾಸ್ಯಾಮೋ ಮುದಂ ಮನ್ತ್ರಪುರಃಸರಮ್ ||೬೫||

ಪಕ್ಷಿಣ ಊಚುಃ :—

ಇತಿ ತೇಷಾಂ ವಚಃ ಶ್ರುತ್ವಾ ಕೌಶಿಕೋಽತಿರುಷಾನ್ವಿತಃ ।
ಶಶಾಪ ತಾನ್ಮನುಷ್ಯತ್ವಂ ಸರ್ವೇ ಯೂಯಮವಾಪ್ಸ್ಯಥ ||೬೬||

---

೬೩. ಆಗ ಐದು ಮಂದಿ ವಿಶ್ವೇದೇವರು ಆ ಪ್ರಸಂಗವನ್ನು ನೋಡಿ ದಯೆಯಿಂದ ಮನವು ಕರಗಿದವರಾಗಿ ಹೀಗೆಂದು ಹೇಳಿದರು.

೬೪. ಪಾಪಿಯಾದ ಈ ವಿಶ್ವಾಮಿತ್ರಮುನಿಯು ಯಾವ ನರಕವನ್ನು ಹೊಂದುವನೋ. ಈ ಮುನಿಯು ಯಾಗಧರ್ಮಾಸಕ್ತರಲ್ಲಿ ಶ್ರೇಷ್ಠನಾದ ರಾಜನನ್ನು ಸ್ವಾರಾಜ್ಯಭ್ರಷ್ಟನನ್ನಾಗಿ ಮಾಡಿರುವನು,

೬೫. ಇನ್ನುಮುಂದೆ ನಾವು ಯಾವ ರಾಜನ ಮಹಾಯಜ್ಞ ಸಮಾರಂಭದಲ್ಲಿ ಶ್ರದ್ಧೆಯಿಂದ ಪವಿತ್ರವಾದ ಮತ್ತು ಮಂತ್ರಪೂರ್ವಕವಾಗಿ ಹಿಂಡಿ ಇಟ್ಟಿರುವ ಸೋಮರಸವನ್ನು ಪಾನಮಾಡಿ ಸಂತೋಷವನ್ನು ಹೊಂದೋಣ.

ಪಕ್ಷಿಗಳು ಹೀಗೆಂದು ಹೇಳಿದುವು :—

೬೬. ವಿಶ್ವೇದೇವರ ಈ ಮಾತನ್ನು ಕೇಳಿ ಅತ್ಯಂತ ಕೋಪಾವೇಶದಿಂದ ಕೂಡಿದ ವಿಶ್ವಾಮಿತ್ರಮುನಿಯು " ನೀವು ಎಲ್ಲರೂ ಮಾನವಜನ್ಮವನ್ನು ಹೊಂದುವಿರಿ " ಎಂದು ಅವರನ್ನು ಶಪಿಸಿದನು.

ಪ್ರಸಾದಿತಶ್ಚ ತೈಃ ಪ್ರಾಹ ಪುನರೇವ ಮಹಾಮುನಿಃ ।
ಮಾನುಷತ್ವೇಽಪಿ ಭವತಾಂ ಭವಿತ್ರೀ ನೈವ ಸನ್ತತಿಃ ॥೬೭॥

ನ ದಾರಸಂಗ್ರಹಶ್ಚೈವ ಭವಿತಾ ನ ಚ ಮತ್ಸರಃ ।
ಕಾಮಕ್ರೋಧವಿನಿರ್ಮುಕ್ತಾ ಭವಿಷ್ಯಥ ಸುರಾಃ ಪುನಃ ॥೬೮॥

ತತೋಽವತೇರುರಂಶೈಃ ಸ್ವೈರ್ದೇವಾಸ್ತೇ ಕುರುವೇಶ್ಮನಿ ।
ದ್ರೌಪದೀಗರ್ಭಸಂಭೂತಾಃ ಪಞ್ಚ ವೈ ಪಾಣ್ಡುನನ್ದನಾಃ ॥೬೯॥

ಏತಸ್ಮಾತ್ಕಾರಣಾತ್ಪಞ್ಚ ಪಾಣ್ಡವೇಯಾ ಮಹಾರಥಾಃ ।
ನ ದಾರಸಙ್ಗ್ರಹಂ ಪ್ರಾಪ್ತಾಃ ಶಾಪಾತ್ತಸ್ಯ ಮಹಾಮುನೇಃ ॥೭೦॥

---

೬೭. ವಿಶ್ವಾಮಿತ್ರಮಹಾಮುನಿಯು ಆ ದೇವತೆಗಳಿಂದ ಪ್ರಾರ್ಥಿತನಾಗಿ ಪ್ರಸನ್ನತೆಯಿಂದ ಮತ್ತೆ ಹೇಳಿದನು. ಮನುಷ್ಯತ್ವ ಪ್ರಾಪ್ತಿಯಾದರೂ ನಿಮಗೆ ಸಂತತಿಯಾಗುವುದಿಲ್ಲ.

೬೮. ಹಾಗು ವಿವಾಹಸಂಸ್ಕಾರವು ನಿಮಗೆ ಆಗುವುದಿಲ್ಲ. ಮತ್ಸರಾದಿ-ದೋಷಗಳಿಗೆ ನೀವು ಆಸ್ಪದರಾಗುವುದಿಲ್ಲ. ಮತ್ತು ಕಾಮ, ಕ್ರೋಧ ಮುಂತಾದ ದೋಷಗಳಿಂದ ರಹಿತರಾಗಿ ಮತ್ತೆ ದೇವತ್ವವನ್ನು ಹೊಂದುತ್ತೀರಿ.

೬೯. ತರುವಾಯ ಆ ಐದುಮಂದಿ ವಿಶ್ವೇದೇವರು ತಮ್ಮ ಅಂಶಗಳಿಂದ ಪಾಂಡವಪುತ್ರರಾಗಿ ದ್ರೌಪದೀಗರ್ಭದಿಂದ ಕುರುವಂಶದಲ್ಲಿ ಜನಿಸಿ ಮಾನವ-ರಾದರು.

೭೦. ಈ ಕಾರಣದಿಂದ ಪಾಂಡವಪುತ್ರರಾಗಿ ಜನಿಸಿದ ಐದುಮಂದಿ ಮಹಾರಥರು ವಿಶ್ವಾಮಿತ್ರಮಹಾಮುನಿಯ ಶಾಪಬಲದಿಂದ ಪಾಣಿಗ್ರಹಣ ಸಂಸ್ಕಾರವನ್ನು ಹೊಂದಲಿಲ್ಲ.

ಏತತ್ತೇ ಸರ್ವಮಾಖ್ಯಾತಂ ಪಾಣ್ಡವೇಯಕಥಾಶ್ರಯಮ್ ।
ಪ್ರಶ್ನಂ ಚತುಷ್ಟಯಂ ಗೀತಂ ಕಿಮನ್ಯಚ್ಛ್ರೋತುಮಿಚ್ಛಸಿ ॥೭೧॥

ಇತಿ ಶ್ರೀ ಮಾರ್ಕಂಡೇಯಮಹಾಪುರಾಣೇ ದ್ರೌಪದೇಯೋತ್ಪತ್ತಿ-ಕಥನಂ ನಾಮ ಸಪ್ತಮೋಽಧ್ಯಾಯಃ

---

೭೧. ಜೈಮಿನಿಮುನಿಯೆ ! ಪಾಂಡವ ಕಥೆಯ ಅಂಶಕ್ಕೆ ಸೇರಿದ, ನೀನು ಕೇಳಿರುವ ನಾಲ್ಕು ಪ್ರಶ್ನೆಗಳಿಗೆ ಎಲ್ಲ ಸಮಾಧಾನವು ನಮ್ಮಿಂದ ಹೇಳಲ್ಪಟ್ಟಿದೆ. ಮುಂದೆ ಏನು ಕೇಳಲು ನೀನು ಇಷ್ಟಪಡುತ್ತೀಯೆ ?

ಮಾರ್ಕಂಡೇಯ ಮಹಾಪುರಾಣದಲ್ಲಿ ಏಳನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಮೋಽಧ್ಯಾಯಃ

(ಹರಿಶ್ಚನ್ದ್ರೋಪಾಖ್ಯಾನಮ್)

ಜೈಮಿನಿರುವಾಚ :—

ಭವದ್ಭಿರಿದಮಾಖ್ಯಾತಂ ಯಥಾಪ್ರಶ್ನಮನುಕ್ರಮಾತ್ ।
ಮಹತ್ಕೌತೂಹಲಂ ಮೇಽಸ್ತಿ ಹರಿಶ್ಚನ್ದ್ರಕಥಾಂ ಪ್ರತಿ ॥೧॥

ಅಹೋ ಮಹಾತ್ಮನಾ ತೇನ ಪ್ರಾಪ್ತಂ ಕೃಚ್ಛ್ರಮನುತ್ತಮಮ್ ।
ಕಚ್ಚಿತ್ಸುಖಮನುಪ್ರಾಪ್ತಂ ತಾದೃಗೇವ ದ್ವಿಜೋತ್ತಮಾಃ ॥೨॥

ಪಕ್ಷಿಣ ಊಚುಃ :—

ವಿಶ್ವಾಮಿತ್ರವಚಃ ಶ್ರುತ್ವಾ ಸ ರಾಜಾ ಪ್ರಯಯೌ ಶನೈಃ ।
ಶೈಬ್ಯಯಾನುಗತೋ ದುಃಖೀ ಭಾರ್ಯಯಾ ಬಾಲಪುತ್ರಯಾ ॥೩॥

ಎಂಟನೆಯ ಅಧ್ಯಾಯ

ಜೈಮಿನಿಯು ಹೇಳಿದನು :—

೧. ನನ್ನ ಪ್ರಶ್ನೆಗಳಿಗೆ ಕ್ರಮವಾಗಿ ಸಮಾಧಾನವು ನಿಮ್ಮಿಂದ ಬೋಧಿಸಲ್ಪಟ್ಟಿತು. ಆದರೆ ಈಗ ಹರಿಶ್ಚಂದ್ರರಾಜನ ಕಥೆಯಲ್ಲಿ ನನಗೆ ಮಹತ್ತಾದ ಕುತೂಹಲವುಂಟಾಗಿದೆ.

೨. ಪಕ್ಷೀಂದ್ರರೇ! ಪರಮಾಶ್ಚರ್ಯವು! ಮಹಾತ್ಮನಾದ ಹರಿಶ್ಚಂದ್ರನಿಂದ ಅತಿ ಕಠಿನವಾದ ಕಷ್ಟವು ಹೊಂದಲ್ಪಟ್ಟಿತು. ಹಾಗೆಯೆ ಅಂತಹ ಸುಖವು ಅನುಭವಿಸಲ್ಪಟ್ಟಿತೇ ಏನು?

ಪಕ್ಷಿಗಳು ಮುಂದುವರಿಸಿ ಹೇಳಿದುವು :—

೩. ವಿಶ್ವಾಮಿತ್ರಮಹರ್ಷಿಯ ಮಾತನ್ನು ಕೇಳಿ ಹರಿಶ್ಚಂದ್ರನು ಅತಿ ದುಃಖಿತನಾಗಿ ಎಳೆಮಗುವಿನಿಂದ ಕೂಡಿದ ಶೈಬ್ಯೆಯೆಂಬ ಧರ್ಮಪತ್ನಿಯಿಂದ ಹಿಂಬಾಲಿಸಲ್ಪಟ್ಟು ಪ್ರಯಾಣಮಾಡಿದನು.

ಸ ಗತ್ವಾ ವಸುಧಾಪಾಲೋ ದಿವ್ಯಾಂ ವಾರಾಣಸೀಂ ಪುರೀಮ್ ।
ನೈಷಾ ಮನುಷ್ಯಭೋಗ್ಯೇತಿ ಶೂಲಪಾಣೇಃ ಪರಿಗ್ರಹಃ ॥೪॥

ಜಗಾಮ ಪದ್ಭ್ಯಾಂ ದುಃಖಾರ್ತಃ ಸಹ ಪತ್ನ್ಯಾನುಕೂಲಯಾ ।
ಪುರೀಪ್ರವೇಶೇ ದದೃಶೇ ವಿಶ್ವಾಮಿತ್ರಮುಪಸ್ಥಿತಮ್ ॥೫॥

ತಂ ದೃಷ್ಟ್ವಾ ಸಮನುಪ್ರಾಪ್ತಂ ವಿನಯಾವನತೋಽಭವತ್ ।
ಪ್ರಾಹ ಚೈವಾಞ್ಜಲಿಂ ಕೃತ್ವಾ ಹರಿಶ್ಚನ್ದ್ರೋ ಮಹಾಮುನಿಮ್ ॥೬॥

ಇಮೇ ಪ್ರಾಣಾಃ ಸುತಶ್ಚಾಯಮಿಯಂ ಪತ್ನೀ ಮುನೇ ಮಮ ।
ಯೇನ ತೇ ಕೃತ್ಯಮಸ್ತ್ಯೇಶು ತದ್ಗೃಹಾಣಾರ್ಘ್ಯಮುತ್ತಮಮ್ ॥೭॥

ಯದ್ವಾನ್ಯತ್ಕಾರ್ಯಮಸ್ಮಾಭಿಸ್ತದನುಜ್ಞಾತು ಮರ್ಹಸಿ ॥೮॥

---

೪. ಭೂಮಿಪಾಲಕನಾಗಿದ್ದ ಹರಿಶ್ಚಂದ್ರನು ವಿಶ್ವೇಶ್ವರನ ಪರಿಗ್ರಹರೂಪವಾದ ಕಾಶೀನಗರವನ್ನು ಮನುಷ್ಯಭೋಗ್ಯವಾದ ದೇಶವಲ್ಲವೆಂದು ಅರಿತು ದಿವ್ಯವಾದ ಆ ನಗರದ ಕಡೆಗೆ ಹೋದನು.

೫. ದುಃಖಿಯಾದ ಹರಿಶ್ಚಂದ್ರನು ಅನುಕೂಲಳಾಗಿ ವರ್ತಿಸುವ ಪತ್ನಿಯೊಡನೆ ಪಾದಚಾರದಿಂದ ನಡೆದನು. ವಾರಾಣಸೀಪುರಿಯನ್ನು ಪ್ರವೇಶಮಾಡುವುದರೊಳಗೆ ಅಲ್ಲಿಗೆ ಬಂದ ವಿಶ್ವಾಮಿತ್ರಮುನಿಯನ್ನು ಕಂಡನು.

೬. ಹರಿಶ್ಚಂದ್ರನು ಅಲ್ಲಿಗೆ ಬಂದ ಮಹಾಮುನಿಯಾದ ವಿಶ್ವಾಮಿತ್ರನನ್ನು ಕಂಡು ವಿನಯದಿಂದ ತಲೆಬಾಗಿಸಿದವನಾದನು ಮತ್ತು ಕೈಜೋಡಿಸಿಕೊಂಡು ಈ ರೀತಿಯಾಗಿ ಹೇಳಿದನು.

೭. ಮುನಿಯೆ ! ಈ ನನ್ನ ಪ್ರಾಣ, ಈ ನನ್ನ ಪುತ್ರ, ಈ ನನ್ನ ಪತ್ನಿ-ಇವಿಷ್ಟರಲ್ಲಿ ನಿನಗೆ ಯಾವುದರಿಂದ ಉಪಯೋಗವಾಗುವುದೊ ; ಅಂತಹ ಉತ್ತಮವಾದ ಪೂಜೋಪಚಾರವಸ್ತುವನ್ನು ತಕ್ಷಣವೇ ನೀನು ಪರಿಗ್ರಹಿಸು.

೮. ಅಥವಾ ಇನ್ನಾವುದಾದರೂ ಒಂದು ಬಗೆಯಿಂದ ನಿನಗೆ ನನ್ನಿಂದ ಸೇವೆಯು ಸಲ್ಲಬೇಕಾಗಿದ್ದರೆ ಕೂಡಲೆ ಅದನ್ನು ಆಜ್ಞಾಪಿಸಲು ಅರ್ಹನಾಗಿದ್ದೀಯೆ.

ವಿಶ್ವಾಮಿತ್ರ ಉವಾಚ :—

ಪೂರ್ಣಃ ಸ ಮಾಸೋ ರಾಜರ್ಷೇ ದೀಯತಾಂ ಮಮ ದಕ್ಷಿಣಾ ।
ರಾಜಸೂಯನಿಮಿತ್ತಂ ಹಿ ಸ್ಮರ್ಯತೇ ಸ್ವವಚೋ ಯದಿ ॥೯॥

ಹರಿಶ್ಚನ್ದ್ರ ಉವಾಚ :—

ಬ್ರಹ್ಮನ್ನದ್ಯೈವ ಸಂಪೂರ್ಣೋ ಮಾಸೋಽಮ್ಲಾನತಪೋಧನ ।
ತಿಷ್ಠತ್ಯೇತದ್ದಿನಾರ್ಧಂ ಯತ್ತತ್ಪ್ರತೀಕ್ಷಸ್ವ ಮಾ ಚಿರಮ್ ॥೧೦॥

ವಿಶ್ವಾಮಿತ್ರ ಉವಾಚ :—

ಏವಮಸ್ತು ಮಹಾರಾಜ ಆಗಮಿಷ್ಯಾಮ್ಯಹಂ ಪುನಃ ।
ಶಾಪಂ ತವ ಪ್ರದಾಸ್ಯಾಮಿ ನ ಚೇದದ್ಯ ಪ್ರದಾಸ್ಯಸಿ ॥೧೧॥

ವಿಶ್ವಾಮಿತ್ರಮುನಿಯು ನುಡಿದನು :—

೯. ರಾಜರ್ಷಿಯೆ! ಒಂದು ಮಾಸವು ಪೂರ್ಣವಾಯಿತು. ನಿನಗೆ ಆಡಿದಮಾತು ನೆನಪಿನಲ್ಲಿದ್ದರೆ ರಾಜಸೂಯಯಾಗದಲ್ಲಿ ವಿನಿಯೋಗಿಸಬಹುದಾದ ದಕ್ಷಿಣಾಧನವನ್ನು ಈಗ ಕೊಡು.

ಹರಿಶ್ಚಂದ್ರನು ಹೇಳಿದನು :—

೧೦. ಉಜ್ಜ್ವಲವಾದ ತಪಃಪ್ರಭಾವವುಳ್ಳ ಬ್ರಹ್ಮರ್ಷಿಯೇ! ಇಂದಿಗೆ ಒಂದು ಮಾಸವು ಪೂರ್ಣವಾಗುವುದು. ಇನ್ನೂ ಅರ್ಧದಿನವು ಬಾಕಿಯಾಗಿರುವುದು, ಅಷ್ಟುಮಾತ್ರ ಕಾಲವನ್ನು ನೀನು ನಿರೀಕ್ಷಿಸು. ಹೆಚ್ಚು ನಿರೀಕ್ಷಿಸಬೇಕಾಗಿಲ್ಲ.

ವಿಶ್ವಾಮಿತ್ರಮುನಿಯು ಹೇಳಿದನು :—

೧೧. ಮಹಾರಾಜನೆ! ಹಾಗೆ ಆಗಲಿ. ನಾನು ಮತ್ತೊಮ್ಮೆ ಬರುವೆನು. ಇಂದು ರಾಜಸೂಯದಕ್ಷಿಣೆಯನ್ನು ನನಗೆ ಕೊಡದಿದ್ದರೆ ನಾನು ಶಾಪವನ್ನು ಕೊಡುವೆನು.

ಪಕ್ಷಿಣ ಊಚುಃ :—

ಇತ್ಯುಕ್ತ್ವಾ ಪ್ರಯಯೌ ವಿಪ್ರೋ ರಾಜಾ ಚಾಚಿನ್ತಯತ್ತದಾ ।
ಕಥಮಸ್ಮೈ ಪ್ರದಾಸ್ಯಾಮಿ ದಕ್ಷಿಣಾ ಯಾ ಪ್ರತಿಶ್ರುತಾ ॥೧೨॥

ಕುತಃ ಪುಷ್ಟಾನಿ ಮಿತ್ರಾಣಿ ಕುತೋಽರ್ಥಃ ಸಾಮ್ಪ್ರತಂ ಮಮ ।
ಪ್ರತಿಗ್ರಹಃ ಪ್ರದುಷ್ಟೋ ಮೇ ನಾಹಂ ಯಾಯಾಮಧಃ ಕಥಮ್ ॥೧೩॥

ಕಿಮು ಪ್ರಾಣಾನ್ವಿಮುಞ್ಚಾಮಿ ಕಾಂ ದಿಶಂ ಯಾಮ್ಯಕಿಞ್ಚನಃ ।
ಯದಿ ನಾಶಂ ಗಮಿಷ್ಯಾಮಿ ಅಪ್ರದಾಯ ಪ್ರತಿಶ್ರುತಮ್ ॥೧೪॥

ಬ್ರಹ್ಮಸ್ವಹೃತ್ಕ್ರಿಮಿಃ ಪಾಪೋ ಭವಿಷ್ಯಾಮ್ಯಧಮಾಧಮಃ ।
ಅಥವಾ ಪ್ರೇಷ್ಯತಾಂ ಯಾಸ್ಯೇ ವರಮೇವಾತ್ಮವಿಕ್ರಯಃ ॥೧೫॥

ಪಕ್ಷಿಗಳು ಹೀಗೆಂದುವು :—

೧೨. ಹೀಗೆಂದು ಹೇಳಿ ವಿಶ್ವಾಮಿತ್ರನು ಹೊರಟುಹೋದನು. ಆಗ ರಾಜನು ಈ ರೀತಿಯಾಗಿ ಚಿಂತಿಸಿದನು. ಮುನಿಗೆ ಒಪ್ಪಿಕೊಂಡಿರುವ ದಕ್ಷಿಣಾ ದ್ರವ್ಯವನ್ನು ನಾನು ಹೇಗೆ ಕೊಡಲಿ.

೧೩. ನನಗೆ ಐಶ್ವರ್ಯವಂತರಾದ ಮಿತ್ರರು ಎಲ್ಲಿರುವರು? ನನ್ನಲ್ಲಿ ಈಗ ಐಶ್ವರ್ಯವೆಲ್ಲಿದೆ? ಮತ್ತೊಬ್ಬರಿಂದ ದಾನವನ್ನು ಸ್ವೀಕರಿಸುವುದು ನನಗೆ ಧರ್ಮವಲ್ಲ. ಹೀಗಿರಲು ಅಧೋಗತಿಗೆ ಹೋಗದಂತಾಗುವುದು ಹೇಗೆ?

೧೪. ಈ ಕಾರಣದಿಂದ ಪ್ರಾಣವನ್ನು ಕಳೆದುಕೊಳ್ಳಲೆ? ಕಡುದರಿದ್ರನಾದ ನಾನು ಯಾವ ದಿಕ್ಕಿಗೆ ಹೋಗಲಿ. ಅಂಗೀಕರಿಸಿದ್ದನ್ನು ಕೊಡದೆ ಮೃತ್ಯುವನ್ನು ಹೊಂದಿದರೆ ಅದು ಪಾತಕವಲ್ಲವೆ?

೧೫. ಒಪ್ಪಿಕೊಂಡಂತೆ ಬ್ರಹ್ಮಸ್ವವನ್ನು ಕೊಡದೆ ಇದ್ದರೆ ಪಾಪಿಯೂ ಅಧಮರಲ್ಲಿ ಅಧಮನೂ ಆದ ನಾನು ಕ್ರಿಮಿಯಾಗಿ ಹುಟ್ಟುವೆನು. ಅದಕ್ಕೆ ಬದಲು ಎಲ್ಲಾದರೂ ದಾಸ್ಯವನ್ನು ಮಾಡುವೆನು. ಆತ್ಮವಿಕ್ರಯವು ಉತ್ತಮವಾದುದು.

ಪಕ್ಷಿಣ ಊಚುಃ :—

ರಾಜಾನಂ ವ್ಯಾಕುಲಂ ದೀನಂ ಚಿನ್ತಯಾನಮಧೋಮುಖಮ್ ।
ಪ್ರತ್ಯುವಾಚ ತದಾ ಪತ್ನೀ ಬಾಷ್ಪಗದ್ಗದಯಾ ಗಿರಾ ॥೧೬॥

ತ್ಯಜ ಚಿನ್ತಾಂ ಮಹಾರಾಜ ಸ್ವಸತ್ಯಮನುಪಾಲಯ ।
ಶ್ಮಶಾನವದ್ವರ್ಜನೀಯೋ ನರಃ ಸತ್ಯಬಹಿಷ್ಕೃತಃ ॥೧೭॥

ನಾತಃ ಪರತರಂ ಧರ್ಮಂ ವದನ್ತಿ ಪುರುಷಸ್ಯ ತು ।
ಯಾದೃಶಂ ಪುರುಷವ್ಯಾಘ್ರ ಸ್ವಸತ್ಯಪರಿಪಾಲನಮ್ ॥೧೮॥

ಅಗ್ನಿಹೋತ್ರಮಧೀತಂ ವಾ ದಾನಾದ್ಯಾಶ್ಚಾಖಿಲಾಃ ಕ್ರಿಯಾಃ ।
ಭಜನ್ತೇ ತಸ್ಯ ವೈಫಲ್ಯಂ ಯಸ್ಯ ವಾಕ್ಯಮಕಾರಣಮ್ ॥೧೯॥

ಪಕ್ಷಿಗಳು ಈ ರೀತಿ ಹೇಳಿದುವು :—

೧೬. ರಾಜನು ಶೋಕದಿಂದ ವ್ಯಾಕುಲನೂ ದೀನನೂ ಮತ್ತು ಅಧೋಮುಖನೂ ಆಗಿ ಚಿಂತಿಸುತ್ತಿರಲು ಆಗ ಅವನ ಪತ್ನಿಯು ಕಣ್ಣೀರು-ಗದ್ಗದ ಧ್ವನಿಗಳಿಂದ ಕೂಡಿದ ಮಾತಿನಿಂದ ಹೀಗೆ ಮಾತನಾಡಿದಳು.

೧೭. ಮಹಾರಾಜನೆ! ಚಿಂತೆಯನ್ನು ದೂರಮಾಡು. ನಿನ್ನ ಸತ್ಯ ಧರ್ಮವನ್ನು ಪಾಲಿಸು. ಸತ್ಯದಿಂದ ಬಾಹ್ಯನಾದ ಮಾನವನು ಶ್ಮಶಾನಭೂಮಿಯಂತೆ ದೂರವರ್ಜ್ಯನಾಗುವನು.

೧೮. ಪುರುಷೋತ್ತಮನೆ! ಸತ್ಯವಚನವನ್ನು ಪಾಲಿಸುವುದು ಎಷ್ಟು ಮಹತ್ತರಧರ್ಮವೊ ಪುರುಷನಿಗೆ ಅದಕ್ಕಿಂತಲೂ ಬೇರೊಂದು ಉತ್ತಮ ಧರ್ಮವೇ ಇಲ್ಲವೆಂದು ಪ್ರಾಜ್ಞರು ನುಡಿಯುತ್ತಾರೆ.

೧೯. ಯಾವ ಮಾನವನ ವಚನವು ಅನೃತವಾಗುವುದೊ; ಅವನ ಅಗ್ನಿಹೋತ್ರ, ವೇದಾಧ್ಯಯನ, ದಾನವೇ ಮುಂತಾದ ಸಮಸ್ತ ಧರ್ಮಕಾರ್ಯ—ಇವೆಲ್ಲವೂ ವ್ಯರ್ಥವಾಗುವುವು.

ಸತ್ಯಮತ್ಯನ್ತಮುದಿತಂ ಧರ್ಮಶಾಸ್ತ್ರೇಷು ಧೀಮತಾಮ್ ।
ತಾರಣಾಯಾನೃತಂ ತದ್ವತ್ಪಾತನಾಯಾಕೃತಾತ್ಮನಾಮ್ ॥೨೦॥

ಸಪ್ತಾಶ್ವಮೇಧಾನಾಹೃತ್ಯ ರಾಜಸೂಯಂ ಚ ಪಾರ್ಥಿವಃ ।
ಕೃತಿರ್ನಾಮ ಚ್ಯುತಃ ಸ್ವರ್ಗಾದಸತ್ಯವಚನಾತ್ಸಕೃತ್ ॥೨೧॥

ರಾಜನ್ಜ್ಞಾತಮಪತ್ಯಂ ಮೇ ಇತ್ಯುಕ್ತ್ವಾ ಪ್ರರುರೋದ ಹ ।
ಬಾಷ್ಪಾಮ್ಬುಪ್ಲುತನೇತ್ರಾನ್ತಾಮುವಾಚೇದಂ ಮಹೀಪತಿಃ ॥೨೨॥

ಹರಿಶ್ಚನ್ದ್ರ ಉವಾಚ :—

ವಿಮುಞ್ಚ ಭದ್ರೇ ಸನ್ತಾಪಮಯಂ ತಿಷ್ಠತಿ ಬಾಲಕಃ ।
ಉಚ್ಯತಾಂ ವಕ್ತುಕಾಮಾಸಿ ಯದ್ವಾ ತ್ವಂ ಗಜಗಾಮಿನಿ ॥೨೩॥

---

೨೦. ಪ್ರಾಜ್ಞರಿಗೆ ಸಮ್ಮತವಾದ ಧರ್ಮಶಾಸ್ತ್ರಗಳಲ್ಲಿ ಸತ್ಯವಚನವು ದೊಡ್ಡ ಧರ್ಮವೆಂದು ಹೇಳಲ್ಪಟ್ಟಿದೆ. ಅನೃತವು ಪಾಪಿಗಳನ್ನು ಅಧೋಗತಿಗೆ ಒಯ್ಯುವಂತೆ ಸತ್ಯವು ಸದ್ಗತಿಯನ್ನು ಕೊಟ್ಟು ಉದ್ಧಾರಮಾಡುವುದು.

೨೧. ಕೃತಿ ಎಂದು ಪ್ರಸಿದ್ಧನಾದ ಒಬ್ಬ ರಾಜನು ಏಳು ಅಶ್ವಮೇಧ ಯಾಗಗಳನ್ನೂ ಮತ್ತು ರಾಜಸೂಯಯಾಗವನ್ನೂ ಮಾಡಿ ಒಂದು ಸಲಮಾತ್ರ ಸುಳ್ಳನ್ನು ಆಡಿದ್ದರಿಂದ ಸ್ವರ್ಗದಿಂದ ಚ್ಯುತನಾದನು.

೨೨. ರಾಜನೆ! ನಿನಗೆ ನನ್ನಲ್ಲಿ ಸಂತತಿಯಾಗಿರುವುದು—ಹೀಗೆಂದು ಹೇಳಿ ಮುಂದಿನ ಮಾತನ್ನು ಆಡಲಾರದೆ ಸುಮ್ಮನೆ ಅತ್ತಳು. ಆಗ ರಾಜನು ಕಣ್ಣೀರಿನಿಂದ ಪೂರ್ಣವಾದ ಕಣ್ಣುಗಳುಳ್ಳ ಪತ್ನಿಯನ್ನು ಕುರಿತು ಹೀಗೆ ಹೇಳಿದನು.

ಹರಿಶ್ಚಂದ್ರನು ಹೇಳಿದನು :—

೨೩. ಮದ್ದಾನೆಯಂತೆ ಗಂಭೀರಗತಿಯುಳ್ಳ, ಮಂಗಳಶೀಲಳಾದ ಪ್ರಿಯೆಯೆ! ಸಂತಾಪವನ್ನು ಬಿಡು. ಮುಂದೆ ಈ ಬಾಲಕನು ಇದ್ದಾನೆ. ನಿಜ. ನೀನು ಏನು ಹೇಳಬೇಕೆಂದು ಇರುವೆಯೊ ಅದನ್ನು ಹೇಳು.

ಪತ್ನ್ಯುವಾಚ :—

ರಾಜನ್ ಜಾತಮಪತ್ಯಂ ಮೇ ಸತಾಂ ಪುತ್ರಫಲಾಃ ಸ್ತ್ರಿಯಃ ।
ಸ ಮಾಂ ಪ್ರದಾಯ ವಿತ್ತೇನ ದೇಹಿ ವಿಪ್ರಾಯ ದಕ್ಷಿಣಾಮ್ ॥೨೪॥

ಪಕ್ಷಿಣ ಊಚುಃ :—

ಏತದ್ವಾಕ್ಯಮುಪಶ್ರುತ್ಯ ಯಯೌ ಮೋಹಂ ಮಹೀಪತಿಃ ।
ಪ್ರತಿಲಭ್ಯ ಚ ಸಂಜ್ಞಾಂ ಸ ವಿಲಲಾಪಾತಿದುಃಖಿತಃ ॥೨೫॥

ಮಹದ್ದುಃಖಮಿದಂ ಭದ್ರೇ ಯತ್ತ್ವಮೇವಂ ಬ್ರವೀಷಿ ಮಾಮ್ ।
ಕಿಂ ತವ ಸ್ಮಿತಸಂಲಾಪಾ ಮಮ ಪಾಪಸ್ಯ ವಿಸ್ಮೃತಾಃ ॥೨೬॥

ಹಾ ಹಾ ಕಥಂ ತ್ವಯಾ ಶಕ್ಯಂ ವಕ್ತುಮೇತಚ್ಛುಚಿಸ್ಮಿತೇ ।
ದುರ್ವಾಚ್ಯಮೇತದ್ವಚನಂ ಕರ್ತುಂ ಶಕ್ನೋಮ್ಯಹಂ ಕಥಮ್ ॥೨೭॥

ರಾಜಪತ್ನಿಯು ಹೇಳಿದಳು :—

೨೪. ರಾಜನೆ! ನನಗೆ ಸಂತತಿಯಾಗಿರುವುದು. ಸಾಧುಗಳಿಗೆ ಪತ್ನಿಯರು ಸಂತತಿಫಲಸಾಧನೆಗಾಗಿ ಇರುವರು. ಆದ್ದರಿಂದ ನೀನು ನನ್ನನ್ನು ವಿಕ್ರಯಿಸಿ ಆ ಧನದಿಂದ ವಿಪ್ರನಿಗೆ ದಕ್ಷಿಣೆಯನ್ನು ಕೊಡು.

ಪಕ್ಷಿಗಳು ಹೇಳಿದುವು :—

೨೫. ಈ ಮಾತನ್ನು ಕೇಳಿ ಹರಿಶ್ಚಂದ್ರರಾಜನು ಮೂರ್ಛೆಯನ್ನು ಹೊಂದಿದನು. ಸ್ವಲ್ಪಹೊತ್ತಿನಲ್ಲಿ ಎಚ್ಚರವನ್ನು ಹೊಂದಿ ಬಹಳ ದುಃಖಗೊಂಡವನಾಗಿ ವಿಲಪಿಸಿದನು.

೨೬. ಕಲ್ಯಾಣಶೀಲಳೆ! ನೀನು ನನಗೆ ಹೀಗೆ ಹೇಳುತ್ತಿರುವುದು ಸಹಿಸಲಾಗದ ದುಃಖವನ್ನು ಉಂಟುಮಾಡುತ್ತಿದೆ. ಪಾಪಿಯಾದ ನಾನು ಹಿಂದೆ ಎಷ್ಟೋಸಲ ನಿನ್ನ ನಗುಮುಖದ ಸಲ್ಲಾಪಗಳನ್ನು ಕೇಳಿ ಅದನ್ನು ಮರೆತೆನೆಂದು ಭಾವಿಸಿದ್ದೀಯಾ?

೨೭. ಶುದ್ಧವಾದ ಮಂದಹಾಸವುಳ್ಳವಳೆ! ಅಯ್ಯೋ! ಇಂತಹ ಕಠಿನವಾದ ಮಾತನ್ನು ಹೇಳಲು ನೀನು ಹೇಗೆ ಶಕ್ತಳಾದೆ! ಬಾಯಿಯಿಂದ ಹೇಳಲಾಗದ ಈ ಮಾತನ್ನು ನಡೆಸಲು ನಾನು ಹೇಗೆ ಶಕ್ತನಾದೇನು?

ಇತ್ಯುಕ್ತ್ವಾ ಸ ನರಶ್ರೇಷ್ಠೋ ಧಿಗ್ಧಿಗಿತ್ಯಸಕೃದ್ಬ್ರುವನ್ ।
ನಿಪಪಾತ ಮಹೀಪೃಷ್ಠೇ ಮೂರ್ಛಯಾಭಿಪರಿಪ್ಲುತಃ ॥೨೮॥

ಶಯಾನಂ ಭುವಿ ತಂ ದೃಷ್ಟ್ವಾ ಹರಿಶ್ಚನ್ದ್ರಂ ಮಹೀಪತಿಮ್ ।
ಉವಾಚೇದಂ ಸಕರುಣಂ ರಾಜಪತ್ನೀ ಸುದುಃಖಿತಾ ॥೨೯॥

ಪತ್ನ್ಯುವಾಚ :—

ಹಾ ಮಹಾರಾಜ ಕಸ್ಯೇದಮುಪಧ್ಯಾನಮುಪಸ್ಥಿತಮ್ ।
ಯತ್ತ್ವಂ ನಿಪತಿತೋ ಭೂಮೌ ರಾಙ್ಕವಾಸ್ತರಣೋಚಿತಃ ॥೩೦॥

ಯೇನ ಕೋಟ್ಯಗ್ರಶೋ ವಿತ್ತಂ ವಿಪ್ರಾಣಾಮುಪವರ್ಜಿತಮ್ ।
ಸ ಏಷ ಪೃಥಿವೀನಾಥೋ ಭೂಮೌ ಸ್ವಪಿತಿ ಮೇ ಪತಿಃ ॥೩೧॥

---

೨೮. ಹೀಗೆಂದು ಹೇಳಿ ಆ ರಾಜನು ಮತ್ತೆ ಮತ್ತೆ ಧಿಕ್ಕಾರ! ಧಿಕ್ಕಾರ! ವೆಂದು ಹೇಳಿಕೊಳ್ಳುತ್ತ ಮೂರ್ಛೆಯಿಂದ ಆವರಿಸಲ್ಪಟ್ಟವನಾಗಿ ನೆಲದ ಮೇಲೆ ಬಿದ್ದನು.

೨೯. ನೆಲದಲ್ಲಿ ಬಿದ್ದ, ಹಿಂದೆ ರಾಜನಾಗಿದ್ದು ರಾಜ್ಯಭ್ರಷ್ಟನಾದ ಹರಿಶ್ಚಂದ್ರರಾಜನನ್ನು ನೋಡಿ ಬಹಳ ದುಃಖಗೊಂಡ ರಾಜಪತ್ನಿಯು ಶೋಕವು ಉಕ್ಕಿ ಬರುವಂತೆ ಹೇಳಿದಳು.

ರಾಜಪತ್ನಿಯು ಹೀಗೆಂದಳು :—

೩೦. ಅಯ್ಯೋ! ಮಹಾರಾಜನೆ! ಯಾರ ಕೆಟ್ಟ ಸಂಕಲ್ಪವು ನಿನ್ನಲ್ಲಿ ಈ ರೀತಿಯಾಗಿ ಪರಿಣಮಿಸಿತು? ಅಮೂಲ್ಯವಾದ ಶಾಲು, ರತ್ನಗಂಬಳಿಗಳ ಶಯನದ ಭೋಗಕ್ಕೆ ಯೋಗ್ಯನಾದ ನೀನು ನೆಲದಲ್ಲಿ ಬಿದ್ದಿರುವೆ.

೩೧. ಯಾವ ರಾಜನಿಂದ ಕೋಟಿಸಂಖ್ಯೆಗಿಂತಲೂ ಹೆಚ್ಚು ಹಣದ ರಾಶಿಯು ವಿಪ್ರರ ಕೈಗಳಲ್ಲಿ ಅರ್ಪಿಸಲ್ಪಡುತ್ತಿತ್ತೋ ಅಂತಹ ನನ್ನ ಪತಿಯಾದ ಈ ರಾಜನು ನೆಲದಲ್ಲಿ ಮಲಗಿರುವನು.

ಹಾ ಕಷ್ಟಂ ಕಿಂ ತವಾನೇನ ಕೃತಂ ದೇವ ಮಹೀಕ್ಷಿತಾ।
ಯದಿನ್ದ್ರೋಪೇನ್ದ್ರತುಲ್ಯೋಽಯಂ ನೀತಃ ಪಾಪಾಮಿಮಾಂ
ದಶಾಮ್ ॥೩೨॥

ಇತ್ಯುಕ್ತ್ವಾ ಸಾಪಿ ಸುಶ್ರೋಣೀ ಮೂರ್ಛಿತಾ ನಿಪಪಾತ ಹ ।
ಭರ್ತೃದುಃಖಮಹಾಭಾರೇಣಾಸಹ್ಯೇನ ನಿಪೀಡಿತಾ ॥೩೩॥

ತೌ ತಥಾ ಪತಿತೌ ಭೂಮಾವನಾಥೌ ಪಿತರೌ ಶಿಶುಃ।
ದೃಷ್ಟ್ವಾತ್ಯನ್ತಕ್ಷುಧಾವಿಷ್ಟಃ ಪ್ರಾಹ ವಾಕ್ಯಂ ಸುದುಃಖಿತಃ ॥೩೪॥

ತಾತ ತಾತ ದದಸ್ವಾನ್ನಮಮ್ಬಾಮ್ಬ ದದ ಭೋಜನಮ್ ।
ಕ್ಷುನ್ಮೇ ಬಲವತೀ ಜಾತಾ ಜಿಹ್ವಾಗ್ರಂ ಶುಷ್ಯತೇ ತಥಾ ॥೩೫॥

---

೩೨. ಅಯ್ಯೋ! ಕಷ್ಟವು! ವಿಧಿಯೆ! ಈ ರಾಜನಿಂದ ಏನು ತಪ್ಪು ಮಾಡಲ್ಪಟ್ಟಿತು? ಇಂದ್ರ-ಉಪೇಂದ್ರರಿಗೆ ತುಲ್ಯನಾದ ಈ ರಾಜನು ಇಂತಹ ಕಷ್ಟದಶೆಗೆ ಏಕೆ ಗುರಿಮಾಡಲ್ಪಟ್ಟನು?

೩೩. ಹೀಗೆಂದು ಹೇಳಿ ಸುಂದರಾಂಗಿಯಾದ ರಾಜಪತ್ನಿಯೂ ಸಹಿಸಲಾಗದ ಪತಿಯ ದುಃಖಮಹಾರಾಶಿಯಿಂದ ಪೀಡಿಸಲ್ಪಟ್ಟು ಮೂರ್ಛೆಹೊಂದಿ ಬಿದ್ದಳು.

೩೪. ದಿಕ್ಕಿಲ್ಲದಂತಾಗಿ ಆ ತಂದೆ-ತಾಯಿಗಳು ಹಾಗೆ ನೆಲದಲ್ಲಿ ಬಿದ್ದಿರುವುದನ್ನು ಕಂಡು ಸಮೀಪದಲ್ಲಿದ್ದ ಬಾಲಕನು ಹೆಚ್ಚಾದ ಹಸಿವಿನಿಂದ ಹೀಗೆ ಹೇಳಿದನು.

೩೫. ತಂದೆ! ತಂದೆ! ನನಗೆ ಅನ್ನವನ್ನು ಕೊಡು. ತಾಯಿ! ತಾಯಿ! ಊಟಕ್ಕೆ ಬಡಿಸು. ನನಗೆ ತಡೆಯಲಾರದ ಹಸಿವು ಉಂಟಾಗಿದೆ. ಹಸಿವಿನಿಂದ ನಾಲಿಗೆಯ ತುದಿಯು ಬತ್ತಿಹೋಗುತ್ತಿದೆ.

ಪಕ್ಷಿಣ ಊಚುಃ :—

ಏತಸ್ಮಿನ್ನನ್ತರೇ ಪ್ರಾಪ್ತೋ ವಿಶ್ವಾಮಿತ್ರೋ ಮಹಾತಪಾಃ ।
ಕಾಲಕಲ್ಪ ಇವ ಕ್ರುದ್ಧೋ ಧನಂ ಸಂಮಾರ್ಗಿತುಂ ತದಾ ॥೩೬॥

ದೃಷ್ಟ್ವಾ ತು ತಂ ಹರಿಶ್ಚನ್ದ್ರಃ ಪತಿತೋ ಭುವಿ ಮೂರ್ಛಿತಃ ।
ಸ ವಾರಿಣಾ ಸಮಭ್ಯುಕ್ಷ್ಯ ರಾಜಾನಮಿದಮಬ್ರವೀತ್ ॥೩೭॥

ಉತ್ತಿಷ್ಠೋತ್ತಿಷ್ಠ ರಾಜೇನ್ದ್ರ ತಾಂ ದದಸ್ವೇಷ್ಟದಕ್ಷಿಣಾಮ್ ।
ಋಣಂ ಧಾರಯತೋ ದುಃಖಮಹನ್ಯಹನಿ ವರ್ಧತೇ ॥೩೮॥

ಆಪ್ಯಾಯಮಾನಃ ಸ ತದಾ ಹಿಮಶೀತೇನ ವಾರಿಣಾ ।
ಅವಾಪ್ಯ ಚೇತನಾಂ ರಾಜಾ ವಿಶ್ವಾಮಿತ್ರಮವೇಕ್ಷ್ಯ ಚ ॥೩೯॥

ಪಕ್ಷಿಗಳು ನುಡಿದುವು :—

೩೬. ಈ ಸಮಯದಲ್ಲಿ ಮಹಾತಪಸ್ವಿಯಾದ ವಿಶ್ವಾಮಿತ್ರಮುನಿಯು ಮೃತ್ಯುವಿನಂತೆ ಕೋಪಗೊಂಡವನಾಗಿ ಆಗಲೇ ಧನವನ್ನು ಕೇಳುವುದಕ್ಕಾಗಿ ಅಲ್ಲಿಗೆ ಬಂದನು.

೩೭. ಮುನಿಯು ನೆಲದಲ್ಲಿ ಮೂರ್ಛಿತನಾಗಿ ಬಿದ್ದಿದ್ದ ಹರಿಶ್ಚಂದ್ರರಾಜನನ್ನು ಕಂಡು ತಣ್ಣೀರಿನಿಂದ ಪ್ರೋಕ್ಷಣಮಾಡಿ ಶೈತ್ಯೋಪಚಾರವನ್ನು ಮಾಡಿ ಮತ್ತೆ ರಾಜನಿಗೆ ಇಂತೆಂದನು.

೩೮. ರಾಜೇಂದ್ರನೆ! ಮೇಲಕ್ಕೆ ಏಳು, ಏಳು. ಕೊಡಬೇಕಾಗಿದ್ದ ದಕ್ಷಿಣಾದ್ರವ್ಯವನ್ನು ಈಗ ಕೊಡು. ಋಣವನ್ನು ಹೊತ್ತ ಮಾನವನಿಗೆ ದುಃಖವು ದಿನದಿನಕ್ಕೂ ಹೆಚ್ಚು ಬೆಳೆಯುವುದು.

೩೯. ಆಗ ಮಂಜಿನಂತೆ ತಣ್ಣಗಿರುವ ನೀರಿನಿಂದ ಉಪಚರಿಸಲ್ಪಟ್ಟ ಆ ಹರಿಶ್ಚಂದ್ರರಾಜನು ಎಚ್ಚರವನ್ನು ಹೊಂದಿ ವಿಶ್ವಾಮಿತ್ರಮಹರ್ಷಿಯನ್ನು ನೋಡಿದನು.

ಪುನರ್ಮೋಹಂ ಸಮಾಪೇದೇ ಸ ಚ ಕ್ರೋಧಂ ಯಯೌ ಮುನಿಃ ॥೪೦॥

ಸ ಸಮಾಶ್ವಾಸ್ಯ ರಾಜಾನಂ ವಾಕ್ಯಮಾಹ ದ್ವಿಜೋತ್ತಮಃ ।
ದೀಯತಾಂ ದಕ್ಷಿಣಾ ಸಾ ಮೇ ಯದಿ ಧರ್ಮಮವೇಕ್ಷಸೇ ॥೪೧॥

ಸತ್ಯೇನಾರ್ಕಃ ಪ್ರತಪತಿ ಸತ್ಯೇ ತಿಷ್ಠತಿ ಮೇದಿನೀ ।
ಸತ್ಯಂ ಚೋಕ್ತಂ ಪರೋ ಧರ್ಮಃ ಸ್ವರ್ಗಃ ಸತ್ಯೇ ಪ್ರತಿಷ್ಠಿತಃ ॥೪೨॥

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ ॥೪೩॥

ಅಥವಾ ಕಿಂ ಮಮೈತೇನ ಸಾಮ್ನಾ ಪ್ರೋಕ್ತೇನ ಕಾರಣಮ್ ।
ಅನಾರ್ಯೇ ಪಾಪಸಂಕಲ್ಪೇ ಕ್ರೂರೇ ಚಾನೃತವಾದಿನಿ ॥೪೪॥

---

೪೦. ಮೂರ್ಛೆಯಿಂದ ಎಚ್ಚೆತ್ತ ರಾಜನು ವಿಶ್ವಾಮಿತ್ರಮುನಿಯನ್ನು ಎದುರು ನೋಡಿದ ಕೂಡಲೆ ಮತ್ತೆ ಮೂರ್ಛಿತನಾದನು. ಆ ಮುನಿಯಾದರೊ ಕೋಪತಾಳಿದನು.

೪೧. ಆ ವಿಪ್ರೋತ್ತಮನು ರಾಜನನ್ನು ಸಮಾಧಾನವಾಗಿ ಎಚ್ಚರಗೊಳಿಸಿ ಈ ಮಾತನ್ನು ಆಡಿದನು. ರಾಜನೆ! ಧರ್ಮವನ್ನು ಗಮನಿಸುವುದಾದರೆ ನೀನು ಆ ದಕ್ಷಿಣೆಯನ್ನು ನನಗೆ ಕೊಡು.

೪೨. ಸೂರ್ಯನು ಸತ್ಯಬಲದಿಂದ ತಪಿಸುತ್ತಿರುವನು; ಭೂಮಿಯು ಸತ್ಯಾಧಾರದಲ್ಲಿ ಅಚಲವಾಗಿ ನಿಂತಿದೆ. ಸತ್ಯವಚನವು ಸರ್ವೋತ್ತಮವಾದ ಧರ್ಮವು. ಮತ್ತು ಸ್ವರ್ಗವು ಸತ್ಯಧರ್ಮದಲ್ಲಿ ನೆಲೆಸಿರುವುದು.

೪೩. ಸಹಸ್ರಾರು ಅಶ್ವಮೇಧಯಾಗಗಳನ್ನೂ ಸತ್ಯಧರ್ಮವನ್ನೂ ತಕ್ಕಡಿಯಲ್ಲಿಟ್ಟು ಜೊತೆಯಲ್ಲಿ ತೂಗಿ ನೋಡಿದರೆ ಸಹಸ್ರ ಅಶ್ವಮೇಧಯಾಗಗಳಿಗಿಂತಲೂ ಸತ್ಯವೇ ಹೆಚ್ಚಿನ ಧರ್ಮವಾಗುವುದು.

೪೪. ಅಥವಾ ಅನಾರ್ಯನೂ, ಪಾಪಸಂಕಲ್ಪವುಳ್ಳವನೂ, ಕ್ರೂರಸ್ವಭಾವದವನೂ ಮತ್ತು ಸುಳ್ಳನ್ನು ಹೇಳುವವನೂ ಆದ ನಿನ್ನಲ್ಲಿ ಸಮಾಧಾನದ ಮಾತುಗಳನ್ನು ಆಡುವುದರಿಂದ ನನಗೆ ಲಭಿಸುವ ಪ್ರಯೋಜನವೇನಿದೆ ?

ತ್ವಯಿ ರಾಜ್ಞಿ ಪ್ರಭವತಿ ಸದ್ಭಾವಃ ಶ್ರೂಯತಾಮಯಮ್ ||೪೫||

ಅದ್ಯ ಮೇ ದಕ್ಷಿಣಾಂ ರಾಜನ್ನ ದಾಸ್ಯತಿ ಭವಾನ್ ಯದಿ ।
ಅಸ್ತಾಚಲಂ ಪ್ರಯಾತೇಽರ್ಕೇ ಶಪ್ಸ್ಯಾಮಿ ತ್ವಾಂ ತತೋ ಧ್ರುವಮ್ ||೪೬||

ಇತ್ಯುಕ್ತ್ವಾ ಸ ಯಯೌ ವಿಪ್ರೋ ರಾಜಾ ಚಾಸೀದ್ಭಯಾತುರಃ ।
ಕಾನ್ದಿಗ್ಭೂತೋಽಧನೋ ನಿಃಸ್ವೋ ನೃಶಂಸಧನಿನಾರ್ದಿತಃ ||೪೭||

ಭಾರ್ಯಾಸ್ಯ ಭೂಯಃ ಪ್ರಾಹೇದಂ ಕ್ರಿಯತಾಂ ವಚನಂ ಮಮ ।
ಮಾ ಶಾಪಾನಲನಿರ್ದಗ್ಧಃ ಪಞ್ಚತ್ವಮುಪಯಾಸ್ಯಸಿ ||೪೮||

ಸ ತಯಾ ಚೋದ್ಯಮಾನಸ್ತು ರಾಜಾ ಪತ್ನ್ಯಾ ಪುನಃ ಪುನಃ ।
ಪ್ರಾಹ ಭದ್ರೇ ಕರೋಮ್ಯೇಷ ವಿಕ್ರಯಂ ತವ ನಿರ್ಘೃಣಃ ||೪೯||

---

೪೫. ಸರ್ವಶಕ್ತನೂ ರಾಜನೂ ಆದ ನಿನ್ನಲ್ಲಿ ನಾನು ಆಡುವ ಸೌಜನ್ಯದ ಮಾತನ್ನು ಕೇಳು. ರಾಜನೆ! ಇಂದು ಇನ್ನೊಮ್ಮೆಯಾದರೂ ನನಗೆ ದಕ್ಷಿಣೆಯನ್ನು ಕೊಡಲೇಬೇಕು.

೪೬. ಹಾಗೆ ನೀನು ದಕ್ಷಿಣೆಯನ್ನು ಕೊಡದೆ ಸೂರ್ಯನು ಅಸ್ತಮಯವನ್ನು ಹೊಂದುವಂತೆ ಆದರೆ ಆಗ ನಿನ್ನನ್ನು ತಪ್ಪದೆ ಶಪಿಸುವೆನು. ಹೀಗೆಂದು ಹೇಳಿ ಆ ಮುನಿಯು ಹೊರಟನು. ರಾಜನು ಅತ್ಯಂತ ಭಯಗ್ರಸ್ತನಾದನು.

೪೭. ಧಾನ್ಯ-ಧನ-ಕನಕ ಮೊದಲಾದ ಸಮಸ್ತ ಸ್ವತ್ತನ್ನೂ ಕಳೆದುಕೊಂಡು ದರಿದ್ರನಾದ ರಾಜನು ಕ್ರೂರನಂತೆ ವರ್ತಿಸುವ ಮುನಿಯಿಂದ ಪೀಡಿಸಲ್ಪಟ್ಟು ದಿಕ್ಕುತೋಚದ ಅನಾಥನಾದನು.

೪೮. ಅವನ ಪತ್ನಿಯು ಮತ್ತೆ ಈ ಮಾತನ್ನು ಹೇಳಿದಳು. ನಾನು ಹೇಳಿದಂತೆ ಮಾಡು. ಮುನಿಯ ಶಾಪಾಗ್ನಿಯಿಂದ ಭಸ್ಮವಾಗಿ ಮೃತ್ಯುವಿನ ಪಾಲಾಗಬೇಡ. ನನ್ನನ್ನು ವಿಕ್ರಯಿಸು.

೪೯. ಆ ಧರ್ಮಪತ್ನಿಯಿಂದ ಮತ್ತೆ ಮತ್ತೆ ಪ್ರೇರೇಪಿಸಲ್ಪಟ್ಟ ರಾಜನು ಪ್ರತ್ಯುತ್ತರ ಹೇಳಿದನು. ಕಲ್ಯಾಣಶೀಲಳೆ! ನಿಷ್ಕರುಣನಾದ ಈ ನಾನು ನಿನ್ನ ವಿಕ್ರಯವನ್ನು ಮಾಡಲು ಸಿದ್ಧನಾದೆ.

ನೃಶಂಸೈರಪಿ ಯತ್ಕರ್ತುಂ ನ ಶಕ್ಯಂ ತತ್ಕರೋಮ್ಯಹಮ್ ।
ಯದಿ ಮೇ ಶಕ್ಯತೇ ವಾಣೀ ವಕ್ತುಮೀದೃಕ್ಸುದುರ್ವಚಃ ॥೫೦॥

ಏವಮುಕ್ತ್ವಾ ತತೋ ಭಾರ್ಯಾಂ ಗತ್ವಾ ನಗರಮಾತುರಃ ।
ಬಾಷ್ಪಾಪಿಹಿತಕಣ್ಠಾಕ್ಷಸ್ತತೋ ವಚನಮಬ್ರವೀತ್ ॥೫೧॥

ರಾಜೋವಾಚ :—

ಭೋ ಭೋ ನಾಗರಿಕಾಃ ಸರ್ವೇ ಶೃಣುಧ್ವಂ ವಚನಂ ಮಮ ।
ಕಿಂ ಮಾಂ ಪೃಚ್ಛಥ ಕಸ್ತ್ವಂ ಭೋ ನೃಶಂಸೋಽಹಮಮಾನುಷಃ ॥೫೨॥

ರಾಕ್ಷಸೋ ವಾತಿಕಠಿನಃ ತತಃ ಪಾಪತರೋಽಪಿ ವಾ ।
ವಿಕ್ರೇತುಂ ದಯಿತಾಂ ಪ್ರಾಪ್ತೋ ಯೋ ನ ಪ್ರಾಣಾಂಸ್ತ್ಯಜಾಮ್ಯ-
ಹಮ್ ॥೫೩॥

---

೫೦. ಅಂತಹ ಕಠಿನವಾದ ಮಾತನ್ನು ಆಡಲು ನನ್ನ ವಾಗಿಂದ್ರಿಯವು ಶಕ್ತವಾದರೆ ಕಟುಕಜನರಿಂದಲೂ ಮಾಡಲಾಗದ ಪತ್ನೀವಿಕ್ರಯವನ್ನು ನಾನು ಮಾಡುವೆನು.

೫೧. ರಾಜನು ಪತ್ನಿಗೆ ಈ ರೀತಿಯಾಗಿ ಹೇಳಿ ಬಹು ದುಃಖಿತನಾಗಿ ನಗರಕ್ಕೆ ಹೋಗಿ ತರುವಾಯ ಗದ್ಗದ ಧ್ವನಿಯ ಕಂಠ, ಕಣ್ಣೀರು ತುಂಬಿದ ಕಣ್ಣುಗಳುಳ್ಳವನಾಗಿ ಹೀಗೆ ಹೇಳಿದನು.

ರಾಜನು ಹೀಗೆಂದನು :—

೫೨. ಎಲೊ! ನಾಗರಿಕರೆ! ನೀವು ಎಲ್ಲರೂ ನನ್ನ ಮಾತನ್ನು ಕೇಳಿರಿ. ನೀನು ಯಾರೆಂದು ನನ್ನನ್ನು ಪ್ರಶ್ನಿಸುವಿರಾ? ಹೇಳುವೆನು. ನಾನೊಬ್ಬ ಅಮಾನುಷನಾದ ಕ್ರೂರವ್ಯಕ್ತಿಯು.

೫೩. ಅತಿ ಕಠಿನನಾದ ರಾಕ್ಷಸನೊ; ಅಥವಾ ಅದಕ್ಕಿಂತಲೂ ಮಹಾ ಪಾಪಿಯೊ ಆಗಿರುವೆನು. ನಾನು ನನ್ನ ಪ್ರಾಣಗಳನ್ನು ಬಿಡಲಾರದೆ ಪ್ರಿಯೆಯನ್ನು ವಿಕ್ರಯಿಸಲು ಬಂದಿರುವೆನು.

ಯದಿ ವಃ ಕಸ್ಯ ಚಿತ್ಕಾರ್ಯಂ ದಾಸ್ಯಾ ಪ್ರಾಣೇಷ್ಟಯಾ ಮಮ ।
ಸ ಬ್ರವೀತು ತ್ವರಾಯುಕ್ತೋ ಯಾವತ್ಸನ್ಧಾರಯಾಮ್ಯಹಮ್ ॥೫೪॥

ಪಕ್ಷಿಣ ಊಚುಃ :—

ಅಥ ವೃದ್ಧೋ ದ್ವಿಜಃ ಕಶ್ಚಿದಾಗತ್ಯಾಹ ನರಾಧಿಪಮ್ ।
ಸಮರ್ಪಯಸ್ವ ಮೇ ದಾಸೀಮಹಂ ಕ್ರೇತಾ ಧನಪ್ರದಃ ॥೫೫॥

ಅಸ್ತಿ ಮೇ ವಿತ್ತಮುಸ್ತೋಕಂ ಸುಕುಮಾರೀ ಚ ಮೇ ಪ್ರಿಯಾ ।
ಗೃಹಕರ್ಮ ನ ಶಕ್ನೋತಿ ಕರ್ತುಮಸ್ಮಾತ್ಪ್ರಯಚ್ಛ ಮೇ ॥೫೬॥

ಕರ್ಮಣ್ಯತಾ-ವಯೋ-ರೂಪ-ಶೀಲಾನಾಂ ತವ ಯೋಷಿತಃ ।
ಅನುರೂಪಮಿದಂ ವಿತ್ತಂ ಗೃಹಾಣಾರ್ಪಯ ಮೇಽಬಲಾಮ್ ॥೫೭॥

---

೫೪. ನನ್ನ ಪ್ರಾಣಪ್ರಿಯೆಯು ದಾಸಿಯಾಗಿರುವುದರಿಂದ ಯಾರಿಗಾದರೂ ಪ್ರಯೋಜನವಿರುವುದಾದರೆ ಅಂತಹವರು ಬೇಗ ಬಂದು ನಾನು ಪ್ರಾಣಗಳನ್ನು ಧರಿಸಿಕೊಂಡಿರುವುದರೊಳಗಾಗಿ ಹೇಳಲಿ.

ಪಕ್ಷಿಗಳು ಮುಂದುವರಿಸಿ ಹೇಳಿದುವು :—

೫೫. ಅಷ್ಟರಲ್ಲಿ ಯಾವನೊ ಒಬ್ಬ ವೃದ್ಧ ಬ್ರಾಹ್ಮಣನು ಬಂದು ರಾಜನಿಗೆ ಹೇಳಿದನು. ನಾನು ಹಣವನ್ನು ಕೊಟ್ಟು ನಿನ್ನಿಂದ ದಾಸಿಯನ್ನು ಕೊಂಡುಕೊಳ್ಳುವೆನು. ನನಗೆ ದಾಸಿಯನ್ನು ಅರ್ಪಿಸು.

೫೬. ನನ್ನಲ್ಲಿ ಅಪಾರವಾದ ಐಶ್ವರ್ಯವುಂಟು. ನನ್ನ ಪ್ರಿಯೆಯು ಅತಿ ಕೋಮಲಾಂಗಿಯಾಗಿರುವಳು. ಅವಳು ಮನೆಯ ಕೆಲಸಗಳನ್ನು ಮಾಡಲು ಅಶಕ್ತಳಾಗಿರುವಳು. ಆದ್ದರಿಂದ ಈ ದಾಸಿಯನ್ನು ನನಗೆ ಕೊಡು.

೫೭. ನಿನ್ನ ಪ್ರಿಯೆಯು ದಾಸಿಯಾಗಿರಲು ಇವಳಲ್ಲಿರುವ ಕೆಲಸಮಾಡುವ ಶಕ್ತಿ, ವಯಸ್ಸು, ರೂಪ ಮತ್ತು ಶೀಲ—ಈ ಗುಣಗಳಿಗೆ ಇಷ್ಟು ಹಣವು ಸರಿಯಾದ ಮೂಲ್ಯವು ; ಇದನ್ನು ತೆಗೆದುಕೊ. ಈ ಅಬಲೆಯನ್ನು ನನಗೆ ಕೊಡು.

ಏವಮುಕ್ತಸ್ಯ ವಿಪ್ರೇಣ ಹರಿಶ್ಚನ್ದ್ರಸ್ಯ ಭೂಪತೇಃ।
ವ್ಯದೀರ್ಯತ ಮನೋ ದುಃಖಾನ್ನ ಚೈನಂ ಕಿಂಚಿದಬ್ರವೀತ್ ॥೫೮॥

ತತಃ ಸ ವಿಪ್ರೋ ನೃಪತೇರ್ವಲ್ಕಲಾನ್ತೇ ದೃಢಂ ಧನಮ್ ।
ಬಧ್ವಾ ಕೇಶೇಷ್ವಥಾದಾಯ ನೃಪಪತ್ನೀಮಕರ್ಷಯತ್ ॥೫೯॥

ರುರೋದ ರೋಹಿತಾಸ್ಯೋಽಪಿ ದೃಷ್ಟ್ವಾ ಕೃಷ್ಟಾಂ ತು ಮಾತರಮ್।
ಹಸ್ತೇನ ವಸ್ತ್ರಮಾಕರ್ಷನ್ ಕಾಕಪಕ್ಷಧರಃ ಶಿಶುಃ ॥೬೦॥

ಮುಞ್ಚಾರ್ಯ ಮುಞ್ಚ ತಾವನ್ಮಾಂ ಯಾವತ್ಪಶ್ಯಾಮ್ಯಹಂ ಶಿಶುಮ್।
ದುರ್ಲಭಂ ದರ್ಶನಂ ತಾತ ಪುನರಸ್ಯ ಭವಿಷ್ಯತಿ ॥೬೧॥

ಪಶ್ಯೈಹಿ ವತ್ಸ ಮಾಮೇವಂ ಮಾತರಂ ದಾಸ್ಯತಾಂ ಗತಾಮ್ ।
ಮಾಂ ಮಾ ಸ್ಪ್ರಾಕ್ಷೀ ರಾಜಪುತ್ರ ಅಸ್ಪೃಶ್ಯಾಹಂ ತವಾಧುನಾ ॥೬೨॥

---

೫೮. ವಿಪ್ರನಿಂದ ಹೀಗೆಂದು ಹೇಳಲ್ಪಟ್ಟ ಹರಿಶ್ಚಂದ್ರರಾಜನ ಹೃದಯವು ದುಃಖದಿಂದ ಭೇದಿಸಿತು ; ಆದರೆ ಆಗ ವಿಪ್ರನಿಗೆ ಯಾವ ಮಾತನ್ನೂ ಆಡದೆ ಮೌನವಾಗಿದ್ದನು.

೫೯. ತರುವಾಯ ಆ ವಿಪ್ರನು ಬಟ್ಟೆಯ ಸೆರಗಿನಲ್ಲಿ ಆ ಹಣವನ್ನು ದೃಢವಾಗಿ ಕಟ್ಟಿಟ್ಟು ರಾಜಪತ್ನಿಯನ್ನು ಕಟ್ಟಿ ಕೂದಲು ಹಿಡಿದು ಬಲಾತ್ಕಾರವಾಗಿ ಸೆಳೆದನು.

೬೦. ಪುತ್ರನಾದ ರೋಹಿತಾಸ್ಯನು ಬಲಾತ್ಕಾರವಾಗಿ ಸೆಳೆಯಲ್ಪಟ್ಟ ಜನನಿಯನ್ನು ನೋಡಿ ಸುಂದರವಾದ ಪಂಚಶಿಖೆಗಳನ್ನು ಧರಿಸಿದ ಬಾಲಕನಾದ್ದರಿಂದ ಕೈಯಿಂದ ಜನನಿಯ ಸೀರೆಯನ್ನು ಸೆಳೆಯುತ್ತ ಅತ್ತನು.

೬೧. ಆರ್ಯನೆ ! ಬಿಡು. ಸ್ವಲ್ಪಹೊತ್ತು ನನ್ನನ್ನು ಬಿಡು. ನಾನು ಈ ಮಗುವನ್ನು ನೋಡಿ ಸಮಾಧಾನಮಾಡಿ ಬರುವೆನು. ತಂದೆ ! ಈ ಮಗುವಿನ ದರ್ಶನವು ಇನ್ನು ನನಗೆ ದುರ್ಲಭವಾಗುವುದು.

೬೨. ಮಗುವೆ ! ಬಾ. ಹೀಗೆ ಪರದಾಸ್ಯವನ್ನು ಹೊಂದಿದ ಜನನಿಯನ್ನು ನೋಡು. ರಾಜಪುತ್ರನೆ ! ನನ್ನನ್ನು ಸ್ಪರ್ಶಿಸಬೇಡ. ನಾನೀಗ ನಿನಗೆ ಸ್ಪರ್ಶಿಸಲು ಅನರ್ಹಳಾಗಿರುವೆನು.

ತತಃ ಸ ಬಾಲಃ ಸಹಸಾ ದೃಷ್ಟ್ವಾ ಕೃಷ್ಟಾಂ ತು ಮಾತರಮ್ ।
ಸಮಭ್ಯಧಾವದಮ್ಬೇತಿ ರುದನ್ನಸ್ರಾವಿಲೇಕ್ಷಣಃ ॥೬೩॥

ತಮಾಗತಂ ದ್ವಿಜಃ ಕ್ರೋಧಾದ್ಬಾಲಮಭ್ಯಾಹನತ್ಪದಾ ।
ವದಂಸ್ತಥಾಪಿ ಸೋಽಮ್ಬೇತಿ ನೈವಾಮುಞ್ಚತ ಮಾತರಮ್ ॥೬೪॥

ರಾಜಪತ್ನ್ಯುವಾಚ :—

ಪ್ರಸಾದಂ ಕುರು ಮೇ ನಾಥ ಕ್ರೀಣೀಷ್ವೇಮಂ ಚ ಬಾಲಕಮ್ ।
ಕ್ರೀತಾಪಿ ನಾಹಂ ಭವತೋ ವಿನೈನಂ ಕಾರ್ಯಸಾಧಿಕಾ ॥೬೫॥

ಇತ್ಥಂ ಮಮಾಲ್ಪಭಾಗ್ಯಾಯಾಃ ಪ್ರಸಾದಸುಮುಖೋ ಭವ ।
ಮಾಂ ಸಂಯೋಜಯ ಬಾಲೇನ ವತ್ಸೇನೇವ ಪಯಸ್ವಿನೀಮ್ ॥೬೬॥

---

೬೩. ತರುವಾಯ ಆ ಬಾಲಕನು ಬಲಾತ್ಕಾರವಾಗಿ ಸೆಳೆಯಲ್ಪಟ್ಟ ತಾಯಿಯನ್ನು ಕಂಡು ನೀರು ತುಂಬಿ ಕೊಳೆಯಾದ ಕಣ್ಣುಗಳುಳ್ಳವನಾಗಿ "ತಾಯಿ" ಎಂದು ಗಟ್ಟಿಯಾಗಿ ಕಿರುಚುತ್ತ ಓಡಿಹೋದನು.

೬೪. ದ್ವಿಜನು ಕೋಪದಿಂದ ಹಾಗೆ ಬಂದಿದ್ದ ಬಾಲಕನನ್ನು ಕಾಲಿನಿಂದ ಒದ್ದನು. ಆದರೂ ಆ ಬಾಲಕನು "ತಾಯಿ" ಎಂದು ಕೂಗಿಕೊಳ್ಳುತ್ತ ತಾಯಿಯನ್ನು ಬಿಡಲಾರದೆ ಹೋದನು.

ರಾಜಪತ್ನಿಯು ಆಗ ಹೇಳಿದಳು :—

೬೫. ಸ್ವಾಮಿಯೆ! ನನ್ನಲ್ಲಿ ಅನುಗ್ರಹವನ್ನು ಇಡು. ಈ ಬಾಲಕನನ್ನೂ ಕೊಂಡುಕೊ. ನೀನು ನನ್ನನ್ನು ಮಾತ್ರ ಕೊಂಡುಕೊಂಡಿದ್ದರೂ ಇವನನ್ನು ಅಗಲಿದ್ದು ನಾನು ನಿನ್ನ ಕಾರ್ಯಗಳನ್ನು ನಿರ್ವಹಿಸಲಾರೆನು.

೬೬. ಹೀಗೆ ಭಾಗ್ಯವಂಚಿತಳಾದ ನನ್ನಲ್ಲಿ ಅನುಗ್ರಹ ತೋರಿ ಸೌಮನಸ್ಯವುಳ್ಳವನಾಗು. ಎಳೆಕರುವಿನೊಡನೆ ತಾಯಿಯು ಇರುವಂತೆ ನನ್ನನ್ನು ಈ ಬಾಲಕನೊಡನೆ ಇರುವಂತೆ ಮಾಡು.

ಬ್ರಾಹ್ಮಣ ಉವಾಚ :—

ಗೃಹ್ಯತಾಂ ವಿತ್ತಮೇತತ್ತೇ ದೀಯತಾಂ ಬಾಲಕೋ ಮಮ ॥೬೭॥

ಸ್ತ್ರೀಪುಂಸೋರ್ಧರ್ಮಶಾಸ್ತ್ರಜ್ಞೈಃ ಕೃತಮೇವ ಹಿ ವೇತನಮ್ ।
ಶತಂ ಸಹಸ್ರಂ ಲಕ್ಷಂ ಚ ಕೋಟಿಮೂಲ್ಯಂ ತಥಾಪರೈಃ ॥೬೮॥

ಪಕ್ಷಿಣ ಊಚುಃ :—

ತಥೈವ ತಸ್ಯ ತದ್ವಿತ್ತಂ ಬದ್ಧ್ವೋತ್ತರಪಟೇ ತತಃ ।
ಪ್ರಗೃಹ್ಯ ಬಾಲಕಂ ಮಾತ್ರಾ ಸಹೈಕಸ್ಥಮಬಂಧಯತ್ ॥೬೯॥

ನೀಯಮಾನೌ ತು ತೌ ದೃಷ್ಟ್ವಾ ಭಾರ್ಯಾಪುತ್ರೌ ಸ ಪಾರ್ಥಿವಃ ।
ವಿಲಲಾಪ ಸುದುಃಖಾರ್ತೋ ನಿಶ್ವಸ್ಯೋಷ್ಣಂ ಪುನಃ ಪುನಃ ॥೭೦॥

ವೃದ್ಧ ಬ್ರಾಹ್ಮಣನು ಇಂತೆಂದನು :—

೬೭. ಬಾಲಕನನ್ನು ಕೊಂಡುಕೊಳ್ಳಲು ಮೂಲ್ಯವಾದ ಈ ಹಣವನ್ನು ತೆಗೆದುಕೊ. ಮತ್ತು ನನಗೆ ಬಾಲಕನನ್ನು ಕೊಡು.

೬೮. ಧರ್ಮಶಾಸ್ತ್ರಜ್ಞರು ಸ್ತ್ರೀ-ಪುರುಷ-ಬಾಲಕರಿಗೆ ಅವರವರಿಗೆ ತಕ್ಕಂತೆ ಶತ-ಸಹಸ್ರ-ಲಕ್ಷ-ಕೋಟಿಸಂಖ್ಯೆಯ ಮೂಲ್ಯವನ್ನು ನಿರ್ಧರಿಸಿರುವರು. ಅದರಂತೆ ಈ ಮೂಲ್ಯವನ್ನು ಪರಿಗ್ರಹಿಸು.

ಪಕ್ಷಿಗಳು ಇಂತೆಂದುವು :—

೬೯. ತರುವಾಯ ಹಾಗೆಯೆ ಬಾಲಕನ ಮೂಲ್ಯದ ಹಣವನ್ನೂ ಉತ್ತರೀಯದ ಸೆರಗಿನಲ್ಲಿ ಕಟ್ಟಿ ಬಾಲಕನನ್ನು ಕರೆದುಕೊಂಡು ತಾಯಿಯೊಡನೆ ಒಟ್ಟಿಗೆ ಕಟ್ಟಿಹಾಕಿದನು.

೭೦. ಆಗ ಹರಿಶ್ಚಂದ್ರನು ತನ್ನ ಸತೀ-ಸುತರನ್ನು ಬಲಾತ್ಕಾರದಿಂದ ಸೆಳೆದುಕೊಂಡುಹೋದುದನ್ನು ಕಂಡು ಅತಿ ದುಃಖದಿಂದ ಪೀಡಿತನಾಗಿ ಮತ್ತೆ ಮತ್ತೆ ಬಿಸಿ ಉಸುರು ಬಿಡುತ್ತ ವಿಲಪಿಸಿದನು.

ಯಾಂ ನ ವಾಯುರ್ನ ಚಾದಿತ್ಯೋ ನೇನ್ದುರ್ನ ಚ ಪೃಥಗ್ಜನಃ ।
ದೃಷ್ಟವನ್ತಃ ಪುರಾ ಪತ್ನೀಂ ಸೇಯಂ ದಾಸೀತ್ವಮಾಗತಾ ॥೭೧॥

ಸೂರ್ಯವಂಶಪ್ರಸೂತೋಽಯಂ ಸುಕುಮಾರಕರಾಙ್ಗುಲಿಃ ।
ಸಂಪ್ರಾಪ್ತೋ ವಿಕ್ರಯಂ ಬಾಲೋ ಧಿಙ್ಮಾಮಸ್ತು ಸುದುರ್ಮತಿಮ್
॥೭೨॥

ಹಾ ಪ್ರಿಯೇ ಹಾ ಶಿಶೋ ವತ್ಸ ಮಮಾನಾರ್ಯಸ್ಯ ದುರ್ನಯೈಃ ।
ದೈವಾಧೀನಾಂ ದಶಾಂ ಪ್ರಾಪ್ತೋ ನ ಮೃತೋಽಸ್ಮಿ ತಥಾಪಿ ಧಿಕ್ ॥೭೩॥

ಪಕ್ಷಿಣ ಊಚುಃ :—

ಏವಂ ವಿಲಪತೋ ರಾಜ್ಞಃ ಸ ವಿಪ್ರೋಽನ್ತರಧೀಯತ ।
ವೃಕ್ಷಗೇಹಾದಿಭಿಸ್ತುಙ್ಗೈಸ್ತಾನಾದಾಯ ತ್ವರಾನ್ವಿತಃ ॥೭೪॥

---

೭೧. ಯಾವ ನನ್ನ ಪಟ್ಟಮಹಿಷಿಯನ್ನು ಹಿಂದೆ ಯಾವೊಬ್ಬ ಪಾಮರನೂ ಸೂರ್ಯ-ಚಂದ್ರ-ವಾಯುದೇವರೂ ಕೂಡ ನೋಡಿರಲಿಲ್ಲವೊ, ಅಂತಹ ನನ್ನ ಪತ್ನಿಯು ಇಂದು ದಾಸಿಯಾಗಿರುವಳು.

೭೨. ಸೂರ್ಯವಂಶದಲ್ಲಿ ಜನಿಸಿರುವ ಮತ್ತು ಸುಕುಮಾರವಾದ ಕೈಬೆರಳುಗಳಿಂದ ಕೂಡಿದ ಈ ನನ್ನ ಬಾಲಕನನ್ನು ವಿಕ್ರಯಿಸಿದೆನು. ಹೀಗೆ ಅವಿವೇಕಿಯಾದ ನನ್ನನ್ನು ಧಿಕ್ಕರಿಸಬೇಕು.

೭೩. ಅಯ್ಯೋ! ನನ್ನ ಪ್ರಿಯೆಯೇ! ಅಯ್ಯೋ! ಎಳೆಯ ಮಗುವೆ! ಅನಾರ್ಯನಾದ ನನ್ನ ಈ ಕೆಟ್ಟ ನಡತೆಯಿಂದ ನಾನು ದೈವಾಧೀನವಾದ ವಿಷಮದಶೆಯನ್ನು ಹೊಂದಿದ್ದೇನೆ. ಆದರೂ ಸಾಯದೇ ಬದುಕಿದ್ದೇನಲ್ಲ. ಅಯ್ಯೋ! ಧಿಕ್ಕಾರವು!

ಪಕ್ಷಿಗಳು ನುಡಿದುವು :—

೭೪. ಈ ರೀತಿಯಾಗಿ ರಾಜನು ವಿಲಪಿಸುತ್ತಿರಲು ಆ ವಿಪ್ರನು ಎತ್ತರವಾದ ಮರ-ಗಿಡ ಮಂದಿರಗಳ ಶ್ರೇಣಿಯ ಮೂಲಕ ವೇಗವಾಗಿ ಅವರನ್ನು ಕರೆದುಕೊಂಡುಹೋಗಿ ಅದೃಶ್ಯನಾದನು.

ವಿಶ್ವಾಮಿತ್ರಸ್ತತಃ ಪ್ರಾಪ್ತೋ ನೃಪಂ ವಿತ್ತಮಯಾಚತ ।
ತಸ್ಮೈ ಸಮರ್ಪಯಾಮಾಸ ಹರಿಶ್ಚನ್ದ್ರೋऽಪಿ ತದ್ಧನಮ್ ॥೭೫॥

ತದ್ವಿತ್ತಂ ಸ್ತೋಕಮಾಲೋಕ್ಯ ದಾರವಿಕ್ರಯಸಂಭವಮ್ ।
ಶೋಕಾಭಿಭೂತಂ ರಾಜಾನಂ ಕುಪಿತಃ ಕೌಶಿಕೋऽಬ್ರವೀತ್ ॥೭೬॥

ಕ್ಷತ್ರಬನ್ಧೋ ಮಮೇಮಾಂ ತ್ವಂ ಸದೃಶೀಂ ಯಜ್ಞದಕ್ಷಿಣಾಮ್ ।
ಮನ್ಯಸೇ ಯದಿ ತತ್ ಕ್ಷಿಪ್ರಂ ಪಶ್ಯ ತ್ವಂ ಮೇ ಬಲಂ ಪರಮ್ ॥೭೭॥

ತಪಸೋऽತ್ರ ಸುತಪ್ತಸ್ಯ ಬ್ರಾಹ್ಮಣ್ಯಸ್ಯಾಮಲಸ್ಯ ಚ ।
ಮತ್ಪ್ರಭಾವಸ್ಯ ಚೋಗ್ರಸ್ಯ ಶುದ್ಧಸ್ಯಾಧ್ಯಯನಸ್ಯ ಚ ॥೭೮॥

---

೭೫. ತರುವಾಯ ವಿಶ್ವಾಮಿತ್ರಮುನಿಯು ರಾಜನ ಬಳಿಗೆ ಬಂದು ಹಣವನ್ನು ಕೇಳಿದನು. ಆ ಹರಿಶ್ಚಂದ್ರನು ಆ ಹಣವನ್ನು ವಿಶ್ವಾಮಿತ್ರಮುನಿಗೆ ಅರ್ಪಿಸಿದನು.

೭೬. ಪತ್ನೀ-ಪುತ್ರರನ್ನು ಮಾರಿ ಬಂದ ಆ ಹಣವು ಸ್ವಲ್ಪವೆಂದು ತಿಳಿದು ಕೋಪಾವಿಷ್ಟನಾದ ವಿಶ್ವಾಮಿತ್ರಮುನಿಯು ಶೋಕದಿಂದ ವ್ಯಾಕುಲಿತ ರಾಜನನ್ನು ಕುರಿತು ಹೇಳಿದನು.

೭೭. ಎಲೈ ನೀಚಕ್ಷತ್ರಿಯನೆ! ಇಷ್ಟು ಮಾತ್ರ ಹಣವನ್ನು ನೀನು ಸಂಪೂರ್ಣ ಯಜ್ಞದಕ್ಷಿಣೆಯೆಂದು ಭಾವಿಸುವುದಾದರೆ ನನ್ನ ನಿರತಿಶಯವಾದ ತಪೋಬಲವನ್ನು ಕ್ಷಿಪ್ರವಾಗಿ ನೋಡು.

೭೮. ಕಠಿನವಾಗಿ ಆಚರಿಸಿದ ತಪಸ್ಸು, ಉಜ್ಜ್ವಲವಾದ ಬ್ರಾಹ್ಮಣ್ಯ, ಉಗ್ರವಾದ ನನ್ನ ಪ್ರಭಾವ, ಮತ್ತು ಶುದ್ಧನಿಯಮಪೂರ್ವಕವಾದ ಅಧ್ಯಯನ ಇವುಗಳ ಬಲವನ್ನು ಈಗ ತೋರಿಸುವೆನು.

ರಾಜೋವಾಚ :—

ಅನ್ಯಾಂ ದಾಸ್ಯಾಮಿ ಭಗವನ್ ಕಾಲಃ ಕಶ್ಚಿತ್ಪ್ರತೀಕ್ಷ್ಯತಾಮ್ ।
ಸಾಮ್ಪ್ರತಂ ನಾಸ್ತಿ ವಿಕ್ರೀತಾ ಪತ್ನೀ ಪುತ್ರಶ್ಚ ಬಾಲಕಃ ॥೭೯॥

ವಿಶ್ವಾಮಿತ್ರ ಉವಾಚ :—

ಚತುರ್ಭಾಗಃ ಸ್ಥಿತೋ ಯೋಽಯಂ ದಿವಸಸ್ಯ ನರಾಧಿಪ ।
ಏಷ ಏವ ಪ್ರತೀಕ್ಷ್ಯೋ ಮೇ ವಕ್ತವ್ಯಂ ನೋತ್ತರಂ ತ್ವಯಾ ॥೮೦॥

ಪಕ್ಷಿಣ ಊಚುಃ :—

ತಮೇವಮುಕ್ತ್ವಾ ರಾಜೇನ್ದ್ರಂ ನಿಷ್ಠುರಂ ನಿರ್ಘೃಣಂ ವಚಃ ।
ತದಾದಾಯ ಧನಂ ತೂರ್ಣಂ ಕುಪಿತಃ ಕೌಶಿಕೋ ಯಯೌ ॥೮೧॥

ರಾಜನು ಇಂತೆಂದನು :—

೭೯. ಪೂಜ್ಯನೆ! ಬಾಕಿಯಾಗಿರುವ ದಕ್ಷಿಣಾಧನವನ್ನು ನಾನು ಕೊಡುವೆನು. ಸ್ವಲ್ಪಕಾಲ ನಿರೀಕ್ಷಿಸು. ಈಗ ನನ್ನಲ್ಲಿ ಇಲ್ಲ. ಪತ್ನಿಯನ್ನೂ, ಬಾಲಪುತ್ರನನ್ನೂ ವಿಕ್ರಯಿಸಿದೆನು.

ವಿಶ್ವಾಮಿತ್ರ ಮುನಿಯು ಹೀಗೆ ನುಡಿದನು :—

೮೦. ಮಹಾರಾಜನೆ! ಹಗಲಿನಲ್ಲಿ ನಾಲ್ಕನೆಯ ಒಂದುಭಾಗ ಮಾತ್ರ ಮಿಕ್ಕಿರುವುದು. ಅಷ್ಟನ್ನು ಮಾತ್ರ ನಾನು ನಿರೀಕ್ಷಿಸುವೆನು. ಮತ್ತೆ ಬೇರೆ ಯಾವ ಉತ್ತರವನ್ನೂ ನೀನು ಹೇಳಲಾಗದು.

ಪಕ್ಷಿಗಳು ಹೇಳಿದುವು :—

೮೧. ಆ ರಾಜೇಂದ್ರನಿಗೆ ನಿಷ್ಠುರವಾದ ಮಾತನ್ನು ನಿಷ್ಕರುಣನಾಗಿ ಹೇಳಿ ಕುಪಿತನಾದ ವಿಶ್ವಾಮಿತ್ರಮುನಿಯು ಆ ಹಣವನ್ನು ತೆಗೆದುಕೊಂಡು ಬೇಗ ಹೊರಟುಹೋದನು.

ವಿಶ್ವಾಮಿತ್ರೇ ಗತೇ ರಾಜಾ ಭಯಶೋಕಾದಿಮಧ್ಯಗಃ ।
ಸ್ವವಿಕ್ರಯಂ ವಿನಿಶ್ಚಿತ್ಯ ಪ್ರೋವಾಚೋಚ್ಚೈರಧೋಮುಖಃ ॥೮೨॥

ವಿತ್ತಕ್ರೀತೇನ ಯೋ ಹ್ಯರ್ಥೀ ಮಯಾ ಪ್ರೇಷ್ಯೇಣ ಮಾನವಃ ।
ಸ ಬ್ರವೀತು ತ್ವರಾಯುಕ್ತೋ ಯಾವತ್ತಪತಿ ಭಾಸ್ಕರಃ ॥೮೩॥

ಅಥಾಜಗಾಮ ತ್ವರಿತೋ ಧರ್ಮಶ್ಚಣ್ಡಾಲರೂಪಧೃತ್ ।
ದುರ್ಗನ್ಧೋ ವಿಕೃತೋ ರೂಕ್ಷಃ ಶ್ಮಶ್ರುಲೋ ದನ್ತುರೋ ಘೃಣೀ ॥೮೪॥
ಕೃಷ್ಣೋ ಲಮ್ಬೋದರಃ ಪಿಙ್ಗರೂಕ್ಷಾಕ್ಷಃ ಪರುಷಾಕ್ಷರಃ ।
ಗೃಹೀತಪಕ್ಷಿಪುಞ್ಜಶ್ಚ ಶವಮಾಲ್ಯೈರಲಙ್ಕೃತಃ ॥೮೫॥

---

೮೨. ವಿಶ್ವಾಮಿತ್ರಮುನಿಯು ಹೊರಟುಹೋದ ಬಳಿಕ ಭಯ-ಶೋಕಗಳಿಗೆ ಸಿಕ್ಕಿಬಿದ್ದ ಹರಿಶ್ಚಂದ್ರನು ತನ್ನನ್ನು ಮಾರಿಕೊಳ್ಳುವುದೆಂದು ನಿಶ್ಚಯಿಸಿ ಅಧೋಮುಖನಾಗಿ ಗಟ್ಟಿಯಾಗಿ ಕೂಗಿದನು.

೮೩. ಯಾವ ಮಾನವನು ಹಣದಿಂದ ನನ್ನನ್ನು ದಾಸನನ್ನಾಗಿ ಕೊಂಡುಕೊಳ್ಳಲು ಇಷ್ಟವುಳ್ಳವನೊ ಅವನು ಸೂರ್ಯನು ಅಸ್ತಮಯ ಹೊಂದದೆ ತಪಿಸುತ್ತಿರುವಾಗಲೆ ಬೇಗ ಬಂದು ಹೇಳಲಿ.

೮೪. ಅಷ್ಟರಲ್ಲಿ ಧರ್ಮದೇವನು ದುರ್ಗನ್ಧ, ಕರಾಲರೂಪ, ಒರಟುಗಾತ್ರ, ಉದ್ದವಾಗಿ ಬೆಳೆದ ಗಡ್ಡ-ಮೀಸೆ ಮತ್ತು ಉಬ್ಬುಹಲ್ಲು ಇವುಗಳಿಂದ ಕೂಡಿ ಜುಗುಪ್ಸೆಯಾಗುವಂತಿರುವ ಚಂಡಾಲರೂಪದಿಂದ ಬೇಗ ಬಂದನು.

೮೫. ಮತ್ತು ಆ ಚಂಡಾಲನು ಕಪ್ಪುಬಣ್ಣವುಳ್ಳವನೂ, ಲಂಬೋದರನೂ, ಹೊಂಬಣ್ಣದ ಕ್ರೂರದೃಷ್ಟಿಯುಳ್ಳವನೂ, ಕಠೋರವಾದ ಮಾತುಳ್ಳವನೂ, ಹಿಡಿದುಕೊಂಡ ಅನೇಕ ಪಕ್ಷಿಗಳುಳ್ಳವನೂ ಹಾಗು ಶವಮಾಲ್ಯದಿಂದ ಅಲಂಕರಿಸಲ್ಪಟ್ಟವನೂ ಆಗಿದ್ದನು.

ಕಪಾಲಹಸ್ತೋ ದೀರ್ಘಾಸ್ಯೋ ಭೈರವೋऽತಿವದನ್ ಮುಹುಃ ।
ಶ್ವಗಣಾಭಿವೃತೋ ಘೋರೋ ಯಷ್ಟಿಹಸ್ತೋ ನಿರಾಕೃತಿಃ ॥೮೬॥

ಚಣ್ಡಾಲ ಉವಾಚ :—

ಅಹಮರ್ಥೀ ತ್ವಯಾ ಶೀಘ್ರಂ ಕಥಯಸ್ವಾತ್ಮವೇತನಮ್ ।
ಸ್ತೋಕೇನ ಬಹುನಾ ವಾಪಿ ಯೇನ ವೈ ಲಭ್ಯತೇ ಭವಾನ್ ॥೮೭॥

ಪಕ್ಷಿಣ ಊಚುಃ :—

ತಂ ತಾದೃಶಮಥಾಲಕ್ಷ್ಯ ಕ್ರೂರದೃಷ್ಟಿಂ ಸುನಿಷ್ಠುರಮ್ ।
ವದನ್ತಮತಿದುಃಶೀಲಂ ಕಸ್ತ್ವಮಿತ್ಯಾಹ ಪಾರ್ಥಿವಃ ॥೮೮॥

---

೮೬. ಮತ್ತು ಕೈಯಲ್ಲಿ ನರಕಪಾಲವನ್ನು ಧರಿಸಿದವನೂ ಉದ್ದವಾದ ಮುಖವುಳ್ಳವನೂ ಭಯಂಕರನೂ ಮತ್ತೆ ಮತ್ತೆ ಬಲು ಮಾತನಾಡುವವನೂ ನಾಯಿಗಳ ಗುಂಪಿನಿಂದ ಸುತ್ತಲ್ಪಟ್ಟವನೂ ಕೈಯ್ಯಲ್ಲಿ ದೊಣ್ಣೆಯನ್ನು ಹಿಡಿದವನೂ ಮತ್ತು ಕೆಟ್ಟ ಆಕಾರವುಳ್ಳವನೂ ಆಗಿದ್ದನು.

ಚಂಡಾಲನು ಹೀಗೆಂದನು :—

೮೭. ನಾನು ನಿನ್ನನ್ನು ಕೊಂಡುಕೊಳ್ಳುವ ಇಷ್ಟಹೊಂದಿದ್ದೇನೆ. ಹೆಚ್ಚೋ, ಕಡಿಮೆಯೋ ಎಷ್ಟು ಮೂಲ್ಯದಿಂದ ನೀನು ದಾಸನಾಗಿರಲು ಒಪ್ಪುವಿಯೊ ಅಷ್ಟು ನಿನ್ನ ಮೂಲ್ಯವನ್ನು ಬೇಗ ಹೇಳು.

ಪಕ್ಷಿಗಳು ಹೇಳಿದುವು :—

೮೮. ಹರಿಶ್ಚಂದ್ರನು ಅತಿನಿಷ್ಠುರ ಮತ್ತು ದುಃಶೀಲದ ಮಾತುಗಳನ್ನು ಆಡುತ್ತ ಬಂದ, ಕ್ರೂರದೃಷ್ಟಿಯುಳ್ಳ, ವಿಕಾರರೂಪದಿಂದ ಕೂಡಿದ ಆ ಚಂಡಾಲನನ್ನು ನೋಡಿ “ ನೀನು ಯಾರು ? ” ಎಂದು ಪ್ರಶ್ನಿಸಿದನು.

ಚಣ್ಡಾಲ ಉವಾಚ :—

ಚಣ್ಡಾಲೋಽಹಮಿಹ ಖ್ಯಾತಃ ಪ್ರವೀರೇತಿ ಪುರೋತ್ತಮೇ ।
ವಿಖ್ಯಾತೋ ವಧ್ಯವಧಕೋ ಮೃತಕಮ್ಬಲಹಾರಕಃ ॥೮೯॥

ಹರಿಶ್ಚನ್ದ್ರ ಉವಾಚ :—

ನಾಹಂ ಚಣ್ಡಾಲದಾಸತ್ವಮಿಚ್ಛೇಯಂ ಸುವಿಗರ್ಹಿತಮ್ ।
ವರಂ ಶಾಪಾಗ್ನಿನಾ ದಗ್ಧೋ ನ ಚಣ್ಡಾಲವಶಂ ಗತಃ ॥೯೦॥

ಪಕ್ಷಿಣ ಊಚುಃ :—

ತಸ್ಯೈವಂ ವದತಃ ಪ್ರಾಪ್ತೋ ವಿಶ್ವಾಮಿತ್ರಸ್ತಪೋನಿಧಿಃ ।
ಕೋಪಾಮರ್ಷವಿವೃತ್ತಾಕ್ಷಃ ಪ್ರಾಹ ಚೈವಂ ನರಾಧಿಪಮ್ ॥೯೧॥

ಚಂಡಾಲನು ಉತ್ತರವಿತ್ತನು :—

೮೯. ನಾನು ಪ್ರವೀರ ಎಂಬ ನಾಮಾಂಕನದಿಂದ ಪ್ರಸಿದ್ಧನಾದ ಚಂಡಾಲನು. ವಧಾರ್ಹರನ್ನು ವಧಿಸುತ್ತ ಮೃತರ ಕಂಬಲಿ ಮುಂತಾದುದನ್ನು ಎತ್ತಿಕೊಂಡು ಹೋಗುವ ನಾನು ಈ ಉತ್ತಮನಗರದಲ್ಲಿ ಪ್ರಸಿದ್ಧನಾಗಿರುವೆನು.

ಹರಿಶ್ಚಂದ್ರನು ಹೇಳಿದನು :—

೯೦. ನಾನು ನಿಂದ್ಯವಾದ ಚಂಡಾಲದಾಸ್ಯವನ್ನು ಎಂದಿಗೂ ಇಷ್ಟಪಡಲಾರೆನು. ಶಾಪಾಗ್ನಿಯಿಂದ ದಗ್ಧನಾಗುವುದಾದರೂ ಉತ್ತಮವಾದೀತು. ಆದರೆ ಚಂಡಾಲನಿಗೆ ದಾಸನಾಗುವುದು ಬೇಡ.

ಪಕ್ಷಿಗಳು ಇಂತೆಂದುವು :—

೯೧. ರಾಜನು ಈರೀತಿ ಹೇಳುತ್ತಿರುವ ಸಮಯಕ್ಕೆ ಸರಿಯಾಗಿ ತಪೋನಿಧಿಯಾದ ವಿಶ್ವಾಮಿತ್ರನು ಅಲ್ಲಿಗೆ ಬಂದನು. ಮತ್ತು ಕೋಪಾವೇಶದಿಂದ ಚಲಿಸುತ್ತಿದ್ದ ದೃಷ್ಟಿಯುಳ್ಳವನಾಗಿ ರಾಜನಿಗೆ ಹೀಗೆ ಹೇಳಿದನು.

ವಿಶ್ವಾಮಿತ್ರ ಉವಾಚ :—

ಚಣ್ಡಾಲೋಽಯಮನಲ್ಪಂ ತೇ ದಾತುಂ ವಿತ್ತಮುಪಸ್ಥಿತಃ ।
ಕಸ್ಮಾನ್ನ ದೀಯತೇ ಮಹ್ಯಮಶೇಷಾ ಯಜ್ಞದಕ್ಷಿಣಾ ॥೯೨॥

ಹರಿಶ್ಚನ್ದ್ರ ಉವಾಚ :—

ಭಗವನ್ ಸೂರ್ಯವಂಶೋತ್ಥಮಾತ್ಮಾನಂ ವೇದ್ಮಿ ಕೌಶಿಕ ।
ಕಥಂ ಚಣ್ಡಾಲದಾಸತ್ವಂ ಗಮಿಷ್ಯೇ ವಿತ್ತಕಾಮುಕಃ ॥೯೩॥

ವಿಶ್ವಾಮಿತ್ರ ಉವಾಚ :—

ಯದಿ ಚಣ್ಡಾಲವಿತ್ತಂ ತ್ವಮಾತ್ಮವಿಕ್ರಯಜಂ ಮಮ ।
ನ ಪ್ರದಾಸ್ಯಸಿ ಕಾಲೇನ ಶಪ್ಸ್ಯಾಮಿ ತ್ವಾಮಸಂಶಯಮ್ ॥೯೪॥

ವಿಶ್ವಾಮಿತ್ರಮುನಿಯು ನುಡಿದನು :—

೯೨. ಈ ಚಂಡಾಲನು ನಿನಗೆ ಅಮಿತವಾದ ಹಣವನ್ನು ಕೊಡಲು ಬಂದಿರುವನು. ಹೀಗಿರಲು ನೀನು ನನಗೆ ಕೊಡಬೇಕಾದ ಸಂಪೂರ್ಣ ಯಜ್ಞ-ದಕ್ಷಿಣೆಯನ್ನು ಏಕೆ ಕೊಡಲಾರೆ?

ಹರಿಶ್ಚಂದ್ರನು ಹೇಳಿದನು :—

೯೩. ಪೂಜ್ಯನಾದ ಕೌಶಿಕಮುನಿಯೆ! ನಾನು ಸೂರ್ಯವಂಶದಲ್ಲಿ ಜನಿಸಿರುವೆನೆಂಬುದನ್ನು ಸ್ಮರಿಸಿಕೊಳ್ಳುತ್ತಿದ್ದೇನೆ. ಅಂತಹ ನಾನು ಧನಾರ್ಜನೆಯ ಆಶೆಗಾಗಿ ಚಂಡಾಲದಾಸ್ಯವನ್ನು ಹೇಗೆ ಹೊಂದಲಿ?

ವಿಶ್ವಾಮಿತ್ರಮುನಿಯು ಹೇಳಿದನು :—

೯೪. ನೀನು ಚಂಡಾಲನಿಗೆ ಆತ್ಮವಿಕ್ರಯವನ್ನು ಮಾಡಿ ಅದರಿಂದ ಲಭಿಸುವ ಹಣವನ್ನು ಕೊಡಬೇಕಾಗಿರುವ ಈ ಸಕಾಲದಲ್ಲಿ ಕೊಡದಿದ್ದರೆ ನಿನ್ನನ್ನು ನಿಸ್ಸಂಶಯವಾಗಿ ಶಪಿಸುವೆನು.

ಪಕ್ಷಿಣ ಊಚುಃ :—

ಹರಿಶ್ಚನ್ದ್ರಸ್ತತೋ ರಾಜಾ ಚಿನ್ತಾವಸ್ಥಿತಜೀವಿತಃ ।
ಪ್ರಸೀದೇತಿ ವದನ್ ಪಾದಾವೃಷೇರ್ಜಗ್ರಾಹ ವಿಹ್ವಲಃ ॥೯೫॥

ದಾಸೋಽಸ್ಮ್ಯಾರ್ತೋಽಸ್ಮಿ ಭೀತೋಽಸ್ಮಿ ತ್ವದ್ಭಕ್ತಶ್ಚ ವಿಶೇಷತಃ ।
ಕುರು ಪ್ರಸಾದಂ ವಿಪ್ರರ್ಷೇ ಕಷ್ಟಶ್ಚಣ್ಡಾಲಸಙ್ಕರಃ ॥೯೬॥

ಭವೇಯಂ ವಿತ್ತಶೇಷೇಣ ಸರ್ವಕರ್ಮಕರೋ ವಶಃ ।
ತವೈವ ಮುನಿಶಾರ್ದೂಲ ಪ್ರೇಷ್ಯಶ್ಚಿತ್ತಾನುವರ್ತಕಃ ॥೯೭॥

ವಿಶ್ವಾಮಿತ್ರ ಉವಾಚ :—

ಯದಿ ಪ್ರೇಷ್ಯೋ ಮಮ ಭವಾಂಶ್ಚಣ್ಡಾಲಾಯ ತತೋ ಮಯಾ ।
ದಾಸಭಾವಮನುಪ್ರಾಪ್ತೋ ದತ್ತೋ ವಿತ್ತಾರ್ಬುದೇನ ವೈ ॥೯೮॥

ಪಕ್ಷಿಗಳು ಕಥೆಯನ್ನು ಮುಂದುವರಿಸಿದುವು :—

೯೫. ತರುವಾಯ ಹರಿಶ್ಚಂದ್ರರಾಜನು ಚಿಂತೆಯಿಂದ ಬದುಕಿನ ಸಂಶಯಗ್ರಸ್ತವಾದ ಜೀವವುಳ್ಳವನಾಗಿ ಸಂಕಟಪಡುತ್ತಾ "ಪ್ರಸನ್ನನಾಗು" ಎಂದು ಹೇಳುತ್ತ ಮುನಿಯ ಪಾದಗಳನ್ನು ಹಿಡಿದುಕೊಂಡನು.

೯೬. ಬ್ರಹ್ಮರ್ಷಿಯೆ! ನಾನು ನಿನಗೆ ದಾಸನಾಗಿರುವೆನು. ಸಂತಪಿಸುತ್ತಿರುವೆನು. ಭಯಗ್ರಸ್ತನಾಗಿರುವೆನು. ವಿಶೇಷವಾಗಿ ನಿನ್ನಲ್ಲಿ ಭಕ್ತನಾಗಿರುವೆನು. ಚಂಡಾಲರಲ್ಲಿ ಸಂಕರ ಹೊಂದುವುದು ಕ್ಲೇಶಕರವು. ನನ್ನನ್ನು ಅನುಗ್ರಹಿಸು.

೯೭. ಮುನಿಶ್ರೇಷ್ಠನೆ! ನಿನಗೆ ಅರ್ಪಿಸಬೇಕಾದ ಋಣಶೇಷಕ್ಕೆ ನಾನು ನಿನ್ನ ಅಧೀನನಾಗಿ ಇಂಗಿತವನ್ನು ಅನುಸರಿಸಿ ಸಮಸ್ತ ಕಾರ್ಯಗಳನ್ನೂ ಮಾಡುವ ನಿನ್ನ ದಾಸನಾಗಿರುವೆನು.

ವಿಶ್ವಾಮಿತ್ರಮುನಿಯು ಹೇಳಿದನು :—

೯೮. ನೀನು ನನಗೆ ದಾಸನಾಗಿರಲು ಒಪ್ಪಿರುವೆಯಾದರೆ ಆಗ ದಾಸಭಾವವನ್ನು ಹೊಂದಿದ ನಿನ್ನನ್ನು ನಾನು ಅರ್ಬುದ ಸಂಖ್ಯೆಯ ಧನವನ್ನು ತೆಗೆದುಕೊಂಡು ಚಂಡಾಲನಿಗೆ ಮಾರಿರುವೆನು.

ಹರಿಶ್ಚನ್ದ್ರ ಉವಾಚ :—

ಯದ್ಯಸೌ ಶಕ್ಯತೇ ವಿಪ್ರಃ ಕೌಶಿಕಃ ಪರಿತೋಷಿತುಮ್ ।
ತತೋ ಗೃಹಾಣ ಮಾಮದ್ಯ ದಾಸತ್ವಂ ತೇ ಕರೋಮ್ಯಹಮ್ ॥೯೯॥

ಚಣ್ಡಾಲ ಉವಾಚ :—

ಶತಯೋಜನವಿಸ್ತೀರ್ಣಾಂ ನಾನಾಗ್ರಾಮೈರಲಙ್ಕೃತಾಮ್ ।
ಭೂಮಿಂ ರಕ್ಷಾಮಯೀಂ ಕೃತ್ವಾ ದಾಸ್ಯೇಽಹಂ ಕೌಶಿಕಂ ಪ್ರತಿ ॥೧೦೦॥

ಪಕ್ಷಿಣ ಊಚುಃ :—

ಏವಮುಕ್ತೇ ತದಾ ತೇನ ಶ್ವಪಾಕೋ ಹೃಷ್ಟಮಾನಸಃ ।
ವಿಶ್ವಾಮಿತ್ರಾಯ ತದ್ದ್ರವ್ಯಂ ದತ್ವಾ ಬದ್ಧ್ವಾ ನರೇಶ್ವರಮ್॥೧೦೧॥

ಹರಿಶ್ಚಂದ್ರನು ಹೇಳಿದನು :—

೯೯. ಪ್ರವೀರಚಂಡಾಲನೆ! ಈ ಕೌಶಿಕಮುನಿಯನ್ನು ಯಥೇಷ್ಟವಾದ ಹಣವನ್ನು ಕೊಟ್ಟು ತೃಪ್ತಿಪಡಿಸಲು ಶಕ್ತನಾಗಿದ್ದರೆ ನೀನು ನನ್ನನ್ನು ಈಗ ಕೊಂಡುಕೊ. ನಾನು ನಿನ್ನ ದಾಸ್ಯವನ್ನು ಮಾಡುವೆನು.

ಚಂಡಾಲನು ಹೇಳಿದನು :—

೧೦೦. ನಾನು ಶತಯೋಜನ ವಿಸ್ತಾರವುಳ್ಳ ಮತ್ತು ಅನೇಕ ಗ್ರಾಮಗಳಿಂದ ಅಲಂಕರಿಸಲ್ಪಟ್ಟ ಭೂಮಿಯನ್ನು ಸುರಕ್ಷಿತವನ್ನಾಗಿ ಮಾಡಿ ಅದನ್ನು ಈ ಕೌಶಿಕಮುನಿಗೋಸ್ಕರ ಕೊಡುವೆನು.

ಪಕ್ಷಿಗಳು ಹೀಗೆ ಹೇಳಿದುವು :—

೧೦೧. ಹರಿಶ್ಚಂದ್ರನು ದಾಸ್ಯವನ್ನು ಒಪ್ಪಿ ಹೀಗೆ ಹೇಳಲು ಆ ಚಂಡಾಲನು ಸಂತೋಷಗೊಂಡ ಮನಸ್ಸುಳ್ಳವನಾಗಿ ಅಷ್ಟು ಧನವನ್ನು ವಿಶ್ವಾಮಿತ್ರಮುನಿಗೆ ಕೊಟ್ಟು ರಾಜನನ್ನು ದಾಸನನ್ನಾಗಿ ಬಂಧಿಸಿದನು.

ದಣ್ಡಪ್ರಹಾರಸಮ್ಭ್ರಾನ್ತಮತೀವ ವ್ಯಾಕುಲೇನ್ದ್ರಿಯಮ್ ।
ಇಷ್ಟಬನ್ಧುವಿಯೋಗಾರ್ತಮನಯನ್ನಿಜಪಕ್ಕಣಮ್ ॥೧೦೨॥

ಹರಿಶ್ಚನ್ದ್ರಸ್ತತೋ ರಾಜಾ ವಸಂಶ್ಚಣ್ಡಾಲಪಕ್ಕಣೇ ।
ಪ್ರಾತರ್ಮಧ್ಯಾಹ್ನಸಮಯೇ ಸಾಯಂ ಚೈತದಗಾಯತ ॥೧೦೩॥

ಬಾಲಾ ದೀನಮುಖೀ ದೃಷ್ಟ್ವಾ ಬಾಲಂ ದೀನಮುಖಂ ಪುರಃ ।
ಮಾಂ ಸ್ಮರತ್ಯಸುಖಾವಿಷ್ಟಾ ಮೋಚಯಿಷ್ಯತಿ ನೌ ನೃಪಃ ॥೧೦೪॥

ಉಪಾತ್ತವಿತ್ತೋ ವಿಪ್ರಾಯ ದತ್ತ್ವಾ ವಿತ್ತಮತೋಽಧಿಕಮ್ ।
ನ ಸಾ ಮಾಂ ಮೃಗಶಾಬಾಕ್ಷೀ ವೇತ್ತಿ ಪಾಪತರಂ ಕೃತಮ್ ॥೧೦೫॥

---

೧೦೨. ದೊಣ್ಣೆಯ ಏಟಿನಿಂದ ಭ್ರಮಿಸಿ ಹೋದವನೂ ಅತಿಯಾಗಿ ಕಳವಳಪಡುವ ಇಂದ್ರಿಯವುಳ್ಳವನೂ ಮತ್ತು ಇಷ್ಟಬಂಧುಗಳ ವಿಯೋಗದಿಂದ ದುಃಖಿತನೂ ಆದ ಹರಿಶ್ಚಂದ್ರನನ್ನು ತನ್ನ ಕೇರಿಗೆ ಕರೆದೊಯ್ದನು.

೧೦೩. ತರುವಾಯ ಹರಿಶ್ಚಂದ್ರರಾಜನು ಚಂಡಾಲರ ಕೇರಿಯಲ್ಲಿ ವಾಸಮಾಡುತ್ತ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ಈ ಹೊತ್ತಿನಲ್ಲಿ ಹೀಗೆ ಹೇಳಿಕೊಳ್ಳುತ್ತಿದ್ದನು.

೧೦೪. ದೀನಮುಖವುಳ್ಳ ನನ್ನ ಬಾಲಪ್ರಿಯೆಯು ದೀನಮುಖದಿಂದ ಕೂಡಿದ ಬಾಲಪುತ್ರನನ್ನು ಮುಂದೆ ನೋಡುತ್ತ ಸಂತತ ಚಿಂತಿಸುವಳು. ಮತ್ತು ದುಃಖದಿಂದ ಕೂಡಿದ ಪ್ರಿಯೆಯು "ರಾಜನು ನಮ್ಮನ್ನು ದುಃಖದಿಂದ ಬಿಡಿಸುವನು" ಎಂದು ನನ್ನನ್ನು ಸ್ಮರಿಸಿಕೊಳ್ಳುವಳು.

೧೦೫. "ಪತಿಯು ಹಣವನ್ನು ಸಂಪಾದಿಸಿ ವಿಪ್ರನಿಗೆ ದಕ್ಷಿಣಾಧನವನ್ನು ಕೊಟ್ಟು ಹೆಚ್ಚಿನ ಧನದಿಂದ ನಮ್ಮನ್ನು ಬಿಡಿಸುವನು" ಎಂದು ಚಿಂತಿಸುತ್ತಿರುವಳು. ಸುಂದರಿಯಾದ ಪ್ರಿಯೆಯು ಇಷ್ಟೊಂದು ಪಾಪಮಾರ್ಗಕ್ಕೆ ಇಳಿದ ನನ್ನನ್ನು ತಿಳಿಯಲಿಲ್ಲ.

ರಾಜ್ಯನಾಶಃ ಸುಹೃತ್ತ್ಯಾಗೋ ಭಾರ್ಯಾತನಯವಿಕ್ರಯಃ ।
ಪ್ರಾಪ್ತಾ ಚಣ್ಡಾಲತಾ ಚೇಯಮಹೋ ದುಃಖಪರಮ್ಪರಾ ॥೧೦೬॥

ಏವಂ ಸ ನಿವಸನ್ನಿತ್ಯಂ ಸಸ್ಮಾರ ದಯಿತಂ ಸುತಮ್ ।
ಭಾರ್ಯಾಂ ಚಾತ್ಮಸಮಾಮಿಷ್ಟಾಂ ಹೃತಸರ್ವಸ್ವ ಆತುರಃ ॥೧೦೭॥

ಕಸ್ಯ ಚಿತ್ತ್ವಥ ಕಾಲಸ್ಯ ಮೃತಚೇಲಾಪಹಾರಕಃ ।
ಹರಿಶ್ಚನ್ದ್ರೋಽಭವದ್ರಾಜಾ ಶ್ಮಶಾನೇ ತದ್ವಶಾನುಗಃ ॥೧೦೮॥

ಚಣ್ಡಾಲೇನಾನುಶಿಷ್ಟಶ್ಚ ಮೃತಚೇಲಾಪಹಾರಿಣಾ ।
ಶವಾಗಮನಮನ್ವಿಚ್ಛನ್ನಿಹ ತಿಷ್ಠನ್ ದಿವಾನಿಶಮ್ ॥೧೦೯॥

---

೧೦೬. ನನಗಾದರೊ ರಾಜ್ಯಭ್ರಂಶ, ಆಪ್ತೇಷ್ಟರ ವಿಯೋಗ, ಭಾರ್ಯಾ-ಪುತ್ರರ ವಿಕ್ರಯ ಮತ್ತು ಚಂಡಾಲತ್ವ ಪ್ರಾಪ್ತಿಗಳು ಪರಿಣಮಿಸಿವೆ. ಅಯ್ಯೊ! ಇದೆಂತಹ ದುಃಖಗಳ ಪರಂಪರೆಯು!

೧೦೭. ಹೀಗೆ ಚಂಡಾಲದಾಸನಾಗಿ ವಾಸಮಾಡುತ್ತ ಕಳೆದುಕೊಂಡ ಸರ್ವಸ್ವ ಉಳ್ಳವನೂ, ದುಃಖಿತನೂ ಆದ ಹರಿಶ್ಚಂದ್ರನು ತನ್ನ ಪ್ರಿಯಪುತ್ರ-ನನ್ನೂ ಮತ್ತು ತನಗೆ ಅನುರೂಪಳೂ ಇಷ್ಟಳೂ ಆದ ಭಾರ್ಯೆಯನ್ನೂ ಯಾವಾಗಲೂ ಸ್ಮರಿಸುತ್ತಿದ್ದನು.

೧೦೮. ಹೀಗೆ ಕೆಲವು ಕಾಲಕಳೆಯಲು ಹರಿಶ್ಚಂದ್ರರಾಜನು ಚಂಡಾಲನ ವಶವರ್ತಿಯಾಗಿ ಶ್ಮಶಾನದಲ್ಲಿ ಮರಣಹೊಂದಿದವರ ಶವವಸ್ತ್ರಗಳನ್ನು ಕಿತ್ತು-ಕೊಳ್ಳುವ ಚಂಡಾಲನಾದನು.

೧೦೯. ಮತ್ತು ಶವಗಳಿಂದ ವಸ್ತ್ರಗಳನ್ನು ಎತ್ತಿಕೊಳ್ಳುವ ಶೀಲವುಳ್ಳ ಮುಖ್ಯ ಚಂಡಾಲನಿಂದ ಹೀಗೆ ಆಜ್ಞಾಪಿಸಲ್ಪಟ್ಟನು. ಶವಗಳು ಬರುವುದನ್ನು ಕಾಯುತ್ತ ಹಗಲು-ರಾತ್ರಿವೇಳೆಗಳಲ್ಲಿ ನೀನು ಇಲ್ಲಿಯೇ ನಿಲ್ಲು.

ಇದಂ ರಾಜ್ಞೇಽಪಿ ದೇಯಂ ಚ ಷಡ್ಭಾಗಂ ತು ಶವಂ ಪ್ರತಿ ।
ತ್ರಯಸ್ತು ಮಮ ಭಾಗಾಃ ಸ್ಯುರ್ದ್ವೌ ಭಾಗೌ ತವ ವೇತನಮ್ ॥೧೧೦॥

ಇತಿ ಪ್ರತಿಸಮಾದಿಷ್ಟೋ ಜಗಾಮ ಶವಮನ್ದಿರಮ್ ।
ದಿಶಂ ತು ದಕ್ಷಿಣಾಂ ಯತ್ರ ವಾರಾಣಸ್ಯಾಂ ಸ್ಥಿತಂ ತದಾ ॥೧೧೧॥

ಶ್ಮಶಾನಂ ಘೋರಸಂನಾದಂ ಶಿವಾಶತಸಮಾಕುಲಮ್ ।
ಶವಮೌಲಿಸಮಾಕೀರ್ಣಂ ದುರ್ಗನ್ಧಬಹುಧೂಮಕಮ್ ॥೧೧೨॥

ಪಿಶಾಚಭೂತವೇತಾಲಡಾಕಿನೀಯಕ್ಷಸಂಕುಲಮ್ ।
ಮಹಾಗಣಮಹಾಭೂತರವಕೋಲಾಹಲಾಯುತಮ್ ॥೧೧೩॥

---

೧೧೦. ಶ್ಮಶಾನಕ್ಕೆ ಬಂದ ಶವದ ನಿಮಿತ್ತ ಆರ್ಜನೆಯಾಗುವ ಧನದ ಆರು ಭಾಗಗಳಲ್ಲಿ ಒಂದು ಭಾಗವನ್ನು ರಾಜನಿಗೂ ಮೂರು ಭಾಗಗಳನ್ನು ನನಗೂ ಕೊಟ್ಟು ಉಳಿಯುವ ಎರಡು ಭಾಗಗಳು ಮಾತ್ರ ನಿನಗೆ ವೇತನ-ವಾಗುವುದು.

೧೧೧. ಹೀಗೆ ಚಂಡಾಲನಿಂದ ಆಜ್ಞಪ್ತನಾದ ಹರಿಶ್ಚಂದ್ರನು ಆಗ ವಾರಾಣಸೀ ನಗರದ ದಕ್ಷಿಣಭಾಗದಲ್ಲಿರುವ ಶವಸ್ಥಾನವಾದ ಶ್ಮಶಾನಭೂಮಿಗೆ ಹೋದನು.

೧೧೨. ಆ ಶ್ಮಶಾನಭೂಮಿಯು ದುರ್ವಾಸನೆಯ ಹೊಗೆಯಿಂದ ಆವರಿಸಲ್ಪಟ್ಟಿರುವುದೂ, ಶವಗಳ ತಲೆಬುರುಡೆಗಳಿಂದ ತುಂಬಿರುವುದೂ, ನೂರಾರು ನರಿಗಳಿಂದ ಸೇವಿಸಲ್ಪಟ್ಟಿರುವುದೂ ಮತ್ತು ಘೋರವಾದ ಧ್ವನಿ-ಯಿಂದ ಭಯಂಕರವೂ ಆಗಿತ್ತು.

೧೧೩. ಮತ್ತು ಪಿಶಾಚ, ಭೂತ, ವೇತಾಲ, ಡಾಕಿನೀ, ಯಕ್ಷ, ಮಹಾಗಣ, ಮಹಾಭೂತ ಮುಂತಾದ ದುರ್ಜನಗಳ ಕೋಲಾಹಲಧ್ವನಿಯಿಂದ ತುಂಬಿಕೊಂಡಿತ್ತು.

ಗೃಧ್ರಗೋಮಾಯುಸಂಕೀರ್ಣಂ ಶ್ವಬೃನ್ದಪರಿವಾರಿತಮ್ ।
ಅಸ್ಥಿಸಂಘಾತಸಂಕೀರ್ಣಂ ಮಹಾದುರ್ಗನ್ಧಸಂಕುಲಮ್ ॥೧೧೪॥

ನಾನಾಮೃತಸುಹೃನ್ನಾದರೌದ್ರಕೋಲಾಹಲಾಯುತಮ್ ।
ಹಾ ಪುತ್ರ ಮಿತ್ರ ಹಾ ಬನ್ಧೋ ಭ್ರಾತರ್ವತ್ಸ ಪ್ರಿಯಾದ್ಯ ಮೇ॥೧೧೫॥

ಹಾ ಪತೇ ಭಗಿನಿ ಮಾತರ್ಹಾ ಮಾತುಲ ಪಿತಾಮಹ ।
ಮಾತಾಮಹ ಪಿತಃ ಪೌತ್ರ ಕ್ವ ಗತೋಽಸ್ಯೇಹಿ ಬಾನ್ಧವ ॥೧೧೬॥

ಇತ್ಯೇವಂ ವದತಾಂ ಯತ್ರ ಧ್ವನಿಃ ಸಂಶ್ರೂಯತೇ ಮಹಾನ್ ।
ಯತ್ರ ನೇತ್ರೈರನಿಮಿಷೈಃ ಶವಾ ಭಯಮಿವಾವಿಶನ್ ॥೧೧೭॥

---

೧೧೪. ಹಾಗು ಹದ್ದು, ಗಿಡಗ, ನರಿಗಳಿಂದ ಆಶ್ರಯಿಸಲ್ಪಟ್ಟಿರುವುದೂ, ನಾಯಿಗಳ ಗುಂಪಿನಿಂದ ಕೂಡಿರುವುದೂ, ಎಲುಬುರಾಶಿಗಳಿಂದ ತುಂಬಿಹೋದದ್ದೂ ಮತ್ತು ಅತಿ ದುರ್ವಾಸನೆಯಿಂದ ಅಸಹ್ಯವೂ ಆಗಿತ್ತು.

೧೧೫. ಮತ್ತು ಮರಣಹೊಂದಿದವರ ಆಪ್ತೇಷ್ಟವರ್ಗವು ಬಂದು ದುಃಖದಿಂದ ಅಯ್ಯೋ! ಮಗನೆ! ಅಯ್ಯೋ! ಬಂಧುವೆ! ಸಹೋದರನೆ! ಬಾಲಕನೆ! ನನ್ನ ಪ್ರಿಯನೆ! ಇಂದು ದೂರ ಹೋದೆಯಾ! ಎಂಬೀ ವಿಧದಿಂದ ಕೂಗುವ ಭಯಂಕರ ಕೋಲಾಹಲದಿಂದ ತುಂಬಿತ್ತು.

೧೧೬. ಅಯ್ಯೋ! ಪತಿಯೆ! ಭಗಿನಿಯೆ! ತಾಯಿಯೆ! ಅಯ್ಯೋ! ಮಾತುಲನೆ! ಪಿತಾಮಹನೆ! ಮಾತಾಮಹನೆ! ಜನಕನೆ! ಬಾಂಧವನೆ! ಎಲ್ಲಿಗೆ ಹೋಗಿರುವೆ! ಬೇಗ ಬಾ! ಹೀಗೆಂದು ಕೂಗುವ ಧ್ವನಿಯು ಕೇಳಿಸುತ್ತಿತ್ತು.

೧೧೭. ಯಾವ ಶ್ಮಶಾನದಲ್ಲಿ ಈ ರೀತಿಯಾಗಿ ಕೂಗಿಕೊಳ್ಳುವ ಬಂಧುಜನರ ಶಬ್ದವು ಗಟ್ಟಿಯಾಗಿ ಕೇಳಿಸುತ್ತಿತ್ತೊ ಯಾವ ಶ್ಮಶಾನದಲ್ಲಿ ಬಿದ್ದ, ರೆಪ್ಪೆ ಹೊಡೆಯದ ಶವಗಳು ಆ ಸನ್ನಿವೇಶದಿಂದ ಭಯಪಟ್ಟಂತೆ ತೋರುತ್ತಿದ್ದುವೊ ಅಂತಹ ಶ್ಮಶಾನದಲ್ಲಿ ರಾಜನು ಕಾವಲಾಗಿ ನಿಂತನು.

ನಿಮೀಲಿತೈಶ್ಚ ನಯನೈರ್ಬನ್ಧುಚಿನ್ತಾಪಥೇ ಸ್ಥಿತಾಃ ।
ಜ್ವಲನ್ಮಾಂಸವಸಾಮೇದಶ್ಛಮಚ್ಛಮಿತಸಂಕುಲಮ್ ॥೧೧೮॥

ಅರ್ಧದಗ್ಧಾಃ ಶವಾಃ ಶ್ಯಾಮಾ ವಿಕಸದ್ದನ್ತಪಙ್ಕ್ತಯಃ ।
ಹಸನ್ತ್ಯೇವಾಗ್ನಿಮಧ್ಯಸ್ಥಾಃ ಕಾಯಸ್ಯೇಯಂ ದಶಾ ತ್ವಿತಿ ॥೧೧೯॥

ಅಗ್ನೇಶ್ಚಟಚಟಾಶಬ್ದೋ ವಯಸಾಮಸ್ಥಿಪಙ್ಕ್ತಿಷು ।
ಬಾನ್ಧವಾಕ್ರನ್ದಶಬ್ದಶ್ಚ ಪುಲ್ಕಸೇಷು ಪ್ರಹರ್ಷಜಃ ॥೧೨೦॥

ಗಾಯತಾಂ ಭೂತವೇತಾಲಪಿಶಾಚಗಣರಕ್ಷಸಾಮ್ ।
ಶ್ರೂಯತೇ ಸುಮಹಾನ್ ಘೋರಃ ಕಲ್ಪಾನ್ತ ಇವ ನಿಸ್ವನಃ ॥೧೨೧॥

ಮಹಾಮಹಿಷಕಾರೀಷಗೋಶಕೃದ್ರಾಶಿಸಙ್ಕುಲಮ್ ।
ತದುತ್ಥಭಸ್ಮಕೂಟೈಶ್ಚ ವೃತಂ ಸಾಸ್ಥಿಭಿರುನ್ನತೈಃ ॥೧೨೨॥

---

೧೧೮. ಮತ್ತು ಶ್ಮಶಾನದಲ್ಲಿ ಜ್ವಲಿಸುತ್ತಿದ್ದ ಮಾಂಸ-ವಸಾ-ಮೇದಸ್ಸುಗಳ ಛಮಛಮಶಬ್ದವು ಕೇಳುತ್ತಿತ್ತು ಹಾಗು ಶವಗಳು ಕಣ್ಣುಮುಚ್ಚಿದ್ದನ್ನು ನೋಡಿದರೆ ಅವು ಬಂಧುಗಳನ್ನು ಚಿಂತಿಸುತ್ತಿರುವಂತೆ ಕಾಣುತ್ತಿದ್ದುವು.

೧೧೯. ಚಿತಾಗ್ನಿಯ ಮಧ್ಯದಲ್ಲಿದ್ದ, ಅರ್ಧಸುಟ್ಟು ಕಪ್ಪಾದ, ಮತ್ತು ಪ್ರಕಾಶಿಸುತ್ತಿದ್ದ ದಂತಪಂಕ್ತಿಯಿಂದ ಶವಗಳು "ಕಡೆಯಲ್ಲಿ ದೇಹಕ್ಕೆ ಉಂಟಾಗುವ ದಶೆಯು ಇದೇ" ಎಂದು ನಗುವಂತೆ ಕಾಣುತ್ತಿದ್ದುವು.

೧೨೦. ಅಗ್ನಿಜ್ವಾಲೆಗಳ ಚಟಚಟಶಬ್ದವೂ, ಎಲುಬುಗಳ ಸಾಲಿನಲ್ಲಿ ಪಕ್ಷಿಗಳು ಕುಳಿತು ಮಾಡುವ ಶಬ್ದವೂ, ಬಂಧುಜನರ ವಿಲಾಪಶಬ್ದವೂ ಮತ್ತು ಚಂಡಾಲಜನರಲ್ಲಿ ಹರ್ಷದ ಶಬ್ದವೂ ಎಲ್ಲೆಲ್ಲೂ ಕೇಳಿಸಿತು.

೧೨೧. ಮತ್ತೆ ಹಾಡುತ್ತಿದ್ದ ಭೂತ-ವೇತಾಳ-ಪಿಶಾಚ ಮತ್ತು ರಾಕ್ಷಸ ಇವುಗಳ ಭಯಂಕರವಾದ ಭಾರಿ ಶಬ್ದವು ಪ್ರಳಯಕಾಲದ ಕೋಲಾಹಲದಂತೆ ಕೇಳುತ್ತಿತ್ತು.

೧೨೨. ಹಾಗು ಕೆಲವೆಡೆಗಳಲ್ಲಿ ಭಾರಿಯಾದ ಕೋಣಗಳ ಒಣಸಗಣಿರಾಶಿಯಿಂದಲೂ ಹಸುಗಳ ತೊಪ್ಪೆರಾಶಿಯಿಂದಲೂ ತುಂಬಿಹೋಗಿತ್ತು. ಮತ್ತು ಎಲುಬು-ಮೂಳೆಗಳಿಂದ ಕೂಡಿದ ಎತ್ತರವಾದ ಬೆರಣಿಗಳ ಬೂದಿರಾಶಿಯಿಂದಲೂ ಕೂಡಿತ್ತು.

ನಾನೋಪಹಾರಸ್ರಗ್ದೀಪಕಾಕವಿಕ್ಷೇಪಸಙ್ಕುಲಮ್ ।
ಅನೇಕಶಬ್ದಬಹುಲಂ ಶ್ಮಶಾನಂ ನರಕಾಯತೇ ॥೧೨೩॥

ಸವಹ್ನಿಗರ್ಭೈರಶಿವೈಃ ಶಿವಾರುತೈ-
ರ್ನಿನಾದಿತಂ ಭೀಷಣರಾವಗಹ್ವರಮ್ ।
ಭಯಂ ಭಯಸ್ಯಾಪ್ಯುಪಸಙ್ಗನೈರ್ಭೃಶಂ
ಶ್ಮಶಾನಮಾಕ್ರನ್ದವಿರಾವದಾರುಣಮ್ ॥೧೨೪॥

ಸ ರಾಜಾ ತತ್ರ ಸಂಪ್ರಾಪ್ತೋ ದುಃಖಿತಃ ಶೋಚನೋದ್ಯತಃ ।
ಹಾ ಭೃತ್ಯಾ ಮನ್ತ್ರಿಣೋ ವಿಪ್ರಾಃ ಕ್ವ ತದ್ರಾಜ್ಯಂ ವಿಧೇ ಗತಮ್ ॥೧೨೫॥

ಹಾ ಶೈಬ್ಯೇ ಪುತ್ರ ಹಾ ಬಾಲ ಮಾಂ ತ್ಯಕ್ತ್ವಾ ಮನ್ದಭಾಗ್ಯಕಮ್ ।
ವಿಶ್ವಾಮಿತ್ರಸ್ಯ ದೋಷೇಣ ಗತಾಃ ಕುತ್ರಾಪಿ ತೇ ಮಮ ॥೧೨೬॥

---

೧೨೩. ಅಲ್ಲಲ್ಲಿ ಇಟ್ಟಿದ್ದ ಅನೇಕ ಬಲಿಗಳ ಹೂಮಾಲೆ-ದೀಪಗಳಿಂದಲೂ ಕಾಗೆಗಳು ಚೆದುರಿಹಾಕಿದ ಬಲಿಯ ವಸ್ತುಗಳಿಂದಲೂ ಮತ್ತು ಅನೇಕ ವಿಧವಾದ ಶಬ್ದಗಳಿಂದಲೂ ಕೂಡಿದ ಶ್ಮಶಾನವು ನರಕದಂತೆ ಭಾಸಿಸುತ್ತಿತ್ತು.

೧೨೪. ಬೆಂಕಿಯ ಜ್ವಾಲೆಯನ್ನು ಕಕ್ಕುತ್ತಿದ್ದ ನರಿಗಳ ಅಮಂಗಳ ಶಬ್ದಗಳಿಂದ ತುಂಬಿರುವುದೂ ಭೂತ-ಪಿಶಾಚಗಳ ಭಯಂಕರ ಶಬ್ದದಿಂದ ವ್ಯಾಪಿಸಲ್ಪಟ್ಟಿದ್ದೂ ಮತ್ತು ಬಂಧುಗಳ ಆರ್ತನಾದದಿಂದ ಭಯಂಕರವೂ ಆದ ಶ್ಮಶಾನವು ಭಯಕ್ಕೂ ಭಯವನ್ನು ಕೊಡುವಂತೆ ಇತ್ತು.

೧೨೫. ಬಹಳ ದುಃಖಗೊಂಡ ಆ ರಾಜನು ಅಂತಹ ಶ್ಮಶಾನಕ್ಕೆ ಬಂದು ಶೋಕಿಸಲು ಆರಂಭಿಸಿದನು. ಹತವಿಧಿಯೆ! ಭೃತ್ಯರು, ಮಂತ್ರಿಗಳು ಮತ್ತು ವಿಪ್ರರು ಇವರುಗಳಿಂದ ಕೂಡಿದ ಆ ರಾಜ್ಯವು ಎಲ್ಲಿ ಹೋಯಿತು! ಅಯ್ಯೋ!

೧೨೬. ಅಯ್ಯೋ! ಪ್ರಿಯೆಯಾದ ಶೈಬ್ಯೆಯೆ! ಅಯ್ಯೋ! ಬಾಲಕನಾದ ಪುತ್ರನೆ! ವಿಶ್ವಾಮಿತ್ರಮುನಿಯು ಕೊಟ್ಟ ತೊಂದರೆಯಿಂದ ನಿರ್ಭಾಗ್ಯನಾದ ನನ್ನನ್ನು ಬಿಟ್ಟು ನೀವು ಎಲ್ಲಿಗೋ ಹೋದಿರಲ್ಲವೆ?

ಇತ್ಯೇವಂ ಚಿನ್ತಯಂಸ್ತತ್ರ ಚಣ್ಡಾಲೋಕ್ತಂ ಪುನಃ ಪುನಃ ।
ಮಲಿನೋ ರೂಕ್ಷಸರ್ವಾಙ್ಗಃ ಕೇಶವಾನ್ ಗನ್ಧವಾನ್ ಧ್ವಜೀ॥೧೨೭॥

ಲಗುಡೀ ಕಾಲಕಲ್ಪಶ್ಚ ಧಾವಂಶ್ಚಾಪಿ ತತಸ್ತತಃ ।
ಅಸ್ಮಿನ್ ಶವ ಇದಂ ಮೂಲ್ಯಂ ಪ್ರಾಪ್ತಂ ಪ್ರಾಪ್ಸ್ಯಾಮಿ ಚಾಪ್ಯುತ ॥೧೨೮॥

ಇದಂ ಮಮ ಇದಂ ರಾಜ್ಞೋ ಮುಖ್ಯಚಣ್ಡಾಲಕೇ ತ್ವಿದಮ್ ।
ಇತಿ ಧಾವನ್ದಿಶೋ ರಾಜಾ ಜೀವನ್ ಯೋನ್ಯನ್ತರಂ ಗತಃ ॥೧೨೯॥

ಜೀರ್ಣಕರ್ಪಟಸುಗ್ರನ್ಥಿಕೃತಕನ್ಥಾಪರಿಗ್ರಹಃ ।
ಚಿತಾಭಸ್ಮರಜೋಲಿಪ್ತಮುಖಬಾಹೂದರಾಙ್ಘ್ರಿಕಃ ॥೧೩೦॥

---

೧೨೭. ಮಲಿನನಾದವನೂ, ಒರಟಾದ ಎಲ್ಲ ಗಾತ್ರವುಳ್ಳವನೂ, ದೀರ್ಘವಾದ ಕೇಶಗಳಿಂದ ಕೂಡಿದವನೂ, ದುರ್ಗಂಧವುಳ್ಳವನೂ ಮತ್ತು ಚಂಡಾಲಧ್ವಜಾಂಕಿತನೂ ಆದ ರಾಜನು ಈ ವಿಧವಾಗಿ ಮತ್ತೆ ಮತ್ತೆ ಚಿಂತಿಸುತ್ತ ಚಂಡಾಲನ ಆಜ್ಞೆಯನ್ನು ನೆರವೇರಿಸುತ್ತಿದ್ದನು.

೧೨೮. ಕೈಯ್ಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಅಂತಕನಂತೆ ಕ್ರೂರನಾಗಿ ಈ ಶವದ ನಿಮಿತ್ತವಾಗಿ ಇಷ್ಟು ಮೂಲ್ಯವು ಬಂದಿತು. ಇದನ್ನು ತೆಗೆದುಕೊಳ್ಳುವೆನು ಎಂದು ಹೇಳಿಕೊಳ್ಳುತ್ತ ಇಲ್ಲಿಂದಲ್ಲಿಗೆ ಓಡುತ್ತಿದ್ದನು.

೧೨೯. ಇದು ನನ್ನ ಭಾಗವು. ಇದು ರಾಜನಿಗೆ ಕೊಡಬೇಕಾದ ಭಾಗವು. ಮುಖ್ಯ ಚಂಡಾಲನ ಭಾಗವು ಇದು—ಎಂದು ಹೇಳಿ ದಿಕ್ಕು ದಿಕ್ಕುಗಳಿಗೆ ಓಡುತ್ತಿದ್ದ ರಾಜನು ಜೀವಂತನಾಗಿಯೇ ಇದ್ದು ಬೇರೆ ಜಾತಿಯನ್ನು ಹೊಂದಿ-ಕೊಂಡನು.

೧೩೦. ಜೀರ್ಣವಾಗಿ ಅಲ್ಲಲ್ಲಿ ಗಂಟುಹಾಕಿದ ಛಿಂದಿಬಟ್ಟೆಗಳ ಮೂಟೆಯನ್ನು ಕಟ್ಟಿಕೊಂಡವನೂ, ಚಿತಾಭಸ್ಮಧೂಳಿಯಿಂದ ವ್ಯಾಪಿಸಲ್ಪಟ್ಟ ಮುಖ-ಬಾಹು-ಹೊಟ್ಟೆ-ಕಾಲುಗಳುಳ್ಳವನೂ ಆಗಿದ್ದನು.

ನಾನಾಮೇದೋವಸಾಮಜ್ಜಾಲಿಪ್ತಪಾಣ್ಯಂಗುಲಿಃ ಶ್ವಸನ್ ।
ನಾನಾಶವೌದನಕೃತಾಹಾರತೃಪ್ತಿಪರಾಯಣಃ ॥೧೩೧॥

ತದೀಯಮಾಲ್ಯಸಂಶ್ಲೇಷಕೃತಮಸ್ತಕಮಣ್ಡನಃ ।
ನ ರಾತ್ರೌ ನ ದಿವಾ ಶೇತೇ ಹಾ ಹೇತಿ ಪ್ರವದನ್ಮುಹುಃ ॥೧೩೨॥

ಏವಂ ದ್ವಾದಶ ಮಾಸಾಸ್ತು ನೀತಾಃ ಶತಸಮೋಪಮಾಃ ॥೧೩೩॥

ಸ ಕದಾಚಿನ್ನೃಪಶ್ರೇಷ್ಠಃ ಶ್ರಾನ್ತೋ ಬನ್ಧುವಿಯೋಗವಾನ್ ।
ನಿದ್ರಾಭಿಭೂತೋ ರೂಕ್ಷಾಙ್ಗೋ ನಿಶ್ಚೇಷ್ಟಃ ಸುಪ್ತ ಏವ ಚ॥೧೩೪॥

ತತ್ರಾಪಿ ಶಯನೀಯೇ ಸ ದೃಷ್ಟವಾನದ್ಭುತಂ ಮಹತ್ ।
ಶ್ಮಶಾನಾಭ್ಯಾಶಯೋಗೇನ ದೈವಸ್ಯ ಬಲವತ್ತಯಾ ॥೧೩೫॥

---

೧೩೧. ಅನೇಕವಿಧವಾದ ಮೇದಸ್ಸು-ವಸಾ-ಮಜ್ಜಾ ಮುಂತಾದುವುಗಳಿಂದ ಲೇಪಿಸಲ್ಪಟ್ಟ ಕೈಬೆರಳುಗಳುಳ್ಳವನಾಗಿ ಉಸಿರುಬಿಡುತ್ತ ಅನೇಕ ಶವಸನ್ನಿಧಿಯಲ್ಲಿ ಹಾಕಿದ್ದ ಬಲಿಯ ಅನ್ನವನ್ನು ಭುಂಜಿಸಿ ತೃಪ್ತಿಹೊಂದುತ್ತಿದ್ದನು.

೧೩೨. ಮತ್ತು ಆ ಶವಗಳ ಹೂಮಾಲೆಗಳನ್ನು ಧರಿಸಿ ಶಿರವನ್ನು ಅಲಂಕರಿಸಿಕೊಂಡು ಅಯ್ಯೋ! ಅಯ್ಯೋ! ಎಂದು ಕೂಗಿಕೊಳ್ಳುತ್ತ ಹಗಲು-ರಾತ್ರಿಗಳನ್ನು ನಿದ್ರೆಯಿಲ್ಲದೆ ಕಳೆಯುತ್ತಿದ್ದನು.

೧೩೩. ಹೀಗೆ ಶ್ಮಶಾನವಾಸ ಮಾಡುತ್ತ ಹರಿಶ್ಚಂದ್ರ ರಾಜನಿಗೆ ಹನ್ನೆರಡು ತಿಂಗಳು ಕಳೆದುವು. ಆ ಒಂದು ವರ್ಷವು ದುಃಖ ಪರಂಪರೆಗಳಿಂದ ಒಂದುನೂರು ವರ್ಷಗಳಂತೆ ದೀರ್ಘವಾಗಿ ಭಾಸಿಸುತ್ತಿತ್ತು.

೧೩೪. ಹೀಗಿರಲು ಒಂದು ಸಮಯದಲ್ಲಿ ಬಂಧುಜನರಿಂದ ವಿಯುಕ್ತನೂ, ಶ್ರಮಿಸಿದವನೂ, ಕಠಿನವಾದ ದೇಹವುಳ್ಳವನೂ ಆದ ರಾಜೋತ್ತಮನು ಮಲಗಿಕೊಂಡು ನಿದ್ರೆಬಂದವನಾದನು.

೧೩೫. ಹಾಗೆಯೆ ಹಾಸಿಗೆಯಲ್ಲಿ ಮಲಗಿದ್ದ ಆ ರಾಜನು ಶ್ಮಶಾನಸನ್ನಿಧಿಯಲ್ಲಿ ವಾಸಮಾಡಿದ ದೋಷದಿಂದಲೂ ದೈವದ ಪ್ರಾಬಲ್ಯದಿಂದಲೂ ಒಂದು ದೊಡ್ಡ ಅದ್ಭುತವನ್ನು ಕಂಡನು.

ಅನ್ಯದೇಹೇ ನ ದತ್ತ್ವಾ ತು ಗುರವೇ ಗುರುದಕ್ಷಿಣಾಮ್ ।
ತದಾ ದ್ವಾದಶ ವರ್ಷಾಣಿ ದುಃಖದಾನಾತ್ತು ನಿಷ್ಕೃತಿಃ ॥೧೩೬॥

ಆತ್ಮಾನಂ ಸ ದದರ್ಶಾಥ ಪುಲ್ಕಸೀಗರ್ಭಸಂಭವಮ್ ।
ತತ್ರಸ್ಥಶ್ಚಾಪ್ಯಸೌ ರಾಜಾ ಸೋಽಚಿನ್ತಯದಿದಂ ತದಾ ॥೧೩೭॥

ಇತೋ ನಿಷ್ಕ್ರಾನ್ತಮಾತ್ರೋ ಹಿ ದಾನಧರ್ಮಂ ಕರೋಮ್ಯಹಮ್
॥೧೩೮॥

ಅನನ್ತರಂ ಸ ಜಾತಸ್ತು ತದಾ ಪುಲ್ಕಸಬಾಲಕಃ ।
ಶ್ಮಶಾನಮೃತಸಂಸ್ಕಾರಕರಣೇಷು ಸದೋದ್ಯತಃ ॥೧೩೯॥

ಪ್ರಾಪ್ತೇ ತು ಸಪ್ತಮೇ ವರ್ಷೇ ಶ್ಮಶಾನೇಽಥ ಮೃತೋ ದ್ವಿಜಃ ।
ಆನೀತೋ ಬನ್ಧುಭಿರ್ಹ್ಯಸ್ತೈನ ತತ್ರಾಧನೋ ಗುಣೀ ॥೧೪೦॥

---

೧೩೬. ಬೇರೊಂದು ಜನ್ಮದಲ್ಲಿದ್ದ ತಾನು ಗುರುವಿಗೆ ಗುರುದಕ್ಷಿಣೆಯನ್ನು ಕೊಡದೆ ಆ ಪಾತಕದಿಂದ ಹನ್ನೆರಡು ವರ್ಷಗಳ ವರೆಗೆ ದುಖಪರಂಪರೆಯನ್ನು ಅನುಭವಿಸಿ ಪಾತಕವನ್ನು ಕಳೆದುಕೊಂಡ ಸ್ವಪ್ನವನ್ನು ನೋಡಿದನು.

೧೩೭. ಆ ಪ್ರಸಂಗದಲ್ಲಿ ಹರಿಶ್ಚಂದ್ರನು ತನ್ನನ್ನು ಚಂಡಾಲಸ್ತ್ರೀಯ ಗರ್ಭದಲ್ಲಿರುವಂತೆ ಕಂಡನು. ಆಗ ಗರ್ಭಸ್ಥನಾಗಿದ್ದ ಈ ರಾಜನು ಈ ಬಗೆಯಾಗಿ ಯೋಚಿಸಿದನು.

೧೩೮. ಈ ಗರ್ಭದಿಂದ ಹೊರಕ್ಕೆ ಬಿದ್ದು ಜನ್ಮವೆತ್ತಿದ ಕೂಡಲೆ ಮತ್ತೆ ಇಂತಹ ಹೀನಜನ್ಮವು ಬರದಂತೆ ಅನೇಕ ದಾನ-ಧರ್ಮಗಳನ್ನು ಮಾಡುವೆನು.

೧೩೯. ತರುವಾಯ ಹರಿಶ್ಚಂದ್ರನು ಚಂಡಾಲಬಾಲಕನಾಗಿ ಜನ್ಮವೆತ್ತಿದನು. ಮತ್ತು ಮೃತರಿಗೆ ಶ್ಮಶಾನಭೂಮಿಯಲ್ಲಿ ನಡೆಯುವ ಸಂಸ್ಕಾರಗಳನ್ನು ಮಾಡುವುದರಲ್ಲಿ ಯಾವಾಗಲೂ ಆಸಕ್ತಿಯಿಂದ ವರ್ತಿಸಿದನು.

೧೪೦. ಆ ಬಾಲಕನಿಗೆ ಏಳನೆಯ ವರ್ಷವು ನಡೆಯುತ್ತಿರಲು ಒಂದು ದಿನ ನಿರ್ಧನನೂ ಗುಣವಂತನೂ ಆದ ಒಬ್ಬ ಮೃತನಾದ ದ್ವಿಜನನ್ನು ಬಂಧುಗಳು ಶ್ಮಶಾನಕ್ಕೆ ತಂದಿರುವುದನ್ನು ಬಾಲಕನು ನೋಡಿದನು.

ಮೂಲ್ಯಾರ್ಥಿನಾ ತು ತೇನಾಪಿ ಪರಿಭೂತಾಸ್ತು ಬ್ರಾಹ್ಮಣಾಃ ।
ಊಚುಸ್ತೇ ಬ್ರಾಹ್ಮಣಾಸ್ತತ್ರ ವಿಶ್ವಾಮಿತ್ರಸ್ಯ ಚೇಷ್ಟಿತಮ್ ॥೧೪೧॥

ಪಾಪಿಷ್ಠ ಮಾಶುಭಂ ಕರ್ಮ ಕುರು ತ್ವಂ ಪಾಪಕಾರಕ ॥೧೪೨॥

ಹರಿಶ್ಚನ್ದ್ರಃ ಪುರಾ ರಾಜಾ ವಿಶ್ವಾಮಿತ್ರೇಣ ಪುಲ್ಕಸಃ ।
ಕೃತಃ ಪುಣ್ಯವಿನಾಶೇನ ಬ್ರಾಹ್ಮಣಸ್ವಾಪನಾಶನಾತ್ ॥೧೪೩॥

ಯದಾ ನ ಕ್ಷಮತೇ ತೇಷಾಂ ತೈಃ ಸ ಶಪ್ತೋ ರುಷಾ ತದಾ ।
ಗಚ್ಛ ತ್ವಂ ನರಕಂ ಘೋರಮಧುನೈವ ನರಾಧಮ ॥೧೪೪॥

ಇತ್ಯುಕ್ತಮಾತ್ರೇ ವಚನೇ ಸ್ವಪ್ನಸ್ಥಃ ಸ ನೃಪಸ್ತದಾ ।
ಅಪಶ್ಯದ್ಯಮದೂತಾನ್ವೈ ಪಾಶಹಸ್ತಾನ್ ಭಯಾವಹಾನ್ ॥೧೪೫॥

---

೧೪೧. ಹೆಚ್ಚು ಶವಮೂಲ್ಯವನ್ನು ಬಯಸಿದ ಆ ಬಾಲಕನು ದ್ವಿಜರನ್ನು ಅವಮಾನಪಡಿಸಿದನು. ಆಗ ಆ ದ್ವಿಜರು ವಿಶ್ವಾಮಿತ್ರಮುನಿಯ ನಿಗ್ರಹಪ್ರಭಾವವನ್ನು ಹೇಳಿದರು.

೧೪೨. ಪಾಪರಾಶಿಯಿಂದ ಹೀನಯೋನಿಯಲ್ಲಿ ಜನಿಸಿದವನೆ! ಪಾಪವನ್ನು ಆಚರಿಸುವವನೆ! ಇನ್ನಾದರೂ ನೀನು ಪಾಪಕರ್ಮವನ್ನು ಮಾಡಬೇಡ.

೧೪೩. ಪೂರ್ವಕಾಲದಲ್ಲಿ ಪುಣ್ಯಶೀಲನಾದ ಹರಿಶ್ಚಂದ್ರರಾಜನು ಬ್ರಾಹ್ಮಣಸ್ವತ್ತನ್ನು ಅಪಹರಿಸಿ ಪುಣ್ಯಹೀನನಾಗಿ ವಿಶ್ವಾಮಿತ್ರಮುನಿಯಿಂದ ಚಂಡಾಲನಾಗಿ ಮಾಡಲ್ಪಟ್ಟನು.

೧೪೪. ದ್ವಿಜರು ಎಷ್ಟು ಹೇಳಿದರೂ ಚಂಡಾಲಬಾಲಕನು ಹಠಹಿಡಿಯಲು ದ್ವಿಜರು ಕೋಪದಿಂದ "ನರಾಧಮನೆ! ನೀನು ಈಗಲೆ ಘೋರ ನರಕಕ್ಕೆ ಹೋಗು" ಎಂದು ಶಪಿಸಿದರು.

೧೪೫. ದ್ವಿಜರು ಶಾಪವನ್ನು ಕೊಡುವಷ್ಟರಲ್ಲಿ ಆಗ ಸ್ವಪ್ನಾವಸ್ಥೆಯಲ್ಲಿದ್ದ ರಾಜನು ಪಾಶವನ್ನು ಕೈಗಳಲ್ಲಿ ಹಿಡಿದುಕೊಂಡಿರುವ ಭಯಂಕರರಾದ ಯಮದೂತರನ್ನು ಕಂಡನು.

ತೈಃ ಸಂಗೃಹೀತಮಾತ್ಮಾನಂ ನೀಯಮಾನಂ ತದಾ ಬಲಾತ್ ।
ಪಶ್ಯತಿ ಸ್ಮ ಭೃಶಂ ಖಿನ್ನೋ ಹಾ ಮಾತಃ ಪಿತರದ್ಯ ಮೇ ॥೧೪೬॥

ಏವಂ ವಾದೀ ಸ ನರಕೇ ತೈಲದ್ರೋಣ್ಯಾಂ ನಿಪಾತಿತಃ ।
ಕ್ರಕಚೈಃ ಪಾಟ್ಯಮಾನಸ್ತು ಕ್ಷುರಧಾರಾಭಿರಪ್ಯಧಃ ॥೧೪೭॥

ಅನ್ಧೇ ತಮಸಿ ದುಃಖಾರ್ತಃ ಪೂಯಶೋಣಿತಭೋಜನಃ ।
ಸಪ್ತವರ್ಷಮೃತಾತ್ಮಾನಂ ಪುಲ್ಕಸತ್ವೇ ದದರ್ಶ ಹ ॥೧೪೮॥

ದಿನಂ ದಿನಂ ತು ನರಕೇ ದಹ್ಯತೇ ಪಚ್ಯತೇಽನ್ಯತಃ ।
ಖಿದ್ಯತೇ ಕ್ಷೋಭ್ಯತೇಽನ್ಯತ್ರ ಮಾರ್ಯತೇ ಪಾಟ್ಯತೇಽನ್ಯತಃ ॥೧೪೯॥

---

೧೪೬. ಆಗ ಆ ಯಮದೂತರಿಂದ ಬಲಾತ್ಕಾರವಾಗಿ ಕಟ್ಟಿ ಎಳೆಯಲ್ಪಡುತ್ತಿದ್ದ ತನ್ನನ್ನು ನೋಡಿ ರಾಜನು ಬಹಳ ಖೇದಹೊಂದಿದವನಾಗಿ "ಅಯ್ಯೋ! ತಂದೆ, ತಾಯಿ, ನನಗೆ ಈ ದುರ್ದಶೆಯು ಬಂತೆ! ಎಂದು ಕೂಗಿದನು.

೧೪೭. ಹೀಗೆ ಕೂಗುತ್ತಿರುವಷ್ಟರಲ್ಲಿ ಯಮದೂತರು ಇವನನ್ನು ಕಾದೆಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿದರು. ಮತ್ತು ಒಂದೆಡೆಯಲ್ಲಿ ಗರಗಸದಿಂದ ಕತ್ತರಿಸಿದರು.

೧೪೮. ಮತ್ತು ಕಗ್ಗತ್ತಲಿನ ನರಕದಲ್ಲಿ ಕೆಳಕ್ಕೆ ಕೆಡವಿ ರಕ್ತ-ಕೀವುಗಳನ್ನು ಕುಡಿಸಿದರು. ಹೀಗೆ ಚಂಡಾಲಜನ್ಮದಲ್ಲಿ ಏಳು ವರ್ಷಗಳ ವರೆಗೆ ಬದುಕಿದ್ದು ಮೃತನಾದಂತೆ ತನ್ನನ್ನು ನೋಡಿದನು.

೧೪೯. ಅವನು ಪ್ರತಿದಿನವೂ ಒಂದು ಕಡೆಯಲ್ಲಿ ಸುಡಲ್ಪಡುವನು; ಮತ್ತೊಂದುಕಡೆ ಬೇಯಿಸಲ್ಪಡುವನು; ಇನ್ನೊಂದುಕಡೆ ಖೇದಗೊಳಿಸಲ್ಪಡುವನು. ಬೇರೊಂದು ಕಡೆ ಕ್ಷೋಭಗೊಳಿಸಿ ಹೊಡೆಯಲ್ಪಡುವನು; ಕಡೆಗೆ ಸೀಳಿ ಕೊಲ್ಲಲ್ಪಡುವನು. ಹೀಗೆ ನಾನಾ ಯಾತನೆಗಳನ್ನು ಕಂಡನು.

ಕ್ವಾಪಿ ಯರ್ಣತೇ ದೀಪ್ಯತೇಽನ್ಯತ್ರ ಶೀತವಾತಾಹತೋಽನ್ಯತಃ ।
ಏಕಾದಿನಂ ವರ್ಷಶತಪ್ರಮಾಣಂ ನರಕೇಽಭವತ್ ॥೧೫೦॥

ತಥಾ ವರ್ಷಶತಂ ತತ್ರ ಶ್ರಾವಿತಂ ನರಕೇ ಭಟೈಃ ॥೧೫೧॥

ತತೋ ನಿಪಾತಿತೋ ಭೂಮೌ ವಿಷ್ಠಾಶೀ ಶ್ವಾ ವ್ಯಜಾಯತ ।
ವಾನ್ತಾಶೀ ಶೀತದಗ್ಧಶ್ಚ ಮಾಸಮಾತ್ರೇ ಮೃತೋಽಪಿ ಸಃ ॥೧೫೨॥

ಅಥಾಪಶ್ಯತ್ಪರಂ ದೇಹಂ ಹಸ್ತಿನಂ ವಾನರಂ ಪಶುಮ್ ।
ಛಾಗಂ ಬಿಡಾಲಂ ಕಜ್ಕಂ ಚ ಗಾಮವಿಂ ಪಕ್ಷಿಣಂ ಕ್ರಿಮಿಮ್ ॥೧೫೩॥

ಮತ್ಸ್ಯಂ ಕೂರ್ಮಂ ವರಾಹಂ ಚ ಶ್ವಾವಿಧಂ ಕುಕ್ಕುಟಂ ಶುಕಮ್ ।
ಶಾರಿಕಾಂ ಸ್ಥಾವರಾಂಶ್ಚೈವ ಸರ್ಪಮನ್ಯಾಂಶ್ಚ ದೇಹಿನಃ ॥೧೫೪॥

---

೧೫೦. ಹಾಗು ಒಂದೆಡೆಯಲ್ಲಿ ಉರಿಸಲ್ಪಡುವನು. ಇಂತಹ ಯಾತನೆಗಳಲ್ಲಿ ಒಂದು ದಿನವು ಕೂಡ ಒಂದುನೂರು ವರ್ಷ ಪ್ರಮಾಣದಂತೆ ಆಯಿತು.

೧೫೧. ಹೀಗೆ ಯಾತನೆಯನ್ನು ಕೊಡುತ್ತಿದ್ದ ಭಟರು " ಒಂದುನೂರು ವರ್ಷಗಳ ವರೆಗೆ ಯಾತನೆಯನ್ನು ಅನುಭವಿಸು " ಎಂದು ಹೇಳಿದಂತೆ ಕೇಳಿದನು.

೧೫೨. ಹಾಗೆ ನರಕದಲ್ಲಿ ನೂರು ವರ್ಷಗಳ ಯಾತನೆಯನ್ನು ಅನುಭವಿಸಿದ ತರುವಾಯ ಅಲ್ಲಿಂದ ಮಧ್ಯಮ ಲೋಕಕ್ಕೆ ತಳ್ಳಲ್ಪಟ್ಟವನಾಗಿ ಮಲ-ಮೂತ್ರ-ವಾನ್ತಿ ಮುಂತಾದುದನ್ನು ಭುಂಜಿಸುವ ನಾಯಿಯಾಗಿ ಜನಿಸಿ ಒಂದು ತಿಂಗಳೊಳಗೆ ಶೀತಬಾಧೆಯಿಂದ ಸತ್ತುಹೋಯಿತು.

೧೫೩. ತರುವಾಯ ಕತ್ತೆ, ಆನೆ, ಕೋತಿ, ಆಡು, ಬೆಕ್ಕು, ಹಸು, ಕುರಿ ಮುಂತಾದ ಪಶುಗಳ ಜನ್ಮವನ್ನೂ ರಣಹದ್ದು ಮುಂತಾದ ಪಕ್ಷಿಜನ್ಮವನ್ನೂ ಎತ್ತಿ ಆಯಾಯ ದೇಹದಿಂದ ಸುಖ-ದುಃಖ-ಭೋಗವನ್ನು ಕಂಡನು.

೧೫೪. ಹಾಗು ಮೀನು, ಆಮೆ, ಹಂದಿ, ಮುಳ್ಳುಹಂದಿ, ಕೋಳಿ, ಗಿಣಿ, ಶಾರಿಕೆ, ಗಿಡ-ಮರ, ಮತ್ತು ಇತರ ಜಾತಿಯ ಅನೇಕ ಪ್ರಾಣಿಜನ್ಮವನ್ನು ಎತ್ತಿದಂತೆ ಭಾಸವಾಯಿತು.

ದಿವಸೆ ದಿವಸೇ ಜನ್ಮ ಪ್ರಾಣಿನಃ ಪ್ರಾಣಿನಸ್ತದಾ ।
ಅಪಶ್ಯದ್ದುಃಖಸನ್ತಪ್ತೋ ದಿನಂ ವರ್ಷಶತಂ ತಥಾ ॥೧೫೫॥

ಏವಂ ವರ್ಷಶತಂ ಪೂರ್ಣಂ ಗತಂ ತತ್ರ ಕುಯೋನಿಷು ।
ಅಪಶ್ಯಚ್ಚ ಕದಾಚಿತ್ಸ ರಾಜಾ ತತ್ಸ್ವ ಕುಲೋದ್ಭವಮ್ ॥೧೫೬॥

ತತ್ರ ಸ್ಥಿತಸ್ಯ ತಸ್ಯಾಪಿ ರಾಜ್ಯಂ ದ್ಯೂತೇನ ಹಾರಿತಮ್ ।
ಭಾರ್ಯಾ ಹೃತಾ ಚ ಪುತ್ರಶ್ಚ ಸ ಚೈಕಾಕೀ ವನಂ ಗತಃ ॥೧೫೭॥

ತತ್ರಾಪಶ್ಯತ್ಸ ಸಿಹ್ಮಂ ವೈ ವ್ಯಾದಿತಾಸ್ಯಂ ಭಯಾವಹಮ್ ।
ಬಿಭಕ್ಷಯಿಷುಮಾಯಾನ್ತಂ ಶರಭೇಣ ಸಮನ್ವಿತಮ್ ॥೧೫೮॥

---

೧೫೫. ರಾಜನು ಒಂದೊಂದು ದಿನದಲ್ಲಿಯೂ ಒಂದೊಂದುವಿಧದ ಪ್ರಾಣಿಯಾಗಿ ಜನಿಸಿದಂತೆ ಅನೇಕ ಜನ್ಮಗಳನ್ನು ಕಂಡನು. ಮತ್ತು ದುಃಖದಿಂದ ತಪಿಸಿ ಒಂದೊಂದು ದಿನವನ್ನು ನೂರಾರು ವರ್ಷಗಳಂತೆ ಅನುಭವಿಸಿದನು.

೧೫೬. ಹೀಗೆ ಕೆಟ್ಟಯೋನಿಗಳಲ್ಲಿ ಜನ್ಮವೆತ್ತಿದಂತೆ ಸ್ವಪ್ನವನ್ನು ಕಾಣುತ್ತ ಒಂದುನೂರು ವರ್ಷಗಳು ಕಳೆದಂತೆ ಭಾಸವಾಯಿತು. ಕಡೆಯಲ್ಲಿ ಅವನು ತನ್ನ ವಂಶದಲ್ಲಿ ಜನಿಸಿದಂತೆ ಕಂಡನು.

೧೫೭. ಸ್ವಪ್ನಾವಸ್ಥೆಯಲ್ಲಿ ತನ್ನ ವಂಶದಲ್ಲಿ ಜನಿಸಿದಂತೆ ತೋರಿದಾಗಲೂ ಅವನ ರಾಜ್ಯವು ದ್ಯೂತದಲ್ಲಿ ಪಣವಾಗಿಟ್ಟು ಕಳೆದುಹೋಯಿತು. ಮತ್ತು ಪತ್ನೀ-ಪುತ್ರರು ಅಪಹೃತರಾದರು. ಕಡೆಯಲ್ಲಿ ಏಕಾಕಿಯಾಗಿ ತಾನು ವನಕ್ಕೆ ಹೋದನು.

೧೫೮. ಕಾಡಿನಲ್ಲಿ ಬಾಯಿಯನ್ನು ತೆರೆದಿರುವ, ಭಯಂಕರವಾದ ಮತ್ತು ಶರಭಮೃಗದಿಂದ ಕೂಡಿರುವ ಒಂದು ಸಿಹ್ಮವು ತನ್ನನ್ನು ತಿನ್ನಲು ಬರುತ್ತಿರುವಂತೆ ಕಂಡನು.

ಪುನಶ್ಚ ಭಕ್ಷಿತಃ ಸೋಽಪಿ ಭಾರ್ಯಾಂ ಶೋಚಿತುಮುದ್ಯತಃ ।
ಹಾ ಶೈಬ್ಯೇ ಕ್ವ ಗತಾಸ್ಯದ್ಯ ಮಾಮಿಹಾಪಾಸ್ಯ ದುಃಖಿತಮ್ ॥೧೫೯॥

ಅಪಶ್ಯತ್ಪುನರೇವಾಪಿ ಭಾರ್ಯಾಂ ಸ್ವಾಂ ಹತಪುತ್ರಕಾಮ್ ॥೧೬೦॥

ತ್ರಾಯಸ್ವ ತ್ವಂ ಹರಿಶ್ಚನ್ದ್ರ ಕಿಂ ದ್ಯೂತೇನ ತವ ಪ್ರಭೋ ।
ಪುತ್ರಸ್ತೇ ಶೋಚ್ಯತಾಂ ಪ್ರಾಪ್ತೋ ಭಾರ್ಯಯಾ ಶೈಬ್ಯಯಾ ಸಹ ॥೧೬೧॥

ಸ ನಾಪಶ್ಯತ್ಪುನರಪಿ ಧಾವಮಾನಃ ಪುನಃ ಪುನಃ ।
ಅಥಾಪಶ್ಯತ್ಪುನರಪಿ ಸ್ವರ್ಗಸ್ಥಃ ಸ ನರಾಧಿಪಃ ॥೧೬೨॥

---

೧೫೯. ಮತ್ತೆ ಸಿಹ್ಮದಿಂದ ಹೊಡೆದು ತಿನ್ನಲ್ಪಟ್ಟವನಾಗಿ ಆ ಸಮಯದಲ್ಲಿ ಭಾರ್ಯೆಯನ್ನು ನೆನಸಿಕೊಂಡು ಶೋಕಪಟ್ಟನು. "ಅಯ್ಯೋ! ಪ್ರಿಯೆಯಾದ ಶೈಬ್ಯೆಯೆ! ದುಃಖಿತನಾದ ನನ್ನನ್ನು ತ್ಯಜಿಸಿ ನೀನು ಈಗ ಎಲ್ಲಿಗೆ ಹೋದೆ"? ಎಂದು ಪ್ರಲಪಿಸಿದನು.

೧೬೦. ಮತ್ತೆ ಪುತ್ರನು ಮೃತಿಹೊಂದಿ ಪುತ್ರಶೋಕದಿಂದ ಸಂತಪ್ತಳಾದ ತನ್ನ ಪತ್ನಿಯನ್ನು ನೋಡಿದನು. ಮತ್ತು ಈರೀತಿಯಾಗಿ ಹೇಳುತ್ತಿದ್ದಂತೆ ಕೇಳಿದನು.

೧೬೧. ಪ್ರಭುವಾದ ಹರಿಶ್ಚಂದ್ರನೆ! ನಮ್ಮನ್ನು ರಕ್ಷಿಸು; ನಿನಗೆ ದ್ಯೂತಕ್ರೀಡೆಯು ಏಕೆಬೇಕು? ನಿನ್ನ ಭಾರ್ಯೆಯಾದ ಶೈಬ್ಯೆಯೊಂದಿಗೆ ಪುತ್ರನು ಶೋಚನೀಯವಾದ ಅವಸ್ಥೆಯನ್ನು ಹೊಂದಿರುವನು.

೧೬೨. ಹಾಗೆಯೆ ಮತ್ತೊಮ್ಮೆ ಆ ರಾಜನು ಓಡಿಹೋದರೂ ಪತ್ನಿಯನ್ನು ಕಾಣಲಿಲ್ಲ. ಕ್ಷಣಮಾತ್ರದಲ್ಲಿ ತಾನು ಸ್ವರ್ಗಸ್ಥನಾಗಿದ್ದಂತೆ ಕಂಡು ದುರವಸ್ಥೆಗೆ ಈಡಾದ ಪತ್ನಿಯನ್ನು ಕಂಡನು.

ನೀಯತೇ ಮುಕ್ತಕೇಶೀ ಸಾ ದೀನಾ ವಿವಸನಾ ಬಲಾತ್ ।
ಹಾಹಾವಾಕ್ಯಂ ಪ್ರಮುಞ್ಚನ್ತೀ ತ್ರಾಯಸ್ವೇತ್ಯಸಕೃತ್ಸ್ವನಾ ॥೧೬೩॥

ಅಥಾಪಶ್ಯತ್ಸ್ವನಸ್ತತ್ರ ಧರ್ಮರಾಜಸ್ಯ ಶಾಸನಾತ್ ।
ಆಕ್ರನ್ದನ್ತ್ಯನ್ತರಿಕ್ಷಸ್ಥಾ ಆಗಚ್ಛೇಹ ನರಾಧಿಪ ॥೧೬೪॥

ವಿಶ್ವಾಮಿತ್ರೇಣ ವಿಜ್ಞಪ್ತೋ ಯಮೋ ರಾಜಂಸ್ತವಾರ್ಥತಃ ।
ಇತ್ಯುಕ್ತ್ವಾ ಸರ್ಪಪಾಶೈಸ್ತು ನೀಯತೇ ಬಲವದ್ಭಿಭುಃ ॥೧೬೫॥

ಶ್ರಾದ್ಧದೇವೇನ ಕಥಿತಂ ವಿಶ್ವಾಮಿತ್ರಸ್ಯ ಚೇಷ್ಟಿತಮ್ ।
ತತ್ರಾಪಿ ತಸ್ಯ ವಿಕೃತಿರ್ನಾಧರ್ಮೋತ್ಥಾ ವ್ಯವರ್ಧತ ॥೧೬೬॥

---

೧೬೩. ದೀನಳೂ, ವಸ್ತ್ರರಹಿತಳೂ ಮತ್ತು ಬಿಚ್ಚಿದ ಕೂದಲುಳ್ಳವಳೂ ಆದ ಭಾರ್ಯೆಯು "ಅಯ್ಯೋ! ಅಯ್ಯೋ! ಕಾಪಾಡು" ಎಂದು ಹೆಜ್ಜೆ-ಹೆಜ್ಜೆಗೂ ಹೇಳುತ್ತ ಬಲಾತ್ಕಾರವಾಗಿ ಶತ್ರುಗಳಿಂದ ಸೆಳೆಯಲ್ಪಡುವಂತೆ ಕಂಡನು.

೧೬೪. ಮತ್ತೊಮ್ಮೆ ಹೀಗೆ ಕಂಡನು: ಯಮಧರ್ಮರಾಜನ ಆಜ್ಞೆ-ಯಂತೆ ಅಂತರಿಕ್ಷದಲ್ಲಿರುವ ಕಿಂಕರರು ತನ್ನನ್ನು "ರಾಜನೆ! ಇಲ್ಲಿಗೆ ಬಾ" ಎಂದು ಕರೆಯುತ್ತಿದ್ದರು.

೧೬೫. ನಿನ್ನನ್ನು ಕರೆತರುವುದಕ್ಕೆ ಯಮನು ವಿಶ್ವಾಮಿತ್ರಮುನಿಯಿಂದ ವಿಜ್ಞಾಪಿಸಲ್ಪಟ್ಟಿರುವನು. ಹೀಗೆಂದು ಹೇಳಿ ಕಿಂಕರರಿಂದ ಸರ್ಪಪಾಶಗಳಿಂದ ಕಟ್ಟಿ ಬಲಾತ್ಕಾರವಾಗಿ ಸೆಳೆಯಲ್ಪಟ್ಟನು.

೧೬೬. ಆಗ ಯಮಧರ್ಮರಾಜನಿಂದ ವಿಶ್ವಾಮಿತ್ರಮುನಿಯ ವರ್ತ-ನೆಯು ಹೇಳಲ್ಪಟ್ಟಿತು. ಆದರೂ ರಾಜನ ಮೇಲೆ ಅಧರ್ಮದ ಪರಿಣಾಮವಾಗಿ ಚಿತ್ತದ ಶಾಂತಿಗೆ ವಿಕಾರವು ಬೆಳೆಯಲಿಲ್ಲ.

ಏತಾಃ ಸರ್ವಾ ದಶಾಸ್ತಸ್ಯ ಯಾಃ ಸ್ವಪ್ನೇ ಸಂಪ್ರದರ್ಶಿತಾಃ ।
ಸರ್ವಾಸ್ತಾಸ್ತೇನ ಸಂಭುಕ್ತಾ ಯಾವದ್ವರ್ಷಾಣಿ ದ್ವಾದಶ ॥೧೬೭॥

ಅತೀತೇ ದ್ವಾದಶೇ ವರ್ಷೇ ನೀಯಮಾನೋ ಭಟೈರ್ಬಲಾತ್ ।
ಯಮಂ ಸೋಽಪಶ್ಯದಾಕಾರಾದುವಾಚ ಚ ನರಾಧಿಪಮ್ ॥೧೬೮॥

ವಿಶ್ವಾಮಿತ್ರಸ್ಯ ಕೋಪೋಽಯಂ ದುರ್ನಿವಾರ್ಯೋ ಮಹಾತ್ಮನಃ ।
ಪುತ್ರಸ್ಯ ತೇ ಮೃತ್ಯುಮಪಿ ಪ್ರದಾಸ್ಯತಿ ಸ ಕೌಶಿಕಃ ॥೧೬೯॥

ಗಚ್ಛ ತ್ವಂ ಮಾನುಷಂ ಲೋಕಂ ದುಃಖಶೇಷಂ ಚ ಭುಙ್ಕ್ಷ್ವ ವೈ ।
ಗತಸ್ಯ ತತ್ರ ರಾಜೇನ್ದ್ರ ಶ್ರೇಯಸ್ತವ ಭವಿಷ್ಯತಿ ॥೧೭೦॥

---

೧೬೭. ಕನಸ್ಸಿನಲ್ಲಿ ಯಾವ ಅವಸ್ಥೆಗಳು ತೋರಿಸಲ್ಪಟ್ಟವೆಯೊ : ಆ ಎಲ್ಲ ಅವಸ್ಥೆಗಳು ಹನ್ನೆರಡು ವರ್ಷಗಳು ಪೂರ್ತಿಯಾಗಿ ಕಳೆಯುವಷ್ಟರಲ್ಲಿ ಹರಿಶ್ಚಂದ್ರನಿಂದ ಅನುಭವಿಸಲ್ಪಟ್ಟವು.

೧೬೮. ಹನ್ನೆರಡನೆಯ ವರ್ಷವು ಕಳೆಯಲಾಗಿ ಯಮಭಟರಿಂದ ಬಲಾತ್ಕಾರವಾಗಿ ಒಯ್ಯಲ್ಪಡುತ್ತಿದ್ದ ಹರಿಶ್ಚಂದ್ರನು ಭಯಂಕರ ಆಕಾರದಿಂದ ಕೂಡಿದ ಯಮನನ್ನು ಕಂಡನು. ಆಗ ಯಮನು ರಾಜನಿಗೆ ಹೀಗೆಂದು ಹೇಳಿದನು.

೧೬೯. ಮಹಾತ್ಮನಾದ ವಿಶ್ವಾಮಿತ್ರಮುನಿಯ ಕೋಪವನ್ನು ಪರಿಹರಿಸಿಕೊಳ್ಳಲು ಯಾರಿಗೂ ಶಕ್ಯವಿಲ್ಲ. ಆ ವಿಶ್ವಾಮಿತ್ರಮುನಿಯು ನಿನ್ನ ಪುತ್ರನಿಗೆ ಮರಣವನ್ನೂ ಉಂಟುಮಾಡುವನು.

೧೭೦. ರಾಜೇಂದ್ರನೆ ! ನೀನು ಮನುಷ್ಯಲೋಕಕ್ಕೆ ಹೋಗು. ಅಲ್ಲಿ ಅನುಭವಿಸಬೇಕಾಗಿ ಮಿಕ್ಕಿರುವ ದುಃಖವನ್ನು ಅನುಭವಿಸು. ಮನುಷ್ಯ ಲೋಕದಲ್ಲಿದ್ದಾಗ ನಿನಗೆ ಶ್ರೇಯಸ್ಸು ಪ್ರಾಪ್ತವಾಗುವುದು.

ವ್ಯತೀತೇ ದ್ವಾದಶೇ ವರ್ಷೇ ದುಃಖಸ್ಯಾನ್ತೇ ನರಾಧಿಪಃ ।
ಅನ್ತರಿಕ್ಷಾಚ್ಚ ಪತಿತೋ ಯಮದೂತೈಃ ಪ್ರಣೋದಿತಃ ॥೧೭೧॥

ಪತಿತೋ ಯಮಲೋಕಾಚ್ಚ ವಿಬುದ್ಧೋ ಭಯಸಮ್ಭ್ರಮಾತ್ ।
ಅಹೋ ಕಷ್ಟಮಿತಿ ಧ್ಯಾತ್ವಾ ಕ್ಷತೇ ಕ್ಷಾರಾವಸೇಚನಮ್ ॥೧೭೨॥

ಸ್ವಪ್ನೇ ದುಃಖಂ ಮಹದ್ದೃಷ್ಟಂ ಯಸ್ಯಾನ್ತೋ ನೋಪಲಭ್ಯತೇ ।
ಸ್ವಪ್ನೇ ದೃಷ್ಟಂ ಮಯಾ ಯತ್ತು ಕಿಂ ತು ಮೇ ದ್ವಾದಶೀಃ ಸಮಾಃ ॥೧೭೩॥

ಗತೇತ್ಯಪೃಚ್ಛತ್ತತ್ರಸ್ಥಾನ್ಪುಲ್ಕಸಾಂಸ್ತು ಸಸಂಭ್ರಮಾತ್ ।
ನೇತ್ಯೂಚುಃ ಕೇಚಿತ್ತತ್ರಸ್ಥಾ ಏವಮೇವಾಪರೇಽಬ್ರುವನ್ ॥೧೭೪॥

---

೧೭೧. ಹನ್ನೆರಡು ವರ್ಷಗಳು ಕಳೆದ ಮೇಲೆ ಅದುವರೆಗೆ ಅನುಭವಿಸಿದ ದುಃಖವು ಶಾಂತವಾದ ತರುವಾಯ ಯಮದೂತರಿಂದ ಕೆಳಗೆ ತಳ್ಳಲ್ಪಟ್ಟ ರಾಜನು ಅಂತರಿಕ್ಷದಿಂದ ಬಿದ್ದನು.

೧೭೨. ಯಮಲೋಕದಿಂದ ಕೆಳಗೆ ಬಿದ್ದಾಗ ಭಯ-ಗಾಬರಿಗಳಿಂದ ರಾಜನು ಎಚ್ಚೆತ್ತನು. ಮತ್ತು ಗಾಯದ ಮೇಲೆ ಉಪ್ಪುನೀರು ಚೆಲ್ಲಿದಂತೆ ಕಷ್ಟದ ಮೇಲೆ ಕಷ್ಟಗಳ ಪರಂಪರೆಯು ಬಂತೆ! ಅಯ್ಯೋ! ಎಂದು ಧ್ಯಾನಿಸಿದನು.

೧೭೩. ಸ್ವಪ್ನದಲ್ಲಿ ಮಹತ್ತಾದ ದುಃಖವನ್ನು ಕಂಡೆನು. ಆ ದುಃಖಕ್ಕೆ ಪಾರವೇ ಇಲ್ಲದಂತೆ ತೋರಿತು. ಹನ್ನೆರಡು ವರ್ಷಗಳು ಕಳೆದಂತೆ ಆಯಿತು. ಇದೆಲ್ಲ ನಿಜವಿರಬಹುದೆ?

೧೭೪. ಆಗ ಅಲ್ಲಿದ್ದ ಚಂಡಾಲರನ್ನು ಕುರಿತು ತಾನು ಬಂದು ಹನ್ನೆರಡು ವರ್ಷಗಳು ಕಳೆದವೆ? ಎಂದು ಕೇಳಿದನು. ಅವರು "ಇಲ್ಲ" ಎಂದು ಉತ್ತರವಿತ್ತರು. ಹಾಗೆಯೆ ಇತರರೂ ಹೇಳಿದರು.

ಶ್ರುತ್ವಾ ದುಃಖೀ ತದಾ ರಾಜಾ ದೇವಾನ್ ಶರಣಮೀಯಿವಾನ್ ।
ಸ್ವಸ್ತಿ ಕುರ್ವನ್ತು ಮೇ ದೇವಾಃ ಶೈಬ್ಯಾಯಾ ಬಾಲಕಸ್ಯ ಚ ॥೧೭೫॥

ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ ।
ಪರಾವರಾಯ ಶುದ್ಧಾಯ ಪುರಾಣಾಯಾವ್ಯಯಾಯ ಚ ॥೧೭೬॥

ನಮೋ ಬೃಹಸ್ಪತೇ ತುಭ್ಯಂ ನಮಸ್ತೇ ವಾಸವಾಯ ಚ ॥೧೭೭॥

ಏವಮುಕ್ತ್ವಾ ಸ ರಾಜಾ ತು ಯುಕ್ತಃ ಪುಲ್ಕಸಕರ್ಮಣಿ ।
ಶವಾನಾಂ ಮೂಲ್ಯಕರಣೇ ಪುನರ್ನಷ್ಟಸ್ಮೃತಿರ್ಯಥಾ ॥೧೭೮॥

ಮಲಿನೋ ಜಟಿಲಃ ಕೃಷ್ಣೋ ಲಗುಡೀ ವಿಹ್ವಲೋ ನೃಪಃ ॥೧೭೯॥

---

೧೭೫. ಆಗ ಅದನ್ನು ಕೇಳಿ ಹರಿಶ್ಚಂದ್ರರಾಜನು ಬಹಳ ದುಃಖಿತನಾಗಿ ಮನಸ್ಸಿನಲ್ಲಿ ದೇವತೆಗಳನ್ನು ಶರಣವನ್ನಾಗಿ ಧ್ಯಾನಿಸಿದನು. ದೇವತೆಗಳು ಶೈಬ್ಯೆಗೂ, ಬಾಲಕನಿಗೂ ಮತ್ತು ನನಗೂ ಮಂಗಳವನ್ನು ಉಂಟುಮಾಡಲಿ.

೧೭೬. ಮಹಾತ್ಮನಾದ ಧರ್ಮಪುರುಷನಿಗೆ ನಮಸ್ಕಾರವು. ಮತ್ತು ಸೃಷ್ಟಿಕರ್ತನೂ, ಉತ್ತಮ-ಅಧಮ ಸಕಲ ವಸ್ತುಸ್ವರೂಪನೂ, ನಿಷ್ಕಲಂಕನೂ, ಪುರಾತನನೂ ಮತ್ತು ನಾಶರಹಿತನೂ ಆದ ಕೃಷ್ಣ ಪರಮಾತ್ಮನಿಗೆ ನಮಸ್ಕಾರವು.

೧೭೭. ದೇವಗುರುವಾದ ಬೃಹಸ್ಪತಿಯೆ! ನಿನಗೆ ವಂದನೆಯು. ದೇವರಾಜನಾದ ಇಂದ್ರನಿಗೂ ನಮಸ್ಕಾರವು. ಸಮಸ್ತ ದೇವತೆಗಳು ನನಗೆ ಮಂಗಳವನ್ನು ಕೊಡಲಿ.

೧೭೮. ಆ ರಾಜನು ಹೀಗೆ ಸಂಪೂರ್ಣವಾಗಿ ನಾಶಹೊಂದಿದ ಸ್ಮೃತಿ-ಸಂಸ್ಕಾರಗಳುಳ್ಳವನಂತೆ ಆಗಿ ಮತ್ತೆ ಶ್ಮಶಾನಕ್ಕೆ ಬಂದ ಶವಗಳಿಗೆ ಮೂಲ್ಯವನ್ನು ಗೊತ್ತುಮಾಡುವ ಚಂಡಾಲಕರ್ಮದಲ್ಲಿ ತೊಡಗಿದನು.

೧೭೯. ಮಲಿನವಾದ ದೇಹವುಳ್ಳವನೂ, ಕಪ್ಪಾದವನೂ, ಜಟೆಯನ್ನು ಬೆಳೆಸಿದವನೂ, ಕೈಯಲ್ಲಿ ದೊಣ್ಣೆಯನ್ನು ಧರಿಸಿದವನೂ ಆಗಿ ಆ ರಾಜನು ದುಃಖಿಸುತ್ತ ಚಂಡಾಲಕರ್ಮವನ್ನು ಕೈಗೊಂಡನು.

ನೈವ ಪುತ್ರೋ ನ ಭಾರ್ಯಾ ತು ತಸ್ಯ ವೈ ಸ್ಮೃತಿಗೋಚರೇ ।
ನಷ್ಟೋತ್ಸಾಹೋ ರಾಜ್ಯನಾಶಾಚ್ಛ್ಮಶಾನೇ ನಿವಸಂಸ್ತದಾ ॥೧೮೦॥

ಅಥಾಜಗಾಮ ಸ್ವಸುತಂ ಮೃತಮಾದಾಯ ಲಾಪಿನೀ ।
ಭಾರ್ಯಾ ತಸ್ಯ ನರೇನ್ದ್ರಸ್ಯ ಸರ್ಪದಷ್ಟಂ ಹಿ ಬಾಲಕಮ್ ॥೧೮೧॥

ಹಾ ವತ್ಸ ಹಾ ಪುತ್ರ ಶಿಶೋ ಇತ್ಥಂ ವೈ ವದತೀ ಮುಹುಃ ।
ಕೃಶಾ ವಿವರ್ಣಾ ವಿಮನಾಃ ಪಾಂಸುಧ್ವಸ್ತಶಿರೋರುಹಾ ॥೧೮೨॥

ರಾಜಪತ್ನ್ಯುವಾಚ :—

ಹಾ ರಾಜನ್ನದ್ಯ ಬಾಲಂ ತ್ವಂ ಪಶ್ಯಸೀಮಂ ಮಹೀತಲೇ ।
ರಮಮಾಣಂ ಪುರಾ ದೃಷ್ಟಂ ದಷ್ಟಂ ಪುಷ್ಟಾಹಿನಾ ಮೃತಮ್ ॥೧೮೩॥

---

೧೮೦. ಆಗ ಚಂಡಾಲಕರ್ಮಪರನಾದ ರಾಜನಿಗೆ ಅವನ ಭಾರ್ಯೆ ಮತ್ತು ಪುತ್ರ ಇವರಾರೊಬ್ಬರ ಸ್ಮೃತಿಯೂ ಉಂಟಾಗಲಿಲ್ಲ. ಹೀಗೆ ರಾಜ್ಯ-ಭ್ರಂಶದಿಂದ ಉತ್ಸಾಹಶೂನ್ಯನಾಗಿ ಶ್ಮಶಾನದಲ್ಲಿ ವಾಸಮಾಡುತ್ತಿದ್ದನು.

೧೮೧. ತರುವಾಯ ಆ ನರೇಂದ್ರನ ಪತ್ನಿಯು ಹಾವು ಕಡಿದು ಮೃತ್ಯುಹೊಂದಿದ ಎಳೆವಯಸ್ಸಿನ ತನ್ನ ಮಗುವನ್ನು ಎತ್ತಿಕೊಂಡು ಗೋಳಾ-ಡುತ್ತ ಶ್ಮಶಾನಕ್ಕೆ ಬಂದಳು.

೧೮೨. ಆ ರಾಜಪತ್ನಿಯು ಕೃಶಳೂ, ಕಳೆಗುಂದಿದ ಕಾಂತಿಯುಳ್ಳವಳೂ, ಕರ್ತವ್ಯಜ್ಞಾನವಿಲ್ಲದವಳೂ ಮತ್ತು ಧೂಳಿಯಿಂದ ಮುಚ್ಚಿಹೋದ ಕೂದಲುಗ ಳುಳ್ಳವಳೂ ಆಗಿ ಮಗುವೆ! ಪುತ್ರನೆ! ಶಿಶುವೆ! ಎಂದು ಅಡಿಗಡಿಗೂ ಕೂಗುತ್ತ ಬಂದಳು.

ರಾಜಪತ್ನಿಯು ಹೀಗೆಂದಳು :—

೧೮೩. ಎಲೈ ರಾಜನೆ! ನೀನು ಹಿಂದೆ ನೆಲದಲ್ಲಿ ಆಟವಾಡುತ್ತಿದ್ದಾಗ ನೋಡಿದ ಈ ಬಾಲಕನನ್ನು ಇಂದು ಹಾವು ಕಡಿದು ಮೃತಿಹೊಂದಿ ನೆಲದಲ್ಲಿ ಬಿದ್ದಿದ್ದವನ್ನು ನೋಡುವಂತೆ ಆಗಿದೆ. ಅಯ್ಯೋ!

ತಸ್ಯಾ ವಿಲಾಪಶಬ್ದಂ ತಮಾಕರ್ಣ್ಯ ಸ ನರಾಧಿಪಃ ।
ಜಗಾಮ ತ್ವರಿತೋಽತ್ರೇತಿ ಭವಿತಾ ಮೃತಕಮ್ಬಲಃ ॥೧೮೪॥

ಸ ತಾಂ ರೋರೂಯತೀಂ ಭಾರ್ಯಾಂ ನಾಭ್ಯಜಾನಾತ್ತು ಪಾರ್ಥಿವಃ ।
ಚಿರಪ್ರವಾಸಸನ್ತಪ್ತಾಂ ಪುನರ್ಜಾತಾಮಿವಾಬಲಾಮ್ ॥೧೮೫॥

ಸಾಪಿ ತಂ ಚಾರುಕೇಶಾನ್ತಂ ಪುರಾ ದೃಷ್ಟ್ವಾ ಜಟಾಲಕಮ್ ।
ನಾಭ್ಯಜಾನಾನ್ನೃಪಸುತಾ ಶುಷ್ಕವೃಕ್ಷೋಪಮಂ ನೃಪಮ್ ॥೧೮೬॥

ಸೋಽಪಿ ಕೃಷ್ಣಪಟೇ ಬಾಲಂ ದೃಷ್ಟ್ವಾಶೀವಿಷಪೀಡಿತಮ್ ।
ನರೇನ್ದ್ರಲಕ್ಷಣೋಪೇತಂ ಚಿನ್ತಾಮಾಪ ನರೇಶ್ವರಃ ॥೧೮೭॥

---

೧೮೪. ತರುವಾಯ ಮೃತಜನರ ಕಂಬಳಿಯನ್ನು ಧರಿಸಿದ ಆ ರಾಜನು ರಾಜಪತ್ನಿಯ ಆ ವಿಲಾಪಶಬ್ದವನ್ನು ಕೇಳಿ ತ್ವರೆಗೊಂಡವನಾಗಿ “ಈ ಸ್ಥಳದಿಂದ ವಿಲಾಪಶಬ್ದವು ಕೇಳಿಸಿರಬಹುದು” ಎಂದು ತಿಳಿದು ಅಲ್ಲಿಗೆ ಬಂದನು.

೧೮೫. ರಾಜನು ಆ ವಿಧವಾಗಿ ಕಿರುಚಿಕೊಳ್ಳುತ್ತಲಿದ್ದ, ಬಹುಕಾಲದ ಪ್ರವಾಸ-ವಿಯೋಗಗಳಿಂದ ಸಂತಪ್ತಳಾದ ಮತ್ತು ಪುನರ್ಜನ್ಮವೆತ್ತಿದಂತೆ ಆದ ಆಕೆಯನ್ನು ತನ್ನ ಭಾರ್ಯೆಯೆಂದು ಗುರುತಿಸಲಿಲ್ಲ.

೧೮೬. ರಾಜಪತ್ನಿಯೂ ಕೂಡ ಹಿಂದೆ ಸುಂದರವಾದ ಕೇಶಾಗ್ರಗಳಿಂದ ಶೋಭಿಸುತ್ತಿದ್ದ ರಾಜನನ್ನು ನೋಡಿದ್ದು ಪ್ರಕೃತದಲ್ಲಿ ಜಡೆಯಂತಾದ ಕೂದಲು-ಗಳುಳ್ಳವನೂ ಮತ್ತು ಒಣಗಿದ ಮರದಂತೆಯೂ ಆಗಿದ್ದ ರಾಜನನ್ನು ತನ್ನ ಪತಿಯೆಂದು ತಿಳಿಯಲಿಲ್ಲ.

೧೮೭. ಆಗ ರಾಜನು ಹಾವಿನಿಂದ ಕಡಿಯಲ್ಪಟ್ಟು ಮೃತ್ಯುವಿಗೀಡಾದ ಕಪ್ಪುಬಟ್ಟೆಯಲ್ಲಿ ಮಲಗಿಸಿದ್ದ ಬಾಲಕನು ನರೇಂದ್ರಲಕ್ಷಣಗಳಿಂದ ಕಂಗೊಳಿಸು-ತ್ತಿದ್ದುದನ್ನು ಕಂಡು ಚಿಂತಿಸತೊಡಗಿದನು.

ತಸ್ಯಾಸ್ಯಂ ಚನ್ದ್ರಬಿಮ್ಬಾಭಂ ಸುಭ್ರು ರಮ್ಯಂ ಸಮುನ್ನಸಮ್ ।
ನೀಲಾಃ ಕೇಶಾಃ ಕುಞ್ಚಿತಾಶ್ಚ ಸಮಾ ದೀರ್ಘಾಸ್ತರಙ್ಗಿತಾಃ॥೧೮೮॥

ರಾಜೀವನೇತ್ರಯುಗಲೋ ಬಿಮ್ಬೋಷ್ಠಪುಟಸಂವೃತಃ ।
ಚತುರ್ದಂಷ್ಟ್ರಶ್ಚತುಷ್ಕಿಷ್ಕುರ್ದೀರ್ಘಾಸ್ಯೋ ದೀರ್ಘಬಾಹುಕಃ ॥೧೮೯॥

ಚತುರ್ಲೇಖಃ ಕರೋ ಮತ್ಸ್ಯಯವಯುಕ್ತೈಕಪರ್ವತಃ ।
ಶಿರಾಲುಪಾದೋ ಗಮ್ಭೀರಃ ಸೂಕ್ಷ್ಮತ್ವಕ್ ತ್ರಿವಲೀಧರಃ ॥೧೯೦॥

ಅಹೋ ಕಷ್ಟಂ ನರೇನ್ದ್ರಸ್ಯ ಕಸ್ಯಾಪ್ಯೇಷ ಕುಲೇ ಶಿಶುಃ ।
ಜಾತೋ ನೀತಃ ಕೃತಾನ್ತೇನ ಕಾಮಪ್ಯಾಶಾಂ ದುರಾತ್ಮನಾ ॥೧೯೧॥

---

೧೮೮. ಆ ಮಗುವಿನ ಮುಖವು ಚಂದ್ರಬಿಂಬದಂತೆ ಕಾಂತಿಯುಳ್ಳದ್ದೂ ಸುಂದರವಾದ ಹುಬ್ಬುಗಳಿಂದಲೂ ಉನ್ನತವಾದ ಮೂಗಿನಿಂದಲೂ ರಮ್ಯವೂ ಆಗಿತ್ತು. ಮತ್ತು ಕಪ್ಪಾದ, ಸಮಪರಿಮಾಣದ, ದೀರ್ಘವಾದ, ಅಲೆಗಳಂತೆ ಕಾಣುವ ಕುಟಿಲವಾದ ಕೇಶಗಳು ಸುಂದರವಾಗಿದ್ದುವು.

೧೮೯. ಆ ಬಾಲಕನು ತಾವರೆಯಂತೊಪ್ಪುವ ಎರಡು ಕಣ್ಣು-ಗಳುಳ್ಳವನೂ, ತೊಂಡೆಹಣ್ಣಿನ ಆಕಾರದ ಮುಚ್ಚಿದ ಎರಡು ತುಟಿಗಳುಳ್ಳವನೂ, ದಂತಪಂಕ್ತಿಗಳ ಕಡೆಯಲ್ಲಿ ಲಕ್ಷಣವಾದ ನಾಲ್ಕು ದವಡೆಯುಳ್ಳವನೂ, ಇಪ್ಪತ್ತ ನಾಲ್ಕು ಅಂಗುಲ ಪ್ರಮಾಣದ ನಾಲ್ಕು ಮೊಳಗಳಷ್ಟು ದೀರ್ಘಾಕಾರವಾಗು-ವವನೂ ಮತ್ತು ದೀರ್ಘವಾದ ಮುಖಬಾಹುಗಳುಳ್ಳವನೂ ಆಗಿದ್ದನು.

೧೯೦. ಹಾಗು ಹಣೆಯಲ್ಲಿ ನಾಲ್ಕು ರೇಖೆಗಳ ಲಕ್ಷಣವುಳ್ಳವನೂ, ಕೈಗಳಲ್ಲಿ ಮತ್ಸ್ಯ-ಯವ ಲಕ್ಷಣವುಳ್ಳವನೂ, ಸಮವಾದ ಬೆರಳುಗಳ ಸಂಧಿಯುಳ್ಳ-ವನೂ, ನಾಡಿಗಳಿಂದ ತುಂಬಿದ ಕಾಲುಗಳುಳ್ಳವನೂ, ಗಂಭೀರವಾದ ಆಕಾರ-ವುಳ್ಳವನೂ, ತೆಳ್ಳಗಿರುವ ಚರ್ಮವುಳ್ಳವನೂ ಮತ್ತು ತ್ರಿವಳಿಗಳಿಂದ ಕೂಡಿದವನೂ ಆಗಿದ್ದನು.

೧೯೧. ಅಯ್ಯೋ ! ಕಷ್ಟವು ! ಯಾವನೋ ಒಬ್ಬ ನರೇಂದ್ರನ ವಂಶದಲ್ಲಿ ಜನಿಸಿದ ಈ ಶಿಶುವು ನೀಚನಾದ ಮೃತ್ಯುವಿನಿಂದ ಇಂತಹ ದುರ್ದಶೆಯನ್ನು ಹೊಂದಿಸಲ್ಪಟ್ಟಿರುವುದು.

ಏವಂ ದೃಷ್ಟ್ವಾ ಹಿತಂ ಬಾಲಂ ಮಾತುರುತ್ಸಙ್ಗಶಾಯಿನಮ್ ।
ಸ್ಮೃತಿಮಭ್ಯಾಗತೋ ಬಾಲೋ ರೋಹಿತಾಸ್ಯೋಽಬ್ಜಲೋಚನಃ
॥೧೯೨॥

ಸೋಽಪ್ಯೇತಾಮೇವ ಮೇ ವತ್ಸೋ ವಯೋಽವಸ್ಥಾಮುಪಾಗತಃ ।
ನೀತೋ ಯದಿ ನ ಘೋರೇಣ ಕೃತಾನ್ತೇನಾತ್ಮನೋ ವಶಮ್
॥೧೯೩॥

ರಾಜಪತ್ನ್ಯುವಾಚ :—

ಹಾ ವತ್ಸ ಕಸ್ಯ ಪಾಪಸ್ಯ ಅಪಧ್ಯಾನಾದಿದಂ ಮಹತ್ ।
ದುಃಖಮಾಪತಿತಂ ಘೋರಂ ಯಸ್ಯಾನ್ತೋ ನೋಪಲಭ್ಯತೇ॥೧೯೪॥

ಹಾ ನಾಥ ರಾಜನ್ ಭವತಾ ಮಾಮನಾಶ್ವಾಸ್ಯ ದುಃಖಿತಾಮ್ ।
ಕ್ವಾಪಿ ಸನ್ತಿಷ್ಠತಾ ಸ್ಥಾನೇ ವಿಶ್ರಬ್ಧಂ ಸ್ಥೀಯತೇ ಕಥಮ್ ॥೧೯೫॥

---

೧೯೨. ಹೀಗೆ ತಾಯಿಯ ತೊಡೆಯಲ್ಲಿ ಮಲಗಿದ್ದ ಆ ಮೃತಬಾಲಕನನ್ನು ನೋಡಿ ಹಾಗೆಯೆ ರಾಜಲಕ್ಷಣಗಳಿಂದ ಕೂಡಿದ, ತಾವರೆಯಂತೆ ಕಣ್ಣುಗಳುಳ್ಳ ತನ್ನ ಪುತ್ರನಾದ ರೋಹಿತಾಸ್ಯನನ್ನು ಸ್ಮರಿಸಿಕೊಂಡನು.

೧೯೩. ಆ ರೋಹಿತಾಸ್ಯನು ನೀಚನಾದ ಮೃತ್ಯುವಿನಿಂದ ತನ್ನ ಬಳಿಗೆ ಒಯ್ಯಲ್ಪಡದಿದ್ದರೆ ಈ ಮೃತಬಾಲಕನಲ್ಲಿರುವಂತೆ ಇದೇ ವಯಸ್ಸಿನಿಂದಲೂ, ಇದೇ ಆಕಾರದಿಂದಲೂ ಶೋಭಿಸುತ್ತಿರಬಹುದು.

ರಾಜಪತ್ನಿಯು ಹೇಳಿದಳು :—

೧೯೪. ಅಯ್ಯೋ ! ಮಗುವೆ ! ಯಾವ ನೀಚಪುರುಷನ ದುಷ್ಟಸಂಕಲ್ಪದಿಂದ ಮಹತ್ತಾದ ಈ ಘೋರ ದುಃಖವು ಉಂಟಾಯಿತು ! ಇನ್ನೂ ಈ ದುಃಖಪರಂಪರೆಯ ಪಾರವು ಕಂಡಿಲ್ಲ.

೧೯೫. ಎಲೈ ! ಪತಿಯೆ ! ರಾಜನೆ ! ಈ ಬಗೆಯ ದುಃಖಕ್ಕೆ ಪಾತ್ರಳಾದ ನನ್ನನ್ನು ಸಮಾಧಾನಮಾಡದೆ ಎಲ್ಲಿ ನಿಂತಿರುವೆಯೊ? ನನ್ನ ಈ ಅವಸ್ಥೆಯಲ್ಲಿ ನೀನು ನೆಮ್ಮದಿಯಿಂದ ಹೇಗಿರುತ್ತೀಯೆ?

ರಾಜ್ಯನಾಶಃ ಸುಹೃತ್ತ್ಯಾಗೋ ಭಾರ್ಯಾತನಯವಿಕ್ರಯಃ ।
ಹರಿಶ್ಚನ್ದ್ರಸ್ಯ ರಾಜರ್ಷೇಃ ಕಿಂ ವಿಧೇ ನ ಕೃತಂ ತ್ವಯಾ ॥೧೯೬॥

ಇತಿ ತಸ್ಯ ವಚಃ ಶ್ರುತ್ವಾ ರಾಜಾ ಸ್ವಸ್ಥಾನತಶ್ಚ್ಯುತಃ ।
ಪ್ರತ್ಯಭಿಜ್ಞಾಯ ದಯಿತಾಂ ಪುತ್ರಂ ಚ ನಿಧನಂ ಗತಮ್ ॥೧೯೭॥

ಕೈಷಾ ನಾಮ ಗೃಹೇ ಯುಕ್ತಾ ಮಮ ಯೋಷಿದ್ವರಾ ಭವೇತ್ ।
ಬಾಲಶ್ಚ ಸ ಮೃತಃ ಕಃ ಸ್ಯಾದಿತಿ ರಾಜಾ ವಿಚಾರಯನ್ ॥೧೯೮॥

ಕಷ್ಟಂ ಶೈಬ್ಯೇಯಮೇಷಾ ಹಿ ಸ ಬಾಲೋಽಯಮಿತೀರಯನ್ ।
ರುರೋದ ದುಃಖಸನ್ತಪ್ತೋ ಮೂರ್ಛಾಮಭಿಜಗಾಮ ಚ ॥೧೯೯॥

ಸಾ ಚ ತಂ ಪ್ರತ್ಯಭಿಜ್ಞಾಯ ತಾಮವಸ್ಥಾಮುಪಾಗತಮ್ ।
ಮೂರ್ಛಿತಾ ನಿಪಪಾತಾರ್ತಾ ನಿಶ್ಚೇಷ್ಟಾ ಧರಣೀತಲೇ ॥೨೦೦॥

---

೧೯೬. ರಾಜ್ಯಭ್ರಂಶ, ಆಪ್ತಮಿತ್ರರ ತ್ಯಾಗ, ಪತ್ನೀ-ಪುತ್ರರ ವಿಕ್ರಯ, ಇಂತಹ ದುಃಖಪರಂಪರೆಗಳನ್ನು ಹರಿಶ್ಚಂದ್ರರಾಜನಿಗೆ ಕೊಟ್ಟಿರುವ ವಿಧಿಯೆ! ಇನ್ನೂ ನೀನು ಕೊಡದಿರುವ ದುಃಖವು ಏನಿದೆ?

೧೯೭. ಹೀಗೆಂಬ ರಾಜಪತ್ನಿಯ ವಚನವನ್ನು ಕೇಳಿದ ಹರಿಶ್ಚಂದ್ರನು ಇದ್ದಕ್ಕಿದ್ದಹಾಗೆ ತನ್ನ ಸ್ಥಾನದಿಂದ ಚ್ಯುತನಾದಂತೆ ಆಗಿ ತನ್ನ ಪ್ರಿಯೆಯನ್ನೂ ನಿಧನ ಹೊಂದಿದ್ದ ಪುತ್ರನನ್ನೂ ಜ್ಞಾಪಿಸಿಕೊಂಡನು.

೧೯೮. ಇವಳು ಯಾರು? ವಿಕ್ರಯದಿಂದ ವೃದ್ಧಗೃಹದಲ್ಲಿ ದಾಸಿಯಾಗಿ ನಿಯೋಜಿಸಲ್ಪಟ್ಟ ನನ್ನ ಸ್ತ್ರೀರತ್ನವಿರಬಹುದೆ? ಎಂಬುದಾಗಿ ರಾಜನು ಯೋಚಿಸತೊಡಗಿದನು.

೧೯೯. ಅಯ್ಯೋ! ಕಷ್ಟ! ಇವಳು ನನ್ನ ಪ್ರಿಯೆಯಾದ ಶೈಬ್ಯೆಯು. ಈ ಬಾಲಕನು ನನ್ನ ಕುವರನಾದ ರೋಹಿತಾಸ್ಯನು. ಎಂದು ಹೇಳುತ್ತ ದುಃಖೋದ್ರೇಕದಿಂದ ಕೂಡಿ ಅಳುತ್ತ ಹಾಗೆಯೆ ಮೂರ್ಛೆಹೋದನು.

೨೦೦. ರಾಜಪತ್ನಿಯು ಅಷ್ಟೊಂದು ಕೀಳಾದ ಅವಸ್ಥೆಯನ್ನು ಹೊಂದಿದ್ದ ಹರಿಶ್ಚಂದ್ರನನ್ನು ಪತಿಯೆಂದು ತಿಳಿದು ಬಹಳ ಸಂಕಟದಿಂದ ಮೂರ್ಛೆಹೊಂದಿ ಸ್ವಲ್ಪವೂ ಅಲ್ಲಾಡದ ಹಾಗೆ ನೆಲದಲ್ಲಿ ಬಿದ್ದಳು.

ಚೇತಃ ಸಂಪ್ರಾಪ್ಯ ರಾಜೇನ್ದ್ರೋ ರಾಜಪತ್ನೀ ಚ ತೌ ಸಮಮ್ ।
ವಿಲೇಪತುಃ ಸು ಸನ್ತಪ್ತೌ ಶೋಕಭಾರಾತಿಪೀಡಿತೌ ॥೨೦೧॥

ರಾಜೋವಾಚ :—

ಹಾ ವತ್ಸ ಸುಕುಮಾರಂ ತೇ ಸ್ವಕ್ಷಿಭ್ರೂನಾಸಿಕಾಲಕಮ್ ।
ಪಶ್ಯತೋ ಮೇ ಮುಖಂ ದೀನಂ ಹೃದಯಂ ಕಿಂ ನ ದೀರ್ಯತೇ ॥೨೦೨॥

ತಾತ ತಾತೇತಿ ಮಧುರಂ ಬ್ರುವಾಣಂ ಸ್ವಯಮಾಗತಮ್ ।
ಉಪಗುಹ್ಯ ವದಿಷ್ಯೇ ಕಂ ವತ್ಸ ವತ್ಸೇತಿ ಸೌಹೃದಾತ್ ॥೨೦೩॥

ಕಸ್ಯ ಜಾನುಪ್ರಣೀತೇನ ಪಿಙ್ಗೇನ ಕ್ಷಿತಿರೇಣುನಾ ।
ಮಮೋತ್ತರೀಯಮುತ್ಸಙ್ಗಂ ತಥಾಙ್ಗಂ ಮಲಮೇಷ್ಯತಿ ॥೨೦೪॥

---

೨೦೧. ರಾಜೇಂದ್ರನಾದ ಹರಿಶ್ಚಂದ್ರನೂ, ರಾಜಪತ್ನಿಯಾದ ಶೈಬ್ಯೆಯೂ ಸ್ವಲ್ಪಹೊತ್ತಿನಲ್ಲಿ ಮೂರ್ಛೆಯಿಂದ ಎಚ್ಚತ್ತು ಬಹಳ ಸಂಕಟಪಡುತ್ತ ಸಹಿಸಲಾಗದ ಶೋಕದಿಂದ ಪೀಡಿಸಲ್ಪಟ್ಟವರಾಗಿ ಒಂದೇಸಮವಾಗಿ ಅಳ-ತೊಡಗಿದರು.

ರಾಜನು ಹೀಗೆಂದನು :—

೨೦೨. ಅಯ್ಯೋ! ಪುತ್ರನೆ! ಸುಂದರವಾದ ಕಣ್ಣು, ಹುಬ್ಬು, ಮೂಗು ಮತ್ತು ಮುಂಗೂದಲುಗಳಿಂದ ಕೂಡಿರುವುದೂ, ಸುಕುಮಾರವೂ ಆದ ನಿನ್ನ ದೀನ ಮುಖವನ್ನು ನೋಡುತ್ತಿದ್ದಹಾಗೆ ನನ್ನ ಹೃದಯವು ಏಕೆ ಸೀಳಿ-ಹೋಗಲಿಲ್ಲ!

೨೦೩. ತಂದೆ! ತಂದೆ! ಎಂದು ಮಧುರವಾಗಿ ಕೂಗುತ್ತ ತಾನಾಗಿ ನನ್ನ ಬಳಿಗೆ ಬಂದಾಗ ಮಗು! ಮಗು! ಎಂದನ್ನುತ್ತ ಪ್ರೀತಿಯಿಂದ ಅಪ್ಪಿ-ಕೊಂಡು ನಿನ್ನನ್ನು ಮಾತನಾಡಿಸಿದಂತೆ ಮುಂದೆ ಇನ್ನಾರನ್ನು ಮಾತನಾಡಿಸಲಿ!

೨೦೪. ಇನ್ನುಮುಂದೆ ಯಾವ ಬಾಲಕನ ಮಂಡಿಗೆ ತಗುಲಿ ಬಂದ, ಹೊಂಬಣ್ಣದ, ಭೂಮಿಯ ಧೂಳಿಯು ನನಗೆ ತಗುಲಿ ನನ್ನ ಉತ್ತರೀಯವಸ್ತ್ರ, ತೊಡೆ, ಮತ್ತು ದೇಹ ಇವುಗಳು ಕೊಳೆಯಾಗುವುದನ್ನು ನೋಡಲಿ!

ಅಙ್ಗಪ್ರತ್ಯಙ್ಗಸಂಭೂತೋ ಮನೋಹೃದಯನನ್ದನಃ ।
ಮಯಾ ಕುಪಿತ್ರಾ ಹಾ ವತ್ಸ ವಿಕ್ರೀತೋ ಯೇನ ವಸ್ತುವತ್॥೨೦೫॥

ಹೃತ್ವಾ ರಾಜ್ಯಮಶೇಷಂ ಮೇ ಸಬಾನ್ಧವಧನಂ ಮಹತ್ ।
ದೈವಾಹಿನಾ ನೃಶಂಸೇನ ದಷ್ಟೋ ಮೇ ತನಯಸ್ತತಃ ॥೨೦೬॥

ಅಹಂ ದೈವಾಹಿದಷ್ಟಸ್ಯ ಪುತ್ರಸ್ಯಾನನಪಙ್ಕಜಮ್ ।
ನಿರೀಕ್ಷನ್ನಪಿ ಘೋರೇಣ ವಿಷೇಣಾನ್ಧೀಕೃತೋಽಧುನಾ ॥೨೦೭॥

ಏವಮುಕ್ತ್ವಾ ತಮಾದಾಯ ಬಾಲಕಂ ಬಾಷ್ಪಗದ್ಗದಃ ।
ಪರಿಷ್ವಜ್ಯ ಚ ನಿಶ್ಚೇಷ್ಟೋ ಮೂರ್ಛಯಾ ನಿಪಪಾತ ಹ ॥೨೦೮॥

---

೨೦೫. ಪುತ್ರನೆ! ನನ್ನ ಅಂಗಾಂಗಗಳಿಂದ ಜನಿಸಿದ ಮತ್ತು ಮನಸ್ಸು-ಹೃದಯಗಳಿಗೆ ಆನಂದವನ್ನುಂಟುಮಾಡುವ ನಿನ್ನನ್ನು ನಿನ್ನ ಹಾಳು ತಂದೆ-ಯಾದುದರಿಂದ ನಾನು ವಸ್ತುವನ್ನು ವಿಕ್ರಯಿಸಿದಂತೆ ವಿಕ್ರಯಿಸಿದೆನಲ್ಲ!

೨೦೬. ನಿರ್ದಯವಾದ ನನ್ನ ದೌರ್ಭಾಗ್ಯವೇ ಬಾಂಧವರಿಂದಲೂ ಧನಸಮೃದ್ಧಿಯಿಂದಲೂ ಕೂಡಿದ ನನ್ನ ಸಮಸ್ತ ರಾಜ್ಯವನ್ನು ಅಪಹರಿಸಿ ತರುವಾಯ ಸರ್ಪರೂಪದಿಂದ ನನ್ನ ಪುತ್ರನನ್ನು ಕಡಿದಿದೆ.

೨೦೭. ದುರದೃಷ್ಟವೆಂಬ ಹಾವಿನಿಂದ ಕಡಿಯಲ್ಪಟ್ಟ ಪುತ್ರನ ಮುಖಕಮಲವನ್ನು ನಾನು ನೋಡುತ್ತಿದ್ದರೂ ಆ ಹಾವಿನ ಘೋರ ವಿಷಪ್ರಭಾವ-ದಿಂದ ಕುರುಡನಾಗಿ ಈಗ ಏನೂ ತೋಚದವನಾಗಿದ್ದೇನೆ.

೨೦೮. ಹೀಗೆಂದು ಹೇಳಿ ತಡೆಯಲಾಗದ ಕಣ್ಣೀರು-ಗದ್ಗದಧ್ವನಿ ಇವುಗಳಿಂದ ಕೂಡಿದ ರಾಜನು ಆ ಬಾಲಕನನ್ನು ಎತ್ತಿ ಅಪ್ಪಿಕೊಂಡು ಮೂರ್ಛಿತನಾಗಿ ಚಲಿಸದಹಾಗೆ ಬಿದ್ದನು.

ರಾಜಪತ್ನ್ಯುವಾಚ :—

ಅಯಂ ಸ ಪುರುಷವ್ಯಾಘ್ರಃ ಸ್ವರೇಣೈವೋಪಲಕ್ಷ್ಯತೇ ।
ವಿದ್ವಜ್ಜನಮನಶ್ಚನ್ದ್ರೋ ಹರಿಶ್ಚನ್ದ್ರೋ ನ ಸಂಶಯಃ ॥೨೦೯॥

ತಥಾಸ್ಯ ನಾಸಿಕಾ ತುಙ್ಗಾ ಅಗ್ರತೋಽಧೋಮುಖಂ ಗತಾ ।
ದನ್ತಾಶ್ಚ ಮುಕುಲಪ್ರಖ್ಯಾಃ ಖ್ಯಾತಕೀರ್ತೇರ್ಮಹಾತ್ಮನಃ ॥೨೧೦॥

ಶ್ಮಶಾನಮಾಗತಃ ಕಸ್ಮಾದದ್ಯೈಷ ಸ ನರೇಶ್ವರಃ ।
ಅಪಹಾಯ ಪುತ್ರಶೋಕಂ ಸಾಪಶ್ಯತ್ಪತಿತಂ ಪತಿಮ್ ॥೨೧೧॥

ಪ್ರಹೃಷ್ಟಾ ವಿಸ್ಮಿತಾ ದೀನಾ ಭರ್ತೃಪುತ್ರಾಧಿಪೀಡಿತಾ ।
ವೀಕ್ಷನ್ತೀ ಸಾ ತತೋಽಪಶ್ಯದ್ಭರ್ತುರ್ದಣ್ಡಂ ಜುಗುಪ್ಸಿತಮ್ ॥೨೧೨॥

ರಾಜಪತ್ನಿಯು ಹೀಗೆಂದಳು :—

೨೦೯. ಇವನು ಆ ಮಹಾಪುರುಷನೇ ಅಹುದು. ಧ್ವನಿಯಿಂದಲೆ ಸ್ಪಷ್ಟವಾಗಿ ತಿಳಿಯುವುದು. ಈ ವ್ಯಕ್ತಿಯು ವಿದ್ವಜ್ಜನರ ಮನಸ್ಸಿಗೆ ಚಂದ್ರನಂತೆ ಆನಂದಗೊಳಿಸುವ ಹರಿಶ್ಚಂದ್ರನೆ ಆಗಿರುವನು. ಏನೂ ಸಂಶಯವಿಲ್ಲ.

೨೧೦. ಪ್ರಸಿದ್ಧವಾದ ಕೀರ್ತಿಯುಳ್ಳವನೂ, ಮಹಾತ್ಮನೂ ಆದ ಹರಿಶ್ಚಂದ್ರನೇ ಇವನೆಂದು ಸ್ಥಿರಪಡಿಸುವಂತೆ ಇವನ ಎತ್ತರ ಮೂಗಿನ ಮುಂಭಾಗವು ಬಾಗಿರುವುದು ಮತ್ತು ಹಲ್ಲುಗಳು ಮಲ್ಲಿಗೆ ಮೊಗ್ಗಿನಂತೆ ಪ್ರಕಾಶಿಸುವುವು.

೨೧೧. ಅಂತಹ ಮಹಾರಾಜನು ಹೀಗೆ ಶ್ಮಶಾನಕ್ಕೆ ಏಕೆ ಬಂದಿರುವನು? ಎಂದು ಚಿಂತಿಸುತ್ತ ರಾಜಪತ್ನಿಯು ಪುತ್ರಶೋಕವನ್ನು ಬಿಟ್ಟು ಪತಿತನಾದ ಪತಿಯನ್ನು ನೋಡಿದಳು.

೨೧೨. ಆಕಸ್ಮಿಕ ಪತಿದರ್ಶನದಿಂದ ಸಂತೋಷಗೊಂಡವಳೂ, ವಿಸ್ಮಯಗೊಂಡವಳೂ, ಆ ಸನ್ನಿವೇಶವನ್ನು ನೋಡಿ ದೀನಳೂ, ಪತಿ-ಪುತ್ರರ ವಿಷಯದ ವ್ಯಥೆಯಿಂದ ಪೀಡಿಸಲ್ಪಟ್ಟವಳೂ ಆದ ರಾಜಪತ್ನಿಯು ಅತ್ತಿತ್ತ ನೋಡುತ್ತ ರಾಜನ ಬಳಿಯಲ್ಲಿದ್ದ ಜುಗುಪ್ಸೆಯನ್ನುಂಟುಮಾಡುವ ಸ್ವಾಮಿದಂಡವನ್ನು ಕಂಡಳು.

ಶ್ವಪಾಕಾರ್ಹಂ ಮನೋವೋಽಹಂ ಜಗಾಮಾಯತಲೋಚನಾ ।
ಪ್ರಾಪ್ಯ ಚೇತಶ್ಚ ಶನಕೈಃ ಸಗದ್ಗದಮಭಾಷತ ॥೨೧೩॥

ಧಿಕ್ತ್ವಾಂ ದೈವಾತ್ಯಕರುಣಂ ನಿರ್ಮರ್ಯಾದಂ ಜುಗುಪ್ಸಿತಮ್ ।
ಯೇನಾಯಮಮರಪ್ರಖ್ಯೋ ನೀತೋ ರಾಜಾ ಶ್ವಪಾಕತಾಮ್ ॥೨೧೪॥

ರಾಜ್ಯನಾಶಂ ಸುಹೃತ್ತ್ಯಾಗಂ ಭಾರ್ಯಾತನಯವಿಕ್ರಯಮ್ ।
ಪ್ರಾಪಯಿತ್ವಾಪಿ ನೋ ಮುಕ್ತಶ್ಚಣ್ಡಾಲೋಽಯಂ ಕೃತೋ ನೃಪಃ ॥೨೧೫॥

ಹಾ ರಾಜನ್ ಜಾತಸನ್ತಾಪಾಮಿತ್ಥಂ ಮಾಂ ಧರಣೀತಲಾತ್ ।
ಉತ್ಥಾಪ್ಯ ನಾದ್ಯ ಪರ್ಯಙ್ಕಮಾರೋಹೇತಿ ಕಿಮುಚ್ಯತೇ ॥೨೧೬॥

---

೨೧೩. ಚಂಡಾಲನಿಗೆ ಯೋಗ್ಯವಾದ ಆ ದಂಡವನ್ನು ಕಂಡು ಲಕ್ಷಣವತಿಯಾದ ಆ ರಾಜಮಹಿಷಿಯು ಕ್ಷಣಕಾಲ ಮೂರ್ಛೆಹೊಂದಿದಳು. ಸ್ವಲ್ಪಹೊತ್ತಿನಲ್ಲಿ ಪ್ರಜ್ಞೆಬಂದವಳಾಗಿ ಮೆಲ್ಲಗೆ ಗದ್ಗದಸ್ವರದಿಂದ ಮಾತನಾಡಿದಳು.

೨೧೪. ಕರುಣೆಯಿಲ್ಲದ, ರೀತಿ-ನೀತಿಗಳ ಮಿತಿಯನ್ನು ಮೀರಿದ, ಜುಗುಪ್ಸಿತರುವ ದುರ್ದೈವವೆ? ನಿನಗೆ ಧಿಕ್ಕಾರವು. ದೇವಕುಮಾರರಿಗೊಪ್ಪುವ ಈ ರಾಜನನ್ನು ನೀನು ಚಂಡಾಲದಶೆಗೂ ಇಳಿಸಿದೆಯಲ್ಲವೆ!

೨೧೫. ರಾಜ್ಯಭ್ರಂಶ, ಮಿತ್ರಜನತ್ಯಾಗ ಮತ್ತು ಪತ್ನೀ-ಪುತ್ರರ ವಿಕ್ರಯ ಇವುಗಳನ್ನೆಲ್ಲ ಮಾಡಿಸಿದರೂ ತೃಪ್ತಿಪಟ್ಟು ಬಿಟ್ಟುಹೋಗದೆ ಕಡೆಯಲ್ಲಿ ಈ ರಾಜನನ್ನು ಚಂಡಾಲನನ್ನಾಗಿಯೂ ಮಾಡಿದೆಯಾ!

೨೧೬. ಅಯ್ಯೋ! ರಾಜನೆ! ಹೀಗೆ ಸಂತಪಿಸುತ್ತಿದ್ದ ನನ್ನನ್ನು ನೆಲದಿಂದ ಮೇಲಕ್ಕೆ ಎತ್ತಿ "ಮಂಚವನ್ನು ಏರಿ ಕುಳಿತುಕೊ" ಎಂದು ಹಿಂದೆ ಸಮಾಧಾನ ಮಾತುಗಳನ್ನು ಆಡುತ್ತಿದ್ದಂತೆ ಇಂದು ಏಕೆ ಮಾತನಾಡುವುದಿಲ್ಲ?

ನಾದ್ಯ ಪಶ್ಯಾಮಿ ತೇ ಛತ್ರಂ ಶೃಙ್ಗಾರಮಥವಾ ಪುನಃ ।
ಚಾಮರಂ ವ್ಯಜನಂ ಚಾಪಿ ಕೋಽಯಂ ವಿಧಿವಿಪರ್ಯಯಃ ॥೨೦೭॥

ಯಸ್ಯಾಗ್ರೇ ವ್ರಜತಃ ಪೂರ್ವಂ ರಾಜಾನೋ ಭೃತ್ಯತಾಂ ಗತಾಃ ।
ಸ್ವೋತ್ತರೀಯೈರಕುರ್ವನ್ತ ನೀರಜಸ್ಕಂ ಮಹೀತಲಮ್ ॥೨೦೮॥

ಸೋಽಯಂ ಕಪಾಲಸಂಲಗ್ನಘಟೀಘಟನಿರನ್ತರೇ ।
ಮೃತನಿರ್ಮಾಲ್ಯಸೂತ್ರಾನ್ತರ್ಗೂಢಕೇಶೇ ಸುದಾರುಣೇ ॥೨೦೯॥

ವಸಾನಿಷ್ಯನ್ದಸಂಶುಷ್ಕಮಹೀಪುಟಕಮಣ್ಡಿತೇ ।
ಭಸ್ಮಾಙ್ಗಾರಾರ್ಧದಗ್ಧಾಸ್ಥಿಮಜ್ಜಾಸಂಘಟ್ಟಭೀಷಣೇ ॥೨೧೦॥

---

೨೦೭. ಇಂದು ನಿನ್ನ ಸಮೀಪದಲ್ಲಿ ರಾಜಲಕ್ಷಣವಾದ ಛತ್ರ, ಚಾಮರ ಮತ್ತು ಬೀಸಣಿಗೆಗಳನ್ನು ನಾನು ಕಾಣಲಿಲ್ಲ. ಮತ್ತು ಅನುರಾಗಪೂರ್ವಕವಾದ ಶೃಂಗಾರಚೇಷ್ಟೆಗಳು ಕಾಣಿಸುವುದಿಲ್ಲ. ಇದೆಂತಹ ವಿಧಿಯ ಭಾರಿಯಾದ ಬದಲಾವಣೆಯು !

೨೦೮. ಹಿಂದೆ ನೀನು ಹೊರಗೆ ಚಿತ್ತೈಸಿ ಬರುವಾಗ ಅನೇಕ ಆಶ್ರಿತ ರಾಜರು ಸೇವಕರಂತೆ ನಿಂತು ತಮ್ಮ ಉತ್ತರೀಯವಸ್ತ್ರಗಳ ಸೆರಗಿನಿಂದ ನೆಲದಲ್ಲಿದ್ದ ಧೂಳಿಯನ್ನು ಹೊಡೆಯುತ್ತಿದ್ದರು.

೨೦೯. ಅಂತಹ ನೀನು ಇಂದು ಕಪಾಲಗಳಿಂದ ತುಂಬಿದ ಕುಡಿಕೆ-ಮಡಿಕೆಗಳು ವ್ಯಾಪಿಸಿಕೊಂಡಿರುವ, ಮೃತಜನರ ನಿರ್ಮಾಲ್ಯ ಹೂಗಳಸಂಗಡ ಕೂದಲು ಬೆರೆತು ಭಯಂಕರವಾಗಿ ಕಾಣುವ ಶ್ಮಶಾನದಲ್ಲಿ ಓಡಾಡುತ್ತಿದ್ದೀಯೆ.

೨೧೦. ಮತ್ತು ಈ ಶ್ಮಶಾನವು ವಸಾಧಾತುವು ಹರಿದು ಒಣಗಿದ್ದ ಅನೇಕ ಪ್ರದೇಶಗಳಿಂದ ಕೂಡಿದೆ. ಹಾಗು ಬೂದಿಯರಾಶಿ, ಕೆಂಡ, ಅರ್ಧ ಸುಟ್ಟಿರುವ ಎಲುಬು, ಮಜ್ಜಾಧಾತುಗಳಿಂದ ಭಯಂಕರವಾಗಿದೆ.

ಗೃಧ್ರಗೋಮಾಯುನಾದಾರ್ತನಷ್ಟಕ್ಷುದ್ರವಿಹಙ್ಗಮೇ ।
ಚಿತಾಧೂಮಾಯತಿರುಚಾ ನೀಲೀಕೃತದಿಗನ್ತರೇ ॥೨೨೧॥

ಕುಣಪಾಸ್ವಾದನಮುದಾ ಸಂಪ್ರಹೃಷ್ಟನಿಶಾಚರೇ ।
ಚರತ್ಯಮೇಧ್ಯೇ ರಾಜೇನ್ದ್ರಃ ಶ್ಮಶಾನೇ ದುಃಖಪೀಡಿತಃ ॥೨೨೨॥

ಏವಮುಕ್ತ್ವಾ ಸಮಾಶ್ಲಿಷ್ಯ ಕಣ್ಠಂ ರಾಜ್ಞೋ ನೃಪಾತ್ಮಜಾ ।
ಕಷ್ಟಶೋಕಶತಾಧಾರಾ ವಿಲಲಾಪಾರ್ತಯಾ ಗಿರಾ ॥೨೨೩॥

ರಾಜಪತ್ನ್ಯುವಾಚ :—

ರಾಜನ್ ಸ್ವಪ್ನೋಽಥ ತಥ್ಯಂ ವಾ ಯದೇತನ್ಮನ್ಯತೇ ಭವಾನ್ ।
ತತ್ಕಥ್ಯತಾಂ ಮಹಾಭಾಗ ಮನೋ ವೈ ಮುಹ್ಯತೇ ಮಮ ॥೨೨೪॥

---

೨೨೧. ಮತ್ತು ಈ ಶ್ಮಶಾನಭೂಮಿಯು ಗಿಡಗ, ನರಿ ಮುಂತಾದ ಪ್ರಾಣಿಗಳ ಕೂಗಿನಿಂದ ಭಯಪಟ್ಟು ಓಡಿಹೋದ ಇತರ ಕ್ಷುದ್ರಪಕ್ಷಿಗಳುಳ್ಳದ್ದೂ, ಚಿತೆಯ ಧೂಮರೇಖೆಯ ಕಾಂತಿಯಿಂದ ಕಪ್ಪಾದ ದಿಕ್ಕುಗಳುಳ್ಳದ್ದೂ ಆಗಿದೆ.

೨೨೨. ಮಾಂಸವನ್ನು ಭುಂಜಿಸಿ ಆನಂದದಿಂದ ಮದಿಸಿದ ರಾತ್ರಿಂಚರ ಪ್ರಾಣಿಗಳಿಂದ ಕೂಡಿದ ಅಪವಿತ್ರವಾದ ಈ ರುದ್ರಭೂಮಿಯಲ್ಲಿ ಅತಿಯಾದ ದುಃಖದಿಂದ ನೊಂದು ರಾಜೇಂದ್ರನಾದ ನೀನು ವಾಸಮಾಡುತ್ತಿದ್ದೀಯೆ.

೨೨೩. ಹೀಗೆಂದು ಹೇಳಿ ರಾಜನ ಕಂಠವನ್ನು ಬಿಗಿಯಾಗಿ ಅಪ್ಪಿ-ಕೊಂಡು ರಾಜಪತ್ನಿಯಾದ ಶೈಬ್ಯೆಯು ಎಣಿಸಲಾಗದ ಕಷ್ಟ-ಶೋಕಗಳಿಗೆ ಭಾಗಿಯಾಗಿ ಆರ್ತನಾದದಿಂದ ಗಟ್ಟಿಯಾಗಿ ಅತ್ತಳು.

ರಾಜಪತ್ನಿಯು ಇಂತೆಂದಳು :—

೨೨೪. ರಾಜನೆ! ಇದೇನು ಸ್ವಪ್ನವೆ? ಅಥವಾ ನಿಜವಾಗಿ ನಡೆದ ಸಂಗತಿಯೆ? ನೀನೇನು ತಿಳಿದಿದ್ದೀಯೆ? ಅದನ್ನು ನನಗೆ ತಿಳಿಸು. ನನಗೆ ಒಂದೂ ತಿಳಿಯದ ಹಾಗೆ ಮನಸ್ಸು ಮೋಹಗೊಂಡಿರುವುದು.

ಯದ್ಯೇತದೇವಂ ಧರ್ಮಜ್ಞ ನಾಸ್ತಿ ಧರ್ಮೋ ಸಹಾಯತಾ ।
ತಥೈವ ವಿಪ್ರದೇವಾದಿಪೂಜನೇ ಪಾಲನೇ ಭುವಃ ॥೨೨೫॥

ನಾಸ್ತಿ ಧರ್ಮಃ ಕುತಃ ಸತ್ಯಮಾರ್ಜವಂ ಚಾನೃಶಂಸತಾ ।
ಯತ್ರ ತ್ವಂ ಧರ್ಮಪರಮಃ ಸ್ವರಾಜ್ಯಾದವರೋಪಿತಃ ॥೨೨೬॥

ಇತಿ ತಸ್ಯಾ ವಚಃ ಶ್ರುತ್ವಾ ನಿಶ್ವಸ್ಯೋಷ್ಣಂ ಸಗದ್ಗದಮ್ ।
ಕಥಯಾಮಾಸ ತನ್ವಙ್ಗ್ಯೈ ಯಥಾ ಪ್ರಾಪ್ತಾ ಶ್ವಪಾಕತಾ ॥೨೨೭॥

ರುದಿತ್ವಾ ಸಾಪಿ ಸುಚಿರಂ ನಿಶ್ವಸ್ಯೋಷ್ಣಂ ಚ ದುಃಖಿತಾ ।
ಸ್ವಪುತ್ರಮರಣಂ ಭೀರುರ್ಯಥಾವೃತ್ತಂ ನ್ಯವೇದಯತ್ ॥೨೨೮॥

ಶ್ರುತ್ವಾ ರಾಜಾ ತದಾ ವಾಕ್ಯಂ ನಿಪಪಾತ ಮಹೀತಲೇ ।
ಮೃತಸ್ಯ ಪುತ್ರಸ್ಯ ತದಾ ಜಿಹ್ವಯಾ ಲೇಲಿಹನ್ಮುಖಮ್ ॥೨೨೯॥

---

೨೨೫. ಈ ಸಂಗತಿಯು ನಿಜವಾಗಿ ನಡೆದಿರುವುದೆ ಆಗಿದ್ದರೆ ಧರ್ಮವನ್ನು ಅರಿತವನೆ! ಕೇಳು. ಧರ್ಮವು ಸಹಾಯಮಾಡುವುದಿಲ್ಲ. ಹಾಗೆಯೆ ದೇವ-ಬ್ರಾಹ್ಮಣ ಪೂಜೆ, ರಾಜ್ಯಪರಿಪಾಲನೆ ಈ ಕರ್ಮಗಳೆಲ್ಲವೂ ವ್ಯರ್ಥವೇ ಸರಿ.

೨೨೬. ಧರ್ಮ ಎಂಬುದು ಇಲ್ಲ. ಸತ್ಯವಚನ, ಋಜುಬುದ್ಧಿ, ಮತ್ತು ಸೌಮ್ಯಸ್ವಭಾವ ಈ ಧರ್ಮವಿಶೇಷಗಳು ಎಲ್ಲಿವೆ? ಧರ್ಮವೆಂಬುದು ಇದ್ದಪಕ್ಷದಲ್ಲಿ ಧರ್ಮನಿಷ್ಠನಾದ ನೀನು ಸ್ವರಾಜ್ಯದಿಂದ ಏಕೆ ಭ್ರಷ್ಟನಾಗುತ್ತಿದ್ದೀಯೆ?

೨೨೭. ಹೀಗೆಂಬ ಶೈಬ್ಯೆಯ ಮಾತನ್ನು ಕೇಳಿದ ಹರಿಶ್ಚಂದ್ರನು ದುಃಖದಿಂದ ಬಿಸಿಉಸಿರು ಬಿಟ್ಟು ತನಗೆ ಚಂಡಾಲತ್ವ ಪ್ರಾಪ್ತಿಯಾದ ಪ್ರಸಂಗವನ್ನು ಸತಿಗೆ ಗದ್ಗದಧ್ವನಿಯಿಂದ ಹೇಳಿದನು.

೨೨೮. ರಾಜಪತ್ನಿಯು ಬಹಳಹೊತ್ತು ಅತ್ತು ಬಿಸಿಯಾದ ಉಸಿರನ್ನು ಬಿಟ್ಟು ಬಹಳ ದುಃಖಿತಳಾಗಿ ಭಯಪಡುತ್ತ ತನ್ನ ಪುತ್ರನಿಗೆ ಮೃತ್ಯು ಒದಗಿದ ಪ್ರಸಂಗವನ್ನು ನಡೆದಂತೆ ತಿಳಿಸಿದಳು.

೨೨೯. ರಾಜನು ಆಗ ಪುತ್ರಮರಣವಾರ್ತೆಯನ್ನು ಕೇಳುತ್ತಿದ್ದಹಾಗೆ ನಿಲ್ಲಲಾರದೆ ನೆಲಕ್ಕೆ ಬಿದ್ದನು. ಮತ್ತು ತನ್ನ ನಾಲಿಗೆಯಿಂದ ಮೃತನಾದ ಪುತ್ರನ ಮುಖವನ್ನು ನೆಕ್ಕಿದನು.

ರಾಜೋವಾಚ :—

ಯಮಸ್ಯ ಭಿಕ್ಷಾಂ ಯಾಚಾವಃ ಕೃಪಣೌ ಪುತ್ರಗರ್ಧಿನೌ ।
ತಸ್ಮಾಚ್ಛೀಘ್ರಂ ವ್ರಜಾವೋಽದ್ಯ ಪುತ್ರೋ ಯತ್ರ ಪ್ರಿಯೋ ಗತಃ ॥೨೩೦॥

ಪ್ರಿಯೇ ನ ರೋಚಯೇ ದೀರ್ಘಂ ಕಾಲಂ ಕ್ಲೇಶಮುಪಾಸಿತುಮ್ ।
ನಾತ್ಮಾಯತ್ತಶ್ಚ ತನ್ವಙ್ಗಿ ಪಶ್ಯ ಮೇ ಮನ್ದಭಾಗ್ಯತಾಮ್ ॥೨೩೧॥

ಚಣ್ಡಾಲೇನಾನನುಜ್ಞಾತಃ ಪ್ರವೇಕ್ಷ್ಯೇ ಜ್ವಲನಂ ಯದಿ ।
ಚಣ್ಡಾಲದಾಸ್ಯತಾಂ ಯಾಸ್ಯೇ ಪುನರಪ್ಯನ್ಯಜನ್ಮನಿ ॥೨೩೨॥

ನರಕೇ ಚ ಪತಿಷ್ಯಾಮಿ ಕೀಟಕಃ ಕ್ರಿಮಿಭೋಜನಃ ।
ವೈತರಣ್ಯಾಂ ಮಹಾಪೂಯವಸಾಸೃಕ್‌ಸ್ನಾಯುಪಿಚ್ಛಿಲೇ ॥೨೩೩॥

ರಾಜನು ಇಂತೆಂದನು :—

೨೩೦. ನಾವು ದೀನರೂ ಪುತ್ರನಲ್ಲಿ ಬಲು ಆಸೆಯುಳ್ಳವರೂ ಆಗಿದ್ದೇವೆ. ನಾವು ಯಮನಲ್ಲಿ ಪುತ್ರಭಿಕ್ಷೆಯನ್ನು ಬೇಡೋಣ. ಆದ್ದರಿಂದ ಯಾವ ಮೃತ್ಯು-ಲೋಕಕ್ಕೆ ಪ್ರಿಯಪುತ್ರನು ತೆರಳಿರುವನೊ; ನಾವಿಬ್ಬರೂ ಬೇಗ ಅಲ್ಲಿಗೆ ಹೋಗೋಣ.

೨೩೧. ಪ್ರಿಯೆಯೆ ! ದೀರ್ಘಕಾಲದವರೆಗೆ ಈ ಪುತ್ರಕ್ಲೇಶವನ್ನು ಅನುಭವಿಸಲು ನನಗೆ ಸಾಧ್ಯವಿಲ್ಲ. ಆದರೆ ನಾನು ನನ್ನಪಾಡಿಗೆ ಸ್ವತಂತ್ರ-ನಾಗಿಲ್ಲ. ಪ್ರಿಯೆಯೆ ! ನನ್ನ ನಿರ್ಭಾಗ್ಯತನವನ್ನು ನೋಡು.

೨೩೨. ಸ್ವಾಮಿ ಚಂಡಾಲನಿಂದ ಅನುಮತಿಯನ್ನು ಪಡೆಯದೆ ನಾನು ಅಗ್ನಿಯನ್ನು ಪ್ರವೇಶಿಸಿದರೆ ಮತ್ತೆ ಮುಂದಿನ ಜನ್ಮದಲ್ಲಿ ಕೂಡ ಈ ಕರ್ಮಶೇಷ-ದಿಂದ ಚಂಡಾಲದಾಸ್ಯವನ್ನು ಹೊಂದಲೇಬೇಕು.

೨೩೩. ಮತ್ತು ಸ್ವಾಮಿದ್ರೋಹಪಾತಕದಿಂದ ನರಕಯಾತನೆಗೆ ಸಿಲುಕುವೆನು. ಸಣ್ಣಕ್ರಿಮಿಗಳನ್ನು ಭುಂಜಿಸುವ ದೊಡ್ಡಕ್ರಿಮಿಯಾಗಿ ಜನಿಸು-ವೆನು. ಹಾಗು ಕೀವು, ವಸಾ, ರಕ್ತ, ಎಲುಬು, ಮೂಳೆ ಮುಂತಾದುವುಗಳಿಂದ ತುಂಬಿದ ವೈತರಣಿನದಿಯಲ್ಲಿ ಬೀಳಬೇಕಾಗುವುದು.

ಅಸಿಪತ್ರವನೇ ಪ್ರಾಪ್ಯ ಛೇದಂ ಪ್ರಾಪ್ಸ್ಯಾಮಿ ದಾರುಣಮ್ ।
ತಾಪಂ ಪ್ರಾಪ್ಸ್ಯಾಮಿ ವಾ ಪ್ರಾಪ್ಯ ಮಹಾರೌರವರೌರವೌ ॥೨೩೪॥

ಮಗ್ನಸ್ಯ ದುಃಖಜಲಧೌ ಪಾರಃ ಪ್ರಾಣವಿಯೋಜನಮ್ ॥೨೩೫॥

ಏಕೋಽಪಿ ಬಾಲಕೋ ಯೋಽಯಮಾಸೀದ್ವಂಶಕರಃ ಸುತಃ ।
ಮಮ ದೈವಾಮ್ಬುವೇಗೇನ ಮಗ್ನಃ ಸೋಽಪಿ ಬಲೀಯಸಾ ॥೨೩೬॥

ಕಥಂ ಪ್ರಾಣಾನ್ವಿಮುಞ್ಚಾಮಿ ಪರಾಯತ್ತೋಽಸ್ಮಿ ದುರ್ಗಗಃ ।
ಅಥವಾ ನಾರ್ತಿನಾ ಕ್ಲಿಷ್ಟೋ ನರಃ ಪಾಪಮವೇಕ್ಷತೇ ॥೨೩೭॥

ತಿರ್ಯಕ್ತ್ವೇ ನಾಸ್ತಿ ತದ್ದುಃಖಂ ನಾಸಿಪತ್ರವನೇ ತಥಾ ।
ವೈತರಣ್ಯಾಂ ಕುತಸ್ತಾದೃಗ್ಯಾದೃಶಂ ಪುತ್ರವಿಪ್ಲವೇ ॥೨೩೮॥

---

೨೩೪. ಅಸಿಪತ್ರವನವೆಂಬ ನರಕದಲ್ಲಿ ನನ್ನನ್ನು ಹಾಕಿ ಯಮಭಟರು ನನ್ನನ್ನು ತುಂಡುತುಂಡಾಗಿ ಕತ್ತರಿಸುವರು. ಅಥವಾ ರೌರವ-ಮಹಾರೌರವ ಎಂಬ ನರಕದಲ್ಲಿ ವಾಸಿಸಿ ಮಹತ್ತಾದ ತಾಪವನ್ನು ಅನುಭವಿಸುವಂತೆ ಆಗುವುದು.

೨೩೫. ಅಪಾರವಾದ ದುಃಖ ಸಮುದ್ರದಲ್ಲಿ ಮುಳುಗಿದ ನನಗೆ ಪ್ರಾಣತ್ಯಾಗದ ಹೊರತು ಸಮಾಧಾನವನ್ನು ತರುವ ಬೇರೊಂದು ಉಪಾಯವು ತೋರುವುದಿಲ್ಲ.

೨೩೬. ನನ್ನ ವಂಶವನ್ನು ಅವಿಚ್ಛಿನ್ನವಾಗಿ ಮುಂದುವರಿಸಲು ಯಾವ ಒಬ್ಬ ಬಾಲಕನಿದ್ದನೊ ಅವನೂ ಇಂದು ಪ್ರಬಲವಾದ ದುರ್ದೈವವೆಂಬ ಜಲ-ಪ್ರವಾಹಕ್ಕೆ ಸಿಕ್ಕಿ ಮುಳುಗಿಹೋದನು.

೨೩೭. ಈಗ ಪ್ರಾಣವನ್ನಾದರೂ ಹೇಗೆ ತ್ಯಜಿಸಲಿ, ಈಗ ನಾನು ಚಂಡಾಲದಾಸ್ಯವೆಂಬ ದುರ್ಗಕ್ಕೆ ಸಿಲುಕಿ ಪರತಂತ್ರನಾಗಿರುವೆನು. ಅಥವಾ ಕಷ್ಟಪರಂಪರೆಗಳಿಗೆ ಸಿಲುಕಿದ ಮಾನವನು ಪಾಪಗಳನ್ನು ಎಣಿಸುವುದಿಲ್ಲ.

೨೩೮. ಪುತ್ರನನ್ನು ಕಳೆದುಕೊಂಡ ಈ ಸಮಯದಲ್ಲಿ ಪ್ರಾಪ್ತವಾದ ದುಃಖವು ಮೂಕಪ್ರಾಣಿಜನ್ಮವೆತ್ತಿದಾಗಲೂ ಇಲ್ಲ. ಅಸಿಪತ್ರವನವೆಂಬ ನರಕ-ದಲ್ಲಿಯೂ ಇಲ್ಲ. ಅಥವಾ ಅಂತಹ ದುಃಖವು ವೈತರಣಿನದಿಯಲ್ಲಿ ಎಲ್ಲಿಬಂದೀತು?

ಸೋಽಹಂ ಸುತಶರೀರೇಣ ದೀಪ್ಯಮಾನೇ ಹುತಾಶನೇ ।
ನಿಪತಿಷ್ಯಾಮಿ ತನ್ವಙ್ಗಿ ಕ್ಷನ್ತವ್ಯಂ ಕುಕೃತಂ ಮಮ ॥೨೩೯॥

ಅನುಜ್ಞಾತಾ ಚ ಗಚ್ಛ ತ್ವಂ ವಿಪ್ರವೇಶ್ಮ ಶುಚಿಸ್ಮಿತೇ ।
ಮಮ ವಾಕ್ಯಂ ಚ ತನ್ವಙ್ಗಿ ನಿಬೋಧಾದೃತಮಾನಸಾ ॥೨೪೦॥

ಯದಿ ದತ್ತಂ ಯದಿ ಹುತಂ ಗುರವೋ ಯದಿ ತೋಷಿತಾಃ ।
ಪರತ್ರ ಸಙ್ಗಮೋ ಭೂಯಾತ್ಪುತ್ರೇಣ ಸಹ ಚ ತ್ವಯಾ ॥೨೪೧॥

ಇಹ ಲೋಕೇ ಕುತಸ್ತ್ವೇತದ್ಭವಿಷ್ಯತಿ ಮಮೇಙ್ಗಿತಮ್ ।
ತ್ವಯಾ ಸಹ ಮಮ ಶ್ರೇಯೋ ಗಮನಂ ಪುತ್ರಮಾರ್ಗಣೇ ॥೨೪೨॥

ಯನ್ಮಯಾ ಹಸತಾ ಕಿಂಚಿದ್ರಹಸ್ಯೇ ವಾ ಶುಚಿಸ್ಮಿತೇ ।
ಅಶ್ಲೀಲಮುಕ್ತಂ ತತ್ಸರ್ವಂ ಕ್ಷನ್ತವ್ಯಂ ಮಮ ಯಾಚತಃ ॥೨೪೩॥

---

೨೩೯. ಪ್ರಿಯೆಯೆ! ಅಂತಹ ದುಃಖಭಾಗಿಯಾದ ನಾನು ಮೃತ-ಪುತ್ರನ ದೇಹವನ್ನಿಟ್ಟು ಉರಿಯುತ್ತಿದ್ದ ಚಿತಾಗ್ನಿಯಲ್ಲಿ ಬೀಳುವೆನು. ನನ್ನಿಂದ ಆದ ತಪ್ಪನ್ನು ನೀನು ಮನ್ನಿಸು.

೨೪೦. ಪವಿತ್ರವಾದ ಮಂದಹಾಸವುಳ್ಳ ಸತಿಯೆ! ನನ್ನ ಅನುಜ್ಞೆ-ಯನ್ನು ಹೊಂದಿ ನೀನು ಈಗ ವೃದ್ಧ ಬ್ರಾಹ್ಮಣನ ಮನೆಗೆ ಹೋಗು. ಪ್ರಿಯೆಯೆ! ನಾನು ಹೇಳುವ ವಚನವನ್ನು ಆದರದಿಂದ ಮನಸ್ಸನ್ನಿಟ್ಟು ಕೇಳು.

೨೪೧. ದಾನ-ಹೋಮ ಮುಂತಾದ ಧರ್ಮವನ್ನು ಮಾಡಿರುವುದೂ, ಗುರುಗಳನ್ನು ಶುಶ್ರೂಷೆಯಿಂದ ಸಂತೋಷಪಡಿಸಿರುವುದೂ ಇದ್ದರೆ ಆ ಧರ್ಮ-ಪ್ರಭಾವದಿಂದ ನನಗೆ ಪರಲೋಕದಲ್ಲಿ ನಿನ್ನ ಮತ್ತು ಬಾಲಕನ ಸಹವಾಸವು ದೊರೆಯಲಿ.

೨೪೨. ಈ ನನ್ನ ಮನೋರಥವು ಇಹಲೋಕದಲ್ಲಿ ಈಡೇರುವುದೆಂತು? ಆದರೆ ಮೃತಪುತ್ರನನ್ನು ಹುಡುಕಲು ನಾನು ನಿನ್ನೊಂದಿಗೆ ಹೋಗುವುದೇ ಲೇಸು.

೨೪೩. ನಿರ್ಮಲವಾದ ಮಂದಹಾಸವುಳ್ಳ ಪ್ರಿಯೆಯೆ! ನಾನು ಹಾಸ್ಯಪ್ರಸಂಗದಲ್ಲಿಯೂ ಏಕಾಂತವಾಸದಲ್ಲಿಯೂ ಏನಾದರೂ ಅಶ್ಲೀಲವಾದ ಮಾತನ್ನು ಆಡಿರಬಹುದು. ಅದೆಲ್ಲವನ್ನೂ ಕ್ಷಮಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುವೆನು.

ರಾಜಪತ್ನೀತಿ ಗರ್ವೇಣ ನಾವಜ್ಞೇಯಃ ಸ ತೇ ದ್ವಿಜಃ ।
ಸರ್ವಯತ್ನೇನ ತೇ ತೋಷ್ಯಃ ಸ್ವಾಮೀ ದೈವತವಚ್ಛುಭೇ ॥೨೪೪॥

ರಾಜಪತ್ನ್ಯುವಾಚ :—

ಅಹಮಪ್ಯತ್ರ ರಾಜರ್ಷೇ ದೀಪ್ಯಮಾನೇ ಹುತಾಶನೇ ।
ದುಃಖಭಾರಾಸಹಾದ್ಯೈವ ಸಹ ಯಾಸ್ಯಾಮಿ ವೈ ತ್ವಯಾ ॥೨೪೫॥

ಸಹ ಸ್ವರ್ಗಂ ಚ ನರಕಂ ಸಹೈವಾವಾಂ ಹಿ ಭುಞ್ಜ್ವಹೇ ।
ಶ್ರುತ್ವಾ ರಾಜಾ ತದೋವಾಚ ಏವಮಸ್ತು ಪತಿವ್ರತೇ ॥೨೪೬॥

ಪಕ್ಷಿಣ ಊಚುಃ :—

ತತಃ ಕೃತ್ವಾ ಚಿತಾಂ ರಾಜಾ ಆರೋಪ್ಯ ತನಯಂ ಸ್ವಕಮ್ ।
ಭಾರ್ಯಯಾ ಸಹಿತಶ್ಚಾಸೌ ಬದ್ಧಾಞ್ಜಲಿಪುಟಸ್ತದಾ ॥೨೪೭॥

---

೨೪೪. ಕಲ್ಯಾಣಶೀಲಳೆ! ರಾಜಪತ್ನಿಯೆಂಬ ಗರ್ವದಿಂದ ಸ್ವಾಮಿಯಾದ ವೃದ್ಧಬ್ರಾಹ್ಮಣನನ್ನು ನೀನು ಎಂದೂ ತಿರಸ್ಕರಿಸಲಾಗದು. ಸರ್ವಪ್ರಯತ್ನದಿಂದಲೂ ದೇವರಂತೆ ಸ್ವಾಮಿಯನ್ನು ಆರಾಧಿಸಿ ಸಂತೋಷಪಡಿಸಬೇಕು.

ರಾಜಪತ್ನಿಯು ನುಡಿದಳು :—

೨೪೫. ರಾಜರ್ಷಿಯೆ! ದುಃಖಪರಂಪರೆಯನ್ನು ಸಹಿಸಲಾರದ ನಾನೂ ಕೂಡ ಉರಿಯುತ್ತಿರುವ ಈ ಚಿತಾಗ್ನಿಜ್ವಾಲೆಯಲ್ಲಿ ಬಿದ್ದು ಈಗಲೆ ನಿನ್ನೊಡನೆ ಪರಲೋಕವನ್ನು ಸೇರುವೆನು.

೨೪೬. ಸ್ವರ್ಗಸುಖವನ್ನಾಗಲಿ, ನರಕಯಾತನೆಯನ್ನಾಗಲಿ ನಾವಿಬ್ಬರೂ ಜೊತೆಯಲ್ಲಿ ಅನುಭವಿಸೋಣ. ರಾಜನು ಈ ಮಾತನ್ನು ಕೇಳಿ ಆಗ ಸತಿಯನ್ನು ನೋಡಿ ಪತಿವ್ರತೆಯೆ! “ ಹಾಗೆ ಆಗಲಿ ” ಎಂದು ಹೇಳಿದನು.

ಪಕ್ಷಿಗಳು ಇಂತೆಂದುವು :—

೨೪೭. ತರುವಾಯ ಚಿತೆಯನ್ನು ಅಗ್ನಿಯಿಂದ ಉರಿಸಿ ತನ್ನ ಪುತ್ರನನ್ನು ಚಿತೆಯಲ್ಲಿಟ್ಟು ಆಗ ಪತ್ನೀಸಮೇತನಾಗಿ ಅಂಜಲಿಯಂತೆ ಕೈಗಳನ್ನು ಜೋಡಿಸಿಕೊಂಡು ದೇವರನ್ನು ಧ್ಯಾನಿಸಿದನು.

ಚಿನ್ತಯನ್ಸರಮಾತ್ಮಾನಮಾಶಂ ನಾರಾಯಣಂ ಹರಿಮ್ ।
ಹೃತ್ಕೋಟರಗುಹಾಸೀನಂ ವಾಸುದೇವಂ ಸುರೇಶ್ವರಮ್ ॥೨೪೮॥

ಅನಾದಿನಿಧನಂ ಬ್ರಹ್ಮ ಕೃಷ್ಣಂ ಪೀತಾಮ್ಬರಂ ಶುಭಮ್ ॥೨೪೯॥

ತಸ್ಯ ಚಿನ್ತಯಮಾನಸ್ಯ ಸರ್ವೇ ದೇವಾಃ ಸವಾಸವಾಃ ।
ಧರ್ಮಂ ಪ್ರಮುಖತಃ ಕೃತ್ವಾ ಸಮಾಜಗ್ಮುಸ್ತ್ವರಾನ್ವಿತಾಃ ॥೨೫೦॥

ಆಗತ್ಯ ಸರ್ವೇ ಪ್ರೋಚುಸ್ತೇ ಭೋ ಭೋ ರಾಜನ್ ಶೃಣು ಪ್ರಭೋ ।
ಅಯಂ ಪಿತಾಮಹಃ ಸಾಕ್ಷಾದ್ಧರ್ಮಶ್ಚ ಭಗವಾನ್ ಸ್ವಯಮ್ ॥೨೫೧॥

---

೨೪೮. ಸರ್ವೇಶ್ವರನೂ, ಕಲ್ಪದ ಆದಿಯಲ್ಲಿ ಉದಧಿಶಯನನೂ, ಪಾಪಭಂಜಕನೂ, ಹೃದಯದ ದುರ್ಗವೆಂಬ ಗುಹೆಯಲ್ಲಿ ವಾಸಮಾಡುವವನೂ, ಸರ್ವಪ್ರಾಣಿಗಳಲ್ಲಿ ವಾಸಮಾಡುತ್ತ ಪ್ರಕಾಶಿಸುವವನೂ, ಮತ್ತು ದೇವರಾಜನೂ ಆದ ಪರಮಾತ್ಮನನ್ನು ಧ್ಯಾನಿಸಿದನು.

೨೪೯. ಹಾಗು ಉತ್ಪತ್ತಿ-ನಿಧನಗಳೆಂಬ ಭಾವವಿಕಾರಗಳಿಂದ ಶೂನ್ಯನೂ, ಪರಿಚ್ಛೇದವಿಲ್ಲದವನೂ, ಪೀತಾಂಬರಧಾರಿಯೂ ಮತ್ತು ಮಂಗಳ-ಮೂರ್ತಿಯೂ ಆದ ಕೃಷ್ಣಪರಮಾತ್ಮನನ್ನು ಸ್ಮರಿಸಿದನು.

೨೫೦. ಹರಿಶ್ಚಂದ್ರನು ದೇವತಾಧ್ಯಾನಾಸಕ್ತನಾಗಿರಲು ಇಂದ್ರ ಆದಿ-ಯಾಗಿ ಸಮಸ್ತ ದೇವತೆಗಳೂ ತ್ವರೆಪಟ್ಟವರಾಗಿ ಧರ್ಮಪ್ರಜಾಪತಿಯನ್ನು ಮುಂದಿರಿಸಿಕೊಂಡು ಬಂದರು.

೨೫೧. ಎಲ್ಲ ದೇವತೆಗಳು ರಾಜನ ಬಳಿಗೆ ಬಂದು ಈ ರೀತಿಯಾಗಿ ಹೇಳಿದರು. ಎಲೈ, ಪ್ರಭುವಾದ ರಾಜನೆ ! ಕೇಳು. ಪಿತಾಮಹನೆನಿಸಿರುವ ಬ್ರಹ್ಮದೇವನೂ, ಹಾಗು ಪೂಜ್ಯನಾದ ಧರ್ಮಪ್ರಜಾಪತಿಯೂ ಪ್ರತ್ಯಕ್ಷವಾಗಿ ಬಂದಿರುವರು.

ಸಾಧ್ಯಾಶ್ಚ ವಿಶ್ವೇ ಮರುತೋ ಲೋಕಪಾಲಾಃ ಸಚಾರಣಾಃ ।
ನಾಗಾಃ ಸಿದ್ಧಾಃ ಸಗನ್ಧರ್ವಾ ರುದ್ರಾಶ್ಚೈವ ತಥಾಶ್ವಿನೌ ॥೨೫೨॥

ಏತೇ ಚಾನ್ಯೇ ಚ ಬಹವೋ ವಿಶ್ವಾಮಿತ್ರಸ್ತಥೈವ ಚ ॥೨೫೩॥

ವಿಶ್ವತ್ರಯೇಣ ಯೋ ಮಿತ್ರಂ ಕರ್ತುಂ ನೈ ನಾಶಕತ್ಪುರಾ ।
ವಿಶ್ವಾಮಿತ್ರಸ್ತು ತೇ ಮೈತ್ರೀಮಿಷ್ಟಂ ಚಾಹರ್ತುಮಿಚ್ಛತಿ ॥೨೫೪॥

ಆರುರೋಹ ತತಃ ಪ್ರಾಪ್ತೋ ಧರ್ಮಃ ಶಕ್ರೋಽಥ ಗಾಧಿಜಃ॥೨೫೫॥

ಧರ್ಮ ಉವಾಚ :—

ಮಾ ರಾಜನ್ ಸಾಹಸಂ ಕಾರ್ಷೀರ್ಧರ್ಮೋಽಹಂ ತ್ವಾಮುಪಾಗತಃ ।
ತಿತಿಕ್ಷಾದಮಸತ್ಯಾದ್ಯೈಃ ಸ್ವಗುಣೈಃ ಪರಿತೋಷಿತಃ ॥೨೫೬॥

---

೨೫೨. ಅಲ್ಲದೆ ಸಾಧ್ಯ, ವಿಶ್ವೇದೇವ ಲೋಕಪಾಲಕ, ಚಾರಣ, ನಾಗ, ಸಿದ್ಧ, ಗಂಧರ್ವ, ರುದ್ರ ಮತ್ತು ಅಶ್ವಿನೀದೇವತೆ—ಈ ದೇವತೆಗಳೆಲ್ಲರೂ ಒಟ್ಟಾಗಿ ಪ್ರತ್ಯಕ್ಷವಾಗಿ ಬಂದಿರುವರು.

೨೫೩. ಹೀಗೆ ಹಿಂದೆ ಹೇಳಿರುವ ದೇವತೆಗಳು ಮಾತ್ರವಲ್ಲದೆ ಇತರ ಸಮಸ್ತ ದೇವತೆಗಳೂ ಮತ್ತು ವಿಶ್ವಾಮಿತ್ರಮುನಿಯೂ ನಿನ್ನ ಸನ್ನಿಧಿಗೆ ಬಂದಿದ್ದಾರೆ.

೨೫೪. ಹಿಂದೆ ಯಾವ ಮುನಿಯು ವಿಶ್ವದಲ್ಲಿ ಯಾರ ಸಂಗಡಲೂ ಮೈತ್ರಿಯನ್ನು ಹೊಂದಲಾರದೆ ವಿಶ್ವ+ಅಮಿತ್ರ=ವಿಶ್ವಾಮಿತ್ರ ನಾಮಾಂಕಿತನಾದನೊ ಅಂತಹ ವಿಶ್ವಾಮಿತ್ರಮುನಿಯು ನಿನ್ನೊಡನೆ ಮೈತ್ರೀಭಾವವನ್ನು ಬೆಳೆಸಲು ಯತ್ನಿಸುತ್ತಿರುವನು.

೨೫೫. ಹೀಗೆಂದು ಹೇಳುತ್ತಿದ್ದ ದೇವತೆಗಳ ಗುಂಪಿನಲ್ಲಿ ಧರ್ಮಪ್ರಜಾಪತಿಯೂ, ದೇವೇಂದ್ರನೂ ಮತ್ತು ವಿಶ್ವಾಮಿತ್ರಮುನಿಯೂ ಹರಿಶ್ಚಂದ್ರನ ಮುಂದೆ ಇಳಿದು ನಿಂತರು.

ಧರ್ಮಪ್ರಜಾಪತಿಯು ಇಂತೆಂದನು :—

೨೫೬. ರಾಜನೆ! ಸಾಹಸವನ್ನು ಮಾಡಬೇಡ. ನಿನ್ನಲ್ಲಿರುವ ತಿತಿಕ್ಷೆ, ಇಂದ್ರಿಯನಿಗ್ರಹ, ಸತ್ಯ ಮುಂತಾದ ಗುಣಗಳಿಂದ ಮೆಚ್ಚಿ ಸಂತುಷ್ಟನಾಗಿ ನಾನು ನಿನ್ನ ಬಳಿಗೆ ಬಂದಿರುವೆನು.

ಇನ್ದ್ರ ಉವಾಚ :—

ಹರಿಶ್ಚನ್ದ್ರ ಮಹಾಭಾಗ ಪ್ರಾಪ್ತಃ ಶಕ್ರೋಽಸ್ಮಿ ತೇಽನ್ತಿಕಮ್ ।
ತ್ವಯಾ ಸಭಾರ್ಯಾಪುತ್ರೇಣ ಜಿತಾ ಲೋಕಾಃ ಸನಾತನಾಃ ॥೨೫೭॥

ಆರೋಹ ತ್ರಿದಿವಂ ರಾಜನ್ ಭಾರ್ಯಾಪುತ್ರಸಮನ್ವಿತಃ ।
ಸುದುಷ್ಪ್ರಾಪಂ ನರೈರನ್ಯೈರ್ಜಿತಮಾತ್ಮೀಯಕರ್ಮಭಿಃ ॥೨೫೮॥

ಪಕ್ಷಿಣ ಊಚುಃ :—

ತತೋಽಮೃತಮಯಂ ವರ್ಷಮಪಮೃತ್ಯುವಿನಾಶನಮ್ ।
ಇನ್ದ್ರಃ ಪ್ರಾಸೃಜದಾಕಾಶಾಚ್ಚಿತಾಸ್ಥಾನಗತಃ ಪ್ರಭುಃ ॥೨೫೯॥

ಪುಷ್ಪವರ್ಷಂ ಚ ಸುಮಹದ್ದೇವದುನ್ದುಭಿನಿಸ್ವನಮ್ ।
ತತಸ್ತತೋ ವರ್ತಮಾನೇ ಸಮಾಜೇ ದೇವಸಙ್ಕುಲೇ ॥೨೬೦॥

ಇಂದ್ರನು ಹೀಗೆ ಹೇಳಿದನು :—

೨೫೭. ಮಹಾಭಾಗ್ಯವಂತನಾದ ಹರಿಶ್ಚಂದ್ರನೆ! ನಿನ್ನ ಬಳಿಗೆ ಬಂದ ನಾನು ದೇದೇಂದ್ರನಾಗಿರುವೆನು. ನೀನೂ, ನಿನ್ನ ಪತ್ನೀಪುತ್ರರೂ ಕೂಡ ಅನಾದಿಯಾದ ಪುಣ್ಯಲೋಕಗಳನ್ನು ಗೆದ್ದಿರುವಿರಿ.

೨೫೮. ರಾಜನೆ! ಪುಣ್ಯವಂತರಿಂದ ತಮ್ಮ ಪುಣ್ಯಪ್ರಭಾವದಿಂದ ಮಾತ್ರ ಗೆಲ್ಲುವಂತಹ, ಇತರ ಮಾನವರಿಗೆ ಲಭ್ಯವಾಗದಿರುವ ಸ್ವರ್ಗಲೋಕಕ್ಕೆ ಭಾರ್ಯಾಪುತ್ರರೊಡನೆ ನೀನು ಏರಿ ಬಾ.

ಪಕ್ಷಿಗಳು ಹೀಗೆಂದುವು :—

೨೫೯. ಅಷ್ಟರಲ್ಲಿ ಚಿತೆಯಿದ್ದ ಸ್ಥಳಕ್ಕೆ ಬಂದ, ಸರ್ವಶಕ್ತನಾದ ದೇವೇಂದ್ರನು ಅಪಮೃತ್ಯುವನ್ನು ದೂರಮಾಡುವ ಅಮೃತಮಯ ವೃಷ್ಟಿಯನ್ನು ಆಕಾಶದಿಂದ ಕರೆದನು.

೨೬೦. ಮತ್ತು ದೇವತೆಗಳ ಗುಂಪು ಅಲ್ಲಲ್ಲಿ ನೆರೆದಿರಲು ಆಕಾಶದಿಂದ ಮಹತ್ತಾದ ಪುಷ್ಪವೃಷ್ಟಿಯು ಬಿತ್ತು. ಹಾಗು ದೇವಲೋಕದ ದುಂದುಭಿ ಮುಂತಾದ ವಾದ್ಯಗಳ ಘೋಷವು ಕೇಳಿಸಿತು.

ಸಮುತ್ತಸ್ಥೌ ತತಃ ಪುತ್ರೋ ರಾಜ್ಞಸ್ತಸ್ಯ ಮಹಾತ್ಮನಃ ।
ಸುಕುಮಾರತನುಃ ಸುಸ್ಥಃ ಪ್ರಸನ್ನೇನ್ದ್ರಿಯಮಾನಸಃ ॥೨೬೧॥

ತತೋ ರಾಜಾ ಹರಿಶ್ಚನ್ದ್ರಃ ಪರಿಷ್ವಜ್ಯ ಸುತಂ ಕ್ಷಣಾತ್ ।
ಸಭಾರ್ಯಃ ಸುಶ್ರಿಯಾ ಯುಕ್ತೋ ದಿವ್ಯಮಾಲ್ಯಾಮ್ಬರಾನ್ವಿತಃ ॥೨೬೨॥

ಸ್ವಸ್ಥಃ ಸಮ್ಪೂರ್ಣಹೃದಯೋ ಮುದಾ ಪರಮಯಾ ಯುತಃ ।
ಬಭೂವ ತತ್ಕ್ಷಣಾದಿನ್ದ್ರೋ ಭೂಯಶ್ಚೈನಮಭಾಷತ ॥೨೬೩॥

ಸಭಾರ್ಯಸ್ತ್ವಂ ಸಪುತ್ರಶ್ಚ ಪ್ರಾಪ್ಸ್ಯಸೇ ಸದ್ಗತಿಂ ಪರಾಮ್ ।
ಸಮಾರೋಹ ಮಹಾಭಾಗ ನಿಜಾನಾಂ ಕರ್ಮಣಾಂ ಫಲೈಃ ॥೨೬೪॥

---

೨೬೧. ಅಮೃತ ವೃಷ್ಟಿಯ ಪ್ರಭಾವದಿಂದ ಮಹಾತ್ಮನಾದ ಹರಿಶ್ಚಂದ್ರನ ಪುತ್ರನಾದ ರೋಹಿತಾಸ್ಯನು ಸುಕುಮಾರವಾದ ದೇಹವುಳ್ಳವನೂ, ಸ್ವಸ್ಥನಾಗಿರುವವನೂ ಮತ್ತು ಪ್ರಸನ್ನವಾದ ಇಂದ್ರಿಯ-ಮನಸ್ಸುಗಳಿಂದ ಕೂಡಿದವನೂ ಆಗಿ ಎದ್ದು ಬಂದನು.

೨೬೨. ತರುವಾಯ ಹರಿಶ್ಚಂದ್ರರಾಜನು ಪುತ್ರನನ್ನು ಆಲಿಂಗಿಸಿಕೊಂಡು ಕ್ಷಣಮಾತ್ರದಲ್ಲಿ ಪತ್ನೀಸಮೇತನಾಗಿ ದಿವ್ಯಮಾಲ್ಯ-ವಸ್ತ್ರಗಳನ್ನು ಧರಿಸಿ ರಾಜಲಕ್ಷ್ಮಿಯಿಂದ ಕೂಡಿ ಶೋಭಿಸುವವನಾದನು.

೨೬೩. ಮತ್ತು ಹರಿಶ್ಚಂದ್ರರಾಜನು ಸ್ವಸ್ಥತೆಯನ್ನು ಹೊಂದಿದವನೂ, ತುಂಬಿದ ಹೃದಯವುಳ್ಳವನೂ, ಅಮಿತವಾದ ಆನಂದದಿಂದ ಕೂಡಿದವನೂ ಆದನು. ಆ ಕ್ಷಣದಲ್ಲಿ ಇಂದ್ರನು ಮತ್ತೆ ಈ ರೀತಿಯಾಗಿ ಹೇಳಿದನು.

೨೬೪. ಮಹಾತ್ಮನಾದ ಹರಿಶ್ಚಂದ್ರರಾಜನೆ! ನೀನು ಮಾಡಿದ ಪುಣ್ಯಕರ್ಮಗಳ ಪರಿಪಾಕದಿಂದ ಪತ್ನೀ-ಪುತ್ರರಿಂದ ಕೂಡಿ ಸರ್ವೋತ್ತಮವಾದ ಸ್ವರ್ಗಸುಖವನ್ನು ಹೊಂದುತ್ತೀಯೆ. ಮೇಲಕ್ಕೆ ಏರಿಬಾ.

ಹರಿಶ್ಚನ್ದ್ರ ಉವಾಚ :—

ದೇವರಾಜಾನನುಜ್ಞಾತಃ ಸ್ವಾಮಿನಾ ಶ್ವಪಚೇನ ವೈ ।
ಅಗತ್ವಾ ನಿಷ್ಕೃತಿಂ ತಸ್ಯ ನಾರೋಕ್ಷ್ಯೇಽಹಂ ಸುರಾಲಯಮ್ ॥೨೬೫॥

ಧರ್ಮ ಉವಾಚ :—

ತವೈನಂ ಭಾವಿನಂ ಕ್ಲೇಶಮವಗಮ್ಯಾತ್ಮಮಾಯಯಾ ।
ಆತ್ಮಾ ಶ್ವಪಾಕತಾಂ ನೀತೋ ದರ್ಶಿತಂ ತಚ್ಚ ಚಾಪಲಮ್ ॥೨೬೬॥

ಇನ್ದ್ರ ಉವಾಚ :—

ಪ್ರಾರ್ಥ್ಯತೇ ಯತ್ಪರಂ ಸ್ಥಾನಂ ಸಮಸ್ತೈರ್ಮನುಜೈರ್ಭುವಿ ।
ತದಾರೋಹ ಹರಿಶ್ಚನ್ದ್ರ ಸ್ಥಾನಂ ಪುಣ್ಯಕೃತಾಂ ನೃಣಾಮ್ ॥೨೬೭॥

ಹರಿಶ್ಚಂದ್ರನು ಇಂತು ನುಡಿದನು :—

೨೬೫. ದೇವರಾಜನೆ! ಸ್ವಾಮಿಯಾದ ಚಂಡಾಲನ ಅನುಮತಿಯನ್ನು ಹೊಂದದಿರುವ ನಾನು ಅವನಿಗೆ ಸಲ್ಲಿಸಬೇಕಾದ ದಾಸ್ಯವನ್ನು ಪೂರೈಸಿ ಬಿಡುಗಡೆಯಾಗದೆ ದೇವಲೋಕಕ್ಕೆ ಬರಲಾರೆನು.

ಧರ್ಮಪುರುಷನಿಂತೆಂದನು :—

೨೬೬. ನಿನಗೆ ಈ ವಿಧವ ಕ್ಲೇಶವುಂಟಾಗುವುದನ್ನು ಅರಿತು ನಾನು ನನ್ನ ಮಾಯಾ ಪ್ರಭಾವದಿಂದ ಚಂಡಾಲರೂಪವನ್ನು ತೆಗೆದುಕೊಂಡು ಬಂದೆನು. ಮತ್ತು ತೋರಿಸಬಹುದಾದ ಚಾಪಲವನ್ನೂ ತೋರಿಸಿದೆನು.

ಇಂದ್ರನು ಹೀಗೆಂದನು :—

೨೬೭. ಹರಿಶ್ಚಂದ್ರನೆ! ಮರ್ತ್ಯಲೋಕದಲ್ಲಿರುವ ಸಮಸ್ತ ಮಾನವರಿಂದ ಯಾವ ಉತ್ತಮವಾದ ಸ್ಥಾನವು ಆಶಿಸಲ್ಪಡುವುದೊ; ಪುಣ್ಯವಂತರಾದ ಮಾನವರಿಗೆ ಲಭ್ಯವಾದ ಆ ಸ್ಥಾನವನ್ನು ಏರುವವನಾಗು,

ಹರಿಶ್ಚನ್ದ್ರ ಉವಾಚ :—

ದೇವರಾಜ ನಮಸ್ತುಭ್ಯಂ ವಾಕ್ಯಂ ಚೈತನ್ನಿಬೋಧ ಮೇ ।
ಪ್ರಸಾದಸುಮುಖಂ ಯತ್ತ್ವಾಂ ಬ್ರವೀಮಿ ಪ್ರಶ್ರಯಾನ್ವಿತಃ ॥೨೬೮॥

ಮಚ್ಛೋಕಮಗ್ನಮನಸಃ ಕೋಸಲಾ ನಗರೇ ಜನಾಃ ।
ತಿಷ್ಠನ್ತಿ ತಾನಪೋಹ್ಯಾದ್ಯ ಕಥಂ ಯಾಸ್ಯಾಮ್ಯಹಂ ದಿವಮ್ ॥೨೬೯॥

ಬ್ರಹ್ಮಹತ್ಯಾ ಗುರೋರ್ಘಾತೋ ಗೋವಧಃ ಸ್ತ್ರೀವಧಸ್ತಥಾ ।
ತುಲ್ಯಮೇಭಿರ್ಮಹಾಪಾಪಂ ಭಕ್ತತ್ಯಾಗೇಽಪ್ಯುದಾಹೃತಮ್ ॥೨೭೦॥

ಭಜನ್ತಂ ಭಕ್ತಮತ್ಯಾಜ್ಯಮದುಷ್ಟಂ ತ್ಯಜತಃ ಸುಖಮ್ ।
ನೇಹ ನಾಮುತ್ರ ಪಶ್ಯಾಮಿ ತಸ್ಮಾಚ್ಛಕ್ರ ದಿವಂ ವ್ರಜ ॥೨೭೧॥

ಹರಿಶ್ಚಂದ್ರನು ಹೇಳಿದನು :—

೨೬೮. ದೇವರಾಜನೆ! ನಿನ್ನನ್ನು ವಂದಿಸುವೆನು. ನನ್ನ ಒಂದು ಮಾತನ್ನು ಲಾಲಿಸು. ನನ್ನಲ್ಲಿ ಅನುಗ್ರಹಪೂರ್ಣನಾಗಿದ್ದ ನಿನ್ನನ್ನು ಕುರಿತು ವಿನಯಪೂರ್ವಕವಾಗಿ ಹೇಳಿಕೊಳ್ಳುತ್ತಿದ್ದೇನೆ.

೨೬೯. ಕೋಸಲದೇಶದ ಪುರಜನರು ನನ್ನ ವಿಷಯವಾಗಿ ಶೋಕದಲ್ಲಿ ಮುಳುಗಿದ ಮನಸ್ಸುಳ್ಳವರಾಗಿ ಇರುವರು. ನಾನು ಅವರನ್ನು ಬಿಟ್ಟು ಇಂದು ಹೇಗೆ ಸದ್ಗತಿರೂಪವಾದ ಸ್ವರ್ಗವನ್ನು ಹೊಂದಲಿ.

೨೭೦. ಭಕ್ತಜನರನ್ನು ತ್ಯಜಿಸುವುದರಿಂದ ಸಂಭವಿಸುವ ಪಾಪವು ಬ್ರಹ್ಮಹತ್ಯೆ, ಗುರುವಧೆ, ಗೋವಧೆ ಮತ್ತು ಸ್ತ್ರೀಹತ್ಯೆ ಇವುಗಳಿಂದ ಬರುವ ಮಹಾಪಾತಕಕ್ಕೆ ತುಲ್ಯವಾದುದು.

೨೭೧. ಯಾವ ದೋಷವೂ ಇಲ್ಲದ, ತ್ಯಜಿಸಲಾಗದ, ಭಕ್ತಿಯಿಂದ ಸೇವಿಸುವ ಸೇವಕನನ್ನು ನಿಷ್ಕಾರಣವಾಗಿ ತ್ಯಜಿಸಿದ ಮಾನವನಿಗೆ ಇಹಪರ-ಲೋಕಗಳಲ್ಲಿ ಸುಖವು ದೊರೆಯುವುದಿಲ್ಲ. ಆದುದರಿಂದ ನೀನೊಬ್ಬನೇ ದೇವ-ರಾಜ್ಯಕ್ಕೆ ತೆರಳು.

ಯದಿ ತೇ ಸಹಿತಾಃ ಸ್ವರ್ಗಂ ಮಯಾ ಯಾನ್ತಿ ಸುರೇಶ್ವರ ।
ತತೋಽಹಮಪಿ ಯಾಸ್ಯಾಮಿ ನರಕಂ ವಾಪಿ ತೈಃ ಸಹ ॥೨೭೨॥

ಇನ್ದ್ರ ಉವಾಚ :—

ಬಹೂನಿ ಪುಣ್ಯಪಾಪಾನಿ ತೇಷಾಂ ಭಿನ್ನಾನಿ ವೈ ಪೃಥಕ್ ।
ಕಥಂ ಸಙ್ಘಾತಭೋಗ್ಯಂ ತ್ವಂ ಭೂಯಃ ಸ್ವರ್ಗಮವಾಪ್ಸ್ಯಸಿ ॥೨೭೩॥

ಹರಿಶ್ಚನ್ದ್ರ ಉವಾಚ :—

ಶಕ್ರ ಭುಙ್ಕ್ತೇ ನೃಪೋ ರಾಜ್ಯಂ ಪ್ರಭಾವೇಣ ಕುಟುಮ್ಬಿನಾಮ್ ।
ಯಜತೇ ಚ ಮಹಾಯಜ್ಞೈಃ ಕರ್ಮ ಪೌರ್ತಂ ಕರೋತಿ ಚ॥೨೭೪॥

ತಚ್ಚ ತೇಷಾಂ ಪ್ರಭಾವೇಣ ಮಯಾ ಸರ್ವಮನುಷ್ಠಿತಮ್ ।
ಉಪಕರ್ತೄನ್ನ ಸನ್ತ್ಯಕ್ಷ್ಯೇ ತಾನಹಂ ಸ್ವರ್ಗಲಿಪ್ಸಯಾ ॥೨೭೫॥

---

೨೭೨. ದೇವರಾಜನೆ! ಆ ಪುರಜನರೆಲ್ಲರೂ ನನ್ನೊಡನೆ ಸ್ವರ್ಗಲೋಕಕ್ಕೆ ಬರುವಂತೆ ಆದರೆ ಆಗ ನಾನು ಸ್ವರ್ಗಕ್ಕೆ ಬರುವೆನು. ಅವರ ಸಂಗಡ ನನಗೆ ನರಕಪ್ರಾಪ್ತಿಯಾದರೂ ಇಷ್ಟವೇ ಆಗಿದೆ.

ಇಂದ್ರನು ಹೀಗೆಂದನು :—

೨೭೩. ಪುರಜನರ ಪುಣ್ಯ-ಪಾಪಕರ್ಮಗಳು ಅನೇಕ ವಿಧಗಳಾಗಿವೆ. ಅವುಗಳಿಗೆ ಭೋಗ್ಯಫಲಗಳು ಒಂದು ಬಗೆಯವು ಅಲ್ಲ. ಹೀಗಿರಲು ಎಲ್ಲರೂ ಸೇರಿ ಸಂಘಾತವು ಭುಂಜಿಸುವಂತಹ ಸ್ವರ್ಗಸುಖವನ್ನು ನೀನು ಬಯಸುವುದು ಸರಿಯೆ?

ಹರಿಶ್ಚಂದ್ರರಾಜನು ಹೇಳಿದನು :—

೨೭೪. ದೇವೇಂದ್ರನೆ! ರಾಜನು ಕುಟುಂಬಿಗಳಾಗಿ ನೆಲೆಸಿದ ಪುರಜನರ ಪ್ರಭಾವದಿಂದ ರಾಜ್ಯವನ್ನು ಅನುಭವಿಸುವನು. ಅನೇಕ ಯಜ್ಞಕರ್ಮಗಳನ್ನು ಆಚರಿಸುವನು. ಮತ್ತು ವಾಪೀ-ಕೂಪಗಳನ್ನು ನಿರ್ಮಿಸುವನು.

೨೭೫. ನಾನು ಮಾಡಿರುವ ಸತ್ಕರ್ಮಗಳೆಲ್ಲವೂ ರಾಜ್ಯದಲ್ಲಿರುವ ಸತ್ಪ್ರಜೆಗಳ ಪ್ರಭಾವದಿಂದಲೆ ಆಗಿದೆ. ಹೀಗಿರಲು ಈಗ ನಾನು ಸ್ವರ್ಗಸುಖದ ಆಶೆಯಿಂದ ಉಪಕಾರಿಗಳಾದ ಪ್ರಜೆಗಳನ್ನು ಹೇಗೆ ಬಿಡಲಿ.

ತಸ್ಮಾದ್ಯನ್ಮಮ ದೇವೇಶ ಕಿಂಚಿದಸ್ತಿ ಸುಚೇಷ್ಟಿತಮ್ ।
ದತ್ತಮಿಷ್ಟಮಥೋ ಜಪ್ತಂ ಸಾಮಾನ್ಯಂ ತೈಸ್ತದಸ್ತು ನಃ ॥೨೭೬॥

ಬಹುಕಾಲೋಪಭೋಗ್ಯಂ ಹಿ ಫಲಂ ಯನ್ಮಮ ಕರ್ಮಣಃ ।
ತದಸ್ತು ದಿನಮಪ್ಯೇಕಂ ತೈಃ ಸಮಂ ತ್ವತ್ಪ್ರಸಾದತಃ ॥೨೭೭॥

ಪಕ್ಷಿಣ ಊಚುಃ :—

ಏವಂ ಭವಿಷ್ಯತೀತ್ಯುಕ್ತ್ವಾ ಶಕ್ರಸ್ತ್ರಿಭುವನೇಶ್ವರಃ ।
ಪ್ರಸನ್ನಚೇತಾ ಧರ್ಮಶ್ಚ ವಿಶ್ವಾಮಿತ್ರಶ್ಚ ಗಾಧಿಜಃ ॥೨೭೮॥

ಗತ್ವಾ ಸುನಗರಂ ಸರ್ವೇ ಚಾತುರ್ವರ್ಣ್ಯಸಮಾಯುತಮ್ ।
ಹರಿಶ್ಚನ್ದ್ರಸ್ಯ ನಿಕಟೇ ಪ್ರೋವಾಚ ವಿಬುಧಾಧಿಪಃ ॥೨೭೯॥

---

೨೭೬. ದೇವೇಂದ್ರನೆ! ಆದುದರಿಂದ ಸತ್ಪಾತ್ರದಲ್ಲಿ ದಾನ, ಯಜ್ಞ, ಕರ್ಮ ಅಥವಾ ಜಪ ಮುಂತಾದ ಸತ್ಕರ್ಮವು ನನ್ನಲ್ಲಿ ಅಲ್ಪವಾದರೂ ಇದ್ದರೆ ಅದರಿಂದ ಲಭಿಸುವ ಫಲವು ಪ್ರಜೆಗಳಿಗೂ ನನಗೂ ಸಮಾನವಾಗಿ ದೊರೆಯಲಿ.

೨೭೭. ದೀರ್ಘಕಾಲದ ವರೆಗೆ ಅನುಭವಿಸಬೇಕಾಗಿದ್ದ ನನ್ನ ಪುಣ್ಯ-ಕರ್ಮದ ಫಲವನ್ನು ಪ್ರಜೆಗಳಿಗೂ ಹಂಚಿಕೊಟ್ಟು ಎಲ್ಲರೂ ಸೇರಿ ಸಮವಾಗಿ ಒಂದು ದಿನವಾದರೂ ಅನುಭವಿಸುವಂತೆ ನಿನ್ನ ಅನುಗ್ರಹದಿಂದ ಆಗಲಿ.

ಪಕ್ಷಿಗಳು ಹೀಗೆ ಹೇಳಿದುವು :—

೨೭೮. ತ್ರಿಲೋಕಾಧಿಪತಿಯಾದ ದೇವೇಂದ್ರನು ಹಾಗೆ ಆಗಲೆಂದು ಹೇಳಿದ ತರುವಾಯ ಪ್ರಸನ್ನವಾದ ಮನಸ್ಸುಳ್ಳ ದೇವೇಂದ್ರನೂ, ಧರ್ಮಪ್ರಜಾ-ಪತಿಯೂ ಮತ್ತು ಗಾಧಿಪುತ್ರನಾದ ವಿಶ್ವಾಮಿತ್ರಮುನಿಯೂ ರಾಜನೊಡನೆ ನಗರಕ್ಕೆ ಹೋದರು.

೨೭೯. ಅವರೆಲ್ಲರೂ ಸ್ವಧರ್ಮನಿಷ್ಠರಾದ ಚಾತುರ್ವರ್ಣ್ಯದಿಂದ ಕೂಡಿದ ನಗರಕ್ಕೆ ಹೋಗಿ ದೇವರಾಜನಾದ ಇಂದ್ರನು ಹರಿಶ್ಚಂದ್ರನ ಸಮೀಪದಲ್ಲಿ ಈ ರೀತಿಯಾಗಿ ಹೇಳಿದನು.

ಆಗಚ್ಛನ್ತು ಜನಾಃ ಶೀಘ್ರಂ ಸ್ವರ್ಗಲೋಕಂ ಸುದುರ್ಲಭಮ್ ।
ಧರ್ಮಪ್ರಸಾದಾತ್ಸಮ್ಪ್ರಾಪ್ತಂ ಸರ್ವೈರ್ಯುಷ್ಮಾಭಿರೇವ ತು॥೨೮೦॥

ವಿಮಾನಕೋಟಿಸಮ್ಬದ್ಧಂ ಸ್ವರ್ಗಲೋಕಾನ್ಮಹೀತಲಮ್ ।
ಗತ್ವಾಯೋಧ್ಯಾಜನಂ ಪ್ರಾಹ ದಿವಮಾರುಹ್ಯತಾಮಿತಿ ॥೨೮೧॥

ತದಿನ್ದ್ರಸ್ಯ ವಚಃ ಶ್ರುತ್ವಾ ಪ್ರೀತ್ಯಾ ತಸ್ಯ ಚ ಭೂಪತೇಃ ।
ಆನೀಯ ರೋಹಿತಾಸ್ಯಂ ಚ ವಿಶ್ವಾಮಿತ್ರೋ ಮಹಾತಪಾಃ ॥೨೮೨॥

ಅಯೋಧ್ಯಾಖ್ಯೇ ಪುರೇ ರಮ್ಯೇ ಸೋಽಭ್ಯಷಿಞ್ಚನ್ನೃಪಾತ್ಮಜಮ್ ।
ದೇವೈಶ್ಚ ಮುನಿಭಿಃ ಸಿದ್ಧೈರಭಿಷಿಚ್ಯ ನರಾಧಿಪಃ ॥೨೮೩॥

---

೨೮೦. ಸಾಮಾನ್ಯ ಜನರಿಗೆ ದುರ್ಲಭವಾದ ಸ್ವರ್ಗಕ್ಕೆ ಈ ಜನರೆಲ್ಲರೂ ಶೀಘ್ರವಾಗಿ ಬರಲಿ, ನಿಮ್ಮೆಲ್ಲರಿಗೂ ಧರ್ಮಪುರುಷನ ಅನುಗ್ರಹದಿಂದ ಸ್ವರ್ಗ-ಸುಖವು ಭೋಗ್ಯವಾಗಿ ಒದಗಿರುವುದು.

೨೮೧. ಸ್ವರ್ಗಲೋಕದಿಂದ ನಿಮ್ಮನ್ನು ಕರೆದೊಯ್ಯಲು ಬಂದ ಕೋಟಿ ಸಂಖ್ಯೆಯ ವಿಮಾನಗಳಿಂದ ಭೂಲೋಕವು ತುಂಬಿಹೋಗಿರುವುದು. ಆದ್ದರಿಂದ ನೀವೆಲ್ಲರೂ ಸ್ವರ್ಗಲೋಕಕ್ಕೆ ಏರಿ-ಎಂದು ಇಂದ್ರನು ಅಯೋಧ್ಯೆಯ ಜನರಿಗೆ ಹೇಳಿದನು.

೨೮೨. ಆ ಇಂದ್ರನ ವಚನವನ್ನು ಕೇಳಿ ಹರಿಶ್ಚಂದ್ರರಾಜನ ಮೇಲಿನ ಪ್ರೀತಿಯಿಂದ ಮಹಾತಪಸ್ವಿಯಾದ ವಿಶ್ವಾಮಿತ್ರಮುನಿಯು ಹರಿಶ್ಚಂದ್ರನ ಪುತ್ರ-ನಾದ ರೋಹಿತಾಸ್ಯನನ್ನು ಸಮೀಪಕ್ಕೆ ತಂದನು.

೨೮೩. ಮತ್ತು ದೇವತೆಗಳು, ಸಿದ್ಧರು, ಮುನಿಜನರು—ಇವರೊಂದಿಗೆ ರಮಣೀಯವಾದ ಅಯೋಧ್ಯಾನಗರದಲ್ಲಿ ರೋಹಿತಾಸ್ಯನಿಗೆ ಪಟ್ಟಾಭಿಷೇಕ ಮಾಡಿದನು. ಹೀಗೆ ಹರಿಶ್ಚಂದ್ರರಾಜನು ಪುತ್ರನಿಗೆ ಪಟ್ಟಗಟ್ಟಿ ಕೃತಕೃತ್ಯ-ನಾದನು.

ರಾಜ್ಞಾ ಸಹ ತದಾ ಸರ್ವೇ ಹೃಷ್ಟಪುಷ್ಟಸುಹೃಜ್ಜನಾಃ ।
ಸಪುತ್ರಭೃತ್ಯದಾರಾಸ್ತೇ ದಿವಮಾರುರುಹುರ್ಜನಾಃ ॥೨೮೪॥

ಪದೇ ಪದೇ ವಿಮಾನಾತ್ತೇ ವಿಮಾನಮುಗಮುನ್ನರಾಃ ।
ತದಾ ಸಮ್ಭೂತಹರ್ಷೋಽಸೌ ಹರಿಶ್ಚನ್ದ್ರಶ್ಚ ಪಾರ್ಥಿವಃ ॥೨೮೫॥

ಸಮ್ಪ್ರಾಪ್ಯ ಭೂತಿಮತುಲಾಂ ವಿಮಾನೈಃ ಸ ಮಹೀಪತಿಃ ।
ಆಸಾಞ್ಚಕ್ರೇ ಪುರಾಕಾರೇ ವಪ್ರಪ್ರಾಕಾರಸಂವೃತೇ ॥೨೮೬॥

ತತಸ್ತಸ್ಯರ್ಧಿಮಾಲೋಕ್ಯ ಶ್ಲೋಕಂ ತತ್ರೋಶನಾ ಜಗೌ ।
ದೈತ್ಯಾಚಾರ್ಯೋ ಮಹಾಭಾಗಃ ಸರ್ವಶಾಸ್ತ್ರಾರ್ಥತತ್ತ್ವವಿತ್ ॥೨೮೭॥

---

೨೮೪. ತರುವಾಯ ಸಂತುಷ್ಟರೂ ಪರಿಪುಷ್ಟರೂ ಆದ ಮಿತ್ರಜನರಿಂದ ಕೂಡಿದ, ಹಾಗು ಪತ್ನೀ-ಪುತ್ರ-ಭೃತ್ಯ ಪರಿವಾರದಿಂದ ಕೂಡಿದ ಅಯೋಧ್ಯಾ-ಜನರೆಲ್ಲರೂ ಹರಿಶ್ಚಂದ್ರರಾಜನೊಡನೆ ಸ್ವರ್ಗಕ್ಕೆ ತೆರಳಿದರು.

೨೮೫. ಆ ಜನರೆಲ್ಲರೂ ಸೋಪಾನಗಳಂತೆ ನಿಂತಿದ್ದ ವಿಮಾನಗಳಲ್ಲಿ ಹೆಜ್ಜೆಹೆಜ್ಜೆಗೂ ಒಂದು ವಿಮಾನದಿಂದ ಮತ್ತೊಂದಕ್ಕೆ ಹತ್ತಿಹೋದರು. ಆಗ ಹರಿಶ್ಚಂದ್ರರಾಜನು ಅಪಾರವಾದ ಸಂತೋಷವುಳ್ಳವನಾದನು.

೨೮೬. ಆಗ ಆ ಹರಿಶ್ಚಂದ್ರ ರಾಜನು ವಿಮಾನ ಸಂಪತ್ತಿಯಿಂದ ನಿರುಪಮವಾದ ಐಶ್ವರ್ಯವನ್ನು ಹೊಂದಿ ಕೋಟೆ-ಕೊತ್ತಲುಗಳಿಂದ ಕೂಡಿ ನಗರದ ಆಕಾರವನ್ನು ಹೊಂದಿದ ವಿಮಾನದಲ್ಲಿ ಕುಳಿತುಕೊಂಡನು.

೨೮೭. ತರುವಾಯ ಆ ಹರಿಶ್ಚಂದ್ರರಾಜನ ಸಂಪತ್ಸಮೃದ್ಧಿಯನ್ನು ನೋಡಿ ದೈತ್ಯರಿಗೆ ಗುರುವೂ, ಸಕಲಶಾಸ್ತ್ರಗಳ ತತ್ತ್ವವನ್ನು ಅರಿತವನೂ, ಮತ್ತು ಮಹಾತ್ಮನೂ ಆದ ಶುಕ್ರಾಚಾರ್ಯನು ಹೀಗೆ ಹರಿಶ್ಚಂದ್ರರಾಜನನ್ನು ಶ್ಲೋಕದಿಂದ ಕೊಂಡಾಡಿದನು.

ಶುಕ್ರ ಉವಾಚ :—

ಹರಿಶ್ಚನ್ದ್ರಸಮೋ ರಾಜಾ ನ ಭೂತೋ ನ ಭವಿಷ್ಯತಿ ||೨೮೮||

ಯಶ್ಚೈತಚ್ಛೃಣುಯಾದ್ಭಕ್ತ್ಯಾ ನೈರನ್ತರ್ಯೇಣ ಮಾನವಃ ।
ತೇನ ವೇದಾಃ ಪುರಾಣಾನಿ ಸರ್ವೇ ಮನ್ತ್ರಾಃ ಸಸಙ್ಗ್ರಹಾಃ ||೨೮೯||

ಘುಷ್ಟಾಃ ಸ್ಯುಃ ಪುಷ್ಕರೇ ತೀರ್ಥೇ ಪ್ರಯಾಗೇ ಸಿನ್ಧುಸಾಗರೇ ।
ದೇವಾಗಾರೇ ಕುರುಕ್ಷೇತ್ರೇ ವಾರಾಣಸ್ಯಾಂ ವಿಶೇಷತಃ ||೨೯೦||

ವಿಷುವದ್ಗ್ರಹಣೇ ಚೈವ ಯತ್ಫಲಂ ಜಪತೋ ಲಭೇತ್ ।
ತತ್ಫಲಂ ದ್ವಿಗುಣಂ ಚೈವ ಸಂಯತಾತ್ಮಾ ಶೃಣೋತಿ ಯಃ ||೨೯೧||

ಶುಕ್ರಾಚಾರ್ಯನು ಹೀಗೆ ಕೊಂಡಾಡಿದನು :—

೨೮೮. ಹರಿಶ್ಚಂದ್ರನಿಗೆ ಸಮಾನನಾದ ರಾಜನು ಬೇರೆ ಯಾರೂ ಹಿಂದೆ ಹುಟ್ಟಲಿಲ್ಲ; ಮುಂದೆ ಹುಟ್ಟುವುದೂ ಇಲ್ಲ. ಹರಿಶ್ಚಂದ್ರರಾಜನಂತೆ ಯಾವ ರಾಜನೂ ತನ್ನ ಪುಣ್ಯಪ್ರಭಾವದಿಂದ ಪ್ರಜೆಗಳನ್ನು ಸ್ವರ್ಗಕ್ಕೆ ಒಯ್ಯಲಿಲ್ಲ.

೨೮೯. ಯಾವ ಮಾನವನು ಈ ಹರಿಶ್ಚಂದ್ರ ಮಾಹಾತ್ಮ್ಯವನ್ನು ನಿರಂತರವಾಗಿ ಭಕ್ತಿಯಿಂದ ಶ್ರವಣಮಾಡುವನೊ; ಅವನಿಗೆ ಸಕಲ ವೇದ-ಪುರಾಣ-ಮಂತ್ರಕಾಂಡ ಮತ್ತು ಇತರ ಸಂಗ್ರಹಗ್ರಂಥ ಇವುಗಳನ್ನು ಪಠಿಸಿದ ಫಲವು ಲಭಿಸುತ್ತದೆ.

೨೯೦. ಮತ್ತು ಪುಷ್ಕರತೀರ್ಥ, ಪ್ರಯಾಗ, ಸಿಂಧುನದಿ, ಸಾಗರ, ದೇವಾಲಯ, ಕುರುಕ್ಷೇತ್ರ ಈ ಪುಣ್ಯಕ್ಷೇತ್ರಗಳ ಸನ್ನಿಧಿಯಲ್ಲಿಯೂ ವಿಶೇಷವಾಗಿ ವಾರಾಣಸೀಕ್ಷೇತ್ರದಲ್ಲಿಯೂ ಜಪಮಾಡಿದ ಪುಣ್ಯವು ಲಭಿಸುವುದು.

೨೯೧. ಹಾಗು ವಿಷುವ, ಸಂಕ್ರಾಂತಿ, ಗ್ರಹಣ ಮುಂತಾದ ಪುಣ್ಯಕಾಲ-ಗಳಲ್ಲಿ ಜಪಮಾಡುವುದರಿಂದ ಯಾವ ಪುಣ್ಯವು ಉಂಟಾಗುವುದೊ; ಜಿತೇಂದ್ರಿಯ ನಾಗಿ ಹರಿಶ್ಚಂದ್ರಮಾಹಾತ್ಮ್ಯವನ್ನು ಕೇಳಿದ ಮಾನವನಿಗೆ ಅದರ ದ್ವಿಗುಣವಾದ ಪುಣ್ಯವು ಲಭಿಸುತ್ತದೆ.

ಶ್ರುತ್ವಾ ತು ಪೂಜಯೇದ್ಭಕ್ತ್ಯಾ ಪುರಾಣಜ್ಞಂ ದ್ವಿಜೋತ್ತಮಮ್ ।
ಗೋಭೂಹಿರಣ್ಯವಸ್ತ್ರೈಶ್ಚ ತಥೈವಾನ್ನೇನ ಜೈಮಿನೇ ॥೨೯೨॥

ಯೋಽನ್ಯೈವಂ ಯತ್ಕೃತಂ ಪುಣ್ಯಂ ತಚ್ಛಕ್ಯಂ ನ ಮಯೋದಿತುಮ್
॥೨೯೩॥

ಅಹೋ ತಿತಿಕ್ಷಾಮಾಹಾತ್ಮ್ಯಮಹೋ ದಾನಫಲಂ ಮಹತ್ ।
ಯದಾಗತೋ ಹರಿಶ್ಚನ್ದ್ರಃ ಪುರೀಂ ಚೇನ್ದ್ರತ್ವಮಾಪ್ತವಾನ್॥೨೯೪॥

ಪಕ್ಷಿಣ ಊಚುಃ :—

ಏತತ್ತೇ ಸರ್ವಮಾಖ್ಯಾತಂ ಹರಿಶ್ಚನ್ದ್ರವಿಚೇಷ್ಟಿತಮ್ ।
ಯಃ ಶೃಣೋತಿ ಸುದುಃಖಾರ್ತಃ ಸ ಸುಖಂ ಮಹದಾಪ್ನುಯಾತ್
॥೨೯೫॥

---

೨೯೨. ಜೈಮಿನಿ ಮುನಿಯೆ! ಭಕ್ತಿಯಿಂದ ಈ ಪಾವನ ಚರಿತ್ರೆಯನ್ನು ಶ್ರವಣಮಾಡಿದ ಬಳಿಕ ಪುರಾಣಜ್ಞನಾದ ದ್ವಿಜೋತ್ತಮನನ್ನು ಗೋ-ಭೂ-ಹಿರಣ್ಯ-ವಸ್ತ್ರ ಮುಂತಾದ ಉಪಚಾರಗಳನ್ನು ಅರ್ಪಿಸಿ ಪೂಜಿಸಬೇಕು.

೨೯೩. ಯಾವ ಮಾನವನು ಯಥಾವಿಧಿಯಾಗಿ ಜಿತೇಂದ್ರಿಯನಾಗಿದ್ದು ಹರಿಶ್ಚಂದ್ರ ಚರಿತ್ರೆಯನ್ನು ಕೇಳಿ ಪುರಾಣಜ್ಞನಾದ ದ್ವಿಜನನ್ನು ಸತ್ಕರಿಸುವನೋ, ಅವನಿಗೆ ಉಂಟಾಗುವ ಪುಣ್ಯಪ್ರಭಾವವನ್ನು ನಮ್ಮಿಂದ ವರ್ಣಿಸಲು ಶಕ್ಯವಿಲ್ಲ.

೨೯೪. ಕ್ಷಮೆಯ ಮಾಹಾತ್ಮ್ಯವನ್ನು ಹೇಗೆ ಹೇಳೋಣ ; ಮಹತ್ತಾದ ದಾನಫಲವನ್ನು ಹೇಗೆ ವರ್ಣಿಸೋಣ. ಅತ್ಯಾಶ್ಚರ್ಯವು! ಹರಿಶ್ಚಂದ್ರನು ತಿತಿಕ್ಷಾ-ದಾನಗಳ ಮಹಿಮೆಯಿಂದ ಅಮರಲೋಕಕ್ಕೆ ಹೋಗಿ ಇಂದ್ರತ್ವವನ್ನು ಹೊಂದಿದನು.

ಪಕ್ಷಿಗಳು ಹೀಗೆ ಮುಂದುವರಿಸಿದುವು :—

೨೯೫. ಜೈಮಿನಿಯೆ! ನಿನಗೆ ಹರಿಶ್ಚಂದ್ರರಾಜನ ಚರಿತ್ರೆಯು ಸಂಪೂರ್ಣವಾಗಿ ಹೇಳಲ್ಪಟ್ಟಿದೆ. ದುಃಖಹೊಂದಿದ ಯಾವ ಮಾನವನು ಇದನ್ನು ಶ್ರವಣಮಾಡಿದರೂ ಅವನು ಮಹತ್ತಾದ ಸುಖವನ್ನು ಹೊಂದುವನು.

ಸ್ವರ್ಗಾರ್ಥೀ ಪ್ರಾಪ್ನುಯಾತ್ ಸ್ವರ್ಗಂ ಪುತ್ರಾರ್ಥೀ ಪುತ್ರಮಾಪ್ನು
ಯಾತ್ ।

ಭಾರ್ಯಾರ್ಥೀ ಪ್ರಾಪ್ನುಯಾದ್ಭಾರ್ಯಾಂ ರಾಜ್ಯಾರ್ಥೀ ರಾಜ್ಯ-
ಮಾಪ್ನುಯಾತ್ ॥೨೯೬॥

ಅತಃ ಪರಂ ಕಥಾಶೇಷಃ ಶ್ರೂಯತಾಂ ಮುನಿಸತ್ತಮ ॥೨೯೭॥

ವಿಪಾಕೋ ರಾಜಸೂಯಸ್ಯ ಪೃಥಿವೀಕ್ಷಯಕಾರಣಮ್ ।
ತದ್ವಿಪಾಕನಿಮಿತ್ತಂ ಚ ಯುದ್ಧಮಾಡಿಬಕಂ ಮಹತ್ ॥೨೯೮॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ಹರಿಶ್ಚನ್ದ್ರೋಪಾಖ್ಯಾನಂ
ನಾಮ ಅಷ್ಟಮೋಽಧ್ಯಾಯಃ

---

೨೯೬. ಈ ಪುಣ್ಯಚರಿತ್ರೆಯನ್ನು ಶ್ರವಣಮಾಡಿದವನು ಸ್ವರ್ಗವನ್ನು ಬಯಸುವವನಾದರೆ ಸ್ವರ್ಗವನ್ನೂ, ಪುತ್ರಸಂತತಿಯನ್ನು ಬಯಸಿದರೆ ಪುತ್ರ-ಸಂತತಿಯನ್ನೂ, ಭಾರ್ಯೆಯನ್ನು ಬಯಸಿದರೆ ಭಾರ್ಯೆಯನ್ನೂ, ಮತ್ತು ರಾಜ್ಯಾರ್ಥಿಯಾದರೆ ರಾಜ್ಯವನ್ನೂ ಹೊಂದುತ್ತಾನೆ.

೨೯೭. ಮುನಿಶ್ರೇಷ್ಠನೆ! ಇನ್ನು ಮುಂದೆ ಕುತೂಹಲಿಯಾದ ನಿನಗೆ ಕಥಾಶೇಷವನ್ನು ಹೇಳುತ್ತೇವೆ. ಅದನ್ನು ಆದರದಿಂದ ಕೇಳು.

೨೯೮. ಮುಂದಿನ ಕಥಾಶೇಷದಲ್ಲಿ ರಾಜಸೂಯಯಾಗದ ಅನುಷ್ಠಾನದ ಪರಿಪಾಕವು ಸಕಲ ಪೃಥಿವೀಕ್ಷಯಕ್ಕೆ ಕಾರಣವಾಗುವುದನ್ನೂ ಮತ್ತು ಆ ಪರಿಪಾಕನಿಮಿತ್ತದಿಂದ ಮಹತ್ತಾದ ಆಡಿ-ಬಕಯುದ್ಧವು ಜರುಗುವುದನ್ನೂ ಹೇಳಬೇಕಾಗಿದೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಎಂಟನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ನವಮೋಽಧ್ಯಾಯಃ

(ಆಡಿಬಕಯುದ್ಧಪ್ರಸ್ತಾವಃ)

ಪಕ್ಷಿಣ ಊಚುಃ :—

ರಾಜ್ಯಚ್ಯುತೇ ಹರಿಶ್ಚನ್ದ್ರೇ ಗತೇ ಚ ತ್ರಿದಶಾಲಯಮ್ ।
ನಿಶ್ಚಕ್ರಾಮ ಮಹಾತೇಜಾ ಜಲವಾಸಾತ್ಪುರೋಹಿತಃ ॥೧॥

ವಸಿಷ್ಠೋ ದ್ವಾದಶಾಬ್ದಾನ್ತೇ ಗಙ್ಗಾಪರ್ಯುಷಿತೋ ಮುನಿಃ ।
ಶುಶ್ರಾವ ಚ ಸಮಸ್ತಂ ತು ವಿಶ್ವಾಮಿತ್ರವಿಚೇಷ್ಟಿತಮ್ ॥೨॥

ಒಂಭತ್ತನೆಯ ಅಧ್ಯಾಯ

ಪಕ್ಷಿಗಳು ಇಂತೆಂದುವು :—

೧. ಹರಿಶ್ಚಂದ್ರರಾಜನು ರಾಜ್ಯಭ್ರಂಶವನ್ನು ಹೊಂದಿ ಪರಿಣಾಮದಲ್ಲಿ ದೇವಲೋಕಕ್ಕೆ ಹೋಗಿರಲು ರಾಜಪುರೋಹಿತನೂ ಮಹಾತೇಜಸ್ವಿಯೂ ಆದ ವಸಿಷ್ಠಮುನಿಯು ಕೈಗೊಂಡಿರುವ ಜಲವಾಸವ್ರತವನ್ನು ಮುಗಿಸಿ ಮೇಲಕ್ಕೆ ಬಂದನು.

೨. ಗಂಗಾನದಿಯಲ್ಲಿ ಹನ್ನೆರಡುವರ್ಷಗಳವರೆಗೆ ಜಲವಾಸವ್ರತವನ್ನು ಆಚರಿಸಿ, ವ್ರತವು ಸಮಾಪ್ತಿಯಾದ ಬಳಿಕ ಮೇಲಕ್ಕೆ ಎದ್ದುಬಂದ ವಸಿಷ್ಠಮುನಿಯು ವಿಶ್ವಾಮಿತ್ರಮುನಿಯ ಎಲ್ಲ ನಡತೆಯನ್ನು ಕೇಳಿದನು.

ಹರಿಶ್ಚನ್ದ್ರಸ್ಯ ನಾಶಂ ಚ ರಾಜ್ಞಶ್ಚೋದಾರಕರ್ಮಣಃ ।
ಚಣ್ಡಾಲಸಮ್ಪ್ರಯೋಗಂ ಚ ಭಾರ್ಯಾತನಯವಿಕ್ರಯಮ್ ॥೩॥

ಸ ಶ್ರುತ್ವಾ ಸುಮಹಾಭಾಗಃ ಪ್ರೀತಿಮಾನವನೀಪತೌ ।
ಚಕಾರ ಕೋಪಂ ತೇಜಸ್ವೀ ವಿಶ್ವಾಮಿತ್ರಮೃಷಿಂ ಪ್ರತಿ ॥೪॥

ವಸಿಷ್ಠ ಉವಾಚ :—

ಮಮ ಪುತ್ರಶತಂ ತೇನ ವಿಶ್ವಾಮಿತ್ರೇಣ ಘಾತಿತಮ್ ।
ತತ್ರಾಪಿ ನಾಭವತ್ಕ್ರೋಧಸ್ತಾದೃಶೋ ಯಾದೃಶೋಽದ್ಯ ಮೇ ॥೫॥

ಶ್ರುತ್ವಾ ನರಾಧಿಪಮಿಮಂ ಸ್ವರಾಜ್ಯಾದವರೋಪಿತಮ್ ।
ಮಹಾತ್ಮಾನಂ ಮಹಾಭಾಗಂ ದೇವಬ್ರಾಹ್ಮಣಪೂಜಕಮ್ ॥೬॥

---

೩. ಉದಾರಚರಿತನಾದ ಹರಿಶ್ಚಂದ್ರರಾಜನಿಗೆ ಒದಗಿದ ರಾಜ್ಯಭ್ರಂಶ, ಚಂಡಾಲನೊಡನೆ ಸಂಭವಿಸಿದ ದಾಸ್ಯಸಂಬಂಧ, ಮತ್ತು ಪತ್ನೀ-ಪುತ್ರರ ವಿಕ್ರಯ ಇವುಗಳನ್ನೆಲ್ಲ ಕೇಳಿತಿಳಿದನು.

೪. ಮಹಾತ್ಮನೂ, ಹರಿಶ್ಚಂದ್ರರಾಜನಲ್ಲಿ ಪ್ರೀತಿಪೂರ್ಣನೂ, ಮತ್ತು ಮಹಾತೇಜಸ್ವಿಯೂ ಆದ ವಸಿಷ್ಠಮಹರ್ಷಿಯು ಈ ಎಲ್ಲ ಚರಿತ್ರೆಯನ್ನು ಕೇಳಿ ವಿಶ್ವಾಮಿತ್ರ ಮುನಿಯ ವಿಷಯದಲ್ಲಿ ಕೋಪವುಳ್ಳವನಾದನು.

ವಸಿಷ್ಠಮುನಿಯು ಈರೀತಿಯಾಗಿ ಹೇಳಿದನು :—

೫. ವಿಶ್ವಾಮಿತ್ರಮುನಿಯಿಂದ ನನ್ನ ನೂರುಮಂದಿ ಪುತ್ರರು ನಾಶಗೊಳಿಸಲ್ಪಟ್ಟರು. ಆದರೂ ಇಂದು ನನಗೆ ಯಾವ ವಿಧವಾಗಿ ಕೋಪವು ಉದ್ರೇಕಗೊಂಡಿರುವುದೊ ; ಹಾಗೆ ಆಗ ಕೋಪೋದ್ರೇಕವಾಗಿರಲಿಲ್ಲ.

೬. ಮಹಾತ್ಮನೂ, ಮಹಾಭಾಗ್ಯಶಾಲಿಯೂ ಮತ್ತು ದೇವ-ಬ್ರಾಹ್ಮಣರನ್ನು ಪೂಜಿಸುವವನೂ ಆದ ಹರಿಶ್ಚಂದ್ರ ರಾಜನನ್ನು ತನ್ನ ರಾಜ್ಯದಿಂದ ಭ್ರಂಶಗೊಳಿಸಿರುವುದನ್ನು ಕೇಳಿ ನನಗೆ ಅಂತಹ ಕೋಪೋದ್ರೇಕವಾಗಿದೆ.

ಯಸ್ಮಾತ್ಸ ಸತ್ಯವಾಕ್ಛಾನ್ತಃ ಶತ್ರಾವಪಿ ವಿಮತ್ಸರಃ ।
ಅನಾಗಾಶ್ಚೈವ ಧರ್ಮಾತ್ಮಾ ಅಪ್ರಮತ್ತೋ ಮದಾಶ್ರಯಃ ॥೭॥

ಸಪತ್ನೀಪುತ್ರಭೃತ್ಯಸ್ತು ಪ್ರಾಪಿತೋಽನ್ಯಾಂ ದಶಾಂ ನೃಪಃ ।
ಸ ರಾಜ್ಯಾಚ್ಚ್ಯಾವಿತೋಽನೇನ ಬಹುಶಶ್ಚ ಖಿಲೀಕೃತಃ ॥೮॥

ತಸ್ಮಾದ್ದುರಾತ್ಮಾ ಬ್ರಹ್ಮದ್ವಿಡ್ಯಜ್ವನಾಮವರೋಪಕಃ ।
ಮಚ್ಛಾಪೋಪಹತೋ ಮೂಢಃ ಸ ಬಕತ್ವಮವಾಪ್ಸ್ಯತಿ ॥೯॥

ಪಕ್ಷಿಣ ಊಚುಃ :—

ಶ್ರುತ್ವಾ ಶಾಪಂ ಮಹಾತೇಜಾ ವಿಶ್ವಾಮಿತ್ರೋಽಪಿ ಕೌಶಿಕಃ ।
ತ್ವಮಪ್ಯಾಡಿರ್ಭವಸ್ವೇತಿ ಪ್ರತಿಶಾಪಮಯಚ್ಛತ ॥೧೦॥

---

೭. ಸತ್ಯವನ್ನು ನುಡಿಯುವವನೂ, ಶಮ ಸ್ವಭಾವದವನೂ, ಶತ್ರುವಿನಲ್ಲಿಯೂ ಮತ್ಸರವಿಲ್ಲದವನೂ, ನಿರಪರಾಧಿಯೂ, ಧರ್ಮಾತ್ಮನೂ ಮತ್ತು ಯಾವಾಗಲೂ ಜಾಗರೂಕನೂ ಆದ ಹರಿಶ್ಚಂದ್ರರಾಜನು ನನ್ನನ್ನು ಆಶ್ರಯಿಸಿದ್ದನು.

೮. ವಿಶ್ವಾಮಿತ್ರಮುನಿಯು ಅಂತಹ ಹರಿಶ್ಚಂದ್ರನನ್ನು ರಾಜ್ಯದಿಂದ ಚ್ಯುತಿಗೊಳಿಸಿ ಪತ್ನೀ-ಪುತ್ರ-ಭೃತ್ಯ ಮುಂತಾದ ಸಕಲ ಪರಿವಾರದೊಂದಿಗೆ ದುರವಸ್ಥೆಗೆ ಗುರಿಮಾಡಿ ಎಷ್ಟೋ ವಿಧ ಕ್ಲೇಶಪರಂಪರೆಗಳನ್ನು ಅನುಭವಿಸುವಂತೆ ಮಾಡಿರುವನು.

೯. ಪುಣ್ಯಕೀರ್ತಿಯಾದ ಹರಿಶ್ಚಂದ್ರನಿಗೆ ಕ್ಲೇಶಗಳನ್ನು ಕೊಟ್ಟ, ನೀಚಸ್ವಭಾವದ, ಬ್ರಹ್ಮದ್ವೇಷಿಯಾದ ಮತ್ತು ಯಜ್ಞಶೀಲರನ್ನು ಕೆಳಗಿಳಿಸುವ ಆ ಮೂಢ ವಿಶ್ವಾಮಿತ್ರಮುನಿಯು ನನ್ನ ಶಾಪದಿಂದ ಪ್ರಹರಿಸಲ್ಪಟ್ಟು ಬಕಪಕ್ಷಿ ರೂಪವನ್ನು ಹೊಂದುವನು.

ಪಕ್ಷಿಗಳು ಇಂತೆಂದುವು :—

೧೦. ಕುಶಿಕವಂಶದಲ್ಲಿ ಜನಿಸಿದ, ಮಹಾತೇಜಸ್ವಿಯಾದ ವಿಶ್ವಾಮಿತ್ರ ಮುನಿಯು ಆ ಶಾಪವನ್ನು ಕೇಳಿ "ನೀನು ಕೂಡ ಸರಕುಟ ಹಕ್ಕಿಯಾಗು" ಎಂದು ವಸಿಷ್ಠ ಮಹರ್ಷಿಯನ್ನು ಶಪಿಸಿದನು.

ಅನ್ಯೋನ್ಯಶಾಪಾತ್ತೌ ಪ್ರಾಪ್ತೌ ತಿರ್ಯಕ್ತ್ವಂ ಪರಮದ್ಯುತೀ ।
ವಸಿಷ್ಠಃ ಸ ಮಹಾತೇಜಾ ವಿಶ್ವಾಮಿತ್ರಶ್ಚ ಕೌಶಿಕಃ ॥೧೧॥

ಅನ್ಯಜಾತಿಸಮಾಯೋಗಂ ಗತಾವಪ್ಯಮಿತೌಜಸೌ ।
ಯುಯುಧಾತೇಽತಿಸಂರಬ್ಧೌ ಮಹಾಬಲಪರಾಕ್ರಮೌ ॥೧೨॥

ಯೋಜನಾನಾಂ ಸಹಸ್ರೇ ದ್ವೇ ಪ್ರಮಾಣೇನಾಡಿರುಚ್ಛ್ರಿತಃ ।
ಷಣ್ಣವತ್ಯಧಿಕಂ ಬ್ರಹ್ಮ ಸಹಸ್ರತ್ರಿತಯಂ ಬಕಃ ॥೧೩॥

ತೌ ತು ಪಕ್ಷಪ್ರಹಾರಾಭ್ಯಾಮನ್ಯೋನ್ಯಸ್ಯೋರುವಿಕ್ರಮೌ ।
ಪ್ರಹರನ್ತೌ ಭಯಂ ತೀವ್ರಂ ಪ್ರಜಾನಾಂ ಚಕ್ರತುಸ್ತದಾ ॥೧೪॥

---

೧೧. ಮಹಾ ತೇಜಸ್ವಿಯಾದ ವಸಿಷ್ಠ ಮಹರ್ಷಿಯೂ, ಕುಶಿಕ ವಂಶ-ದಲ್ಲಿ ಜನಿಸಿದ ವಿಶ್ವಾಮಿತ್ರಮುನಿಯೂ ಇಬ್ಬರೂ ಅಂತಹ ಉತ್ತಮ ವರ್ಚ-ಸ್ಸನ್ನು ಹೊಂದಿದವರಾದರೂ ಒಬ್ಬರಿಗೊಬ್ಬರು ಶಾಪವನ್ನು ಕೊಟ್ಟು ಮೂಕ ಪ್ರಾಣಿಜನ್ಮವನ್ನು ಹೊಂದಿದರು.

೧೨. ಅಪಾರವಾದ ಪ್ರಭಾವವನ್ನು ಹೊಂದಿದ ಮುನಿಗಳಿಬ್ಬರು ಶಾಪಬಲದಿಂದ ಬೇರೊಂದು ಜಾತಿಯನ್ನು ಹೊಂದಿದ್ದರೂ, ಮಹತ್ತಾದ ಬಲ-ಪರಾಕ್ರಮಗಳನ್ನು ತೋರಿಸಿ ಸ್ಪರ್ಧೆಯುಳ್ಳವರಾಗಿ ಪರಸ್ಪರವಾಗಿ ಕಾದಾಡಿದರು.

೧೩. ಆಡಿ ಪಕ್ಷಿಯು ಎರಡು ಸಹಸ್ರ ಯೋಜನಗಳಷ್ಟು ಪರಿಮಾಣದ ಉನ್ನತಾಕಾರವನ್ನು ಹೊಂದಿತು. ಅದನ್ನು ನೋಡಿ ಬಕಪಕ್ಷಿಯು ಅದಕ್ಕೂ ಹೆಚ್ಚಾಗಿ ಮೂರುಸಹಸ್ರ ತೊಂಭತ್ತಾರು ಯೋಜನಗಳ ಪರಿಮಾಣದ ಬೃಹದಾ-ಕಾರವನ್ನು ಹೊಂದಿತು.

೧೪. ಆಗ ಅಪಾರವಾದ ವಿಕ್ರಮವುಳ್ಳ ಆ ಆಡಿ-ಬಕಪಕ್ಷಿಗಳು ಒಂದ-ನ್ನೊಂದು ರೆಕ್ಕೆಗಳಿಂದ ಪ್ರಹರಿಸುತ್ತ ಪ್ರಜೆಗಳಿಗೆ ಅಧಿಕವಾದ ಭಯವನ್ನು ಉಂಟುಮಾಡಿದುವು.

ವಿಧೂಯ ಪಕ್ಷಾಣಿ ಬಕೋ ರಕ್ತೋದ್ವೃತ್ತಾಕ್ಷಿರಾಹನತ್ ।
ಆಡಿಂ ಸೋಽಪ್ಯುನ್ನತಗ್ರೀವೋ ಬಕಂ ಪದ್ಭ್ಯಾಮತಾಡಯತ್ ॥೧೫॥

ತಯೋಃ ಪಕ್ಷಾನಿಲಾಪಾಸ್ತಾಃ ಪ್ರಪೇತುರ್ಗಿರಯೋ ಭುವಿ ।
ಗಿರಿಪ್ರಪಾತಾಭಿಹತಾ ಚಕಮ್ಪೇ ಚ ವಸುನ್ಧರಾ ॥೧೬॥

ಕ್ಷ್ಮಾ ಕಮ್ಪಮಾನಾ ಜಲಧೀನುದ್ವೃತ್ತಾಮ್ಬೂಂಶ್ಚಕಾರ ಚ ।
ನನಾಮ ಚೈಕಪಾರ್ಶ್ವೇನ ಪಾತಾಲಗಮನೋನ್ಮುಖೀ ॥೧೭॥

ಕೇಚಿದ್ಗಿರಿನಿಪಾತೇನ ಕೇಚಿದಮ್ಬುಧಿವಾರಿಣಾ ।
ಕೇಚಿನ್ಮಹೀಸಂಚಲನಾತ್ಪ್ರಯಯುಃ ಪ್ರಾಣಿನಃ ಕ್ಷಯಮ್ ॥೧೮॥

ಇತಿ ಸರ್ವಂ ಪರಿತ್ರಸ್ತಂ ಹಾಹಾಭೂತಮಚೇತನಮ್ ।
ಜಗದಾಸೀತ್ಸಸಮ್ಭ್ರಾನ್ತಂ ಪರ್ಯಸ್ತಕ್ಷಿತಿಮಣ್ಡಲಮ್ ॥೧೯॥

---

೧೫. ಕೆಂಪಾದ ಮತ್ತು ಸುತ್ತುತ್ತಿದ್ದ ಕಣ್ಣುಗಳಿಂದ ಕೂಡಿದ ಬಕಪಕ್ಷಿಯು ರೆಕ್ಕೆಗಳನ್ನು ಕೊಡವಿಕೊಂಡು ಆಡಿಯನ್ನು ಹೊಡೆಯಿತು. ಆಡಿಪಕ್ಷಿಯೂ ಕತ್ತನ್ನು ಎತ್ತಿಕೊಂಡು ಕಾಲುಗಳಿಂದ ಬಕಪಕ್ಷಿಯನ್ನು ಒದೆಯಿತು.

೧೬. ಆ ಪಕ್ಷಿಗಳ ಪ್ರಬಲವಾದ ರೆಕ್ಕೆಗಳ ಗಾಳಿಯಿಂದ ಕಿತ್ತುಹಾರಿಸಲ್ಪಟ್ಟ ಬೆಟ್ಟಗಳು ನೆಲದಲ್ಲಿ ಬಿದ್ದುವು. ಬೆಟ್ಟಗಳು ಉರುಳುವುದರಿಂದ ಪೀಡಿಸಲ್ಪಟ್ಟ ಭೂಮಿಯು ಚಲಿಸಿತು.

೧೭. ಮತ್ತು ಚಲಿಸುತ್ತಿದ್ದ ಭೂಮಿಯು ಸಮುದ್ರಗಳಲ್ಲಿ ನೀರು ಮೇಲಕ್ಕೆ ಉಕ್ಕಿ ಬರುವಂತೆ ಮಾಡಿತು. ಹಾಗು ಭೂಮಿಯು ಪಾತಾಳಕ್ಕೆ ಇಳಿದು ಹೋಗುವಹಾಗೆ ಒಂದು ಪಕ್ಕದಲ್ಲಿ ತುಂಬ ಇಳಿದು ಹಳ್ಳವಾಯಿತು.

೧೮. ಕೆಲವು ಪ್ರಾಣಿಗಳು ಬೆಟ್ಟಗಳು ಬಿದ್ದು ಪ್ರಾಣತೆತ್ತವು. ಮತ್ತೆ ಕೆಲವು ಸಮುದ್ರದ ನೀರಿನಿಂದ ಸತ್ತುಹೋದುವು. ಮತ್ತು ಇನ್ನು ಕೆಲವು ಭೂಕಂಪದಿಂದ ಮರಣವನ್ನು ಐದಿದುವು.

೧೯. ಹೀಗೆ ಸಮಸ್ತ ಪ್ರಪಂಚವು ಭಯಗ್ರಸ್ತವೂ, ಹಾಹಾಕಾರಮಾಡುವುದೂ, ದಿಕ್ಕುತೋಚದಿರುವುದೂ, ಬಲುಗಾಬರಿಯುಳ್ಳದ್ದೂ ಮತ್ತು ಪಲ್ಲಟವಾದ ಭೂಭಾಗವುಳ್ಳದ್ದೂ ಆಯಿತು.

ಹಾ ವತ್ಸ ಹಾ ಕಾನ್ತ ಶಿಶೋ ಪ್ರಯಾಹ್ಯೇಷೋಽಸ್ಮಿ ಸಂಸ್ಥಿತಃ ।
ಹಾ ಪ್ರಿಯೇ ಕಾನ್ತ ಶೈಲೋಽಯಂ ಪತತ್ಯಾಶು ಪಲಾಯತಾಮ್ ॥೨೦॥

ಇತ್ಯಾಕುಲೀಕೃತೇ ಲೋಕೇ ಸನ್ತ್ರಾಸವಿಮುಖೇ ತದಾ ।
ಸುರೈಃ ಪರಿವೃತಃ ಸರ್ವೈರಾಜಗಾಮ ಪಿತಾಮಹಃ ॥೨೧॥

ಪ್ರತ್ಯುವಾಚ ಚ ವಿಶ್ವೇಶಸ್ತಾವುಭಾವತಿಕೋಪಿತೌ ।
ಯುದ್ಧಂ ವಾಂ ವಿರಮತ್ವೇತಲ್ಲೋಕಾಃ ಸ್ವಾಸ್ಥ್ಯಂ ವ್ರಜನ್ತು ಚ॥೨೨॥

ಶೃಣ್ವನ್ತಾವಪಿ ತೌ ವಾಕ್ಯಂ ಬ್ರಹ್ಮಣೋಽವ್ಯಕ್ತಜನ್ಮನಃ ।
ಕೋಪಾಮರ್ಷಸಮಾವಿಷ್ಟೌ ಯುಯುಧಾತೇ ನ ತಸ್ಥತುಃ ॥೨೩॥

ತತಃ ಪಿತಾಮಹೋ ದೇವಸ್ತಂ ದೃಷ್ಟ್ವಾ ಲೋಕಸಂಕ್ಷಯಮ್ ।
ತಯೋಶ್ಚ ಹಿತಮನ್ವಿಚ್ಛಂಸ್ತಿರ್ಯಗ್ಭಾವಮಪಾನುದತ್ ॥೨೪॥

---

೨೦. ಅಯ್ಯೊ! ಮಗನೆ! ಅಯ್ಯೊ! ಕಾಂತನೆ! ಅಯ್ಯೊ! ಶಿಶುವೆ! ಇಗೊ ನಾನು ಇಲ್ಲಿ ಸತ್ತುಬಿದ್ದೆನು. ನೀನು ಬೇಗ ಇಲ್ಲಿಂದ ಹೋಗು. ಅಯ್ಯೊ! ಪ್ರೇಯಸಿಯೆ! ಅಯ್ಯೊ! ಕಾಂತನೆ! ಇತ್ತ ಬೆಟ್ಟವು ಬೀಳುತ್ತಿದೆ; ಓಡಿಹೋಗು.

೨೧. ಭಯದಿಂದ ದೀನವಾಗಿ ಲೋಕವೆಲ್ಲವೂ ಈ ರೀತಿಯಾಗಿ ವ್ಯಾಕುಲವಾಗುತ್ತಿರುವಾಗ ಅಖಿಲಲೋಕ ಪಿತಾಮಹನಾದ ಬ್ರಹ್ಮದೇವನು ಸಮಸ್ತ ದೇವತೆಗಳೊಡನೆ ಅಲ್ಲಿಗೆ ಬಂದನು.

೨೨. ಲೋಕೇಶ್ವರನಾದ ಬ್ರಹ್ಮದೇವನು ಅತ್ಯಂತಕೋಪಾವೇಶವುಳ್ಳ ಆಡಿ-ಬಕಪಕ್ಷಿಗಳಿಗೆ ಹೀಗೆ ಹೇಳಿದನು; ನಿಮ್ಮ ಈ ಯುದ್ಧವು ಇಲ್ಲಿಗೆ ಸಮಾಪ್ತಿಗೊಳ್ಳಲಿ; ಮತ್ತು ಲೋಕಗಳು ಸ್ವಸ್ಥತೆಯನ್ನು ಹೊಂದಲಿ.

೨೩. ಅವ್ಯಕ್ತ ತತ್ತ್ವದಿಂದ ಜನ್ಮವೆತ್ತಿದ ಬ್ರಹ್ಮದೇವನ ಈ ವಚನವನ್ನು ಕೇಳಿದರೂ ಆಡಿ-ಬಕಪಕ್ಷಿಗಳು ಕೋಪ-ಅಸಹನೆಗಳಿಂದ ಕೂಡಿಕೊಂಡು ಮತ್ತೂ ಕಾದಾಡಿದುವೇ ಹೊರತು, ಯುದ್ಧವನ್ನು ಬಿಟ್ಟು ಸುಮ್ಮನಾಗಲಿಲ್ಲ.

೨೪. ತರುವಾಯ ಬ್ರಹ್ಮದೇವನು ಆ ಯುದ್ಧದಿಂದ ಲೋಕಕ್ಕೆ ಆಗುತ್ತಿದ್ದ ಪ್ರಲಯವನ್ನು ನೋಡಿ ಆ ಪಕ್ಷಿಗಳಿಗೂ ಹಿತವನ್ನು ಕೋರಿ ಆ ಎರಡು ಪಕ್ಷಿಗಳಿಗೆ ತನ್ನ ಪ್ರಭಾವದಿಂದ ಪಕ್ಷಿರೂಪವನ್ನು ತೆಗೆದುಹಾಕಿದನು.

ತತಸ್ತೌ ಪೂರ್ವದೇಹಸ್ಥೌ ಪ್ರಾಹ ದೇವಃ ಪ್ರಜಾಪತಿಃ ।
ವ್ಯದಸ್ತೇ ತಾಮಸೇ ಭಾವೇ ವಸಿಷ್ಠಕೌಶಿಕರ್ಷಭೌ ॥೨೫॥

ಜಹಿ ವತ್ಸ ವಸಿಷ್ಠ ತ್ವಂ ತ್ವಂ ಚ ಕೌಶಿಕಸತ್ತಮ ।
ತಾಮಸಂ ಭಾವಮಾಶ್ರಿತ್ಯ ಈದೃಗ್ಯುದ್ಧಂ ಚಿಕೀರ್ಷಿತಮ್ ॥೨೬॥

ರಾಜಸೂಯವಿಪಾಕೋಽಯಂ ಹರಿಶ್ಚನ್ದ್ರಸ್ಯ ಭೂಪತೇಃ ।
ಯುವಯೋರ್ವಿಗ್ರಹಶ್ಚಾಯಂ ಪೃಥಿವೀಕ್ಷಯಕಾರಕಃ ॥೨೭॥

ನ ಚಾಪಿ ಕೌಶಿಕಶ್ರೇಷ್ಠಸ್ತಸ್ಯ ರಾಜ್ಞೋಽಪರಾಧ್ಯತಿ ।
ಸ್ವರ್ಗಪ್ರಾಪ್ತಿಕರೋ ಬ್ರಹ್ಮನ್ನುಪಕಾರಪದೇ ಸ್ಥಿತಃ ॥೨೮॥

---

೨೫. ತರುವಾಯ ತಮೋಗುಣಮಯವಾದ ಪಕ್ಷಿಜನ್ಮದ ಭಾವವನ್ನು ಬಿಟ್ಟು ಮೊದಲಿನ ಮುನಿದೇಹವನ್ನು ಧರಿಸಿದ ವಸಿಷ್ಠ-ವಿಶ್ವಾಮಿತ್ರ ಮುನಿಗಳನ್ನು ನೋಡಿ ಬ್ರಹ್ಮದೇವನು ಹೀಗೆ ಹೇಳಿದನು.

೨೬. ಪುತ್ರನಾದ ವಸಿಷ್ಠನೆ! ಕುಶಿಕವಂಶ ತಿಲಕನಾದ ವಿಶ್ವಾಮಿತ್ರಮುನಿಯೆ! ತಮೋಗುಣ ಉದ್ರೇಕದ ಭಾವನೆಗೆ ಒಳಗಾಗಿ ಮಾಡಲೆಣಿಸಿದ ಈ ಯುದ್ಧವನ್ನು ಇಲ್ಲಿಗೆ ಸಾಕುಮಾಡಿರಿ.

೨೭. ಇದೆಲ್ಲವೂ ಹರಿಶ್ಚಂದ್ರ ರಾಜನ ರಾಜಸೂಯ ಯಾಗದ ಪರಿಣಾಮವು. ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ರಾಜಸೂಯಯಾಗ ಪರ್ಯಾಪ್ತವಾದ ದಕ್ಷಿಣಾ ಧನವನ್ನು ವಾಗ್ದಾನಮಾಡಿ ಅವನು ನಾನಾ ಕ್ಲೇಶಗಳಿಗೆ ಭಾಗಿಯಾದುದಲ್ಲದೆ ನಿಮ್ಮಿಬ್ಬರಿಗೆ ಕಾಳಗವು ಸಂಭವಿಸಿ ಪೃಥಿವಿಯನ್ನು ಕ್ಷಯಿಸುತ್ತಿದೆ.

೨೮. ಬ್ರಹ್ಮರ್ಷಿಯೆ! ಕುಶಿಕ ವಂಶೋತ್ಪನ್ನನಾದ ವಿಶ್ವಾಮಿತ್ರಮುನಿಯು ಹರಿಶ್ಚಂದ್ರ ರಾಜನ ವಿಷಯದಲ್ಲಿ ಅಪರಾಧವನ್ನು ಮಾಡಲಿಲ್ಲ. ಪರಿಣಾಮದಲ್ಲಿ ಕೂಡಲೆ ಸ್ವರ್ಗಸುಖಭೋಗವನ್ನು ಕೊಟ್ಟು ಉಪಕಾರ ಮಾಡಿದವರ ಗುಂಪಿನಲ್ಲಿ ಸೇರಿದವನಾಗಿದ್ದಾನೆ.

ತಪೋವಿಘ್ನಸ್ಯ ಕರ್ತಾರೌ ಕಾಮಕ್ರೋಧವಶಂ ಗತೌ ।
ಪರಿತ್ಯಜತ ಭದ್ರಂ ವೋ ಬ್ರಾಹ್ಮಂ ಹಿ ಪ್ರಚುರಂ ಬಲಮ್ ॥೨೯॥

ಏವಮುಕ್ತೌ ತತಸ್ತೇನ ಲಜ್ಜಿತೌ ತಾವುಭಾವಪಿ ।
ಕ್ಷಮಯಾಮಾಸತುಃ ಪ್ರೀತ್ಯಾ ಪರಿಷ್ವಜ್ಯ ಪರಸ್ಪರಮ್ ॥೩೦॥

ತತಃ ಸುರೈರ್ವನ್ದ್ಯಮಾನೋ ಬ್ರಹ್ಮಾ ಲೋಕಂ ನಿಜಂ ಯಯೌ ।
ವಸಿಷ್ಠೋಽಪ್ಯಾತ್ಮನಃ ಸ್ಥಾನಂ ಕೌಶಿಕೋಽಪಿ ಸ್ವಮಾಶ್ರಮಮ್॥೩೧॥

ಏತದಾಡಿಬಕಂ ಯುದ್ಧಂ ಹರಿಶ್ಚನ್ದ್ರಕಥಾಂ ತಥಾ ।
ಕಥಯಿಷ್ಯನ್ತಿ ಯೇ ಮರ್ತ್ಯಾಃ ಸಮ್ಯಕ್ ಶ್ರೋಷ್ಯನ್ತಿ ಚೈವ ಯೇ ॥೩೨॥

---

೨೯. ಈ ಬಗೆಯಿಂದ ಕಾದಾಡುವ ನೀವಿಬ್ಬರೂ ಅನ್ಯೋನ್ಯವಾಗಿ ಕಾಮ-ಕ್ರೋಧಗಳಿಗೆ ವಶರಾಗಿ ತಪಸ್ಸಿಗೆ ವಿಘ್ನಮಾಡುವವರಾಗಿದ್ದೀರಿ. ಈ ಕಾಮ-ಕ್ರೋಧಗಳನ್ನು ಬಿಡಿರಿ. ನಿಮಗೆ ಮಂಗಳವಾಗಲಿ; ತಪಶ್ಚರ್ಯೆಯಿಂದ ಸಂಪಾದಿಸುವ ಬ್ರಾಹ್ಮಬಲವು ಎಲ್ಲ ಬಲಕ್ಕಿಂತಲೂ ಹೆಚ್ಚಿನದು.

೩೦. ಬ್ರಹ್ಮದೇವನಿಂದ ಈರೀತಿಯಾಗಿ ಹೇಳಲ್ಪಟ್ಟ ಮುನಿಗಳಿಬ್ಬರೂ ನಾಚಿಕೆಪಟ್ಟವರಾಗಿ ತರುವಾಯ ಪ್ರೀತಿಪೂರ್ವಕವಾಗಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ತಪ್ಪಿಗೆ ಕ್ಷಮೆಯನ್ನು ಬೇಡಿಕೊಂಡರು.

೩೧. ಅನಂತರ ದೇವತೆಗಳಿಂದ ನಮಸ್ಕರಿಸಲ್ಪಡುತ್ತ ಬ್ರಹ್ಮದೇವನು ತನ್ನ ಲೋಕಕ್ಕೆ ಹೊರಟುಹೋದನು. ವಸಿಷ್ಠಮುನಿಯು ತನ್ನ ಸ್ಥಳಕ್ಕೆ ತೆರಳಿದನು. ಮತ್ತು ವಿಶ್ವಾಮಿತ್ರಮಹರ್ಷಿಯು ತನ್ನ ಆಶ್ರಮಕ್ಕೆ ಪ್ರಯಾಣ ಮಾಡಿದನು.

೩೨. ಮಾನವರು ಈ ಆಡಿ-ಬಕಪಕ್ಷಿಗಳ ಯುದ್ಧ ಚರಿತ್ರೆಯನ್ನೂ ಮತ್ತು ಹರಿಶ್ಚಂದ್ರರಾಜನ ಕಥೆಯನ್ನೂ ಭಕ್ತಿಯಿಂದ ಕೀರ್ತಿಸುವುದು ಮತ್ತು ಶ್ರವಣಮಾಡುವುದು ತುಂಬ ಶ್ರೇಯಸ್ಕರವಾದುದು.

ತೇಷಾಂ ಪಾಪಾಪನೋದಂ ತು ಶ್ರುತಂ ಹ್ಯೇವ ಕರಿಷ್ಯತಿ ।
ನ ಚೈವ ವಿಘ್ನಕಾರ್ಯಾಣಿ ಭವಿಷ್ಯನ್ತಿ ಕದಾಚನ ॥೩೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಆಡಿಬಕಮಹಾಯುದ್ಧ. ಕಥನಂ ನಾಮ ನವಮೋಽಧ್ಯಾಯಃ

---

೩೩. ಹಾಗೆ ಕೀರ್ತನ-ಶ್ರವಣ ಮಾಡಿದೊಡನೆಯೆ ಆ ಮಾನವರ ಸಮಸ್ತ ಪಾಪಗಳು ಕಳೆದುಹೋಗುತ್ತವೆ. ಮತ್ತು ಆ ಮಾನವರಿಗೆ ಯಾವ ಮಂಗಳಕಾರ್ಯಗಳಲ್ಲಿಯೂ ವಿಘ್ನಗಳು ಸಂಭವಿಸುವುದಿಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ಒಂಭತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದಶಮೋಽಧ್ಯಾಯಃ

(ಜನ್ಮಾದಿಪ್ರಾಪ್ತಿಪ್ರಕಾರಃ)

ಜೈಮಿನಿರುವಾಚ :—

ಸಂಶಯಂ ದ್ವಿಜಶಾರ್ದೂಲಾಃ ಪ್ರಬ್ರೂತ ಮಮ ಪೃಚ್ಛತಃ ।
ಆವಿರ್ಭಾವತಿರೋಭಾವೌ ಭೂತಾನಾಂ ಯತ್ರ ಸಂಸ್ಥಿತೌ ॥೧॥

ಕಥಂ ಸಂಜಾಯತೇ ಜನ್ತುಃ ಕಥಂ ವಾ ಸ ವಿವರ್ಧತೇ ।
ಕಥಂ ಚೋದರಮಧ್ಯಸ್ಥಸ್ತಿಷ್ಠತ್ಯಙ್ಗನಿಪೀಡಿತಃ ॥೨॥

ನಿಷ್ಕ್ರಾನ್ತಿಮುದರಾತ್ಪ್ರಾಪ್ಯ ಕಥಂ ವಾ ವೃದ್ಧಿಮೃಚ್ಛತಿ ।
ಉತ್ಕ್ರಾನ್ತಿಕಾಲೇ ಚ ಕಥಂ ಚಿದ್ಭಾವೇನ ವಿಯುಜ್ಯತೇ ॥೩॥

ಹತ್ತನೆಯ ಅಧ್ಯಾಯ

ಜೈಮಿನಿಮುನಿಯು ಹೀಗೆ ಹೇಳಿದನು :—

೧. ಪಕ್ಷಿಶ್ರೇಷ್ಠರೆ! ಯಾವ ದಶೆಯಲ್ಲಿ ಪ್ರತಿಯೊಂದು ಪ್ರಾಣಿಗಳಿಗೆ ಜನ್ಮ-ಮರಣಗಳೆಂಬ ಆವಿರ್ಭಾವ-ತಿರೋಭಾವಗಳು ಉಂಟಾಗುವುವೊ ; ಆ ದಶೆಯ ವಿಷಯದಲ್ಲಿ ಪ್ರಶ್ನೆಮಾಡುತ್ತಿದ್ದ ನನ್ನ ಸಂಶಯವನ್ನು ಬಗೆಹರಿಸಿರಿ.

೨. ಜನ್ಮವೆತ್ತುವ. ಪ್ರಾಣಿಯು ಯಾವಬಗೆಯಿಂದ ಹುಟ್ಟುವುದು ? ಹುಟ್ಟಿದ ಬಳಿಕ ಹೇಗೆ ವೃದ್ಧಿಹೊಂದುತ್ತದೆ ? ಮತ್ತು ಹುಟ್ಟುವುದಕ್ಕೆ ಮೊದಲು ಗರ್ಭವಾಸದಲ್ಲಿ ಜನನಿಯ ಅಂಗಪೀಡಿತವಾಗಿ ಜಠರದಲ್ಲಿ ಹೇಗೆ ವಾಸಿಸುವುದು ?

೩. ಹಾಗು ಪ್ರಸವಸಮಯದಲ್ಲಿ ಜನನಿಯ ಜಠರದಿಂದ ಹೊರಗೆ ಬಂದು ಹೇಗೆ ವೃದ್ಧಿಯನ್ನು ಹೊಂದುವುದು ? ಪ್ರಾಣೋತ್ಕ್ರಮಣದ ಸಮಯದಲ್ಲಿ ಹೇಗೆ ಪ್ರಜ್ಞಾಶಕ್ತಿಯಿಂದ ಶೂನ್ಯವಾಗುವುದು ?

ಕೃತ್ಸ್ನೇ ಮೃತಸ್ತಥಾಶ್ನಾತಿ ಉಭೇ ಸುಕೃತದುಷ್ಕೃತೇ ।
ಕಥಂ ತೇ ಚ ತಥಾ ತಸ್ಯ ಫಲಂ ಸಮ್ಪಾದಯನ್ತ್ಯುತ ॥೪॥

ಕಥಂ ನ ಜೀರ್ಯತೇ ತತ್ರ ಪಿಣ್ಡೀಕೃತ ಇವಾಶಯೇ ।
ಸ್ತ್ರೀಕೋಷ್ಠೇ ಯತ್ರ ಜೀರ್ಯನ್ತೇ ಭುಕ್ತಾನಿ ಸುಗುರೂಣ್ಯಪಿ ॥೫॥

ಭಕ್ಷ್ಯಾಣಿ ತತ್ರ ನೋ ಜನ್ತುರ್ಜೀರ್ಯತೇ ಕಥಮಲ್ಪಕಃ ।
ಕಥಂ ಭೋಕ್ತಾ ಸ ಸರ್ವಸ್ಯ ಕರ್ಮಣಃ ಸುಕೃತಸ್ಯ ವೈ ॥೬॥

ಏತನ್ಮೇ ಬ್ರೂತ ಸಕಲಂ ಸನ್ದೇಹೋಕ್ತಿವಿವರ್ಜಿತಮ್ ।
ತದೇತತ್ಪರಮಂ ಗುಹ್ಯಂ ಯತ್ರ ಮುಹ್ಯನ್ತಿ ಜನ್ತವಃ ॥೭॥

---

೪. ಮರಣಹೊಂದಿದವರೆಲ್ಲರೂ ಮರಣಾನಂತರದಲ್ಲಿ ಪುಣ್ಯ-ಪಾಪ-ಫಲಗಳನ್ನು ಅನುಭವಿಸುವರಷ್ಟೆ; ಆ ಪುಣ್ಯಪಾಪಗಳು ಪ್ರಾಣಿಗೆ ಫಲವನ್ನು ಹೇಗೆ ಕೊಡುತ್ತವೆ ?

೫. ಯಾವ ಸ್ತ್ರೀಯ ಜಠರದಲ್ಲಿ ಆಕೆಯು ಭುಂಜಿಸಿದ ಗುರುವಸ್ತುಗಳು ಜೀರ್ಣವಾಗುವುವೊ; ಅದೇ ಜಠರದಲ್ಲಿ ಗರ್ಭಾಶಯದಲ್ಲಿ ಮುದ್ದೆಯಂತೆ ಇರುವ ಜಂತುವು ಏಕೆ ಜೀರ್ಣವಾಗುವುದಿಲ್ಲ ?

೬. ಗುರುತರವಾದ ಭಕ್ಷ್ಯ-ಭೋಜ್ಯವಸ್ತುಗಳಿಗಿಂತ ಅಲ್ಪವಸ್ತುವಾದ ಜಂತುವು ಜಠರದಲ್ಲಿ ಜೀರ್ಣವಾಗುವುದಿಲ್ಲವೆ ? ಮತ್ತು ತಾನು ಮಾಡಿದ ಎಲ್ಲ ಪುಣ್ಯಕರ್ಮದ ಫಲವನ್ನು ಆ ಪ್ರಾಣಿಯು ಅನುಭವಿಸುವುದು ಹೇಗೆ ?

೭. ಸಂದೇಹವನ್ನು ಉಳಿಸದಂತಹ ವಿವರಣದ ಉಕ್ತಿಗಳಿಂದ ಈ ಎಲ್ಲ ವಿಷಯಗಳನ್ನು ನನಗೆ ಬೋಧಿಸಿರಿ. ಸಕಲ ಜಂತುಗಳು ಮೋಹಹೊಂದುವ ಈ ಅವಸ್ಥೆಗಳ ತತ್ತ್ವವು ಅತ್ಯಂತ ಗೋಪ್ಯವಾದುದಲ್ಲವೆ !

ಪಕ್ಷಿಣ ಊಚುಃ :—

ಪ್ರಶ್ನಭಾರೋಽಯಮತುಲಸ್ತ್ವಯಾಸ್ಮಾಸು ನಿವೇಶಿತಃ ।
ದುರ್ಭಾವ್ಯಃ ಸರ್ವಭೂತಾನಾಂ ಭಾವಾಭಾವಸಮಾಶ್ರಿತಃ ॥೮॥

ತಂ ಶೃಣುಷ್ವ ಮಹಾಭಾಗ ಯಥಾ ಪ್ರಾಹ ಪಿತುಃ ಪುರಾ ।
ಪುತ್ರಃ ಪರಮಧರ್ಮಾತ್ಮಾ ಸುಮತಿರ್ನಾಮ ನಾಮತಃ ॥೯॥

ಬ್ರಾಹ್ಮಣೋ ಭಾರ್ಗವಃ ಕಶ್ಚಿತ್ಸುತಮಾಹ ಮಹಾಮತಿಃ ।
ಕೃತೋಪನಯನಂ ಶಾನ್ತಂ ಸುಮತಿಂ ಜಡರೂಪಿಣಮ್ ॥೧೦॥

ವೇದಾನಧೀತ್ಯ ಸುಮತೇ ಯಥಾನುಕ್ರಮಮಾದಿತಃ ।
ಗುರುಶುಶ್ರೂಷಣೇ ವ್ಯಗ್ರೋ ಭೈಕ್ಷಾನ್ನಕೃತಭೋಜನಃ ॥೧೧॥

ಪಕ್ಷಿಗಳು ಇಂತೆಂದುವು :—

೮. ಅಮಿತವಾದ ಪ್ರಶ್ನಗಳ ಮೂಟೆಯನ್ನು ನೀನು ನಮ್ಮಲ್ಲಿ ಇರಿಸಿದ್ದೀಯೆ. ಎಲ್ಲ ಜಂತುಗಳ ಜನ್ಮ-ಮರಣಗಳ ವಿಷಯವಾದ ಈ ಪ್ರಶ್ನಜಾಲವು ಸಾಮಾನ್ಯವಾಗಿ ಎಲ್ಲರಿಂದಲೂ ತಿಳಿಯಲು ಶಕ್ಯವಿಲ್ಲ.

೯. ಮಹಾತ್ಮನಾದ ಜೈಮಿನಿಯೆ ! ಹಿಂದೆ ಪರಮಧಾರ್ಮಿಕನೂ, ಸುಮತಿ ಎಂಬ ನಾಮಾಂಕನವುಳ್ಳವನೂ ಆದ ಪುತ್ರನು ತನ್ನ ತಂದೆಗೆ ಜಂತುಗಳ ಜನ್ಮ-ಮರಣ ವಿಷಯದಲ್ಲಿ ಏನು ಹೇಳಿದನೊ ; ಆ ಸಂವಾದವನ್ನು ಕೇಳು.

೧೦. ಭೃಗುಮುನಿಯ ವಂಶದಲ್ಲಿ ಜನಿಸಿದ, ಮಹಾಪ್ರಾಜ್ಞನಾದ ಒಬ್ಬ ಬ್ರಾಹ್ಮಣನು ಉಪನಯನ ಸಂಸ್ಕಾರದಿಂದ ಸಂಸ್ಕೃತನೂ, ಶಾಂತನೂ, ಜಡನಂತೆ ಕಾಣುವವನೂ ಆದ ಸುಮತಿಯೆಂಬ ತನ್ನ ಪುತ್ರನಿಗೆ ಹೇಳಿದನು.

೧೧. ಸುಮತಿಯೆ ! ನೀನು ಗುರುಶುಶ್ರೂಷೆಯಲ್ಲಿ ತತ್ಪರನೂ ಭಿಕ್ಷಾನ್ನದಿಂದ ನೆರವೇರಿಸಿದ ಭೋಜನವುಳ್ಳವನೂ ಆಗಿ ಮೊದಲಿನಿಂದ ಕ್ರಮವಾಗಿ ಎಲ್ಲ ವೇದಗಳನ್ನು ಅಧ್ಯಯನಮಾಡು.

ತತೋ ಗಾರ್ಹಸ್ಥ್ಯಮಾಸ್ಥಾಯ ಚೇಷ್ಟ್ವಾ ಯಜ್ಞಾನನುತ್ತಮಾನ್ ।
ಇಷ್ಟಮುತ್ಪಾದಯಾಪತ್ಯಮಾಶ್ರಯೇಥಾ ವನಂ ತತಃ ॥೧೨॥

ವನಸ್ಥಶ್ಚ ತತೋ ವತ್ಸ ಪರಿವ್ರಾಣ್ಣಿಷ್ಪರಿಗ್ರಹಃ ।
ಏವಮಾಪ್ಸ್ಯಸಿ ತದ್ಬ್ರಹ್ಮ ಯತ್ರ ಗತ್ವಾ ನ ಶೋಚಸಿ ॥೧೩॥

ಪಕ್ಷಿಣ ಊಚುಃ:—

ಇತ್ಯೇವಮುಕ್ತೋ ಬಹುಶೋ ಜಡತ್ವಾನ್ನಾಹ ಕಿಂಚನ ।
ಪಿತಾಪಿ ತಂ ಸುಬಹುಶಃ ಪ್ರಾಹ ಪ್ರೀತ್ಯಾ ಪುನಃ ಪುನಃ ॥೧೪॥

ಇತಿ ಪಿತ್ರಾ ಸುತಸ್ನೇಹಾತ್ಪ್ರಲೋಭಿ ಮಧುರಾಕ್ಷರಮ್ ।
ಸ ಚೋದ್ಯಮಾನೋ ಬಹುಶಃ ಪ್ರಹಸ್ಯೇದಮಥಾಬ್ರವೀತ್ ॥೧೫॥

---

೧೨. ತರುವಾಯ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಶ್ರೇಷ್ಠವಾದ ಅನೇಕಯಜ್ಞಗಳನ್ನು ಆಚರಿಸಿ ಇಷ್ಟವಾದ ಸತ್ಸಂತತಿಯನ್ನು ಹೊಂದಿ ಅನಂತರ ವನವಾಸವನ್ನು ಆಚರಿಸು.

೧೩. ಪುತ್ರನೆ! ವನವಾಸಿಯಾದ ವಾನಪ್ರಸ್ಥಾಶ್ರಮಿಯೂ ಆಗಿ ಆಮೇಲೆ ಸರ್ವಸಂಗವನ್ನು ತೊರೆದು ಸನ್ಯಾಸಿಯಾಗು. ಈ ಕ್ರಮದಿಂದ ಶೋಕ-ಮೋಹಗಳಿಗೆ ಆಸ್ಪದವಿಲ್ಲದ ಆ ಬ್ರಹ್ಮಪದವನ್ನು ಹೊಂದುತ್ತೀಯೆ.

ಪಕ್ಷಿಗಳು ಇಂತೆಂದುವು :—

೧೪. ಹೀಗೆ ತಂದೆಯಿಂದ ಅನೇಕಸಲ ಹೇಳಲ್ಪಟ್ಟರೂ ಪುತ್ರನು ಜಡನಂತೆ ತೋರುತ್ತಿದ್ದುದರಿಂದ ಏನೊಂದೂ ಉತ್ತರವನ್ನು ಹೇಳಲಿಲ್ಲ. ತಂದೆಯು ಪುತ್ರನಿಗೆ ಮತ್ತೆ ಮತ್ತೆ ಪ್ರೀತಿಯಿಂದ ಹೀಗೆ ಉಪದೇಶಿಸುತ್ತಿದ್ದನು.

೧೫. ಈ ವಿಧವಾಗಿ ತಂದೆಯಿಂದ ಆಶೆಹುಟ್ಟಿಸುವ ಹಾಗೆ ಮಧುರವಾದ ಮಾತಿನಿಂದ ಅನೇಕಾವರ್ತಿಯಾಗಿ ಬೋಧಿಸಲ್ಪಟ್ಟ ಪುತ್ರನು ಆಮೇಲೆ ನಕ್ಕು ಈ ರೀತಿಯಾಗಿ ಉತ್ತರವಿತ್ತನು.

ತಾತೈತದ್ಬಹುಶೋಽಭ್ಯಸ್ತಂ ಯತ್ತ್ವಯಾದ್ಯೋಪದಿಶ್ಯತೇ ।
ತಥೈವಾನ್ಯಾನಿ ಶಾಸ್ತ್ರಾಣಿ ಶಿಲ್ಪಾನಿ ವಿವಿಧಾನಿ ಚ ॥೧೬॥

ಜನ್ಮನಾಮಯುತಂ ಸಾಗ್ರಂ ಮಮ ಸ್ಮೃತಿಪಥಂ ಗತಮ್ ॥೧೭॥

ಉತ್ಪನ್ನಜ್ಞಾನಬೋಧಸ್ಯ ವೇದೈಃ ಕಿಂ ಮೇ ಪ್ರಯೋಜನಮ್ ।
ನಿರ್ವೇದಾಃ ಪರಿತೋಷಾಶ್ಚ ಕ್ಷಯವೃದ್ಧ್ಯುದಯೋ ರತಾಃ ॥೧೮॥

ಶತ್ರುಮಿತ್ರಕಲತ್ರಾಣಾಂ ವಿಯೋಗಾಃ ಸಙ್ಗಮಾಸ್ತಥಾ ।
ಮಾತರೋ ವಿವಿಧಾ ದೃಷ್ಟಾಃ ಪಿತರೋ ವಿವಿಧಾಸ್ತಥಾ ॥೧೯॥

ಅನುಭೂತಾನಿ ಸೌಖ್ಯಾನಿ ದುಃಖಾನಿ ಚ ಸಹಸ್ರಶಃ ।
ಬಾನ್ಧವಾ ಬಹವಃ ಪ್ರಾಪ್ತಾಃ ಪಿತರಶ್ಚ ಪೃಥಗ್ವಿಧಾಃ ॥೨೦॥

---

೧೬. ತಂದೆಯೆ! ನಿನ್ನಿಂದ ಉಪದೇಶಿಸಲ್ಪಡುವ ಈ ವಿಷಯವು ನನ್ನಿಂದ ಅನೇಕಸಲ ಅಭ್ಯಾಸಮಾಡಲ್ಪಟ್ಟಿದೆ. ಹಾಗೆ ಅನೇಕ ಇತರ ಶಾಸ್ತ್ರಗಳೂ ವಿವಿಧವಾದ ಶಿಲ್ಪವಿದ್ಯೆಗಳೂ ನನ್ನಿಂದ ಪಠಿಸಲ್ಪಟ್ಟಿರುವುವು.

೧೭. ಹೀಗೆ ಅನೇಕ ವ್ಯಾವಹಾರಿಕವಾದ ವಿದ್ಯೆಗಳನ್ನು ನಿರವಧಿಯಾಗಿ ಕಲಿಯುತ್ತ ಹಿಂದೆ ಕಳೆದ ಸಹಸ್ರಾರು ಜನ್ಮಗಳ ವೃತ್ತಾಂತವು ನನಗೆ ಈಗ ಸ್ಮೃತಿಗೆ ಬರುತ್ತಿರುವುದು.

೧೮. ಕೃತಕೃತ್ಯತೆಗೆ ಬೇಕಾದ ಜ್ಞಾನ-ವಿಜ್ಞಾನಗಳು ಹುಟ್ಟಿರುವಾಗ ನನಗೆ ವೇದಗಳ ಅಭ್ಯಾಸದಿಂದ ಆಗುವುದೇನಿದೆ? ಮನಸ್ಸಿನಲ್ಲಿ ಆಗುವ ಹರ್ಷ-ವಿಷಾದಗಳು ಪರ್ಯಾಯವಾಗಿ ಕ್ಷಯ-ವೃದ್ಧಿಗಳನ್ನು ಹೊಂದುತ್ತಲೆ ಇರುವುವು.

೧೯. ಮತ್ತು ಹಿಂದಿನ ಅನೇಕ ಜನ್ಮಗಳಲ್ಲಿ ನಾನು ಶತ್ರು-ಮಿತ್ರ-ಕಲತ್ರ ಇವರ ಸಂಗವನ್ನೂ ಹಾಗು ವಿಯೋಗವನ್ನೂ ಅನೇಕ ವಿಧದ ಜನನಿಯರನ್ನೂ ಮತ್ತು ನಾನಾಜಾತಿಯ ಜನಕರನ್ನೂ ಅನುಭವಿಸಿದ್ದೇನೆ.

೨೦. ಒಂದಾದಮೇಲೊಂದೆಂಬ ಕ್ರಮದಿಂದ ಸಹಸ್ರಾರು ಸೌಖ್ಯಗಳನ್ನೂ ಅಂತೆಯೆ ದುಃಖಗಳನ್ನೂ ಭುಂಜಿಸಿದ್ದೇನೆ. ಮತ್ತು ಅನೇಕ ಬಂಧುಜನರ ಸಹವಾಸ ಒದಗಿತ್ತು ಹಾಗು ಅನೇಕ ವಿಧದ ಜನ್ಮದಾತೃಗಳಾದ ಪಿತೃಗಳಿದ್ದರು.

ವಿಣ್ಮೂತ್ರಪಿಚ್ಛಿಲೇ ಸ್ತ್ರೀಣಾಂ ತಥಾ ಕೋಷ್ಠೇ ಮಯೋಷಿತಮ್ ।
ಪೀಡಾಶ್ಚ ಸುಭೃಶಂ ಪ್ರಾಪ್ತಾ ರೋಗಾಣಾಂ ಚ ಸಹಸ್ರಶಃ ॥೨೧॥

ಗರ್ಭದುಃಖಾನ್ಯನೇಕಾನಿ ಬಾಲತ್ವೇ ಯೌವನೇ ತಥಾ ।
ವೃದ್ಧತಾಯಾಂ ತಥಾಪ್ತಾನಿ ತಾನಿ ಸರ್ವಾಣಿ ಸಂಸ್ಮರೇ ॥೨೨॥

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚಾಪಿ ಯೋನಿಷು ।
ಪುನಶ್ಚ ಪಶುಕೀಟಾನಾಂ ಮೃಗಾಣಾಮಥ ಪಕ್ಷಿಣಾಮ್ ॥೨೩॥

ತಥೈವ ರಾಜಭೃತ್ಯಾನಾಂ ರಾಜ್ಞಾಂ ಚಾಹವಶಾಲಿನಾಮ್ ।
ಸಮುತ್ಪನ್ನೋಽಸ್ಮಿ ಗೇಹೇಷು ತಥೈವ ತವ ವೇಶ್ಮನಿ ॥೨೪॥

ಭೃತ್ಯತಾಂ ದಾಸತಾಂ ಚೈವ ಗತೋಽಸ್ಮಿ ಬಹುಶೋ ನೃಣಾಮ್ ।
ಸ್ವಾಮಿತ್ವಮೀಶ್ವರತ್ವಂ ಚ ದರಿದ್ರತ್ವಂ ತಥಾ ಗತಃ ॥೨೫॥

---

೨೧. ಸ್ತ್ರೀಯರ ಮಲ-ಮೂತ್ರಗಳಿಂದ ತುಂಬಿದ ಉದರದಲ್ಲಿ ಗರ್ಭಾವಸ್ಥೆಯಲ್ಲಿದ್ದು ವಾಸಮಾಡಿರುವೆನು. ಆಗ ಗರ್ಭವಾಸದ ಅನೇಕ ದುಃಖಗಳನ್ನೂ ಮತ್ತು ಬಗೆಬಗೆಯ ರೋಗಪೀಡೆಗಳನ್ನೂ ಅನುಭವಿಸಿರುವೆನು.

೨೨. ಗರ್ಭವಾಸದ ಅನೇಕ ದುಃಖಗಳನ್ನೂ, ಬಾಲ್ಯಾವಸ್ಥೆಯ ಕ್ಲೇಶಗಳನ್ನೂ, ತಾರುಣ್ಯದ ವಿಕಾರಗಳನ್ನೂ ಮತ್ತು ವಾರ್ಧಕ್ಯದ ಯಾತನೆಗಳನ್ನೂ ಅನುಭವಿಸಿರುವುದು ನನ್ನ ಸ್ಮರಣೆಯಲ್ಲಿದೆ.

೨೩. ಅನೇಕಾವರ್ತಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ ಚಾತುರ್ವರ್ಣ್ಯ ಯೋನಿಯಲ್ಲಿ ಜನಿಸಿದ್ದೇನೆ. ಹಾಗು ಪಶು-ಪಕ್ಷಿ-ಮೃಗ-ಕೀಟ ಮುಂತಾದ ಮೂಕಪ್ರಾಣಿಗಳಲ್ಲಿ ಎಷ್ಟೋ ಸಲ ಜನ್ಮವೆತ್ತಿರುವೆನು.

೨೪. ಅದರಂತೆ ಅನೇಕಮಂದಿ ರಾಜಭೃತ್ಯರ ಮನೆಗಳಲ್ಲಿಯೂ, ಯುದ್ಧದಲ್ಲಿ ವೀರ್ಯದಿಂದ ಶೋಭಿಸುವ ರಾಜರ ಮಂದಿರಗಳಲ್ಲಿಯೂ ಜನಿಸಿದ್ದೇನೆ. ಹಾಗೆಯೆ ಈಗ ನಿನ್ನ ಮನೆಯಲ್ಲಿಯೂ ಜನ್ಮವೆತ್ತಿರುವೆನು.

೨೫. ಆಯಾಯ ಜನ್ಮಗಳಲ್ಲಿ ಸೇವಕತ್ವ, ಜನ್ಮದಾಸ್ಯ-ಗಳನ್ನೂ ಅನೇಕ ಸಲ ಹೊಂದಿದ್ದೆನು. ಹಾಗೆಯೆ ಪ್ರಭುತ್ವ, ಸರ್ವೈಶ್ವರ್ಯಗಳನ್ನೂ, ದರಿದ್ರತನವನ್ನೂ ಹೊಂದಿದ್ದೆನು.

ಹತಂ ಮಯಾ ಹತಶ್ಚಾನ್ಯೈರ್ಹತಂ ಮೇ ಘಾತಿತಂ ತಥಾ ।
ದತ್ತಂ ಮಮಾನ್ಯೈರನ್ಯೇಭ್ಯೋ ಮಯಾ ದತ್ತಮನೇಕಶಃ ॥೨೬॥

ಪಿತೃಮಾತೃಸುಹೃದ್ಭ್ರಾತೃಕಲತ್ರಾದಿಕೃತೇನ ಚ ।
ತುಷ್ಟೋಽಸಕೃತ್ತಥಾ ದೈನ್ಯಮಶ್ರುಧೌತಾನನೋ ಗತಃ ॥೨೭॥

ಏವಂ ಸಂಸಾರಚಕ್ರೇಽಸ್ಮಿನ್ಭ್ರಮತಾ ತಾತ ಸಙ್ಕಟೇ ।
ಜ್ಞಾನಮೇತನ್ಮಯಾ ಪ್ರಾಪ್ತಂ ಮೋಕ್ಷಸಮ್ಪ್ರಾಪ್ತಿಕಾರಕಮ್॥೨೮॥

ವಿಜ್ಞಾತೇ ಯತ್ರ ಸರ್ವೋಽಯಮೃಗ್ಯಜುಃಸಾಮಸಂಹಿತಃ ।
ಕ್ರಿಯಾಕಲಾಪೋ ವಿಗುಣೋ ನ ಸಮ್ಯಕ್ ಪ್ರತಿಭಾತಿ ಮೇ ॥೨೯॥

---

೨೬. ಎಷ್ಟೋ ವೇಳೆಗಳಲ್ಲಿ ನಾನು ಇನ್ನೊಂದನ್ನು ಕೊಂದಿರುವೆನು; ಹಾಗು ಮತ್ತೊಬ್ಬರಿಂದ ನಾನು ಕೊಲ್ಲಲ್ಪಟ್ಟಿರುವೆನು. ನಾನು ಕೊಂದಿರುವುದೂ ಕೊಲ್ಲಿಸಿರುವುದೂ ಉಂಟು. ಹಾಗು ಇತರರು ನನಗೆ ದಾನಕೊಟ್ಟಿರುವರು. ನಾನು ಇತರರಿಗೆ ಅನೇಕ ಸಲ ದಾನಮಾಡಿರುವೆನು.

೨೭. ತಂದೆ, ತಾಯಿ, ಮಿತ್ರ, ಸಹೋದರ, ಪತ್ನೀ ಮುಂತಾದವರಿಂದ ಸಂಭವಿಸಿದ ಆಯಾಯ ಪ್ರಸಂಗದಿಂದ ಅನೇಕ ಸಲ ಸಂತೋಷಪಟ್ಟಿದ್ದೇನೆ; ಹಾಗೆಯೆ ಕಣ್ಣೀರಿನಿಂದ ತುಂಬಿದ ಮುಖವುಳ್ಳವನಾಗಿ ದೈನ್ಯವನ್ನು ಹೊಂದಿದ್ದೇನೆ.

೨೮. ತಂದೆಯೆ! ಚಕ್ರದಂತೆ ತಿರುಗುವ ಈ ಘೋರ ಸಂಸಾರದಲ್ಲಿ ಭ್ರಮಿಸಿ ನಾನು ಈಗ ಕೈವಲ್ಯಪ್ರಾಪ್ತಿಗೆ ಕಾರಣವಾದ ಜ್ಞಾನಪರಿಪಾಕವನ್ನು ಹೊಂದಿರುವೆನು.

೨೯. ಹಾಗೆ ತತ್ತ್ವಬೋಧವು ಉಂಟಾದುದರಿಂದ ಋಗ್ವೇದ-ಯಜುರ್ವೇದ-ಸಾಮವೇದಗಳಲ್ಲಿ ವಿಧಿಸಿರುವ ಕ್ರಿಯಾಕಲಾಪವು ಬಂಧಕವಾದುದರಿಂದ ಗುಣವಿಲ್ಲದ್ದೆಂದೂ ಶ್ರೇಯಸ್ಕರವಲ್ಲವೆಂದೂ ನನಗೆ ತೋರಿದೆ.

ತಸ್ಮಾದುತ್ಪನ್ನಬೋಧಸ್ಯ ವೇದೈಃ ಕಿಂ ಮೇ ಪ್ರಯೋಜನಮ್ ।
ಗುರುವಿಜ್ಞಾನತೃಪ್ತಸ್ಯ ನಿರೀಹಸ್ಯ ಸದಾತ್ಮನಃ ॥೩೦॥

ಷಟ್ಪ್ರಕಾರಕ್ರಿಯಾದುಃಖಸುಖಹರ್ಷರಸೈಶ್ಚ ಯತ್ ।
ಗುಣೈಶ್ಚ ವರ್ಜಿತಂ ಬ್ರಹ್ಮ ತತ್ಪ್ರಾಪ್ಸ್ಯಾಮಿ ಪರಂ ಪದಮ್ ॥೩೧॥

ರಸಹರ್ಷಭಯೋದ್ವೇಗಕ್ರೋಧಾಮರ್ಷಜರಾಗುರಾ ।
ವಿಜ್ಞಾತಾ ನೃಮೃಗಗ್ರಾಹಿಸಜ್ಞಪಾಶಶತಾಕುಲಾ ॥೩೨॥

ತಸ್ಮಾದ್ಯಾಸ್ಯಾಮ್ಯಹಂ ತಾತ ತ್ಯಕ್ತ್ವೇಮಾಂ ದುಃಖಸನ್ತತಿಮ್ ।
ತ್ರಯೀಧರ್ಮಮಧರ್ಮಾಢ್ಯಂ ಕಿಂ ಪಾಪಫಲಸನ್ನಿಭಮ್ ॥೩೩॥

---

೩೦. ಹಾಗೆ ಉತ್ತಮವಾದ ತತ್ತ್ವಜ್ಞಾನದಿಂದ ತೃಪ್ತಿಹೊಂದಿದವನೂ-ನಿಷ್ಕಾಮನೂ ಶುದ್ಧಾತ್ಮಸ್ವರೂಪನೂ ಮತ್ತು ಹುಟ್ಟಿದ ಆತ್ಮಬೋಧವುಳ್ಳವನೂ ಆದ ನನಗೆ ವೇದಾಭ್ಯಾಸದಿಂದ ಪ್ರಯೋಜನವೇನಿದೆ?

೩೧. ಜನ್ಮ-ಅಸ್ತಿತ್ವ ಮುಂತಾದ ಆರು ಬಗೆಯ ಭಾವವಿಕಾರಗಳಿಂದಲೂ ದುಃಖ-ಹರ್ಷ ಭೋಗಗಳಿಂದಲೂ ಮತ್ತು ಸತ್ತ್ವ-ರಜ-ತಮೋ ಗುಣಗಳಿಂದಲೂ ಶೂನ್ಯವಾದ ಸರ್ವೋತ್ತಮವಾದ ಬ್ರಹ್ಮಪದವನ್ನು ಹೊಂದುತ್ತೇನೆ.

೩೨. ಮಾನವರೆಂಬ ಮೃಗಗಳ ಗುಂಪನ್ನು ಗ್ರಹಿಸುವ ನೂರಾರು ಪಾಶಗಳಿಂದ ಬಿಗಿದು ಕಟ್ಟಿರುವ ಭೋಗತೃಷ್ಣೆ, ಹರ್ಷ, ಭಯ, ವ್ಯಥೆ, ಕೋಪ, ಅಸಹನೆಗಳೆಂಬ ಬಲೆಯು ನನಗೆ ಚನ್ನಾಗಿ ತಿಳಿಯಿತು.

೩೩. ತಂದೆಯೆ! ಆದ ಕಾರಣ ನಾನು ಈ ದುಃಖಪರಂಪರೆಯನ್ನು ಬಿಟ್ಟು ಹೊರಡುವೆನು. ಅಧರ್ಮದಿಂದ ತುಂಬಿರುವುದೂ ಪಾಪದ ಫಲದಂತಹ ಫಲವನ್ನು ಕೊಡುವುದೂ ಆದ ಕರ್ಮಕಾಂಡದ ಶ್ರೌತ ಧರ್ಮವು ನನಗೇಕೆ?

ಪಕ್ಷಿಣ ಊಚುಃ :—

ತಸ್ಯ ತದ್ವಚನಂ ಶ್ರುತ್ವಾ ಹರ್ಷವಿಸ್ಮಯಗದ್ಗದವ್ ।
ಪಿತಾ ಪ್ರಾಹ ಮಹಾಭಾಗಃ ಸ್ವಸುತಂ ಹೃಷ್ಟಮಾನಸಃ ॥೩೪॥

ಪಿತೋವಾಚ :—

ಕಿಮೇತದ್ವದಸೇ ವತ್ಸ ಕುತಸ್ತೇ ಜ್ಞಾನಸಮ್ಭವಃ ।
ಕೇನ ತೇ ಜಡತಾ ಪೂರ್ವಮಿದಾನೀಂ ಚ ಪ್ರಬುದ್ಧತಾ ॥೩೫॥

ಕಿನ್ನು ಶಾಪವಿಕಾರೋಽಯಂ ಮುನಿದೇವಕೃತಸ್ತವ ।
ಯತ್ತೇ ಜ್ಞಾನಂ ತಿರೋಭೂತಮಾವಿರ್ಭಾವಮುಪಾಗತಮ್ ॥೩೬॥

ಪುತ್ರ ಉವಾಚ :—

ಶೃಣು ತಾತ ಯಥಾವೃತ್ತಂ ಮಮೇದಂ ಸುಖದುಃಖದಮ್ ।
ಯಶ್ಚಾಹಮಾಸಮನ್ಯಸ್ಮಿನ್ ಜನ್ಮನ್ಯಸ್ಮಾತ್ಪರಂ ತು ಯತ್ ॥೩೭॥

ಪಕ್ಷಿಗಳು ಹೀಗೆ ಹೇಳಿದುವು :—

೩೪. ಮಹಾಭಾಗ್ಯಶಾಲಿಯಾದ ತಂದೆಯು ಪುತ್ರನ ಆ ವಚನಗಳನ್ನು ಕೇಳಿ ಸಂತೋಷಗೊಂಡ ಮನಸ್ಸುಳ್ಳವನಾಗಿ ಹರ್ಷ-ಆಶ್ಚರ್ಯಗಳಿಂದ ತುಂಬಿ ಗದ್ಗದ ಧ್ವನಿಯಿಂದ ಪುತ್ರನಿಗೆ ಮತ್ತೆ ಹೇಳಿದನು.

ತಂದೆಯು ಇಂತೆಂದನು :—

೩೫. ಪುತ್ರನೆ! ಇದೇನು ಹೀಗೆ ಹೇಳುತ್ತಿದ್ದೀಯೆ? ನಿನಗೆ ಹೇಗೆ ಜ್ಞಾನವು ಉದಯಿಸಿತು? ಯಾವ ಕಾರಣದಿಂದ ಹಿಂದೆ ನಿನ್ನಲ್ಲಿ ಮೂರ್ಖತ್ವವು ಇತ್ತು? ಈಗ ಪ್ರಬೋಧವು ಹೇಗೆ ಉಂಟಾಯಿತು?

೩೬. ಇದು ಮುನಿ ಅಥವಾ ದೇವತೆಗಳು ನಿನಗೆ ಇತ್ತಿರುವ ಶಾಪದ ವಿಕಾರವೆ? ಇದುವರೆಗೆ ಕಾಣಿಸದಿರುವ ಜ್ಞಾನಪರಿಪಾಕವು ಈಗ ಆವಿರ್ಭಾವ-ವನ್ನು ಹೊಂದಿದೆ.

ಪುತ್ರನು ಇಂತೆಂದನು :—

೩೭. ತಂದೆಯೆ! ಸುಖ-ದುಃಖಪರಂಪರೆಗಳನ್ನು ಕೊಟ್ಟ ಹಿಂದಿನ ಜನ್ಮದಲ್ಲಿ ನಾನು ಯಾರಾಗಿದ್ದೆನು; ಇನ್ನು ಮುಂದೆ ಏನಾಗುವೆನು; ಇದೆಲ್ಲ-ಚರಿತವನ್ನೂ ಹೇಳುವೆನು. ಕೇಳು.

ಅಹಮಾಸಂ ಪುರಾ ವಿಪ್ರೋ ನ್ಯಸ್ತಾತ್ಮಾ ಪರಮಾತ್ಮನಿ ।
ಆತ್ಮವಿದ್ಯಾವಿಚಾರೇಷು ಪರಾಂ ನಿಷ್ಠಾಮುಪಾಗತಃ ॥೩೮॥

ಸತತಂ ಯೋಗಯುಕ್ತಸ್ಯ ಸತತಾಭ್ಯಾಸಸಜ್ಜನಾತ್ ।
ಸತ್ಸಂಯೋಗಾತ್ಸ್ವಸ್ವಭಾವಾದ್ವಿಚಾರವಿಧಿಶೋಧನಾತ್ ॥೩೯॥

ತಸ್ಮಿನ್ನೇವ ಪರಾ ಪ್ರೀತಿರ್ಮಮಾಸೀದ್ಯುಞ್ಜತಃ ಸದಾ ।
ಆಚಾರ್ಯತಾಂ ಚ ಸಮ್ಪ್ರಾಪ್ತಃ ಶಿಷ್ಯಸನ್ದೇಹಹೃತ್ತಮಃ ॥೪೦॥

ತತಃ ಕಾಲೇನ ಮಹತಾ ಐಕಾನ್ತಿಕಮುಪಾಗತಃ ।
ಅಜ್ಞಾನಾತ್ಕೃಷ್ಟಸದ್ಭಾವೋ ವಿಪನ್ನಶ್ಚ ಪ್ರಮಾದತಃ ॥೪೧॥

---

೩೮. ಹಿಂದೆ ನಾನು ಒಬ್ಬ ವಿಪ್ರನಾಗಿ ಜನಿಸಿ ಪರಮಾತ್ಮನಲ್ಲಿ ದೃಢವಾಗಿ ಇರಿಸಿದ ಅಂತಃಕರಣವುಳ್ಳವನಾಗಿದ್ದೆನು. ಹಾಗು ಆತ್ಮತತ್ತ್ವವನ್ನು ತೋರಿಸುವ ವಿದ್ಯಾವಿಚಾರಗಳಲ್ಲಿ ಹೆಚ್ಚಿನ ನಿಷ್ಠೆಯನ್ನು ಹೊಂದಿದ್ದೆನು.

೩೯. ಸಾಧುಗಳ ಸಹವಾಸ, ಸಾಧುವಾದ ಶೀಲ, ಸಂತತವಾದ ತತ್ತ್ವಾಭ್ಯಾಸ ಇವುಗಳಿಂದ ನಿರಂತರವಾಗಿ ಸಮಾಧಿನಿಷ್ಠನಾದ ನನಗೆ ವಿಚಾರವಿಧಿಯು ನಿರ್ಮಲವಾಗಿ ಪರಿಣಮಿಸಿತು.

೪೦. ಹಾಗೆ ಯಾವಾಗಲೂ ಸಮಾಧಿನಿಷ್ಠೆಯಲ್ಲಿದ್ದ ನನಗೆ ತತ್ತ್ವವಿಚಾರದಲ್ಲಿ ಹೆಚ್ಚಾಗಿ ಪ್ರೀತಿಯುಂಟಾಯಿತು. ಕ್ರಮವಾಗಿ ನಾನು ಶಿಷ್ಯಜನರ ಸಂದೇಹಗಳನ್ನು ನಿವಾರಿಸಲು ಬಲ್ಲ ಆಚಾರ್ಯನೂ ಆದೆನು.

೪೧. ಹೀಗೆ ಹೆಚ್ಚು ಕಾಲವು ಕಳೆದ ತರುವಾಯ ಒಂದು ವೇಳೆ ಏಕಾಂತನಿಷ್ಠೆಯನ್ನು ನಾನು ಹೊಂದಿದ್ದಾಗ ಪ್ರಮಾದದಿಂದ ಅಜ್ಞಾನದಿಂದ ಹೊರಟುಹೋದ ಸದ್ಭಾವನೆಗಳುಳ್ಳವನಾಗಿ ಮೃತ್ಯುವನ್ನು ಹೊಂದಿದೆನು.

ಉತ್ಕ್ರಾನ್ತಿಕಾಲಾದಾರಭ್ಯ ಸ್ಮೃತಿಲೋಪೋ ನ ಮೇಽಭವತ್ ।
ಯಾವದಬ್ದಂ ಗತಂ ಚೈವ ಜನ್ಮನಾಂ ಸ್ಮೃತಿಮಾಗತಮ್ ॥೪೨॥

ಪೂರ್ವಾಭ್ಯಾಸೇನ ತೇನೈವ ಸೋಽಹಂ ತಾತ ಜಿತೇನ್ದ್ರಿಯಃ ।
ಯತಿಷ್ಯಾಮಿ ತಥಾ ಕರ್ತುಂ ನ ಭವಿಷ್ಯೇ ಯಥಾ ಪುನಃ ॥೪೩॥

ಜ್ಞಾನದಾನಫಲಂ ಹ್ಯೇತದ್ಯಜ್ಜಾತಿಸ್ಮರಣಂ ಮಮ ।
ನ ಹ್ಯೇತತ್ಪ್ರಾಪ್ಯತೇ ತಾತ ತ್ರಯೀಧರ್ಮಾಶ್ರಿತೈರ್ನರೈಃ ॥೪೪॥

ಸೋಽಹಂ ಪೂರ್ವಾಶ್ರಮಾದೇವ ನಿಷ್ಠಾಧರ್ಮಮುಪಾಶ್ರಿತಃ ।
ಏಕಾನ್ತಿತ್ವಮುಪಾಗಮ್ಯ ಯತಿಷ್ಯಾಮ್ಯಾತ್ಮಮೋಕ್ಷಣೇ ॥೪೫॥

ತದ್ಬ್ರೂಹಿ ತ್ವಂ ಮಹಾಭಾಗ ಯತ್ತೇ ಸಾಂಶಯಿಕಂ ಹೃದಿ ।
ಏತಾವತಾಪಿ ತೇ ಪ್ರೀತಿಮುತ್ಪಾದ್ಯಾನೃಣ್ಯಮಾಪ್ನುಯಾಮ್ ॥೪೬॥

---

೪೨. ಪ್ರಾಣವಾಯುವಿನ ಉತ್ಕ್ರಮಣ ಸಮಯದಲ್ಲಿ ಕೂಡ ನನಗೆ ಜ್ಞಾನಶಕ್ತಿಯು ಲೋಪವಾಗಲಿಲ್ಲ. ಅಷ್ಟೆ ಅಲ್ಲ. ಹಿಂದೆ ವರ್ಷಾನುವರ್ಷಗಳಲ್ಲಿ ಹೊಂದಿದ್ದ ಪ್ರಾಚೀನ ಜನ್ಮವೃತ್ತಾಂತಗಳನ್ನೂ ಸ್ಮರಿಸಿಕೊಂಡೆನು.

೪೩. ಪಿತನೆ! ಹಿಂದಿನ ತತ್ತ್ವಾಭ್ಯಾಸ ಸಂಸ್ಕಾರದಿಂದ ಕೂಡಿದ ನಾನು ಪುನರ್ಜನ್ಮವನ್ನು ಹೊಂದದಂತೆ ಆಗಲು ಜಿತೇಂದ್ರಿಯನಾಗಿ ಮತ್ತೆ ಯತ್ನಿಸುವೆನು.

೪೪. ಜನಕನೆ! ನನಗುಂಟಾದ ಜನ್ಮಾಂತರ ಸ್ಮರಣ ಶಕ್ತಿಯು ಅನೇಕ ಶಿಷ್ಯಜನರಿಗೆ ಮಾಡಿದ ಜ್ಞಾನದಾನದ ಫಲವು. ವೈದಿಕ ಕರ್ಮಮಾರ್ಗವನ್ನು ಶರಣುಹೊಂದಿದ ಮಾನವರಿಗೆ ಜನ್ಮಾಂತರ ಸ್ಮರಣವು ಉಂಟಾಗಲಾರದು.

೪೫. ಅಂತಹ ನಾನು ಮೊದಲನೆಯದಾದ ಬ್ರಹ್ಮಚರ್ಯಾಶ್ರಮ-ದಿಂದಲೆ ನೈಷ್ಠಿಕಧರ್ಮವನ್ನು ಅವಲಂಬಿಸಿ ಸಮಾಧಿಸ್ಥನಾಗಿ ಆತ್ಮಕ್ಕೆ ಸಂಸಾರ-ಬಂಧ ಮೋಚನೆಯಾಗುವಂತೆ ಯತ್ನಿಸುವೆನು.

೪೬. ಮಹಾಸುಕೃತಿಯಾದ ಪಿತನೆ! ನಿನ್ನ ಮನಸ್ಸಿನಲ್ಲಿ ಏನಾದರೂ ತತ್ತ್ವಸಂಶಯವಿದ್ದರೆ ಅದನ್ನು ನೀನು ಹೇಳು. ಸಂಶಯವನ್ನು ಪರಿಹರಿಸುವ ಮಾತ್ರದಿಂದಾದರೂ ನಿನಗೆ ಪ್ರೀತಿಯನ್ನು ಉಂಟುಮಾಡಿ ಪುತ್ರನಾಗಿ ಜನಿಸಿದ ನಾನು ಪಿತೃಋಣದಿಂದ ಮುಕ್ತನಾಗುವೆನು.

ಪಕ್ಷಿಣ ಊಚುಃ :—

ಪಿತಾ ಪ್ರಾಹ ತತಃ ಪುತ್ರಂ ಶ್ರದ್ದಧತ್ತಸ್ಯ ತದ್ವಚಃ ।
ಭವತಾ ಯದ್ವಯಂ ಪೃಷ್ಟಾಃ ಸಂಸಾರಗ್ರಹಣಾಶ್ರಯಮ್ ॥೪೭॥

ಪುತ್ರ ಉವಾಚ :—

ಶೃಣು ತಾತ ಯಥಾ ತತ್ತ್ವಮನುಭೂತಂ ಮಯಾಸಕೃತ್ ।
ಸಂಸಾರಚಕ್ರಮಜರಂ ಸ್ಥಿತಿರ್ಯಸ್ಯ ನ ವಿದ್ಯತೇ ॥೪೮॥

ಸೋಽಹಂ ವದಾಮಿ ತೇ ಸರ್ವಂ ತವೈವಾನುಜ್ಞಯಾ ಪಿತಃ ।
ಉತ್ಕ್ರಾನ್ತಿಕಾಲಾದಾರಭ್ಯ ಯಥಾ ನಾನ್ಯೋ ವದಿಷ್ಯತಿ ॥೪೯॥

ಊಷ್ಮಾ ಪ್ರಕುಪಿತಃ ಕಾಯೇ ತೀವ್ರವಾಯುಸಮೀರಿತಃ ।
ಭಿನತ್ತಿ ಮರ್ಮಸ್ಥಾನಾನಿ ದೀಪ್ಯಮಾನೋ ನಿರಿನ್ಧನಃ ॥೫೦॥

ಪಕ್ಷಿಗಳು ಹೇಳಿದುವು :—

೪೭. ತಂದೆಯು ಪುತ್ರನ ಆ ವಾಣಿಯನ್ನು ಕೇಳಿ ನಂಬಿಕೊಂಡು ನೀನು ಈಗ ಸಂಸಾರಬಂಧದ ವಿಷಯದಲ್ಲಿ ಏನೇನು ಪ್ರಶ್ನೆಗಳನ್ನು ಕೇಳಿರುವೆಯೊ; ಅದೇ ಪ್ರಶ್ನೆಗಳನ್ನು ಪುತ್ರನಲ್ಲಿ ಕೇಳಿದನು.

ಪುತ್ರನು ಇಂತೆಂದನು :—

೪೮. ಪಿತನೆ! ಯಾವ ಸಂಸಾರಚಕ್ರಕ್ಕೆ ಅಂತವು ಸಿಗುವುದಿಲ್ಲವೊ; ಅಂತಹ ಅಜರವೂ ನನ್ನಿಂದ ಅನೇಕಸಲ ಅನುಭವಿಸಲ್ಪಟ್ಟಿರುವುದೂ ಆದ ಸಂಸಾರಚಕ್ರದ ತತ್ತ್ವವನ್ನು ಕೇಳು.

೪೯. ತಂದೆಯೆ! ಉತ್ಕ್ರಾಂತಿ ಸಮಯದಿಂದ ಮೊದಲಾಗಿ ಸಂಭವಿಸುವ ಎಲ್ಲ ವೃತ್ತಾಂತವನ್ನೂ ನಿನ್ನ ಆಜ್ಞೆಯಿಂದ ನಾನು ನಿನಗೆ ಹೇಳುವೆನು. ಹಾಗೆ ಇದನ್ನು ಇನ್ನಾರೂ ಹೇಳಲಾರರು.

೫೦. ಮೃತ್ಯು ದಶೆಯ ಪ್ರಾರಂಭದಲ್ಲಿ ತೀವ್ರವಾಯುವಿನಿಂದ ಒಲಗೊಂಡು ಪ್ರಕೋಪಹೊಂದಿದ, ಇಂಧನವಿಲ್ಲದೆ ಉರಿಯುವ ದೇಹದಲ್ಲಿರುವ ಉಷ್ಣಾಗ್ನಿಯು ಮರ್ಮಸ್ಥಾನಗಳನ್ನು ಭೇದಿಸುವುದು.

ಉದಾನೋ ನಾಮ ಪವನಸ್ತತಶ್ಚೋರ್ಧ್ವಂ ಪ್ರವರ್ತತೇ ।
ಭುಕ್ತಾನಾಮಮ್ಬುಭಕ್ಷ್ಯಾಣಾಮಧೋಗತಿನಿರೋಧಕೃತ್ ॥೫೧॥

ತತೋ ಯೇನಾಮ್ಬುದಾನಾನಿ ಕೃತಾನ್ಯನ್ನರಸಾಸ್ತಥಾ ।
ದತ್ತಾಃ ಸ ತಸ್ಯ ಅಹ್ಲಾದಮಾಪದಿ ಪ್ರತಿಪದ್ಯತೇ ॥೫೨॥

ಅನ್ನಾನಿ ಯೇನ ದತ್ತಾನಿ ಶ್ರದ್ಧಾಪೂತೇನ ಚೇತಸಾ ।
ಸೋಽಪಿ ತೃಪ್ತಿಮವಾಪ್ನೋತಿ ವಿನಾಪ್ಯನ್ನೇನ ವೈ ತದಾ ॥೫೩॥

ಯೇನಾನೃತಾನಿ ನೋಕ್ತಾನಿ ಪ್ರೀತಿಭೇದಃ ಕೃತೋ ನ ಚ ।
ಆಸ್ತಿಕಃ ಶ್ರದ್ದಧಾನಶ್ಚ ಸ ಸುಖಂ ಮೃತ್ಯುಮೃಚ್ಛತಿ ॥೫೪॥

ದೇವಬ್ರಾಹ್ಮಣಪೂಜಾಯಾಂ ಯೇ ರತಾ ಯೇಽನಸೂಯವಃ ।
ಶುಕ್ಲಾ ವದಾನ್ಯಾ ಹ್ರೀಮನ್ತಸ್ತೇ ನರಾಃ ಸುಖಮೃತ್ಯವಃ ॥೫೫॥

---

೫೧. ಆಗ ಉದಾನ ಎಂಬ ಹೆಸರಿನ ವಾಯುವು ಮೇಲುಸುರಿನ ರೂಪವಾಗಿ ಎಳೆಯುತ್ತಿರುವುದು. ಆ ವಾಯುವು ಭುಂಜಿಸಿದ ಅನ್ನ-ಪಾನೀಯಗಳನ್ನು ಹೊಟ್ಟೆಯೊಳಗೆ ಇಳಿಯದ ಹಾಗೆ ತಡೆಮಾಡುವುದು.

೫೨. ಯಾವ ಮಾನವನು ಅನ್ನರಸಗಳನ್ನೂ, ಪಾನೀಯಗಳನ್ನೂ ದಾನಮಾಡಿರುವನೊ; ಅವನು ಆ ಆಪತ್ಕಾಲದಲ್ಲಿ ತಾನು ಮಾಡಿದ ದಾನದ ಫಲವಾಗಿ ತೃಪ್ತಿ-ಆನಂದಗಳನ್ನು ಅನುಭವಿಸುವನು.

೫೩. ಯಾವ ಮಾನವನಿಂದ ಶ್ರದ್ಧಾ-ಭಕ್ತಿಗಳಿಂದಲೂ, ಪವಿತ್ರವಾದ ಮನಸ್ಸಿನಿಂದಲೂ ಅನ್ನದಾನ ಮಾಡಲ್ಪಟ್ಟಿರುವುದೊ; ಅವನು ಆ ಸಮಯದಲ್ಲಿ ಅನ್ನಸೇವನೆಯಿಲ್ಲದಿದ್ದರೂ ತೃಪ್ತಿಯನ್ನು ಹೊಂದುತ್ತಾನೆ.

೫೪. ಸುಳ್ಳುಮಾತುಗಳನ್ನು ಆಡದೆ ಇರುವವನೂ, ಪ್ರೇಮಿಗಳ ಅನ್ಯೋನ್ಯ ಪ್ರೇಮಕ್ಕೆ ಭಂಗಮಾಡದಿರುವವನೂ, ಆಸ್ತಿಕನೂ ಮತ್ತು ಶ್ರದ್ಧಾವಂತನೂ ಆದ ಮಾನವನು ಸುಖವಾಗಿ ಮರಣಹೊಂದುವನು.

೫೫. ಮತ್ತು ದೇವ-ಬ್ರಾಹ್ಮಣರ ಪೂಜೆಯಲ್ಲಿ ತತ್ಪರರೂ, ಮಾತ್ಸರ್ಯ ದೋಷವಿಲ್ಲದವರೂ, ಪರಿಶುದ್ಧ ಚರಿತ್ರವುಳ್ಳವರೂ, ಸಂಪನ್ನರೂ ಮತ್ತು ಲಜ್ಜಾವಂತರೂ ಆದ ಜನರು ಸುಖಮೃತ್ಯುವನ್ನು ಹೊಂದುತ್ತಾರೆ.

ಯೋ ನ ಕಾಮಾನ್ನ ಸಂರಮ್ಭಾನ್ನ ದ್ವೇಷಾದ್ಧರ್ಮಮುತ್ಸೃಜೇತ್ ।
ಯಥೋಕ್ತಕಾರೀ ಸೌಮ್ಯಶ್ಚ ಸ ಸುಖಂ ಮೃತ್ಯುಮೃಚ್ಛತಿ ॥೫೬॥

ಅವಾರಿದಾಯಿನೋ ದಾಹಂ ಕ್ಷುಧಾಂ ಚಾನನ್ನದಾಯಿನಃ ।
ಪ್ರಾಪ್ನುವನ್ತಿ ನರಾಃ ಕಾಲೇ ತಸ್ಮಿನ್ಮೃತ್ಯಾವುಪಸ್ಥಿತೇ ॥೫೭॥

ಶೀತಂ ಜಯನ್ತಿ ಧನದಾಸ್ತಾಪಂ ಚನ್ದನದಾಯಿನಃ ।
ಪ್ರಾಣಘ್ನೀಂ ವೇದನಾಂ ಕಷ್ಟಾಂ ಯೇ ಚಾನ್ಯೇ ದ್ವೇಷಕಾರಿಣಃ॥೫೮॥

ಮೋಹಾಜ್ಞಾನಪ್ರದಾತಾರಃ ಪ್ರಾಪ್ನುವನ್ತಿ ಮಹದ್ಭಯಮ್ ।
ವೇದನಾಭಿರುದಗ್ರಾಭಿಃ ಪ್ರಪೀಡ್ಯನ್ತೇಽಧಮಾ ನರಾಃ ॥೫೯॥

---

೫೬. ಯಾವ ಮನುಜನು ಆಶೆಯಿಂದಲೊ, ದರ್ಪದಿಂದಲೊ ಅಥವಾ ದ್ವೇಷದಿಂದಲೊ ಸ್ವಧರ್ಮವನ್ನು ಬಿಡದೆ ಸೌಮ್ಯಸ್ವಭಾವದಿಂದ ವಿಹಿತವಾದ ಧರ್ಮವನ್ನು ಆಚರಿಸುವನೊ ಅವನಿಗೆ ಮೃತ್ಯುದಶೆಯು ಸುಖಕರವಾಗಿರುವುದು.

೫೭. ಮೃತ್ಯುವು ಒದಗಿದ ಆ ಸಮಯದಲ್ಲಿ ಎಂದೂ ಜಲದಾನಮಾಡದಿರುವವರು ದಾಹವನ್ನೂ ಅನ್ನದಾನಮಾಡದಿರುವ ಪಾಪಿಗಳು ಹಸಿವನ್ನೂ ಅನುಭವಿಸುತ್ತಾರೆ.

೫೮. ಧನದಾನವನ್ನು ಮಾಡಿದವರು ಶೀತಬಾಧೆಯನ್ನು ಗೆಲ್ಲುವರು. ಚಂದನವನ್ನು ದಾನಮಾಡಿದವರು ತಾಪವನ್ನು ಗೆಲ್ಲುವರು. ಮತ್ತು ಪರರಿಗೆ ಗಾಬರಿ-ವ್ಯಥೆಗಳನ್ನು ಹುಟ್ಟಿಸದಂತೆ ಸೌಮ್ಯತೆಯಿಂದ ವರ್ತಿಸುವವರು ಮರಣ-ಸಮಯದಲ್ಲಿ ಪ್ರಾಣನೋಯಿಸುವ ಕಷ್ಟಕರವಾದ ವೇದನೆಯನ್ನು ಗೆಲ್ಲುವರು.

೫೯. ಪರರಿಗೆ ಮೋಹ-ಅಜ್ಞಾನಗಳನ್ನು ಕೊಟ್ಟು ಅಪಕಾರ ಮಾಡಿದವರು ಮಹತ್ತಾದ ಭಯವನ್ನು ಹೊಂದುವರು ಮತ್ತು ಅಂತಹ ಅಧಮರಾದ ಜನರು ಉಗ್ರವಾದ ವೇದನೆಗಳಿಂದ ಪೀಡಿಸಲ್ಪಡುವರು.

ಕೂಟಸಾಕ್ಷೀ ಮೃಷಾವಾದೀ ಯಶ್ಚಾಸದನುಶಾಸ್ತಿ ವೈ ।
ತೇ ಮೋಹಮೃತ್ಯವಃ ಸರ್ವೇ ತಥಾನ್ಯೇ ವೇದನಿನ್ದಕಾಃ ॥೬೦॥

ವಿಭೀಷಣಾಃ ಪೂತಿಗನ್ಧಾಃ ಕೂಟಮುದ್ಗರಪಾಣಯಃ ।
ಆಗಚ್ಛನ್ತಿ ದುರಾತ್ಮಾನೋ ಯಮಸ್ಯ ಪುರುಷಾಸ್ತದಾ ॥೬೧॥

ಪ್ರಾಪ್ತೇಷು ದೃಕ್ಪಥಂ ತೇಷು ಜಾಯತೇ ತಸ್ಯ ವೇಪಥುಃ ।
ಕ್ರನ್ದತ್ಯವಿರತಂ ಸೋಽಥ ಭ್ರಾತೃಮಾತೃಸುತಾನಥ ॥೬೨॥

ಸಾಸ್ಯ ವಾಗಸ್ಫುಟಾ ತಾತ ಏಕವರ್ಣಾ ವಿಭಾವ್ಯತೇ ।
ದೃಷ್ಟಿಶ್ಚ ಭ್ರಾಮ್ಯತೇ ತ್ರಾಸಾಚ್ಛ್ವಾಸಾಚ್ಛುಷ್ಯತ್ಯಥಾನನಮ್ ॥೬೩॥

---

೬೦. ಸುಳ್ಳುಸಾಕ್ಷಿಯಾಗಿ ವರ್ತಿಸುವವನು, ಸುಳ್ಳುಮಾತನ್ನು ಹೇಳುವವನು ಮತ್ತು ಪರರಿಗೆ ಕೆಟ್ಟದ್ದನ್ನು ಉಪದೇಶಿಸುವವನು ಇವರು ಮೂರ್ಛೆಹೊಂದಿ ಪ್ರಜ್ಞೆಯಿಲ್ಲದೆ ಮರಣಹೊಂದುವರು. ಹಾಗೇ ವೇದನಿಂದಕರೂ ಮೋಹ ಮೃತ್ಯುವನ್ನು ಹೊಂದುತ್ತಾರೆ.

೬೧. ಆಗ ಅಧಮರ ಬಳಿಗೆ ಭಯಂಕರರೂ, ದುರ್ವಾಸನೆಯುಳ್ಳವರೂ, ಕೈಗಳಲ್ಲಿ ಮುಳ್ಳುದೊಣ್ಣೆಗಳನ್ನು ಹಿಡಿದವರೂ ಮತ್ತು ನೀಚಸ್ವಭಾವದವರೂ ಆದ ಯಮಭಟರು ಬರುವರು.

೬೨. ಮರಣಶಯ್ಯೆಯಲ್ಲಿರುವವನಿಗೆ ಹಾಗಿದ್ದ ಯಮಭಟರನ್ನು ನೋಡಿದ ಕೂಡಲೆ ಭಯದಿಂದ ನಡುಗು ಹುಟ್ಟುವುದು. ಆಮೇಲೆ ಅವನು ಸಹೋದರ.ತಾಯಿ-ಮಕ್ಕಳನ್ನು ಮತ್ತೆ ಮತ್ತೆ ಕೂಗಿಕೊಳ್ಳುವನು.

೬೩. ಆಗ ಅವನು ಉಚ್ಚಾರಮಾಡುವ ಮಾತು ಅಸ್ಪಷ್ಟವಾಗಿ ಒಂದೇ ಅಕ್ಷರವಾಗಿ ತೋರುವುದು. ಭಯದಿಂದ ಅವನ ಕಣ್ಣು ತಿರುಗುತ್ತಿರುವುದು. ಉಸಿರಿನಿಂದ ಬಾಯಿಯು ಬತ್ತಿಹೋಗುವುದು.

ಊರ್ಧ್ವಶ್ವಾಸಾನ್ವಿತಃ ಸೋಽಥ ದೃಷ್ಟಿಭಙ್ಗಸಮನ್ವಿತಃ ।
ತತಃ ಸ ವೇದನಾವಿಷ್ಟಸ್ತಚ್ಛರೀರಂ ವಿಮುಞ್ಚತಿ ॥೬೪॥

ವಾಯ್ವಗ್ರಸಾರೀ ತದ್ರೂಪಂ ದೇಹಮನ್ಯತ್ಪ್ರಪದ್ಯತೇ ॥೬೫॥

ತತ್ಕರ್ಮಜಂ ಯಾತನಾರ್ಥಂ ನ ಮಾತಾಪಿತೃಸಮ್ಭವಮ್ ।
ತತ್ಪ್ರಮಾಣವಯೋಽವಸ್ಥಾಸಂಸ್ಥಾನೈಃ ಪ್ರಾಗ್ಭವಂ ಯಥಾ ॥೬೬॥

ತತೋ ದೂತೋ ಯಮಸ್ಯಾಶು ಪಾಶೈರ್ಬಧ್ನಾತಿ ದಾರುಣೈಃ ।
ದಣ್ಡಪ್ರಹಾರಸಮ್ಭ್ರಾನ್ತಂ ಕರ್ಷತೇ ದಕ್ಷಿಣಾಂ ದಿಶಮ್ ॥೬೭॥

೬೪- ತರುವಾಯ ಅವನು ಮೇಲುಸಿರುಬಿಡುವವನೂ, ಕಣ್ಣುಗುಡ್ಡೆ-ಗಳು ಮೇಲಕ್ಕೆ ಸೇರಿಹೋಗಿರುವವನೂ, ಆಗಿ ತಡೆಯಲಾಗದ ಉಗ್ರವೇದನೆ-ಗಳಿಂದಕ್ಲೇಶಪಡುತ್ತ ಆ ದೇಹವನ್ನು ತ್ಯಜಿಸುವನು.

೬೫. ಹಾಗೆ ದೇಹವನ್ನು ತ್ಯಜಿಸಿದವನು ಪ್ರಾಣವಾಯುವನ್ನು ಹಿಂಬಾಲಿಸಿಕೊಂಡುಹೋಗಿ ಅದೇ ಆಕಾರದ ಮತ್ತೊಂದು ದೇಹವನ್ನು ಹೊಂದುವನು.

೬೬. ಆ ದೇಹವು ಮೊದಲಿನ ದೇಹದಂತೆ ಅವನ ಪ್ರಮಾಣ-ವಯಸ್ಸು-ಅವಸ್ಥೆ-ಸನ್ನಿವೇಶಗಳಿಗೆ ಅನುರೂಪವಾಗಿರುವುದು. ಅದು ಯಾತನೆಯನ್ನು ಭುಂಜಿಸುವುದಕ್ಕಾಗಿ ಕರ್ಮಬಲದಿಂದ ಹುಟ್ಟಿರುವುದೇ ಹೊರತು ಮಾತಾ-ಪಿತೃಗಳಿಂದ ಹುಟ್ಟಿದ ದೇಹವಲ್ಲ.

೬೭. ತರುವಾಯ ಯಮನ ದೂತನು ಬೇಗ ಆ ದೇಹಿಯನ್ನು ಭಯಂಕರವಾದ ಪಾಶಗಳಿಂದ ಕಟ್ಟುವನು. ಹಾಗು ದಂಡ ಪ್ರಹಾರದಿಂದ ಭಯ-ಗಾಬರಿಗಳನ್ನು ಹೊಂದಿರುವ ಆ ಜಂತುವನ್ನು ದಕ್ಷಿಣ ದಿಕ್ಕಿಗೆ ಎಳೆದು-ಕೊಂಡು ಹೋಗುವನು.

ಕುಶಕಣ್ಟಕವಲ್ಮೀಕಶಙ್ಕುಪಾಷಾಣಕರ್ಕಶೇ ।
ತಥಾ ಪ್ರದೀಪ್ತಜ್ವಲನೇ ಕ್ವಚಿಚ್ಛ್ವಭ್ರಶತೋತ್ಕಟೇ ॥೬೮॥

ಪ್ರದೀಪ್ತಾದಿತ್ಯತಪ್ತೇನ ದಹ್ಯಮಾನೇನ ದಂಶುಭಿಃ ।
ಕೃಷ್ಯತೇ ಯಮದೂತೈಶ್ಚ ಶಿವಾಸನ್ನಾದಭೀಷಣೈಃ ॥೬೯॥

ವಿಕೃಷ್ಯಮಾಣಸ್ತೈರ್ಘೋರೈರ್ಭಕ್ಷ್ಯಮಾಣಃ ಶಿವಾಶತೈಃ ।
ಪ್ರಯಾತಿ ದಾರುಣೇ ಮಾರ್ಗೇ ಪಾಪಕರ್ಮಾ ಯಮಕ್ಷಯಮ್
॥೭೦॥

ಛತ್ರೋಪಾನತ್ಪ್ರದಾತಾರೋ ಯೇ ಚ ವಸ್ತ್ರಪ್ರದಾ ನರಾಃ ।
ತೇ ಯಾನ್ತಿ ಮನುಜಾ ಮಾರ್ಗಂ ತಂ ಸುಖೇನ ತಥಾನ್ನದಾಃ ॥೭೧॥

---

೬೮. ದರ್ಭೆಗಳು, ಮುಳ್ಳು, ಹುತ್ತ, ಗೂಟ ಮತ್ತು ಕಲ್ಲುಗಳಿಂದ ಕಠಿನವಾಗಿಯೂ, ಉರಿಯುತ್ತಿದ್ದ ಅಗ್ನಿಯುಳ್ಳದ್ದೂ ಮತ್ತು ನೂರಾರು ಹಳ್ಳ ತಿಟ್ಟುಗಳಿಂದ ಗಹನವಾದುದೂ ಆದ ದಾರಿಯಲ್ಲಿ ಪಾಪಿಯನ್ನು ಎಳೆಯುವರು.

೬೯. ಸುಡುತ್ತಿದ್ದ ಬಿಸಿಲಿನಿಂದ ತಪಿಸಿದ, ಮತ್ತು ಸೊಳ್ಳೆ ಮುಂತಾದ ಕಡಿಯುವ ಪ್ರಾಣಿಗಳಿಂದ ಹಿಂಸೆಯುಂಟಾಗುವ ಮಾರ್ಗದಲ್ಲಿ ನರಿಗಳಂತೆ ವಿಕಾರಧ್ವನಿಯಿಂದ ಭಯಂಕರರಾದ ದೂತರಿಂದ ಸೆಳೆಯಲ್ಪಡುವನು.

೭೦. ಪಾಪಕರ್ಮಗಳನ್ನು ಮಾಡಿದ ಮಾನವನು ಘೋರರಾದ ಯಮದೂತರಿಂದ ಸೆಳೆಯಲ್ಪಡುವವನೂ, ನೂರಾರು ನರಿಗಳಿಂದ ಭಕ್ಷಿಸಲ್ಪಡುವವನೂ ಆಗಿ ಭಯಂಕರವಾದ ಮಾರ್ಗದಿಂದ ಯಮನ ಆಲಯಕ್ಕೆ ಹೋಗುವನು.

೭೧. ಛತ್ರಿ, ಪಾದರಕ್ಷೆಗಳನ್ನು ದಾನಮಾಡಿದವರೂ ವಸ್ತ್ರವನ್ನು ದಾನಮಾಡಿದವರೂ ಮತ್ತು ಅನ್ನದಾನವನ್ನು ಮಾಡಿದವರೂ ಆದ ಪುಣ್ಯವಂತರು ಆ ದಾರಿಯಲ್ಲಿ ಸುಖವಾಗಿ ನಡೆಯುವರು.

ವಿಮಾನೈಃ ಸೋಜ್ವಲೈರ್ಯಾನ್ತಿ ಭೂಮಿದಾನಪ್ರದಾ ನರಾಃ ||೭೨||

ಏವಂ ಕ್ಲೇಶಾನನುಭವನ್ನವಶಃ ಪಾಪಪೀಡಿತಃ |
ನೀಯತೇ ದ್ವಾದಶಾಹೇನ ಧರ್ಮರಾಜಪುರಂ ನರಃ ||೭೩||

ಕಲೇವರೇ ದಹ್ಯಮಾನೇ ಮಹಾನ್ತಂ ದಾಹಮೃಚ್ಛತಿ |
ತಾಡ್ಯಮಾನೇ ತಥೈವಾರ್ತಿಂ ಛಿದ್ಯಮಾನೇ ಚ ದಾರುಣಾಮ್ ||೭೪||

ಕ್ಲಿದ್ಯಮಾನೇ ಚಿರತರಂ ಜನ್ತುರ್ದುಃಖಮವಾಪ್ನುತೇ |
ಸ್ವೇನ ಕರ್ಮವಿಪಾಕೇನ ದೇಹಾನ್ತರಗತೋಽಪಿ ಸನ್ ||೭೫||

ತತ್ರ ಯದ್ಬಾನ್ಧವಾಸ್ತೋಯಂ ಪ್ರಯಚ್ಛನ್ತಿ ತಿಲೈಃ ಸಹ |
ಯಚ್ಚ ಪಿಣ್ಡಂ ಪ್ರಯಚ್ಛನ್ತಿ ನೀಯಮಾನಸ್ತದಶ್ನುತೇ ||೭೬||

---

೭೨. ಹಾಗು ಭೂಮಿದಾನವನ್ನು ಆಚರಿಸಿದ ಪುಣ್ಯವಂತರಾದ ಜನರು ಮರಣಸಮಯದಲ್ಲಿ ಬಂದ ಉಜ್ವಲವಾದ ವಿಮಾನಗಳಲ್ಲಿ ಆರೂಢರಾಗಿ ಹೋಗುವರು.

೭೩. ಹೀಗೆ ಮೃತಿಹೊಂದಿದ ಮಾನವನು ಪಾಪದಿಂದ ಪೀಡಿಸಲ್ಪಟ್ಟು ಪರತಂತ್ರನಾಗಿ ನಾನಾಕ್ಲೇಶಗಳನ್ನು ಅನುಭವಿಸುತ್ತ ಹನ್ನೆರಡು ದಿನಗಳಲ್ಲಿ ಯಮಧರ್ಮರಾಜನ ನಗರಕ್ಕೆ ಒಯ್ಯಲ್ಪಡುವನು.

೭೪. ದೇಹಾನ್ತರವನ್ನು ಹೊಂದಿದ ಆ ಪ್ರಾಣಿಯು ತ್ಯಜಿಸಿದ ದೇಹವನ್ನು ಸುಟ್ಟಾಗ ಹೆಚ್ಚಾದ ದಾಹವನ್ನು ಹೊಂದುವನು. ಹಾಗು ಅದನ್ನು ಹೊಡೆದರೆ ಅಥವ ಕತ್ತರಿಸಿದರೆ ಅತ್ಯಂತ ವಿಷಮವಾದ ಪೀಡೆಯನ್ನು ಅನುಭವಿಸುತ್ತಾನೆ.

೭೫. ಹೀಗೆ ಸ್ವಕರ್ಮಪರಿಪಾಕದಿಂದ ಮತ್ತೊಂದು ದೇಹದಲ್ಲಿದ್ದರೂ ಆ ಜಂತುವು ಪೂರ್ವದೇಹವು ನೆನೆದು ಕೊಳೆತರೆ ಬಹುದೀರ್ಘಕಾಲದವರೆಗೆ ದುಃಖವನ್ನು ಅನುಭವಿಸುವನು.

೭೬. ಈ ಸಂದರ್ಭದಲ್ಲಿ ಬಾಂಧವರು ಪ್ರೇತವನ್ನು ಉದ್ದೇಶಮಾಡಿ ಎಳ್ಳು-ನೀರನ್ನೂ ಮತ್ತು ಪಿಂಡವನ್ನೂ ಕೊಟ್ಟರೆ ಅದನ್ನು ಯಮದೂತರಿಂದ ಒಯ್ಯಲ್ಪಡುತ್ತಿದ್ದ ಪ್ರಾಣಿಯು ಭುಂಜಿಸುವನು.

ತೈಲಾಭ್ಯಜ್ಗೋ ಬಾನ್ಧವಾನಾಮಙ್ಗಸಂವಾಹನಂ ಚ ಯತ್ ।
ತೇನ ಚಾಪ್ಯಾಯತೇ ಜನ್ತುರ್ಯಚ್ಚಾಶ್ನನ್ತಿ ಸ್ವಭಾನ್ಧವಾಃ ॥೭೭॥

ಭೂಮೌ ಸ್ವಪದ್ಭಿರ್ನಾತ್ಯನ್ತಂ ಕ್ಲೇಶಮಾಪ್ನೋತಿ ಬಾನ್ಧವೈಃ ।
ದಾನಂ ದದದ್ಭಿಶ್ಚ ತಥಾ ಜನ್ತುರಾಪ್ಯಾಯ್ಯತೇ ಮೃತಃ ॥೭೮॥

ನೀಯಮಾನಃ ಸ್ವಕಂ ಗೇಹಂ ದ್ವಾದಶಾಹಂ ಸ ಪಶ್ಯತಿ ।
ಉಪಭುಙ್ಕ್ತೇ ತಥಾ ದತ್ತಂ ತೋಯಪಿಣ್ಡಾದಿಕಂ ಭುವಿ ॥೭೯॥

ದ್ವಾದಶಾಹಾತ್ಪರಂ ಘೋರಮಾವಾಸಂ ಭೀಷಣಾಕೃತಿಮ್ ।
ಯಾಮ್ಯಂ ಪಶ್ಯತ್ಯಥೋ ಜನ್ತುಃ ಕೃಷ್ಯಮಾಣಃ ಪುರಂ ತತಃ ॥೮೦॥

---

೭೭. ಆ ಸಮಯದಲ್ಲಿ ಬಾಂಧವರ ತೈಲಾಭ್ಯಂಜನ ಸ್ನಾನದಿಂದಲೂ, ಅಂಗಮರ್ದನದಿಂದಲೂ ಮತ್ತು ಅನ್ನ ಭೋಜನಗಳಿಂದಲೂ ಮೃತನಾದ ಜಂತುವು ತೃಪ್ತಿಹೊಂದುವುದರಿಂದ ಬಂಧುಜನಗಳಿಗೆ ಆ ಉಪಚಾರವನ್ನು ಅರ್ಪಿಸಬೇಕು.

೭೮. ಮತ್ತು ಬಾಂಧವರು ನೆಲದಲ್ಲಿ ಶಯನಮಾಡುವುದರಿಂದ ಮೃತನಿಗೆ ಕ್ಲೇಶವು ಅತ್ಯಂತ ದೂರವಾಗುವುದು. ಹಾಗು ಬಂಧುಗಳು ದಾನಮಾಡುವುದರಿಂದ ಮೃತನಿಗೆ ತೃಪ್ತಿಯು ಉಂಟಾಗುವುದು.

೭೯. ಮರಣಹೊಂದಿದ ಮೇಲೆ ಹನ್ನೆರಡು ದಿನಗಳ ವರೆಗೆ ಯಮದೂತರಿಂದ ಸ್ವಗೃಹಕ್ಕೆ ತರಲ್ಪಟ್ಟವನಾಗಿ ತನ್ನ ಮನೆಯನ್ನು ನೋಡುತ್ತಾನೆ. ಮತ್ತು ನೆಲದಲ್ಲಿ ಅರ್ಪಿಸಲ್ಪಟ್ಟ ಜಲಾಂಜಲಿ-ಪಿಂಡ ಮುಂತಾದುವುಗಳನ್ನು ಭುಂಜಿಸುತ್ತಾನೆ.

೮೦. ತರುವಾಯ ಹನ್ನೆರಡು ದಿನಗಳ ನಂತರ ಮತ್ತೆ ಸೆಳೆಯಲ್ಪಡುವ ಆ ಜಂತುವು ಘೋರವಾಸಸ್ಥಾನವಾದ ಮತ್ತು ಭಯಂಕರವಾದ ಆಕಾರವುಳ್ಳ ಯಮಪುರವನ್ನು ನೋಡುವನು.

ಗತಮಾತ್ರೋಽತಿರಕ್ತಾಕ್ಷಂ ಭಿನ್ನಾಞ್ಜನಚಯಪ್ರಭಮ್ ।
ಮೃತ್ಯುಕಾಲಾನ್ತಕಾದೀನಾಂ ಮಧ್ಯೇ ಪಶ್ಯತಿ ವೈ ಯಮಮ್ ॥೮೧॥

ದಂಷ್ಟ್ರಾಕರಾಲವದನಂ ಭ್ರುಕುಟೀದಾರುಣಾಕೃತಿಮ್ ।
ವಿರೂಪೈರ್ಭೀಷಣೈರ್ವಕ್ತ್ರೈರ್ವೃತಂ ವ್ಯಾಧಿಶತೈಃ ಪ್ರಭುಮ್ ॥೮೨॥

ದಣ್ಡಾಸಕ್ತಮಹಾಬಾಹುಂ ಪಾಶಹಸ್ತಂ ಸುಭೈರವಮ್ ।
ತನ್ನಿರ್ದಿಷ್ಟಾಂ ತತೋ ಯಾತಿ ಗತಿಂ ಜನ್ತುಃ ಶುಭಾಶುಭಾಮ್॥೮೩॥

ರೌರವೇ ಕೂಟಸಾಕ್ಷೀ ತು ಯಾತಿ ಯಶ್ಚಾನೃತೀ ನರಃ ।
ಬ್ರಹ್ಮಘ್ನೋ ಹತ್ಯಯಾ ದಷ್ಟೋ ಗೋಘ್ನಶ್ಚ ಪಿತೃಘಾತಕಃ ॥೮೪॥

---

೮೧. ಯಮನಗರವನ್ನು ಪ್ರವೇಶಿಸಿದ ಕೂಡಲೆ ಮೃತ್ಯು-ಕಾಲ-ಅಂತಕ ಮುಂತಾದ ಪರಿವಾರಗಳ ಮಧ್ಯದಲ್ಲಿರುವ ಬಹಳ ಕೆಂಪಾದ ಕಣ್ಣುಗಳುಳ್ಳ, ಮತ್ತು ಒಡೆದ ಕಾಡಿಗೆ ರಾಶಿಯಂತೆ ಕಪ್ಪಾದ ಯಮನನ್ನು ನೋಡುವನು.

೮೨. ಆ ಯಮದೇವನು ಕೋರೆ ಹಲ್ಲುಗಳಿಂದ ಕರಾಳವಾದ ಮುಖವುಳ್ಳವನೂ, ಹುಬ್ಬುಗಂಟುಗಳಿಂದ ಭಯಂಕರವಾದ ಆಕಾರವುಳ್ಳವನೂ ಮತ್ತು ವಿಕಾರವೂ ಭಯಂಕರವೂ ಆದ ಮುಖಗಳಿಂದ ಕೂಡಿದವನೂ ಆಗಿ ಸುತ್ತಲೂ ನಿಂತಿರುವ ನೂರಾರು ರೋಗಗಳ ನಡುವೆ ಇರುವನು.

೮೩. ಮತ್ತು ಆ ಯಮನು ತನ್ನ ದಂಡದ ಅಗ್ರದಲ್ಲಿ ಇರಿಸಿದ ದೀರ್ಘವಾದ ಭುಜವುಳ್ಳವನೂ, ಕೈಯಲ್ಲಿ ಪಾಶವನ್ನು ಧರಿಸಿದವನೂ, ಅತಿಭಯಂಕರಮೂರ್ತಿಯೂ ಆಗಿರುವನು. ಮೃತನಾದ ಜಂತುವು ಯಮನಿಂದ ನಿರ್ದೇಶಿಸಲ್ಪಟ್ಟ ಶುಭ ಅಥವಾ ಅಶುಭ ಗತಿಯನ್ನು ಪಡೆಯುವನು.

೮೪. ಕೂಟಸಾಕ್ಷ್ಯವನ್ನು ನುಡಿದವನೂ, ಅನೃತವನ್ನು ಹೇಳುವವನೂ, ಬ್ರಹ್ಮಹತ್ಯೆ, ಗೋಹತ್ಯೆ, ಪಿತೃಹತ್ಯೆಗಳನ್ನು ಮಾಡಿ ಹತ್ಯಾದೋಷದಿಂದ ಆವರಿಸಲ್ಪಟ್ಟವನೂ ರೌರವ ನರಕದಲ್ಲಿ ಬೀಳುವನು-

ಕ್ಷೇತ್ರದಾರಾಪಹಾರೀ ಚ ಸೀಮಾನಿಕ್ಷೇಪಹಾರಕಃ ।
ಗುರುಪತ್ನ್ಯಭಿಗಾಮೀ ಚ ಕನ್ಯಾಗಾಮೀ ತಥೈವ ಚ ॥೮೫॥

ತಸ್ಯ ಸ್ವರೂಪಂ ಗದತೋ ರೌರವಸ್ಯ ನಿಶಾಮಯ ।
ಯೋಜನಾನಾಂ ಸಹಸ್ರೇ ದ್ವೇ ರೌರವೋ ಹಿ ಪ್ರಮಾಣತಃ ॥೮೬॥

ಜಾನುಮಾತ್ರಪ್ರಮಾಣಶ್ಚ ತತಃ ಶ್ವಭ್ರಃ ಸುದುಸ್ತರಃ ।
ತತ್ರಾಙ್ಗಾರಚಯೋಪೇತಂ ಕೃತಂ ಚ ಧರಣೀಸಮಮ್ ॥೮೭॥

ಜಾಜ್ವಲ್ಯಮಾನಸ್ತೀವ್ರೇಣ ತಾಪಿತಾಙ್ಗಾರಭೂಮಿನಾ ।
ತನ್ಮಧ್ಯೇ ಪಾಪಕರ್ಮಾಣಂ ವಿಮುಞ್ಚನ್ತಿ ಯಮಾನುಗಾಃ ॥೮೮॥

---

೮೫. ಮತ್ತು ಪರಕ್ಷೇತ್ರ, ಪರಕಲತ್ರಗಳನ್ನು ಅಪಹರಿಸಿದವನೂ, ಎಲ್ಲೆ ಅಥವಾ ನಿಕ್ಷೇಪವಸ್ತು ಇವುಗಳನ್ನು ಕಿತ್ತುಕೊಂಡವನೂ ಹಾಗು ಗುರು-ಪತ್ನೀ-ಕನ್ಯಾಸಂಗವನ್ನು ಮಾಡಿದವನೂ ರೌರವ ನರಕ ಯಾತನೆಯನ್ನು ಅನು-ಭವಿಸುವನು.

೮೬. ಅಂತಹ ರೌರವ ನರಕದ ಸ್ವರೂಪವನ್ನು ತಿಳಿಸುವ ನನ್ನ ವಚನವನ್ನು ಕೇಳು. ಆ ರೌರವ ನರಕವು ಪ್ರಮಾಣದಲ್ಲಿ ಎರಡು ಸಹಸ್ರ-ಯೋಜನಗಳಷ್ಟು ವಿಶಾಲವಾದುದು.

೮೭. ಅಷ್ಟು ವಿಶಾಲವಾದ ರೌರವ ನರಕವು ಮೊಳಕಾಲಿನಷ್ಟು ಉದ್ದದ ಆಳವಾಗಿರುವುದು. ಒಳಗೆ ಉರಿಯುವ ಬೆಂಕಿಕೆಂಡಗಳ ರಾಶಿಯನ್ನು ಸುರಿದು ನೆಲದಂತೆ ಸಮಮಟ್ಟವಾಗಿರುವುದರಿಂದ ಇದನ್ನು ಯಾರಿಂದಲೂ ದಾಟಿ ಹೋಗಲು ಶಕ್ಯವಿಲ್ಲ.

೮೮. ಜ್ವಲಿಸುತ್ತಿದ್ದ, ಕೆಂಡಹಾಸಿದ, ತೀವ್ರವಾಗಿ ತಪಿಸುವ, ನೆಲದಿಂದ ರೌರವನರಕವು ಸುತ್ತಲೂ ಉರಿಯುವಂತೆ ಕಾಣುವುದು. ಯಮ ದೂತರು ಆ ರೌರವ ನರಕಮಧ್ಯದಲ್ಲಿ ಪಾಪಿಯನ್ನು ತಳ್ಳುತ್ತಾರೆ.

ಸ ದಹ್ಯಮಾನಸ್ತೀವ್ರೇಣ ವಹ್ನಿನಾ ತತ್ರ ಧಾವತಿ ।
ಪದೇ ಪದೇ ಚ ಪಾದೋಽಸ್ಯ ಶೀರ್ಯತೇ ಜೀರ್ಯತೇ ಪುನಃ ॥೮೯॥

ಅಹೋರಾತ್ರೇಣೋದ್ಧರಣಂ ಪಾದನ್ಯಾಸಂ ಚ ಗಚ್ಛತಿ ।
ಏವಂ ಸಹಸ್ರಮುತ್ತೀರ್ಣೋ ಯೋಜನಾನಾಂ ವಿಮುಚ್ಯತೇ ॥೯೦॥

ತತೋಽನ್ಯತ್ಪಾಪಶುದ್ಧ್ಯರ್ಥಂ ತಾದೃಙ್ನರಯಮೃಚ್ಛತಿ ।
ತತಃ ಸರ್ವೇಷು ನಿಸ್ತೀರ್ಣಃ ಪಾಪೀ ತಿರ್ಯಕ್ತ್ವಮಶ್ನುತೇ ॥೯೧॥

ಕೃಮಿಕೀಟಪತಙ್ಗೇಷು ಶ್ವಾಪದೇ ಮಶಕಾದಿಷು ।
ಗತ್ವಾ ಗಜದ್ರುಮಾದ್ಯೇಷು ಗೋಷ್ವಶ್ವೇಷು ತಥೈವ ಚ ॥೯೨॥

---

೮೯. ಆ ಪಾಪಿಯು ಆ ನರಕದಲ್ಲಿ ತೀವ್ರವಾದ ಅಗ್ನಿಯಿಂದ ಸುಡಲ್ಪಡುತ್ತ ಅಲ್ಲಲ್ಲಿ ಓಡುವನು. ಹೆಜ್ಜೆ ಹೆಜ್ಜೆಗೂ ಆ ಪಾಪಿಯ ಕಾಲು ಸೀಳಿದಂತೆ ಜೀರ್ಣವಾಗುವುದು.

೯೦. ಒಂದು ಹಗಲು ಮತ್ತು ಒಂದು ರಾತ್ರಿಯು ಪೂರ್ತಿಯಾಗುವಷ್ಟು ಹೊತ್ತಿನಲ್ಲಿ ಒಂದು ಹೆಜ್ಜೆಯನ್ನು ಎತ್ತಿ ಮುಂದಕ್ಕೆ ಇಡುವನು. ಈ ರೀತಿಯಾಗಿ ಸಹಸ್ರಯೋಜನಗಳನ್ನು ದಾಟಿ ಪಾಪದಿಂದ ಮುಕ್ತನಾಗುವನು.

೯೧. ಅನಂತರ ಬೇರೆ ಪಾತಕಗಳಿಂದ ಶುದ್ಧಿಯನ್ನು ಹೊಂದಲು ಅಂತಹ ಮತ್ತೊಂದು ನರಕಕ್ಕೆ ಹೋಗುವನು. ಹೀಗೆ ಸಮಸ್ತ ಪಾತಕಗಳಿಂದಲೂ ಮುಕ್ತನಾಗಿ ಕರ್ಮಶೇಷದಿಂದ ಆ ಪಾಪಿಯು ಮೂಕಪ್ರಾಣಿ ಜನ್ಮವನ್ನು ಹೊಂದುವನು.

೯೨. ಕ್ರಿಮಿ, ಕೀಟ, ಪತಂಗ, ಶ್ವಾಪದ, ಮಶಕ, ಆನೆ, ವೃಕ್ಷ, ಹಸು ಮತ್ತು ಕುದುರೆ ಮುಂತಾದ ಅನೇಕ ಪ್ರಾಣಿಗಳ ಜನ್ಮಪರಂಪರೆಯನ್ನು ಕ್ರಮವಾಗಿ ಹೊಂದುವನು.

ಅನ್ಯಾಸು ಚೈವ ಪಾಪಾಸು ದುಃಖದಾಸು ಚ ಯೋನಿಷು ।
ಮಾನುಷ್ಯಂ ಪ್ರಾಪ್ಯ ಕುಬ್ಜೋ ವಾ ಕುತ್ಸಿತೋ ವಾಮನೋಽಪಿ ವಾ ॥೯೩॥

ಚಣ್ಡಾಲಪುಲ್ಕಸಾದ್ಯಾಸು ನರೋ ಯೋನಿಷು ಜಾಯತೇ ।
ಅವಶಿಷ್ಟೇನ ಪಾಪೇನ ಪುಣ್ಯೇನ ಚ ಸಮನ್ವಿತಃ ॥೯೪॥

ತತಶ್ಚಾರೋಹಣೀಂ ಜಾತಿಂ ಶೂದ್ರವೈಶ್ಯನೃಪಾದಿಕಾಮ್ ।
ವಿಪ್ರದೇವೇನ್ದ್ರತಾಂ ಚಾಪಿ ಕದಾಚಿದವರೋಹಿಣೀಮ್ ॥೯೫॥

ಏವಂ ತು ಪಾಪಕರ್ಮಾಣೋ ನರಕೇಷು ಪತನ್ತ್ಯಧಃ ।
ಯಥಾ ಪುಣ್ಯಕೃತೋ ಯಾನ್ತಿ ತನ್ಮೇ ನಿಗದತಃ ಶೃಣು ॥೯೬॥

---

೯೩. ಹೀಗೆ ಪಾಪಿಷ್ಠವೂ ಮತ್ತು ದುಃಖ ಕಾರಣವೂ ಆದ ಇನ್ನೂ ಎಷ್ಟೋ ಅನೇಕ ಪ್ರಾಣಿಗಳ ಯೋನಿಯಲ್ಲಿ ಜನ್ಮ ತಾಳಿ ಕಡೆಯಲ್ಲಿ ಮನುಷ್ಯನಾಗಿ ಜನಿಸುವಾಗಲೂ ಕುಬ್ಜನೊ; ವಾಮನನೊ; ಅಥವಾ ಏನಾದರೂ ನ್ಯೂನತೆಯಿಂದ ನಿಂದ್ಯನೊ ಆಗಿ ಜನಿಸುವನು.

೯೪. ಮತ್ತು ಭುಂಜಿಸಿ ಉಳಿದಿರುವ ಪಾಪ ಕರ್ಮ ಶೇಷದಿಂದ ಚಂಡಾಲ-ಮಾದಿಗ ಮುಂತಾದ ಹೀನಯೋನಿಗಳಲ್ಲಿ ಜನ್ಮವೆತ್ತುವನು. ಕರ್ಮ ಶೇಷವು ಪುಣ್ಯಾಂಶವಾಗಿದ್ದರೆ ಅದಕ್ಕೆ ಅನುರೂಪವಾದ ಸದ್ಗತಿಯನ್ನು ಹೊಂದುತ್ತಾನೆ.

೯೫. ಪುಣ್ಯ ಕರ್ಮ ಶೇಷದಿಂದ ಮೇಲಕ್ಕೇರುವ ಗತಿಗೆ ಭಾಗಿಯಾಗಿ ಶೂದ್ರ-ವೈಶ್ಯ-ಕ್ಷತ್ರಿಯ ಮುಂತಾದ ಉತ್ತಮ ಜನ್ಮವನ್ನು ಕ್ರಮವಾಗಿ ಹೊಂದಿ ಹಾಗೆಯೆ ವಿಪ್ರತ್ವ-ದೇವೇಂದ್ರತ್ವಗಳನ್ನೂ ಹೊಂದುವನು. ಒಂದು ವೇಳೆ ಮೇಲಕ್ಕೇರುವ, ಮತ್ತೊಂದು ವೇಳೆ ಕೆಳಗಿಳಿಯುವ ಗತಿಯುಂಟಾಗುವುದು.

೯೬. ಈ ರೀತಿಯಾಗಿ ಪಾಪಕರ್ಮಗಳನ್ನು ಮಾಡಿದ ನರರು ನರಕದಲ್ಲಿ ಬಿದ್ದು ಅಧೋಗತಿಯನ್ನು ಹೊಂದುವರು. ಪುಣ್ಯವಂತರು ಸದ್ಗತಿಯನ್ನು ಹೊಂದುವ ವಿಷಯದಲ್ಲಿ ನನ್ನ ವಚನವನ್ನು ಕೇಳು.

ತೇ ಯಮೇನ ವಿನಿರ್ದಿಷ್ಟಾಂ ಯಾನ್ತಿ ಪುಣ್ಯಾಂ ಗತಿಂ ನರಾಃ ।
ಪ್ರಗೀತಗನ್ಧರ್ವಗಣೈಃ ಪ್ರನೃತ್ತಾಪ್ಸರಸಾಂ ಗಣೈಃ ॥೯೭॥

ಹಾರನೂಪುರಮಾಧುರ್ಯಶೋಭಿತಾನ್ಯುತ್ತಮಾನಿ ಚ ।
ಪ್ರಯಾನ್ತ್ಯಾಶು ವಿಮಾನಾನಿ ನಾನಾದಿವ್ಯಸ್ರಗುಜ್ವಲಾಃ ॥೯೮॥

ತಸ್ಮಾಚ್ಚ ಪ್ರಚ್ಯುತಾ ರಾಜ್ಞಾಮನ್ಯೇಷಾಂ ಚ ಮಹಾತ್ಮನಾಮ್ ।
ಜಾಯನ್ತೇ ಚ ಕುಲೇ ತತ್ರ ಸದ್ವೃತ್ತಪರಿಪಾಲಕಾಃ ॥೯೯॥

ಭೋಗಾನ್ ಸಂಪ್ರಾಪ್ನುವನ್ತ್ಯಗ್ರ್ಯಾಂಸ್ತತೋ ಯಾನ್ತ್ಯೂರ್ಧ್ವಮನ್ಯಥಾ ।
ಅವರೋಹಣೀಂ ಚ ಸಮ್ಪ್ರಾಪ್ಯ ಪೂರ್ವವದ್ಯಾನ್ತಿ ಮಾನವಾಃ ॥೧೦೦॥

---

೯೭. ಪುಣ್ಯವಂತರು ಯಮಧರ್ಮರಾಜನು ನಿರ್ದೇಶಿಸಿದ ಸದ್ಗತಿಗೆ ಗಂಧರ್ವರ ಗಾನದಿಂದಲೂ ಅಪ್ಸರಸ್ತ್ರೀಯರ ನರ್ತನದಿಂದಲೂ ಕೂಡಿದ ವಿಮಾನಗಳನ್ನು ಏರಿ ಹೋಗುವರು.

೯೮. ಅಂತಹ ಸುಕೃತಿಗಳು ಅನೇಕವಿಧವಾದ ದಿವ್ಯಪುಷ್ಪಮಾಲೆ-ಗಳನ್ನು ಧರಿಸಿಕೊಂಡು ಹಾರ-ಗೆಜ್ಜೆ ಮುಂತಾದ ಭೂಷಣ ಸೌಂದರ್ಯದಿಂದ ಶೋಭಿಸಲ್ಪಟ್ಟ ಮತ್ತು ಉತ್ತಮವಾದ ವಿಮಾನಗಳನ್ನು ಬೇಗ ಹತ್ತುವರು.

೯೯. ಪುಣ್ಯಕರ್ಮವು ಕಳೆದಮೇಲೆ ಪುಣ್ಯಲೋಕದಿಂದ ಚ್ಯುತರಾದ ಮಾನವರು ಪುಣ್ಯಶೇಷದಿಂದ ರಾಜರ ಅಥವಾ ಮಹಾತ್ಮರ ವಂಶಗಳಲ್ಲಿ ಜನಿಸಿ ಸದಾಚಾರಪರಿಪಾಲಕರಾಗಿರುವರು.

೧೦೦. ಆ ಮಹಾತ್ಮವಂಶಗಳಲ್ಲಿ ವಿವಿಧವಾದ ಮತ್ತು ಉತ್ತಮವಾದ ಭೋಗಗಳನ್ನು ಅನುಭವಿಸಿ ಕ್ರಮವಾಗಿ ಊರ್ಧ್ವಗತಿಯನ್ನು ಸೇರುವರು. ಪುಣ್ಯಶೇಷವಿಲ್ಲದ ಪಾಪಿಗಳು ಹಿಂದೆ ಹೇಳಿರುವಂತೆ ಅವರೋಹಣಗತಿಗೆ ಸಿಕ್ಕಿ-ಹೋಗುವರು.

ಏತತ್ತೇ ಸರ್ವಮಾಖ್ಯಾತಂ ಯಥಾ ಜನ್ತುರ್ವಿಪದ್ಯತೇ ।
ಅತಃ ಶೃಣುಷ್ವ ವಿಪ್ರರ್ಷೇ ಯಥಾ ಗರ್ಭಂ ಪ್ರಪದ್ಯತೇ ॥೧೦೧॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ಮೃತ್ಯುದಶಾವರ್ಣನಂ ನಾಮ ದಶಮೋಽಧ್ಯಾಯಃ

---

೧೦೧. ಬ್ರಹ್ಮರ್ಷಿಯಾದ ಪಿತನೆ! ಜಂತುವು ಮರಣ-ಉತ್ಕ್ರಾಂತಿಗಳನ್ನು ಹೊಂದುವಬಗೆಯು ಸಂಪೂರ್ಣವಾಗಿ ಹೇಳಲ್ಪಟ್ಟಿದೆ. ಮುಂದೆ ಜಂತುವು ಗರ್ಭಾಶಯವನ್ನು ಹೊಕ್ಕು ವಾಸಮಾಡುವ ವಿಧಾನವನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಹತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕಾದಶೋಽಧ್ಯಾಯಃ

(ಗರ್ಭಸ್ಥಿತಿವರ್ಣನಮ್)

ಪುತ್ರ ಉವಾಚ :—

ನಿಷೇಕಂ ಮಾನವಸ್ತ್ರೀಣಾಂ ಬೀಜಂ ಪ್ರೋಕ್ತಂ ರಜಸ್ಯಥ ।
ವಿಮುಕ್ತಮಾತ್ರೋ ನರಕಾತ್ ಸ್ವರ್ಗಾದ್ವಾಪಿ ಪ್ರಪದ್ಯತೇ ॥೧॥

ತೇನಾಭಿಭೂತಂ ತತ್ಸ್ಥೈರ್ಯಂ ಯಾತಿ ಬೀಜದ್ವಯಂ ಪಿತಃ ।
ಕಲಲತ್ವಂ ಬುದ್ಬುದತ್ವಂ ತತಃ ಪೇಶಿತ್ವಮೇವ ಚ ॥೨॥

ಹನ್ನೊಂದನೆಯ ಅಧ್ಯಾಯ

ಪುತ್ರನು ಇಂತೆಂದನು :—

೧. ಮಾನವಸ್ತ್ರೀಯರಲ್ಲಿ ಋತುಸಮಯದಲ್ಲಿ ನಿಷೇಕಮಾಡುವ ಪುರುಷ-ವೀರ್ಯವು ಬೀಜವು. ನರಕ-ಅಥವಾ ಸ್ವರ್ಗದಿಂದ ಬಿಡುಗಡೆಹೊಂದಿದ ಕೂಡಲೆ ಜಂತುವು ಅಂತಹ ಬೀಜವನ್ನು ಸೇರುವನು.

೨. ತಂದೆಯೆ ! ಕರ್ಮಶೇಷಕ್ಕೆ ಅಧೀನವಾದ ಜಂತುವಿನ ಆವೇಶ-ವುಳ್ಳ ಸ್ತ್ರೀಪುರುಷರ ಶುಕ್ರ ಶೋಣಿತವೆಂಬ ಬೀಜಗಳು ಕಠಿನಾವಸ್ಥೆಯನ್ನು ಹೊಂದುವುವು. ಕ್ರಮವಾಗಿ ಕಲಲ-ಬುದ್ಬುದ-ಪೇಶಿ ಎಂದು ಕರೆಯಲ್ಪಡುವ ಬದಲಾವಣೆಯನ್ನು ಹೊಂದುತ್ತವೆ.

ಪೇಶ್ಯಾಸ್ತಥಾ ಯಥಾ ಬೀಜಾದಙ್ಕುರಾದಿಸಮುದ್ಭವಃ ।
ಅಙ್ಗಾನಾಂ ಚ ತಥೋತ್ಪತ್ತಿಃ ಪಞ್ಚಾನಾಮನುಭಾಗಶಃ ॥೩॥

ಉಪಾಙ್ಗಾನ್ಯಙ್ಗುಲೀನೇತ್ರನಾಸಾಸ್ಯಶ್ರವಣಾನಿ ಚ ।
ಪ್ರರೋಹಂ ಯಾನ್ತಿ ಚಾಙ್ಗೇಭ್ಯಸ್ತದ್ವತ್ತೇಭ್ಯೋ ನಖಾದಿಕಮ್॥೪॥

ತ್ವಚಿ ರೋಮಾಣಿ ಜಾಯನ್ತೇ ಕೇಶಾಶ್ಚೈವ ತತಃ ಪರಮ್ ।
ಸಮಂ ಸ ವೃದ್ಧಿಮಾಯಾತಿ ತೇನೈವೋದ್ಭವಕೋಶಕಃ ॥೫॥

ನಾರಿಕೇಳಫಲಂ ಯದ್ವತ್ಸಕೋಶಂ ವೃದ್ಧಿಮೃಚ್ಛತಿ ।
ತದ್ವತ್ಪ್ರಯಾತ್ಯಸೌ ವೃದ್ಧಿಂ ಸಕೋಶೋಽಧೋಮುಖಃ ಸ್ಥಿತಃ ॥೬॥

ತಲೇ ತು ಜಾನುಪಾರ್ಶ್ವಾಭ್ಯಾಂ ಕರೌ ನ್ಯಸ್ಯ ಸ ವರ್ಧತೇ ।
ಅಙ್ಗುಷ್ಠೌ ಚೋಪರಿನ್ಯಸ್ತೌ ಜಾನ್ವೋರಗ್ರೇ ತಥಾಙ್ಗುಲೀಃ ॥೭॥

---

೩. ಸ್ಥಾವರ ಜಾತಿಯಲ್ಲಿ ಬೀಜದಿಂದ ಅಂಕುರ ಮುಂತಾದುವು ಹುಟ್ಟುವಂತೆ ಪೇಶೀರೂಪವಾದ ಬೀಜದಿಂದ ಕ್ರಮವಾಗಿ ಕಾಲು, ಕೈ, ಹೊಟ್ಟೆ, ಎದೆ ಮತ್ತು ತಲೆ ಎಂಬ ಅವಯವಗಳು ಹುಟ್ಟುತ್ತವೆ.

೪. ಆ ಮುಖ್ಯಾಂಗಗಳಿಂದ ಬೆರಳು, ಕಣ್ಣು, ಮೂಗು, ಕಿವಿ, ಬಾಯಿ ಎಂಬ ಉಪಾಂಗಗಳು ಹುಟ್ಟುತ್ತವೆ. ಹಾಗೆಯೆ ಉಪಾಂಗಗಳಿಂದ ಉಗುರು ಮುಂತಾದುವುಗಳು ಹುಟ್ಟುವುವು.

೫. ಚರ್ಮದ ಮೇಲೆ ರೋಮಗಳು ಕಾಣಿಸುವುವು. ತರುವಾಯ ಕೂದಲು ಹುಟ್ಟುವುದು. ಹಾಗೆ ಬೆಳೆಯುವ ಜಂತುವಿನ ಜೊತೆಯಲ್ಲಿ ಗರ್ಭ-ಕೋಶವು ಬೆಳೆಯುತ್ತಿರುವುದು.

೬. ತೆಂಗಿನಕಾಯಿಯು ತನ್ನ ಆವರಣವಾದ ಚಿಪ್ಪಿನ ಸಹಿತವಾಗಿ ಬೆಳೆದು ದೊಡ್ಡದಾಗುವಂತೆ ಜಂತುವು ತನ್ನ ಆವರಣವಾದ ಕೋಶದ ಸಹಿತವಾಗಿ ವೃದ್ಧಿಹೊಂದುವುದು. ಆ ಗರ್ಭಕೋಶವು ಅಧೋಮುಖವಾಗಿ ಇರುವುದು.

೭. ಆ ಗರ್ಭವು ಕೈಗಳನ್ನು ಮೊಳಕಾಲುಗಳ ಪಕ್ಕಗಳಿಂದ ತಲದಲ್ಲಿಟ್ಟು ಅಂಗುಷ್ಠಗಳನ್ನು ಮೇಲೆ ಇಟ್ಟುಕೊಂಡು ಮತ್ತು ಮೊಳಕಾಲುಗಳ ಅಗ್ರದಲ್ಲಿ ಬೆರಳುಗಳನ್ನು ಇಟ್ಟುಕೊಂಡಿರುವುದು.

ಜಾನುಪೃಷ್ಠೇ ತಥಾ ನೇತ್ರೇ ಜಾನುಮಧ್ಯೇ ಚ ನಾಸಿಕಾ ।
ಸ್ಫಿಚೌ ಪಾರ್ಷ್ಣಿದ್ವಯಸ್ಥೇಚ ಬಾಹುಜಙ್ಘೇ ಬಹಿಃ ಸ್ಥಿತೇ ॥೮॥

ಏವಂ ವೃದ್ಧಿಂ ಕ್ರಮಾದ್ಯಾತಿ ಜನ್ತುಃ ಸ್ತ್ರೀಗರ್ಭಸಂಸ್ಥಿತಃ ।
ಅನ್ಯಸತ್ತ್ವೋದರೇ ಜನ್ತೋರ್ಯಥಾ ರೂಪಂ ತಥಾ ಸ್ಥಿತಿಃ ॥೯॥

ಕಾಠಿನ್ಯಮಗ್ನಿನಾ ಯಾತಿ ಭುಕ್ತಪೀತೇನ ಜೀವತಿ ।
ಪುಣ್ಯಾಪುಣ್ಯಾಶ್ರಯಮಯೀ ಸ್ಥಿತಿರ್ಜನ್ತೋಸ್ತಥೋದರೇ ॥೧೦॥

ನಾಡೀ ಚಾಪ್ಯಾಯನೀ ನಾಮ ನಾಭ್ಯಾಂ ತಸ್ಯ ನಿಬಧ್ಯತೇ ।
ಸ್ತ್ರೀಣಾಂ ತಥಾನ್ತ್ರಸುಷಿರೇ ಸಾ ನಿಬದ್ಧೋಪಜಾಯತೇ ॥೧೧॥

---

೮. ಹಾಗು ಮೊಳಕಾಲುಗಳ ಹಿಂಭಾಗದಲ್ಲಿ ಕಣ್ಣುಗಳನ್ನು, ಮಧ್ಯದಲ್ಲಿ ಮೂಗನ್ನು ಇಟ್ಟುಕೊಂಡಿರುವುದು. ನಿತಂಬದಮೇಲುಭಾಗದ ದಪ್ಪ ಅವಯವ-ಗಳು ಹಿಮ್ಮಡಿಗಳ ಮೇಲೂ ಬಾಹು-ಕಣಕಾಲುಗಳು ಹೊರಭಾಗದಲ್ಲಿ ವೇಷ್ಟನ ರೂಪವಾಗಿಯೂ ಇರುವುವು.

೯. ಸ್ತ್ರೀಯರ ಗರ್ಭಕೋಶದಲ್ಲಿ ವಾಸಮಾಡುವ ಜಂತುವು ಹೀಗೆ ಕ್ರಮವಾಗಿ ವೃದ್ಧಿಯಾಗುವುದು. ಬೇರೊಂದು ಜಾತಿಯ ಪ್ರಾಣಿಗರ್ಭದಲ್ಲಿದ್ದಾಗ ಆಯಾಯ ಪ್ರಾಣಿಯ ಆಕಾರಕ್ಕೆ ಅನುರೂಪವಾಗಿ ಇರುವುದು.

೧೦. ಆ ಮೂರ್ತಿಯು ಜಠರದ ಅಗ್ನಿಯಿಂದ ಕಠಿನತೆಯನ್ನು ಹೊಂದುವುದು. ಮತ್ತು ಸ್ತ್ರೀಯು ಭುಂಜಿಸಿದ ಅನ್ನ ಪಾನಗಳಿಂದ ಜೀವಿಸುವುದು. ಪುಣ್ಯ-ಪಾಪಕರ್ಮಗಳ ಆಶ್ರಯದಿಂದ ಜಂತುವು ಜಠರದಲ್ಲಿ ವಾಸಮಾಡುವುದು.

೧೧. ಆ ಜಂತುವಿನ ನಾಭಿಸ್ಥಳದಲ್ಲಿ ಆಪ್ಯಾಯನೀ ಎಂಬ ಒಂದು ನಾಡಿಯು ಕಟ್ಟಿದಂತೆ ಇರುವುದು. ಆ ನಾಡಿಯು ಸ್ತ್ರೀಯರ ಕರುಳಿನ ರಂಧ್ರದಲ್ಲಿ ಸೇರಿಕೊಂಡು ಹುಟ್ಟುತ್ತದೆ.

ಕ್ರಾಮನ್ತಿ ಭುಕ್ತಪೀತಾನಿ ಸ್ತ್ರೀಣಾಂ ಗರ್ಭೋದರೇ ಯಥಾ ।
ತೈರಾಪ್ಯಾಯಿತದೇಹೋಽಸೌ ಜನ್ತುರ್ವೃದ್ಧಿಮುಪೈತಿ ವೈ ॥೧೨॥

ಸ್ಮೃತಿಂ ತತ್ರ ಪ್ರಯಾನ್ತ್ಯಸ್ಯ ಬಹ್ವ್ಯಃ ಸಂಸಾರಭೂಮಯಃ ।
ತತೋ ನಿರ್ವೇದಮಾಯಾತಿ ಪೀಡ್ಯಮಾನ ಇತಸ್ತತಃ ॥೧೩॥

ಪುನರ್ನೈವಂ ಕರಿಷ್ಯಾಮಿ ಮುಕ್ತಮಾತ್ರ ಇಹೋದರಾತ್ ।
ತಥಾ ತಥಾ ಯತಿಷ್ಯಾಮಿ ಗರ್ಭಂ ನಾಪ್ಸ್ಯಾಮ್ಯಹಂ ಯಥಾ ॥೧೪॥

ಇತಿ ಚಿನ್ತಯತೇ ಸ್ಮೃತ್ವಾ ಜನ್ಮದುಃಖಶತಾನಿ ವೈ ।
ಯಾನಿ ಪೂರ್ವಾನುಭೂತಾನಿ ದೈವಭೂತಾನಿ ಯಾನಿ ವೈ ॥೧೫॥

ತತಃ ಕಾಲಕ್ರಮಾಜ್ಜನ್ತುಃ ಪರಿವರ್ತತ್ಯಧೋಮುಖಃ ।
ನವಮೇ ದಶಮೇ ವಾಪಿ ಮಾಸಿ ಸಞ್ಜಾಯತೇ ತತಃ ॥೧೬॥

---

೧೨. ಸ್ತ್ರೀಯರು ಸೇವಿಸಿದ ಅನ್ನಪಾನೀಯಗಳು ಆಪ್ಯಾಯನೀ ನರದ ಮೂಲಕವಾಗಿ ಗರ್ಭದ ಉದರವನ್ನು ಪ್ರವೇಶಿಸುತ್ತವೆ. ಅವುಗಳಿಂದ ದೇಹಪುಷ್ಟಿಯನ್ನು ಹೊಂದುತ್ತ ಜಂತುವು ವೃದ್ಧಿಹೊಂದುವುದು.

೧೩. ಗರ್ಭವಾಸದಲ್ಲಿದ್ದ ಜಂತುವಿಗೆ ಅನೇಕ ಸಂಸಾರ ಭೂಮಿಕೆಗಳು ಸ್ಮೃತಿಗೆ ಬರುವುವು. ಅದರಿಂದ ಅಲ್ಲಲ್ಲಿ ಪೀಡಿಸಲ್ಪಟ್ಟ ಜಂತುವಿಗೆ ವೈರಾಗ್ಯ-ಭಾವನೆಯುಂಟಾಗುವುದು.

೧೪. ಈ ಉದರದಿಂದ ಬಿಡುಗಡೆಯನ್ನು ಹೊಂದಿದ ಕ್ಷಣದಿಂದ ಮತ್ತೆ ನಾನು ಗರ್ಭವಾಸವನ್ನು ಕೊಡುವ ಕರ್ಮವನ್ನು ಮಾಡುವುದಿಲ್ಲ. ಯಾವ ಚರ್ಯೆಯಿಂದ ಗರ್ಭವಾಸವನ್ನು ತಪ್ಪಿಸಿಕೊಳ್ಳಬಹುದೊ ಹಾಗೆ ಯತ್ನಿಸುತ್ತೇನೆ.

೧೫. ಹಿಂದೆ ಅನುಭವಿಸಿದ ನೂರಾರು ದುಃಖಗಳನ್ನೂ ಪ್ರಾರಬ್ಧ-ಕರ್ಮರೂಪವಾಗಿ ನಿಂತು ಅದರಿಂದ ಮುಂದೆ ಬರುವ ಅನೇಕ ದುಃಖರಾಶಿ-ಯನ್ನೂ ಸ್ಮರಿಸಿಕೊಂಡು ಈ ರೀತಿಯಾಗಿ ಚಿಂತಿಸುವನು.

೧೬. ತರುವಾಯ ಕೆಲವು ಕಾಲದನಂತರ ಜಂತುವು ಅಧೋಮುಖನಾಗಿ ಪರಿವರ್ತನವನ್ನು ಹೊಂದುತ್ತಾನೆ. ಹಾಗೆಯೆ ಒಂಭತ್ತು ಅಥವಾ ಹತ್ತನೆಯ ಮಾಸದಲ್ಲಿ ಜನ್ಮವನ್ನು ಹೊಂದುತ್ತಾನೆ.

ನಿಷ್ಕ್ರಾಮ್ಯಮಾಣೋ ವಾತೇನ ಪ್ರಾಜಾಪತ್ಯೇನ ಪೀಡ್ಯತೇ ।
ನಿಷ್ಕ್ರಾಮ್ಯತೇ ಚ ವಿಲಪನ್ ಹೃದಿ ದುಃಖನಿಪೀಡಿತಃ ॥೧೭॥

ನಿಷ್ಕ್ರಾನ್ತಶ್ಚೋದರಾನ್ಮೂರ್ಛಾಮಸಹ್ಯಾಂ ಪ್ರತಿಪದ್ಯತೇ ।
ಪ್ರಾಪ್ನೋತಿ ಚೇತನಾಂ ಚಾಸೌ ವಾಯುಸ್ಪರ್ಶಸಮನ್ವಿತಃ ॥೧೮॥

ತತಸ್ತಂ ವೈಷ್ಣವೀ ಮಾಯಾ ಸಮಾಸ್ಕನ್ದತಿ ಮೋಹಿನೀ ।
ತಯಾ ವಿಮೋಹಿತಾತ್ಮಾಸೌ ಜ್ಞಾನಭ್ರಂಶಮವಾಪ್ನುತೇ ॥೧೯॥

ಭ್ರಷ್ಟಜ್ಞಾನೋ ಬಾಲಭಾವಂ ತತೋ ಜನ್ತುಃ ಪ್ರಪದ್ಯತೇ ।
ತತಃ ಕೌಮಾರಕಾವಸ್ಥಾಂ ಯೌವನಂ ವೃದ್ಧತಾಮಪಿ ॥೨೦॥

---

೧೭. ಜನ್ಮಸಮಯದಲ್ಲಿ ಪ್ರಜಾಪತಿದೇವತಾನಿಯಮ್ಯವಾದ ಸೂತಿಕಾ-ವಾಯುವಿನಿಂದ ಹೊರಕ್ಕೆ ತಳ್ಳಲ್ಪಡುತ್ತಲಿರುವ ಜಂತುವು ಹೃದಯದಲ್ಲಿ ದುಃಖದಿಂದ ನೊಂದುಕೊಂಡು ವಿಲಪಿಸುತ್ತಿದ್ದ ಹಾಗೆ ಹೊರಕ್ಕೆ ಹಾಕಲ್ಪಡುವನು.

೧೮. ಉದರದಿಂದ ಕೆಳಗೆ ಬಿದ್ದ ಕೂಡಲೆ ಸಹಿಸಲಾರದ ಮೂರ್ಛೆ-ಯನ್ನು ಹೊಂದುವನು. ಮತ್ತು ಹೊರಗಿನ ವಾಯು ಸ್ಪರ್ಶದಿಂದ ಸ್ವಲ್ಪ ಹೊತ್ತಿನಲ್ಲಿ ಜಂತುವು ಪ್ರಜ್ಞೆಯನ್ನು ಹೊಂದುತ್ತಾನೆ.

೧೯. ತರುವಾಯ ಮೋಹಕರವಾದ ವೈಷ್ಣವ ಮಾಯೆಯು ಆ ಶಿಶು-ವನ್ನು ಆವರಿಸುವುದು. ಮಾಯೆಯಿಂದ ಮೋಹಗೊಂಡ ಮಾನಸವುಳ್ಳ ಆ ಜೀವನು ಅದುವರೆಗೆ ಇದ್ದ ಜ್ಞಾನದಿಂದ ಭ್ರಷ್ಟನಾಗುವನು.

೨೦. ಹಾಗೆ ಜ್ಞಾನದ ಭ್ರಂಶವನ್ನು ಹೊಂದಿದ ಜಂತುವು ಬಾಲ್ಯಾ-ವಸ್ಥೆಯನ್ನು ಹೊಂದುತ್ತಾನೆ. ಅದನ್ನು ಕಳೆದು ಕ್ರಮವಾಗಿ ಕೌಮಾರ, ಯೌವನ ಮತ್ತು ಮುಪ್ಪು ಈ ಅವಸ್ಥೆಗಳನ್ನು ತಾಳಿ ಸುಖ-ದುಃಖಗಳನ್ನು ಅನು-ಭವಿಸುತ್ತಾನೆ.

ಪುನಶ್ಚ ಮರಣಂ ತದ್ವಜ್ಜನ್ಮ ಚಾಪ್ನೋತಿ ಮಾನವಃ ।
ತತಃ ಸಂಸಾರಚಕ್ರೇಽಸ್ಮಿನ್ ಭ್ರಾಮ್ಯತೇ ಘಟಿಯನ್ತ್ರವತ್ ॥೨೧॥

ಕದಾಚಿತ್ ಸ್ವರ್ಗಮಾಪ್ನೋತಿ ಕದಾಚಿನ್ನಿರಯಂ ನರಃ ।
ನಿರಯಂ ಚೈವ ಸ್ವರ್ಗಂ ಚ ಕದಾಚಿಚ್ಚ ಮೃತೋಽಶ್ನುತೇ ॥೨೨॥

ಕದಾಚಿದತ್ರೈವ ಪುನರ್ಜಾತಃ ಸ್ವಂ ಕರ್ಮ ಸೋಽಶ್ನುತೇ ।
ಕದಾಚಿದ್ಭುಕ್ತಕರ್ಮಾ ಚ ಮೃತಃ ಸ್ವಲ್ಪೇನ ಗಚ್ಛತಿ ॥೨೩॥

ಕದಾಚಿದಲ್ಪೈಶ್ಚ ತತೋ ಜಾಯತೇಽತ್ರ ಶುಭಾಶುಭೈಃ
ಸ್ವರ್ಲೋಕೇ ನರಕೇ ವಾಪಿ ಭುಕ್ತಪ್ರಾಯೋ ದ್ವಿಜೋತ್ತಮ ॥೨೪॥

ನರಕೇಷು ಮಹದ್ದುಃಖಮೇತದ್ಯತ್ಸ್ವರ್ಗವಾಸಿನಃ ।
ದೃಶ್ಯನ್ತೇ ತಾತ ಮೋದನ್ತೇ ಪಾತ್ಯಮಾನಾಶ್ಚ ನಾರಕಾಃ ॥೨೫॥

---

೨೧. ಮತ್ತು ಆ ಮಾನವನು ಮತ್ತೆ ಮರಣವನ್ನೂ ಮರಣಾನಂತರ ಮತ್ತೆ ಜನ್ಮವನ್ನೂ ಹೊಂದುತ್ತಾನೆ. ಹೀಗೆ ಈ ಸಂಸಾರ ಚಕ್ರದಲ್ಲಿ ಘಟೀ-ಯಂತ್ರದಂತೆ ಭ್ರಮಿಸುತ್ತಿರುವನು.

೨೨. ಮರಣವನ್ನು ಹೊಂದಿರುವ ಮಾನವನು ತನ್ನ ಕರ್ಮದ ಬಲ-ದಿಂದ ಒಂದುವೇಳೆ ಸ್ವರ್ಗವನ್ನು ಹೊಂದುವನು, ಮತ್ತೊಂದು ವೇಳೆ ನರಕವನ್ನು ಹೊಂದುವನು, ಸ್ವರ್ಗ-ನರಕಗಳೆರಡನ್ನೂ ಒಂದೊಂದು ವೇಳೆಯಲ್ಲಿ ಹೊಂದು-ವುದುಂಟು.

೨೩. ಒಂದೊಂದು ಸಲ ಇಹಲೋಕದಲ್ಲಿಯೆ ಪುನರ್ಜನ್ಮವನ್ನು ಹೊಂದಿ ತನ್ನ ಪ್ರಾರಬ್ಧ ಕರ್ಮಫಲವನ್ನು ಅನುಭವಿಸುವನು. ಕೆಲವು ವೇಳೆ-ಯಲ್ಲಿ ಸ್ವಲ್ಪಕಾಲವಲ್ಲಿಯೇ ಕರ್ಮಫಲವನ್ನು ಭುಂಜಿಸಿ ಮೃತನಾಗಿ ಹೋಗುವನು.

೨೪. ದ್ವಿಜಶ್ರೇಷ್ಠನೆ! ಒಂದೊಂದು ಸಲ ಸ್ವರ್ಗದಲ್ಲಿ ಅಥವ ನರಕ-ದಲ್ಲಿ ಕರ್ಮಫಲವನ್ನು ಭುಂಜಿಸಿ ಅತ್ಯಲ್ಪವಾದ ಶುಭ ಅಥವಾ ಅಶುಭ ಕರ್ಮ-ಶೇಷದಿಂದ ಇಹಲೋಕದಲ್ಲಿ ಜನಿಸುವನು.

೨೫. ಸ್ವರ್ಗವಾಸವನ್ನು ಅನುಭವಿಸುತ್ತಿರುವವನಿಗೆ ಇದೊಂದು ಮಹಾ-ದುಃಖಪ್ರಾಯವಾದುದು. ಪಾಪಿಗಳು ನರಕದಲ್ಲಿ ಕೆಡವಲ್ಪಟ್ಟರೂ ಜೀವಂತ-ರಾಗಿರುವರು. ಇವನ್ನು ಕಾಣುವುದು ಬಲುಕಷ್ಟ.

ಸ್ವರ್ಗೇಽಪಿ ದುಃಖಮತುಲಂ ಯದಾರೋಹಣಕಾಲತಃ ।
ಪ್ರಭೃತ್ಯಹಂ ಪತಿಷ್ಯಾಮೀತ್ಯೇತನ್ಮನ್ಮನಸಿ ವರ್ತತೇ ॥೨೬॥

ನರಕಾಂಶ್ಚೈವ ಸಮ್ಪ್ರೇಕ್ಷ್ಯ ಮಹದ್ದುಃಖಮವಾಪ್ಯತೇ ।
ಏತಾಂ ಗತಿಮಹಂ ಗನ್ತೇತ್ಯಹರ್ನಿಶಮನಿರ್ವೃತಃ ॥೨೭॥

ಗರ್ಭವಾಸೇ ಮಹದ್ದುಃಖಂ ಜಾಯಮಾನಸ್ಯ ಯೋನಿತಃ ।
ಜಾತಸ್ಯ ಬಾಲಭಾವೇ ಚ ವೃದ್ಧತ್ವೇ ದುಃಖಮೇವ ಚ ॥೨೮॥

ಕಾಮೇರ್ಷ್ಯಾಕ್ರೋಧಸಮ್ಬನ್ಧಂ ಯೌವನಂ ಚಾತಿದುಃಸಹಮ್ ।
ದುಃಖಪ್ರಾಯಾ ವೃದ್ಧತಾ ಚ ಮರಣೇ ದುಃಖಮುತ್ತಮಮ್ ॥೨೯॥

---

೨೬. ಸ್ವರ್ಗದಲ್ಲಿ ಕೂಡ ಆ ಸುಖಭೋಗದ ಪ್ರಾರಂಭದಿಂದ " ಪುಣ್ಯ-ಕ್ಷಯವಾದ ಕೂಡಲೆ ಇಲ್ಲಿಂದ ಅಧೋಗತಿಗೆ ಬೀಳುವೆನು " ಎಂಬ ಚಿಂತೆಯು ಮನಸ್ಸಿನಲ್ಲಿ ಇರುವುದರಿಂದ ಅದೊಂದು ಮಹತ್ತರ ದುಃಖವೇ ಸರಿ.

೨೭. ನರಕ ಲೋಕಗಳನ್ನು ನೋಡಿದ ಮಾತ್ರದಿಂದಲೆ ಹೆಚ್ಚಾದ ದುಃಖವು ಉಂಟಾಗುವುದು. ಇಂತಹ ನರಕ ಲೋಕವನ್ನು ನಾನು ಹೊಂದು-ವೆನೆ ! ಎಂದು ಹಗಲು-ರಾತ್ರಿವೇಳೆಗಳಲ್ಲಿ ಎಲ್ಲ ದುಃಖಗ್ರಸ್ತನಾಗುವನು.

೨೮. ಗರ್ಭದಲ್ಲಿ ವಾಸಮಾಡುವಾಗ ಅತಿದುಃಖವು, ಯೋನಿದ್ವಾರ-ದಿಂದ ಭೂಮಿಗೆ ಬೀಳಲು ಬಲು ದುಃಖವು ಮತ್ತು ಜನ್ಮವೆತ್ತಿದ ಮೇಲೆ ಬಾಲ್ಯ-ವಾರ್ಧಕ್ಯಗಳಲ್ಲಿಯೂ ದುಃಖಪರಂಪರೆ—ಹೀಗಾಗಿ ಜಂತುವಿಗೆ ಈ ಸಂಸಾರವು ದುಃಖಮಯವು-

೨೯. ಕಾಮ-ಕ್ರೋಧ-ಈರ್ಷ್ಯೆ ಮುಂತಾದ ದುರ್ಭಾವನೆಗಳಿಂದ ತುಂಬಿದ ತಾರುಣ್ಯವೂ ದುಃಖಮಯವು. ಮುಂದೆ ಬರುವ ವೃದ್ಧತ್ವದಲ್ಲಿಯೂ ದುಃಖಗಳೇ ಹೆಚ್ಚು. ಮರಣಸಮಯದಲ್ಲಿ ಆಗುವ ದುಃಖವು ವರ್ಣನಾತೀತ-ವಾದುದು.

ಕೃಷ್ಯಮಾಣಶ್ಚ ಯಾಮ್ಯೈಶ್ಚ ನರಕೇಷು ಚ ಪಾತ್ಯತಃ ।
ಪುನಶ್ಚ ಗರ್ಭೋ ಜನ್ಮಾಥ ಮರಣಂ ನರಕಸ್ತಥಾ ॥೩೦॥

ಏವಂ ಸಂಸಾರಚಕ್ರೇಽಸ್ಮಿಂಜ್ಜನ್ತವೋ ಘಟಿಯನ್ತ್ರವತ್ ।
ಭ್ರಾಮ್ಯನ್ತೇ ಪ್ರಾಕೃತೈರ್ಬನ್ಧೈರ್ಬದ್ಧ್ವಾ ವಧ್ಯನ್ತಿ ಚಾಸಕೃತ್ ॥೩೧॥

ನಾಸ್ತಿ ತಾತ ಸುಖಂ ಕಿಞ್ಚಿದತ್ರ ದುಃಖಶತಾಕುಲೇ ।
ತಸ್ಮಾನ್ಮೋಕ್ಷಾಯ ಯತತಾ ಕಥಂ ಸೇವ್ಯಾ ಮಯಾ ತ್ರಯೀ॥೩೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಗರ್ಭಸ್ಥಿತಿವರ್ಣನಂ ನಾಮ ಏಕಾದಶೋಽಧ್ಯಾಯಃ

---

೩೦. ಯಮದೂತರು ಸೆಳೆಯುತ್ತಿರುವಾಗಲೂ ನರಕದಲ್ಲಿ ತಳ್ಳುತ್ತಿರುವಾಗಲೂ ಜಂತುವು ದುಃಖವನ್ನು ಅನುಭವಿಸಬೇಕು. ಹೀಗೆ ಮತ್ತೆ ಗರ್ಭ, ಪುನರ್ಜನ್ಮ, ಇನ್ನೊಮ್ಮೆ ಮರಣ, ಮತ್ತೊಮ್ಮೆ ನರಕ–ಹೀಗೆ ದುಃಖಾವಸ್ಥೆಗಳು ಬರುತ್ತಿರುವುವು.

೩೧. ಹೀಗೆ ಜಂತುಗಳು ಪ್ರಾರಬ್ಧಕರ್ಮಬಂಧಕ್ಕೆ ಸಿಲುಕಿ ಸುತ್ತುತ್ತ ಮತ್ತೆ ಮತ್ತೆ ವಧಿಸಲ್ಪಡುತ್ತವೆ. ಆದ್ದರಿಂದ ಘಟೀಯಂತ್ರದಂತೆ ಸಂಸಾರಚಕ್ರದಲ್ಲಿ ಜಂತುಗಳು ಸುತ್ತುವುದಕ್ಕೆ ಅಂತವೇ ಇಲ್ಲ.

೩೨. ತಂದೆ! ಅನೇಕ ದುಃಖಪರಂಪರೆಗಳಿಂದ ತುಂಬಿಹೋದ ಈ ಸಂಸಾರಚಕ್ರದಲ್ಲಿ ದುಃಖವು ಸ್ವಲ್ಪವೂ ಇಲ್ಲ. ಆದ್ದರಿಂದ ಮೋಕ್ಷಕ್ಕೆ ಯತ್ನಿಸುತ್ತಿದ್ದ ನಾನು ವೈದಿಕಕರ್ಮದ ಬಲೆಗೆ ಹೇಗೆ ಬೀಳಲಿ?

ಮಾರ್ಕಂಡೇಯ ಮಹಾಪುರಾಣದಲ್ಲಿ ಹನ್ನೊಂದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಾದಶೋಽಧ್ಯಾಯಃ

(ಮಹಾರೌರವಾದಿನರಕಾಖ್ಯಾನಮ್)

ಪಿತೋವಾಚ :—

ಸಾಧು ವತ್ಸ ತ್ವಯಾ ಖ್ಯಾತಂ ಸಂಸಾರಗಹನಂ ಪರಮ್ ।
ಜ್ಞಾನಪ್ರದಾನಸಂಭೂತಂ ಸಮಾಶ್ರಿತ್ಯ ಮಹಾಫಲಮ್ ॥೧॥

ತತ್ರ ತೇ ನರಕಾಃ ಸರ್ವೇ ಯಥಾ ವೈ ರೌರವಸ್ತಥಾ ।
ವರ್ಣಿತಾಸ್ತಾನ್ ಸಮಾಚಕ್ಷ್ವ ವಿಸ್ತರೇಣ ಮಹಾಮತೇ ॥೨॥

ಹನ್ನೆರಡನೆಯ ಅಧ್ಯಾಯ

ತಂದೆಯು ಹೇಳಿದನು :—

೧. ಪುತ್ರನೇ! ಶಿಷ್ಯರಲ್ಲಿ ಜ್ಞಾನದಾನವನ್ನು ಮಾಡಿ ಆರ್ಜಿಸಿದ ಮಹಾಫಲವಾದ ಜನ್ಮಾಂತರ ಸ್ಮರಣಶಕ್ತಿಯನ್ನು ಅವಲಂಬಿಸಿ ಅತಿಶಯವಾದ ಸಂಸಾರಚಕ್ರಕ್ಕೆ ಸೇರಿದ ಗಹನ ವಿಷಯಗಳನ್ನು ಸ್ಪಷ್ಟವಾಗಿ ಹೇಳಿದ್ದೀಯೆ.

೨. ಅಲ್ಲಿ ರೌರವನರಕದಂತೆ ಇನ್ನೂ ಅನೇಕ ನರಕಗಳು ನಿನ್ನಿಂದ ವರ್ಣಿಸಲ್ಪಟ್ಟವೆ. ಮಹಾಮತಿಯಾದ ಪುತ್ರನೆ! ಆ ಎಲ್ಲ ನರಕಗಳನ್ನೂ ವಿಸ್ತಾರವಾಗಿ ಬೋಧಿಸು.

ಪುತ್ರ ಉವಾಚ :—

ರೌರವಸ್ತೇ ಸಮಾಖ್ಯಾತಃ ಪ್ರಥಮಂ ನರಕೋ ಮಯಾ।
ಮಹಾರೌರವಸಂಜ್ಞಂ ತು ಶೃಣುಷ್ವ ನರಕಂ ಪಿತಃ ॥೩॥

ಅಗಮ್ಯಾಗಮನೇ ಯೇ ಚ ಅಭಕ್ಷ್ಯಭಕ್ಷಣೇ ರತಾಃ।
ಮಿತ್ರದ್ರೋಹಕರಾಶ್ಚೈವ ಸ್ವಾಮಿವಿಸ್ರಮ್ಭಘಾತಕಾಃ ॥೪॥

ಪರದಾರರತಾಶ್ಚೈವ ಸ್ವದಾರಪರಿವರ್ಜಿನಃ।
ಮಾರ್ಗಭಙ್ಗಕರಾ ಯೇ ಚ ತಡಾಗಾರಾಮಭೇದಕಾಃ ॥೫॥

ಏತೇಽನ್ಯೇ ಚ ದುರಾಚಾರಾ ದಹ್ಯನ್ತೇ ತತ್ರ ಕಿಙ್ಕರೈಃ।
ಯೋಜನಾನಾಂ ಸಹಸ್ರಾಣಿ ಸಪ್ತ ಪಞ್ಚ ಸಮನ್ತತಃ ॥೬॥

ಪುತ್ರನು ಇಂತೆಂದನು :—

೩. ಪಿತನೆ! ಮೊದಲು ನನ್ನಿಂದ ರೌರವವೆಂಬ ನರಕವು ನಿನಗೆ ಹೇಳಲ್ಪಟ್ಟಿರುವುದು ಸರಿಯಷ್ಟೆ. ಈಗ ಮಹಾರೌರವವೆಂಬ ಹೆಸರಿನ ನರಕವನ್ನು ಹೇಳುವೆನು ಕೇಳು.

೪. ಯಾವ ಮಾನವರು ಅಗಮ್ಯರಾದ ಸ್ತ್ರೀಯರ ಸಂಗವನ್ನೂ, ನಿಷಿದ್ಧವಾದ ಅಭಕ್ಷ್ಯವಸ್ತುಗಳ ಭಕ್ಷಣವನ್ನೂ, ಮಿತ್ರದ್ರೋಹವನ್ನೂ ಮತ್ತು ಸ್ವಾಮಿಯಲ್ಲಿ ವಿಶ್ವಾಸಭಂಗವನ್ನೂ ಮಾಡುವರೊ; ಅವರು ಈ ನರಕವಾಸವನ್ನು ಅನುಭವಿಸುವರು.

೫. ಹಾಗು ಪರಸ್ತ್ರೀಸಂಗದಲ್ಲಿ ವ್ಯಾಸಂಗಿಗಳೂ, ನಿಷ್ಕಾರಣವಾಗಿ ಸ್ವಪತ್ನಿಯರನ್ನು ಬಿಟ್ಟವರೂ, ಮಾರ್ಗಗಳನ್ನು ಭಂಗಪಡಿಸಿದವರೂ ಮತ್ತು ತಟಾಕ-ಉದ್ಯಾನವನಗಳನ್ನು ಭೇದಿಸಿದವರೂ ಮಹಾರೌರವನರಕದಲ್ಲಿ ಬೀಳು-ವರು.

೬. ಇಂತಹ ಪಾತಕಿಗಳೂ ಮತ್ತು ಇತರ ದುರಾಚಾರಿಗಳೂ ಮಹಾ-ರೌರವ ನರಕದಲ್ಲಿ ಯಮಕಿಂಕರರಿಂದ ದಹಿಸಲ್ಪಡುವರು. ಆ ನರಕವು ಹನ್ನೆರಡು ಸಹಸ್ರ ಯೋಜನಗಳಷ್ಟು ಸುತ್ತಳತೆಯನ್ನು ಹೊಂದಿರುವುದು.

ತತ್ರ ತಾಮ್ರಮಯೀ ಭೂಮಿರಧಸ್ತಸ್ಯಾ ಹುತಾಶನಃ ॥೭॥
ತೇನ ಸಂತಪ್ತಾ ಸಾ ಸರ್ವಾ ಪ್ರೋದ್ಯದ್ವಿದ್ಯುತ್ಸಮಪ್ರಭಾ ।

ವಿಭಾತ್ಯತಿಮಹಾರೌದ್ರಾ ದರ್ಶನಸ್ಪರ್ಶನಾದಿಷು ॥೮॥
ತಸ್ಯಾಂ ಬದ್ಧಃ ಕರಾಭ್ಯಾಂ ಚ ಪದ್ಭ್ಯಾಂ ಚೈವ ಯಮಾನುಗೈಃ ।

ಮುಚ್ಯತೇ ಪಾಪಕೃನ್ಮಧ್ಯೇ ಲುಣ್ಠ್ಯಮಾನಃ ಸ ಗಚ್ಛತಿ ॥೯॥

ಕಾಕೈರ್ಬಕೈರ್ವೃಕೋಲೂಕೈರ್ವೃಶ್ಚಿಕೈರ್ಮಶಕೈಸ್ತಥಾ ।
ಭಕ್ಷ್ಯಮಾಣಸ್ತಥಾ ಗೃಧ್ರೈರ್ದ್ರುತಂ ಮಾರ್ಗೇ ವಿಕೃಷ್ಯತೇ ॥೧೦॥

ದಹ್ಯಮಾನಃ ಪಿತರ್ಮಾತರ್ಭ್ರಾತಸ್ತಾತೇತಿ ಚಾಕುಲಃ ।
ವದತ್ಯಸಕೃದುದ್ವಿಗ್ನೋ ನ ಶಾನ್ತಿಮಧಿಗಚ್ಛತಿ ॥೧೧॥

---

೭. ಅಷ್ಟು ವಿಶಾಲವಾದ ಮಹಾರೌರವ ನರಕದಲ್ಲಿ ತಾಮ್ರಮಯವಾದ ಭೂಮಿಯು ಅಡಿಯಲ್ಲಿ ಇರುವುದು. ಆ ಭೂಮಿಯ ಕೆಳಗೆ ಅಗ್ನಿಯು ಜ್ವಲಿಸುತ್ತಿರುವುದು.

೮. ಆ ಅಗ್ನಿಯ ತಾಪದಿಂದ ಹೆಚ್ಚಾಗಿ ತಪಿಸಿ, ಹೊಳೆಯುವ ಮಿಂಚಿಗೆ ಸಮಾನವಾದ ಪ್ರಭೆಯನ್ನು ಹೊಂದಿರುವ, ಆ ಎಲ್ಲ ಭೂಮಿಯು ದರ್ಶನಸ್ಪರ್ಶನಗಳಿಗೆ ಬಹಳ ಭಯಂಕರವಾಗಿ ಕಾಣುವುದು.

೯. ಅಂತಹ ಭೂಮಿಯಲ್ಲಿ ಕೈ-ಕಾಲುಗಳನ್ನು ದೃಢವಾಗಿ ಕಟ್ಟಿ ಪಾಪಿಯು ಯಮಕಿಂಕರರಿಂದ ಎಸೆಯಲ್ಪಡುವನು. ಅವನು ಆ ಭೂಮಿಯಲ್ಲಿ ಹೊರಳಿಕೊಂಡು ಮುಂದೆ ಹೋಗುವನು.

೧೦. ಹಾಗೆ ಹೋಗುತ್ತ ಕಾಗೆ, ಬಕ, ಗಿಡಗ, ತೋಳ, ಗೂಬೆ, ಚೇಳು, ಸೊಳ್ಳೆ, ಹದ್ದು ಈ ಕ್ರೂರಜಂತುಗಳಿಂದ ಕಡಿಯಲ್ಪಟ್ಟು ದಾರಿಯಲ್ಲಿ ಬೇಗ ಸೆಳೆಯಲ್ಪಡುವನು.

೧೧. ಆ ನೆಲದಲ್ಲಿ ಸುಡಲ್ಪಡುತ್ತಿದ್ದ ಪಾಪಿಯು ಬಾರಿಬಾರಿಗೂ ತಂದೆ! ತಾಯಿ! ಅಣ್ಣ! ತಾತ! ಎಂದು ಕೂಗಿಕೊಳ್ಳುತ್ತ ಬಹಳ ವ್ಯಾಕುಲನೂ, ಭಯಪೀಡಿತನೂ ಆಗಿ ಸ್ವಲ್ಪವೂ ಶಾಂತಿಯಿಲ್ಲದವನಾಗುವನು.

ಏವಂ ತಸ್ಮಾನ್ನರೈರ್ನೋರ್ಽಕ್ಷೋ ಹ್ಯತಿಕ್ರಾನ್ತೈರವಾಪ್ಯತೇ ।
ವರ್ಷಾಯುತಾಯುತೈಃ ಪಾಪಂ ಯೈಃ ಕೃತಂ ದುಷ್ಟಬುದ್ಧಿಭಿಃ॥೧೨॥

ತಥಾನ್ಯಸ್ತು ತಮೋ ನಾಮ ಸೋಽತಿಶೀತಃ ಸ್ವಭಾವತಃ ।
ಮಹಾರೌರವವದ್ದೀರ್ಘಸ್ತಥಾತಿತಮಸಾ ವೃತಃ ॥೧೩॥

ಗೋವಧಶ್ಚ ಕೃತೋ ಯೇನ ಭ್ರಾತ್ರ್ಯಾಣಾಂ ಘಾತ ಏವ ಚ ।
ಅಬನ್ನಬಾಲಘಾತೀ ಚ ನೀಯತೇ ಶೀತಸಙ್ಕರೇ ॥೧೪॥

ಶೀತಾರ್ತಾಸ್ತತ್ರ ಧಾವನ್ತಿ ನರಾಸ್ತಮಸಿ ದಾರುಣೇ ।
ಪರಸ್ಪರಂ ಸಮಾಸಾದ್ಯ ಪರಿರಭ್ಯಾಶ್ರಯನ್ತಿ ಚ ॥೧೫॥

---

೧೨. ದುಷ್ಟವಾದ ಬುದ್ಧಿಯುಳ್ಳವರಾಗಿ ಪಾಪಕರ್ಮವನ್ನು ಮಾಡಿದ ಮಾನವರು ಆ ನರಕದಲ್ಲಿ ಲಕ್ಷೋಪಲಕ್ಷ ವರ್ಷಗಳನ್ನು ಕಳೆದು ಅಷ್ಟು ಯಾತನೆಯನ್ನು ಭುಂಜಿಸಿದ ಬಳಿಕ ಆ ನರಕದಿಂದ ಬಿಡುಗಡೆಯನ್ನು ಹೊಂದುವರು.

೧೩. ಹಾಗೆ ಸ್ವಭಾವವಾಗಿ ಬಹಳ ತಣ್ಣಗಿರುವ ತಮ ಎಂಬ ಹೆಸರಿನ ಮತ್ತೊಂದು ನರಕವಿರುವುದು. ಆ ನರಕವು ಮಹಾರೌರವ ನರಕದಷ್ಟು ದೀರ್ಘವೂ ಹೆಚ್ಚಾದ ಕತ್ತಲಿನಿಂದ ಆವರಿಸಲ್ಪಟ್ಟಿರುವುದೂ ಆಗಿದೆ.

೧೪. ಗೋಹತ್ಯೆ ಮಾಡಿದವನೂ, ಭ್ರಾತೃಗಳಿಗೆ ಘಾಸಿಯನ್ನು ಮಾಡಿದವನೂ, ಜಲ-ಅನ್ನ-ಬಾಲಕ ಘಾತಿಯೂ ಆದ ಪಾಪಿಯು ಶೀತಮಯವಾದ ತಮನರಕಕ್ಕೆ ಒಯ್ಯಲ್ಪಡುವನು.

೧೫. ಶೀತಪೀಡೆಯನ್ನು ಸಹಿಸಲಾರದ ಪಾಪಿಗಳು ಆ ನರಕದಲ್ಲಿ ಭಯಂಕರವಾದ ಅಂಧಕಾರದಲ್ಲಿ ಓಡಾಡುವರು. ಮತ್ತು ಒಬ್ಬರನ್ನೊಬ್ಬರು ಬಲವಾಗಿ ತಬ್ಬಿಕೊಂಡು ಯಾತನೆಯನ್ನು ಅನುಭವಿಸುತ್ತಾರೆ.

ದನ್ತಾಸ್ತೇಷಾಂ ಚ ಭಜ್ಯನ್ತೇ ಶೀತಾರ್ತಿಪರಿಕಮ್ಪಿತಾಃ ।
ಕ್ಷುತ್ತೃಷ್ಣಾಪ್ರಬಲಾಸ್ತತ್ರ ತಥೈವಾನ್ಯೇಽಪ್ಯುಪದ್ರವಾಃ ॥೧೬॥

ಹಿಮಖಣ್ಡವಹೋ ವಾಯುರ್ಭಿನತ್ತ್ಯಸ್ಥೀನಿ ದಾರುಣಃ ।
ಮಜ್ಜಾಸೃಗ್ಗಲಿತಂ ತಸ್ಮಾದಶ್ನುವನ್ತಿ ಕ್ಷುಧಾನ್ವಿತಾಃ ॥೧೭॥

ಲೇಲಿಹ್ಯಮಾನಾ ಭ್ರಾಮ್ಯನ್ತೇ ಪರಸ್ಪರಸಮಾಗಮೇ ॥೧೮॥

ಏವಂ ತತ್ರಾಪಿ ಸುಮಹಾನ್ ಕ್ಲೇಶಸ್ತಮಸಿ ಮಾನವೈಃ ।
ಪ್ರಾಪ್ಯತೇ ಬ್ರಾಹ್ಮಣಶ್ರೇಷ್ಠ ಯಾವದ್ದುಷ್ಕೃತಸಂಕ್ಷಯಃ ॥೧೯॥

ನಿಕೃನ್ತನ ಇತಿ ಖ್ಯಾತಸ್ತತೋಽನ್ಯೋ ನರಕೋತ್ತಮಃ ।
ತಸ್ಮಿನ್ ಕುಲಾಲಚಕ್ರಾಣಿ ಭ್ರಾಮ್ಯನ್ತ್ಯವಿರತಂ ಪಿತಃ ॥೨೦॥

---

೧೬. ಅಲ್ಲಿ ಶೀತದ ಬಾಧೆಯಿಂದ ನಡುಗಿ ಅವರ ಎಲ್ಲ ಹಲ್ಲುಗಳು ಭಂಗಹೊಂದುವುವು. ಹಸಿವು-ನೀರಡಿಕೆಗಳ ಪೀಡೆಯು ಪ್ರಬಲವಾಗಿರುವುದು. ಮತ್ತು ಹಾಗೆ ಅನೇಕ ಉಪದ್ರವಗಳು ಪಾಪಿಗಳನ್ನು ಪೀಡಿಸುತ್ತವೆ.

೧೭. ಮಂಜಿನ ಗಡ್ಡೆಗಳಿಂದ ಕೂಡಿ ಬೀಸುವ ಭಯಂಕರವಾದ ಗಾಳಿಯು ಎಲುಬು-ಮೂಳೆಗಳನ್ನು ಭೇದಿಸುವುದು. ಅದರಿಂದ ಪ್ರವಹಿಸುವ ಮಜ್ಜಾ-ರಕ್ತಗಳನ್ನು ಹಸಿವನ್ನು ತಡೆಯಲಾರದ ಪಾಪಿಗಳು ಭುಂಜಿಸುವರು.

೧೮. ಆ ತಮ ನರಕದಲ್ಲಿ ಅನೇಕ ಉಪದ್ರವಗಳಿಂದ ಕಂಗೆಟ್ಟು ಒಬ್ಬರನ್ನೊಬ್ಬರು ಸಂಧಿಸಿದಾಗ ನೆಕ್ಕಿ ನೋಡುತ್ತ ಭ್ರಮಿಸುವರು. ಹಸಿವು-ನೀರಡಿಕೆಗಳ ದಾಹವು ಅತಿಯಾಗಿ ಇರುವುದು.

೧೯. ಬ್ರಾಹ್ಮಣೋತ್ತಮನೆ! ಹೀಗೆ ಆ ತಮ ನರಕದಲ್ಲಿ ಪಾಪಿಮಾನವರಿಂದ ತಾವು ಮಾಡಿದ ದುಷ್ಕೃತವು ಕ್ಷಯಿಸುವವರೆಗೂ ಮಹತ್ತಾದ ಕ್ಲೇಶವು ಅನುಭವಿಸಲ್ಪಡುವುದು.

೨೦. ಜನಕನೆ! ಅಲ್ಲಿಂದ ಮುಂದೆ ನಿಕೃಂತನ ಎಂದು ಪ್ರಸಿದ್ಧವಾದ ದೊಡ್ಡನರಕವು ಮತ್ತೊಂದು ಇದೆ. ಆ ನರಕದಲ್ಲಿ ಕುಂಬಾರಚಕ್ರದಂತಿರುವ ಅನೇಕ ಚಕ್ರಗಳು ಬಿಡುವಿಲ್ಲದಹಾಗೆ ಸುತ್ತುತ್ತಿರುವುವು.

ಅದೃಷ್ಟಂ ದೃಷ್ಟವದ್ಬ್ರೂಯಾದಶ್ರುತಂ ಶ್ರುತಮೇವ ಚ ।
ಏಕಾಕ್ಷರಂ ಗುರುಂ ಯಸ್ತು ದುರಾಚಾರೋ ನ ಮನ್ಯತೇ ॥೨೧॥

ನ ಶೃಣೋತಿ ಗುರೋರ್ವಾಕ್ಯಂ ಶಾಸ್ತ್ರವಾಕ್ಯಂ ತಥೈವ ಚ ।
ಏತೇ ಪಾಪಾ ದುರಾಚಾರಾಸ್ತತ್ರ ತೈರ್ಯಮಪೂರುಷೈಃ ॥೨೨॥

ತೇಷ್ವಾರೋಪ್ಯ ನಿಕೃತ್ಯನ್ತೇ ಕಾಲಸೂತ್ರೇಣ ಮಾನವಾಃ ।
ಯಮಾನುಗಾಙ್ಗುಲಿಸ್ಥೇನ ಆಪಾದತಲಮಸ್ತಕಮ್ ॥೨೩॥

ನ ಚೈಷಾಂ ಜೀವಿತಭ್ರಂಶೋ ಜಾಯತೇ ದ್ವಿಜಸತ್ತಮ ।
ಛಿನ್ನಾನಿ ತೇಷಾಂ ಶತಶಃ ಖಣ್ಡಾನ್ಯೈಕ್ಯಂ ವ್ರಜನ್ತಿ ಚ ॥೨೪॥

---

೨೧. ಕಣ್ಣಿಂದ ಕಾಣದ ವಿಷಯವನ್ನು ಕಂಡಂತೆಯೂ, ಕಿವಿಯಿಂದ ಕೇಳದಿರುವ ವಿಷಯವನ್ನು ಕೇಳಿದಂತೆಯೂ ಹೇಳುವ ಪಾಪಿಯೂ ಏಕಾಕ್ಷರ ದಾತನಾದ ಗುರುವನ್ನು ಗುರುಭಾವನೆಯಿಂದ ಕಾಣದ ಪಾಪಿಯೂ ನಿಕೃಂತನ ನರಕದ ಯಾತನೆಗೆ ಭಾಗಿಯಾಗುವನು.

೨೨. ಗುರುವಾಕ್ಯವನ್ನು ಗೌರವಿಸದೆಯೂ ಶಾಸ್ತ್ರವಚನದಲ್ಲಿ ಶ್ರದ್ಧೆ-ಯಿಲ್ಲದೆಯೂ ಇರುವ ಪಾಪವರ್ತನೆಯುಳ್ಳ ನರರನ್ನು ಯಮದೂತರು ಈ ನರಕ ಯಾತನೆಗೆ ಗುರಿಮಾಡುತ್ತಾರೆ.

೨೩. ಯಮ ಭಟರು ಅಂತಹ ಪಾಪಿಗಳನ್ನು ಚಕ್ರಗಳಲ್ಲಿ ಏರಿಸಿ ತಮ್ಮ ಕೈಬೆರಳುಗಳಲ್ಲಿ ಹಿಡಿದ ಕಾಲಸೂತ್ರದಿಂದ ತಿರುಗಿಸುತ್ತ ಕಾಲಿನಿಂದ ಹಿಡಿದು ತಲೆಯವರೆಗೂ ತುಂಡುಮಾಡುವರು.

೨೪. ದ್ವಿಜೋತ್ತಮನೆ! ಆ ಸಮಯದಲ್ಲಿ ಪಾಪಿಗಳ ಪ್ರಾಣಕ್ಕೆ ಅಪಾಯವೇನೂ ಆಗುವುದಿಲ್ಲ. ಕತ್ತರಿಸಿಹಾಕಿದ ಆ ಪಾಪಿಗಳ ಗಾತ್ರಖಂಡಗಳು ಮೊದಲಿನಹಾಗೆ ಸೇರಿಕೊಳ್ಳುತ್ತವೆ.

ಏವಂ ವರ್ಷಸಹಸ್ರಾಣಿ ಛಿದ್ಯನ್ತೇ ಪಾಪಕರ್ಮಿಣಃ ।
ತಾವದ್ಯಾವದಶೇಷಂ ವೈ ತತ್ಪಾಪಂ ಹಿ ಕ್ಷಯಂ ಗತಮ್ ||೨೫||

ಅಪ್ರತಿಷ್ಠಂ ಚ ನರಕಂ ಶೃಣುಷ್ವ ಗದತೋ ಮಮ ।
ಯತ್ರಸ್ಥೈರ್ನಾರಕೈರ್ದುಃಖಮಸಹ್ಯಮನುಭೂಯತೇ ||೨೬||

ಸ್ವಧರ್ಮರತವಿಪ್ರಾಣಾಂ ವಿಘ್ನಂ ಯಸ್ತು ಸಮಾಚರೇತ್ ।
ಸ ಬದ್ಧೈರ್ದಾರುಣೈಃ ಪಾಶೈರ್ನೀಯತೇ ಚಕ್ರಸಙ್ಕರೈಃ ||೨೭||

ತಾನ್ಯೇವ ತತ್ರ ಚಕ್ರಾಣಿ ಘಟೀಯನ್ತ್ರಾಣಿ ಚಾನ್ಯತಃ ।
ದುಃಖಸ್ಯ ಹೇತುಭೂತಾನಿ ಪಾಪಕರ್ಮಕೃತಾಂ ನೃಣಾಮ್ ||೨೮||

ಚಕ್ರೇಷ್ವಾರೋಪಿತಾಃ ಕೇಚಿದ್ಭ್ರಾಮ್ಯನ್ತೇ ತತ್ರ ಮಾನವಾಃ ।
ಯಾವದ್ವರ್ಷಸಹಸ್ರಾಣಿ ನ ತೇಷಾಂ ಸ್ಥಿತಿರನ್ತರಾ ||೨೯||

---

೨೫. ಎಷ್ಟು ಕಾಲದಲ್ಲಿ ಅವರು ಮಾಡಿದ ಅಶೇಷ ಪಾಪವು ಕ್ಷಯಿಸಿ ಹೋಗುವುದೊ; ಅದುವರೆಗೂ ಸಾವಿರಾರು ವರ್ಷಗಳು ಕಳೆದರೂ ಆ ಪಾಪಿಗಳು ಹಾಗೆಯೆ ಕತ್ತರಿಸಲ್ಪಡುತ್ತಿರುವರು.

೨೬. ಮುಂದೆ ನಾನು ಹೇಳುವ ಅಪ್ರತಿಷ್ಠ ಎಂಬ ನರಕವನ್ನು ಕೇಳು. ಆ ಅಪ್ರತಿಷ್ಠನರಕದಲ್ಲಿ ಬಿದ್ದ ನಾರಕಜಂತುಗಳು ಸಹಿಸಲಾಗದ ದುಃಖವನ್ನು ಅನುಭವಿಸುವುವು.

೨೭. ಯಾವ ನರನು ಸ್ವಧರ್ಮದಲ್ಲಿ ತತ್ಪರರಾದ ವಿಪ್ರರಿಗೆ ವಿಘ್ನವನ್ನು ಉಂಟುಮಾಡುವನೊ; ಅವನು ಭಯಂಕರವಾದ ಪಾಶಗಳಿಂದ ಬದ್ಧನಾಗಿ ಚಕ್ರಗಳ ಸಾಲಿಗೆ ಒಯ್ಯಲ್ಪಡುತ್ತಾನೆ.

೨೮. ನಿಕೃಂತನ ನರಕದಲ್ಲಿದ್ದ ಹಾಗೆ ಈ ನರಕದಲ್ಲಿಯೂ ಚಕ್ರ ಶ್ರೇಣಿಯೂ ಒಂದು ಕಡೆ ಘಟೀಯಂತ್ರಗಳೂ ಪಾಪಕರ್ಮವನ್ನು ಎಸಗಿದ ಮಾನವರಿಗೆ ಯಾತನೆಯನ್ನು ಕೊಡುವುದಕ್ಕಾಗಿ ಇರುವುವು.

೨೯. ಆ ನರಕದಲ್ಲಿ ಚಕ್ರಗಳಿಗೆ ಏರಿಸಲ್ಪಟ್ಟ ಕೆಲವುಮಂದಿ ಪಾಪಿಮನುಜರು ಸಹಸ್ರಾರು ವರ್ಷಗಳು ಕಳೆಯುವವರೆಗೂ ಚಕ್ರಗಳಲ್ಲಿ ಸುತ್ತುತ್ತಿರುವರು. ಮಧ್ಯೆಸ್ವಲ್ಪಹೊತ್ತು ಕೂಡ ನಿಲ್ಲಲು ಅವಕಾಶವಿಲ್ಲ.

ಘಟೀಯನ್ತ್ರೇಷು ಚೈವಾನ್ಯೇ ಬದ್ಧಸ್ತೋಯೇ ಯಥಾ ಘಟೀ ।
ಭ್ರಾಮ್ಯನ್ತೇ ಮಾನವಾ ರಕ್ತಮುದ್ಗಿರನ್ತಃ ಪುನಃ ಪುನಃ ॥೩೦॥

ಅನ್ತ್ರೈರ್ಮುಖೇ ವಿನಿಷ್ಕ್ರಾನ್ತೈರ್ನೇತ್ರೈರಗ್ರಾವಲಮ್ಬಿಭಿಃ ।
ದುಃಖಾನಿ ತೇ ಪ್ರಾಪ್ನುವನ್ತಿ ಯಾನ್ಯಸಹ್ಯಾನಿ ಜನ್ತುಭಿಃ ॥೩೦॥

ಅಸಿಪತ್ರವನಂ ನಾಮ ನರಕಂ ಶೃಣು ಚಾಪರಮ್ ।
ಯೋಜನಾನಾಂ ಸಹಸ್ರಂ ಯೋ ಜ್ವಲದಗ್ನ್ಯಾಸ್ತೃತಾವನಿಃ ॥೩೨॥

ಬ್ರಹ್ಮಚಾರಿವ್ರತಾನಾಂ ಚ ತಪಸಾಂ ವಿಘ್ನಮಾಚರೇತ್ ।
ಅಸಿಪತ್ರವನಂ ಯಾನ್ತಿ ಯೇ ಸದೋದ್ವೇಗಕಾರಿಣಃ ॥೩೩॥

---

೩೦. ಮತ್ತೆ ಕೆಲವರು ನೀರನ್ನು ಎತ್ತಲು ಕಟ್ಟಿಬಿಟ್ಟ ಬಿಂದಿಗೆಯಂತೆ ಘಟೀಯಂತ್ರದಲ್ಲಿ ಕಟ್ಟಲ್ಪಟ್ಟವರಾಗಿ ಮತ್ತೆ ಮತ್ತೆ ರಕ್ತವನ್ನು ವಮನ-ಮಾಡುತ್ತ ಯಂತ್ರದಲ್ಲಿ ಸುತ್ತುವರು.

೩೧. ಅಂತಹ ಮಾನವರು ಕ್ರಮವಾಗಿ ಬಾಯಿಯಲ್ಲಿ ಹೊರಟು ಬಂದ ನರಗಳಿಂದಲೂ ಮೇಲಕ್ಕೆ ಸಿಕ್ಕಿ ಹೋದ ಕಣ್ಣುಗಳಿಂದಲೂ ಕೂಡಿದವರಾಗಿ ಜಂತುಗಳಿಂದ ಸಹಿಸಲಾಗದ ದುಃಖಗಳನ್ನು ಭುಂಜಿಸುತ್ತಾರೆ.

೩೨. ಮತ್ತೊಂದು ಅಸಿಪತ್ರವನವೆಂಬ ಭಯಂಕರವಾದ ನರಕವನ್ನು ಕೇಳು. ಆ ನರಕವು ಸಹಸ್ರಯೋಜನಗಳಷ್ಟು ವಿಸ್ತಾರವುಳ್ಳದ್ದೂ ಜ್ವಲಿಸು-ತ್ತಿರುವ ಬೆಂಕಿಯಿಂದ ಮುಚ್ಚಿದ ನೆಲವುಳ್ಳದ್ದೂ ಆಗಿರುವುದು.

೩೩. ಯಾವ ಮಾನವರು ಯಾವಾಗಲೂ ಪರರಿಗೆ ಭಯ-ಉದ್ವೇಗ ವನ್ನು ಉಂಟುಮಾಡುವರೊ; ಬ್ರಹ್ಮಚಾರಿವ್ರತಗಳಿಗೂ, ತಪಶ್ಚರ್ಯೆಗಳಿಗೂ ವಿಘ್ನವನ್ನು ಉಂಟುಮಾಡುವರೊ; ಅವರು ಅಸಿಪತ್ರವನ ನರಕವನ್ನು ಹೊಂದುವರು.

ತಪ್ತಾಃ ಸೂರ್ಯಕರೈಶ್ಚಣ್ಡೈರ್ಯತ್ರಾತೀವ ಸುದಾರುಣೈಃ ।
ಪ್ರಪತನ್ತಿ ಸದಾ ತತ್ರ ಪ್ರಾಣಿನೋ ನರಕೌಕಸಃ ॥೩೪॥

ತನ್ಮಧ್ಯೇ ಚ ವನಂ ರಮ್ಯಂ ಸ್ನಿಗ್ಧಪತ್ರಂ ವಿಭಾವ್ಯತೇ ।
ಪತ್ರಾಣಿ ತತ್ರ ಖಡ್ಗಾನಾಂ ಫಲಾನಿ ದ್ವಿಜಸತ್ತಮ ॥೩೫॥

ಶ್ವಾನಶ್ಚ ತತ್ರ ಸಬಲಾಃ ಸ್ವನನ್ತ್ಯಯುತಶೋಽಭಿತಃ ।
ಮಹಾವಕ್ತ್ರಾ ಮಹಾದಂಷ್ಟ್ರಾ ವ್ಯಾಘ್ರಾ ಇವ ಭಯಾನಕಾಃ ॥೩೬॥

ತತಸ್ತದ್ವನಮಾಲೋಕ್ಯ ಶಿಶಿರಚ್ಛಾಯಮಗ್ರತಃ ।
ಪ್ರಯಾನ್ತಿ ಪ್ರಾಣಿನಸ್ತತ್ರ ತೃಟ್ತಾಪಪರಿಪೀಡಿತಾಃ ॥೩೭॥

---

೩೪. ಅಸಿಪತ್ರವನದಲ್ಲಿ ವಾಸಿಸುವ ಪಾಪಿ ಜನರು ಬಹಳ ತೀಕ್ಷ್ಣವೂ ದಾರುಣವೂ ಆದ ಸೂರ್ಯರಶ್ಮಿಗಳಿಂದ ತಪಿಸಲ್ಪಟ್ಟವರಾಗಿ ಯಾವಾಗಲೂ ಕೆಳಗೆ ಬೀಳುತ್ತಿರುವರು.

೩೫. ದ್ವಿಜಶ್ರೇಷ್ಠನೆ! ಆ ನರಕದ ಮಧ್ಯದಲ್ಲಿ ರಮಣೀಯವೂ ದಟ್ಟವಾದ ಎಲೆಗಳಿಂದ ಕೂಡಿರುವುದೂ ಆದ ವೃಕ್ಷಶ್ರೇಣಿಯಿಂದ ತುಂಬಿದ ವನವು ಕಾಣಿಸುವುದು. ಅಲ್ಲಿ ಅನೇಕ ಖಡ್ಗಗಳು ಪತ್ರಗಳೂ ಫಲಗಳೂ ಆಗಿರುವುವು.

೩೬. ಅಲ್ಲಿ ದೊಡ್ಡ ಮೂತಿಯುಳ್ಳದ್ದೂ, ದೀರ್ಘವಾದ ಹಲ್ಲುಗಳುಳ್ಳದ್ದೂ, ಹುಲಿಗಳಂತೆ ಭಯಂಕರವೂ ಮತ್ತು ಬಲಿಷ್ಠವೂ ಆದ ಸಾವಿರಾರು ನಾಯಿಗಳು ಎರಡು ಪಾರ್ಶ್ವಗಳಲ್ಲಿಯೂ ಕೂಗುವುವು.

೩೭. ಆ ನರಕದಲ್ಲಿರುವ ಪಾಪಿಜನರು ನೀರಡಿಕೆಯ ದಾಹದಿಂದ ಪೀಡಿತರಾಗಿ ಮುಂದುಗಡೆಯಲ್ಲಿ ತಣ್ಣಗಿರುವ ನೆಳಲಿನಿಂದ ಕೂಡಿದ ಆ ವನವನ್ನು ನೋಡಿ ನಂತರ ಅಲ್ಲಿಗೆ ಹೋಗುವರು.

ಹಾ ಮಾತರ್ಹಾ ತಾತ ಇತಿ ಕ್ರನ್ದನ್ತೋತೀವ ದುಃಖಿತಾಃ ।
ದಹ್ಯಮಾನಾಙ್ಘ್ರಿಯುಗಲಾ ಧರಣೀಸ್ಥೇನ ವಹ್ನಿನಾ ॥೩೮॥

ತೇಷಾಂ ಗತಾನಾಂ ತತ್ರಾಸಿಪತ್ರಪಾತೀ ಸಮೀರಣಃ ।
ಪ್ರವಾತಿ ತೇನ ಪಾತ್ಯನ್ತೇ ತೇಷಾಂ ಖಡ್ಗಾಸ್ತಥೋಪರಿ ॥೩೯॥

ತತಃ ಪತನ್ತಿ ತೇ ಭೂಮೌ ಜ್ವಲತ್ಪಾವಕಸಞ್ಚಯೇ ।
ಲೇಲಿಹ್ಯಮಾನೇ ಚಾತೀವ ವ್ಯಾಪ್ತಾಶೇಷಮಹೀತಲೇ ॥೪೦॥

ಸಾರಮೇಯಾಸ್ತತಃ ಶೀಘ್ರಂ ಶಾತಯನ್ತಿ ಶರೀರತಃ ।
ತೇಷಾಮಙ್ಗಾನಿ ರುದತಾಂ ತ್ವಚಶ್ಚಾತೀವ ಭೀಷಣಾಃ ॥೪೧॥

ಅಸಿಪತ್ರವನಂ ತಾತ ಮಯೈತತ್ಕೀರ್ತಿತಂ ತವ ।
ಅತಃ ಪರಂ ಭೀಮತರಂ ತಪ್ತಕುಮ್ಭಂ ನಿಬೋಧ ಮೇ ॥೪೨॥

---

೩೮. ವನಕ್ಕೆ ಹೋಗುವಾಗ ನೆಲದಲ್ಲಿರುವ ಬೆಂಕಿಯಿಂದ ಸುಡಲ್ಪಡುತ್ತಿರುವ ಎರಡು ಕಾಲುಗಳುಳ್ಳವರಾಗಿ ಬಹಳ ದುಃಖಗೊಂಡು ಅಯ್ಯೋ! ತಾಯಿ! ಅಯ್ಯೋ! ತಂದೆ! ಎಂದು ಅಡಿಗಡಿಗೆ ಕೂಗಿಕೊಳ್ಳುವರು.

೩೯. ಹಾಗೆ ವನಕ್ಕೆ ಹೋದ ಕೂಡಲೆ ಖಡ್ಗರೂಪವಾದ ಎಲೆಗಳನ್ನು ಕೆಳಕ್ಕೆ ಕೆಡವುತ್ತ ಗಾಳಿಯು ಬೀಸುವುದು. ಆ ಗಾಳಿಯಿಂದ ಪಾಪಿಗಳ ಮೇಲೆ ಖಡ್ಗಗಳು ಸುರಿಯುವುವು.

೪೦. ತರುವಾಯ ಆ ಪಾಪಿಗಳು ನೆಲದಲ್ಲಿ ಧಗಧಗಿಸುವ, ತುಂಬ ವ್ಯಾಪಿಸಿದ ಸಂಪೂರ್ಣ ಭೂಮಿಯುಳ್ಳ ಉರಿಯುತ್ತಿರುವ ಬೆಂಕಿಯ ರಾಶಿಯಲ್ಲಿ ಬೀಳುತ್ತಾರೆ.

೪೧. ತರುವಾಯ ಭಯಂಕರವಾದ ನಾಯಿಗಳು ಓಡಿಬಂದು ಅಳುತ್ತ ಬಿದ್ದಿದ್ದ ಪಾಪಿಗಳ ದೇಹದಿಂದ ಅವಯವಗಳನ್ನೂ ಚರ್ಮವನ್ನೂ ಕಿತ್ತುಹಾಕುತ್ತವೆ.

೪೨. ಪಿತನೆ! ಹೀಗೆ ನಾನು ನಿನಗೆ ಅಸಿಪತ್ರವನವನ್ನು ವರ್ಣಿಸಿ ಹೇಳಿದೆನು. ಇನ್ನು ಮುಂದೆ ಬಹಳ ಭಯಂಕರವಾದ ತಪ್ತಕುಂಭವೆಂಬ ನರಕವನ್ನು ಹೇಳುವೆನು. ಕೇಳು.

ಸಮನ್ತತಸ್ತಪ್ತಕುಮ್ಭಾ ವಹ್ನಿಜ್ವಾಲಾಸಮಾವೃತಾಃ ।
ಜ್ವಲದಗ್ನಿಚಯೋತ್ತಪ್ತಾಸ್ತೈಲಾಯಶ್ಚೂರ್ಣಪೂರಿತಾಃ ॥೪೩॥

ತೇಷು ದುಷ್ಕೃತಕರ್ಮಾಣೋ ಯಾಮ್ಯೈಃ ಕ್ಷಿಪ್ತಾಸ್ತ್ವಧೋ
ಮುಖಾಃ ।
ದೂಷಯೇದ್ಧರ್ಮಶಾಸ್ತ್ರಾಣಿ ಯೇ ಚಾನ್ಯೇ ತೀರ್ಥದೂಷಕಾಃ॥೪೪॥

ಭುಕ್ತಭೋಗಾಂ ತು ಯೋ ನಾರೀಮಿಷ್ಟಮಾಣಾಂ ಪ್ರಿಯಾಂ
ಶುಭಾಮ್ ।
ಅದೃಷ್ಟಾಮಪಿ ದೋಷೇಣ ತ್ಯಜತೇ ಮೂಢಚೇತನಃ ॥೪೫॥

ತೇ ಸಮಾನೀಯ ಪಚ್ಯನ್ತೇ ಲೋಹಕುಮ್ಭೇಷು ಶೀಘ್ರತಃ ।
ಕ್ವಾಥ್ಯನ್ತೇ ವಿಸ್ಫುಟದ್ಗಾತ್ರಾ ಜ್ವಲನ್ಮಜ್ಜಾಜಲಾವಿಲಾಃ ॥೪೬॥

---

೪೩. ತಪ್ತಕುಂಭ ನರಕದಲ್ಲಿ ಸುತ್ತಲೂ ಬೆಂಕಿಯ ಜ್ವಾಲೆಗಳಿಂದ ಆವರಿಸಲ್ಪಟ್ಟ, ಜ್ವಲಿಸುತ್ತಿದ್ದ ಹೆಚ್ಚಾದ ಬೆಂಕಿಯಿಂದ ಕುದಿಯುತ್ತಿದ್ದ ಮತ್ತು ಎಣ್ಣೆ-ಲೋಹಚೂರ್ಣಗಳಿಂದ ತುಂಬಿಸಿದ ಎಣ್ಣೆಕೊಪ್ಪರಿಗೆಗಳು ಇರುವುವು.

೪೪. ಧರ್ಮಶಾಸ್ತ್ರಗಳನ್ನು ದೂಷಿಸುವವರೂ, ತೀರ್ಥಕ್ಷೇತ್ರಗಳನ್ನು ದೂಷಿಸುವವರೂ ಆದ ಪಾಪಿಗಳನ್ನು ಯಮದೂತರು ಆ ತಪ್ತಕುಂಭಗಳಲ್ಲಿ ಅಧೋಮುಖರನ್ನಾಗಿ ಬಿಡುವರು.

೪೫. ಮೂಢಬುದ್ಧಿಯುಳ್ಳ ಯಾವ ಪಾಪಿಯು ತನಗೆ ಇಷ್ಟಳೂ, ಪ್ರಿಯಳೂ ಮತ್ತು ಕಲ್ಯಾಣಶೀಲಳೂ ಆದ ನಾರಿಯೊಡನೆ ರತಿಸುಖವನ್ನು ಭುಂಜಿಸಿ ದೋಷವನ್ನು ಕಾಣದಿದ್ದರೂ ಆಕೆಯನ್ನು ತ್ಯಜಿಸುವನೊ; ಅವನು ತಪ್ತಕುಂಭ ನರಕದಲ್ಲಿ ಬೀಳುವನು.

೪೬. ಅಂತಹ ಪಾಪಿಗಳು ತಪ್ತಕುಂಭ ನರಕಕ್ಕೆ ತಂದು ಶೀಘ್ರವಾಗಿ ಲೋಹಕುಂಭಗಳಲ್ಲಿ ಬಿಟ್ಟು ಬೇಯಿಸಲ್ಪಡುವರು ಮತ್ತು ಒಡೆದ ಮೈಯಿಂದ ಉರಿಯುತ್ತಾ ಸುರಿಯುವ ಮಜ್ಜಾಧಾತುವಿನ ನೀರಿನಿಂದ ಕುದಿಸಲ್ಪಡುವರು.

ಸ್ಫುಟತ್ಕಪಾಲನೇತ್ರಾಸ್ಥಿಚ್ಛಿದ್ಯಮಾನಾ ವಿಭೀಷಣೈಃ ।
ಗೃಧ್ರೈರುತ್ಪಾಟ್ಯ ಮುಚ್ಯನ್ತೇ ಪುನಸ್ತೇಷ್ವೇವ ವೇಗಿತೈಃ ॥೪೭॥

ಪುನಃ ಸಿಮಸಿಮಾಯನ್ತೇ ತೈಲೇನೈಕ್ಯಂ ವ್ರಜನ್ತಿ ಚ ।
ದ್ರವೀಭೂತೈಃ ಶಿರೋಗಾತ್ರಸ್ನಾಯುಮಾಂಸತ್ವಗಸ್ಥಿಭಿಃ ॥೪೮॥

ತತೋ ಯಾಮ್ಯೈರ್ಭಟೈರಾಶು ದರ್ವೀಘಟ್ಟನಘಟ್ಟಿತಾಃ ।
ಕೃತಾವರ್ತೇ ಮಹಾತೈಲೇ ಮಥ್ಯನ್ತೇ ಪಾಪಕರ್ಮಿಣಃ ॥೪೯॥

ಏಷ ತೇ ವಿಸ್ತರೇಣೋಕ್ತಸ್ತಪ್ತಕುಮ್ಭೋ ಮಯಾ ಪಿತಃ ॥೫೦॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ರೌರವಾದಿ ನರಕನಿರೂಪಣಂ
ನಾಮ ದ್ವಾದಶೋಽಧ್ಯಾಯಃ

---

೪೭. ಮತ್ತೆ ವೇಗದಿಂದ ಬಂದು ಎರಗಿದ, ಭಯಂಕರವಾದ ಹದ್ದುಗಳಿಂದ ಕಪಾಲಸ್ಥಳ-ಕಣ್ಣು ಮುಂತಾದ ಸ್ಥಳದಲ್ಲಿನ ಎಲುಬುಗಳನ್ನು ಕತ್ತರಿಸಿ ಕಿತ್ತು ತೆಗೆಯಲ್ಪಟ್ಟವರಾಗಿ ಅದೇ ಲೋಹಕುಂಭಗಳಲ್ಲಿ ಹಾಕಲ್ಪಡುವರು.

೪೮. ತರುವಾಯ ಕುದಿಯುವ ಎಣ್ಣೆಯಲ್ಲಿಬಿದ್ದು ಸಿಮಸಿಮಶಬ್ದವಾಗುವುದು ಮತ್ತು ಶಿರ-ಗಾತ್ರ-ಸ್ನಾಯು-ಮಾಂಸ-ಚರ್ಮ-ಅಸ್ಥಿ ಇವುಗಳೆಲ್ಲವೂ ದ್ರವವಾಗಿ ಎಣ್ಣೆಯಲ್ಲಿ ಐಕ್ಯವನ್ನು ಹೊಂದುವುವು.

೪೯. ಅನಂತರ ಯಮಭಟರು ಬೇಗ ಬಂದು ಸೌಟನಿಂದ ಘಟ್ಟಿಸಿ ಸುಳಿಯುಂಟಾದ ಮಹಾತೈಲರಾಶಿಯಲ್ಲಿ ಪಾಪಿಗಳನ್ನು ಹಾಕಿ ಕಡೆಯುವರು.

೫೦. ತಂದೆಯೆ! ಹೀಗೆ ಭಯಂಕರವಾದ ತಪ್ತಕುಂಭ ಮತ್ತು ಅಲ್ಲಿ ಪಾಪಿಜನರು ಯಾತನೆಯನ್ನು ಅನುಭವಿಸುವ ವಿಧಾನವು ನನ್ನಿಂದ ಹೇಳಲ್ಪಟ್ಟಿದೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಹನ್ನೆರಡನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಯೋದಶೋಽಧ್ಯಾಯಃ

(ವೈಶ್ಯರಾಜ ಯಮಪುರುಷ ಸಂವಾದಃ)

ಪುತ್ರ ಉವಾಚ :—

ಅಹಂ ವೈಶ್ಯಕುಲೇ ಜಾತೋ ಜನ್ಮನ್ಯಸ್ಮಾತ್ತು ಸಪ್ತಮೇ ।
ಸಮತೀತೇ ಗವಾಂ ರೋಧಂ ನಿಪಾನೇ ಕೃತವಾನ್ ಪುರಾ ॥೧॥

ವಿಪಾಕಾನ್ ಕರ್ಮಣಸ್ತಸ್ಯ ನರಕಂ ಭೃಶದಾರುಣಮ್ ।
ಸಮ್ಪ್ರಾಪ್ತೋಽಗ್ನಿಶಿಖಾನಾಥಮಯೋಮುಖಖಗಾಕುಲಮ್ ॥೨॥

ಹದಿಮೂರನೆಯ ಅಧ್ಯಾಯ

ಪುತ್ರನು ಇಂತೆಂದನು :—

೧. ನಾನು ಈ ಜನ್ಮಕ್ಕಿಂತ ಹಿಂದೆ ಕಳೆದ ಏಳನೆಯ ಜನ್ಮದಲ್ಲಿ ವೈಶ್ಯವಂಶದಲ್ಲಿ ಹುಟ್ಟಿದ್ದೆನು. ಆಗ ಒಂದು ಜಲಾಶಯಕ್ಕೆ ನೀರುಕುಡಿಯುವುದಕ್ಕೆ ಬರುತ್ತಿದ್ದ ಗೋವುಗಳನ್ನು ಅಡ್ಡಗಟ್ಟಿ ನಿಲ್ಲಿಸಿದೆನು.

೨. ಆ ಪಾಪಕರ್ಮದ ಪರಿಪಾಕದಿಂದ ನಾನು ಅತ್ಯಂತ ದಾರುಣವೂ ಅಗ್ನಿಜ್ವಾಲೆಗಳಿಂದ ಕೂಡಿರುವುದೂ, ಮತ್ತು ಉಕ್ಕಿನ ಕೊಕ್ಕುಗಳುಳ್ಳ ಪಕ್ಷಿಗಳಿಂದ ಪೂರ್ಣವೂ ಆದ ನರಕದಲ್ಲಿ ಬಿದ್ದೆನು.

ಯನ್ತ್ರಪೀಡನಗಾತ್ರಾಸೃಕ್ಪ್ರವಾಹೋದ್ಭೂತಕರ್ದಮಮ್ ।
ವಿಕೃಷ್ಯಮಾಣದುಷ್ಕರ್ಮಿತನ್ನಿಪಾತರವಾಕುಲಮ್ ॥೩॥

ಪಾತ್ಯಮಾನಸ್ಯ ಮೇ ತತ್ರ ಸಾಗ್ರಂ ವರ್ಷಶತಂ ಗತಮ್ ।
ಮಹಾತಾಪಾರ್ತಿತಪ್ತಸ್ಯ ತೃಷ್ಣಾದಾಹಾನ್ವಿತಸ್ಯ ಚ ॥೪॥

ತತ್ರಾಹ್ಲಾದಕರಃ ಸದ್ಯಃ ಪವನಃ ಸುಖಶೀತಲಃ ।
ಕರಮ್ಭವಾಲುಕಾಕುಮ್ಭಮಧ್ಯಸ್ಥೇ ಮೈ ಸಮಾಗತಃ ॥೫॥

ಅಕಸ್ಮಾದೇವ ಭೋ ತಾತ ನರರತ್ನಂ ಸಮಾಗತಮ್ ।
ತತ್ಸಮ್ಪರ್ಕಾದಶೇಷಾಣಾಂ ನಾಭವದ್ಯಾತನಾ ನೃಣಾಮ್ ॥೬॥

---

೩. ಆ ನರಕವು ಪಾಪಿಗಳನ್ನು ಯಂತ್ರದಲ್ಲಿ ಪೀಡಿಸುವಾಗ ಅವರ ದೇಹದಿಂದ ಹರಿದ ರಕ್ತಪ್ರವಾಹದಿಂದ ಹುಟ್ಟಿದ ಕೆಸರುಳ್ಳದ್ದೂ, ಸೆಳೆಯಲ್ಪಡುವ ಪಾಪಿಜನರುಳ್ಳದ್ದೂ ಮತ್ತು ಪಾಪಿಗಳು ಬೀಳುವ ಶಬ್ದದಿಂದ ಕೂಡಿರುವುದೂ ಆಗಿತ್ತು.

೪. ಆ ನರಕದಲ್ಲಿ ಕೆಡವಲ್ಪಟ್ಟ ನನಗೆ ಸಹಿಸಲಾಗದ ತಾಪದಿಂದ ಉಂಟಾದ ಸಂಕಟದಿಂದ ತಪ್ತನೂ, ನೀರಡಿಕೆಯ ದಾಹದಿಂದ ಕೂಡಿದ್ದವನೂ ಆಗಿರುವಹಾಗೆಯೇ ಸಂಪೂರ್ಣವಾಗಿ ಒಂದುನೂರು ವರ್ಷಗಳು ಕಳೆದುವು.

೫. ಹಾಗೆಯೇ ಸುಡುತ್ತಿದ್ದ ಮರಳುತುಂಬಿದ ಕೊಪ್ಪರಿಗೆಯಲ್ಲಿ ನಾನು ಯಾತನೆಯನ್ನು ಅನುಭವಿಸುತ್ತಿರಲು ಸುಖವೂ-ಶೀತಲವೂ ಆದ ಮತ್ತು ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುವ ಗಾಳಿಯು ಇದ್ದಕ್ಕಿದ್ದಹಾಗೆ ಬೀಸಲಾರಂಭಿಸಿತು.

೬. ಎಲೈ ತಂದೆಯೆ! ಅನಿರೀಕ್ಷಿತವಾಗಿ ರತ್ನಪ್ರಾಯನಾದ ಒಬ್ಬ ಪುರುಷನು ಅಲ್ಲಿಗೆ ಬಂದನು. ಅವನ ಸಹವಾಸದಿಂದ ಅಲ್ಲಿರುವ ಎಲ್ಲ ಪಾಪಿಗಳಿಗೆ ಯಾತನೆಯಾಗುತ್ತಿದ್ದುದು ನಿಂತುಹೋಯಿತು.

ಮಮ ಚಾಪಿ ಯಥಾ ಸ್ವರ್ಗೇ ಸ್ವರ್ಗಿಣಾಂ ನಿರ್ವೃತಿಃ ಪರಾ ||೭||

ಕಿಮೇತದಿತಿ ಚಾಹ್ಲಾದವಿಸ್ಮಯಸ್ತಿಮಿತೇಕ್ಷಣೈಃ |
ದೃಷ್ಟಮಸ್ಮಾಭಿರಾಸನ್ನಂ ನರರತ್ನಮನುತ್ತಮಮ್ ||೮||

ಯಾಮ್ಯಶ್ಚ ಪುರುಷೋ ಘೋರೋ ದಣ್ಡಹಸ್ತೋಲ್ಲಸತ್ಪ್ರಭಃ |
ಪುರತೋ ದರ್ಶಯನ್ಮಾರ್ಗಮಿತ ಏಹೀತಿ ಚ ಬ್ರುವನ್ ||೯||

ತತಸ್ತೇ ಜನ್ತವಃ ಸರ್ವೇ ಮತ್ವಾ ತದ್ದರ್ಶನಾತ್ಸುಖಮ್ |
ಊಚುಃ ಪ್ರಾಞ್ಜಲಯೋ ಭೂಪಂ ಕ್ಷಣಮಾತ್ರಂ ಸ್ಥಿತೋ ಭವ||೧೦||

ತ್ವದ್ಗಾತ್ರಸಙ್ಗೀ ಪವನೋ ಹ್ಯಸ್ಮಾಕಂ ಸುಖಕಾರಕಃ
ತತೋಽಸೌ ನರಕಾಭ್ಯಾಶೇ ಉಪವಿಷ್ಟಃ ಕೃಪಾನ್ವಿತಃ ||೧೧||

---

೭. ಆ ಪಾಪಿಗಳ ಗುಂಪಿನಲ್ಲಿದ್ದ ನನಗೂ ಯಾತನೆಗೆ ಬದಲುಸುಖ-ವುಂಟಾಯಿತು. ಸ್ವರ್ಗಲೋಕದಲ್ಲಿರುವವರು ಎಂತಹಸುಖವನ್ನು ಭುಂಜಿಸುವರೊ ; ನಾನೂ ಹಾಗೆ ಸುಖವನ್ನು ಭುಂಜಿಸಿದೆನು.

೮. ಇದೇನಿರಬಹುದು ! ಎಂದು ಆಹ್ಲಾದದಿಂದ ಅರಳಿ ವಿಸ್ತಾರವೂ ನಿಶ್ಚಲವೂ ಆದ ದೃಷ್ಟಿಯುಳ್ಳ ನಾವು ಅಷ್ಟರಲ್ಲಿ ಸಮಿಾಪಕ್ಕೆಬಂದ ಸರ್ವೋತ್ತಮ-ವಾದ ಪುರುಷರತ್ನವನ್ನು ಕಂಡೆವು.

೯. ಘೋರರೂಪಿಯೂ, ಕೈಯಲ್ಲಿ ದಂಡವನ್ನು ಧರಿಸಿದವನೂ, ಮತ್ತು ಹೊಳೆಯುವ ಕಾಂತಿಯುಳ್ಳವನೂ ಆದ ಯಮಪುರುಷನೊಬ್ಬನು " ಇತ್ತ ಬಾ " ಎನ್ನುತ್ತ ಮುಂದೆ ದಾರಿಯನ್ನು ತೋರಿಸುತ್ತ ಬಂದನು.

೧೦. ತರುವಾಯ ಆ ಪಾಪಿಜಂತುಗಳೆಲ್ಲರೂ ಮಹಾತ್ಮನ ದರ್ಶನದಿಂದ ಸುಖವುಂಟಾಯಿತೆಂದರಿತು ಕೈಜೋಡಿಸಿ ನಿಂತು ಆ ರಾಜನನ್ನು ನೋಡಿ ಹೇಳಿಕೊಂಡರು. ಒಂದು ಕ್ಷಣಕಾಲ ಇಲ್ಲಿ ನಿಲ್ಲುವವನಾಗು.

೧೧. ನಿನ್ನ ದೇಹವನ್ನು ಮುಟ್ಟಿ ಬೀಸುವ ಗಾಳಿಯು ನಮಗೆ ಸುಖವನ್ನು ಉಂಟುಮಾಡುತ್ತಿದೆ. ಹೀಗೆಂದು ಪಾಪಿಜನರು ಹೇಳಿದ ಮೇಲೆ ಆ ಮಹಾತ್ಮನು ಕರುಣೆಯುಳ್ಳವನಾಗಿ ನರಕಸಮೀಪದಲ್ಲಿ ಕುಳಿತನು.

ಪುರುಷಃ ಸ ತದಾ ದೃಷ್ಟ್ವಾ ಯಾತನಾಶತಸಙ್ಕುಲಮ್ ।
ನರಕಂ ಪ್ರಾಹ ತಂ ಯಾಮ್ಯಂ ಕಿಙ್ಕರಂ ಕೃಪಯಾನ್ವಿತಃ ॥೧೨॥

ಪುರುಷ ಉವಾಚ :—

ಭೋ ಯಾಮ್ಯ ಪುರುಷಾಚಕ್ಷ್ವ ಕಿಂ ಮಯಾ ದುಷ್ಕೃತಂ ಕೃತಮ್ ।
ಯೇನೇದಂ ಯಾತನಾಭೀಮಂ ಪ್ರಾಪ್ತೋಽಸ್ಮಿ ನರಕಂ ಪರಮ್ ॥೧೩॥

ವಿಪಶ್ಚಿದಿತಿ ವಿಖ್ಯಾತೋ ಜನಕಾನಾಮಹಂ ಕುಲೇ ।
ಜಾತೋ ವಿದೇಹವಿಷಯೇ ಸಮ್ಯಙ್ಮನುಜಪಾಲಕಃ ॥೧೪॥

ಚಾತುರ್ವರ್ಣ್ಯಂ ಸ್ವಧರ್ಮಸ್ಥಂ ಕೃತ್ವಾ ಸಂರಕ್ಷಿತಂ ಮಯಾ ।
ಧರ್ಮತೋ ಧರ್ಮಕಲ್ಪೇನ ಮನುನಾತ್ರ ಯಥಾ ಪುರಾ ॥೧೫॥

---

೧೨. ಆ ಮಹಾತ್ಮ ಪುರುಷನು ಆಗ ನೂರಾರುಯಾತನೆಗಳಿಂದ ಕೂಡಿದ ನರಕವನ್ನು ನೋಡಿ ದಯಾರಸಪೂರ್ಣನಾಗಿ ಆ ಯಮದೂತನನ್ನು ಕುರಿತು ಹೀಗೆ ಹೇಳಿದನು.

ಪುರುಷನು ಇಂತೆಂದನು :—

೧೩. ಎಲೋ ಯಮಪುರುಷನೆ! ನಾನು ಏನು ದುಷ್ಕೃತವನ್ನು ಮಾಡಿರುವೆನು? ಹೇಳು. ನಾನು ಯಾವಕಾರಣದಿಂದ ಯಾತನೆಗಳಿಂದ ಭಯಂಕರವಾದ ಈ ದೊಡ್ಡ ನರಕಕ್ಕೆ ಬಂದವನಾದೆನು?

೧೪. ನಾನು ವಿದೇಹರಾಜ್ಯದಲ್ಲಿ ಆಳುತ್ತಿದ್ದ ಜನಕರಾಜರ ವಂಶದಲ್ಲಿ ಜನಿಸಿ ವಿಪಶ್ಚಿತ್ ಎಂಬ ಹೆಸರಿನಿಂದ ವಿಖ್ಯಾತನಾಗಿ ಉತ್ತಮವಾಗಿ ಪ್ರಜೆಗಳನ್ನು ಪಾಲಿಸುವ ರಾಜನಾಗಿದ್ದೆನು.

೧೫. ಪೂರ್ವಕಾಲದಲ್ಲಿ ಧರ್ಮಾತ್ಮನಾದ ಮನುರಾಜನು ಹೇಗೋ ಹಾಗೆ ನಾನು ನನ್ನ ರಾಜ್ಯದಲ್ಲಿ ಧರ್ಮಶಾಸ್ತ್ರಾನುಸಾರವಾಗಿ ಆಯಾಯ ವರ್ಣಗಳನ್ನು ಸ್ವಧರ್ಮಪರರನ್ನಾಗಿ ಮಾಡಿ ಚಾತುರ್ವರ್ಣ್ಯವನ್ನು ರಕ್ಷಿಸಿದೆನು.

ಯಜ್ಞೈರ್ವರ್ಯಯೋಽಷ್ಟಂ ಬಹುಭಿರ್ಧರ್ಮತಃ ಪಾಲಿತಾ ಮಹೀ ।
ನೋತ್ಸೃಷ್ಟಶ್ಚೈವ ಸಙ್ಗ್ರಾಮೋ ನಾತಿಥಿರ್ವಿಮುಖೋ ಗತಃ ॥೧೬॥

ಪಿತೃದೇವರ್ಷಿಭೃತ್ಯಾಶ್ಚ ನ ಚಾಪಚರಿತಾ ಮಯಾ ।
ಮಹಾತಾಪಾರ್ತಿತಪ್ತಸ್ಯ ತೃಷ್ಣಾದಾಹಾರ್ದಿತಸ್ಯ ಚ ॥೧೭॥

ಸರ್ವಸ್ಯ ಜೀವಭೂತಸ್ಯ ಕೃತಂ ತ್ರಾಣಂ ಸದಾ ಮಯಾ ।
ಕೃತಾ ಸ್ಪೃಹಾ ಚ ನ ಮಯಾ ಪರಸ್ತ್ರೀವಿಭವಾದಿಷು ॥೧೮॥

ಪರ್ವಕಾಲೇಷು ಪಿತರಸ್ತಿಥಿಕಾಲೇಷು ದೇವತಾಃ ।
ಪುರುಷಂ ಸ್ವಯಮಾಯಾನ್ತಿ ನಿಪಾನಮಿವ ಧೇನವಃ ॥೧೯॥

ಯತಸ್ತೇ ವಿಮುಖಾ ಯಾನ್ತಿ ನಿಃಶ್ವಸ್ಯ ಗೃಹಮೇಧಿನಃ ।
ತಸ್ಮಾದಿಷ್ಟಶ್ಚ ಪೂರ್ತಶ್ಚ ಧರ್ಮೌ ದ್ವಾವಪಿ ನಶ್ಯತಃ ॥೨೦॥

---

೧೬. ಹಾಗು ಬಹುವಿಧ ಯಜ್ಞಗಳನ್ನು ಆಚರಿಸಿದೆನು. ಧರ್ಮದಿಂದ ಭೂಮಿಯನ್ನು ಪಾಲಿಸಿದೆನು. ಶತ್ರುಗಳೊಡನೆ ಪ್ರಸಕ್ತವಾದ ಯುದ್ಧವನ್ನು ಬಿಡಲಿಲ್ಲ. ಮತ್ತು ಅತಿಥಿಯು ನನ್ನಿಂದ ನಿರಾಶನಾಗಿ ಹಿಂತಿರುಗಲಿಲ್ಲ.

೧೭. ಪಿತೃ-ದೇವ-ಪೋಷ್ಯಜನ ಇವರಲ್ಲಿ ನಾನು ಎಂದೂ ಅಪಚಾರವನ್ನು ಮಾಡಲಿಲ್ಲ. ಅತ್ಯಂತ ತಾಪದಿಂದ ಸಂಕಟಪಡುತ್ತಿದ್ದ ಮತ್ತು ನೀರಡಿಕೆಯ ದಾಹದಿಂದ ಕಳವಳಪಡುತ್ತಿದ್ದ ಜನರನ್ನು ರಕ್ಷಿಸಿರುವೆನು.

೧೮. ನಾನು ಸಮಸ್ತ ಜೀವಜಂತುಗಳಿಗೂ ಯಾವಾಗಲೂ ರಕ್ಷಣವನ್ನು ಕೊಟ್ಟಿರುವೆನು. ಪರಸ್ತ್ರೀಯರಲ್ಲಾಗಲಿ ಪರಸ್ವತ್ತಿನಲ್ಲಾಗಲಿ ನಾನು ಆಸೆಯನ್ನು ತೋರಿಸಿದವನಲ್ಲ.

೧೯. ನೀರಡಿಕೆಯಾದ ಹಸುಗಳು ಜಲಾಶಯಕ್ಕೆ ಬರುವ ಹಾಗೆ ಪರ್ವಕಾಲದಲ್ಲಿ ಪಿತೃಗಳೂ ಮಿಕ್ಕ ಪುಣ್ಯತಿಥಿವಿಶೇಷಗಳಲ್ಲಿ ದೇವತೆಗಳೂ ಗೃಹಸ್ಥನ ಮನೆಗೆ ಬರುವರು.

೨೦. ಪಿತೃ-ದೇವತೆಗಳು ದರಿದ್ರನಾದ ಯಾವ ಗೃಹಸ್ಥನಮನೆಯಲ್ಲಿ ಸತ್ಕಾರವಿಲ್ಲದೆ ಹಿಂತುರುಗಿ ಹೋಗುವರೊ; ಆ ಗೃಹಸ್ಥನ ಇಷ್ಟ-ಪೂರ್ತವೆಂಬ ಎರಡುವಿಧ ಧರ್ಮಗಳು ನಾಶವಾಗುವುವು.

ಪಿತೃನಿಶ್ವಾಸವಿಧ್ವಸ್ತಂ ಸಪ್ತಜನ್ಮಾರ್ಜಿತಂ ಧನಮ್ ।
ತ್ರಿಜನ್ಮಪ್ರಭವಂ ದೈವೋ ನಿಶ್ವಾಸೋ ಹನ್ತ್ಯಸಂಶಯಮ್ ॥೨೧॥

ತಸ್ಮಾದ್ದೈವೇ ಚ ಪಿತ್ರ್ಯೇ ಚ ನಿತ್ಯಮೇವ ಹಿತೋಽಭವಮ್ ।
ಸೋಽಹಂ ಕಥಮಿಮಂ ಪ್ರಾಪ್ತೋ ನರಕಂ ಭೃಶದಾರುಣಮ್ ॥೨೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ವೈಶ್ಯರಾಜ ಯಮದೂತ ಸಂವಾದೋ ನಾಮ ತ್ರಯೋದಶೋಽಧ್ಯಾಯಃ

---

೨೧. ನಿರಾಶರಾಗಿ ಹೋಗುವ ಪಿತೃಗಳ ನಿಶ್ವಾಸದಿಂದ ಗೃಹಸ್ಥನ ಸಪ್ತಜನ್ಮಾರ್ಜಿತವಾದ ಪುಣ್ಯಧನವು ಧ್ವಂಸವಾಗುವುದು. ದೇವತೆಗಳ ನಿಶ್ವಾಸವು ನಿಸ್ಸಂಶಯವಾಗಿ ಮೂರುಜನ್ಮಗಳಲ್ಲಿ ಆರ್ಜಿಸಿದ ಧನವನ್ನು ನಾಶಮಾಡುವುದು.

೨೨. ಆದುದರಿಂದ ನಾನು ದೈವಕರ್ಮ-ಪಿತೃಕರ್ಮಗಳಲ್ಲಿ ಯಾವಾಗಲೂ ಆದರವುಳ್ಳವನಾಗಿದ್ದೆನು. ಹೀಗಿದ್ದರೂ ನಾನು ಅತ್ಯಂತದಾರುಣವಾದ ಈ ನರಕಲೋಕಕ್ಕೆ ಏಕೆಬರುವಂತಾಯಿತು ?

ಮಾರ್ಕಂಡೇಯ ಮಹಾಪುರಾಣದಲ್ಲಿ ಹದಿಮೂರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುರ್ದಶೋಽಧ್ಯಾಯಃ

(ಸ್ವಕೃತಕರ್ಮಣೋ ಭೋಗನಿರೂಪಣಮ್)

ಪುತ್ರ ಉವಾಚ :—

ಇತಿ ಪೃಷ್ಟಸ್ತದಾ ತೇನ ಶೃಣ್ವತಾಂ ನೋ ಮಹಾತ್ಮನಾ ।
ಉವಾಚ ಪುರುಷೋ ಯಾಮ್ಯೋ ಘೋರೋಽಪಿ ಪ್ರಶ್ರಿತಂ ವಚಃ॥೧॥

ಯಮಕಿಙ್ಕರ ಉವಾಚ :—

ಮಹಾರಾಜ ಯಥಾತ್ಥ ತ್ವಂ ತಥೈತನ್ನಾತ್ರ ಸಂಶಯಃ ।
ಕಿನ್ತು ಸ್ವಲ್ಪಂ ಕೃತಂ ಪಾಪಂ ಭವತಾ ಸ್ಮಾರಯಾಮಿ ತತ್ ॥೨॥

ಹದಿನಾಲ್ಕನೆಯ ಅಧ್ಯಾಯ

ಪುತ್ರನು ಇಂತೆಂದನು :—

೧. ಈರೀತಿಯಾಗಿ ಮಹಾತ್ಮನಾದ ವಿಪಶ್ಚಿತ್ ರಾಜನಿಂದ ಪ್ರಶ್ನಿಸಲ್ಪಟ್ಟ ಆ ಯಮಕಿಂಕರನು ಬಲು ಘೋರರೂಪಿಯಾಗಿದ್ದರೂ ವಿನಯಭರಿತವಾದ ಮಾತನ್ನು ಆಡಿದನು.

ಯಮಕಿಂಕರನು ಇಂತೆಂದನು :—

೨. ಮಹಾರಾಜನೆ! ನೀನು ಹೇಳಿರುವಂತೆ ಎಲ್ಲವೂ ನಿಜವಾದುದು. ಆ ವಿಷಯದಲ್ಲಿ ಏನೂ ಸಂಶಯವಿಲ್ಲ. ಆದರೆ ನೀನು ಸ್ವಲ್ಪಮಾತ್ರ ಪಾಪವನ್ನು ಮಾಡಿರುತ್ತೀಯೆ. ಅದನ್ನು ಜ್ಞಾಪಕಪಡಿಸುವೆನು.

ವೈದರ್ಭೀ ತವ ಯಾ ಪತ್ನೀ ಪೀವರೀ ನಾಮ ನಾಮತಃ ।
ಋತುಮತ್ಯಾ ಋತುರ್ವನ್ಧ್ಯಸ್ತ್ವಯಾ ತಸ್ಯಾಃ ಕೃತಃ ಪುರಾ ॥೩॥

ಸುಶೋಭನಾಯಾಂ ಕೈಕೇಯ್ಯಾಮಾಸಕ್ತೇನ ತತೋ ಭವಾನ್ ।
ಋತುವ್ಯತಿಕ್ರಮಾತ್ಪ್ರಾಪ್ತೋ ನರಕಂ ಘೋರಮೀದೃಶಮ್ ॥೪॥

ಹೋಮಕಾಲೇ ಯಥಾ ವಹ್ನಿರಾಜ್ಯಪಾತಮವೇಕ್ಷತೇ ।
ಋತೌ ಪ್ರಜಾಪತಿಸ್ತದ್ವದ್ಬೀಜಪಾತಮಪೇಕ್ಷತೇ ॥೫॥

ಯಸ್ತಮುಲ್ಲಙ್ಘ್ಯ ಧರ್ಮಾತ್ಮಾ ಕಾಮೇಷ್ವಾಸಕ್ತಿಮಾನ್ ಭವೇತ್ ।
ಸ ತು ಪಿತ್ರ್ಯಾದೃಣಾತ್ಪಾಪಮವಾಪ್ಯ ನರಕಂ ಪತೇತ್ ॥೬॥

---

೩. ಪೀವರೀ ಎಂಬ ನಾಮಾಂಕನದಿಂದ ಪ್ರಸಿದ್ಧಳಾದ ನಿನ್ನ ಪತ್ನಿಯಾದ ವೈದರ್ಭಿಯು ಋತುಮತಿಯಾಗಿರುವಾಗ ಹಿಂದೆ ನೀನು ಸಂಗ-ಸುಖವನ್ನು ಹೊಂದದೆ ಅವಳ ಋತುಕಾಲವನ್ನು ವ್ಯರ್ಥಮಾಡಿರುತ್ತೀಯೆ.

೪. ನಿನ್ನ ಮನಮೆಚ್ಚುವ ಸುಂದರಾಂಗಿಯಾದ ಕೈಕೇಯಿಯೆಂಬ ಪತ್ನಿಯಲ್ಲಿ ಪ್ರೇಮಿಯಾಗಿ ವೈದರ್ಭಿಯ ಋತುಸಮಯವನ್ನು ವ್ಯರ್ಥಗೊಳಿಸಿರು-ವುದರಿಂದ ನೀನು ಆ ಪಾಪದಿಂದ ಘೋರವಾದ ಈ ನರಕಕ್ಕೆ ಬಂದಿರುತ್ತೀಯೆ.

೫. ಅಗ್ನಿಹೋತ್ರ ಮುಂತಾದ ಹೋಮಸಮಯದಲ್ಲಿ ಅಗ್ನಿಯು ಆಜ್ಯಹವಿಸ್ಸಿನ ಪ್ರಕ್ಷೇಪವನ್ನು ಹೇಗೆ ಅಪೇಕ್ಷಿಸುವುದೊ; ಹಾಗೆ ಋತುಸಮಯ-ದಲ್ಲಿ ಜನನೇಂದ್ರಿಯದ ಅಭಿಮಾನಿದೇವತೆಯಾದ ಪ್ರಜಾಪತಿಯು ವೀರ್ಯ-ನಿಷೇಕವನ್ನು ನಿರೀಕ್ಷಿಸುತ್ತಾನೆ.

೬. ಯಾವ ಮಾನವನು ಧರ್ಮಾತ್ಮನಾಗಿದ್ದರೂ ಋತು ಸಮಯವನ್ನು ಉಲ್ಲಂಘಿಸಿ ಕಾಮಸುಖದ ಅಭಿರುಚಿಯುಳ್ಳವನಾಗುವನೊ; ಅವನು ಪಿತೃಋಣದ ಭಾರದಿಂದ ಪಾಪವನ್ನು ಹೊಂದಿ ನರಕವನ್ನು ಸೇರುವನು.

ಏತಾದೇವ ತೇ ಪಾಪಂ ನಾನ್ಯತ್ಕಿಞ್ಚನ ವಿದ್ಯತೇ ।
ತದೇಹ್ಯಾಗಚ್ಛ ಪುಣ್ಯಾನಾಮುಪಭೋಗಾಯ ಪಾರ್ಥಿವ ॥೭॥

ಏತಚ್ಛ್ರುತ್ವಾ ತು ರಾಜರ್ಷಿಃ ಕೃಪಯಾ ಜನಕೋಽಬ್ರವೀತ್ ॥೮॥

ರಾಜೋವಾಚ :—

ಯಾಸ್ಯಾಮಿ ದೇವಾನುಚರ ಯತ್ರ ತ್ವಂ ಮಾಂ ನಯಿಷ್ಯಸಿ ।
ಕಿಞ್ಚಿತ್ಪೃಚ್ಛಾಮಿ ತನ್ಮೇ ತ್ವಂ ಯಥಾವದ್ವಕ್ತುಮರ್ಹಸಿ ॥೯॥

ವಜ್ರತುಣ್ಡಾಸ್ತ್ವಮೀ ಕಾಕಾಃ ಪುಂಸಾಂ ನಯನಹಾರಿಣಃ ।
ಪುನಃ ಪುನಶ್ಚ ನೇತ್ರಾಣಿ ತದ್ವದೇಷಾಂ ಭವನ್ತಿ ಹಿ ॥೧೦॥

---

೭. ರಾಜನೆ ! ನಿನ್ನಲ್ಲಿರುವ ಪಾತಕವು ಇದೊಂದೇ ಆಗಿದೆ. ಇನ್ನಾವ ಪಾಪವೂ ನಿನ್ನಲ್ಲಿ ಇರುವುದಿಲ್ಲ. ಆದುದರಿಂದ ಇನ್ನು ಮುಂದೆ ಇತ್ತ ಬಾ. ಪುಣ್ಯಫಲಗಳನ್ನು ಭುಂಜಿಸಲು ಈ ಕಡೆಗೆ ಬಾ.

೮. ವಿಪಶ್ಚಿತ್ ರಾಜರ್ಷಿಯು ಯಮದೂತನ ಈ ಮಾತನ್ನು ಕೇಳಿದನು. ಮತ್ತು ಸುತ್ತಲೂ ನರಕಯಾತನೆಯನ್ನು ಅನುಭವಿಸುತ್ತಿದ್ದ ಜಂತುಗಳನ್ನು ನೋಡುತ್ತ ಕನಿಕರದಿಂದ ಮತ್ತೆ ಹೀಗೆ ಹೇಳಿದನು.

ವಿಪಶ್ಚಿತ್‌ರಾಜನಿಂತೆಂದನು :—

೯. ಯಮದೇವನ ಅನುಚರನೆ ! ನೀನು ನನ್ನನ್ನು ಎಲ್ಲಿಗೆ ಕರೆದೊಯ್ಯುತ್ತೀಯೊ ; ನಾನು ಅಲ್ಲಿಗೆ ಬರುವೆನು. ಆದರೆ ಒಂದು ವಿಷಯವನ್ನು ಪ್ರಶ್ನಿಸುವೆನು. ನೀನು ಅದಕ್ಕೆ ಸಮಾಧಾನವನ್ನು ಹೇಳಲು ಅರ್ಹನಾಗಿದ್ದೀಯೆ.

೧೦. ಇಗೊ ! ಇಲ್ಲಿ ವಜ್ರಮಯವಾದ ಕೊಕ್ಕಿನಿಂದ ಕೂಡಿದ ಕಾಗೆಗಳು ಮಾನವರ ಕಣ್ಣುಗಳನ್ನು ಕೀಳುತ್ತಿವೆ. ಕಿತ್ತುಹಾಕಿದ ಅವರ ಕಣ್ಣುಗಳು ಮತ್ತೆ ಮತ್ತೆ ಹೊಸದಾಗಿ ಮೊದಲಿನಂತೆ ಹುಟ್ಟುತ್ತಿವೆ.

ಕಿಂ ಕರ್ಮ ಕೃತವನ್ತಶ್ಚ ಕಥಯೈತಜ್ಜುಗುಪ್ಸಿತಮ್ ।
ಹರನ್ತ್ಯೇಷಾಂ ತಥಾ ಜಿಹ್ವಾಂ ಜಾಯಮಾನಾಂ ಪುನರ್ನವಾಮ್ ॥೧೧॥

ಕರಪತ್ರೇಣ ಪಾಟ್ಯನ್ತೇ ಕಸ್ಮಾದೇತೇಽತಿದುಃಖಿತಾಃ ।
ಕರಮ್ಭವಾಲುಕಾಸ್ಥಾಶ್ಚ ತಥೈತೇ ಕ್ವಾಥತೈಲಗಾಃ ॥೧೨॥

ಅಯೋಮುಖೈಃ ಖಗೈಶ್ಚೈವ ಕೃಷ್ಯನ್ತೇ ಕಿಂವಿಧಾ ವದ ।
ವಿಶ್ಲಿಷ್ಟದೇಹಬನ್ಧಾರ್ತಿಮಹಾರಾವವಿರಾವಿಣಃ ॥೧೩॥

ಅಯಶ್ಚಞ್ಚುನಿಪಾತೇನ ಸರ್ವಾಙ್ಗಕ್ಷತವಿಕ್ಷತಾಃ ।
ಕಿಮೇತೇ ನಿಸ್ವನನ್ತ್ಯೋಽಪಿ ತುದ್ಯನ್ತೇಽಹರ್ನಿಶಂ ನರಾಃ ॥೧೪॥

---

೧೧. ಇವರು ಹಿಂದೆ ಯಾವ ಪಾಪಕರ್ಮವನ್ನು ಮಾಡಿರುವರು. ಜುಗುಪ್ಸೆಯನ್ನುಂಟುಮಾಡುವ ಆ ಪಾಪಕರ್ಮವನ್ನು ಹೇಳು. ಹಾಗು ಹೊಸಹೊಸದಾಗಿ ಹುಟ್ಟುತ್ತಿರುವ ಇವರ ನಾಲಿಗೆಯನ್ನು ಕತ್ತರಿಸುತ್ತಿವೆ.

೧೨. ಮತ್ತು ಇತ್ತ ಇವರು ಗರಗಸದಿಂದ ಕತ್ತರಿಸಲ್ಪಡುತ್ತ ಅತಿಯಾಗಿ ದುಃಖಪಡುತ್ತಿರುವರು. ಇವರು ಸುಡುತ್ತಿರುವ ಮರಳಿನಲ್ಲಿ ಇರುವರು. ಇವರು ಕುದಿಯುವ ಎಣ್ಣೆಯಲ್ಲಿ ಸುಳಿದಾಡುವರು. ಯಾವ ಪಾಪದಿಂದ ಇವರಿಗೆ ಈ ದುಃಖವು ಪ್ರಾಪ್ತಿಯಾಗಿದೆ ?

೧೩. ಮತ್ತು ದೇಹದ ಮರ್ಮ-ಸಂಧಿಸ್ಥಾನಗಳು ಕತ್ತರಿಸಿಹೋಗಿ ತಡೆಯಲಾರದ ಪೀಡೆಯಿಂದ ಗಟ್ಟಿಯಾಗಿ ಕೂಗಿಕೊಳ್ಳುವ ಹಾಗೆ ಇವರು ಲೋಹದ ಕೊಕ್ಕಿನ ಕಾಗೆಗಳಿಂದ ಸೆಳೆಯಲ್ಪಡುತ್ತಿರುವರು. ಇವರು ಯಾವ ಪಾತಕವನ್ನು ಮಾಡಿದವರು ? ಹೇಳು.

೧೪. ಲೋಹದ ಕೊಕ್ಕಿನಿಂದ ಚುಚ್ಚಿ ಕಡಿದು ಎಲ್ಲ ಅವಯವಗಳಲ್ಲಿಯೂ ಗಾಯಗಳಾಗಿ ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರೂ ಈ ಮಾನವರು ಹಗಲು ರಾತ್ರಿಯಲ್ಲೆಲ್ಲ ಪೀಡಿಸಲ್ಪಡುತ್ತಿರುವುದು ಏಕೆ ?

ಏತಾಶ್ಚಾನ್ಯಾಶ್ಚ ದೃಶ್ಯನ್ತೇ ಯಾತನಾಃ ಪಾಪಕರ್ಮಿಣಾಮ್ ।
ಯೇನ ಕರ್ಮವಿಪಾಕೇನ ತನ್ಮಮೋದ್ದೇಶತೋ ವದ ॥೧೫॥

ಯಮಕಿಙ್ಕರ ಉವಾಚ :—

ಯನ್ಮಾಂ ಪೃಚ್ಛಸಿ ಭೂಪಾಲ ಪಾಪಕರ್ಮಫಲೋದಯಮ್ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ಸಂಕ್ಷೇಪೇಣ ಯಥಾತಥಮ್ ॥೧೬॥

ಪುಣ್ಯಾಪುಣ್ಯೇ ಹಿ ಪುರುಷಃ ಪರ್ಯಾಯೇಣ ಸಮಶ್ನುತೇ ।
ಭುಞ್ಜತಶ್ಚ ಕ್ಷಯಂ ಯಾತಿ ಪಾಪಂ ಪುಣ್ಯಮಥಾಪಿ ವಾ ॥೧೭॥

ನ ತು ಭೋಗಾದೃತೇ ಪುಣ್ಯಂ ಪಾಪಂ ವಾ ಕರ್ಮ ಮಾನವಃ ।
ಪರಿತ್ಯಜತಿ ಭೋಗಾಚ್ಚ ಪುಣ್ಯಾಪುಣ್ಯೇ ನಿಬೋಧ ಮೇ ॥೧೮॥

---

೧೫. ಪಾಪಕರ್ಮಮಾಡಿದವರು ಅನುಭವಿಸುತ್ತಿರುವ ಈ ಎಲ್ಲ ಯಾತನೆಗಳೂ ಕಾಣಿಸುವುವು. ಯಾವ ಪಾಪಪರಿಪಾಕದಿಂದ ಯಾವ ಯಾತನೆಯು ಉಂಟಾಗುವುದೆಂಬುದನ್ನು ಕ್ರಮವಾಗಿ ಹೇಳು.

ಯಮಕಿಂಕರನು ಹೀಗೆಂದನು :—

೧೬. ಭೂಪತಿಯೆ! ಪಾಪಕರ್ಮಪರಿಪಾಕದಿಂದ ಲಭಿಸುವ ಫಲಭೋಗದ ವಿಷಯದಲ್ಲಿ ನೀನು ನನ್ನಲ್ಲಿ ಪ್ರಶ್ನಿಸಿದ್ದೀಯೆ. ಅದನ್ನು ನಾನು ನಿನಗೆ ಯಥಾವತ್ತಾಗಿ ಸಂಕ್ಷೇಪದಿಂದ ತಿಳಿಸುವೆನು.

೧೭. ಪುರುಷನು ಪುಣ್ಯ-ಪಾಪಗಳೆರಡನ್ನೂ ಕ್ರಮವಾಗಿ ಅನುಭವಿಸುತ್ತಾನೆ. ಅದರದರ ಫಲವನ್ನು ಭುಂಜಿಸಿದಹಾಗೆಲ್ಲ ಪಾಪವೊ, ಪುಣ್ಯವೊ, ಎರಡೂ ಕ್ಷಯಿಸಿಹೋಗುವುವು.

೧೮. ಮಾನವನು ಫಲವನ್ನು ಭುಂಜಿಸಿದ ಹೊರತು ಪುಣ್ಯ ಅಥವಾ ಪಾಪ ಯಾವ ಕರ್ಮವನ್ನೂ ಬಿಡಲಾರನು. ಫಲಭೋಗದಿಂದಲೇ ಕಳೆದುಕೊಳ್ಳಬೇಕಾದ ಪುಣ್ಯಪಾಪಗಳನ್ನು ನನ್ನಿಂದ ಕೇಳು.

ದುರ್ಭಿಕ್ಷಾದೇವ ದುರ್ಭಿಕ್ಷಂ ಕ್ಲೇಶಾತ್ಕ್ಲೇಶಂ ಭಯಾದ್ಭಯಮ್ ।
ಮೃತೇಭ್ಯಃ ಪ್ರಮೃತಾ ಯಾನ್ತಿ ದರಿದ್ರಾಃ ಪಾಪಕರ್ಮಿಣಃ ॥೧೯॥

ಗತಿಂ ನಾನಾವಿಧಾಂ ಯಾನ್ತಿ ಜನ್ತವಃ ಕರ್ಮಬನ್ಧನಾತ್ ।
ಉತ್ಸವಾದುತ್ಸವಂ ಯಾನ್ತಿ ಸ್ವರ್ಗಾತ್ಸ್ವರ್ಗಂ ಸುಖಾತ್ಸುಖಮ್ ॥೨೦॥

ಶ್ರದ್ದಧಾನಾಶ್ಚ ದಾನ್ತಾಶ್ಚ ಧನದಾಃ ಶುಭಕಾರಿಣಃ ॥೨೧॥

ವ್ಯಾಘ್ರಕುಞ್ಜರದುರ್ಗಾಣಿ ಸರ್ಪಚೌರಭಯಾನಿ ತು ।
ಹತಾಃ ಪಾಪೇನ ಗಚ್ಛನ್ತಿ ಪಾಪಿನಃ ಕಿಮತಃ ಪರಮ್ ॥೨೨॥

---

೧೯. ಪಾಪಿಗಳೂ ಮತ್ತು ದರಿದ್ರರೂ ಆದ ಮಾನವರು ದುರ್ಭಿಕ್ಷದ ಮುಂದೆ ಒಂದು ದುರ್ಭಿಕ್ಷವನ್ನೂ, ಕ್ಲೇಶದ ಮುಂದೆ ಕ್ಲೇಶವನ್ನೂ, ಭಯದ ಮುಂದೆ ಭಯವನ್ನೂ ಮತ್ತು ಮರಣದ ಮುಂದೆ ಮರಣವನ್ನೂ ಹೊಂದಿ ಸಾಗಿ-ಹೋಗುತ್ತಿರುವರು.

೨೦. ಜಂತುಗಳು ತಮ್ಮ ಕರ್ಮಬಂಧವನ್ನು ಅನುಸರಿಸಿ ಬಗೆ ಬಗೆಯ ಗತಿಯನ್ನು ಹೊಂದುವರು. ಉತ್ಸವದ ಮುಂದೆ ಉತ್ಸವವನ್ನೂ ಸ್ವರ್ಗದ ಮುಂದೆ ಸ್ವರ್ಗವನ್ನೂ ಮತ್ತು ಸುಖದ ಮುಂದೆ ಮತ್ತೊಂದು ಸುಖವನ್ನೂ ಅನುಭವಿಸು-ವುದುಂಟು.

೨೧. ಕರ್ಮಶ್ರದ್ಧೆಯುಳ್ಳವರೂ, ಚಾಪಲದಿಂದ ನಿಗ್ರಹಿಸಿದ ಇಂದ್ರಿಯ-ವುಳ್ಳವರೂ, ದಾನ-ಧರ್ಮವನ್ನು ಮಾಡಿದವರೂ ಮತ್ತು ಅನೇಕ ಬಗೆಯ ಕಲ್ಯಾಣಕರ್ಮವನ್ನು ಮಾಡಿದವರೂ ಸುಖಪರಂಪರೆಗಳನ್ನು ಹೊಂದುವರು.

೨೨. ಪಾಪಕರ್ಮದಿಂದ ಬದ್ಧರಾದವರು ಹುಲಿ-ಆನೆಗಳಿಂದ ಆಗುವ ದುರ್ಗಸಂಕಟಗಳನ್ನೂ, ಹಾವು-ಕಳ್ಳಕಾಕರ ಭಯವನ್ನೂ ಹೊಂದುವರು. ಇದಕ್ಕೂ ಹೆಚ್ಚು ಹೇಳುವುದೇನು.

ಸುಗನ್ಧಿಮಾಲ್ಯಸದ್ವಸ್ತ್ರಸಾಧುಯಾನಾಸನಾಶನಾಃ ।
ಸ್ತೂಯಮಾನಾಃ ಸದಾ ಯಾನ್ತಿ ಪುಣ್ಯೈಃ ಪುಣ್ಯಾಟವೀಷ್ವಪಿ ॥೨೩॥

ಅನೇಕಶತಸಾಹಸ್ರಜನ್ಮಸಙ್ಖ್ಯಾಸಞ್ಚಿತಮ್ ।
ಪುಣ್ಯಾಪುಣ್ಯಂ ನೃಣಾಂ ತದ್ವತ್ಸುಖದುಃಖಾಙ್ಕುರೋದ್ಭವಮ್ ॥೨೪॥

ಯಥಾ ಬೀಜಂ ಹಿ ಭೂಪಾಲ ಪಯಾಂಸಿ ಸಮವೇಕ್ಷತೇ ।
ಪುಣ್ಯಾಪುಣ್ಯೇ ತಥಾ ಕಾಲದೇಶಾನ್ಯಕರ್ಮಕಾರಕಮ್ ॥೨೫॥

ಸ್ವಲ್ಪಂ ಪಾಪಂ ಕೃತಂ ಪುಂಸಾಂ ದೇಶಕಾಲೋಪಪಾದಿತಮ್ ।
ಪಾದನ್ಯಾಸಕೃತಂ ದುಃಖಂ ಕಣ್ಟಕೋತ್ಥಂ ಪ್ರಯಚ್ಛತಿ ॥೨೬॥

---

೨೩. ಹಾಗೆಯೇ ಪುಣ್ಯವಂತರು ಸುವಾಸನೆಯುಳ್ಳ ಪುಷ್ಪಮಾಲ್ಯ, ಅಮೂಲ್ಯವಸ್ತ್ರ, ಉತ್ತಮವಾದ ಯಾನ-ಶಯನ-ಆಸನ-ಭೋಜನವುಳ್ಳವರೂ, ಸ್ತುತಿಸಲ್ಪಡುವವರೂ ಆಗಿ ಪುಣ್ಯಬಲದಿಂದ ಯಾವಾಗಲೂ ಪುಣ್ಯಾಟವಿಗಳಲ್ಲಿ ಸಂಚರಿಸುವರು.

೨೪. ಹಿಂದೆ ಕಳೆದ ನೂರಾರು-ಸಾವಿರಾರು ಜನ್ಮರಾಶಿಗಳಲ್ಲಿ ಆಚರಿಸಿ ಕೂಡಿಹಾಕಿರುವ ಪುಣ್ಯಪಾಪಕರ್ಮಗಳು ಮಾನವರಿಗೆ ಎಂದೋ ಸುಖ-ದುಃಖ-ಗಳೆಂಬ ಅಂಕುರಗಳು ಹುಟ್ಟಲು ಕಾರಣಗಳಾಗುವುವು.

೨೫. ರಾಜನೆ! ಬೀಜವು ಮೊಳಕೆಯನ್ನು ಬಿಡಲು ನೀರನ್ನು ಹೇಗೆ ಅಪೇಕ್ಷಿಸುವುದೊ; ಹಾಗೆ ಪುಣ್ಯ-ಅಪುಣ್ಯಗಳು ಫಲಾಂಕುರವನ್ನು ತೋರ್ಪಡಿ-ಸಲು ಉಚಿತವಾದ ಕಾಲ-ದೇಶ-ಕರ್ಮಾಂತರ ಮತ್ತು ಸಾಧನಗಳನ್ನು ಅಪೇಕ್ಷಿ-ಸುವುವು.

೨೬. ಮಾನವರು ಮಾಡಿರುವ ಸ್ವಲ್ಪ ಮಾತ್ರ ಪಾಪವು ದೇಶ-ಕಾಲ-ಇತರ ಸಹಾಯಗಳಿಂದ ಸೇರಿಕೊಂಡು ಹೆಜ್ಜೆಯನ್ನಿಡುವಾಗ ಮುಳ್ಳುಚುಚ್ಚಿದ ದುಃಖವನ್ನು ಕೊಡುವುದು.

ತತ್ಪ್ರಭೂತತರಂ ಸ್ಥೂಲಶಙ್ಕುಕೀಲಕಸಮ್ಭವಮ್ ।
ದುಃಖಂ ಯಚ್ಛತಿ ತದ್ವಚ್ಚ ಶಿರೋರೋಗಾದಿ ದುಸ್ಸಹಮ್ ॥೨೭॥

ಅಪಥ್ಯಾಶನಶೀತೋಷ್ಣಶ್ರಮತಾಪಾದಿಕಾರಕಮ್ ।
ತಥಾನ್ಯೋನ್ಯಮಪೇಕ್ಷನ್ತೇ ಪಾಪಾನಿ ಫಲಸಙ್ಗಮೇ ॥೨೮॥

ಏವಂ ಮಹಾನ್ತಿ ಪಾಪಾನಿ ದೀರ್ಘರೋಗಾದಿಕಾಃ ಕ್ರಿಯಾಃ ।
ತದ್ವಚ್ಛಸ್ತ್ರಾಗ್ನಿಕೃಚ್ಛ್ರಾರ್ತಿಬನ್ಧನಾದಿಫಲಾಯ ವೈ ॥೨೯॥

ಸ್ವಲ್ಪಂ ಪುಣ್ಯಂ ಶುಭಂ ಗನ್ಧಂ ಹೇಲಯಾ ಸಮ್ಪ್ರಯಚ್ಛತಿ ।
ಸ್ಪರ್ಶಂ ವಾಪ್ಯಥವಾ ಶಬ್ದಂ ರಸಂ ರೂಪಮಥಾಪಿ ವಾ ॥೩೦॥

ಚಿರಾದ್ಗುರುತರಂ ತದ್ವನ್ಮಹಾನ್ತಮಪಿ ಕಾಲಜಮ್ ॥೩೧॥

---

೨೭. ಆ ಪಾಪವು ಬಲು ದೊಡ್ಡದಾದರೆ ಆಣಿ, ಮೊಳೆ, ಗೂಟ ಮುಂತಾದುವುಗಳು ತಗುಲಿ ಹೆಚ್ಚು ದುಃಖವನ್ನೂ, ಅದರಂತೆ ಸಹಿಸಲಾಗದ ಶಿರೋವೇದನೆ ಮುಂತಾದ ಪೀಡೆಯನ್ನೂ ಕೊಡುವುದು.

೨೮. ಪಾಪಗಳು ತಮ್ಮ ಫಲಭೋಗವನ್ನು ಕೊಡಲು ಅಪಥ್ಯಭೋಜನ, ಶೀತ-ಉಷ್ಣ ಸಮಯ, ಶ್ರಮ, ತಾಪ ಮುಂತಾದ ಇತರ ಸಹಾಯ ಸಂಪತ್ತಿಯನ್ನು ಅನ್ಯೋನ್ಯವಾಗಿ ಅಪೇಕ್ಷಿಸುತ್ತವೆ.

೨೯. ಹೀಗೆಯೇ ಮಹತ್ತಾದ ಪಾಪಗಳು ದೀರ್ಘಕಾಲ ಅನುಭವಿಸಬೇಕಾದ ರೋಗ ಮುಂತಾದ ವಿಕಾರಗಳನ್ನೂ, ಶಸ್ತ್ರ-ಅಗ್ನಿ ಇವುಗಳ ಕಷ್ಟ-ಪೀಡೆಗಳನ್ನೂ, ಮತ್ತು ಬಂಧನ ಮುಂತಾದ ವಿಪತ್ತುಗಳನ್ನೂ ಕೊಡುತ್ತವೆ.

೩೦. ಸ್ವಲ್ಪಮಾತ್ರವಾದ ಪುಣ್ಯವು ಸುಗಂಧ, ಉತ್ತಮವಾದ ಸ್ಪರ್ಶ, ಇಂಪಾದ ಶಬ್ದ, ಹಾಗು ಮಧುರವಾದ ರಸ ಇವೇ ಮೊದಲಾದ ವಿಷಯಗಳ ಭೋಗವನ್ನು ಅನಾಯಾಸವಾಗಿ ಕೊಡುವುದು.

೩೧. ದೀರ್ಘಕಾಲದವರೆಗೆ ಆಚರಿಸಿದ ಗುರುತರವಾದ ಪುಣ್ಯಕರ್ಮವು ಅದಕ್ಕೆ ತಕ್ಕಂತೆ ದೊಡ್ಡದಾದ ಮತ್ತು ಬಹುಕಾಲ ಅನುಭವಿಸಬಹುದಾದ ವಿಷಯಭೋಗವನ್ನು ಕೊಡುವುದು.

ಏವಂ ಚ ಸುಖದುಃಖಾನಿ ಪುಣ್ಯಾಪುಣ್ಯೋದ್ಭವಾನಿ ವೈ ।
ಭುಞ್ಜಾನೋಽನೇಕಸಂಸಾರಸಮ್ಭವಾನೀಹ ತಿಷ್ಠತಿ ॥೩೨॥

ಜಾತಿದೇಶಾವರುದ್ಧಾನಿ ಜ್ಞಾನಾಜ್ಞಾನಫಲಾನಿ ಚ ।
ತಿಷ್ಠನ್ತಿ ತತ್ರ ಪೃಕ್ತಾನಿ ಲಿಙ್ಗಮಾತ್ರೇಣ ಚಾತ್ಮನಿ ॥೩೩॥

ಕರ್ಮಣಾ ಮನಸಾ ವಾಚಾ ನ ಕದಾಚಿತ್ಕ್ವಚಿನ್ನರಃ ।
ಅಕುರ್ವನ್ಪಾಪಕಂ ಕರ್ಮ ಪುಣ್ಯಂ ವಾಪ್ಯವತಿಷ್ಠತೇ ॥೩೪॥

ಯದ್ಯತ್ಪ್ರಾಪ್ನೋತಿ ಪುರುಷಃ ಸುಖಂ ದುಃಖಮಥಾಪಿ ವಾ ।
ಪ್ರಭೂತಮಥವಾ ಸ್ವಲ್ಪಂ ವಿಕ್ರಿಯಾಕಾರಿ ಚೇತಸಃ ॥೩೫॥

ತಾವತಾ ತಸ್ಯ ಪುಣ್ಯಂ ವಾ ಪಾಪಂ ವಾಪ್ಯಥ ಚೇತರತ್ ।
ಉಪಭೋಗಾತ್ಕ್ಷಯಂ ಯಾತಿ ಭುಜ್ಯಮಾನಮಿವಾಶನಮ್ ॥೩೬॥

---

೩೨. ಹೀಗೆ ಮಾನವನು ಅನೇಕ ಸಂಸಾರಗಳಲ್ಲಿ ಒದಗುವ, ಪುಣ್ಯ-ಪಾಪ ಕರ್ಮಗಳಿಂದ ಹುಟ್ಟುವ ಸುಖ-ದುಃಖ ಪರಂಪರೆಗಳನ್ನು ಭುಂಜಿಸುತ್ತ ಇರುವನು.

೩೩. ಜ್ಞಾನ-ಅಜ್ಞಾನಗಳನ್ನು ತಾರತಮ್ಯದಿಂದ ಹುಟ್ಟಿಸುವ ಪುಣ್ಯಪಾಪಕರ್ಮಗಳು ವಿರುದ್ಧವಾದ ದೇಶ-ಜಾತಿ ಮುಂತಾದುವುಗಳಿಂದ ತಡೆಯಲ್ಪಟ್ಟು ಫಲೋನ್ಮುಖವಾಗದೆ ಆತ್ಮನಲ್ಲಿ ಸೂಕ್ಷ್ಮರೂಪದಿಂದ ಇರುತ್ತವೆ.

೩೪. ಯಾವ ಮಾನವನಾದರೂ ಕರ್ಮ-ಮನಸ್ಸು ಮತ್ತು ವಾಗಿಂದ್ರಿಯ ಎಂಬ ತ್ರಿಕರಣಗಳಿಂದ ಪುಣ್ಯವನ್ನಾಗಲಿ, ಪಾಪವನ್ನಾಗಲಿ ಮಾಡದೆ ಯಾವಾಗಲೂ ಇರುವುದಿಲ್ಲ.

೩೫. ಪುರುಷನು ಹೆಚ್ಚು ಅಥವಾ ಕಡಿಮೆಯಾಗಿರುವ ಸುಖ ಅಥವಾ ದುಃಖ ಇವುಗಳಲ್ಲಿ ಯಾವುಯಾವುದನ್ನು ಹೊಂದುವನೊ ಅದು ತನಗೆ ಅನುರೂಪವಾದ ವಿಕಾರವನ್ನು ಮನಸ್ಸಿನಲ್ಲಿ ಹುಟ್ಟಿಸುವುದು.

೩೬. ಮನಸ್ಸಿನಲ್ಲಿ ಉಂಟಾಗುವ ಪರಿಣಾಮದಿಂದ ಉಪಭುಂಜಿಸಿದಂತಾಗಿ ಮಾನವನಲ್ಲಿ ಪುಣ್ಯ-ಪಾಪಗಳು ಯಾವುದಿದ್ದರೂ ತಿನ್ನುತ್ತಿದ್ದ ಆಹಾರದಂತೆ ಕ್ರಮವಾಗಿ ಕ್ಷಯಿಸಿ ಹೋಗುವುವು.

ಏವಮೇತೇ ಮಹಾಪಾಪಂ ಯಾತನಾಭಿರಹರ್ನಿಶಮ್ ।
ಕ್ಷಪಯನ್ತಿ ನರಾ ಘೋರಂ ನರಕಾನ್ತವಿವರ್ತಿನಃ ॥೩೭॥

ತಥೈವ ರಾಜನ್ಪುಣ್ಯಾನಿ ಸ್ವರ್ಗಲೋಕೇಽಮರೈಃ ಸಹ ।
ಗನ್ಧರ್ವಸಿದ್ಧಾಪ್ಸರಸಾಂ ಗೀತಾದ್ಯೈರುಪಭುಞ್ಜತೇ ॥೩೮॥

ದೇವತ್ವೇ ಮಾನುಷತ್ವೇ ಚ ತಿರ್ಯಕ್ತ್ವೇ ಚ ಶುಭಾಶುಭಮ್ ।
ಪುಣ್ಯಪಾಪೋದ್ಭವಂ ಭುಙ್ಕ್ತೇ ಸುಖದುಃಖೋಪಲಕ್ಷಣಮ್ ॥೩೯॥

ಯತ್ತ್ವಂ ಪೃಚ್ಛಸಿ ಮಾಂ ರಾಜನ್ ಯಾತನಾಃ ಪಾಪಕರ್ಮಿಣಾಮ್ ।
ಕೇನ ಕೇನೇತಿ ಪಾಪೇನ ತತ್ತೇ ವಕ್ಷ್ಯಾಮ್ಯಶೇಷತಃ ॥೪೦॥

ದುಷ್ಟೇನ ಚಕ್ಷುಷಾ ದೃಷ್ಟಾಃ ಪರದಾರಾ ನರಾಧಮೈಃ ।
ಮಾನಸೇನ ಚ ದುಷ್ಟೇನ ಪರದ್ರವ್ಯಂ ಚ ಸಸ್ಪೃಹೈಃ ॥೪೧॥

---

೩೭. ನರಕದ ನಡುವೆ ಬಿದ್ದಿರುವ ಈ ಮಾನವರು ಈ ರೀತಿಯಾದ ಯಾತನೆಗಳ ಭೋಗದಿಂದ ತಾವು ಮಾಡಿದ ಘೋರ ಮಹಾಪಾತಕವನ್ನು ಕಳೆದು-ಕೊಳ್ಳುತ್ತಿರುವರು.

೩೮. ಎಲೈ ರಾಜನೆ! ಹಾಗೆಯೆ ಪುಣ್ಯವಂತರು ಸ್ವರ್ಗಲೋಕದಲ್ಲಿ ದೇವತೆಗಳ ಜೊತೆಗೆ ಗಂಧರ್ವ-ಸಿದ್ಧ-ಅಪ್ಸರಸ್ತ್ರೀಯರ ಗೀತ-ನೃತ್ಯಾದಿಗಳನ್ನು ಭುಂಜಿಸಿ ಪುಣ್ಯವನ್ನು ಕಳೆದುಕೊಳ್ಳುವರು.

೩೯. ದೇವಜನ್ಮ, ಮನುಷ್ಯಜನ್ಮ ಅಥವಾ ಮೂಕಪ್ರಾಣಿಜನ್ಮ ಇವು-ಗಳಲ್ಲಿ ಪುಣ್ಯಪಾಪಕರ್ಮಗಳಿಂದ ಹುಟ್ಟುವ ಸುಖ-ದುಃಖಗಳನ್ನು ಸೂಚಿಸುವ ಶುಭ-ಅಶುಭಗಳನ್ನು ಅನುಭವಿಸುವರು.

೪೦. ರಾಜನೆ! ಪಾಪಿಗಳು ಅನುಭವಿಸುವ ಯಾತನೆಗಳಲ್ಲಿ ಯಾವ ಯಾವ ಪಾಪದಿಂದ ಏನೇನು ಯಾತನೆಯುಂಟಾಗುವುದೆಂಬುದನ್ನು ನೀನು ನನ್ನಲ್ಲಿ ಪ್ರಶ್ನಿಸಿದ್ದೇಯೆ. ಅದನ್ನು ಸಮಗ್ರವಾಗಿ ನಿನಗೆ ಹೇಳುವೆನು.

೪೧. ನರಾಧಮರು ಪರಸ್ತ್ರೀಯರನ್ನು ದುಷ್ಟವಾದ ಕಣ್ಣಿನಿಂದಲೂ ದುಷ್ಟಭಾವನೆಯುಳ್ಳ ಮನಸ್ಸಿನಿಂದಲೂ ನೋಡುವರು. ಮತ್ತು ಹಾಗೆಯೆ ಪರದ್ರವ್ಯದಲ್ಲಿ ಆಶೆಯಿಡುವರು.

ವಜ್ರತುಣ್ಡಾಃ ಖಗಾಸ್ತೇಷಾಂ ಹರನ್ತ್ಯೇತೇ ವಿಲೋಚನೇ ।
ಪುನಃ ಪುನಶ್ಚ ಸಮ್ಭೂತಿರಕ್ಷ್ಣೋರೇಷಾಂ ಭವತ್ಯಥ ॥೪೨॥

ಯಾವತೋಽಕ್ಷಿನಿಮೇಷಾಸ್ತು ಪಾಪಮೇಭಿರ್ನೃಭಿಃ ಕೃತಮ್ ।
ತಾವದ್ವರ್ಷಸಹಸ್ರಾಣಿ ನೇತ್ರಾರ್ತಿಂ ಪ್ರಾಪ್ನುವನ್ತ್ಯುತ ॥೪೩॥

ಅಸಚ್ಛಾಸ್ತ್ರೋಪದೇಶಾಸ್ತು ಯೈರ್ದತ್ತಾ ಯೈಶ್ಚ ಮನ್ತ್ರಿತಾಃ ।
ಸಮ್ಯಗ್ದೃಷ್ಟೇರ್ವಿನಾಶಾಯ ರಿಪೂಣಾಮಪಿ ಮಾನವೈಃ ॥೪೪॥

ಯೈಃ ಶಾಸ್ತ್ರಮನ್ಯಥಾ ಪ್ರೋಕ್ತಂ ಯೈರಸದ್ವಾಗುದಾಹೃತಾ ।
ವೇದದೇವದ್ವಿಜಾತೀನಾಂ ಗುರೋರ್ನಿನ್ದಾ ಚ ಯೈಃ ಕೃತಾ ॥೪೫॥

---

೪೨. ಅಂತಹ ಪಾಪಿಗಳ ಕಣ್ಣುಗಳನ್ನು ಈ ವಜ್ರದ ಕೊಕ್ಕಿನಿಂದ ಕೂಡಿದ ಪಕ್ಷಿಗಳು ಕಿತ್ತು ಹಾಕುತ್ತಿವೆ. ಆ ಪಾಪಿಗಳಿಗೆ ಕಿತ್ತುಹಾಕಿದ ಕಣ್ಣುಗಳು ಮೊದಲಿನಂತೆ ಹುಟ್ಟಿಕೊಳ್ಳುವುವು.

೪೩. ಆ ಪಾಪಿಗಳು ಎಷ್ಟುಸಲ ರಪ್ಪೆಗಳನ್ನು ಹೊಡೆಯುವ ವರೆಗೆ ದುಷ್ಟಭಾವನೆಯಿಂದ ಪಾಪವನ್ನು ಮಾಡುವರೊ, ಅಷ್ಟು ಸಹಸ್ರ ವರ್ಷಗಳ ವರೆಗೆ ನೇತ್ರಪೀಡೆಯನ್ನು ಅನುಭವಿಸುವರು.

೪೪. ಯಾವ ಮಾನವರು ಶತ್ರುಜನಗಳಿಗಾದರೂ ಅಸಚ್ಛಾಸ್ತ್ರದ ಉಪದೇಶವನ್ನು ಕೊಡುವರೊ, ಮತ್ತು ಅಸಾಧುರೀತಿಯಲ್ಲಿ ಸಲಹೆ ನೀಡುವರೊ, ಆ ಪಾಪಿಗಳಿಗೆ ಈ ಬಗೆಯಿಂದ ದೃಷ್ಟಿನಾಶವಾಗುವುದು.

೪೫. ಯಾರಿಂದ ಶಾಸ್ತ್ರಾರ್ಥವು ಬೇರೆ ವಿಧವಾಗಿ ವಿವರಿಸಲ್ಪಡು-ವುದೊ, ಯಾರಿಂದ ಅಸತ್ಯವಾದ ಮಾತು ನುಡಿಯಲ್ಪಡುವುದೊ, ಯಾರಿಂದ ವೇದ-ದೇವ-ದ್ವಿಜ ಮುಂತಾದವರ ನಿಂದೆಯು ಮಾಡಲ್ಪಡುವುದೊ, ಅವರಿಗೆ ಜಿಹ್ವಾಚ್ಛೇದಯಾತನೆಯು ಉಂಟಾಗುವುದು.

ಹರನ್ತಿ ತೇಷಾಂ ಜಿಹ್ವಾಶ್ಚ ಜಾಯಮಾನಾಃ ಪುನಃ ಪುನಃ ।
ತಾವತೋ ವತ್ಸರಾನೇತೇ ವಜ್ರತುಣ್ಡಾಃ ಸುದಾರುಣಾಃ ॥೪೬॥

ಮಿತ್ರಭೇದಂ ತಥಾ ಪಿತ್ರಾ ಪುತ್ರಸ್ಯ ಸ್ವಜನಸ್ಯ ಚ ।
ಯಜ್ವೋಪಾಧ್ಯಾಯಯೋರ್ಮಾತ್ರಾ ಸುತಸ್ಯ ಸಹಚಾರಿಣಃ ॥೪೭॥

ಭಾರ್ಯಾಪತ್ಯೋಶ್ಚ ಯೇ ಕೇಚಿದ್ಭೇದಂ ಚಕ್ರುರ್ನರಾಧಮಾಃ ।
ತ ಇಮೇ ಪಶ್ಯ ಪಾಟ್ಯನ್ತೇ ಕರಪತ್ರೇಣ ಪಾರ್ಥಿವ ॥೪೮॥

ಪರೋಪತಾಪಕಾ ಯೇ ಚ ಯೇ ಚಾಹ್ಲಾದನಿಷೇಧಕಾಃ ।
ತಾಲವೃನ್ತಾನಿಲಸ್ಥಾನಚನ್ದನೋಶೀರಹಾರಿಣಃ ॥೪೯॥

---

೪೬. ಅಂತಹ ಪಾತಕಿಗಳ ನಾಲಿಗೆಗಳನ್ನು ಮತ್ತೆ ಮತ್ತೆ ಹುಟ್ಟಿದ-ಹಾಗೆಲ್ಲ ಈ ಭಯಂಕರವಾದ ವಜ್ರತುಂಡ ಪಕ್ಷಿಗಳು ಸಹಸ್ರಾರು ವರ್ಷಗಳವರೆಗೆ ಕಿತ್ತುಹಾಕುವುವು.

೪೭. ಮಿತ್ರರಲ್ಲಿ ಪರಸ್ಪರ ಭೇದವನ್ನೂ, ತಂದೆ-ಮಕ್ಕಳಲ್ಲಿ ವೈಷಮ್ಯ-ವನ್ನೂ, ಸ್ವಜನರಲ್ಲಿ ಅನ್ಯೋನ್ಯ ಅವಿಶ್ವಾಸವನ್ನೂ, ಗೃಹಸ್ಥ-ಪುರೋಹಿತರಲ್ಲಿ ವೈಮನಸ್ಯವನ್ನೂ ತಾಯಿ-ಮಕ್ಕಳಲ್ಲಿ ದ್ವೇಷವನ್ನೂ ಮತ್ತು ಸಹಚರರಲ್ಲಿ ಭೇದಬುದ್ಧಿಯನ್ನೂ ಉಂಟುಮಾಡುವುದು ಪಾತಕವು.

೪೮- ರಾಜನೆ! ಹಾಗೆ ಗಂಡ ಹೆಂಡಿರಲ್ಲಿ ಅನ್ಯೋನ್ಯಭೇದವನ್ನು ಕಲ್ಪಿಸುವುದು ಪಾತಕವು. ಅಂತಹ ಪಾತಕವನ್ನುಮಾಡಿದ ಈ ನರಾಧಮರು ಗರಗಸದಿಂದ ಕುಯ್ಯಲ್ಪಡುತ್ತಿರುವುದನ್ನು ನೋಡು.

೪೯. ಮತ್ತು ಪರರಿಗೆ ತಾಪವನ್ನು ಕೊಡುವವರೂ, ಸುಖಭೋಗವನ್ನು ತಡೆಯುವವರೂ ಹಾಗು ಬೀಸಣಿಗೆ, ಒಳ್ಳೇ ಗಾಳಿಯ ಪ್ರದೇಶ, ಚಂದನ, ಲಾವಂಚ—ಮುಂತಾದ ಶೈತ್ಯಾನುಭವ ಸಾಮಗ್ರಿಯನ್ನು ಅಪಹರಿಸಿದವರೂ ಪಾತಕಿಗಳಾಗುವರು.

ಪ್ರಾಣಾನ್ತಿಕಂ ದದುಸ್ತಾಪಮುದುಷ್ಟಾನಾಂ ಚ ಯೇಽಧಮಾಃ ।
ಕರಮ್ಭವಾಲುಕಾಸಂಸ್ಥಾಸ್ತ ಇಮೇ ಪಾಪಭಾಗಿನಃ ॥೫೦॥

ಭುಙ್ಕ್ತೇ ಶ್ರಾದ್ಧಂ ತು ಯೋಽನ್ಯಸ್ಯ ನರೋಽನ್ಯೇನ ನಿಮನ್ತ್ರಿತಃ ।
ದೈವೇ ವಾಪ್ಯಥವಾ ಪೈತ್ರ್ಯೇ ಸ ದ್ವಿಧಾ ಕೃಷ್ಯತೇ ಖಗೈಃ ॥೫೧॥

ಮರ್ಮಾಣಿ ಯಸ್ತು ಸಾಧೂನಾಮಸದ್ವಾಗ್ಭಿರ್ನಿಕೃನ್ತತಿ ।
ತಮಿಮೇ ತುದಮಾನಾಸ್ತು ಖಗಾಸ್ತಿಷ್ಠನ್ತ್ಯವಾರಿತಾಃ ॥೫೨॥

ಯಃ ಕರೋತಿ ಚ ಪೈಶುನ್ಯಮನ್ಯವಾಗನ್ಯಥಾಮತಿಃ ।
ಪಾಟ್ಯತೇ ಹಿ ದ್ವಿಧಾ ಜಿಹ್ವಾ ತಸ್ಯೇತ್ಥಂ ನಿಶಿತೈಃ ಕ್ಷುರೈಃ ॥೫೩॥

---

೫೦. ಯಾವ ಅಧಮರು ಪರರಿಗೆ ಪ್ರಾಣಾಪಾಯವಾಗುವಂತಹ ಕ್ಲೇಶವನ್ನು ಕೊಡುವರೊ ; ಅಂತಹ ಈ ಪಾಪಿಗಳು ಸುಡುತ್ತಿರುವ ಮರಳಿನರಾಶಿಯಲ್ಲಿ ನಿಂತು ದುಃಖಪಡುತ್ತಿರುವರು.

೫೧. ಒಬ್ಬನಿಂದ ಶ್ರಾದ್ಧಭೋಜನಕ್ಕೆ ನಿಮಂತ್ರಣವನ್ನು ಹೊಂದಿದ್ದು ಅದನ್ನು ಉಲ್ಲಂಘಿಸಿ ಬೇರೊಂದು ಶ್ರಾದ್ಧಾನ್ನವನ್ನು ದೈವ ಅಥವ ಪಿತೃಸ್ಥಾನಗಳಲ್ಲಿ ಕುಳಿತು ಭುಂಜಿಸುವ ಪಾಪಿಯು ಈ ಕ್ರೂರಪಕ್ಷಿಗಳಿಂದ ಎರಡುಕಡೆಗೆ ಎಳೆಯಲ್ಪಡುವನು.

೫೨. ಯಾವ ನರನು ಕೆಟ್ಟಮಾತುಗಳಿಂದ ಸಾಧುಗಳ ಮರ್ಮಸ್ಥಾನಗಳನ್ನು ಭೇದಿಸುವನೊ ಅಂತಹ ಪಾಪಿಯನ್ನು ಈ ಪಕ್ಷಿಗಳು ತಡೆಯಿಲ್ಲದ ಹಾಗೆ ಪೀಡಿಸುತ್ತಿವೆ.

೫೩. ಯಾವ ಮಾನವನು ತಾನು ಪರಮಾರ್ಥವಾಗಿ ತಿಳಿದಿರುವುದಕ್ಕೆ ವಿರೋಧವಾಗಿ ಮಾತನಾಡಿ ಚಾಡಿಯನ್ನು ಹೇಳುವನೊ; ಆ ಪಾಪಿಯ ನಾಲಿಗೆಯು ಹೀಗೆ ಹರಿತವಾದ ಕತ್ತಿಗಳಿಂದ ಎರಡು ಭಾಗವಾಗಿ ಸೀಳಲ್ಪಡುವುದು.

ಮಾತಾಪಿತ್ರೋರ್ಗುರೂಣಾಂ ಚ ಯೇಽವಜ್ಞಾಂ ಚಕ್ರುರುದ್ಧತಾಃ ।
ತ ಇಮೇ ಪೂಯವಿಣ್ಮೂತ್ರಗರ್ತೇ ಮಜ್ಜನ್ತ್ಯಧೋಮುಖಾಃ ॥೫೪॥

ದೇವತಾತಿಥಿಭೂತೇಷು ಭೃತ್ಯೇಷ್ವಭ್ಯಾಗತೇಷು ಚ ।
ಅಭುಕ್ತವತ್ಸು ಯೇಽಶ್ನನ್ತಿ ತದ್ವತ್ಪಿತ್ರಗ್ನಿಪಕ್ಷಿಷು ॥೫೫॥

ದುಷ್ಟಾಸ್ತೇ ಪೂಯನಿರ್ಯಾಸಭುಜಃ ಸೂಚೀಮುಖಾಸ್ತು ತೇ ।
ಜಾಯನ್ತೇ ಗಿರಿವರ್ಷ್ಮಾಣಃ ಪಶ್ಯೈತೇ ಯಾದೃಶಾ ನರಾಃ ॥೫೬॥

ಏಕಪಙ್ಕ್ತ್ಯಾಂ ತು ಯೇ ವಿಪ್ರಮಥವೇತರವರ್ಣಜಮ್ ।
ವಿಷಮಂ ಭೋಜಯನ್ತೀಹ ವಿಡ್ಭುಜಸ್ತ ಇಮೇ ಯಥಾ ॥೫೭॥

---

೫೪. ಯಾರು ಅಹಂಕಾರದಿಂದ ಮದಿಸಿ ಮಾತಾ-ಪಿತೃಗಳಿಗೂ ಮತ್ತು ಗುರುಗಳಿಗೂ ಅವಮಾನವನ್ನು ಮಾಡುವರೊ; ಅಂತಹ ಪಾಪಿಗಳು ಹೀಗೆ ಕೀವು-ಮಲ-ಮೂತ್ರಗಳಿಂದ ತುಂಬಿರುವ ಹಳ್ಳದಲ್ಲಿ ಅಧೋಮುಖರಾಗಿ ಮುಳು-ಗುವರು.

೫೫. ಯಾವ ಮಾನವರು ಪಂಚ ಮಹಾಯಜ್ಞಗಳನ್ನು ಆಚರಿಸದೇ ದೇವತಾ-ಅಗ್ನಿ-ಪಿತೃ-ಭೂತ-ಅತಿಥಿ- ಅಭ್ಯಾಗತ ಮತ್ತು ಭೃತ್ಯಜನ—ಇವರು ಭುಂಜಿಸದೆ ಇರುವಾಗ ತಾವು ಮಾತ್ರ ಭುಂಜಿಸುವರೊ; ಅವರು ಪಾಪಭಾಗಿ-ಗಳಾಗುವರು.

೫೬. ಅಂತಹ ಪಾಪಿಗಳು ಎದುರಿಗೆ ಕಾಣಿಸುತ್ತಿದ್ದ ಪಾಪಿಜನರಂತೆ ಸೂಜಿಯಂತಿರುವ ಮುಖವುಳ್ಳವರೂ ಬೆಟ್ಟದಂತೆ ಹೊಟ್ಟೆಯುಳ್ಳವರೂ ಆಗಿ ಜನಿಸಿ ಕೀವಿನ ಸ್ರಾವವನ್ನು ಭುಂಜಿಸುವವರಾಗುತ್ತಾರೆ. ಅಂತಹ ಪಾಪಿಗಳನ್ನು ಇತ್ತ ನೋಡು.

೫೭. ಒಂದು ಸಾಲಿನಲ್ಲಿ ಭೋಜನಕ್ಕೆ ಕುಳಿತುಕೊಂಡವರಲ್ಲಿ ವಿಪ್ರನನ್ನೋ ಅಥವಾ ಇತರ ವರ್ಣದವನನ್ನೋ ಉತ್ತಮ-ಅಧಮಭಾವದಿಂದ ಆದರಿಸಿ ಭೋಜನಮಾಡಿಸಿದವರು ಮುಂದೆ ಕಾಣುತ್ತಲಿರುವ ಈ ಪಾಪಿಜನರಂತೆ ಮಲವನ್ನು ಭುಂಜಿಸುವರು.

ಏಕಸಾರ್ಥಪ್ರಯಾತಂ ಯೋ ನಿಃಸ್ವಮರ್ಥಾರ್ಥಿನಂ ನರಮ್ ।
ಅಪಾಸ್ಯ ಸ್ವಾನ್ನಮಶ್ನಂತಿ ತ ಇಮೇ ಶ್ಲೇಷ್ಮಭೋಜಿನಃ ॥೫೮॥

ಗೋಬ್ರಾಹ್ಮಣಾಗ್ನಯಃ ಸ್ಪೃಷ್ಟಾ ಯೈರುಚ್ಛಿಷ್ಟೈರ್ನರೇಶ್ವರ ।
ತೇಷಾಮೇತೇಽಗ್ನಿಕುಣ್ಡೇಷು ಪ್ರಜ್ವಲತ್ಸ್ವಾಹಿತಾಃ ಕರಾಃ ॥೫೯॥

ಸೂರ್ಯೇನ್ದುತಾರಕಾ ದೃಷ್ಟಾ ಯೈರುಚ್ಛಿಷ್ಟೈಸ್ತು ಕಾಮತಃ ।
ತೇಷಾಂ ಯಾಮ್ಯೈರ್ನರೈರ್ನೇತ್ರೇ ನ್ಯಸ್ತೋ ವಹ್ನಿಃ ಸಮಿಧ್ಯತೇ ॥೬೦॥

ಗಾವೋಽಗ್ನಿರ್ಜನನೀ ವಿಪ್ರೋ ಜ್ಯೇಷ್ಠಭ್ರಾತಾ ಪಿತಾ ಸ್ವಸಾ ।
ಜಾಮಯೋ ಗುರವೋ ವೃದ್ಧಾ ಯೈಃ ಸ್ಪೃಷ್ಟಾಸ್ತು ಪದಾ ನೃಭಿಃ ॥೬೧॥

---

೫೮. ಒಂದು ಗುಂಪಾಗಿ ಪ್ರಯಾಣಮಾಡುತ್ತಿರುವವರಲ್ಲಿ ತನ್ನ ಕೈಯ್ಯಲ್ಲಿ ಏನೂ ಇಲ್ಲದೆ ಅನ್ನ-ಅರ್ಥಗಳನ್ನು ಆಶಿಸುತ್ತಿರುವ ಒಬ್ಬನನ್ನು ಬಿಟ್ಟು ಮಿಕ್ಕವರು ಯಾರು ತಮ್ಮ ತಮ್ಮ ಅನ್ನವನ್ನು ಭುಂಜಿಸುವರೊ; ಅಂತಹ ಪಾಪಿಗಳು ಹೀಗೆ ಶ್ಲೇಷ್ಮವನ್ನು ಭುಂಜಿಸುವರು.

೫೯. ಯಾವ ಮನುಜರು ಎಂಜಲು ಕೈಗಳಿಂದ ಗೋ-ಬ್ರಾಹ್ಮಣ ಮತ್ತು ಅಗ್ನಿ ಇವುಗಳನ್ನು ಸ್ಪರ್ಶಿಸುವರೊ; ಅಂತಹ ಈ ಪಾಪಿಗಳ ಕೈಗಳು ಉರಿಯುತ್ತಿದ್ದ ಅಗ್ನಿಕುಂಡದಲ್ಲಿ ಹಾಕಲ್ಪಡುತ್ತಿವೆ.

೬೦. ಹಾಗು ಎಂಜಲಿನಿಂದ ಕೂಡಿರುವ ಸಮಯದಲ್ಲಿ ಸ್ವೇಚ್ಛೆಯಿಂದ ಯಾರು ಸೂರ್ಯ-ಚಂದ್ರ-ನಕ್ಷತ್ರಗಳನ್ನು ಸಂದರ್ಶಿಸುವರೊ; ಅವರ ಕಣ್ಣಿನ ಮೇಲೆ ಯಮಪುರುಷರು ಹಾಕಿರುವ ಬೆಂಕಿಯು ಉರಿಯುತ್ತಿದೆ.

೬೧. ಮತ್ತು ಗೋವು, ಅಗ್ನಿ, ಜನನಿ, ವಿಪ್ರ, ಜ್ಯೇಷ್ಠಭ್ರಾತಾ, ಅಕ್ಕ, ನಾದಿನಿ ಮತ್ತು ಗುರುಜನ—ಇವರನ್ನು ಕಾಲಿನಿಂದ ಸ್ಪರ್ಶಿಸಿದ ಮಾನವರು ಪಾಪಿಗಳಾಗುವರು.

ಬದ್ಧಾಙ್ಘ್ರಯಸ್ತೇ ನಿಗಡೈರ್ಲೋಹೈರಗ್ನಿಪ್ರತಾಪಿತೈಃ ।
ಅಙ್ಗಾರರಾಶಿಮಧ್ಯಸ್ಥಾಸ್ತಿಷ್ಠನ್ತ್ಯಾಜಾನುದಾಹಿನಃ ॥೬೨॥

ಪಾಯಸಂ ಕೃಸರಂ ಛಾಗಂ ದೇವಾನ್ನಾನಿ ಚ ಯಾನಿ ವೈ ।
ಭುಕ್ತಾನಿ ಯೈರಸಂಸ್ಕೃತ್ಯ ತೇಷಾಂ ನೇತ್ರಾಣಿ ಪಾಪಿನಾಮ್ ॥೬೩॥

ನಿಪಾತಿತಾನಾಂ ಭೂಪೃಷ್ಠೇ ಉದ್ವೃತ್ತಾಕ್ಷಿ ನಿರೀಕ್ಷತಾಮ್ ।
ಸನ್ದಂಶೈಃ ಪಶ್ಯ ಕೃಷ್ಯನ್ತೇ ನರೈರ್ಯಾಮ್ಯೈರ್ಮುಖಾತ್ತತಃ ॥೬೪॥

ಗುರುದೇವದ್ವಿಜಾತೀನಾಂ ವೇದಾನಾಂ ಚ ನರಾಧಮೈಃ ।
ನಿನ್ದಾ ನಿಶಾಮಿತಾ ಯೈಶ್ಚ ಪಾಪಾನಾಮಭಿನನ್ದತಾಮ್ ॥೬೫॥

ತೇಷಾಮಯೋಮಯಾನ್ಕೀಲಾನಗ್ನಿವರ್ಣಾನ್ಪುನಃ ಪುನಃ ।
ಕರ್ಣೇಷು ಪೂರಯನ್ತ್ಯೇತೇ ಯಾಮ್ಯಾ ವಿಲಪತಾಮಪಿ ॥೬೬॥

---

೬೨. ಅಂತಹ ಈ ಪಾಪಿಗಳು ಬೆಂಕಿಯಲ್ಲಿ ಕಾಯಿಸಿದ ಲೋಹಮಯ-ವಾದ ಬೇಡಿಗಳಿಂದ ಕಟ್ಟಲ್ಪಟ್ಟ ಕಾಲುಗಳುಳ್ಳವರಾಗಿ ಮಂಡಿಯವರೆಗೆ ದಾಹ-ದುಃಖವನ್ನು ಅನುಭವಿಸುತ್ತ ಬೆಂಕಿಕೆಂಡಗಳ ರಾಶಿಯ ಮಧ್ಯದಲ್ಲಿ ನಿಂತಿರುವರು.

೬೩. ಪಾಯಸ, ಕೃಸರ, ಆಡಿನಮಾಂಸ ಮತ್ತು ದೇವತಾನಿವೇದನಕ್ಕೆ ಯೋಗ್ಯವಾದ ಇತರ ಬಗೆಯ ಅನ್ನ ಇವುಗಳನ್ನು ವಿಧಿಸಂಸ್ಕಾರವಿಲ್ಲದೆ ಭುಂಜಿಸುವವರು ಪಾಪಫಲಭಾಗಿಗಳಾಗುವರು.

೬೪. ಯಮದೂತರು ಅಂತಹವರನ್ನು ನೆಲದಲ್ಲಿ ಕೆಡವಿ ಅವರು ಕಣ್ಣನ್ನು ಅರಳಿಸಿಕೊಂಡು ನೋಡುತ್ತಿರುವ ಹಾಗೆ ಅವರ ಮುಖದಿಂದ ಕಣ್ಣುಗಳನ್ನು ಚಿಮುಟಗಳಿಂದ ಕೀಳುತ್ತಿರುವರು. ಇದನ್ನು ನೋಡು.

೬೫. ಯಾವ ಪಾಪಿಗಳು ಗುರು-ದೇವ-ದ್ವಿಜ ಮತ್ತು ವೇದ ಇವರ ನಿಂದೆಯನ್ನು ಅಭಿನಂದಿಸುತ್ತ ಕೇಳುವರೊ ; ಅವರು ಮುಂದೆ ಹೇಳುವ ಯಾತನೆಯನ್ನು ಅನುಭವಿಸುವರು.

೬೬. ಅಂತಹ ಪಾಪಿಗಳ ಕಿವಿಗಳಲ್ಲಿ ಯಮದೂತರು ಬೆಂಕಿಯಲ್ಲಿ ಕಾಯಿಸಿ ಕೆಂಪಾದ ಕಬ್ಬಿಣದ ಕೀಲಗಳನ್ನು ಅವರು ವಿಲಪಿಸುತ್ತಿದ್ದ ಹಾಗೆಯೆ ನಿರ್ದಯರಾಗಿ ಮತ್ತೆ ಮತ್ತೆ ಹೂಳುವರು.

ಯೈಃ ಪ್ರಪಾದೇವವಿಪ್ರೌಕೋದೇವಾಲಯಸಭಾಃ ಶುಭಾಃ ।
ಭಙ್ಕ್ತ್ವಾ ವಿಧ್ವಂಸಮಾನೀತಾಃ ಕ್ರೋಧಲೋಭಾನುವರ್ತಿಭಿಃ॥೬೭॥

ತೇಷಾಮೇತೇ ಶಿತೈಃ ಶಸ್ತ್ರೈರ್ಮುಹುರ್ವಿಲಪತಾಂ ತ್ವಚಃ ।
ಪೃಥಕ್ಕುರ್ವನ್ತಿ ವೈ ಯಾಮ್ಯಾಃ ಶರೀರಾದತಿದಾರುಣಾಃ ॥೬೮॥

ಗೋಬ್ರಾಹ್ಮಣಾರ್ಕಮಾರ್ಗಾಂಸ್ತು ಯೇಽವಮೇಹನ್ತಿ ಮಾನವಾಃ ।
ತೇಷಾಮೇತಾನಿ ಕೃಷ್ಯನ್ತೇ ಗುದೇನಾನ್ತ್ರಾಣಿ ವಾಯಸೈಃ ॥೬೯॥

ದತ್ತ್ವಾ ಕನ್ಯಾಂ ಯ ಏಕಸ್ಮೈ ದ್ವಿತೀಯಾಯ ಪ್ರಯಚ್ಛತಿ ।
ಸ ತ್ವೇವಂ ನೈಕಧಾ ಭಿನ್ನಃ ಕ್ಷಾರನದ್ಯಾಂ ಪ್ರವಾಹ್ಯತೇ ॥೭೦॥

---

೬೭. ಯಾವ ಮಾನವರು ಕ್ರೋಧ-ಲೋಭಗಳಿಗೆ ವಶರಾಗಿ ಅರವಟ್ಟಿಗೆ, ದೇವತಾಮೂರ್ತಿ, ಬ್ರಾಹ್ಮಣಗೃಹ, ಮಂಗಳಸಭೆ ಮತ್ತು ದೇವಾಲಯ ಇವುಗಳನ್ನು ಮುರಿದು ನಾಶಪಡಿಸುವರೊ ಅವರು ಪಾಪಿಗಳಾಗುವರು.

೬೮. ಭಯಂಕರರಾದ ಯಮಕಿಂಕರರು ಹರಿತವಾದ ಶಸ್ತ್ರಗಳಿಂದ ಮತ್ತೆ ಮತ್ತೆ ವಿಲಪಿಸುತ್ತಿದ್ದ ಅಂತಹ ಪಾಪಿಗಳ ದೇಹದಿಂದ ಚರ್ಮವನ್ನು ಸುಲಿಯುವರು.

೬೯. ಯಾರು ಗೋವು, ಬ್ರಾಹ್ಮಣ, ಸೂರ್ಯ—ಇವರಿಗೆ ಅಭಿಮುಖರಾಗಿ ಅಥವಾ ಮಾರ್ಗಮಧ್ಯದಲ್ಲಿ ಇರುವವರಾಗಿ ಮಲವಿಸರ್ಜನೆಯನ್ನು ಮಾಡುವರೊ, ಅಂತಹ ಪಾಪಿಗಳು ಗೋಳಾಡುತ್ತಿದ್ದರೂ ಕಾಗೆಗಳು ಅವರ ಗುದೇಂದ್ರಿಯದಿಂದ ನರಗಳನ್ನು ಸೆಳೆಯುತ್ತಿವೆ.

೭೦. ಯಾವ ಮನುಷ್ಯನು ತನ್ನ ಕನ್ಯೆಯನ್ನು ಮೊದಲು ಒಬ್ಬನಿಗೆ ಕೊಟ್ಟು ಮತ್ತೆ ಮತ್ತೊಬ್ಬನಿಗೆ ಅವಳನ್ನು ಕೊಡುವನೊ; ಅವನನ್ನು ಹೀಗೆ ತುಂಡುತುಂಡಾಗಿ ಕತ್ತರಿಸಿ ಉಪ್ಪುನೀರಿನ ನದಿಯಲ್ಲಿ ತೇಲಿಸುವರು.

ಸ್ವಪೋಷಣಪರೋ ಯಸ್ತು ಪರಿತ್ಯಜತಿ ಮಾನವಃ ।
ಪುತ್ರಭೃತ್ಯಕಲತ್ರಾದಿಬನ್ಧುವರ್ಗಮಕಿಞ್ಚನಮ್ ॥೨೦॥

ದುರ್ಭಿಕ್ಷೇ ಸಮ್ಭ್ರಮೇ ವಾಪಿ ಸೋಽಪ್ಯೇವಂ ಯಮಕಿಙ್ಕರೈಃ ।
ಉತ್ಕೃತ್ಯ ದತ್ತಾನಿ ಮುಖೇ ಸ್ವಮಾಂಸಾನ್ಯಶ್ನುತೇ ಕ್ಷುಧಾ ॥೨೧॥

ಶರಣಾಗತಾನ್ಯಸ್ತ್ಯಜತಿ ಲೋಭಾದುತ್ಕೋಚಜೀವಿಕಃ ।
ಸೋಽಪ್ಯೇವಂ ಯನ್ತ್ರಪೀಡಾಭಿಃ ಪೀಡ್ಯತೇ ಯಮಕಿಙ್ಕರೈಃ ॥೨೩॥

ಸುಕೃತಂ ಯೇ ಪ್ರಯಚ್ಛನ್ತಿ ಯಾವಜ್ಜನ್ಮಕೃತಂ ನರಾಃ ।
ತೇ ಪಿಷ್ಯನ್ತೇ ಶಿಲಾಪೇಷೈರ್ಯಥೈತೇ ಪಾಪಕರ್ಮಿಣಃ ॥೨೪॥

ನ್ಯಾಸಾಪಹಾರಿಣೋ ಬದ್ಧಾಃ ಸರ್ವಗಾತ್ರೇಷು ಬನ್ಧನೈಃ ।
ಕ್ರಿಮಿವೃಶ್ಚಿಕಕಾಕೋಲೈರ್ಭಕ್ಷ್ಯನ್ತೇಽಹರ್ನಿಶಂ ನರಾಃ ॥೨೫॥

---

೨೦. ಯಾವ ಮಾನವನು ತನ್ನ ಪೋಷಣೆಯಲ್ಲಿ ಮಾತ್ರ ಆಸಕ್ತನಾಗಿ ಪುತ್ರ-ಭೃತ್ಯ-ಕಲತ್ರ ಮುಂತಾದ ಏನೂ ದಿಕ್ಕಿಲ್ಲದ ಬಂಧುವರ್ಗವನ್ನು ಬಿಡುವನೊ ; ಅವನು ಪಾಪಫಲವನ್ನು ಭುಂಜಿಸುವನು.

೨೧. ದುರ್ಭಿಕ್ಷ ಅಥವಾ ಗಾಬರಿಯ ಸಮಯಗಳಲ್ಲಿಯೂ ದೀನಬಂಧು ಜನರನ್ನು ಬಿಟ್ಟ ಮಾನವನು ಹಸಿವನ್ನು ತಡೆಯಲಾರದೆ ಯಮದೂತರು ತನ್ನ ದೇಹದಿಂದ ಕಿತ್ತುಕೊಟ್ಟ ಮಾಂಸಗಳನ್ನು ತಿನ್ನುವನು.

೨೩. ಯಾವ ಪಾಪಿಯು ಲಂಚವನ್ನು ತೆಗೆದುಕೊಂಡು ಜೀವಿಸುತ್ತ ಲೋಭದಿಂದ ಶರಣಾಗತರನ್ನು ಪರಿತ್ಯಾಗ ಮಾಡುವನೊ; ಅವನನ್ನು ಯಮ ಕಿಂಕರರು ಯಂತ್ರಕ್ಕೆ ಹಾಕಿ ಪೀಡಿಸುವರು.

೨೪. ಯಾರು ತಾವು ಹುಟ್ಟಿದಂದಿನಿಂದ ಆರ್ಜಿಸಿದ ಪುಣ್ಯಕರ್ಮವನ್ನು ವಿಕ್ರಯಿಸುವರೊ ; ಅವರು ಎದುರಿಗೆ ಕಾಣಿಸುತ್ತಿರುವ ಈ ಪಾಪಿಗಳಂತೆ ಕಲಿನಲ್ಲಿಟ್ಟು ರುಬ್ಬುಗುಂಡುಗಳಿಂದ ಅರೆಯಲ್ಪಡುವರು.

೨೫. ಪರರ ನ್ಯಾಸವನ್ನು ಆಪಹರಿಸಿದ ಪಾಪಿನರರು ಎಲ್ಲ ಅವಯವ-ಗಳಲ್ಲಿ ಕಟ್ಟಿಹಾಕಲ್ಪಟ್ಟವರಾಗಿ ಕ್ರಿಮಿ, ಚೇಳು, ರಣಹದ್ದುಗಳಿಂದ ಹಗಲು-ರಾತ್ರಿಗಳಲ್ಲೆಲ್ಲ ತಿನ್ನಲ್ಪಡುವರು.

ಕ್ಷುತ್ಕ್ಷಾಮಾಸ್ತೃಟ್ಪ್ರತಜ್ಜಿಹ್ವಾತಾಲವೋ ವೇದನಾತುರಾಃ ॥೭೬॥

ದಿವಾಮೈಥುನಿನಃ ಪಾಪಾಃ ಪರದಾರಭುಜಶ್ಚ ಯೇ ॥೭೭॥

ತಥೈವ ಕಣ್ಟಕೈಸ್ತೀಕ್ಷ್ಣೈರಾಯಸೈಃ ಪಶ್ಯ ಶಾಲ್ಮಲಿಮ್ ।
ಆರೋಪಿತಾ ವಿಭಿನ್ನಾಙ್ಗಾಃ ಪ್ರಭೂತಾಸೃಕ್ಸ್ರವಾವಿಲಾಃ ॥೭೮॥

ಮೂಷಾಯಾಮಪಿ ಪಶ್ಯೈತಾನ್ ಧ್ಮಾಯಮಾನಾನ್ ಯಮಾ-
ನುಗೈಃ ।
ಪುರುಷೈಃ ಪುರುಷವ್ಯಾಘ್ರ ಪರದಾರಾವಮರ್ಶಿನಃ ॥೭೯॥
ಉಪಾಧ್ಯಾಯಮಧಃ ಕೃತ್ವಾ ಸ್ತಬ್ಧೋ ಯೋಽಧ್ಯಯನಂ ನರಃ ।
ಗೃಹ್ಣಾತಿ ಶಿಲ್ಪಮಥವಾ ಸೋಽಪ್ಯೇವಂ ಶಿರಸಾ ಶಿಲಾಮ್ ॥೮೦॥

---

೭೬. ಆ ಪಾಪಿಗಳು ಹಸಿವಿನ ಪೀಡೆಯಿಂದ ಬಡವಾಗಿ, ನೀರಡಿಕೆಯಿಂದ ಒಣಗಿ ಬಿದ್ದುಹೋದ ನಾಲಿಗೆ-ತುಟಿ-ದವಡೆಗಳುಳ್ಳವರಾಗಿ ಹೆಚ್ಚಾದ ವೇದನೆಯಿಂದ ನ್ಯಾಸಾಪಹಾರದ ಫಲವನ್ನು ಅನುಭವಿಸುವರು.

೭೭. ಹಗಲುಹೊತ್ತಿನಲ್ಲಿ ನಿಷಿದ್ಧವಾದ ಸ್ತ್ರೀಸಂಗವನ್ನು ಮಾಡುವವರೂ, ಪರಸ್ತ್ರೀಯರೊಡಗೂಡಿ ರತಿಸುಖವನ್ನು ಅನುಭವಿಸುವವರೂ ಆ ಪಾಪಕ್ಕೆ ಅನುರೂಪವಾದ ಫಲವನ್ನು ಭುಂಜಿಸುವರು.

೭೮. ಇತ್ತ ಕಬ್ಬಿಣದ ತೀಕ್ಷ್ಣವಾದ ಮುಳ್ಳುಗಳಿಂದ ತುಂಬಿರುವ ಶಾಲ್ಮಲಿ ವೃಕ್ಷವನ್ನು ನೋಡು. ಹಗಲು ಸ್ತ್ರೀಸಂಗಮಾಡಿರುವ ಪಾಪಿಗಳು ಶಾಲ್ಮಲಿ ವೃಕ್ಷಕ್ಕೆ ಏರಿಸಲ್ಪಟ್ಟು ಮುಳ್ಳಿನಿಂದ ಸುರಿಯುವ ರಕ್ತಧಾರೆಯುಳ್ಳವರಾಗಿ ವೇದನೆಯನ್ನು ಅನುಭವಿಸುತ್ತಿರುವರು.

೭೯. ಪುರುಷೋತ್ತಮನೆ! ಇತ್ತ ಯಮಕಿಂಕರರು ಪರಸ್ತ್ರೀಸಂಗ ಮಾಡಿದ ಪಾಪಿಗಳನ್ನು ಮೂಷೆಯಲ್ಲಿ ಹಾಕಿ ಸುಡಲ್ಪಡುತ್ತಿರುವುದನ್ನು ನೋಡು.

೮೦. ಯಾವ ನರನು ಅಹಂಕಾರಿಯಾಗಿ ಉಪಾಧ್ಯಾಯನನ್ನು ತಿರಸ್ಕರಿಸಿ ವೇದವನ್ನು ಅಧ್ಯಯನ ಮಾಡುವನೊ; ಅಥವಾ ಶಾಸ್ತ್ರವನ್ನು ಪಠಿಸುವನೊ; ಅವನು ಹೀಗೆ ತಲೆಯಲ್ಲಿ ಕಲ್ಲನ್ನು ಹೊರಿಸಿದ ದುಃಖವನ್ನು ಹೊಂದುವನು.

ಬಿಭ್ರತ್ಕ್ಲೇಶಮವಾಪ್ನೋತಿ ಜನಮಾರ್ಗೇಽತಿಪೀಡಿತಃ ।
ಕ್ಷುತ್ಕ್ಷಾಮೋಽಹರ್ನಿಶಂ ಭಾರಪೀಡಾವ್ಯಥಿತಮಸ್ತಕಃ ॥೮೧॥

ಮೂತ್ರಶ್ಲೇಷ್ಮಪುರೀಷಾಣಿ ಯೈರುತ್ಸೃಷ್ಟಾನಿ ವಾರಿಣಿ ।
ತ ಇಮೇ ಶ್ಲೇಷ್ಮವಿಣ್ಮೂತ್ರದುರ್ಗನ್ಧಂ ನರಕಂ ಗತಾಃ ॥೮೨॥

ಪರಸ್ಪರಂ ಚ ಮಾಂಸಾನಿ ಭಕ್ಷಯನ್ತಿ ಕ್ಷುಧಾನ್ವಿತಾಃ ।
ಭುಕ್ತಂ ನಾತಿಥ್ಯವಿಧಿನಾ ಪೂರ್ವಮೇಭಿಃ ಪರಸ್ಪರಮ್ ॥೮೩॥

ಅಪವಿದ್ಧಾಸ್ತು ಯೈರ್ವೇದಾ ವಹ್ನಯಶ್ಚಾಹಿತಾಗ್ನಿಭಿಃ ।
ತ ಇಮೇ ಶೈಲಶೃಙ್ಗಾಗ್ರಾತ್ಪಾತ್ಯನ್ತೇಽಧಃ ಪುನಃ ಪುನಃ ॥೮೪॥

ಪುನರ್ಭೂಪತಯೋ ಜೀರ್ಣಾ ಯಾವಜ್ಜೀವನ್ತಿ ಯೇ ನರಾಃ ।
ಇಮೇ ಕ್ರಿಮಿತ್ವಮಾಪನ್ನಾ ಭಕ್ಷ್ಯನ್ತೇಽತ್ರ ಪಿಪೀಲಿಕೈಃ ॥೮೫॥

---

೮೧. ಜನರು ಸಂಚರಿಸುವ ಮಾರ್ಗದಲ್ಲಿ ಕಲ್ಲನ್ನು ಹೊರಿಸಿ ಬಹಳ ಪೀಡಿಸಲ್ಪಟ್ಟ ಪಾಪಿಯು ಹಸಿವಿನಿಂದ ಬಳಲಿ ಹಗಲು-ರಾತ್ರಿಯಲ್ಲೆಲ್ಲ ಕಲ್ಲಿನ ಭಾರದಿಂದ ನೊಂದ ತಲೆಯುಳ್ಳವನಾಗಿ ಕ್ಲೇಶವನ್ನು ಅನುಭವಿಸುವನು.

೮೨. ಯಾವ ಮನುಜರು ನೀರಿನಲ್ಲಿ ಮೂತ್ರ-ಮಲ-ಶ್ಲೇಷ್ಮಗಳನ್ನು ವಿಸರ್ಜಿಸುವರೊ ; ಅಂತಹ ಈ ಪಾಪಿಗಳು ಶ್ಲೇಷ್ಮ-ಮಲ-ಮೂತ್ರಗಳ ದುರ್ಗಂಧ-ದಿಂದ ಕೂಡಿದ ನರಕವನ್ನು ಸೇರಿ ಇರುವರು.

೮೩. ಇತ್ತಕಡೆ ಇರುವ ಪಾಪಿಗಳು ಹಸಿವು ತಡೆಯಲಾರದೆ ಅನ್ಯೋ-ನ್ಯವಾಗಿ ಮಾಂಸವನ್ನು ಕಿತ್ತು ತಿನ್ನುತ್ತಿರುವರು. ಹಿಂದೆ ಇವರು ಸೇರಿದಾಗ ಅತಿಥಿಸತ್ಕಾರವನ್ನು ಮಾಡದೆ ಒಬ್ಬರನ್ನು ಬಿಟ್ಟು ಒಬ್ಬರು ಭುಂಜಿಸಿರುವರು.

೮೪. ಯಾರು ಅಭ್ಯಾಸಮಾಡಿ ವೇದಗಳನ್ನು ಬಿಡುವರೊ, ಹಾಗೆ ಯಾವ ಆಹಿತಾಗ್ನಿಗಳು ಅಗ್ನಿಯನ್ನು ಉದ್ವಾಸನಮಾಡುವರೊ ; ಅಂತಹ ಈ ಪಾಪಿಗಳು ಗಿರಿಶಿಖರಗಳಿಂದ ಮತ್ತೆ ಮತ್ತೆ ಕೆಳಕ್ಕೆ ತಳ್ಳಲ್ಪಡುವರು.

೮೫. ಯಾವ ಮಾನವರು ಕಾಮತಾಪದಿಂದ ದ್ವಿತೀಯವಿವಾಹಿತಳಾದ ಪ್ರಿಯೆಯೊಡನೆ ಜೀರ್ಣರಾಗುತ್ತ ಬಂದು ಬದುಕುವರೊ , ಅಂತಹವರು ಕ್ರಿಮಿ-ರೂಪರಾಗಿ ನರಕದಲ್ಲಿ ಇರುವೆಗಳಿಂದ ತಿನ್ನಲ್ಪಡುವರು.

ನೀಚಪ್ರತಿಗ್ರಹಾದ್ದಾನಾದ್ಯಾಜನಾನ್ನಿತ್ಯಸೇವನಾತ್ ।
ಪಾಷಾಣಮಧ್ಯಕೀಟತ್ವಂ ನರಃ ಸತತಮಶ್ನುತೇ ॥೮೬॥

ಪಶ್ಯತೋ ಭೃತ್ಯವರ್ಗಸ್ಯ ಮಿತ್ರಸ್ಯಾಪ್ಯತಿಥೇಸ್ತಥಾ ।
ಏಕೋ ಮಿಷ್ಟಾನ್ನಭುಗ್ಭುಙ್ಕ್ತೇ ಜ್ವಲದಙ್ಗಾರಸಞ್ಚಯಮ್॥೮೭॥

ವೃಕೈರ್ಭಯಙ್ಕರೈಃ ಪೃಷ್ಠಂ ನಿತ್ಯಮಸ್ಯೋಪಭುಜ್ಯತೇ ।
ಪೃಷ್ಠಮಾಂಸಂ ನೃಪೈತೇನ ಯತೋ ಲೋಕಸ್ಯ ಭಕ್ಷಿತಮ್ ॥೮೮॥

ಅನ್ಧೋಽಥ ಬಧಿರೋ ಮೂಕೋ ಭ್ರಾಮ್ಯತೇಽತ್ರ ಕ್ಷುಧಾತುರಃ ।
ಅಕೃತಜ್ಞೋಽಧಮಃ ಪುಂಸಾಮುಪಕಾರಿಷು ವರ್ತತೇ ॥೮೯॥

ಅಯಂ ಕೃತಘ್ನೋ ಮಿತ್ರಾಣಾಮಪಕಾರೀ ಸುದುರ್ಮತಿಃ ।
ತಪ್ತಕುಮ್ಭೇ ನಿಪತಿತೋ ವಿಲಪನ್ಯಾತಿ ಶೋಷಣಮ್ ॥೯೦॥

---

೮೬. ನೀಚನು ಮಾಡುವ ದಾನವನ್ನು ಪ್ರತಿಗ್ರಹಿಸುವುದರಿಂದಲೂ, ಯಾಗಮಾಡಿಸುವುದರಿಂದಲೂ, ನಿತ್ಯವಾದ ಪರಸೇವೆಯಿಂದಲೂ ನರನು ಕಲ್ಲಿನ ಮಧ್ಯದಲ್ಲಿ ಹುಟ್ಟುವ ಕೀಟದ ಜನ್ಮವನ್ನು ಸಂತತವಾಗಿ ಹೊಂದುವನು.

೮೭. ಪೋಷ್ಯವರ್ಗ, ಮಿತ್ರರ ತಂಡ, ಮತ್ತು ಅತಿಥಿ-ಅಭ್ಯಾಗತ—ಇವರು ನೋಡುತ್ತಿದ್ದರೂ ಇವರನ್ನು ಬಿಟ್ಟು ತಾನೊಬ್ಬನೆ ಮಿಷ್ಟಾನ್ನವನ್ನು ಭುಂಜಿಸಿದ ಪಾಪಿಯು ಉರಿಯುತ್ತಿರುವ ಕೆಂಡದ ರಾಶಿಯನ್ನು ನುಂಗುತ್ತಾನೆ.

೮೮. ರಾಜನೆ! ಯಾವ ಕಾರಣದಿಂದ ಈ ಪಾಪಿಯು ಜನರ ಬೆನ್ನಿನ ಮಾಂಸವನ್ನು ಕಿತ್ತು ತಿಂದಿರುವನೊ ಆ ಕಾರಣದಿಂದ ಭಯಂಕರವಾದ ತೋಳಗಳು ಬಂದು ಇವನ ಪೃಷ್ಠಮಾಂಸವನ್ನು ನಿತ್ಯದಲ್ಲಿಯೂ ತಿನ್ನುವುವು.

೮೯. ಉಪಕಾರ ಮಾಡಿರುವ ಮಹಾಶಯರ ವಿಷಯದಲ್ಲಿ ಕೃತಜ್ಞತೆಯನ್ನು ಮರೆತಿರುವ ಈ ಅಧಮನು ಕುರುಡನೂ, ಕಿವುಡನೂ, ಮತ್ತು ಮೂಗನೂ ಆಗಿ ಹಸಿವಿನ ಪೀಡೆಯಿಂದ ಭ್ರಮಿಸುತ್ತಿರುವನು.

೯೦. ಇವನು ಕೃತಘ್ನನೂ, ಮಿತ್ರರಿಗೆ ಅಪಕಾರ ಮಾಡಿದವನೂ, ದುಷ್ಟಬುದ್ಧಿಯುಳ್ಳವನೂ ಆಗಿರುವನು. ಆದ್ದರಿಂದ ತಪ್ತಕುಂಭದಲ್ಲಿ ಬಿದ್ದು ವಿಲಪಿಸುತ್ತ ಬತ್ತಿಹೋಗುತ್ತಿರುವನು.

ಕರಮ್ಭವಾಲುಕಾಂ ತಸ್ಮಾತ್ತತೋ ಯನ್ತ್ರಾವಪೀಡನಮ್ ।
ಅಸಿಪತ್ರವನಂ ತಸ್ಮಾತ್ಕರಪತ್ರೇಣ ಪಾಟನಮ್ ॥೯೧॥

ಕಾಲಸೂತ್ರೇ ತಥಾ ಛೇದಮನೇಕಾಶ್ಚೈವ ಯಾತನಾಃ ।
ಪ್ರಾಪ್ಯ ನಿಷ್ಕೃತಿಮೇತಸ್ಮಾನ್ನ ವೇದ್ಮಿ ಕಥಮೇಷ್ಯತಿ ॥೯೨॥

ಶ್ರಾದ್ಧೇ ಸಙ್ಗತಿನೋ ವಿಪ್ರಾಃ ಸಮುಪೇತ್ಯ ಪರಸ್ಪರಮ್ ।
ದುಷ್ಟಾ ಹಿ ನಿಸ್ಸೃತಂ ಫೇನಂ ಸರ್ವಾಙ್ಗೇಭ್ಯಃ ಪಿಬನ್ತಿ ವೈ ॥೯೩॥

ಸುವರ್ಣಸ್ತೇಯಿಾ ವಿಪ್ರಘ್ನಃ ಸುರಾಪೋ ಗುರುತಲ್ಪಗಃ ।
ಅಧಶ್ಚೋರ್ಧ್ವಂ ಚ ದೀಪ್ತಾಗ್ನೌ ದಹ್ಯಮಾನಾಃ ಸಮನ್ತತಃ ॥೯೪॥

---

೯೧. ಅಂತಹ ಕೃತಘ್ನನಾದ ಪಾಪಿಯು ತಪ್ತಕುಂಭದ ಯಾತನೆಯನ್ನು ಅನುಭವಿಸಿ ಕ್ರಮವಾಗಿ ಸುಡುವ ಮರಳಿನ ನರಕ, ಯಂತ್ರಪೀಡೆಯನ್ನು ಕೊಡುವ ನರಕ, ಅಸಿಪತ್ರವನ ಮತ್ತು ಗರಗಸದಿಂದ ಸೀಳಿ ಪೀಡಿಸುವ ನರಕಗಳಲ್ಲಿ ಯಾತನೆಯನ್ನು ಅನುಭವಿಸುವನು.

೯೨. ಮತ್ತು ಕಾಲಸೂತ್ರನರಕದಲ್ಲಿ ಅಂಗಾಂಗಗಳ ಛೇದನವನ್ನೂ ಇನ್ನೂ ಅನೇಕ ಬಗೆಯ ಯಾತನೆಗಳನ್ನೂ ಅನುಭವಿಸುವನು. ಅದನ್ನೆಲ್ಲ ಕಳೆದು ಹೇಗೆ ಈ ಪಾಪದಿಂದ ಶುದ್ಧನಾಗುವನೊ ; ನಾನಂತು ಅದನ್ನು ತಿಳಿಯಲಾರೆನು.

೯೩. ನಿರಂತರವೂ ಜೊತೆಯಾಗಿದ್ದು ಶ್ರಾದ್ಧಾನ್ನವನ್ನು ಭುಂಜಿಸುವ ಪಾಪಿವಿಪ್ರರು ಅನ್ಯೋನ್ಯವಾಗಿ ಸೇರಿಕೊಂಡು ಸರ್ವಾವಯವಗಳಿಂದ ಹರಿಯುವ ನೊರೆಯನ್ನು ಪಾನಮಾಡುವರು.

೯೪. ಸುವರ್ಣವನ್ನು ಕದ್ದವನೂ, ಬ್ರಹ್ಮಹತ್ಯೆ ಮಾಡಿದವನೂ, ಮದ್ಯಪಾಯಿಯೂ ಮತ್ತು ಗುರುಪತ್ನೀ ಸಂಗಮಾಡಿದವನೂ ಆದ ಮಹಾಪಾತಕಿಗಳು ಮೇಲೆ ಕೆಳಗೆ ಎಲ್ಲೆಡೆಗಳಲ್ಲಿಯೂ ಹತ್ತಿ ಉರಿಯುವ ಬೆಂಕಿಯಲ್ಲಿ ಸುಡಲ್ಪಡುವರು.

ತಿಷ್ಠನ್ತ್ಯಬ್ದ ಸಹಸ್ರಾಣಿ ಸುಬಹೂನಿ ತತಃ ಪುನಃ ।
ಜಾಯನ್ತೇ ಮಾನವಾಃ ಕುಷ್ಠಕ್ಷಯರೋಗಾದಿಚಿಹ್ನಿತಾಃ ॥೯೫॥

ಮೃತಾಃ ಪುನಶ್ಚ ನರಕಂ ಪುನರ್ಜಾತಾಶ್ಚ ತಾದೃಶಮ್ ।
ವ್ಯಾಧಿಮೃಚ್ಛನ್ತಿ ಕಲ್ಪಾನ್ತಪರಿಮಾಣಂ ನರಾಧಿಪ ॥೯೬॥

ಗೋಘ್ನೋಽನ್ಯೂನತರಂ ಯಾತಿ ನರಕೇಽಥ ತ್ರಿಜನ್ಮನಿ ।
ತಥೋಪಪಾತಕಾನಾಂ ಸ ಸರ್ವೇಷಾಮಿತಿ ನಿಶ್ಚಯಃ ॥೯೭॥

ನರಕಪ್ರಚ್ಯುತಾ ಯಾನ್ತಿ ಯೈರ್ಯೈರ್ನಿಹಿತಪಾತಕೈಃ ।
ಪ್ರಯಾನ್ತಿ ಯೋನಿಜಾತಾನಿ ತನ್ಮೇ ನಿಗದತಃ ಶೃಣು ॥೯೮॥

ಇತಿ ಶ್ರೀ ಮಾರ್ಕಂಡೇಯ ಮಹಾಪುರಾಣೇ ಸ್ವಕೃತಕರ್ಮಭೋಗ-ನಿರೂಪಣಂ ನಾಮ ಚತುರ್ದಶೋಽಧ್ಯಾಯಃ

---

೯೫. ಹಾಗೆ ಅನೇಕ ಸಹಸ್ರಾರು ವರ್ಷಗಳ ವರೆಗೆ ಬೆಂಕಿಯಲ್ಲಿ ಬೆಂದು ಕಡೆಗೆ ಕುಷ್ಠರೋಗ-ಕ್ಷಯರೋಗಾದಿ ಪಾಪಚಿಹ್ನೆಯಿಂದ ಕೂಡಿ ಮಾನವ ಜಾತಿಯಲ್ಲಿ ಜನಿಸುತ್ತಾರೆ.

೯೬. ರಾಜನೆ! ಮತ್ತು ಆ ಪಾಪಿಗಳು ಒಂದು ಕಲ್ಪಕಾಲವು ಮುಗಿಯುವವರೆಗೂ ಸಾವು, ನರಕಯಾತ್ರೆ, ಪುನರ್ಜನ್ಮಗಳನ್ನು ಹೊಂದಿ ಮತ್ತೆ ಅಂತಹ ಮಹಾರೋಗವನ್ನು ಅನುಭವಿಸುವರು.

೯೭. ಗೋಹತ್ಯೆಯನ್ನು ಮಾಡಿದವನು ಮಹಾಪಾತಕದ ಫಲಭೋಗಕ್ಕಿಂತ ಸ್ವಲ್ಪ ಕಡಿಮೆಯಾಗಿ ಮೂರು ಜನ್ಮಗಳಲ್ಲಿ ನರಕವನ್ನು ಅನುಭವಿಸುವನು. ಹಾಗೆ ಎಲ್ಲ ಉಪಪಾತಕಗಳಿಗೂ ಸ್ವಲ್ಪ ಮಾತ್ರ ಕಡಿಮೆಯಾದ ಯಾತನೆಯು ಫಲವಾಗಿರುವುದು. ಇದು ಸಮಸ್ತ ಶಾಸ್ತ್ರಗಳ ನಿರ್ಣಯವು.

೯೮. ಯಾತನೆಯನ್ನು ಭುಂಜಿಸಿ ನರಕದಿಂದ ಚ್ಯುತಿಹೊಂದಿದ ಜಂತುಗಳು ಯಾವ ಯಾವ ಪಾಪಶೇಷದಿಂದ ಯಾವ ಯಾವ ಜಾತಿಯಲ್ಲಿ ಜನ್ಮವೆತ್ತುವರೆಂಬುದನ್ನು ವಿವರಿಸುವ ನನ್ನ ವಾಕ್ಯವನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಞ್ಚದಶೋಽಧ್ಯಾಯಃ

(ವಿವಿಧಜನ್ಮದಾಯಿ ಕರ್ಮ ನಿರೂಪಣಮ್)

ಯಮಕಿಙ್ಕರ ಉವಾಚ :—

ಪತಿತಾತ್ಪ್ರತಿಗೃಹ್ಯಾಥ ಖರಯೋನಿಂ ವ್ರಜೇದ್ದ್ವಿಜಃ ।
ನರಕಾತ್ಪ್ರತಿಮುಕ್ತಸ್ತು ಕ್ರಿಮಿಃ ಪತಿತಯಾಜಕಃ ||೧||

ಉಪಾಧ್ಯಾಯವ್ಯಲೀಕಂ ತು ಕೃತ್ವಾ ಶ್ವಾ ಭವತಿ ದ್ವಿಜಃ ||೨||

ಹದಿನೈದನೆಯ ಅಧ್ಯಾಯ

ಯಮದೂತನು ಇಂತೆಂದನು :—

೧. ಪತಿತನಿಂದ ದಾನವನ್ನು ಪ್ರತಿಗ್ರಹಿಸಿದ ದ್ವಿಜನು ನರಕದಿಂದ ಮುಕ್ತನಾದ ಮೇಲೆ ಕತ್ತೆಯ ಯೋನಿಯಲ್ಲಿ ಪುನರ್ಜನ್ಮವೆತ್ತುವನು. ಹಾಗೆ ಪತಿತನಿಗೆ ಯಾಗಮಾಡಿಸಲು ಪುರೋಹಿತನಾಗಿ ಹೋದವನು ಕ್ರಿಮಿಯಾಗಿ ಹುಟ್ಟುವನು.

೨. ಆಚಾರ್ಯನಲ್ಲಿ ವಿರೋಧವನ್ನು ಮಾಡಿದ ವಿಪ್ರನು ನರಕ-ಯಾತನೆಯನ್ನು ಭುಂಜಿಸಿ ಅಲ್ಲಿಂದ ಚ್ಯುತನಾದ ಮೇಲೆ ನಾಯಿಯಾಗಿ ಜನ್ಮವೆತ್ತುವನು.

ತಜ್ಜಾಯಾಂ ಮನಸಾ ವಾಚಾ ತದ್ದ್ರವ್ಯಂ ವಾಪಿ ಕಾಮಯೇತ್ ।
ಗರ್ದಭೋ ಜಾಯತೇ ಜನ್ತುಃ ಪಿತ್ರೋಶ್ಚಾಪ್ಯವಮಾನಕಃ ॥೩॥

ಮಾತಾಪಿತರಾವಾಕ್ರುಶ್ಯ ಸಾರಿಕಾ ಸಮ್ಪ್ರಜಾಯತೇ ।
ಭ್ರಾತುಃ ಪತ್ನ್ಯವಮನ್ತಾ ಚ ಕಪೋತತ್ವಂ ಪ್ರಪದ್ಯತೇ ॥೪॥

ತಾವೇವ ಪೀಡಯಿತ್ವಾ ತು ಕಚ್ಛಪತ್ವಂ ಪ್ರಪದ್ಯತೇ ॥೫॥

ಭರ್ತೃಪಿಣ್ಡಮುಪಾಶ್ನನ್ಯಸ್ತದಿಷ್ಟಂ ನ ನಿಷೇವತೇ ।
ಸೋಽಪಿ ಮೋಹಸಮಾಪನ್ನೋ ಜಾಯತೇ ವಾನರೋ ಮೃತಃ॥೬॥

ನ್ಯಾಸಾಪಹರ್ತಾ ನರಕಾದ್ವಿಮುಕ್ತೋ ಜಾಯತೇ ಕ್ರಿಮಿಃ ।
ಅಸೂಯಕಶ್ಚ ನರಕಾನ್ಮುಕ್ತೋ ಭವತಿ ರಾಕ್ಷಸಃ ॥೭॥

---

೩. ಗುರುಪತ್ನಿಯನ್ನೂ ಅಥವಾ ಗುರುದ್ರವ್ಯವನ್ನೂ ಮನಸ್ಸು ಅಥವಾ ವಾಗಿಂದ್ರಿಯಗಳಿಂದ ಕಾಮಿಸುವುದಾದರೆ ಆ ಜಂತುವು ಗರ್ದಭ ಜಾತಿಯಲ್ಲಿ ಹುಟ್ಟುವನು. ಹಾಗು ಮಾತಾಪಿತೃಗಳನ್ನು ಅವಮಾನಮಾಡಿದವನು ಅದೇ ಹೀನಜನ್ಮವನ್ನು ಹೊಂದುವನು.

೪. ಮಾತಾಪಿತೃಗಳನ್ನು ನಿಂದಿಸಿದ ಪಾಪಿಯು ಸಾರಿಕಾ ಪಕ್ಷಿಯಾಗಿ ಹುಟ್ಟುತ್ತಾನೆ. ಮತ್ತು ಭ್ರಾತೃಪತ್ನಿಯನ್ನು ಅವಮಾನಮಾಡಿದವನು ಪಾರಿವಾಳದ ಜನ್ಮವನ್ನು ಹೊಂದುವನು.

೫. ಹಾಗೆಯೆ ಭ್ರಾತೃ ಮತ್ತು ಭ್ರಾತೃ ಪತ್ನೀ ಇವರನ್ನು ಪೀಡಿಸಿದ ಮಾನವನು ನರಕದಿಂದ ಚ್ಯುತನಾದ ಮೇಲೆ ಆಮೆಯ ಜಾತಿಯಲ್ಲಿ ಜನ್ಮತಾಳುವನು.

೬. ಸ್ವಾಮಿಯ ಅನ್ನವನ್ನು ತಿನ್ನುತ್ತಿದ್ದ ಸೇವಕನು ಸ್ವಾಮಿಯ ಇಷ್ಟದಂತೆ ಇದ್ದು ಸೇವೆಮಾಡದಿದ್ದರೆ ಮರಣ-ನರಕಯಾತನಾಭೋಗಗಳ ನಂತರ ಮೋಹದಿಂದ ಕೂಡಿದ ವಾನರನಾಗಿ ಜನಿಸುವನು.

೭. ಪರನ ನ್ಯಾಸವಸ್ತುವನ್ನು ಅಪಹರಿಸಿದ ಪಾಪಿಯು ನರಕದಿಂದ ಮುಕ್ತನಾಗಿ ಕ್ರಿಮಿಯಾಗುವನು. ಪರರಲ್ಲಿ ಅಸೂಯೆಯುಳ್ಳವನು ನರಕದುಃಖ ಮುಕ್ತನಾಗಿ ರಾಕ್ಷಸನಾಗಿ ಜನಿಸುವನು.

ವಿಶ್ವಾಸಹನ್ತಾ ಚ ನರೋ ಮೀನಯೋನೌ ಪ್ರಜಾಯತೇ ॥೮॥

ಧಾನ್ಯಂ ಯವಾಂಸ್ತಿಲಾನ್ಮಾಷಾನ್ಕುಲತ್ಥಾನ್ಸರ್ಷಪಾಂಶ್ಚಣಾನ್ ।
ಕಲಾಯಾನ್ಕಲಮಾನ್ಮುದ್ಗಾನ್ಗೋಧೂಮಾನತಸೀಸ್ತಥಾ ॥೯॥

ಸಸ್ಯಾನ್ಯನ್ಯಾನಿ ವಾ ಹೃತ್ವಾ ಮೋಹಾಜ್ಜನ್ತುರಚೇತನಃ ।
ಸಞ್ಜಾಯತೇ ಮಹಾವಕ್ತ್ರೋ ಮೂಷಿಕೋ ಬಭ್ರುಸನ್ನಿಭಃ ॥೧೦॥

ಪರದಾರಾಭಿಮರ್ಶಾತ್ತು ವೃಕೋ ಘೋರೋಽಭಿಜಾಯತೇ ।
ಶ್ವಾ ಸೃಗಾಲೋ ಬಕೋ ಗೃಧ್ರೋ ವ್ಯಾಲಃ ಕಙ್ಕಸ್ತಥಾ ಕ್ರಮಾತ್
॥೧೧॥

ಭ್ರಾತೃಭಾರ್ಯಾಂ ಚ ದುರ್ಬುದ್ಧಿರ್ಯೋ ಧರ್ಷಯತಿ ಪಾಪಕೃತ್ ।
ಪುಂಸ್ಕೋಕಿಲತ್ವಮಾಪ್ನೋತಿ ಸ ಚಾಪಿ ನರಕಾಚ್ಚ್ಯುತಃ ॥೧೨॥

---

೮. ಅನ್ಯೋನ್ಯವಾಗಿ ವಿಶ್ವಾಸದಿಂದ ಇದ್ದು ವಂಚನೆಯಿಂದ ವಿಶ್ವಾಸ-ಘಾತಮಾಡಿದ ಪಾಪಿಯು ನರಕವಾಸಾನಂತರದಲ್ಲಿ ಮೀನಿನ ಜಾತಿಯಲ್ಲಿ ಹುಟ್ಟುವನು.

೯. ಜವೆ, ಎಳ್ಳು, ಉದ್ದು, ಹುರುಳಿ, ಸಾಸುವೆ, ಕಡಲೆ, ನೆಲಗಡಲೆ, ಭತ್ತ, ಹೆಸರು, ಗೋಧಿ ಮತ್ತು ಅಗಸೆ—ಇಂತಹ ಧಾನ್ಯಗಳನ್ನು ಅಪಹರಿಸು-ವುದು ಪಾಪಕರವಾದುದು.

೧೦. ವಿವೇಕವಿಲ್ಲದ ನರನು ಇವುಗಳನ್ನೂ ಇತರ ವಿಧವಾದ ಸಸ್ಯ-ಧಾನ್ಯವನ್ನೂ ಅಪಹರಿಸಿದರೆ ಆ ಪಾಪದಿಂದ ದೊಡ್ಡ ಬಾಯಿಯುಳ್ಳ ಮುಂಗಸಿ-ಯಂತಿರುವ ಹೆಗ್ಗಣವಾಗಿ ಜನಿಸುವನು.

೧೧. ಪರಸ್ತ್ರೀಸಂಗಮಾಡಿದ ಪಾಪಿಮಾನವನು ಕ್ರೂರವಾದ ತೋಳ-ವಾಗಿ ಹುಟ್ಟಿ ಕ್ರಮವಾಗಿ ನಾಯಿ, ನರಿ, ಬಕಪಕ್ಷಿ, ಹದ್ದು, ಹಾವು ಮತ್ತು ರಣಹದ್ದು ಇವುಗಳ ಜನ್ಮವನ್ನು ಹೊಂದುವನು.

೧೨. ದುಷ್ಟಬುದ್ಧಿಯುಳ್ಳ ನರನು ಭ್ರಾತೃಪತ್ನಿಯನ್ನು ಬಲಾತ್ಕಾರ-ವಾಗಿ ಭುಂಜಿಸಿದ ಪಾಪದಿಂದ ನರಕದುಃಖದಿಂದ ಮುಕ್ತನಾಗಿ ಅನಂತರ ಕೋಗಿಲೆಯಾಗಿ ಹುಟ್ಟುತ್ತಾನೆ.

ಸಖಿಭಾರ್ಯಾಂ ಗುರೋರ್ಭಾರ್ಯಾಂ ರಾಜಭಾರ್ಯಾಂ ಚ ಪಾಪಕೃತ್
ಪ್ರಧರ್ಷಯಿತ್ವಾ ಕಾಮಾತ್ಮಾ ಸೂಕರೋ ಜಾಯತೇ ನರಃ ॥೧೩॥

ಯಜ್ಞದಾನವಿವಾಹಾನಾಂ ವಿಘ್ನಕರ್ತಾ ಭವೇತ್ಕೃಮಿಃ ।
ಪುನರ್ದಾತಾ ತು ಕನ್ಯಾಯಾಃ ಕೃಮಿರೇವೋಪಜಾಯತೇ ॥೧೪॥

ದೇವತಾಪಿತೃವಿಪ್ರಾಣಾಮದತ್ವಾ ಯೋಽನ್ನಮಶ್ನುತೇ ।
ಪ್ರಮುಕ್ತೋ ನರಕಾತ್ಸೋಽಪಿ ವಾಯಸಃ ಸಮ್ಪ್ರಜಾಯತೇ ॥೧೫॥

ಜ್ಯೇಷ್ಠಂ ಪಿತೃಸಮಂ ವಾಪಿ ಭ್ರಾತರಂ ಯೋಽವಮನ್ಯತೇ ।
ನರಕಾತ್ಸೋಽಪಿ ವಿಭ್ರಷ್ಟಃ ಕ್ರೌಞ್ಚಯೋನೌ ಪ್ರಜಾಯತೇ ॥೧೬॥

ಶೂದ್ರಶ್ಚ ಬ್ರಾಹ್ಮಣೀಂ ಗತ್ವಾ ಕ್ರಿಮಿಯೋನೌ ಪ್ರಜಾಯತೇ ।
ತಸ್ಯಾಮಪತ್ಯಮುತ್ಪಾದ್ಯ ಕಾಷ್ಠಾನ್ತಃಕೀಟಕೋ ಭವೇತ್ ॥೧೭॥

---

೧೩. ಅತಿ ಕಾಮಲಂಪಟನಾದ ಮನುಷ್ಯನು ಮಿತ್ರನ ಭಾರ್ಯೆ-ಗುರುಭಾರ್ಯೆ ಅಥವಾ ರಾಜಮಹಿಷಿಯನ್ನು ಸಂಗಮಾಡಿ ಆ ಪಾತಕದಿಂದ ಹಂದಿಯ ಜನ್ಮವನ್ನು ತಾಳುವನು.

೧೪. ಯಜ್ಞ-ದಾನ-ವಿವಾಹ ಈ ಸತ್ಕರ್ಮಗಳನ್ನು ವಿಘ್ನಮಾಡಿ ಭಂಗಗೊಳಿಸಿದವನು ಕ್ರಿಮಿಯಾಗಿ ಜನಿಸುವನು. ಕನ್ಯೆಯನ್ನು ಪುನರ್ದಾನ ಮಾಡಿದ ಪಾಪಿಯೂ ಕೃಮಿಜನ್ಮವನ್ನು ತಾಳುವನು.

೧೫. ಯಾವ ಮಾನವನು ದೇವತೆ-ಪಿತೃ-ವಿಪ್ರರಲ್ಲಿ ನಿವೇದನ ಮಾಡದೆ ಅನ್ನವನ್ನು ಭುಂಜಿಸುವನೊ; ಆ ಪಾಪಿಯು ನರಕದಿಂದ ಚ್ಯುತನಾದ ಮೇಲೆ ಕಾಗೆಯಾಗಿ ಹುಟ್ಟುವನು.

೧೬. ಯಾವ ನರನು ಜ್ಯೇಷ್ಠನೂ, ಪಿತೃವಿಗೆ ಸಮಾನನೂ ಆದ ಭ್ರಾತೃವನ್ನು ಅವಮಾನ ಮಾಡುವನೊ; ಆ ಪಾತಕಿಯು ನರಕಲೋಕದಿಂದ ಪತಿತನಾಗಿ ಬಕಪಕ್ಷಿಯ ಯೋನಿಯಲ್ಲಿ ಜನ್ಮವೆತ್ತುವನು.

೧೭. ಬ್ರಾಹ್ಮಣಸ್ತ್ರೀಯಲ್ಲಿ ಸಂಗಮಾಡಿದ ಶೂದ್ರನು ಆ ಪಾಪದಿಂದ ಕೃಮಿಯಾಗಿ ಜನಿಸುತ್ತಾನೆ. ಮತ್ತು ಬ್ರಾಹ್ಮಣಸ್ತ್ರೀಯಲ್ಲಿ ಸಂತತಿಯನ್ನೂ ಹೊಂದಿದ ಶೂದ್ರನು ಮರವನ್ನು ಕೊರೆಯುವ ಹುಳುವಾಗುವನು.

ಸೂಕರಃ ಕೃಮಿಕೋ ಮದ್ಗುಶ್ಚಣ್ಡಾಲಶ್ಚ ಪ್ರಜಾಯತೇ ||೧೮||

ಅಕೃತಜ್ಞೋಽಧಮಃ ಪುಂಸಾಂ ವಿಮುಕ್ತೋ ನರಕಾನ್ನರಃ ||೧೯||

ಕೃತಘ್ನಃ ಕೃಮಿಕಃ ಕೀಟಃ ಪತಙ್ಗೋ ವೃಶ್ಚಿಕಸ್ತಥಾ ।
ಮತ್ಸ್ಯಸ್ತು ವಾಯಸಃ ಕೂರ್ಮಃ ಪುಲ್ಕಸೋ ಜಾಯತೇ ತತಃ||೨೦||

ಅಶಸ್ತ್ರಂ ಪುರುಷಂ ಹತ್ವಾ ನರಃ ಸಞ್ಜಾಯತೇ ಖರಃ ।
ಕೃಮಿಃ ಸ್ತ್ರೀವಧಕರ್ತಾ ಚ ಬಾಲಹನ್ತಾ ಚ ಜಾಯತೇ ||೨೧||

ಭೋಜನಂ ಚೋರಯಿತ್ವಾ ತು ಮಕ್ಷಿಕಾ ಜಾಯತೇ ನರಃ ।
ತತ್ರಾಪ್ಯಸ್ತಿ ವಿಶೇಷೋ ವೈ ಭೋಜನಸ್ಯ ಶೃಣುಷ್ವ ತತ್ ||೨೨||

---

೧೮. ಮತ್ತು ಬ್ರಾಹ್ಮಣಸ್ತ್ರೀಯಲ್ಲಿ ಸಂತತಿಯನ್ನು ಹೊಂದಿದ ಶೂದ್ರನು ಆ ಪಾಪಬಲದಿಂದ ಹಂದಿ, ಕ್ರಿಮಿ, ಮದ್ಗು ಎಂಬ ಮೂಕ ಪ್ರಾಣಿ ಜನ್ಮಗಳನ್ನು ಅನುಭವಿಸಿ ಚಂಡಾಲನೂ ಆಗುವನು.

೧೯. ಹಾಗೆ ಪರರಿಂದ ಹೊಂದಿದ ಉಪಕಾರವನ್ನು ಎಣಿಸದೆ ಇರುವ ನರಾಧಮನು ಆ ಪಾಪದ ಪರಿಣಾಮದಿಂದ ನರಕದುಃಖವನ್ನು ಅನುಭವಿಸಿ ಮುಂದೆ ಅನೇಕ ಜನ್ಮಗಳನ್ನು ಹೊಂದುವನು.

೨೦. ಅಂತಹ ಕೃತಘ್ನನಾದ ಮಾನವನು ಕ್ರಿಮಿ-ಕೀಟ-ಪತಂಗ-ಚೇಳು-ಮೀನು-ಕಾಗೆ-ಆಮೆಗಳಾಗಿ ಕ್ರಮವಾಗಿ ಜನ್ಮವೆತ್ತಿ ಕಡೆಗೆ ಚಂಡಾಲ-ಯೋನಿಯಲ್ಲಿ ಜನಿಸುವನು.

೨೧. ಶಸ್ತ್ರಹೀನನಾದ ಪುರುಷನನ್ನು ಕೊಂದಿರುವ ಪಾಪಿಯು ಕತ್ತೆಯಾಗಿ ಹುಟ್ಟುವನು. ಹಾಗು ಸ್ತ್ರೀಹತ್ಯೆ, ಬಾಲಹತ್ಯೆಗಳನ್ನು ಮಾಡಿದ ನರನು ಕ್ರಿಮಿಜನ್ಮವನ್ನು ಹೊಂದುವನು.

೨೨. ಭೋಜನ ಸಾಮಗ್ರಿಯನ್ನು ಅಪಹಾರ ಮಾಡಿದ ಪಾಪಿಮನುಜನು ನೊಣವಾಗಿ ಜನಿಸುತ್ತಾನೆ. ಭೋಜನ ಸಾಮಗ್ರಿಯಲ್ಲಿ ಆಯಾಯ ವಸ್ತುವನ್ನು ಅಪಹರಿಸಿದವನು ಆಯಾಯ ಜನ್ಮಗಳನ್ನು ಹೊಂದುವನು. ಆ ವಿಶೇಷವನ್ನು ಕೇಳು.

ಹೃತ್ವಾ ದುಗ್ಧಂ ತು ಮಾರ್ಜಾರೋ ಜಾಯತೇ ನರಕಾಚ್ಚ್ಯುತಃ ।
ತಿಲಪಿಣ್ಯಾಕಸಮ್ಮಿಶ್ರಮನ್ನಂ ಹೃತ್ವಾ ತು ಮೂಷಕಃ ॥೨೩॥

ಘೃತಂ ಹೃತ್ವಾ ತು ನಕುಲಃ ಕಾಕೋ ಮದ್ಗುರಜಾಮಿಷಮ್ ।
ಮತ್ಸ್ಯಮಾಂಸಾಪಹೃತ್ಕಾಕಃ ಶ್ಯೇನೋ ಮೇಷಾಮಿಷಾಪಹೃತ್॥೨೪॥

ಚಿರೀವಾಕಸ್ತ್ವಪಹೃತೇ ಲವಣೇ ದಧ್ನಿ ವಾ ಕ್ರಿಮಿಃ ।
ಚೋರಯಿತ್ವಾ ಪಯಶ್ಚಾಪಿ ಬಲಾಕಾ ಸಮ್ಪ್ರಜಾಯತೇ ॥೨೫॥

ಯಸ್ತು ಚೋರಯತೇ ತೈಲಂ ತೈಲಪಾಯೀ ಸ ಜಾಯತೇ ।
ಮಧು ಹೃತ್ವಾ ನರೋ ದಂಶೋಽಪೂಪಂ ಹೃತ್ವಾ ಪಿಪೀಲಿಕಾ ॥೨೬॥

---

೨೩. ಹಾಲನ್ನು ಕದ್ದವನು ನರಕಲೋಕದಿಂದ ಚ್ಯುತನಾಗಿ ಬೆಕ್ಕಿನ ಜನ್ಮ ತಾಳುವನು. ಎಳ್ಳುಪುಡಿಯನ್ನು ಹಾಕಿ ಪರಿಷ್ಕರಿಸಿದ ಚಿತ್ರಾನ್ನವನ್ನು ಕದ್ದವನು ಇಲಿಯಾಗಿ ಜನಿಸುವನು.

೨೪. ಹಾಗೆ ತುಪ್ಪವನ್ನು ಕದ್ದವನು ಮುಂಗುಸಿಯೂ. ಆಡಿನ ಮಾಂಸವನ್ನು ಕದ್ದವನು ಮದ್ಗು ಎಂಬ ಜಾತಿಯ ಕಾಗೆಯೂ, ಮೀನಿನ ಮಾಂಸವನ್ನು ಕದ್ದವನು ಕಾಗೆಯೂ ಮತ್ತು ಹೋತದ ಮಾಂಸವನ್ನು ಅಪಹಾರಮಾಡಿದವನು ಗಿಡಗನೂ ಆಗಿ ಜನಿಸುವರು.

೨೫. ಉಪ್ಪನ್ನು ಕದ್ದವನು ಝಿಲ್ಲಿಕೆಯೂ, ಮೊಸರನ್ನು ಕದ್ದವನು ಕ್ರಿಮಿಯೂ ಮತ್ತು ಹಾಲನ್ನು ಅಪಹರಿಸಿದವನು ಬೆಳ್ಳಕ್ಕಿಯೂ ಆಗಿ ಜನಿಸುತ್ತಾನೆ.

೨೬. ಯಾವ ಮಾನವನು ಎಣ್ಣೆಯನ್ನು ಕದಿಯುವನೋ; ಆ ಪಾಪಿಯು ಜಿರಳೆಯಾಗುವನು. ಮತ್ತು ಜೇನುತುಪ್ಪವನ್ನು ಕದಿಯುವವನು ಕಾಡು ನೊಣವಾಗಿಯೂ, ಕಜ್ಜಾಯವನ್ನು ಕದಿಯುವವನು ಇರುವೆಯಾಗಿಯೂ ಹುಟ್ಟುವರು.

ಚೋರಯಿತ್ವಾ ಹವಿಷ್ಯಾನ್ನಂ ಜಾಯತೇ ಗೃಹಗೋಧಿಕಾ ।
ಆಸವಂ ಚೋರಯಿತ್ವಾ ತು ತಿತ್ತಿರಿತ್ವಮವಾಪ್ನುಯಾತ್ ॥೨೭॥

ಅಯೋ ಹೃತ್ವಾ ತು ಪಾಪಾತ್ಮಾ ವಾಯಸಃ ಸಮ್ಪ್ರಜಾಯತೇ ।
ಪಾತ್ರೇ ಕಾಂಸ್ಯೇಽಪಿ ಹಾರೀತಃ ಕಪೋತೋ ರೌಪ್ಯಭಾಜನೇ ॥೨೮॥

ಹೃತ್ವಾ ತು ಕಾಞ್ಚನಂ ಭಾಣ್ಡಂ ಕ್ರಿಮಿಯೋನೌ ಪ್ರಜಾಯತೇ ।
ಕೌಶೇಯಂ ಚೋರಯಿತ್ವಾ ತು ಚಕ್ರವಾಕತ್ವಮೃಚ್ಛತಿ ॥೨೯॥

ಕೋಶಕಾರಶ್ಚ ಕೌಶೇಯೇ ಹೃತೇ ವಸ್ತ್ರೇಽಭಿಜಾಯತೇ ।
ದುಕೂಲೇ ಶಾರ್ಙ್ಗಕಃ ಪಾಪೋ ಹೃತೇ ಚೈವಾಂಶುಕೇ ಶುಕಃ ॥೩೦॥

ಋಕ್ಷಶ್ಚೈವಾವಿಕಂ ಹೃತ್ವಾ ವಸ್ತ್ರಂ ಕ್ಷೌಮಂ ಚ ಜಾಯತೇ ।
ಕಾರ್ಪಾಸಿಕೇ ಹೃತೇ ಕ್ರೌಞ್ಚೋ ವಹ್ನೇರ್ಹರ್ತಾ ಬಕಃ ಖರಃ ॥೩೧॥

---

೨೭. ಹವಿಷ್ಯಾನ್ನವನ್ನು ಅಪಹರಿಸಿದವನು ಗೌಳಿಯಾಗಿ ಜನಿಸುವನು. ಮತ್ತು ಮದ್ಯವನ್ನು ಕದ್ದವನು ತಿತ್ತಿರಿ ಪಕ್ಷಿಯ ಜನ್ಮವನ್ನು ಹೊಂದುವನು.

೨೮. ಕಬ್ಬಿಣವನ್ನು ಅಪಹರಿಸಿದ ಪಾಪಾತ್ಮನು ಕಾಗೆಯಾಗಿ ಹುಟ್ಟು-ತ್ತಾನೆ. ಹಾಗೆಯೆ ಕಂಚನ್ನು ಕದ್ದವನು ಹಾರೀತಪಕ್ಷಿಯೂ, ಬೆಳ್ಳಿಯ ಪಾತ್ರೆ-ಯನ್ನು ಕದ್ದವನು ಪಾರಿವಾಳಪಕ್ಷಿಯೂ ಆಗಿ ಜನಿಸುವರು.

೨೯. ಹಾಗು ಚಿನ್ನದ ಪಾತ್ರವನ್ನು ಅಪಹರಿಸಿ ಕ್ರಿಮಿಯ ಯೋನಿಯಲ್ಲಿ ಜನಿಸುತ್ತಾನೆ. ರೇಷ್ಮೆಯ ಗೂಡುಗಳನ್ನು ಅಪಹರಿಸಿ ಚಕ್ರವಾಕಜನ್ಮವನ್ನು ಹೊಂದುತ್ತಾನೆ.

೩೦. ರೇಷ್ಮೆಯ ವಸ್ತ್ರವನ್ನು ಅಪಹರಿಸಿದವನು ರೇಷ್ಮೆಯ ಹುಳುವಾಗಿ ಹುಟ್ಟುತ್ತಾನೆ. ಪಟ್ಟವಸ್ತ್ರವನ್ನು ಅಪಹರಿಸಿದವನು ಶಾರ್ಙ್ಗಕಪಕ್ಷಿಯಾಗಿಯೂ, ಕಿರಿಗೆ-ವಸ್ತ್ರವನ್ನು ಕದ್ದವನು ಗಿಣಿಯಾಗಿಯೂ ಹುಟ್ಟುತ್ತಾನೆ.

೩೧. ಉಣ್ಣೆಬಟ್ಟೆಯನ್ನೂ, ನಾರುಬಟ್ಟೆಯನ್ನೂ ಅಪಹರಿಸಿದವನು ಕರಡಿಯಾಗಿ ಜನಿಸುತ್ತಾನೆ. ಕಾರ್ಪಾಸವಸ್ತ್ರವನ್ನು ಕದ್ದವನು ಕ್ರೌಂಚಪಕ್ಷಿ-ಯಾಗಿಯೂ, ಅಗ್ನಿಯನ್ನು ಕದ್ದವನು ಕತ್ತೆಯಾಗಿಯೂ ಜನಿಸುವನು.

ಮಯೂರೋ ವರ್ಣಕಾನ್ ಹೃತ್ವಾ ಪತ್ರಶಾಕಂ ಚ ಜಾಯತೇ ।
ಜೀವಞ್ಜೀವಕತಾಂ ಯಾತಿ ರಕ್ತವಸ್ತ್ರಾಪಹೃನ್ನರಃ ॥೩೨॥

ಚುಚುನ್ದರೀ ಶುಭಾನ್ಗನ್ಧಾನ್ವಾಸೋ ಹೃತ್ವಾ ಶಶೋ ಭವೇತ್ ।
ಖಞ್ಜಃ ಪಲಾಲಹರಣೇ ಕಾಷ್ಠಹೃದ್ಘುಣಕೀಟಕಃ ॥೩೩॥

ಪುಷ್ಪಾಪಹೃದ್ದರಿದ್ರಸ್ತು ಪಙ್ಗುರ್ಯಾನಾಪಹೃನ್ನರಃ ।
ಶಾಕಹರ್ತಾ ಚ ಹಾರೀತಸ್ತೋಯಹರ್ತಾ ಚ ಚಾತಕಃ ॥೩೪॥

ಭೂಮಿಹೃನ್ನರಕಾನ್ಗತ್ವಾ ರೌರವಾದೀನ್ಸುದಾರುಣಾನ್ ।
ತೃಣಗುಲ್ಮಲತಾವಲ್ಲೀತ್ವಕ್ಸಾರತರುತಾಂ ಕ್ರಮಾತ್ ॥೩೫॥

ಪ್ರಾಪ್ಯ ಕ್ಷೀಣಾಲ್ಪಪಾಪಸ್ತು ನರೋ ಭವತಿ ವೈ ತತಃ ।
ವೃಷಸ್ಯ ವೃಷಣೌ ಛಿತ್ವಾ ಷಣ್ಢತ್ವಂ ಪ್ರಾಪ್ನುಯಾನ್ನರಃ ॥೩೬॥

---

೩೨. ಚಿತ್ರಬಣ್ಣದ ಬಟ್ಟೆಗಳನ್ನೂ, ಕಾಯಿ-ಪಲ್ಯಗಳನ್ನೂ ಅಪಹರಿಸಿದವನು ನವಿಲಾಗಿ ಜನಿಸುವನು. ಕೆಂಪುವಸ್ತ್ರವನ್ನು ಕದ್ದವನು ಜೀವಂಜೀವ ಎಂಬ ಪಕ್ಷಿಜನ್ಮವನ್ನು ಹೊಂದುವನು.

೩೩. ಸುವಾಸನೆಯ ಗಂಧವಸ್ತುಗಳನ್ನು ಅಪಹರಿಸಿದವನು ಚಿಂಚಿಲಿಯೂ ವಸ್ತ್ರವನ್ನು ಕದ್ದವನು ಮೊಲವೂ ಆಗಿ ಹುಟ್ಟುತ್ತಾನೆ. ಜೊಳ್ಳುಹೊಟ್ಟನ್ನು ಕದ್ದವನು ಕುಂಟನೂ ಸೌದೆಯನ್ನು ಕದ್ದವನು ಘುಣಕೀಟವೂ ಆಗುವರು.

೩೪. ಹಾಗು ಹೂಗಳನ್ನು ಕದ್ದವನು ದರಿದ್ರನೂ, ವಾಹನವನ್ನು ಕದ್ದವನು ಕುಂಟನೂ, ತರಕಾರಿಯನ್ನು ಕದ್ದವನು ಹಾರೀತಪಕ್ಷಿಯೂ ಮತ್ತು ನೀರನ್ನು ಕದ್ದವನು ಚಾತಕಪಕ್ಷಿಯೂ ಆಗಿ ಜನಿಸುವರು.

೩೫. ಭೂಮಿಯನ್ನು ಅಪಹರಿಸಿದವನು, ರೌರವ ಮುಂತಾದ ಭಯಂಕರ ನರಕಗಳನ್ನು ಅನುಭವಿಸಿ ಕ್ರಮವಾಗಿ ಹುಲ್ಲು, ಪೊದೆ, ಬಳ್ಳಿ, ಲತೆ, ಬಿದುರು ಮತ್ತು ಮರಗಳ ಜನ್ಮವನ್ನು ಹೊಂದುತ್ತಾನೆ.

೩೬. ತರುವಾಯ ಪಾಪದಲ್ಲಿ ಹೆಚ್ಚುಭಾಗವು ಕಳೆದು ಅಲ್ಪಮಾತ್ರ ಪಾಪವುಳ್ಳವನಾಗಿ ಮಾನವನಾಗಿ ಜನಿಸುತ್ತಾನೆ. ಗೂಳಿಯ ಜನನೇಂದ್ರಿಯವನ್ನು ಕತ್ತರಿಸಿದ ಮಾನವನು ಷಂಢನಾಗಿ ಜನಿಸುತ್ತಾನೆ.

ಪರಿಹೃತ್ಯ ತಥಾ ಭೂಯೋ ಜನ್ಮನಾಮೇಕವಿಂಶತಿಮ್ ।
ಕೃಮಿಃ ಕೀಟಃ ಪತಙ್ಗೋ ವಾ ಪಕ್ಷೀ ತೋಯಚರೋ ಮೃಗಃ ॥೩೭॥

ಗೋತ್ವಂ ಚ ಪ್ರಾಪ್ಯ ಚಾಣ್ಡಾಲಪುಲ್ಕಸಾದಿ ಜುಗುಪ್ಸಿತಮ್ ।
ಪಙ್ಗ್ವನ್ಧೋ ಬಧಿರಃ ಕುಷ್ಠೀ ಯಕ್ಷ್ಮಣಾ ಚ ಪ್ರಪೀಡಿತಃ ॥೩೮॥

ಮುಖರೋಗಾಕ್ಷಿರೋಗೈಶ್ಚ ಗುದರೋಗೈಶ್ಚ ಬಾಧ್ಯತೇ ।
ಅಪಸ್ಮಾರೀ ಚ ಭವತಿ ಶೂದ್ರತ್ವಂ ಚ ಸ ಗಚ್ಛತಿ ॥೩೯॥

ಏಷ ಏವ ಕ್ರಮೋ ದೃಷ್ಟೋ ಗೋಸುವರ್ಣಾದಿಹಾರಿಣಾಮ್ ।
ವಿದ್ಯಾಪಹಾರಿಣಾಂ ಚೈವ ನಿಷ್ಕ್ರಯಭ್ರಂಶಿನಾಂ ಗುರೋಃ ॥೪೦॥

ಜಾಯಾಮನ್ಯಸ್ಯ ಪಾರಕ್ಯಾಂ ಪುರುಷಃ ಪ್ರತಿಪಾದಯೇತ್ ।
ಪ್ರಾಪ್ನೋತಿ ಷಣ್ಢತಾಂ ಮೂಢೋ ಯಾತನಾಭ್ಯಃ ಪರಿಚ್ಯುತಃ ॥೪೧॥

---

೩೭. ಮತ್ತು ಪುನಃ ಪುನಃ ಇಪ್ಪತ್ತೊಂದು ಜನ್ಮಗಳನ್ನು ಕಳೆದು ಮತ್ತೆ ಹಾಗೆಯೆ ಕ್ರಿಮಿ-ಕೀಟ ಪತಂಗ-ಪಕ್ಷಿ-ಜಲಚರ ಪ್ರಾಣಿಯಾಗಿ ಅನೇಕ ಮೂಕಪ್ರಾಣಿಗಳ ಜನ್ಮವನ್ನು ಎತ್ತುವನು.

೩೮. ಕಡೆಯಲ್ಲಿ ಗೋಜನ್ಮವನ್ನೂ ತರುವಾಯ ಹೊಲೆಯ-ಮಾದಿಗ ಇವರ ಜುಗುಪ್ಸೆಯಾದ ಜನ್ಮವನ್ನೂ ಕುಂಟ-ಕುರುಡ-ಕಿವುಡತನಗಳನ್ನೂ ಮತ್ತು ಕುಷ್ಠ-ರಾಜಯಕ್ಷ್ಮರೋಗಗಳ ಪೀಡೆಯನ್ನೂ ಹೊಂದುವನು.

೩೯. ಮತ್ತು ಮುಖರೋಗ, ನೇತ್ರರೋಗ, ಗುದೇಂದ್ರಿಯರೋಗಗಳಿಂದ ಪೀಡೆಯನ್ನು ಅನುಭವಿಸುತ್ತಾನೆ. ಅಲ್ಲದೆ ಅಪಸ್ಮಾರರೋಗವುಳ್ಳವನೂ ಆಗಿ ಶೂದ್ರಜಾತಿಯನ್ನು ಹೊಂದುತ್ತಾನೆ.

೪೦. ಗೋ-ಸುವರ್ಣ ಮುಂತಾದುವುಗಳನ್ನು ಅಪಹರಿಸಿದವರಿಗೂ, ವಿದ್ಯೆಯನ್ನು ಅಪಹರಿಸಿದವರಿಗೂ ಮತ್ತು ಗುರುದಕ್ಷಿಣೆಗೆ ಲೋಪತಂದವರಿಗೂ ಇದೇ ಪ್ರಕಾರವಾಗಿ ಅನೇಕ ಪಾಪಜನ್ಮ ಪ್ರಾಪ್ತಿಯಾಗುವುದು.

೪೧. ಪರಜಾಯೆಯನ್ನು ಮತ್ತೊಬ್ಬರಿಗೆ ಅರ್ಪಿಸಿದ ಪಾಪಿಯೂ ಮೂಢನೂ ಆದ ಮಾನವನು ನರಕಯಾತನೆಗಳನ್ನು ಅನುಭವಿಸಿದ ಮೇಲೆ ಅಲ್ಲಿಂದ ಚ್ಯುತನಾದನಂತರ ಷಂಢನಾಗಿ ಜನಿಸುತ್ತಾನೆ.

ಯಃ ಕರೋತಿ ನರೋ ಹೋಮಮಸಮಿದ್ಧೇ ಹುತಾಶನೇ ।
ಸೋಽಜೀರ್ಣಘನದುಃಖಾರ್ತೋ ಮನ್ದಾಗ್ನಿರಭಿಜಾಯತೇ ॥೪೨॥

ಪರನಿನ್ದಾ ಕೃತಘ್ನತ್ವಂ ಪರಮರ್ಮೋಪಘಟ್ಟನಮ್ ।
ನೈಷ್ಠುರ್ಯಂ ನಿರ್ಘೃಣತ್ವಂ ಚ ಪರದಾರೋಪಸೇವನಮ್ ॥೪೩॥

ಪರಸ್ವಹರಣಾಶಾ ಚ ದೇವತಾನಾಂ ಚ ಕುತ್ಸನಮ್ ।
ನಿಕೃತ್ಯಾ ವಞ್ಚನಾ ನ್ನೃಣಾಂ ಕಾರ್ಪಣ್ಯಂ ಚ ನೃಣಾಂ ವಧಃ ॥೪೪॥

ಯಾನಿ ಚ ಪ್ರತಿಷಿದ್ಧಾನಿ ತದ್ವೃತ್ತಿಂ ಚ ಪ್ರಶಂಸತಾಮ್ ।
ಉಪಲಕ್ಷಣಾನಿ ಜಾನೀಯಾನ್ಮುಕ್ತಾನಾಂ ನರಕಾದನು ॥೪೫॥

ದಯಾ ಭೂತೇಷು ಸದ್ವಾದಃ ಪರಲೋಕಂ ಪ್ರತಿ ಕ್ರಿಯಾ ।
ಸತ್ಯಾ ಭೂತಹಿತಾ ಚೋಕ್ತಿರ್ವೇದಪ್ರಾಮಾಣ್ಯದರ್ಶನಮ್ ॥೪೬॥

---

೪೨. ಯಾವ ಮಾನವನು ಉರಿಯದಿರುವ ಅಗ್ನಿಯಲ್ಲಿ ಹೋಮವನ್ನು ಮಾಡುವನೋ, ಅವನು ಅಗ್ನಿಮಾಂದ್ಯವುಳ್ಳವನಾಗಿ ಹೆಚ್ಚಾದ ಅಜೀರ್ಣ ದುಃಖದಿಂದ ಪೀಡಿತನಾಗುವನು.

೪೩. ಮತ್ತು ನರಕಚ್ಯುತರಾಗಿ ಪಾಪಶೇಷದಿಂದ ಕೂಡಿ ಜನ್ಮವೆತ್ತುವವರಲ್ಲಿ ಪರನಿಂದೆ, ಕೃತಘ್ನತೆ, ಮರ್ಮೋದ್ಘಾಟನ, ನಿಷ್ಠುರತೆ, ನಿರ್ಘೃಣತೆ ಮತ್ತು ಪರಸ್ತ್ರೀಭೋಗಚಾಪಲ--ಇವು ಚಿಹ್ನವಾಗಿರುವುವು.

೪೪. ಮತ್ತು ಪರಸ್ವತ್ತನ್ನು ಅಪಹರಿಸುವ ಇಚ್ಛೆ, ದೇವತೆಗಳನ್ನು ನಿಂದಿಸುವುದು, ಮಾನವರಲ್ಲಿ ವಂಚನೆಮಾಡುವ ಚಾಳಿ, ದೀನಭಾವ ಮತ್ತು ಮನುಷ್ಯಹತ್ಯೆ—ಇವು ಅಂತಹ ಪಾಪಿಪುರುಷರ ಚಿಹ್ನಗಳಾಗಿರುವುವು.

೪೫. ಶಾಸ್ತ್ರಗಳಲ್ಲಿ ನಿಷೇಧಿಸಲ್ಪಟ್ಟ ನಡತೆಯನ್ನು ಪ್ರಶಂಸಿಸುತ್ತಿರುವ, ನರಕಲೋಕದಿಂದ ಚ್ಯುತನಾಗಿ ಜನ್ಮವೆತ್ತಿರುವ ಪಾಪಿಗಳಲ್ಲಿ ಮೇಲೆ ಹೇಳಿದ ಲಕ್ಷಣಗಳು ಇರುವುವು.

೪೬. ಪ್ರಾಣಿಗಳಲ್ಲಿ ದಯೆ, ಪ್ರಿಯ ವಾಣಿ, ಪರಲೋಕಸಾಧನಾನುಷ್ಠಾನ, ಸತ್ಯ-ಭೂತಹಿತವಾದ ಉಕ್ತಿ ಮತ್ತು ವೇದಪ್ರಾಮಾಣ್ಯಬುದ್ಧಿ ಇವುಗಳು ಸ್ವರ್ಗಲೋಕದಿಂದ ಚ್ಯುತರಾದ ಪುಣ್ಯಶೇಷವುಳ್ಳವರ ಚಿಹ್ನಗಳು.

ಗುರುದೇವರ್ಷಿಸಿದ್ಧರ್ಷಿಪೂಜನಂ ಸಾಧುಸಙ್ಗಮಃ ।
ಸತ್ಕ್ರಿಯಾಭ್ಯಸನಂ ಮೈತ್ರೀಂ ಚ ತದ್ಬುದ್ಧ್ಯೇತ ಪಣ್ಡಿತಃ ॥೪೭॥

ಅನ್ಯಾನಿ ಚೈವ ಸದ್ಧರ್ಮಕ್ರಿಯಾಭೂತಾನಿ ಯಾನಿ ಚ ।
ಸ್ವರ್ಗಚ್ಯುತಾನಾಂ ಲಿಙ್ಗಾನಿ ಪುರುಷಾಣಾಮಪಾಪಿನಾಮ್ ॥೪೮॥

ಏತದುದ್ದೇಶತೋ ರಾಜನ್ಭವತಃ ಕಥಿತಂ ಮಯಾ ।
ಸ್ವಕರ್ಮಫಲಭೋಕ್ತೄಣಾಂ ಪುಣ್ಯಾನಾಂ ಪಾಪಿನಾಂ ತಥಾ ॥೪೯॥

ತದೇಹ್ಯನ್ಯತ್ರ ಗಚ್ಛಾವೋ ದೃಷ್ಟಂ ಸರ್ವಂ ತ್ವಯಾಧುನಾ ।
ತ್ವಯಾ ಚ ದೃಷ್ಟೋ ನರಕಸ್ತದೇಹ್ಯನ್ಯತ್ರ ಗಮ್ಯತಾಮ್ ॥೫೦॥

---

೪೭. ಗುರು-ದೇವತೆ-ಋಷಿ-ಸಿದ್ಧ ಇವರ ಅರ್ಚನ, ಸಾಧುಸಹವಾಸ, ಸದಾಚಾರಪರತೆ ಮತ್ತು ವಿದ್ವಜ್ಜನರಲ್ಲಿ ಮೈತ್ರಿಭಾವ ಇವುಗಳು ಸ್ವರ್ಗಭ್ರಷ್ಟರಾಗಿ ಜನ್ಮವೆತ್ತಿದವರ ಚಿಹ್ನಗಳಾಗಿವೆ.

೪೮. ಮತ್ತು ಇದಲ್ಲದೆ ಶಾಸ್ತ್ರವಿಹಿತವಾದ ಧರ್ಮಾನುಷ್ಠಾನದ ಪ್ರವೃತ್ತಿಯೆಲ್ಲವೂ ಪಾಪವಿಲ್ಲದ, ಸ್ವರ್ಗಸುಖದಿಂದ ಭ್ರಂಶಹೊಂದಿ ಪುನರ್ಜನ್ಮವೆತ್ತಿದವರಲ್ಲಿ ಕಾಣುವ ಚಿಹ್ನಗಳಾಗಿವೆ.

೪೯. ರಾಜನೆ ! ಪುಣ್ಯವಂತರು ಮತ್ತು ಪಾಪಿಗಳು ತಮ್ಮ ಪುಣ್ಯಪಾಪಕರ್ಮಗಳಿಗೆ ಅನುರೂಪವಾಗಿ ಭುಂಜಿಸುವ ಭೋಗಪರಿಪಾಕವನ್ನು ನಾನು ನಿನಗೆ ಸಂಗ್ರಹವಾಗಿ ಹೇಳಿರುವೆನು.

೫೦. ಆದುದರಿಂದ ನೀನು ಈಗ ಇಲ್ಲಿಂದ ಹೊರಡು. ಬೇರೊಂದು ಕಡೆಗೆ ಹೋಗೋಣ. ನಿನ್ನಿಂದ ಎಲ್ಲವೂ ತಿಳಿಯಲ್ಪಟ್ಟಿತು. ಪ್ರತ್ಯಕ್ಷವಾಗಿ ನರಕಲೋಕವು ನೋಡಲ್ಪಟ್ಟಿತು. ಆದ್ದರಿಂದ ಈಗ ಮತ್ತೊಂದು ಕಡೆಗೆ ಹೋಗಬೇಕಾಗಿದೆ.

ಪುತ್ರ ಉವಾಚ :—

ತತಸ್ತಮಗ್ರತಃ ಕೃತ್ವಾ ಸ ರಾಜಾ ಗನ್ತುಮುದ್ಯತಃ ।
ತತಶ್ಚ ಸರ್ವೈರುತ್ಕ್ರುಷ್ಟಂ ಯಾತನಾಸ್ಥಾಯಿಭಿರ್ನೃಭಿಃ ॥೫೧॥

ಪ್ರಸಾದಂ ಕುರು ಭೂಪೇತಿ ತಿಷ್ಠ ತಾವನ್ಮುಹೂರ್ತಕಮ್ ।
ತ್ವದಙ್ಗಸಙ್ಗೀ ಪವನೋ ಮನೋ ಹ್ಲಾದಯತೇ ಹಿ ನಃ ॥೫೨॥

ಪರಿತಾಪಂ ಚ ಗಾತ್ರೇಷು ಪೀಡಾಂ ಬಾಧಾಂ ಚ ಕೃತ್ಸ್ನಶಃ ।
ಅಪಹನ್ತಿ ನರವ್ಯಾಘ್ರ ಕೃಪಾಂ ಕುರು ಮಹೀಪತೇ ॥೫೩॥

ಏತಚ್ಛ್ರುತ್ವಾ ವಚಸ್ತೇಷಾಂ ತಂ ಯಾಮ್ಯಂ ಪುರುಷಂ ತತಃ ।
ಪಪ್ರಚ್ಛ ಕಥಮೇತೇಷಾಮಾಹ್ಲಾದೋ ಮಯಿ ತಿಷ್ಠತಿ ॥೫೪॥

ಪುತ್ರನು ಇಂತೆಂದನು :—

೫೧. ತರುವಾಯ ಆ ರಾಜನು ಯಮಪುರುಷನನ್ನು ಮುಂದಿರಿಸಿಕೊಂಡು ಹೊರಡಲಾರಂಭಿಸಿದನು. ಆಗ ನರಕಯಾತನೆಯನ್ನು ಅನುಭವಿಸುತ್ತಿದ್ದ ಪಾಪಿಜಂತುಗಳೆಲ್ಲರೂ ಗಟ್ಟಿಯಾಗಿ ಕೂಗಿಹೇಳಿದರು.

೫೨. ರಾಜನೆ ! ದೀನರಲ್ಲಿ ಅನುಗ್ರಹ ತೋರು. ಒಂದು ಮುಹೂರ್ತಕಾಲವಾದರೂ ಇಲ್ಲಿ ನಿಲ್ಲು. ನಿನ್ನ ದೇಹದ ಮೇಲೆ ಬೀಸಿದ ಗಾಳಿಯು ಇತ್ತ ಬೀಸಿ ನಮ್ಮ ಮನಸ್ಸನ್ನು ಆಹ್ಲಾದಪಡಿಸುತ್ತಿದೆ.

೫೩. ಪುರುಷೋತ್ತಮನಾದ ರಾಜನೆ ! ನಿನ್ನ ದೇಹಸಂಗವುಳ್ಳ ಮಾರುತವು ನಮ್ಮ ಅವಯವಗಳಿಗಾಗುತ್ತಿರುವ ತಾಪವನ್ನೂ, ಪೀಡೆಯನ್ನೂ ಮತ್ತು ನೋವನ್ನೂ ಸಂಪೂರ್ಣವಾಗಿ ನಿವಾರಿಸುತ್ತಿದೆ. ನಮ್ಮಲ್ಲಿ ಕರುಣೆಯನ್ನು ತೋರು.

೫೪. ರಾಜನು ಪಾಪಿಜನರ ಈ ಮಾತನ್ನು ಕೇಳಿ ತರುವಾಯ ಯಮದೂತನನ್ನು ಕುರಿತು ಪ್ರಶ್ನಿಸಿದನು. ನಾನು ಹತ್ತಿರದಲ್ಲಿದ್ದ ಮಾತ್ರದಿಂದ ಈ ಪಾಪಿಗಳಿಗೆ ಆನಂದವು ದೊರಕುವುದೆಂತು ?

ಕಿಂ ಮಯಾ ಕರ್ಮ ತತ್ಪುಣ್ಯಂ ಮರ್ತ್ಯಲೋಕೇ ಮಹತ್ಕೃತಮ್ ।
ಆಹ್ಲಾದದಾಯಿನೀ ವೃಷ್ಟಿರ್ಯಸ್ಯೇಯಂ ತದುದೀರಯ ॥೫೫॥

ಯಾಮ್ಯ ಉವಾಚ :—

ಪಿತೃದೇವಾತಿಥಿಪ್ರೇಷ್ಯಶಿಷ್ಟೇನಾನ್ನೇನ ತೇ ತನುಃ ।
ಪುಷ್ಟಿಮಭ್ಯಾಗತಾ ಯಸ್ಮಾತ್ತದ್ಗತಂ ಚ ಮನೋ ಯತಃ ॥೫೬॥

ತತಸ್ತ್ವದ್ಗಾತ್ರಸಂಸರ್ಗೀ ಪವನೋ ಹ್ಲಾದಕಾರಕಃ ।
ಪಾಪಕರ್ಮಕೃತೋ ರಾಜನ್ಯಾತನಾ ನ ಪ್ರಬಾಧತೇ ॥೫೭॥

ಅಶ್ವಮೇಧಾದಯೋ ಯಜ್ಞಾಸ್ತ್ವಯೇಷ್ಟಾ ವಿಧಿವದ್ಯತಃ ।
ತತಸ್ತ್ವದ್ದರ್ಶನಾದ್ಯಾಮ್ಯಾ ಯನ್ತ್ರಶಸ್ತ್ರಾಗ್ನಿನಾಯಸಾಃ ॥೫೮॥

---

೫೫. ನಾನು ಮರ್ತ್ಯಲೋಕದಲ್ಲಿ ಮಹತ್ತಾದ ಪುಣ್ಯಕರ್ಮವನ್ನು ಮಾಡಿರುವುದೇನು? ಯಾವ ಕರ್ಮಕ್ಕೆ ಹೀಗೆ ಪಾಪಿಗಳನ್ನು ಸಂತೋಷ-ಪಡಿಸುವ ಪ್ರಭಾವವಿರುವುದು? ಇದನ್ನು ನನಗೆ ಹೇಳು.

ಯಮಕಿಂಕರನು ಹೀಗೆ ಹೇಳಿದನು :—

೫೬. ನಿನ್ನ ದೇಹವು ಪಿತೃ-ದೇವ-ಅತಿಥಿ-ಭೃತ್ಯವರ್ಗ ಇವರಲ್ಲಿ ನಿವೇದಿಸಿ ಉಳಿದ ಅನ್ನದಿಂದ ಪುಷ್ಟಿಯನ್ನು ಹೊಂದಿರುವುದು. ಮತ್ತು ನಿನ್ನ ಮನಸ್ಸು ಪಿತೃ-ದೇವಾದಿಗಳ ಸೇವೆಯಲ್ಲಿ ತತ್ಪರವಾಗಿತ್ತು.

೫೭. ರಾಜನೆ! ಈ ಕಾರಣದಿಂದ ನಿನ್ನ ದೇಹದ ಸಂಪರ್ಕವನ್ನು ಹೊಂದಿದ ಗಾಳಿಯು ಪಾಪಿಜನರಿಗೆ ಸಂತೋಷವನ್ನು ಕೊಡುವುದು. ಅದರ ಮುಂದೆ ನರಕಯಾತನೆಯು ಅವರನ್ನು ಬಾಧಿಸುವುದಿಲ್ಲ.

೫೮. ಯಾವ ಕಾರಣದಿಂದ ನೀನು ಅಶ್ವಮೇಧ ಮುಂತಾದ ಯಾಗ-ಗಳನ್ನು ವಿಧಿವತ್ತಾಗಿ ಆಚರಿಸಿದೆಯೊ. ಆದುದರಿಂದ ಯಮಲೋಕದ ಯಂತ್ರ-ಶಸ್ತ್ರ-ಅಗ್ನಿ-ಕಾಗೆ ಮುಂತಾದುವುಗಳು ನಿನ್ನ ದರ್ಶನದಿಂದ ಮೃದುತ್ವವನ್ನು ಹೊಂದಿವೆ.

ಪೀಡನಚ್ಛೇದದಾಹಾದಿಮಹಾದುಃಖಸ್ಯ ಹೇತವಃ ।
ಮೃದುತ್ವಮಾಗತಾ ರಾಜಂಸ್ತೇಜಸೋಪಹತಾಸ್ತವ ॥೫೯॥

ರಾಜೋವಾಚ :—

ನ ಸ್ವರ್ಗೇ ಬ್ರಹ್ಮಲೋಕೇ ವಾ ತತ್ಸುಖಂ ಪ್ರಾಪ್ಯತೇ ನರೈಃ ।
ಯದಾರ್ತಜನ್ತುನಿರ್ವಾಣದಾನೋತ್ಥಮಿತಿ ಮೇ ಮತಿಃ ॥೬೦॥

ಯದಿ ಮತ್ಸನ್ನಿಧಾವೇತಾನ್ಯಾತನಾ ನ ಪ್ರಬಾಧತೇ ।
ತತೋ ಭದ್ರಮುಖಾತ್ರಾಹಂ ಸ್ಥಾಸ್ಯೇ ಸ್ಥಾಣುರಿವಾಚಲಃ ॥೬೧॥

ಯಮಪುರುಷ ಉವಾಚ :—

ಏಹಿ ರಾಜೇನ್ದ್ರ ಗಚ್ಛಾಮಿ ನಿಜಪುಣ್ಯಸಮಾರ್ಜಿತಾನ್ ।
ಭುಙ್ಕ್ಷ್ವ ಭೋಗಾಂಸ್ತು ಭುಜ್ಯನ್ತು ಯಾತನಾಃ ಪಾಪಕರ್ಮಿಣಃ
॥೬೨॥

---

೫೯. ರಾಜನೆ! ಪೀಡಿಸುವುದು, ಕತ್ತರಿಸುವುದು, ಸುಡುವುದು—ಮುಂತಾದ ಮಹಾದುಃಖಕ್ಕೆ ಕಾರಣವಾದ ಯಂತ್ರ ಮುಂತಾದುವುಗಳು ನಿನ್ನ ತೇಜಸ್ಸಿನಿಂದ ಕುಂಠಿತವಾಗಿ ಮೃದುತ್ವಗುಣವನ್ನು ಹೊಂದಿವೆ.

ರಾಜನು ಇಂತೆಂದನು :—

೬೦. ನೊಂದ ಜಂತುಗಳಿಗೆ ಆನಂದವನ್ನುಂಟುಮಾಡಿದ್ದರಿಂದ ಜನಿಸುವ ಸುಖವನ್ನು ಸ್ವರ್ಗಲೋಕದಲ್ಲಿಯೂ ಬ್ರಹ್ಮಲೋಕದಲ್ಲಿಯೂ ಮಾನವರು ಹೊಂದಲಾರರೆಂದು ನಾನು ತಿಳಿಯುವೆನು.

೬೧. ಎಲೈ ಮಂಗಳಮುಖವುಳ್ಳವನೆ! ನನ್ನ ಸನ್ನಿಧಿಯಲ್ಲಿ ಯಮ-ಯಾತನೆಯು ಇವರನ್ನು ಬಾಧಿಸುವುದಿಲ್ಲವೆಂಬುದು ನಿಜವಾದರೆ ನಾನು ಮರದಂತೆ ಅಚಲವಾಗಿ ಇಲ್ಲಿಯೆ ಇರುವೆನು.

ಯಮಪುರುಷನು ಹೀಗೆ ಹೇಳಿದನು :—

೬೨. ರಾಜೇಂದ್ರನೆ! ಇತ್ತ ಬಾ, ಹೋಗೋಣ. ನೀನು ನಿನ್ನ ಪುಣ್ಯ ಕರ್ಮಾರ್ಜಿತವಾದ ಉತ್ತಮಭೋಗಗಳನ್ನು ಅನುಭವಿಸು. ಈ ಪಾಪಿಗಳು ತಮ್ಮ ಪಾಪಕರ್ಮದ ಯಾತನೆಗಳನ್ನು ಭುಂಜಿಸಲಿ.

ರಾಜೋವಾಚ :—

ತಸ್ಮಾನ್ನ ತಾವದ್ಯಾಸ್ಯಾಮಿ ಯಾವದೇತೇ ಸುದುಃಖಿತಾಃ ।
ಮತ್ಸನ್ನಿಧಾನಾತ್ಸುಖಿನೋ ಭವನ್ತಿ ನರಕೌಕಸಃ ॥೬೩॥

ಧಿಕ್ತಸ್ಯ ಜೀವಿತಂ ಪುಂಸಃ ಶರಣಾರ್ಥಿನಮಾಗತಮ್ ।
ಯೋ ನಾರ್ತಮನುಗೃಹ್ಣಾತಿ ವೈರಿಪಕ್ಷಮಪಿ ಧ್ರುವಮ್ ॥೬೪॥

ಯಜ್ಞದಾನತಪಾಂಸೀಹ ಪರತ್ರ ಚ ನ ಭೂತಯೇ ।
ಭವನ್ತಿ ತಸ್ಯ ಯಸ್ಯಾರ್ತಪರಿತ್ರಾಣೇ ನ ಮಾನಸಮ್ ॥೬೫॥

ನರಸ್ಯ ಯಸ್ಯ ಕಠಿನಂ ಮನೋ ಬಾಲಾತುರಾದಿಷು ।
ವೃದ್ಧೇಷು ಚ ನ ತಂ ಮನ್ಯೇ ಮಾನುಷಂ ರಾಕ್ಷಸೋ ಹಿ ಸಃ ॥೬೬॥

ರಾಜನು ಹೀಗೆಂದನು :—

೬೩. ಹೀಗೆ ಬಲು ದುಃಖಗೊಂಡು ನರಕದಲ್ಲಿ ವಾಸಿಸುತ್ತಿದ್ದ ಈ ಪ್ರಾಣಿಗಳು ನನ್ನ ಸನ್ನಿಧಾನದಿಂದ ಸುಖಿಗಳಾಗಿರುವರಾದ್ದರಿಂದ ನಾನು ಇಲ್ಲಿಂದ ಬೇರೆ ಕಡೆಗೆ ಬರುವುದಿಲ್ಲ. ಇಲ್ಲಿಯೆ ಇರುವೆನು.

೬೪. ಯಾವ ನರನು ದುಃಖಗೊಂಡು ಶರಣಾರ್ಥಿಯಾಗಿ ಬಂದವನನ್ನು ಶತ್ರುಪಕ್ಷಕ್ಕೆ ಸೇರಿದವನಾಗಿದ್ದರೂ ಕೂಡ ಅನುಗ್ರಹಿಸುವುದಿಲ್ಲವೊ ; ಅಂತಹ ನರನ ಜನ್ಮಕ್ಕೆ ನಿಜವಾಗಿ ಧಿಕ್ಕಾರವು.

೬೫. ಯಾರಿಗೆ ಕಷ್ಟಪಡುತ್ತಿರುವವರನ್ನು ಪಾಲಿಸುವುದರಲ್ಲಿ ಮನಸ್ಸು ಇಲ್ಲವೊ ; ಅವನು ಮಾಡಿದ ಯಜ್ಞ-ದಾನ-ತಪಸ್ಸು ಮುಂತಾದ ಧರ್ಮಗಳು ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಫಲವನ್ನು ಕೊಡುವುದಿಲ್ಲ.

೬೬. ಯಾವ ಮಾನವನ ಮನಸ್ಸು ಬಾಲಕರು, ದುಃಖಿಗಳು, ವೃದ್ಧರು ಇವರ ವಿಷಯದಲ್ಲಿ ಕಠಿನವಾಗಿ ವರ್ತಿಸುವುದೊ ; ಅವನನ್ನು ನಾನು ಮನುಷ್ಯನೆಂದು ಭಾವಿಸುವುದಿಲ್ಲ. ಅವನು ರಾಕ್ಷಸನೇ ಸರಿ.

ಏಷಾಂ ಮತ್ಸನ್ನಿಕರ್ಷಾತ್ತು ಯದ್ಯಗ್ನಿಪರಿತಾಪಜಮ್ ।
ತಥೋಗ್ರಗನ್ಧಜಂ ವಾಪಿ ದುಃಖಂ ನರಕಸಮ್ಭವಮ್ ॥೬೭॥

ಕ್ಷುತ್ಪಿಪಾಸೋದ್ಭವಂ ದುಃಖಂ ಯಚ್ಚ ಮೂರ್ಛಾಪ್ರದಂ ಮಹತ್ ।
ವಿನಾಶಮೇತಿ ತದ್ಭದ್ರ ಮನ್ಯೇ ಸ್ವರ್ಗಸುಖಾತ್ಪರಮ್ ॥೬೮॥

ಪ್ರಾಪ್ಸ್ಯನ್ತೇ ತೇ ಯದಿ ಸುಖಂ ಬಹವೋ ದುಃಖಿತೇ ಮಯಿ ।
ಕಿಂ ವಾ ಪ್ರಾಪ್ತಂ ಮಯಾ ನ ಸ್ಯಾತ್ತಸ್ಮಾತ್ತ್ವಂ ವದ ಮಾ ಚಿರಮ್ ॥೬೯॥

ಯಾಮ್ಯ ಉವಾಚ :—

ಏಷ ಧರ್ಮಶ್ಚ ಶಕ್ರಶ್ಚ ತ್ವಾಂ ನೇತುಂ ಸಮುಪಾಗತೌ ।
ಅವಶ್ಯಮಸ್ಮಾದ್ಗನ್ತವ್ಯಂ ತಸ್ಮಾತ್ಪಾರ್ಥಿವ ಗಮ್ಯತಾಮ್ ॥೭೦॥

---

೬೭. ಈ ಪಾಪಿಗಳಿಗೆ ಅಗ್ನಿತಾಪದಿಂದ ಹುಟ್ಟುವುದೂ, ಉಗ್ರವಾದ ದುರ್ಗಂಧದಿಂದ ಹುಟ್ಟುವುದೂ ಆದ ನರಕದುಃಖವು ನನ್ನ ಸನ್ನಿಧಿಯಿಂದ ನಾಶವಾಗುವುದಾದರೆ ಇವರ ದುಃಖಶಾಂತಿಯು ನನಗೆ ಸ್ವರ್ಗಸುಖಕ್ಕಿಂತಲೂ ಮೇಲಾದುದು.

೬೮. ಮಂಗಳಮೂರ್ತಿಯೆ! ಹಾಗು ಹಸಿವು-ನೀರಡಿಕೆಗಳ ದುಃಖ, ಮೂರ್ಛೆಯನ್ನೂ ಕೊಡುವ ಮಹಾದುಃಖ—ಇದೆಲ್ಲವೂ ನನ್ನ ಸನ್ನಿಧಿಯಿಂದ ನಾಶವಾಗುವುದಾದರೆ ಇವರ ದುಃಖ ಪರಿಹಾರವು ಸ್ವರ್ಗಸುಖಕ್ಕಿಂತಲೂ ನನಗೆ ಹೆಚ್ಚಿನದಾಗಿದೆ.

೬೯. ನಾನೊಬ್ಬನು ಮಾತ್ರ ದುಃಖಿತನಾಗಿದ್ದರೂ ಈ ಅನೇಕಮಂದಿ ಪಾಪಿಗಳು ಸುಖವನ್ನು ಹೊಂದುವುದಾದರೆ ಇವರಿಗೆ ಸುಖವನ್ನು ಕಲ್ಪಿಸಿದ ನಾನು ಇದಕ್ಕಿಂತಲೂ ಹೆಚ್ಚಿನ ಸುಖವನ್ನು ಹೊಂದಬೇಕಾದುದು ಏನಿದೆ? ನೀನು ಹೇಳು.

ಯಮದೂತನು ಹೇಳಿದನು :—

೭೦. ಪಾರ್ಥಿವನೆ! ಇಗೊ! ಇತ್ತ ಧರ್ಮಪ್ರಜಾಪತಿಯೂ ದೇವೇಂದ್ರನೂ ನಿನ್ನನ್ನು ಕರೆದೊಯ್ಯಲು ಬಂದಿರುವರು. ಆದ್ದರಿಂದ ಅವಶ್ಯವಾಗಿ ಇಲ್ಲಿಂದ ಹೋಗಲೇ ಬೇಕು. ಆದ್ದರಿಂದ ಮುಂದೆ ಹೊರಡು.

ಧರ್ಮ ಉವಾಚ :—

ನಯಾಮಿ ತ್ವಾಮಹಂ ಸ್ವರ್ಗಂ ತ್ವಯಾ ಸಮ್ಯಗುಪಾಸಿತಃ ।
ವಿಮಾನಮೇತದಾರುಹ್ಯ ಮಾ ವಿಲಮ್ಬಸ್ವ ಗಮ್ಯತಾಮ್ ॥೭೧॥

ರಾಜೋವಾಚ :—

ನರಕೇ ಮಾನವಾ ಧರ್ಮ ಪೀಡ್ಯಮಾನಾಃ ಸಹಸ್ರಶಃ ।
ತ್ರಾಹೀತ್ಯಾರ್ತಾ ಚ ಕ್ರನ್ದನ್ತಿ ಮಾಮತೋ ನ ವ್ರಜಾಮ್ಯಹಮ್ ॥೭೨॥

ಇನ್ದ್ರ ಉವಾಚ :—

ಕರ್ಮಣಾ ನರಕಪ್ರಾಪ್ತಿರೇಷಾಂ ಪಾಪಿಷ್ಠಕರ್ಮಣಾಮ್ ।
ಸ್ವರ್ಗಸ್ತ್ವಯಾಪಿ ಗನ್ತವ್ಯೋ ನೃಪ ಪುಣ್ಯೇನ ಕರ್ಮಣಾ ॥೭೩॥

ಧರ್ಮದೇವನು ಇಂತೆಂದನು :—

೭೧. ನಿನ್ನಿಂದ ಯಥಾವಿಧಿಯಾಗಿ ಸೇವಿಸಲ್ಪಟ್ಟ ನಾನು ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ಯುವೆನು. ವಿಲಂಬಮಾಡಬೇಡ, ಈ ವಿಮಾನವನ್ನು ಏರಿ ಪ್ರಯಾಣಮಾಡು.

ರಾಜನು ಹೇಳಿದನು :—

೭೨. ಧರ್ಮದೇವತೆಯೆ! ನರಕದಲ್ಲಿ ಪೀಡಿಸಲ್ಪಡುತ್ತಿದ್ದ ಸಾವಿರಾರು ಮಂದಿ ಮಾನವರು ನನ್ನನ್ನು "ಕಾಪಾಡು-ಕಾಪಾಡು" ಎಂದು ಕೂಗಿಕೊಳ್ಳುತ್ತಿರುವರು. ಆದುದರಿಂದ ನಾನು ಸ್ವರ್ಗಕ್ಕೆ ಹೋಗುವುದಿಲ್ಲ.

ಇಂದ್ರನು ಹೇಳಿದನು :—

೭೩. ರಾಜನೇ! ಪಾಪಕರ್ಮವನ್ನು ಆಚರಿಸಿದ ಈ ಮಾನವರಿಗೆ ಪಾಪಬಲದಿಂದ ನರಕಪ್ರಾಪ್ತಿಯಾಗಿರುವುದು. ನೀನು ಪುಣ್ಯಕರ್ಮವನ್ನು ಮಾಡಿರುವೆ. ಆದ್ದರಿಂದ ನೀನು ಸ್ವರ್ಗಕ್ಕೆ ಹೋಗಬೇಕಾದವನು ಆಗಿದ್ದೀಯೆ.

ರಾಜೋವಾಚ :—

ಯದಿ ಜಾನಾಸಿ ಧರ್ಮ ತ್ವಂ ತ್ವಂ ವಾ ದೇವ ಶತಕ್ರತೋ ।
ಮಮ ಯಾವತ್ಪ್ರಮಾಣಂ ತು ಶುಭಂ ತದ್ವಕ್ತುಮರ್ಹಥಃ ॥೭೪॥

ಧರ್ಮ ಉವಾಚ :—

ಅಬ್ಬಿನ್ದವೋ ಯಥಾಮ್ಭೋಧೌ ಯಥಾ ವಾ ದಿವಿ ತಾರಕಾಃ ।
ಯಥಾ ವಾ ವರ್ಷತೋ ಧಾರಾ ಗಙ್ಗಾಯಾಂ ಸಿಕತಾ ಯಥಾ ॥೭೫॥

ಅಸಙ್ಖ್ಯೇಯಾ ಮಹಾರಾಜ ನಾನಾಯೋನಿಷು ಜನ್ತವಃ ।
ತಥಾ ತವಾಪಿ ಪುಣ್ಯಸ್ಯ ಸಙ್ಖ್ಯಾ ನೈವೋಪಪದ್ಯತೇ ॥೭೬॥

ಅನುಕಮ್ಪಾಮಿಮಾಮದ್ಯ ನಾರಕೇಷ್ವಿಹ ಕುರ್ವತಾ ।
ತದೇವ ಶತಸಾಹಸ್ರಸಙ್ಖ್ಯಾನೀತಂ ತ್ವಯಾ ನೃಪ ॥೭೭॥

ರಾಜನು ಹೇಳಿದನು :—

೭೪. ಧರ್ಮದೇವತೆಯೆ! ನೀನು ತಿಳಿದಿರುವೆಯಾದರೆ ಅಥವಾ ದೇವೇಂದ್ರನೆ! ನೀನಾದರೂ ತಿಳಿದಿರುವೆಯಾದರೆ ನನ್ನ ಪುಣ್ಯಕರ್ಮವು ಎಷ್ಟು ಪ್ರಮಾಣವುಳ್ಳದ್ದೆಂಬುದನ್ನು ಹೇಳಲು ಅರ್ಹರಾಗಿರುವಿರಿ.

ಧರ್ಮಪ್ರಜಾಪತಿಯು ನುಡಿದನು :—

೭೫. ಸಮುದ್ರದಲ್ಲಿ ಜಲಬಿಂದುಗಳನ್ನೂ, ಆಕಾಶದಲ್ಲಿ ನಕ್ಷತ್ರಗಳನ್ನೂ, ಮಳೆಯಲ್ಲಿ ಜಲಧಾರೆಗಳನ್ನೂ ಮತ್ತು ಗಂಗಾತೀರದಲ್ಲಿ ಮರಳುಗಳನ್ನೂ ಹೇಗೆ ಎಣಿಸಲಾಗುವುದಿಲ್ಲವೊ; ಹಾಗೆ ನಿನ್ನ ಪುಣ್ಯಕರ್ಮಗಳನ್ನು ಎಣಿಸಲು ಶಕ್ಯವಿಲ್ಲ.

೭೬. ಮಹಾರಾಜನೆ! ನಾನಾಯೋನಿಗಳಲ್ಲಿ ಜನಿಸುವ ಜೀವಜಂತು-ಗಳು ಹೇಗೆ ಲೆಕ್ಕಮಾಡಲು ಅಶಕ್ಯವೊ; ಹಾಗೆ ನೀನು ಮಾಡಿರುವ ಪುಣ್ಯಕ್ಕೆ ಲೆಕ್ಕವೇ ಇಲ್ಲ.

೭೭. ರಾಜನೆ! ಇಂದು ಇಲ್ಲಿ ಈ ನರಕಜಂತುಗಳಲ್ಲಿ ದಯೆಯನ್ನು ತೋರಿಸುತ್ತಿರುವ ನೀನು ಸಂಖ್ಯಾತೀತವಾಗಿ ನಿನ್ನಲ್ಲಿರುವ ಪುಣ್ಯವನ್ನು ಶತಗುಣ-ಸಹಸ್ರಗುಣವನ್ನಾಗಿ ಮಾಡಿಕೊಂಡಿರುತ್ತೀಯೆ.

ತದ್ಗಚ್ಛ ತ್ವಂ ನೃಪಶ್ರೇಷ್ಠ ತದ್ಭೋಕ್ತುಮಮರಾಲಯಮ್ ।
ಏತೇ ತು ನರಕೇ ಪಾಪಂ ಕ್ಷಪಯನ್ತು ಸ್ವಕರ್ಮಜಮ್ ॥೭೮॥

ರಾಜೋವಾಚ :—

ಕಥಂ ಸ್ಪೃಹಾಂ ಕರಿಷ್ಯನ್ತಿ ಮತ್ಸಮ್ಪರ್ಕಾಯ ಮಾನವಾಃ ।
ಯದಿ ಮತ್ಸನ್ನಿಧಾವೇಷಾಮುತ್ಕರ್ಷೋ ನೋಪಪದ್ಯತೇ ॥೭೯॥

ತಸ್ಮಾದ್ಯತ್ಸುಕೃತಂ ಕಿಞ್ಚಿನ್ಮಮಾಸ್ತಿ ತ್ರಿದಶಾಧಿಪ ।
ಮುಚ್ಯನ್ತಾಂ ತೇನ ನರಕಾತ್ಪಾಪಿನೋ ಯಾತನಾಗತಾಃ ॥೮೦॥

ಇನ್ದ್ರ ಉವಾಚ :—

ಏವಮೂರ್ಧ್ವತರಂ ಸ್ಥಾನಂ ತ್ವಯಾ ಪ್ರಾಪ್ತಂ ಮಹೀಪತೇ ।
ಏತಾಂಸ್ತು ನರಕಾತ್ಪಶ್ಯ ವಿಮುಕ್ತಾನ್ಪಾಪಕರ್ಮಿಣಃ ॥೮೧॥

---

೭೮. ರಾಜೇಂದ್ರನೇ ! ಆದುದರಿಂದ ನೀನು ನಿನ್ನ ಅನಂತಪುಣ್ಯರಾಶಿಯ ಫಲವನ್ನು ಅನುಭವಿಸಲು ದೇವಲೋಕಕ್ಕೆ ಹೋಗು. ಈ ಪಾಪಿಗಳು ನರಕದಲ್ಲಿ ಸ್ವಕರ್ಮಾರ್ಜಿತವಾದ ಫಲವನ್ನು ಭುಂಜಿಸಿ ಪಾಪವನ್ನು ಕಳೆದುಕೊಳ್ಳಲಿ.

ರಾಜನು ಹೀಗೆಂದನು :—

೭೯. ಈ ಪಾಪಿಗಳಿಗೆ ನನ್ನ ಸನ್ನಿಧಿಯಲ್ಲಿ ಏನೊಂದೂ ಅತಿಶಯವಿಲ್ಲದಿದ್ದರೆ ಈ ಮಾನವರು ನನ್ನ ಸಹವಾಸಕ್ಕೆ ಅಷ್ಟೊಂದು ಆಶೆಯನ್ನು ಏಕೆ ತೋರಿಸುವರು !

೮೦. ದೇವರಾಜನೆ! ಆದುದರಿಂದ ನನ್ನಲ್ಲಿ ಸ್ವಲ್ಪವಾದರೂ ಯಾವ ಪುಣ್ಯವು ಇರುವುದೊ ; ಆ ಪುಣ್ಯಪರಿಪಾಕದಿಂದ ಪಾಪಮಾಡಿ ನರಕಯಾತನೆಗೆ ಒಳಗಾದವರು ಯಾತನೆಯಿಂದ ಮುಕ್ತರಾಗಲಿ.

ಇಂದ್ರನು ಹೀಗೆಂದನು :—

೮೧. ಭೂಪತಿಯೆ! ನಿನ್ನಿಂದ ಈ ರೀತಿಯಾಗಿ ಕರುಣೆಯಿಂದ ವರ್ತಿಸಿ ಇನ್ನೂ ಹೆಚ್ಚಿನ ಉನ್ನತಸ್ಥಾನವು ಆರ್ಜಿಸಲ್ಪಟ್ಟಿತು. ಈ ಪಾತಕಿಗಳು ನರಕ ಯಾತನೆಯಿಂದ ಮುಕ್ತರಾಗಿರುವುದನ್ನು ನೋಡು.

ಪುತ್ರ ಉವಾಚ :—

ತತೋಽಪತತ್ಪುಷ್ಪವೃಷ್ಟಿಸ್ತಸ್ಯೋಪರಿ ಮಹೀಪತೇಃ ।
ವಿಮಾನಂ ಚಾಧಿರೋಪ್ಯೈನಂ ಸ್ವರ್ಲೋಕಮನಯದ್ಧರಿಃ ॥೮೨॥

ಅಹಂ ಚಾನ್ಯೇ ಚ ಯೇ ತತ್ರ ಯಾತನಾಭ್ಯಃ ಪರಿಚ್ಯುತಾಃ ।
ಸ್ವಕರ್ಮಫಲನಿರ್ದಿಷ್ಟಂ ತತೋ ಯೋನ್ಯನ್ತರಂ ಗತಾಃ ॥೮೩॥

ಏವಮೇತೇ ಸಮಾಖ್ಯಾತಾ ನರಕಾ ದ್ವಿಜಸತ್ತಮ ।
ಯೇನ ಯೇನ ಚ ಪಾಪೇನ ಯಾಂ ಯಾಂ ಯೋನಿಮುಪೈತಿ ವೈ ॥೮೪॥
ತತ್ತತ್ಸರ್ವಂ ಸಮಾಖ್ಯಾತಂ ಯಥಾದೃಷ್ಟಂ ಮಯಾ ಪುರಾ ।
ಪುರಾನುಭವಜಂ ಜ್ಞಾನಮವಾಪ್ಯ ಕಥಿತಂ ತವ ॥೮೫॥

ಪುತ್ರನು ಹೀಗೆ ಹೇಳಿದನು :—

೮೨. ತರುವಾಯ ಆ ವಿಪಶ್ಚಿತ್ ರಾಜನ ಮೇಲೆ ಆಕಾಶದಿಂದ ಪುಷ್ಪ-ವೃಷ್ಟಿಯು ಸುರಿಯಿತು. ಮತ್ತು ಇಂದ್ರನು ಅವನನ್ನು ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಲೋಕಕ್ಕೆ ಕರೆದೊಯ್ದನು.

೮೩. ಆಗ ಅಲ್ಲಿದ್ದ ನಾನು ಮತ್ತು ಇತರರು ನರಕಯಾತನೆಯಿಂದ ಬಿಡುಗಡೆಹೊಂದಿದವರಾಗಿ ತರುವಾಯ ಸ್ವಕರ್ಮಾಧೀನವಾಗಿ ಒದಗಿದ ಬೇರೆ ಬೇರೆ ಜನ್ಮಾಂತರವನ್ನು ಹೊಂದಿದೆವು.

೮೪. ದ್ವಿಜೋತ್ತಮನೆ! ಈ ರೀತಿಯಾಗಿ ನರಕಲೋಕದ ಭೋಗಗಳು ನಿನಗೆ ನನ್ನಿಂದ ವರ್ಣಿಸಲ್ಪಟ್ಟವೆ. ಮತ್ತು ನರಕಚ್ಯುತನಾದವನು ಯಾವ ಯಾವ ಪಾಪದಿಂದ ಯಾವ ಯಾವ ಯೋನಿಯನ್ನು ಹೊಂದುವನೆಂಬುದು ಹೇಳಲ್ಪಟ್ಟಿದೆ.

೮೫. ಹೀಗೆ ನೀನು ಕೇಳಬೇಕೆಂದಿದ್ದ ವಿಷಯವನ್ನು ನಾನು ಹಿಂದೆ ಅನುಭವಿಸಿದ ಪ್ರತ್ಯಕ್ಷವನ್ನು ಅವಲಂಬಿಸಿ ನಾನು ಹೇಗೆ ನೋಡಿದ್ದೆನೊ ಹಾಗೆ ಅದೆಲ್ಲವೂ ವಿವರಿಸಲ್ಪಟ್ಟಿತು.

ಅತಃ ಪರಂ ಮಹಾಭಾಗ ಕಿಮನ್ಯತ್ಕಥಯಾಮಿ ತೇ ॥೮೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ನರಕಸ್ಥೋದ್ಧಾರವರ್ಣನಂ ನಾಮ ಪಞ್ಚದಶೋಽಧ್ಯಾಯಃ

---

೮೬. ಮಹಾಸುಕೃತಿಯಾಗಿರುವ ತಂದೆಯೆ! ಇನ್ನು ಮುಂದೆ ನಾನು ಏನು ಹೇಳಲಿ. ಯಾವ ವಿಷಯವನ್ನು ಕೇಳಲು ನೀನು ಕುತೂಹಲಿಯಾಗಿದ್ದೀಯೊ, ಅವನ್ನು ಹೇಳುವೆನು.

ಮಾರ್ಕಂಡೇಯಮಹಾಪುರಾಣದಲ್ಲಿ ಹದಿನೈದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷೋಡಶೋಽಧ್ಯಾಯಃ

(ದತ್ತಾತ್ರೇಯಮಾಹಾತ್ಮ್ಯವರ್ಣನಮ್)

ಪಿತೋವಾಚ :—

ಕಥಿತಂ ಮೇ ತ್ವಯಾ ವತ್ಸ ಸಂಸಾರಸ್ಯ ವ್ಯವಸ್ಥಿತಮ್ ।
ಸ್ವರೂಪಮಪಿ ದೇಹಸ್ಯ ಘಟೀಯನ್ತ್ರವದವ್ಯಯಮ್ ॥೧॥

ತದೇವಮೇತದಖಿಲಂ ಮಮಾವಗತಮೀದೃಶಮ್ ।
ಕಿಂ ಮಯಾ ವದ ಕರ್ತವ್ಯಮೇವಮಸ್ಮಿನ್ ವ್ಯವಸ್ಥಿತೇ ॥೨॥

ಹದಿನಾರನೆಯ ಅಧ್ಯಾಯ

ತಂದೆಯು ಹೀಗೆ ಹೇಳಿದನು :—

೧. ಪುತ್ರನೆ! ಈ ಬಗೆಯಿಂದ ಸಂಸಾರಸಮುದ್ರದಲ್ಲಿ ಮುಳುಗಿದ ದೇಹದ ಸ್ವರೂಪವು ಘಟೀಯಂತ್ರದಂತಿದ್ದು ಪಾರವೇ ಇಲ್ಲವಾದುದೆಂದು ನಿನ್ನಿಂದ ಹೇಳಲ್ಪಟ್ಟಿದೆ.

೨. ಆದುದರಿಂದ ಈ ಸಂಸಾರಚಕ್ರವೆಲ್ಲವೂ ದುಃಖದ ಗಣಿಯೆಂದು ನನ್ನಿಂದ ತಿಳಿಯಲ್ಪಟ್ಟಿತು. ಇದೆಲ್ಲವೂ ಹೀಗಾದ ಮೇಲೆ ನಾನು ಮಾಡಬೇಕಾದ ಕರ್ತವ್ಯವೇನು ಎಂಬುದನ್ನು ಹೇಳು.

ಪುತ್ರ ಉವಾಚ :—

ಯದಿ ಮದ್ವಚನಂ ತಾತ ಶ್ರದ್ದಧಾಸ್ಯವಿಶಙ್ಕಿತಃ ।
ತತ್ಪರಿತ್ಯಜ್ಯ ಗಾರ್ಹಸ್ಥ್ಯಂ ವಾನಪ್ರಸ್ಥಮನಾ ಭವ ॥೩॥

ತಮನುಷ್ಠಾಯ ವಿಧಿವದ್ವಿಹಾಯಾಗ್ನಿಪರಿಗ್ರಹಮ್ ।
ಆತ್ಮನ್ಯಾತ್ಮಾನಮಾಧಾಯ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ॥೪॥

ಏಕಾನ್ತಶೀಲೋ ವಶ್ಯಾತ್ಮಾ ಭವ ಭಿಕ್ಷುರತನ್ದ್ರಿತಃ ।
ತತ್ರ ಯೋಗಪರೋ ಭೂತ್ವಾ ಬಾಹ್ಯಸ್ಪರ್ಶವಿವರ್ಜಿತಃ ॥೫॥

ತತಃ ಪ್ರಾಪ್ಸ್ಯಸಿ ತಂ ಯೋಗಂ ದುಃಖಸಂಯೋಗಭೇಷಜಮ್ ।
ಮುಕ್ತಿಹೇತುಮನೌಪಮ್ಯಮನಾಖ್ಯೇಯಮಸಙ್ಜ್ಞಿತಮ್ ॥೬॥

---

೩. ಪಿತನೆ! ನನ್ನ ವಚನವನ್ನು ಸಂದೇಹವಿಲ್ಲದಂತೆ ಶ್ರದ್ಧೆಯಿಂದ ಕೇಳುವುದಾದರೆ ಈಗ ನೀನು ಗೃಹಸ್ಥಾಶ್ರಮವನ್ನು ತ್ಯಜಿಸಿ ವಾನಪ್ರಸ್ಥಾಶ್ರಮ-ಧರ್ಮದಲ್ಲಿ ಮಾನಸವುಳ್ಳವನಾಗು.

೪. ವಾನಪ್ರಸ್ಥಧರ್ಮವನ್ನು ಯಥಾವಿಧಿಯಾಗಿ ಆಚರಿಸಿ ತರುವಾಯ ಅಗ್ನಿ ಮುಂತಾದ ಸಂಭಾರವನ್ನು ಬಿಟ್ಟು ಆತ್ಮತತ್ತ್ವದಲ್ಲಿ ಮನಸ್ಸನ್ನು ಸ್ಥಿರಗೊಳಿಸಿ ಶೀತ-ಉಷ್ಣದ್ವಂದ್ವವನ್ನು ಬಿಟ್ಟವನೂ ಮತ್ತು ಎಲ್ಲ ಉಪಕರಣ-ಗಳನ್ನು ವರ್ಜಿಸಿದವನೂ ಆಗು.

೫. ಮತ್ತು ಏಕಾಂತವಾಸಶೀಲನೂ, ಜಿತವಾದ ಅಂತಃಕರಣವುಳ್ಳ-ವನೂ ಮತ್ತು ಆಲಸ್ಯವಿಲ್ಲದವನೂ ಆದ ಸನ್ಯಾಸಿಯಾಗು. ಸನ್ಯಾಸದಲ್ಲಿ ಬಾಹ್ಯವಾದ ಭೋಗ್ಯವಸ್ತುಗಳ ಅಭಿರುಚಿಯನ್ನು ಬಿಟ್ಟು ಯೋಗಾಭ್ಯಾಸ-ಪರನಾಗು.

೬. ಸನ್ಯಾಸಧರ್ಮದಿಂದ ದುಃಖಪ್ರಾಪ್ತಿಗೆ ಔಷಧದಂತೆಯಿರುವ ಯೋಗಸಿದ್ಧಿಯನ್ನು ಹೊಂದುತ್ತೀಯೆ. ಅಂತಹ ಯೋಗಸಿದ್ಧಿಯು ನಾಮಾಂಕನ ದಿಂದ ಶೂನ್ಯವೂ, ವಾಗಿಂದ್ರಿಯದಿಂದ ಹೇಳಲಾಗದಿರುವುದೂ, ನಿರುಪಮವೂ ಮತ್ತು ಮುಕ್ತಿಗೆ ಕಾರಣವೂ ಆಗಿರುವುದು.

ತತ್ಸಂಯೋಗಾನ್ನ ತೇ ಯೋಗೋ ಭೂಯೋ ಭೂತೈರ್ಭವಿಷ್ಯತಿ॥೭॥

ಪಿತೋವಾಚ :—

ವತ್ಸ ಯೋಗಂ ಮಮಾಚಕ್ಷ್ವ ಮುಕ್ತಿಹೇತುಮತಃ ಪರಮ್ ।
ಯೇನ ಭೂತೈಃ ಪುನರ್ಭೂತೋ ನೇದೃಗ್ದುಃಖಮವಾಪ್ನುಯಾಮ್ ॥೮॥

ಯತ್ರಾಸಕ್ತಿಪರಸ್ಯಾತ್ಮಾ ಮಮ ಸಂಸಾರಬನ್ಧನೈಃ ।
ನೇತಿಯೋಗಮಯೋಗೋಽಪಿ ತಂ ಯೋಗಮಧುನಾ ವದ ॥೯॥

ಸಂಸಾರಾದಿತ್ಯತಾಪಾರ್ತಿವಿಪ್ಲುಷ್ಯದ್ದೇಹಿಮಾನಸಮ್ ।
ಬ್ರಹ್ಮಜ್ಞಾನಾಮ್ಬುಶೀತೇನ ಸಿಞ್ಚ ಮಾಂ ವಾಕ್ಯವಾರಿಣಾ ॥೧೦॥

---

೭. ಹಾಗೆ ಅಂತಹ ಯೋಗಸಿದ್ಧಿಯ ಪರಿಪಾಕದಿಂದ ಮುಕ್ತಿಯನ್ನು ಹೊಂದುವ ನಿನಗೆ ಮತ್ತೆ ಭೂತ-ಭೌತಿಕಗಳ ಸಂಪರ್ಕವಾಗುವ ಹಾಗೆ ಪುನರ್ಜನ್ಮವು ಉಂಟಾಗುವುದಿಲ್ಲ.

ತಂದೆಯು ಹೇಳಿದನು :—

೮. ಪುತ್ರನೆ! ಯಾವ ಯೋಗಸಾಧನೆಯಿಂದ ಭೂತಗಳೊಡಗೂಡಿ ಮತ್ತೆ ಜನ್ಮಹೊಂದಿ ಇಂತಹ ಸಂಸಾರ ದುಃಖವನ್ನು ಹೊಂದಲಾರೆನೊ ಅಂತಹ ಮುಕ್ತಿಪ್ರದವಾದ ಯೋಗಸಮಾಧಿಯನ್ನು ಹೇಳು.

೯. ಯಾವ ಯೋಗಸಾಧನೆಯಲ್ಲಿ ತತ್ಪರನಾದ ನನಗೆ ದುಃಖಸಂಯೋಗ-ವನ್ನು ಕಳೆದುಕೊಂಡ ಆತ್ಮವು ಅದ್ವಿತೀಯ ಆತ್ಮತತ್ತ್ವಯೋಗವನ್ನು ಹೊಂದಿ ಸಂಸಾರ ಬಂಧನಗಳಿಂದ ಬಿಡುಗಡೆಯಾಗುವುದೊ ; ಅಂತಹ ಯೋಗಸಾಧನವನ್ನು ಹೇಳು.

೧೦. ಸಂಸಾರಚಕ್ರವೆಂಬ ಸೂರ್ಯನ ತಾಪಪೀಡೆಯಿಂದ ಒಣಗಿ ಹೋದ ದೇಹ-ಮನಸ್ಸುಗಳುಳ್ಳ ನನ್ನನ್ನು ಬ್ರಹ್ಮಜ್ಞಾನವೆಂಬ ನೀರಿನಿಂದ ತಣ್ಣಗಿರುವ ನಿನ್ನ ವಾಕ್ಯಾಮೃತದಿಂದ ತಣ್ಣಗೆ ಮಾಡು.

ಅವಿದ್ಯಾಕೃಷ್ಣಸರ್ಪೇಣ ದಷ್ಟಂ ತದ್ವಿಷಪೀಡಿತಮ್ ।
ಸ್ವವಾಕ್ಯಾಮೃತದಾನೇನ ಮಾಂ ಜೀವಯ ಪುನರ್ಮೃತಮ್ ॥೧೧॥

ಪುತ್ರದಾರಗೃಹಕ್ಷೇತ್ರಮಮತ್ವನಿಗಡಾರ್ದಿತಮ್ ।
ಮಾಂ ಮೋಚಯೇಷ್ಟಸದ್ಭಾವವಿಜ್ಞಾನೋದ್ಘಾಟನೈಶ್ಚಿರಮ್ ॥೧೨॥

ಪುತ್ರ ಉವಾಚ :—

ಶೃಣು ತಾತ ಯಥಾ ಯೋಗೋ ದತ್ತಾತ್ರೇಯೇಣ ಧೀಮತಾ ।
ಅಲರ್ಕಾಯ ಪುರಾ ಪ್ರೋಕ್ತಃ ಸಮ್ಯಕ್ಪೃಷ್ಟೇನ ವಿಸ್ತರಾತ್ ॥೧೩॥

ಪಿತೋವಾಚ :—

ದತ್ತಾತ್ರೇಯಃ ಸುತಃ ಕಸ್ಯ ಕಥಂ ವಾ ಯೋಗಮುಕ್ತವಾನ್ ।
ಕಶ್ಚಾಲರ್ಕೋ ಮಹಾಭಾಗೋ ಯೋ ಯೋಗಂ ಪರಿಪೃಷ್ಟವಾನ್ ॥೧೪॥

---

೧೧. ಅವಿದ್ಯೆಯೆಂಬ ಕೃಷ್ಣಸರ್ಪವು ಕಡಿದು ಅದರ ವಿಷವೇರಿ ಮರಣಹೊಂದಿರುವ ನನ್ನನ್ನು ನಿನ್ನ ವಾಕ್ಯವೆಂಬ ಅಮೃತವೃಷ್ಟಿಯಿಂದ ಮತ್ತೆ ಸಂಜೀವನ ಮಾಡು.

೧೨. ಹೆಂಡತಿ-ಮಕ್ಕಳು-ಮನೆ-ಗದ್ದೆ ಹೊಲ ಮುಂತಾದುವುಗಳಲ್ಲಿ ಮಮತ್ವವೆಂಬ ಬೇಡಿಯಿಂದ ಪೀಡಿಸಲ್ಪಟ್ಟಿರುವ ನನ್ನನ್ನು ಪ್ರೇಮಾಸ್ಪದವಾದ ಸಚ್ಚಿದಾನಂದ ಬ್ರಹ್ಮಜ್ಞಾನದ ಉದ್ಘಾಟನೆಯಿಂದ ಬಿಡುಗಡೆಮಾಡು.

ಪುತ್ರನು ಇಂತೆಂದನು :—

೧೩. ತಂದೆಯೆ! ಹಿಂದೆ ಅಲರ್ಕನೆಂಬುವನು ಪ್ರಶ್ನಿಸಿದಾಗ ಜ್ಞಾನಿಯಾದ ದತ್ತಾತ್ರೇಯಮುನಿಯು ವಿಸ್ತಾರವಾಗಿಯೂ ಮತ್ತು ಸ್ಪಷ್ಟವಾಗಿಯೂ ಹೇಳಿರುವ ಯೋಗಸಾಧನೆಯ ವಿಧಾನವನ್ನು ಕೇಳು.

ತಂದೆಯು ಕೇಳಿದನು :—

೧೪. ದತ್ತಾತ್ರೇಯಮುನಿಯು ಯಾರ ಪುತ್ರನು? ಅವನು ಹೇಗೆ ಯೋಗವನ್ನು ಉಪದೇಶಿಸಿದನು? ಯೋಗವಿಧಾನವನ್ನು ಪ್ರಶ್ನಿಸಿರುವ ಮಹಾಭಾಗ್ಯನಾದ ಅಲರ್ಕನೆಂಬುವನು ಯಾರು?

ಪುತ್ರ ಉವಾಚ :—

ಕೌಶಿಕೋ ಬ್ರಾಹ್ಮಣಃ ಕಶ್ಚಿತ್ಪ್ರತಿಷ್ಠಾನೇಽಭವತ್ಪುರೇ ।
ಸೋಽನ್ಯಜನ್ಮಕೃತೈಃ ಪಾಪೈಃ ಕುಷ್ಠರೋಗಾತುರೋಽಭವತ್ ॥೧೫॥

ತಂ ತಥಾ ವ್ಯಾಧಿತಂ ಭಾರ್ಯಾ ಪತಿಂ ದೇವಮಿವಾರ್ಚಯತ್ ।
ಪಾದಾಭ್ಯಙ್ಗಾಙ್ಗಸಂವಾಹಸ್ನಾನಾಚ್ಛಾದನಭೋಜನೈಃ ॥೧೬॥

ಶ್ಲೇಷ್ಮಮೂತ್ರಪುರೀಷಾಸೃಕ್ಪ್ರವಾಹಕ್ಷಾಳನೇನ ಚ ।
ರಹಸ್ಯೇವೋಪಚಾರೇಣ ಪ್ರಿಯಸಮ್ಭಾಷಣೇನ ಚ ॥೧೭॥

ಸತತಂ ಪೂಜ್ಯಮಾನೋಽಪಿ ತಯಾತೀವ ವಿನೀತಯಾ ।
ಅತಿತೀವ್ರಪ್ರಕೋಪತ್ವಾನ್ನಿರ್ಭರ್ತ್ಸಯತಿ ದಾರುಣಃ ॥೧೮॥

ಪುತ್ರನಿಂತೆಂದನು :—

೧೫. ಪೂರ್ವಕಾಲದಲ್ಲಿ ಪ್ರತಿಷ್ಠಾನವೆಂಬ ನಗರದಲ್ಲಿ ಕೌಶಿಕವಂಶದಲ್ಲಿ ಜನಿಸಿದ ಒಬ್ಬ ವಿಪ್ರನು ಇದ್ದನು. ಅವನು ಜನ್ಮಾಂತರದಲ್ಲಿ ಮಾಡಿದ ಪಾಪಗಳಿಂದ ಕುಷ್ಠರೋಗದಿಂದ ಪೀಡಿತನಾದನು.

೧೬. ಹಾಗೆ ರೋಗಪೀಡಿತನಾದ ಪತಿಯನ್ನು ಅವನ ಭಾರ್ಯೆಯು ಕಾಲನ್ನೊತ್ತುವುದು, ಅಭ್ಯಂಜನ, ವಸ್ತ್ರಧಾರಣ, ಭೋಜನ ಮುಂತಾದ ಉಪಚಾರಗಳಿಂದ ದೇವರನ್ನು ಹೇಗೊ ಹಾಗೆ ಸೇವೆಮಾಡಿದಳು.

೧೭. ಮತ್ತು ಶ್ಲೇಷ್ಮ, ಮೂತ್ರ, ಮಲ, ರಕ್ತಗಳ ಪ್ರವಾಹವನ್ನು ತೊಳೆಯುವುದು, ಏಕಾಂತದಲ್ಲಿ ಉಪಚರಿಸುವುದು ಮತ್ತು ಪ್ರಿಯಮಧುರವಾದ ಸಲ್ಲಾಪ ಇವುಗಳಿಂದ ಉಪಚರಿಸುತ್ತಿದ್ದಳು.

೧೮. ವಿನಯವತಿಯಾದ ಭಾರ್ಯೆಯು ಹೀಗೆ ಸಂತತವಾಗಿ ಸೇವೆ-ಮಾಡುತ್ತಿದ್ದರೂ ಬಲು ಕೋಪಿಯಾದ್ದರಿಂದ ಭಯಂಕರನಾಗಿದ್ದ ಪತಿಯು ಆಕೆಯನ್ನು ಬೆದರಿಸುತ್ತಿದ್ದನು.

ತಥಾಪಿ ಪ್ರಣತಾ ಸಾಧ್ವೀ ತಮಮನ್ಯತ ದೈವತಮ್ ।
ತಂ ತಥಾಪ್ಯತಿಬೀಭತ್ಸಂ ಸರ್ವಶ್ರೇಷ್ಠಮಮನ್ಯತ ||೧೯||

ಅಚಙ್ಕ್ರಮಣಶೀಲೋಽಪಿ ಸ ಕದಾಚಿದ್ದ್ವಿಜೋತ್ತಮಃ ।
ಪ್ರಾಹ ಭಾರ್ಯಾಂ ನಯಸ್ವೇತಿ ತ್ವಂ ಮಾಂ ತಸ್ಯಾ ನಿವೇಶನಮ್ ||೨೦||

ಯಾ ಸಾ ವೇಶ್ಯಾ ಮಯಾ ದೃಷ್ಟಾ ರಾಜಮಾರ್ಗೇ ಗೃಹೇ ಸತಾ ।
ತಾಂ ಮೇ ಪ್ರಾಪಯ ಧರ್ಮಜ್ಞೇ ಸೈವ ಮೇ ಹೃದಿ ವರ್ತತೇ ||೨೧||

ದೃಷ್ಟ್ವಾ ಸೂರ್ಯೋದಯೇ ಬಾಲಾ ರಾತ್ರಿಶ್ಚೇಯಮುಪಾಗತಾ ।
ದರ್ಶನಾನನ್ತರಂ ಸಾ ಮೇ ಹೃದಯಾನ್ನಾಪಸರ್ಪತಿ ||೨೨||

---

೧೯. ಹಾಗಿದ್ದರೂ ಪತಿವ್ರತೆಯಾದ ಭಾರ್ಯೆಯು ನಮಸ್ಕಾರ ಮಾಡುತ್ತ ಪತಿಯನ್ನು ದೈವವೆಂದು ಅರಿತಳು. ಮತ್ತು ಅತಿ ಜುಗುಪ್ಸೆಬರುವಂತೆ ರೋಗಪೀಡಿತನಾಗಿದ್ದರೂ ಪತಿಯನ್ನು ಸರ್ವೋತ್ತಮನೆಂದು ಭಾವಿಸಿದಳು.

೨೦. ಹೀಗಿರಲು ಒಂದು ಸಮಯದಲ್ಲಿ ತೆವಳಿಕೊಂಡು ಕೂಡ ಮುಂದೆ ಚಲಿಸಲು ಅಶಕ್ತನಾದ ದ್ವಿಜೋತ್ತಮನು ತನ್ನ ಭಾರ್ಯೆಯನ್ನು ಕುರಿತು "ನನ್ನನ್ನು ಆಕೆಯ ಮನೆಗೆ ಕರೆದುಕೊಂಡು ಹೋಗು" ಎಂದು ಹೇಳಿದನು.

೨೧. ಮನೆಯಲ್ಲಿದ್ದ ನಾನು ಯಾವ ವೇಶ್ಯೆಯನ್ನು ಇಂದು ಕಂಡೆನೊ; ನನ್ನನ್ನು ಅವಳ ಬಳಿಗೆ ಕರೆದುಕೊಂಡು ಹೋಗಿ ಬಿಡು. ಧರ್ಮಜ್ಞಳೆ! ಆ ವೇಶ್ಯೆಯೆ ಸರ್ವಕಾಲದಲ್ಲಿಯೂ ನನ್ನ ಹೃದಯದಲ್ಲಿರುವಳು.

೨೨. ಆ ನವತರುಣಿಯಾದ ವೇಶ್ಯೆಯನ್ನು ಸೂರ್ಯೋದಯದ ಸಮಯದಲ್ಲಿ ನಾನು ನೋಡಿದೆನು. ಈಗ ರಾತ್ರಿಯಾಗಿರುವುದು. ಆಕೆಯನ್ನು ನೋಡಿದ ಮೊದಲುಗೊಂಡು ಅವಳು ನನ್ನ ಹೃದಯದಿಂದ ಚಲಿಸುವುದಿಲ್ಲ.

ಯದಿ ಸಾ ಚಾರುಸರ್ವಾಙ್ಗೀ ಪೀನಶ್ರೋಣಿಪಯೋಧರಾ ।
ನೋಪಗೂಹತಿ ತನ್ವಙ್ಗೀ ತನ್ಮಾಂ ದ್ರಕ್ಷ್ಯಸಿ ವೈ ಮೃತಮ್ ॥೨೩॥

ವಾಮಃ ಕಾಮೋ ಮನುಷ್ಯಾಣಾಂ ಬಹುಭಿಃ ಪ್ರಾರ್ಥ್ಯ ಚೇತನಃ ।
ಮಮಾಶಕ್ತಿಶ್ಚ ಗಮನೇ ಸಙ್ಕುಲಂ ಪ್ರತಿಭಾತಿ ಮೇ ॥೨೪॥

ತತ್ತದಾ ವಚನಂ ಶ್ರುತ್ವಾ ಭರ್ತುಃ ಕಾಮಾತುರಸ್ಯ ಸಾ ।
ತತ್ಪತ್ನೀ ವ್ಯಾಕುಲಾ ಜಾತಾ ಮಹಾಭಾಗಾ ಪತಿವ್ರತಾ ॥೨೫॥

ಗಾಢಂ ಪರಿಕರಂ ಬದ್ಧ್ವಾ ಶುಲ್ಕಮಾದಾಯ ಚಾಧಿಕಮ್ ।
ಸ್ಕನ್ಧೇ ಭರ್ತಾರಮಾರೋಪ್ಯ ಜಗಾಮ ಮೃದುಗಾಮಿನೀ ॥೨೬॥

---

೨೩. ಸುಂದರವಾದ ಸರ್ವ ಅವಯವವುಳ್ಳವಳೂ, ಸ್ಥೂಲವಾದ ನಿತಂಬ-ಸ್ತನಗಳಿಂದ ರಮಣೀಯಳೂ ಆದ ಆ ರಮಣೀಮಣಿಯು ನನ್ನನ್ನು ಆಲಿಂಗಿಸಿ ಸುಖಪಡಿಸದಿದ್ದರೆ ಮೃತನಾದ ನನ್ನನ್ನು ನೋಡುತ್ತೀಯೆ.

೨೪. ಮನುಷ್ಯರಿಗೆ ಕಾಮನು ಬಹಳ ಕಠಿನನಾದವನು. ಅನೇಕರಿಂದ ಮನಸ್ಸಿನಲ್ಲಾಗುವ ಕಾಮವಿಕಾರವನ್ನು ತಡೆಯಲಾಗಲಿಲ್ಲ. ಆ ವೇಶ್ಯೆಯ ಮನೆಗೆ ಹೋಗಲು ನನಗೆ ಶಕ್ತಿಯಿಲ್ಲ. ಹೀಗಿರಲು ನನಗೆ ಬಹಳ ವಿಷಮವಾಗಿ ತೋರುವುದು.

೨೫. ಕಾಮಾತುರನಾದ ಪತಿಯ ವಚನವನ್ನು ಕೇಳಿ ಮಹಾಭಾಗ್ಯವತಿಯೂ ಮಹಾಪತಿವ್ರತೆಯೂ ಆದ ಅವನ ಭಾರ್ಯೆಯು ಆಗ ಅತಿಯಾಗಿ ಮನೋವ್ಯಾಕುಲತೆಯನ್ನು ಹೊಂದಿದಳು.

೨೬. ಮಂದಗಮನೆಯಾದ ಆ ಪತಿವ್ರತೆಯು ಸೀರೆಯನ್ನು ಗಟ್ಟಿಯಾಗಿ ಕಟ್ಟಿಕೊಂಡು ವೇಶ್ಯೆಗೆ ಕೊಡಲು ಅಧಿಕ ಶುಲ್ಕಧನವನ್ನು ತೆಗೆದುಕೊಂಡು ಹೆಗಲಿನಲ್ಲಿ ಪತಿಯನ್ನು ಹೊತ್ತುಕೊಂಡು ನಡೆದಳು.

ನಿಶಿ ಮೇಘಾವೃತೇ ವ್ಯೋಮ್ನಿ ಚಲದ್ವಿದ್ಯುಚ್ಚ ದೃಶ್ಯತೇ ।
ರಾಜಮಾರ್ಗೇ ಪ್ರಿಯಂ ಭರ್ತುಶ್ಚಿಕೀರ್ಷನ್ತೀ ದ್ವಿಜಾಙ್ಗನಾ ||೨೭||

ಪಥಿ ಶೂಲೇ ತದಾ ಪ್ರೋತಮಚೋರಂ ಚೋರಶಙ್ಕಯಾ ।
ಮಾಣ್ಡವ್ಯಮತಿದುಃಖಾರ್ತಮನ್ಧಕಾರೇ ಚ ಸ ದ್ವಿಜಃ ||೨೮||

ಪತ್ನೀ ಸ್ಕನ್ಧಸಮಾರೂಢಶ್ಚಾಲಯಾಮಾಸ ಕೌಶಿಕಃ ।
ವಾಮಾಙ್ಘ್ರೀನಾಥ ಸಙ್ಕ್ರುದ್ಧೋ ಮಾಣ್ಡವ್ಯಸ್ತಮುವಾಚ ಹ||೨೯||

ಯೇನಾಹಮೇವಮತ್ಯರ್ಥಂ ದುಃಖಿತಶ್ಚಾಲಿತೋ ವೃಥಾ ।
ಇತ್ಥಂ ಕಷ್ಟಮನುಪ್ರಾಪ್ತಃ ಸ ಪಾಪಾತ್ಮಾ ನರಾಧಮಃ ||೩೦||

---

೨೭. ಪತಿಯ ಹಿತವನ್ನು ನಡೆಯಿಸಿಕೊಡುವ ಇಷ್ಟವುಳ್ಳ ಆ ವಿಪ್ರ-ಭಾರ್ಯೆಯು ರಾತ್ರಿ ಹೊತ್ತಿನಲ್ಲಿ ಆಕಾಶದಲ್ಲಿ ಮೋಡಗಳು ಕವಿತಿರಲು ಆಗಾಗ ಕಾಣುವ ಮಿಂಚಿನ ಪ್ರಕಾಶದಿಂದ ರಾಜಮಾರ್ಗದಲ್ಲಿ ನಡೆದಳು.

೨೮. ಹೀಗೆ ಪತ್ನಿಯ ಸ್ಕಂಧದಲ್ಲಿ ಕುಳಿತುಕೊಂಡು ಹೋಗುತ್ತಿದ್ದ ಆ ಬ್ರಾಹ್ಮಣನ ದಾರಿಯಲ್ಲಿ ರಾತ್ರಿಯ ಕತ್ತಲಿನಲ್ಲಿ ಸಾಧುವಾಗಿದ್ದರೂ ಕಳ್ಳನೆಂಬ ಸಂಶಯದಿಂದ ಶೂಲಕ್ಕೆ ಏರಿಸಲ್ಪಟ್ಟಿದ್ದ ಮಾಂಡವ್ಯನೆಂಬ ಬ್ರಾಹ್ಮಣನು ದುಃಖದಿಂದ ತಪಿಸುತ್ತಿದ್ದನು.

೨೯. ಆಗ ಪತ್ನಿಯ ಹೆಗಲಿನಲ್ಲಿ ಕುಳಿತಿದ್ದ ಕೌಶಿಕಬ್ರಾಹ್ಮಣನು ತನ್ನ ದೇಹದ ಎಡಭಾಗದಿಂದ ಮಾಂಡವ್ಯನನ್ನು ಅಲ್ಲಾಡಿಸಿದನು. ಆಗ ನೋವಿನಿಂದ ಕೋಪಗೊಂಡ ಮಾಂಡವ್ಯನು ಕೌಶಿಕನ ವಿಷಯದಲ್ಲಿ ಹೀಗೆಂದನು.

೩೦. ಯಾವ ವ್ಯಕ್ತಿಯಿಂದ ಈ ರೀತಿಯಾದ ಶೂಲವೇದನೆಯ ಕಷ್ಟಕ್ಕೆ ಸಿಕ್ಕಿದ ನಾನು ವ್ಯರ್ಥವಾಗಿ ಅಲ್ಲಾಡಿಸಿ ಮತ್ತೂ ಹೆಚ್ಚಾಗಿ ದುಃಖಕ್ಕೆ ಗುರಿಯಾಗಿ ಮಾಡಲ್ಪಟ್ಟಿರುವೆನೊ, ಅಂತಹ ವ್ಯಕ್ತಿಯು ಮಹಾಪಾಪಿ ಮತ್ತು ನರಾಧಮ-ನಾಗಿರುವನು.

ಸೂರ್ಯೋದಯೇऽವಶಃ ಪ್ರಾಣೈರ್ವಿಯೋಕ್ಷ್ಯತಿ ನ ಸಂಶಯಃ ।
ಭಾಸ್ಕರಾಲೋಕನಾದೇವ ಸ ವಿನಾಶಮವಾಪ್ಸ್ಯತಿ ॥೩೧॥

ತಸ್ಯ ಭಾರ್ಯಾ ತತಃ ಶ್ರುತ್ವಾ ತಂ ಶಾಪಮತಿದಾರುಣಮ್ ।
ಪ್ರೋವಾಚ ವ್ಯಥಿತಾ ಸೂರ್ಯೋ ನೈವೋದಯಮುಪೈಷ್ಯತಿ ॥೩೨॥

ತತಃ ಸೂರ್ಯೋದಯಾಭಾವಾದಭವತ್ಸನ್ತತಾ ನಿಶಾ ।
ಬಹೂನ್ಯಹಃಪ್ರಮಾಣಾನಿ ತತೋ ದೇವಾ ಭಯಂ ಯಯುಃ ॥೩೩॥

ನಿಃಸ್ವಾಧ್ಯಾಯವಷಟ್ಕಾರಂ ಸ್ವಧಾಸ್ವಾಹಾವಿವರ್ಜಿತಮ್ ।
ಕಥಂ ನು ಖಲ್ವಿದಂ ಸರ್ವಂ ನ ಗಚ್ಛೇತ್ಸಂಕ್ಷಯಂ ಜಗತ್ ॥೩೪॥

---

೩೧. ಅಂತಹ ಪಾಪಿಯು ನನ್ನ ಶಾಪಾಧೀನನಾಗಿ ಸೂರ್ಯೋದಯದ ಹೊತ್ತಿನಲ್ಲಿ ಪ್ರಾಣಗಳನ್ನು ತ್ಯಜಿಸುವನು. ಏನೂ ಸಂಶಯವಿಲ್ಲ. ಅವನು ಸೂರ್ಯನ ದರ್ಶನಮಾತ್ರದಿಂದಲೆ ಮೃತ್ಯುವನ್ನು ಹೊಂದುವನು.

೩೨. ತರುವಾಯ ಕೌಶಿಕವಿಪ್ರನ ಪತ್ನಿಯು ಬಲು ಭಯಂಕರವಾದ ಆ ಶಾಪವನ್ನು ಕೇಳಿ ವ್ಯಥೆಗೊಂಡವಳಾಗಿ " ಸೂರ್ಯನು ಉದಯಿಸುವುದು ಬೇಡ " ಎಂದು ಹೇಳಿದಳು.

೩೩. ಅನಂತರದಲ್ಲಿ ಸೂರ್ಯನು ಉದಯಿಸದಿದ್ದುದರಿಂದ ಯಾವಾಗಲೂ ರಾತ್ರಿಯೇ ಆಗಿತ್ತು. ಎಷ್ಟೋ ಹಗಲುಗಳು ಉಂಟಾಗಬೇಕಾದಷ್ಟು ದೀರ್ಘಕಾಲವೂ ರಾತ್ರಿಯಾಗಿಯೆ ಕಳೆದುದರಿಂದ ದೇವತೆಗಳು ಭಯಪಡುವವರಾದರು.

೩೪. ಆಗ ವೇದಾಧ್ಯಯನ, ಯಜ್ಞಾನುಷ್ಠಾನ, ಸ್ವಾಹಾಕಾರದಿಂದ ದೇವತೆಗಳಿಗೆ ಹವಿರ್ದಾನಮಾಡುವುದು, ಸ್ವಧಾಕಾರದಿಂದ ಪಿತೃಗಳಿಗೆ ಹವಿರ್ದಾನ ಮಾಡುವುದು—ಇವುಗಳಿಂದ ವರ್ಜಿತವಾದ ಈ ಲೋಕವು ನಾಶವಾಗದಿರುವುದು ಹೇಗೆ?

ಅಹೋರಾತ್ರವ್ಯವಸ್ಥಾಯಾ ವಿನಾ ಮಾಸರ್ತುಸಂಕ್ಷಯಃ ।
ತತ್ಸಂಕ್ಷಯಾನ್ನ ತ್ವಯನೇ ಜ್ಞಾಯೇತೇ ದಕ್ಷಿಣೋತ್ತರೇ ॥೩೫॥

ವಿನಾ ಚಾಯನವಿಜ್ಞಾನಂ ಕಾಲಃ ಸಂವತ್ಸರಃ ಕುತಃ ।
ಪತಿವ್ರತಾಯಾ ವಚನಾನ್ನೋದ್ಗಚ್ಛತಿ ದಿವಾಕರಃ ॥೩೬॥

ಸೂರ್ಯೋದಯಂ ವಿನಾ ನೈವ ಸ್ನಾನದಾನಾದಿಕಾಃ ಕ್ರಿಯಾಃ ।
ಅಗ್ನೇರ್ವಿಹರಣಂ ಚೈವ ಕ್ರತ್ವಭಾವಶ್ಚ ಲಕ್ಷ್ಯತೇ ॥೩೭॥

ನ ಕಾಲೇನ ವಿನಾ ಚೇಷ್ಟಿರ್ನ ಚ ಯಜ್ಞಾದಿಕಾಃ ಕ್ರಿಯಾಃ ।
ನಶ್ಯನ್ತಿ ಸರ್ವಭೂತಾನಿ ತಮೋಭೂತೇ ಚರಾಚರೇ ॥೩೮॥

ನೈವಾಪ್ಯಾಯನಮಸ್ಮಾಕಂ ವಿನಾ ಹೋಮೇನ ಜಾಯತೇ ।
ವಯಮಾಪ್ಯಾಯಿತಾ ಮರ್ತ್ಯೈರ್ಯಜ್ಞಭಾಗೈರ್ಯಥೋಚಿತೈಃ ॥೩೯॥

---

೩೫. ಹಗಲು-ರಾತ್ರಿಗಳ ವ್ಯವಸ್ಥೆಯಿಲ್ಲದ ಹೊರತು ಕ್ರಮವಾಗಿ ಪರಿವರ್ತಿಸುವ ಮಾಸ-ಋತುಗಳ ಪರಿವರ್ತನೆಯು ತಿಳಿಯುವುದಿಲ್ಲ. ಅವುಗಳ ಅವ್ಯವಸ್ಥೆಯಿಂದ ದಕ್ಷಿಣಾಯನ, ಉತ್ತರಾಯಣಗಳು ತಿಳಿಯುವಂತಿಲ್ಲ.

೩೬. ಅಯನಗಳ ಜ್ಞಾನವಿಲ್ಲದಿದ್ದರೆ ಸಂವತ್ಸರರೂಪವಾದ ಕಾಲದ ಜ್ಞಾನವು ಉಂಟಾಗುವುದು ಹೇಗೆ? ಪತಿವ್ರತೆಯ ಶಾಪದಿಂದ ಸೂರ್ಯನು ಉದಯಿಸಿ ಬರುವಂತೆ ಇಲ್ಲ.

೩೭. ಸೂರ್ಯನ ಉದಯವು ನಿಂತುಹೋದುದರಿಂದ ಸ್ನಾನ-ದಾನ ಮುಂತಾದ ಧರ್ಮಾನುಷ್ಠಾನಗಳೂ ಇಲ್ಲ. ಮತ್ತು ಅಗ್ನಿ ಪ್ರಜ್ವಲನ, ಯಾಗಾನುಷ್ಠಾನಗಳೂ ನಿಂತುಹೋಗಿವೆ.

೩೮. ಆಯಾಯ ವಿಹಿತಕಾಲವು ಬರದೆ ಇಷ್ಟಿಗಳೂ ಯಜ್ಞಾದಿ ಅನುಷ್ಠಾನಗಳೂ ನಡೆಯುವುದಿಲ್ಲ. ಹೀಗೆ ಎಲ್ಲ ಚರಾಚರ ಪ್ರಪಂಚವು ಕತ್ತಲಿನಲ್ಲಿ ಮುಳುಗಿ ಎಲ್ಲ ಪ್ರಾಣಿಗಳು ಸಾಯುವ ಹೊತ್ತು ಬಂದಿದೆ.

೩೯. ಲೋಕದಲ್ಲಿ ಹೋಮಾನುಷ್ಠಾನವಿಲ್ಲದಿದ್ದರೆ ನಮಗೆ ತೃಪ್ತಿಯು ಲಭಿಸುವುದಿಲ್ಲ. ಮರ್ತ್ಯರು ಉಚಿತವಾದ ಯಜ್ಞಭಾಗಗಳನ್ನು ಅರ್ಪಿಸಿ ನಮಗೆ ತೃಪ್ತಿಯನ್ನುಂಟುಮಾಡುವವರಾಗಿದ್ದಾರೆ.

ವೃಷ್ಟ್ಯಾದಿನಾನುಗೃಹ್ಣೀಮೋ ಮರ್ತ್ಯಾನ್ ಸಸ್ಯಾಭಿವೃದ್ಧಯೇ ।
ನಿಷ್ಪಾದಿತಾಷ್ವೋಷಧೀಷು ಮರ್ತ್ಯಾ ಯಜ್ಞೈರ್ಯಜನ್ತಿ ನಃ ॥೪೦॥

ಏವಂ ವಯಂ ಪ್ರಯಚ್ಛಾಮಃ ಕಾಮಾನ್ಯಜ್ಞಾದಿಪೂಜಿತಾಃ ।
ಅಧೋ ಹಿ ವರ್ಷಾಮ ವಯಂ ಮರ್ತ್ಯಾಶ್ಚೋರ್ಧ್ವಂ ಪ್ರವರ್ಷಿಣಃ ॥೪೧॥

ತೋಯವರ್ಷೇಣ ಹಿ ವಯಂ ಹವಿರ್ವರ್ಷೇಣ ಮಾನವಾಃ ।
ಯೇಽಸ್ಮಾಕಂ ನ ಪ್ರಯಚ್ಛನ್ತಿ ನಿತ್ಯನೈಮಿತ್ತಿಕೀಃ ಕ್ರಿಯಾಃ ॥೪೨॥

ಕ್ರತುಭಾಗಂ ದುರಾತ್ಮಾನಃ ಸ್ವಯಂ ವಾಶ್ನನ್ತಿ ಲೋಲುಪಾಃ ।
ವಿನಾಶಾಯ ವಯಂ ತೇಷಾಂ ತೋಯಸೂರ್ಯಾಗ್ನಿಮಾರುತಾಃ ॥೪೩॥

---

೪೦. ಸಸ್ಯದ ವೃದ್ಧಿಯನ್ನು ಹೊಂದಲು ನಾವು ಮಳೆಯನ್ನು ಕೊಟ್ಟು ಮರ್ತ್ಯರಿಗೆ ಅನುಗ್ರಹ ಮಾಡುತ್ತೇವೆ. ಹಾಗೆ ಸಸ್ಯದ ಅಭಿವೃದ್ಧಿಯನ್ನು ಹೊಂದಿದ ಮರ್ತ್ಯರು ನಮ್ಮನ್ನು ತೃಪ್ತಿಪಡಿಸಲು ಯಜ್ಞಗಳನ್ನು ಆಚರಿಸುವರು.

೪೧. ಮತ್ತೆ ಯಜ್ಞಾನುಷ್ಠಾನದಿಂದ ಪೂಜಿಸಲ್ಪಟ್ಟ ನಾವು ಮತ್ತೆ ಮರ್ತ್ಯರ ಇಷ್ಟಾರ್ಥಗಳನ್ನು ನೆರವೇರಿಸುತ್ತೇವೆ. ನಾವು ಮರ್ತ್ಯರಿಗಾಗಿ ಕೆಳಗೆ ಮಳೆಯನ್ನು ಕೊಡುವೆವು. ಮರ್ತ್ಯರು ನಮಗಾಗಿ ಮೇಲಕ್ಕೆ ಹವಿರ್ಭಾಗ-ರೂಪವಾದ ಮಳೆಯನ್ನು ಚೆಲ್ಲುವರು.

೪೨. ನಾವು ಮರ್ತ್ಯರಿಗೆ ನೀರಿನ ಮಳೆಯನ್ನು ಬಿಟ್ಟರೆ ಅವರು ನಮಗೆ ಹವಿಸ್ಸಿನ ಮಳೆಯನ್ನು ಸುರಿಸುವರು. ಆದ್ದರಿಂದ ಮರ್ತ್ಯರು ನಮ್ಮ ಉದ್ದೇಶದಿಂದ ನಿತ್ಯ-ನೈಮಿತ್ತಿಕಕರ್ಮಗಳನ್ನು ಆಚರಿಸಬೇಕು.

೪೩. ಯಾವ ದುರಾತ್ಮರು ಆಯಾಯ ಕರ್ಮಗಳಲ್ಲಿ ನಮಗೆ ಭಾಗವನ್ನು ಕೊಡುವುದಿಲ್ಲವೊ ; ಕರ್ಮಭ್ರಷ್ಟರಾಗಿ ಲೋಭದಿಂದ ತಾವು ಮಾತ್ರ ಭುಂಜಿಸು-ವರೊ ; ಅವರನ್ನು ನಾಶಮಾಡಲು ಜಲದೇವತೆ-ಸೂರ್ಯ-ಅಗ್ನಿ-ವಾಯು-ದೇವತೆಗಳಾದ ನಾವು ಸಂಕಲ್ಪಿಸುವೆವು.

ಕ್ಷಿತಿಂ ಚ ಸಂದೂಷಯಾಮಃ ಪಾಪಾನಾಮುಪಕಾರಿಣಾಮ್ ॥೪೪॥

ದುಷ್ಟತೋಯಾದಿದೋಷೇಣ ತೇಷಾಂ ದುಷ್ಕೃತಕರ್ಮಣಾಮ್ ।
ಉಪಸರ್ಗಾಃ ಪ್ರವರ್ತನ್ತೇ ಮರಣಾಯ ಸುದಾರುಣಾಃ ॥೪೫॥

ಯೇ ತ್ವಸ್ಮಾನ್ಪ್ರೀಣಯಿತ್ವಾ ತು ಭುಞ್ಜತೇ ಶೇಷಮಾತ್ಮನಾ ।
ತೇಷಾಂ ಪುಣ್ಯತಮಾಂಲ್ಲೋಕಾನ್ವಿತರಾಮೋ ಮಹಾತ್ಮನಾಮ್ ॥೪೬॥

ತನ್ನಾಸ್ತಿ ಸರ್ವಮೇತದ್ಧಿ ನ ಚೋಪಾಯವ್ಯವಸ್ಥಿತಮ್ ।
ಕಥಂ ನು ದಿನಸಙ್ಗಃ ಸ್ಯಾದನ್ಯೋನ್ಯಮವದನ್ಸುರಾಃ ॥೪೭॥

ತೇಷಾಮೇವ ಸಮೇತಾನಾಂ ಯಜ್ಞವ್ಯುಚ್ಛಿತ್ತಿಶಙ್ಕಿನಾಮ್ ।
ದೇವಾನಾಂ ವಚನಂ ಶ್ರುತ್ವಾ ಪ್ರಾಹ ದೇವಃ ಪ್ರಜಾಪತಿಃ ॥೪೮॥

---

೪೪. ಮತ್ತು ನಿರಂತರವಾಗಿ ಪಾಪಕರ್ಮದ ಅಭಿರುಚಿಯುಳ್ಳವರೂ ದೇವತೆಗಳಿಗೆ ಅಪಕಾರಮಾಡಿದವರೂ ಆದ ನರರ ಭೂಮಿಯನ್ನು ಕೆಡಿಸುವೆವು.

೪೫. ನಮ್ಮ ಕೋಪದಿಂದ ಕೆಟ್ಟನೀರಿನ ಮಳೆ ಮುಂತಾದುದರಿಂದ ಅವರ ಭೂಮಿಯು ಕೆಟ್ಟುಹೋಗುವುದು ಮಾತ್ರವಲ್ಲದೆ ಮೃತ್ಯುವನ್ನುಂಟು-ಮಾಡುವ ಭಯಂಕರವಾದ ಅನೇಕ ಪೀಡೆಗಳುಂಟಾಗುತ್ತವೆ.

೪೬. ಯಾರು ನಮ್ಮನ್ನು ಪ್ರೀತಿಗೊಳಿಸಿ ಉಳಿದ ಶೇಷಾನ್ನವನ್ನು ಭುಂಜಿಸುವರೊ; ಅಂತಹ ಮಹಾತ್ಮರಿಗೆ ನಾವು ಸುಕೃತಲಭ್ಯವಾದ ಉತ್ತಮ-ಲೋಕಗಳನ್ನು ಕೊಡುವೆವು.

೪೭. ಈಗ ಇದೆಲ್ಲವೂ ನಿಂತುಹೋಗಿರುವುದು. ಇದನ್ನು ಸರಿಪಡಿಸ-ಬಹುದಾದ ಉಪಾಯವೇ ಇಲ್ಲದಂತಾಗಿದೆ. ಹೀಗಿರಲು ಸೂರ್ಯೋದಯವಾಗಿ ಹಗಲು ಹೇಗೆ ಉಂಟಾದೀತೊ? ಎಂದು ದೇವತೆಗಳು ಅನ್ಯೋನ್ಯವಾಗಿ ಮಾತನಾಡಿಕೊಂಡರು.

೪೮. ಹೀಗೆ ಯಜ್ಞಕರ್ಮಗಳ ಲೋಪವನ್ನು ಶಂಕಿಸುತ್ತಿದ್ದ, ಒಟ್ಟು-ಗೂಡಿರುವ ದೇವತೆಗಳ ಈ ಮಾತನ್ನು ಕೇಳಿ ಬ್ರಹ್ಮದೇವನು ಅವರ ಸಂಗಡ ಹೀಗೆಹೇಳಿದನು.

ತೇಜಃ ಪರಂ ತೇಜಸೈವ ತಪಸಾ ಚ ತಪಸ್ತಥಾ ।
ಪ್ರಶಾಮ್ಯತ್ಯಮರಾಸ್ತಸ್ಮಾಚ್ಛೃಣುಧ್ವಂ ವಚನಂ ಮಮ ॥೪೯॥

ಪತಿವ್ರತಾಯಾ ಮಾಹಾತ್ಮ್ಯಾನ್ನೋದ್ಗಚ್ಛತಿ ದಿವಾಕರಃ ।
ತಸ್ಯ ಚಾನುದಯಾದ್ಧಾನಿರ್ಮರ್ತ್ಯಾನಾಂ ಭವತಾಂ ಯಥಾ ॥೫೦॥

ತಸ್ಮಾತ್ಪತಿವ್ರತಾಮತ್ರೇರನಸೂಯಾಂ ತಪಸ್ವಿನೀಮ್ ।
ಪ್ರಸಾದಯತ ವೈ ಪತ್ನೀಂ ಭಾನೋರುದಯಕಾಮ್ಯಯಾ ॥೫೧॥

ಪುತ್ರ ಉವಾಚ :—

ತೈಃ ಸಾ ಪ್ರಸಾದಿತಾ ಗತ್ವಾ ಪ್ರಾಹೇಷ್ಟಂ ವ್ರಿಯತಾಮಿತಿ ।
ಅಯಾಚನ್ತ ದಿನಂ ದೇವಾ ಭವತ್ವಿತಿ ಯಥಾ ಪುರಾ ॥೫೨॥

---

೪೯. ದೇವತೆಗಳಿರಾ! ತೇಜಸ್ಸು ತೇಜಸ್ಸಿನಿಂದಲೇ ಅಡಗುವುದು. ಹಾಗು ತಪಸ್ಸು ತಪಸ್ಸಿನಿಂದಲೇ ಅಡಗುವುದು. ಆದುದರಿಂದ ನಾನು ಹೇಳುವ ವಚನವನ್ನು ನೀವು ಕೇಳಿರಿ.

೫೦. ಪತಿವ್ರತೆಯ ಪಾತಿವ್ರತ್ಯದ ಮಹಿಮೆಯಿಂದ ಸೂರ್ಯನು ಉದಯಿಸದೇ ಇರುವನು. ಹಾಗೆ ಸೂರ್ಯನು ಉದಯಿಸದಿದ್ದುದರಿಂದ ನಿಮಗೆ ಹೇಗೊ ಹಾಗೆಯೆ ಮರ್ತ್ಯರಿಗೂ ಹಾನಿಯುಂಟಾಗಿದೆ.

೫೧. ಆದುದರಿಂದ ಸೂರ್ಯೋದಯವಾಗುವಂತೆ ಮಾಡುವ ಇಷ್ಟದಿಂದ ನೀವು ಮಹಾಪತಿವ್ರತೆಯೂ ತಪಸ್ವಿನಿಯೂ ಆದ ಅತ್ರಿಮುನಿಯ ಪತ್ನಿಯಾದ ಅನಸೂಯಾದೇವಿಯನ್ನು ಸಂತೋಷಪಡಿಸಿರಿ.

ಪುತ್ರನು ಹೀಗೆ ಹೇಳಿದನು :—

೫೨. ಹಾಗೆ ದೇವತಗಳಿಂದ ಪ್ರಸನ್ನಗೊಳಿಸಲ್ಪಟ್ಟ ಸತಿ ಅನುಸೂಯೆಯು "ನಿಮ್ಮ ಇಷ್ಟವನ್ನು ಕೇಳಿಕೊಳ್ಳಿರಿ" ಎಂದು ದೇವತೆಗಳಿಗೆ ನುಡಿದಾಗ ದೇವತೆಗಳು ಮೊದಲಿನ ಹಾಗೆ ಸೂರ್ಯೋದಯವಾಗಿ ಹಗಲಾಗಬೇಕೆಂದು ಕೇಳಿಕೊಂಡರು.

ಅನಸೂಯೋವಾಚ :—

ಪತಿವ್ರತಾಯಾ ಮಾಹಾತ್ಮ್ಯಂ ನ ಹೀಯೇತ ಕಥಂ ತ್ವಿತಿ ।
ಸಂಮಾನ್ಯತಾಂ ತಥಾ ಸಾಧ್ವೀ ತಥಾ ಪ್ರೇಷ್ಯಾಮ್ಯಹಂ ಸುರಾಃ ॥೫೩॥

ಯಥಾ ಪುನರಹೋರಾತ್ರಸಂಸ್ಥಾನಮುಪಜಾಯತೇ ।
ಯಥಾ ಚ ತಸ್ಯಾಃ ಸ ಪತಿರ್ನ ಶಾಪಾನ್ನಾಶಮೇಷ್ಯತಿ ॥೫೪॥

ಪುತ್ರ ಉವಾಚ :—

ಏವಮುಕ್ತ್ವಾ ಸುರಾಂಸ್ತಸ್ಯಾ ಗತ್ವಾ ಸಾ ಮನ್ದಿರಂ ಶುಭಾ ।
ಉವಾಚ ಕುಶಲಂ ಪೃಷ್ಟ್ವಾ ಧರ್ಮಂ ಭರ್ತುಸ್ತಥಾತ್ಮನಃ ॥೫೫॥

ಕಚ್ಚಿನ್ನನ್ದಸಿ ಕಲ್ಯಾಣಿ ಸ್ವಭರ್ತುಃ ಸುಖದಾಯಿನೀ ।
ಕಚ್ಚಿಚ್ಚಾಖಿಲದೇವೇಭ್ಯೋ ಮನ್ಯಸೇ ಹ್ಯಧಿಕಂ ಪತಿಮ್ ॥೫೬॥

ಅನಸೂಯೆಯು ಹೇಳಿದಳು :—

೫೩. ದೇವತೆಗಳೆ! ಪತಿವ್ರತೆಯ ಮಾಹಾತ್ಮ್ಯವು ಸ್ವಲ್ಪವೂ ಕುಂದಿಹೋಗದ ಹಾಗೆ ನೀವು ಕೌಶಿಕವಿಪ್ರನ ಸತಿಯನ್ನು ಗೌರವದಿಂದ ಉಪಚರಿಸಿ. ನಾನು ಕೂಡ ಅವಳನ್ನು ಹಾಗೆ ಪ್ರೇರೇಪಿಸುವೆನು.

೫೪. ಮತ್ತೆ ಹಗಲು-ರಾತ್ರಿ ಕಾಲಗಳ ವ್ಯವಸ್ಥೆಯು ಮೊದಲಿನಂತೆಯೆ ನಡೆಯುವಂತೆಯೂ ಮಾಂಡವ್ಯಶಾಪದಿಂದ ಆಕೆಯ ಪತಿಯು ನಾಶವನ್ನು ಹೊಂದದಂತೆಯೂ ನಾನು ಪ್ರವರ್ತಿಸುವೆನು.

ಪುತ್ರನು ಇಂತೆಂದನು :—

೫೫. ಮಂಗಳಕರಳಾದ ಅನಸೂಯೆಯು ದೇವತೆಗಳಿಗೆ ಹೀಗೆಂದು ಹೇಳಿ ತಾನು ಕೌಶಿಕನ ಸತಿಯ ಮನೆಗೆ ಹೋದಳು. ಅಲ್ಲಿ ಅವಳಿಂದ ಕುಶಲಪ್ರಶ್ನಮಾಡಲ್ಪಟ್ಟವಳಾಗಿ ತನ್ನ ಮತ್ತು ತನ್ನ ಪತಿಯ ಧರ್ಮವನ್ನು ಕುಶಲವೃತ್ತದೊಡನೆ ತಿಳಿಸಿದಳು.

೫೬. ಮಂಗಳಶೀಲಳೆ! ಭರ್ತೃವಿಗೆ ಸುಖವನ್ನು ಕೊಡುತ್ತಿದ್ದ ನೀನು ಸಂತೋಷದಿಂದ ಇರುವೆಯಾ? ಮತ್ತು ನೀನು ಪತಿಯನ್ನು ಅಖಿಲ ದೇವತೆಗಳಿಗಿಂತ ಹೆಚ್ಚಾದವನೆಂದು ತಿಳಿದಿರುವೆಯಾ?

ಭರ್ತುಃ ಶುಶ್ರೂಷಣಾದೇವ ಮಯಾ ಪ್ರಾಪ್ತಂ ಮಹತ್ಫಲಮ್ ।
ಸರ್ವಕಾಮಫಲಾವಾಪ್ತಿಃ ಪತ್ಯುಃ ಶುಶ್ರೂಷಣಾತ್ಸ್ತ್ರಿಯಾಃ ॥೫೭॥

ಪಞ್ಚರ್ಣಾನಿ ಮನುಷ್ಯೇಣ ಸಾಧ್ವಿ ದೇಯಾನಿ ಸರ್ವದಾ ।
ತಥಾತ್ಮವರ್ಣಧರ್ಮೇಣ ಕರ್ತವ್ಯೋ ಧನಸಞ್ಚಯಃ ॥೫೮॥

ಪ್ರಾಪ್ತಶ್ಚಾರ್ಥಸ್ತಥಾ ಪಾತ್ರೇ ವಿನಿಯೋಜ್ಯೋ ವಿಧಾನತಃ ।
ಸತ್ಯಾರ್ಜವತಪೋದಾನದಯಾಯುಕ್ತೋ ಭವೇತ್ಸದಾ ॥೫೯॥

ಕ್ರಿಯಾ ಚ ಶಾಸ್ತ್ರನಿರ್ದಿಷ್ಟಾ ರಾಗದ್ವೇಷವಿವರ್ಜಿತಾ ।
ಕರ್ತವ್ಯಾಹರಹಃ ಶ್ರದ್ಧಾ ಪುರಸ್ಕಾರೇಣ ಶಕ್ತಿತಃ ॥೬೦॥

ಸ್ವಜಾತಿವಿಹಿತಾನೇವಂ ಲೋಕಾನ್ಪ್ರಾಪ್ನೋತಿ ಮಾನವಃ ।
ಕ್ಲೇಶೇನ ಮಹತಾ ಸಾಧ್ವಿ ಪ್ರಾಜಾಪತ್ಯಾದಿಕಾನ್ ಕ್ರಮಾತ್ ॥೬೧॥

---

೫೭. ನಾನು ಪತಿಶುಶ್ರೂಷೆಯೆಂಬ ಒಂದು ಧರ್ಮದಿಂದಲೇ ಮಹತ್ತಾದ ಫಲವನ್ನು ಹೊಂದಿರುವೆನು. ಎಲ್ಲ ನಾರಿಯರಿಗೂ ಪತಿಶುಶ್ರೂಷೆಯಿಂದ ಅವರವರ ಸಂಪೂರ್ಣ ಇಷ್ಟಾರ್ಥಗಳ ಪ್ರಾಪ್ತಿಯಾಗುವುದು.

೫೮. ಪತಿವ್ರತೆಯೆ! ಮನುಷ್ಯನಾಗಿ ಜನಿಸಿದವನು ಐದು ಋಣಗಳನ್ನು ತೀರಿಸುವುದು ಆವಶ್ಯಕವು. ಹಾಗೆ ಋಣವನ್ನು ಕಳೆದುಕೊಳ್ಳುವುದು ತಮ್ಮ ಸ್ವಧರ್ಮಾನುಷ್ಠಾನದಿಂದ ಸಾಧ್ಯವು. ಆದ್ದರಿಂದ ತನ್ನ ವರ್ಣಧರ್ಮದಲ್ಲಿದ್ದು ಧನಸಂಗ್ರಹವನ್ನು ಮಾಡಬೇಕು.

೫೯. ಹಾಗೆ ಸಂಪಾದಿಸಿದ ಧನವನ್ನು ಸತ್ಪಾತ್ರದಲ್ಲಿ ಯಥಾವಿಧಿಯಾಗಿ ವಿನಿಯೋಗ ಮಾಡಬೇಕು. ಮತ್ತು ಯಾವಾಗಲೂ ಸತ್ಯವಚನ-ಸರಲಬುದ್ಧಿ-ತಪಸ್ಸು-ದಾನ-ಕರುಣೆ ಈ ಗುಣಗಳಿಂದ ಕೂಡಿರಬೇಕು.

೬೦. ಮತ್ತು ಶಾಸ್ತ್ರಗಳಲ್ಲಿ ವಿಹಿತವಾದ ಕರ್ಮವನ್ನು ರಾಗ-ದ್ವೇಷ ಭಾವನೆಗಳನ್ನು ಬಿಟ್ಟು ಆಚರಿಸಬೇಕು. ಹಾಗು ತನ್ನ ಶಕ್ತಿಯನ್ನು ಅನುಸರಿಸಿ ಪ್ರತಿದಿನವೂ ಪಿತೃಕರ್ಮದಲ್ಲಿ ಶ್ರದ್ಧೆಗೆ ಪುರಸ್ಕಾರ ಕೊಡಬೇಕು.

೬೧. ಸಾಧ್ವಿಯೆ! ಮಾನವನು ಬಹಳ ಕ್ಲೇಶದಿಂದ ತನ್ನ ಜಾತಿಗೆ ಕರ್ತವ್ಯವಾಗಿ ವಿಹಿತವಾಗಿರುವ ಸತ್ಕರ್ಮಗಳನ್ನು ಮಾಡಿ ಋಣಮುಕ್ತನಾಗಿ ಕ್ರಮವಾಗಿ ಬ್ರಹ್ಮಲೋಕ ಮುಂತಾದ ಸದ್ಗತಿಯನ್ನು ಹೊಂದುವನು.

ಸ್ತ್ರಿಯಶ್ಚೈವಂ ಸಮಸ್ತಸ್ಯ ನರೈರ್ದುಃಖಾರ್ಜಿತಸ್ಯ ವೈ ।
ಪುಣ್ಯಸ್ಯಾರ್ಧಾಪಹಾರಿಣ್ಯಃ ಪತಿಶುಶ್ರೂಷಯೈವ ಹಿ ॥೬೨॥

ನಾಸ್ತಿ ಸ್ತ್ರೀಣಾಂ ಪೃಥಗ್ಯಜ್ಞೋ ನ ಶ್ರಾದ್ಧಂ ನಾಪ್ಯುಪೋಷಿತಮ್ ।
ಭರ್ತುಃ ಶುಶ್ರೂಷಯೈವೈತಾ ಲೋಕಾನಿಷ್ಟಾನ್ ಜಯನ್ತಿ ಹಿ ॥೬೩॥

ತಸ್ಮಾತ್ಸಾಧ್ವಿ ಮಹಾಭಾಗೇ ಪತಿಶುಶ್ರೂಷಣಂ ಪ್ರತಿ ।
ತ್ವಯಾ ಮತಿಃ ಸದಾ ಕಾರ್ಯಾ ಯತೋ ಭರ್ತಾ ಪರಾ ಗತಿಃ ॥೬೪॥

ಯದ್ದೇವೇಭ್ಯೋ ಯಚ್ಚ ಪಿತ್ರಾದಿಕೇಭ್ಯಃ
ಕುರ್ಯಾದ್ಭರ್ತಾಭ್ಯರ್ಚನಂ ಸತ್ಕ್ರಿಯಾಂ ಚ ।
ತಸ್ಯಾರ್ಧಂ ವೈ ಕೇವಲಾನನ್ಯಚಿತ್ತಾ
ನಾರೀ ಭುಙ್ಕ್ತೇ ಭರ್ತೃಶುಶೂಷಯೈವ ॥೬೫॥

---

೬೨. ಹೀಗೆ ಪುರುಷರಿಂದ ಕಷ್ಟಪಟ್ಟು ಆರ್ಜಿಸಲ್ಪಟ್ಟ ಸಮಗ್ರ ಪುಣ್ಯವಲ್ಲಿ ಅರ್ಧಭಾಗವನ್ನು ಪತ್ನಿಯರು ಪತಿಶುಶ್ರೂಷಾ ಧರ್ಮದಿಂದಲೇ ಹೊಂದುವರು.

೬೩. ಸ್ತ್ರೀಯರಿಗೆ ಪತಿಯನ್ನು ಬಿಟ್ಟು ಸ್ವತಂತ್ರವಾಗಿ ಯಜ್ಞ-ಶ್ರಾದ್ಧ-ಉಪವಾಸ ಮುಂತಾದ ಕರ್ತವ್ಯ ಧರ್ಮಗಳು ಯಾವುದೂ ಇಲ್ಲ. ಪತಿಶುಶ್ರೂಷೆಯೊಂದರಿಂದಲೆ ಸ್ತ್ರೀಯರು ಇಷ್ಟವಾದ ಪುಣ್ಯಲೋಕವನ್ನು ಗೆಲ್ಲುವರು.

೬೪. ಮಹಾಭಾಗ್ಯವತಿಯೆ! ಪತಿವ್ರತೆಯೆ! ಆದುದರಿಂದ ನೀನು ಪತಿಶುಶ್ರೂಷೆಯ ವಿಷಯದಲ್ಲಿ ಯಾವಾಗಲೂ ಗಮನವನ್ನು ಇಟ್ಟಿರಬೇಕು. ಸ್ತ್ರೀಯರಿಗೆ ಪತಿಯೆ ಪರಮ ಗತಿಯು.

೬೫. ಪತಿಯು ದೇವತೆಗಳಿಗೂ ಪಿತೃ ಮುಂತಾದವರಿಗೂ ಯಾವ ಅರ್ಚನೆ-ಸತ್ಕಾರಗಳನ್ನು ಭಕ್ತಿಯಿಂದ ಮಾಡುವನೊ; ಅದರ ಅರ್ಧಭಾಗದ ಫಲವನ್ನು ಬೇರೆಕಡೆ ಚಿತ್ತವಿಲ್ಲದ ಹಾಗೆ ಪತಿಯನ್ನು ಶುಶ್ರೂಷೆಮಾಡಿದ ಮಾತ್ರದಿಂದಲೆ ನಾರಿಯು ಭುಂಜಿಸುವಳು,

ಪುತ್ರ ಉವಾಚ :—

ತಸ್ಯಾಸ್ತದ್ವಚನಂ ಶ್ರುತ್ವಾ ಪ್ರತಿಪೂಜ್ಯ ತದಾದರಾತ್ ।
ಪ್ರತ್ಯುವಾಚಾತ್ರಿಪತ್ನೀಂ ತಾಮನಸೂಯಾಮಿದಂ ವಚಃ ॥೭೬॥

ಧನ್ಯಾಸ್ಮ್ಯನುಗೃಹೀತಾಸ್ಮಿ ದೈವಸ್ಯಾಪ್ಯವಲೋಕತಃ ।
ಯನ್ಮೇ ಪ್ರಕೃತಿಕಲ್ಯಾಣಿ ಶ್ರದ್ಧಾಂ ವರ್ಧಯಸೇ ಪುನಃ ॥೭೭॥

ಜಾನಾಮ್ಯೇತನ್ನ ನಾರೀಣಾಂ ಕಚ್ಚಿತ್ಪತಿಸಮಾ ಗತಿಃ ।
ತತ್ಪ್ರೀತಿಶ್ಚೋಪಕಾರಾಯ ಇಹಲೋಕೇ ಪರತ್ರ ಚ ॥೭೮॥

ಪತಿಪ್ರಸಾದಾದಿಹ ಚ ಪ್ರೇತ್ಯ ಚೈವ ಯಶಸ್ವಿನೀ ।
ನಾರೀ ಸುಖಮವಾಪ್ನೋತಿ ನಾರ್ಯಾ ಭರ್ತಾ ಹಿ ದೈವತಮ್ ॥೭೯॥

ಪುತ್ರನು ಇಂತೆಂದನು :—

೭೬. ಸಾಧ್ವಿಯು ಅನಸೂಯಾ ದೇವಿಯ ಆ ಮಾತನ್ನು ಕೇಳಿ ಆದರದಿಂದ ಆ ಮಾತನ್ನು ಗೌರವಿಸಿ ಅತ್ರಿಮುನಿ ಪತ್ನಿಯಾದ ಆ ಅನಸೂಯೆಯನ್ನು ಕುರಿತು ಪ್ರತ್ಯುತ್ತರವನ್ನಿತ್ತಳು.

೭೭. ಸ್ವಭಾವವಾಗಿ ಮಂಗಳಕರಳಾಗಿರುವವಳೆ! ನಿನ್ನ ಉಪದೇಶದಿಂದಲೂ ಮತ್ತು ದೇವತೆಗಳ ದರ್ಶನ ಲಾಭದಿಂದಲೂ ನಾನು ಧನ್ಯಳೂ ಅನುಗ್ರಹ ಹೊಂದಿದವಳೂ ಆಗಿದ್ದೇನೆ. ಪಾತಿವ್ರತ್ಯ ಧರ್ಮದಲ್ಲಿ ಇನ್ನೂ ಶ್ರದ್ಧೆಯನ್ನು ಹೆಚ್ಚಿಸಿ ಉಪಕಾರಮಾಡುತ್ತಿದ್ದೀಯೆ.

೭೮. ನಾರಿಯರಿಗೆ ಪತಿಗೆ ಸಮಾನವಾದ ಬೇರೊಂದು ಉತ್ತಮಗತಿಯು ಇಲ್ಲ. ಮತ್ತು ನಾರಿಗೆ ಪತಿಯ ಪ್ರೀತಿಯು ಇಹಲೋಕ-ಪರಲೋಕಗಳಲ್ಲಿ ಉಪಕಾರವನ್ನುಂಟುಮಾಡುವುದು. ಇದನ್ನು ನಾನು ತಿಳಿದಿರುವೆನು.

೭೯. ನಾರಿಯು ಪತಿದೇವನ ಅನುಗ್ರಹದಿಂದ ಕೀರ್ತಿಯನ್ನು ಹೊಂದಿದವಳಾಗಿ ಇಹ-ಪರಲೋಕಗಳಲ್ಲಿ ಸೌಖ್ಯವನ್ನು ಹೊಂದುತ್ತಾಳೆ. ನಾರಿಗೆ ಪತಿಯೇ ಪರಮದೇವತೆಯಲ್ಲವೆ!

ಸಾ ತ್ವಂ ಬ್ರೂಹಿ ಮಹಾಭಾಗೇ ಪ್ರಾಪ್ತಾಯಾ ಮಮ ಮನ್ದಿರಮ್ ।
ಆರ್ಯಾಯಾಃ ಕಿಂ ನು ಕರ್ತವ್ಯಂ ಮಯಾಽರ್ಯೇಣಾಪಿ ವಾ ಶುಭೇ ॥೭೦॥

ಅನಸೂಯೋವಾಚ :—

ಏತೇ ದೇವಾಃ ಸಹೇನ್ದ್ರೇಣ ಮಾಮುಪಾಗಮ್ಯ ದುಃಖಿತಾಃ ।
ತ್ವದ್ವಾಕ್ಯಾಪಾಸ್ತಸತ್ಕರ್ಮದಿನನಕ್ತನಿರೂಪಣಾಃ ॥೭೧॥

ಯಾಚನ್ತೇಽಹರ್ನಿಶಾಸಂಸ್ಥಾಂ ಯಥಾವದವಿಖಣ್ಡಿತಾಮ್ ।
ಅಹಂ ತದರ್ಥಮಾಯಾತಾ ಶೃಣು ಚೈತದ್ವಚೋ ಮಮ ॥೭೨॥

ದಿನಾಭಾವಾತ್ಸಮಸ್ತಾನಾಮಭಾವೋ ಯಾಗಕರ್ಮಣಾಮ್ ।
ತದಭಾವಾತ್ಸುರಾಃ ಪುಷ್ಟಿಂ ನೋಪಯಾನ್ತಿ ತಪಸ್ವಿನಿ ॥೭೩॥

---

೭೦. ಮಹಾಭಾಗ್ಯವತಿಯೆ! ಮಂಗಳಕರಳೆ! ನೀನೀಗ ಇದನ್ನು ಹೇಳು. ನನ್ನ ಮನೆಗೆ ಬಂದಿರುವ ಪೂಜ್ಯಳಾದ ನಿನಗೆ ನನ್ನಿಂದಲಾಗಲಿ, ನನ್ನ ಪತಿಯಿಂದಾಗಲಿ ಆಗಬೇಕಾದ ಸೇವೆಯು ಏನಿದೆ?

ಅನಸೂಯೆಯು ಹೀಗೆಂದಳು :—

೭೧. ಇಂದ್ರನ ಸಹಿತರಾಗಿರುವ ಈ ದೇವತೆಗಳು ನಿನ್ನ ವಾಕ್ಯದಿಂದ ಲೋಪಹೊಂದಿದ ಸತ್ಕರ್ಮ, ಹಗಲು, ರಾತ್ರಿಗಳ ವಿವೇಕವುಳ್ಳವರಾಗಿ ಬಹು ದುಃಖಪಟ್ಟವರಾಗಿ ನನ್ನ ಬಳಿಗೆ ಬಂದಿರುವರು.

೭೨. ಹಾಗೆ ಬಂದ ದೇವತೆಗಳು ಮೊದಲಿನ ಹಾಗೆ ಭಂಗವಿಲ್ಲದ ಹಗಲು-ರಾತ್ರಿಗಳ ವ್ಯವಸ್ಥೆಯನ್ನು ಕೇಳಿಕೊಳ್ಳುತ್ತಿರುವರು. ನಾನು ಅದಕ್ಕೋಸ್ಕರ ಇಲ್ಲಿಗೆ ಬಂದೆನು. ನನ್ನ ಮಾತನ್ನು ಕೇಳು.

೭೩. ತಪಸ್ವಿನಿಯೆ! ಹಗಲುವೇಳೆಯಾಗದಿದ್ದುದರಿಂದ ಎಲ್ಲ ಯಾಗ ಕರ್ಮಗಳು ನಿಂತುಹೋಗಿವೆ. ಯಾಗಗಳ ಹವಿರ್ಭಾಗವು ದೊರೆಯದಿದ್ದುದರಿಂದ ದೇವತೆಗಳು ಪುಷ್ಟಿಯನ್ನು ಹೊಂದದೆ ಇರುವರು.

ಅಹ್ನಶ್ಚೈವ ಸಮುಚ್ಛೇದಾದುಚ್ಛೇದಃ ಸರ್ವಕರ್ಮಣಾಮ್ ।
ತದುಚ್ಛೇದಾದನಾವೃಷ್ಟ್ಯಾ ಜಗದುಚ್ಛೇದಮೇಷ್ಯತಿ ॥೭೪॥

ತತ್ತ್ವಮಿಚ್ಛಸಿ ಧೈರ್ಯೇಣ ಜಗದುದ್ಧರ್ತುಮಾಪದಃ ।
ಪ್ರಸೀದ ಸಾಧ್ವಿ ಲೋಕಾನಾಂ ಪೂರ್ವವದ್ವರ್ತತಾಂ ರವಿಃ ॥೭೫॥

ಬ್ರಾಹ್ಮಣ್ಯುವಾಚ :—

ಮಾಣ್ಡವ್ಯೇನ ಮಹಾಭಾಗೇ ಶಪ್ತೋ ಭರ್ತಾ ಮಮೇಶ್ವರಃ ।
ಸೂರ್ಯೋದಯೇ ವಿನಾಶಂ ತ್ವಂ ಪ್ರಾಪ್ಸ್ಯಸೀತ್ಯತಿಮನ್ಯುನಾ ॥೭೬॥

ಅನಸೂಯೋವಾಚ :—

ಯದಿ ತೇ ರೋಚತೇ ಭದ್ರೇ ತತಸ್ತ್ವದ್ವಚನಾದಹಮ್ ।
ಕರೋಮಿ ಪೂರ್ವವದ್ದೇಹಂ ಭರ್ತಾರಂ ವಚನಾತ್ತವ ॥೭೭॥

---

೭೪. ಹಗಲುಹೊತ್ತೆಂಬುದು ನಾಶವಾದುದರಿಂದ ಆಗ ಮಾಡಬೇಕಾದ ಸರ್ವಕರ್ಮಗಳಿಗೂ ಉಚ್ಛೇದವು ಬಂದಿತು. ಹಾಗೆ ಧರ್ಮಭ್ರಂಶದಿಂದ ಅನಾವೃಷ್ಟಿಯುಂಟಾಗಿ ಜಗತ್ತು ನಾಶಹೊಂದುವುದು.

೭೫. ಆದ್ದರಿಂದ ಈಗ ಈ ಆಪತ್ತಿನಿಂದ ಜಗತ್ತನ್ನು ಉದ್ಧಾರಮಾಡಲು ಧೈರ್ಯದಿಂದ ಸಂಕಲ್ಪಮಾಡು. ಸಾಧ್ವಿಯೆ! ಲೋಕಗಳ ವಿಷಯದಲ್ಲಿ ಅನುಗ್ರಹಮಾಡು. ಸೂರ್ಯನು ಮೊದಲಿನಂತೆ ಉದಯಿಸಿ ಬರಲಿ.

ಬ್ರಾಹ್ಮಣಸ್ತ್ರೀಯು ನುಡಿದಳು :—

೭೬. ಮಹಾಭಾಗ್ಯವತಿಯೆ! ನನಗೆ ಸರ್ವೇಶ್ವರನಂತಿರುವ ನನ್ನ ಪತಿದೇವನು ಅತಿಕೋಪಗೊಂಡ ಮಾಂಡವ್ಯಮುನಿಯಿಂದ "ಸೂರ್ಯೋದಯವಾಗುವ ಸಮಯದಲ್ಲಿ ನೀನು ಮರಣವನ್ನು ಹೊಂದುತ್ತೀ" ಎಂದು ಶಪಿಸಲ್ಪಟ್ಟಿರುವನು.

ಅನಸೂಯೆಯು ಹೀಗೆಂದಳು :—

೭೭. ಮಂಗಳಕರಳೆ! ನೀನು ಇಷ್ಟಪಡುವುದಾದರೆ ಮಾಂಡವ್ಯವಚನದಿಂದ ದುರವಸ್ಥೆಗೆ ಈಡಾದ ನಿನ್ನ ಪತಿಯನ್ನು ನಿನ್ನ ಮಾತಿನಂತೆ ಮೊದಲಿನಂತೆ ಜೀವಂತವಾದ ದೇಹವುಳ್ಳವನನ್ನಾಗಿ ಮಾಡುವೆನು.

ಮಯಾಪಿ ಸರ್ವಥಾ ಸ್ತ್ರೀಣಾಂ ಮಾಹಾತ್ಮ್ಯಂ ವರವರ್ಣಿನಿ ।
ಪತಿವ್ರತಾನಾಮಾರಾಧ್ಯಮಿತಿ ಸಂಮಾನಯಾಮಿ ತೇ ॥೭೮॥

ಪುತ್ರ ಉವಾಚ :—

ತಥೇತ್ಯುಕ್ತೇ ತಥಾ ಸೂರ್ಯಮಾಜುಹಾವ ತಪಸ್ವಿನೀ ।
ಅನಸೂಯಾರ್ಘ್ಯಮುದ್ಯಮ್ಯ ಸಾರ್ಧರಾತ್ರೇ ತದಾ ನಿಶಿ ॥೭೯॥

ತತೋ ವಿವಸ್ವಾನ್ಭಗವಾನ್ ಫುಲ್ಲಪದ್ಮಾರುಣಾಕೃತಿಃ ।
ಶೈಲಾಧಿರಾಜಮುದಯಮಾರುರೋಹೋರುಮಣ್ಡಲಃ ॥೮೦॥

ಸಮನನ್ತರಮೇವಾಸ್ಯಾ ಭರ್ತಾ ಪ್ರಾಣೈರ್ವ್ಯಯುಜ್ಯತ ।
ಪಪಾತ ಚ ಮಹೀಪೃಷ್ಠೇ ಪತನ್ತಂ ಜಗೃಹೇ ಚ ಸಾ ॥೮೧॥

---

೭೮. ಸುಂದರಾಂಗಿಯೆ! ನನ್ನಿಂದಲೂ ಪತಿವ್ರತೆಯರಾದ ಸ್ತ್ರೀಯರ ಮಾಹಾತ್ಮ್ಯವು ಆರಾಧಿಸಿ ಉಜ್ವಲಗೊಳಿಸಲ್ಪಡಬೇಕು. ಆದುದರಿಂದ ಈ ರೀತಿಯಾಗಿ ನಿನ್ನನ್ನು ಸಮ್ಮಾನಿಸುತ್ತಿರುವೆನು.

ಪುತ್ರನು ಹೀಗೆ ಹೇಳಿದನು :—

೭೯. ಬ್ರಾಹ್ಮಣಸ್ತ್ರೀಯಿಂದ ಹಾಗೆ ಆಗಲೆಂದು ಹೇಳಲ್ಪಡಲಾಗಿ ತಪಸ್ವಿನಿಯಾದ ಅನಸೂಯಾದೇವಿಯು ಅರ್ಧರಾತ್ರಿಯ ಕತ್ತಲಿನಂತೆ ಇರುವ ರಾತ್ರಿಯಲ್ಲಿ ಅರ್ಘ್ಯಸಾಮಗ್ರಿಯನ್ನು ಎತ್ತಿಹಿಡಿದು ಸೂರ್ಯನನ್ನು ಕರೆದಳು.

೮೦. ತರುವಾಯ ಅರಳಿದ ತಾವರೆಯಂತೆ ಕೆಂಪಾದ ಆಕಾರವುಳ್ಳವನೂ, ವಿಶಾಲವಾದ ಬಿಂಬವುಳ್ಳವನೂ ಮತ್ತು ಪೂಜ್ಯನೂ ಆದ ಸೂರ್ಯದೇವನು ಗಿರಿರಾಜನಾದ ಉದಯ ಪರ್ವತವನ್ನು ಏರಿದನು.

೮೧. ಕೂಡಲೆ ಆ ಬ್ರಾಹ್ಮಣಸ್ತ್ರೀಯ ಪತಿಯು ಪ್ರಾಣಗಳಿಂದ ವಿಯುಕ್ತನಾದನು. ಮತ್ತು ನೆಲದಲ್ಲಿ ಬಿದ್ದನು. ಆಕೆಯು ಬೀಳುತ್ತಲಿದ್ದ ಪತಿಯನ್ನು ಹಿಡಿದುಕೊಂಡಳು,

ಅನಸೂಯೋವಾಚ :—

ನ ವಿಷಾದಸ್ತ್ವಯಾ ಭದ್ರೇ ಕರ್ತವ್ಯಃ ಪಶ್ಯ ಮೇ ಬಲಮ್ ।
ಪತಿಶುಶ್ರೂಷಯಾವಾಪ್ತಂ ತಪಸಃ ಕಿಂ ಚಿರೇಣ ಮೇ ॥೮೨॥

ಯಥಾ ಭರ್ತೃಸಮಂ ನಾನ್ಯಮಪಶ್ಯಂ ಪುರುಷಂ ಕ್ವಚಿತ್ ।
ರೂಪತಃ ಶೀಲತೋ ಬುದ್ಧ್ಯಾ ವಾಙ್ಮಾಧುರ್ಯಾದಿಭೂಷಣೈಃ॥೮೩॥

ತೇನ ಸತ್ಯೇನ ವಿಪ್ರೋಽಯಂ ವ್ಯಾಧಿಮುಕ್ತಃ ಪುನರ್ಯುವಾ ।
ಪ್ರಾಪ್ನೋತು ಜೀವಿತಂ ಭಾರ್ಯಾಸಹಾಯಃ ಶರದಾಂ ಶತಮ್॥೮೪॥

ಯಥಾ ಭರ್ತೃಸಮಂ ನಾನ್ಯಮಹಂ ಪಶ್ಯಾಮಿ ದೈವತಮ್ ।
ತೇನ ಸತ್ಯೇನ ವಿಪ್ರೋಽಯಂ ಪುನರ್ಜೀವತ್ವನಾಮಯಃ ॥೮೫॥

ಅನಸೂಯೆಯು ಹೀಗೆ ಹೇಳಿದಳು :—

೮೨. ಮಂಗಳಶೀಲಳೆ! ನೀನು ಈಗ ವಿಷಾದ ಪಡಲಾಗದು. ಪತಿಶುಶ್ರೂಷೆಯಿಂದ ಲಭಿಸಿದ ನನ್ನ ಮಾಹಾತ್ಮ್ಯವನ್ನು ನೋಡು, ಪತಿಶುಶ್ರೂಷೆಗಿಂತಲೂ ಹೆಚ್ಚು ಚಿರಕಾಲದ ತಪಶ್ಚರ್ಯೆಯಿಂದ ಲಭಿಸುವುದೇನಿದೆ ?

೮೩. ನಾನು ರೂಪ-ಶೀಲ-ಬುದ್ಧಿ-ವಾಙ್ಮಾಧುರ್ಯ ಮುಂತಾದ ಅಲಂಕಾರಪ್ರಾಯವಾದ ಗುಣಗಳಿಂದ ನನ್ನ ಪತಿಗೆ ಸಮಾನನಾದ ಬೇರೊಬ್ಬ ಪುರುಷನನ್ನು ಎಲ್ಲಲ್ಲಿಯೂ ಕಂಡವಳಲ್ಲ.

೮೪. ಅಂತಹ ನನ್ನ ಸತ್ಯ ಧರ್ಮದಿಂದ ಈ ವಿಪ್ರನು ವ್ಯಾಧಿಯಿಂದ ಬಿಡಲ್ಪಟ್ಟವನೂ, ಮತ್ತೆ ತಾರುಣ್ಯವನ್ನು ಹೊಂದಿದವನೂ ಆಗಿ ಪತ್ನೀಸಮೇತ-ಒಂದುನೂರುವರ್ಷಗಳವರೆಗೆ ಜೀವಿತವನ್ನು ಹೊಂದಲಿ.

೮೫. ನಾನು ಯಾವ ಪಾತಿವ್ರತ್ಯ ಧರ್ಮದಿಂದ ಪತಿಗೆ ಸಮಾನವಾಗಿ ಮತ್ತೊಂದು ದೈವವನ್ನು ಕಾಣಲಿಲ್ಲವೊ; ಅಂತಹ ಧರ್ಮದಿಂದ ಈ ವಿಪ್ರನು ಮತ್ತೆ ರೋಗ ಮುಕ್ತನಾಗಿ ಬದುಕಿಬರಲಿ.

ಕರ್ಮಣಾ ಮನಸಾ ವಾಚಾ ಭರ್ತುರಾರಾಧನಂ ಪ್ರತಿ ।
ಯಥಾ ಮಮೋದ್ಯಮೋ ನಿತ್ಯಂ ತಥಾಯಂ ಜೀವತಾದ್ದ್ವಿಜಃ ॥೮೬॥

ಪುತ್ರ ಉವಾಚ :—

ತತೋ ವಿಪ್ರಃ ಸಮುತ್ತಸ್ಥೌ ವ್ಯಾಧಿಮುಕ್ತಃ ಪುನರ್ಯುವಾ ।
ಸ್ವಭಾಭಿರ್ಭಾಸಯನ್ ವೇಶ್ಮ ವೃನ್ದಾರಕ ಇವಾಜರಃ ॥೮೭॥

ತತೋಽಪತತ್ಪುಷ್ಪವೃಷ್ಟಿರ್ದೇವವಾದ್ಯಾನಿ ಸಸ್ವನುಃ ।
ಲೇಭಿರೇ ಚ ಮುದಂ ದೇವಾ ಅನಸೂಯಾಮಥಾಬ್ರುವನ್ ॥೮೮॥

ದೇವಾ ಊಚುಃ :—

ವರಂ ವೃಣೀಷ್ವ ಕಲ್ಯಾಣಿ ದೇವಕಾರ್ಯಂ ಮಹತ್ಕೃತಮ್ ।
ಆದಿತ್ಯೋದಯಸದ್ಭಾವಾದ್ವರಂ ವರಯ ಸುವ್ರತೇ ॥೮೯॥

---

೮೬. ಯಾವ ಪಾತಿವ್ರತ್ಯದ ಆಸಕ್ತಿಯಿಂದ ಕರ್ಮ ಮನಸ್ಸು ಮತ್ತು ವಾಗಿಂದ್ರಿಯ ಈ ತ್ರಿಕರಣಗಳಲ್ಲಿಯೂ ಪತಿಯ ಶುಶ್ರೂಷೆಯಲ್ಲಿ ಉದ್ಯಮವಿದ್ದಿತೊ ಅಂತಹ ನನ್ನ ಪಾತಿವ್ರತ್ಯ ಬಲದಿಂದ ಈ ದ್ವಿಜನು ಬದುಕಲಿ.

ಪುತ್ರನು ಹೀಗೆ ಹೇಳಿದನು :—

೮೭. ತರುವಾಯ ಆ ವಿಪ್ರನು ವ್ಯಾಧಿಯಿಂದ ಮುಕ್ತನೂ, ಮತ್ತೆ ಯುವಕನೂ, ತನ್ನ ಪ್ರಭೆಯಿಂದ ಮಂದಿರವನ್ನು ಬೆಳಗುವವನೂ ಮತ್ತು ದೇವತೆಯಂತೆ ಜರಾಶೂನ್ಯನೂ ಆಗಿ ಎದ್ದನು.

೮೮. ಆಗ ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು. ದೇವಲೋಕದ ವಾದ್ಯಗಳು ಧ್ವನಿಗೈದುವು ಮತ್ತು ದೇವತೆಗಳು ಅಪಾರ ಆನಂದವನ್ನು ಹೊಂದಿದರು. ತರುವಾಯ ದೇವತೆಗಳು ಅನಸೂಯೆಗೆ ಹೀಗೆ ಹೇಳಿದರು.

ದೇವತೆಗಳು ಇಂತೆಂದರು :—

೮೯. ಮಂಗಳಕರಳೆ! ವರವನ್ನು ಕೇಳಿಕೊ. ನೀನು ಮಹತ್ತಾದ ದೇವತೆಗಳ ಕಾರ್ಯವನ್ನು ಸಾಧಿಸಿದ್ದೀಯೆ. ಆದಿತ್ಯನನ್ನು ಉದಯವಾಗುವಂತೆ ಮಾಡಿರುವೆ. ಪಾತಿವ್ರತ್ಯದಿಂದ ಭೂಷಿತಳೆ! ವರವನ್ನು ಕೇಳು.

ತ್ವಯಾ ಯಸ್ಮಾತ್ತತೋ ದೇವಾ ವರದಾಸ್ತೇ ತಪಸ್ವಿನಿ ||೯೦||

ಅನಸೂಯೋವಾಚ :—

ಯದಿ ದೇವಾಃ ಪ್ರಸನ್ನಾ ಮೇ ಪಿತಾಮಹಪುರೋಗಮಾಃ |
ವರದಾ ವರಯೋಗ್ಯಾ ಚ ಯದ್ಯಹಂ ಭವತಾಂ ಮತಾ ||೯೧||

ತದ್ಯಾಸ್ತು ಮಮ ಪುತ್ರತ್ವಂ ಬ್ರಹ್ಮವಿಷ್ಣುಮಹೇಶ್ವರಾಃ |
ಯೋಗಂ ಚ ಪ್ರಾಪ್ನುಯಾಂ ಭರ್ತೃಸಹಿತಾ ಕ್ಲೇಶಮುಕ್ತಯೇ||೯೨||

ಪುತ್ರ ಉವಾಚ :—

ಏವಮಸ್ತ್ವಿತಿ ದೇವಾಸ್ತಾಂ ಬ್ರಹ್ಮವಿಷ್ಣುಶಿವಾದಯಃ |
ಉಕ್ತ್ವಾ ಜಗ್ಮುರ್ಯಥಾನ್ಯಾಯಮನುಮಾನ್ಯ ತಪಸ್ವಿನೀಮ್ ||೯೩||

---

೯೦. ತಪಸ್ವಿನಿಯೆ! ಯಾವ ಕಾರಣದಿಂದ ನೀನು ಆದಿತ್ಯನನ್ನು ಉದಯವಾಗುವಂತೆ ಮಾಡಿ ದೇವತೆಗಳಿಗೆ ಉಪಕಾರವನ್ನು ಮಾಡಿದೆಯೊ ಆ ಕಾರಣದಿಂದ ದೇವತೆಗಳು ನಿನಗೆ ವರಪ್ರದರಾಗಿರುವರು.

ಅನಸೂಯೆಯು ಇಂತೆಂದಳು :—

೯೧. ಬ್ರಹ್ಮದೇವನೆ ಮುಂತಾದ ದೇವತೆಗಳು ನನ್ನಲ್ಲಿ ಪ್ರಸನ್ನರಾಗಿರುವುದಾದರೆ ಹಾಗು ನಾನು ವರದಾನಕ್ಕೆ ಯೋಗ್ಯಳಾದವಳೆಂದು ನಿಮ್ಮ ಅಭಿಮತವಿದ್ದರೆ ವರವನ್ನು ಕೇಳುವೆನು.

೯೨. ಹಾಗಾದರೆ ಬ್ರಹ್ಮ-ವಿಷ್ಣು ಶಿವ ಈ ತ್ರಿಮೂರ್ತಿಗಳು ನನ್ನಲ್ಲಿ ಪುತ್ರರಾಗಿ ಜನಿಸಲಿ. ಮತ್ತು ನಾನು ನನ್ನ ಪತಿಯ ಸಮೇತಳಾಗಿ ಕ್ಲೇಶದ ಮುಕ್ತಿಗಾಗಿ ಯೋಗಸಿದ್ಧಿಯನ್ನು ಹೊಂದುವಂತೆ ಆಗಲಿ.

ಪುತ್ರನು ಇಂತೆಂದನು :—

೯೩. ಬ್ರಹ್ಮ-ವಿಷ್ಣು-ಈಶ್ವರ ಮುಂತಾದ ದೇವತೆಗಳು ಹಾಗೆ ಆಗಲಿ ಎಂದು ಹೇಳಿ ತಪಸ್ವಿನಿಯಾದ ಆ ಅನಸೂಯೆಯನ್ನು ಗೌರವಿಸಿ ತಾವು ತಮ್ಮ ತಮ್ಮ ಸ್ಥಳಗಳಿಗೆ ಬಂದಹಾಗೆ ಹಿಂತಿರುಗಿದರು.

ತತಃ ಕಾಲೇ ಬಹುತಿಥೇ ದ್ವಿತೀಯೋ ಬ್ರಹ್ಮಣಃ ಸುತಃ ।
ಸ್ವಭಾರ್ಯಾಂ ಭಗವಾನತ್ರಿರನಸೂಯಾಮಪಶ್ಯತ ॥೯೪॥

ಋತುಸ್ನಾತಾಂ ಸುಚಾರ್ವಙ್ಗೀಂ ಲೋಭನೀಯತಮಾಕೃತಿಮ್ ।
ಸಕಾಮೋ ಮನಸಾ ಭೇಜೇ ಸ ಮುನಿಸ್ತಾಮನಿನ್ದಿತಾಮ್ ॥೯೫॥

ತಸ್ಯಾಭಿಪಶ್ಯತಸ್ತಾಂ ತು ವಿಕಾರೋ ಯೋಽಭ್ಯಜಾಯತ ।
ತಮುಪೋವಾಹ ಪವನಸ್ತಿರ್ಯಗೂರ್ಧ್ವಂ ಚ ವೇಗವಾನ್ ॥೯೬॥

ಬ್ರಹ್ಮರೂಪಂ ಚ ಶುಕ್ಲಾಭಂ ಪತಮಾನಂ ಸಮನ್ತತಃ ।
ಸೋಮರೂಪಂ ರಜೋರೂಪಂ ದಿಶಸ್ತಂ ಜಗೃಹುರ್ದಶ ॥೯೭॥

---

೯೪. ತರುವಾಯ ಅನೇಕ ಕಾಲವು ಕಳೆದ ಮೇಲೆ ಬ್ರಹ್ಮದೇವನ ದ್ವಿತೀಯ ಪುತ್ರನೂ ಪೂಜ್ಯನೂ ಆದ ಅತ್ರಿಮುನಿಯು ತನ್ನ ಭಾರ್ಯೆಯಾದ ಅನಸೂಯೆಯನ್ನು ಪ್ರೇಮದೃಷ್ಟಿಯಿಂದ ನೋಡಿದನು.

೯೫. ಆಗ ಅತ್ರಿಮುನಿಯು ಋತುಸ್ನಾನಮಾಡಿದವಳೂ, ಸುಂದರವಾದ ಅಂಗವುಳ್ಳವಳೂ, ಆಕರ್ಷಣೆಮಾಡುವಂತಿರುವ ಆಕಾರವುಳ್ಳವಳೂ ಮತ್ತು ನಿರ್ದುಷ್ಟಳೂ ಆದ ಪತ್ನಿಯನ್ನು ಮನಸ್ಸಿನಲ್ಲಿ ಕಾಮವಿಕಾರವುಳ್ಳವನಾಗಿ ಭಜಿಸಿದನು.

೯೬. ಹಾಗೆ ಅನಸೂಯೆಯನ್ನು ನೋಡುತ್ತಿದ್ದ ಅತ್ರಿಮುನಿಗೆ ಯಾವ ಕಾಮವಿಕಾರವುಂಟಾಯಿತೊ ; ಅದನ್ನು ಸದಾಗತಿಯೂ, ವೇಗವುಳ್ಳದ್ದೂ ಆದ ಗಾಳಿಯು ಮೇಲುಗಡೆಗೂ ಸುತ್ತಲೂ ಪ್ರಸಾರಮಾಡಿತು.

೯೭. ಸುತ್ತಲೂ ಬೀಳುತ್ತಲಿದ್ದ, ಬೆಳ್ಳಗಿರುವ ಕಾಂತಿಯುಳ್ಳ, ರಜೋಗುಣದ ಪರಿಣಾಮರೂಪವಾದ ಮತ್ತು ಬ್ರಹ್ಮದೇವನ ಅಂಶವಾದ ಅತ್ರಿಮುನಿಯ ವಿಕಾರಭಾವವು ಸೋಮರೂಪವನ್ನು ತಾಳಲು ಅದನ್ನು ದಶದಿಕ್ಕುಗಳು ಪರಿಗ್ರಹಿಸಿದುವು.

ಸ ಸೋಮೋ ಮಾನಸೋ ಜಜ್ಞೇ ತಸ್ಯಾಮತ್ರೇಃ ಪ್ರಜಾಪತಿಃ ।
ಪುತ್ರಃ ಸಮಸ್ತತತ್ತ್ವಾನಾಮಾಯುರಾಧಾರ ಏವ ಚ ॥೯೮॥

ತುಷ್ಟೇನ ವಿಷ್ಣುನಾ ಜಜ್ಞೇ ದತ್ತಾತ್ರೇಯೋ ಮಹಾತ್ಮನಾ ।
ಸ್ವಶರೀರಾತ್ಸಮುತ್ಪನ್ನಃ ಸತ್ತ್ವೋದ್ರಿಕ್ತೋ ದ್ವಿಜೋತ್ತಮಃ ॥೯೯॥

ದತ್ತಾತ್ರೇಯ ಇತಿ ಖ್ಯಾತಃ ಸೋಽನಸೂಯಾಸ್ತನಂ ಪಪೌ ।
ವಿಷ್ಣುರೇವಾವತೀರ್ಣೋಽಸೌ ದ್ವಿತೀಯೋಽತ್ರೇಃ ಸುತೋಽಭವತ್ ॥೧೦೦॥

ಸಪ್ತಾಹಾತ್ಪ್ರಚ್ಯುತೋ ಮಾತುರುದರಾತ್ಕುಪಿತೋ ಯತಃ ।
ಹೈಹಯೇನ್ದ್ರಮುಪಾವೃತ್ತಮಪರಾಧ್ಯನ್ತಮುದ್ಧತಮ್ ॥೧೦೧॥

---

೯೮. ಹೀಗೆ ಅತ್ರಿಪ್ರಜಾಪತಿಯಿಂದ ಅನಸೂಯೆಯಲ್ಲಿ ಚಂದ್ರನು ಮಾನಸಪುತ್ರನಾಗಿ ಜನಿಸಿದನು. ಆ ಸೋಮನು ಸಮಸ್ತ ತತ್ತ್ವಗಳಿಗೆ ಆಯುಷ್ಯ-ಪ್ರದನಾದ ಆಧಾರನಾಗಿರುವನು.

೯೯. ಮಹಾತ್ಮನೂ, ಅತ್ರಿಮುನಿಯಲ್ಲಿ ಸಂತುಷ್ಟನೂ ಆದ ವಿಷ್ಣುವಿನ ಅಂಶದಿಂದ ಸತ್ತ್ವಗುಣಪೂರ್ಣನೂ ದ್ವಿಜೋತ್ತಮನೂ ಆದ ದತ್ತಾತ್ರೇಯ-ಮುನಿಯು ಅತ್ರಿಮುನಿಗೆ ಸ್ವಶರೀರದಿಂದ ಉತ್ಪನ್ನನಾದ ಪುತ್ರನಾದನು.

೧೦೦. ಆ ಪುತ್ರನು ದತ್ತಾತ್ರೇಯ ಎಂದು ಖ್ಯಾತಿಹೊಂದಿದವನಾಗಿ ಅನಸೂಯೆಯ ಸ್ತನ್ಯವನ್ನು ಪಾನಮಾಡಿದನು. ವಿಷ್ಣುವೇ ಅವತರಿಸಿ ದತ್ತಾತ್ರೇಯ ರೂಪದಿಂದ ಅತ್ರಿಯ ದ್ವಿತೀಯಪುತ್ರನಾದನು.

೧೦೧. ಕೊಬ್ಬಿದವನೂ, ಅತ್ರಿಮುನಿಗೆ ಅಪರಾಧ ಮಾಡಿದವನೂ, ಆದ ಹೈಹಯರಾಜನು ಸಮೀಪಕ್ಕೆ ಬಂದಾಗ ಕೋಪೋದ್ರೇಕದಿಂದ ಕೂಡಿ ಅತ್ರಿಮುನಿಯಿಂದ ಜನಿಸಿದ ಮೂರನೆಯ ಪುತ್ರನು ಜನನಿಯ ಜಠರದಿಂದ ಏಳನೆಯ ದಿನದಲ್ಲಿಯೆ ಚ್ಯುತನಾದನು.

ದೃಷ್ಟ್ವಾತ್ರೌ ಕುಪಿತಃ ಸದ್ಯೋ ದಗ್ಧುಕಾಮಃ ಸ ಹೈಹಯಮ್ ।
ಗರ್ಭವಾಸಮಹಾಯಾಸದುಃಖಾಮರ್ಷಸಮನ್ವಿತಃ ॥೧೦೨॥

ದುರ್ವಾಸಾಸ್ತಮಸಾ ಯುಕ್ತೋ ರುದ್ರಾಂಶಃ ಸೋಽಭ್ಯಜಾಯತ ।
ಇತಿ ಪುತ್ರತ್ರಯಂ ತಸ್ಯಾ ಜಜ್ಞೇ ಬ್ರಹ್ಮೇಶವೈಷ್ಣವಮ್ ॥೧೦೩॥

ಸೋಮೋ ಬ್ರಹ್ಮಾಭವದ್ವಿಷ್ಣುರ್ದತ್ತಾತ್ರೇಯೋಽಭ್ಯಜಾಯತ ।
ದುರ್ವಾಸಾಃ ಶಙ್ಕರೋ ಜಜ್ಞೇ ವರದಾನಾದ್ದಿವೌಕಸಾಮ್ ॥೧೦೪॥

ಸೋಮಃ ಸ್ವರಶ್ಮಿಭಿಃ ಶೀತೈರ್ವೀರುದೌಷಧಿಮಾನವಾನ್ ।
ಆಪ್ಯಾಯಯನ್ ಸದಾ ಸ್ವರ್ಗೇ ವರ್ತತೇ ಸ ಪ್ರಜಾಪತಿಃ ॥೧೦೫॥

ದತ್ತಾತ್ರೇಯಃ ಪ್ರಜಾಃ ಪಾತಿ ದುಷ್ಟದೈತ್ಯನಿಬರ್ಹಣಾತ್ ।
ಶಿಷ್ಟಾನುಗ್ರಹಕೃದ್ಯೋಗೀ ಜ್ಞೇಯಶ್ಚಾಂಶಃ ಸ ವೈಷ್ಣವಃ ॥೧೦೬॥

---

೧೦೨. ಆ ಪುತ್ರನು ಹೈಹಯರಾಜನನ್ನು ಆಗಲೆ ಸುಟ್ಟು ಭಸ್ಮಮಾಡುವ ಇಷ್ಟವುಳ್ಳವನೂ, ಅಷ್ಟು ಕೋಪವುಳ್ಳವನೂ ಮತ್ತು ಗರ್ಭವಾಸದಲ್ಲಿ ಉಂಟಾಗುವ ಕ್ಲೇಶ-ಆಯಾಸಗಳಿಂದ ಅಸಹನೆಯುಳ್ಳವನೂ ಆಗಿ ಜನಿಸಿದನು.

೧೦೩. ತಮೋಗುಣದಿಂದ ಕೂಡಿದ ರುದ್ರಾಂಶದಿಂದ ದುರ್ವಾಸಮುನಿಯು ಅತ್ರಿಮುನಿಯ ಪುತ್ರನಾದನು. ಹೀಗೆ ಅನಸೂಯೆಯಲ್ಲಿ ಬ್ರಹ್ಮವಿಷ್ಣು-ರುದ್ರರು ಮೂರು ಮಂದಿಯೂ ಪುತ್ರರಾಗಿ ಜನಿಸಿದರು.

೧೦೪. ದೇವತೆಗಳ ವರಪ್ರದಾನದ ಬಲದಿಂದ ಬ್ರಹ್ಮನು ಚಂದ್ರರೂಪನಾಗಿಯೂ ವಿಷ್ಣುವು ದತ್ತಾತ್ರೇಯ ರೂಪನಾಗಿಯೂ ಮತ್ತು ಶಂಕರನು ದುರ್ವಾಸಮುನಿ ರೂಪನಾಗಿಯೂ ಜನ್ಮವೆತ್ತಿದರು:

೧೦೫. ಚಂದ್ರನು ತನ್ನ ಶೀತಲವಾದ ಕಿರಣಗಳಿಂದ ಲತಾ-ಔಷಧಿ-ಮಾನವರನ್ನು ಪುಷ್ಟಿಗೊಳಿಸುತ್ತ ಪ್ರಜಾಪಾಲನವನ್ನು ಮಾಡಿ ಪ್ರಜಾಪತಿಯೆನಿಸಿಕೊಂಡು ಯಾವಾಗಲೂ ಸ್ವರ್ಗದಲ್ಲಿ ಇರುವನು.

೧೦೬. ದತ್ತಾತ್ರೇಯಮುನಿಯು ದುಷ್ಟರಾದ ದೈತ್ಯರನ್ನು ಸಂಹರಿಸುತ್ತ ಶಿಷ್ಟರನ್ನು ಅನುಗ್ರಹಿಸಿ ಪ್ರಜೆಗಳನ್ನು ಪಾಲಿಸುತ್ತಿರುವನು. ಅಂತಹ ದತ್ತಾತ್ರೇಯಮುನಿಯು ವೈಷ್ಣವಾಂಶವೆಂದು ಅರಿಯಬೇಕು.

ನಿರ್ದಹತ್ಯವಮನ್ತಾರಂ ದುರ್ವಾಸಾ ಭಗವಾನಜಃ ।
ರೌದ್ರಭಾವಂ ಸಮಾಶ್ರಿತ್ಯ ದೃಙ್ಮನೋವಾಗ್ಭಿರುದ್ಧತಃ ॥೧೦೭॥

ಸೋಮತ್ವಂ ಭಗವಾನತ್ರಿಃ ಪುನಶ್ಚಕ್ರೇ ಪ್ರಜಾಪತಿಃ ।
ದತ್ತಾತ್ರೇಯೋಽಪಿ ವಿಷಯಾನ್ಯೋಗಸ್ಥೋ ಬುಭುಜೇ ಹರಿಃ ॥೧೦೮॥

ದುರ್ವಾಸಾಃ ಪಿತರಂ ತ್ಯಕ್ತ್ವಾ ಮಾತರಂ ಚೋತ್ತಮಂ ವ್ರತಮ್ ।
ಉನ್ಮತ್ತಾಖ್ಯಂ ಸಮಾಶ್ರಿತ್ಯ ಪರಿಬಭ್ರಾಮ ಮೇದಿನೀಮ್ ॥೧೦೯॥

ಮುನಿಪುತ್ರವೃತೋ ಯೋಗೀ ದತ್ತಾತ್ರೇಯೋಽಪ್ಯಸಙ್ಗಿತಾಮ್ ।
ಅಭೀಪ್ಸಮಾನಃ ಸರಸಿ ನಿಮಮಜ್ಜ ಚಿರಂ ವಿಭುಃ ॥೧೧೦॥

ತಥಾಪಿ ತಂ ಮಹಾತ್ಮಾನಮತೀವ ಪ್ರಿಯದರ್ಶನಮ್ ।
ತತ್ಯಜುರ್ನ ಕುಮಾರಾಸ್ತೇ ಸರಸಸ್ತೀರಸಂಶ್ರಯಾಃ ॥೧೧೧॥

---

೧೦೭. ಅನಾದಿಯಾದ ಶಂಕರಾಂಶದಿಂದ ಕೂಡಿದ ದುರ್ವಾಸಮುನಿಯು ಉದ್ಧತಸ್ವಭಾವವುಳ್ಳವನಾಗಿ ದೃಷ್ಟಿ-ಮನಸ್ಸು-ಮಾತುಗಳಿಂದ ರೌದ್ರಭಾವವನ್ನು ಅವಲಂಬಿಸಿ ಅವಮಾನಮಾಡಿದ ವ್ಯಕ್ತಿಯನ್ನು ದಹಿಸುವನು.

೧೦೮. ಅತ್ರಿಪುತ್ರನಾಗಿ ಜನಿಸಿದ ಬ್ರಹ್ಮನು ಚಂದ್ರನ ಆಧಿಕಾರಿಕ ಕರ್ಮವನ್ನು ಆಚರಿಸಿದನು. ವಿಷ್ಣುವಿನ ಅಂಶದಿಂದ ಸಂಭವಿಸಿದ ದತ್ತಾತ್ರೇಯ-ಮುನಿಯು ಯೋಗಿಯಾಗಿದ್ದುಕೊಂಡು ವಿಷಯಗಳನ್ನು ಅನುಭವಿಸಿದನು.

೧೦೯. ದುರ್ವಾಸಮುನಿಯು ತಾಯಿ-ತಂದೆಯರನ್ನು ಬಿಟ್ಟು ಉನ್ಮತ್ತ-ವ್ರತವೆಂಬ ಒಂದು ನಿಯಮವನ್ನು ಕೈಗೊಂಡು ಭೂಮಂಡಲವನ್ನು ಸಂಚರಿಸ ತೊಡಗಿದನು.

೧೧೦. ಅನೇಕ ಮುನಿಕುಮಾರರಿಂದ ಸುತ್ತುವರಿಯಲ್ಪಟ್ಟ ಸರ್ವಶಕ್ತ-ನಾದ ದತ್ತಾತ್ರೇಯಮುನಿಯು ಅಸಂಗನಾಗಿರುವುದನ್ನು ಆಶಿಸುತ್ತ ಬಹು ದೀರ್ಘಕಾಲ ಸರೋವರದಲ್ಲಿ ಮುಳುಗಿದನು.

೧೧೧. ಆದರೂ ಸರೋವರದ ತೀರದಲ್ಲಿಯೆ ವಾಸಮಾಡುತ್ತಲಿದ್ದ ಆ ಮುನಿಕುಮಾರರು ಬಹಳ ಸುಂದರವಾದ ದರ್ಶನವುಳ್ಳವನೂ ಮಹಾತ್ಮನೂ ಆದ ದತ್ತಾತ್ರೇಯಮುನಿಯನ್ನು ಬಿಡಲಿಲ್ಲ.

ದಿವ್ಯೇ ವರ್ಷಶತೇ ಪೂರ್ಣೇ ಯದಾ ತೇ ನ ತ್ಯಜನ್ತಿ ತಮ್ ।
ತತ್ಪ್ರೀತ್ಯಾ ಸರಸಸ್ತೀರಂ ಸರ್ವೇ ಮುನಿಕುಮಾರಕಾಃ ॥೧೧೨॥

ತತೋ ದಿವ್ಯಾಮ್ಬರಧರಾಂ ಸುರೂಪಾಂ ಸುನಿತಮ್ಬಿನೀಮ್ ।
ನಾರೀಮಾದಾಯ ಕಲ್ಯಾಣೀಮುತ್ತತಾರ ಜಲಾನ್ಮುನಿಃ ॥೧೧೩॥

ಸ್ತ್ರೀಸನ್ನಿಕರ್ಷಿಣಂ ಹ್ಯೇತೇ ಪರಿತ್ಯಕ್ಷ್ಯನ್ತಿ ಮಾಮಿತಿ ।
ಮುನಿಪುತ್ರಾಸ್ತತೋ ಯೋಗೇ ಸ್ಥಾಸ್ಯತೀತಿ ವಿಚಿನ್ತಯನ್ ॥೧೧೪॥

ತಥಾಪಿ ತೇ ಮುನಿಸುತಾ ನ ತ್ಯಜನ್ತಿ ಯದಾ ಮುನಿಮ್ ।
ತತಃ ಸಹ ತಯಾ ನಾರ್ಯಾ ಮದ್ಯಪಾನಮಥಾಕರೋತ್ ॥೧೧೫॥

---

೧೧೨. ಹೀಗೆ ದೇವಮಾನದಿಂದ ಒಂದುನೂರು ವರ್ಷಗಳು ಪೂರ್ತಿಯಾಗಿ ಕಳೆದರೂ ಆ ಎಲ್ಲ ಮುನಿಕುಮಾರರು ದತ್ತಾತ್ರೇಯಮುನಿಯಲ್ಲಿರುವ ಪ್ರೀತಿಯಿಂದ ಸರೋವರದ ತೀರವನ್ನು ಬಿಟ್ಟು ಹೋಗಲಿಲ್ಲ.

೧೧೩. ಆಗ ದತ್ತಾತ್ರೇಯಮುನಿಯು ದಿವ್ಯವಾದ ವಸ್ತ್ರವನ್ನು ಧರಿಸಿದವಳೂ, ಉತ್ತಮವಾದ ಸೌಂದರ್ಯವುಳ್ಳವಳೂ, ಸುಂದರವಾದ ನಿತಂಬವುಳ್ಳವಳೂ ಮತ್ತು ಮಂಗಳಮೂರ್ತಿಯೂ ಆದ ನಾರಿಯನ್ನು ಎತ್ತಿಕೊಂಡು ನೀರಿನಿಂದ ಮೇಲಕ್ಕೆ ಎದ್ದು ಬಂದನು.

೧೧೪. ಸ್ತ್ರೀಸಹವಾಸದಿಂದ ಕೂಡಿದ ನನ್ನನ್ನು ನೋಡಿ ಮುನಿಕುಮಾರಕರೆಲ್ಲರೂ ಬಿಟ್ಟುಹೋಗುವರು. ಆಗ ನಾನು ಏಕಾಂತದಲ್ಲಿ ಯೋಗಸಮಾಧಿಯಲ್ಲಿ ಇರುವೆನೆಂದು ದತ್ತಾತ್ರೇಯಮುನಿಯು ಯೋಚಿಸಿದನು.

೧೧೫. ಆದರೂ ಆ ಮುನಿಕುಮಾರರು ಯಾವಾಗ ದತ್ತಾತ್ರೇಯಮುನಿಯನ್ನು ಬಿಡಲಿಲ್ಲವೊ; ಆಗ ದತ್ತಾತ್ರೇಯಮುನಿಯು ಆ ನಾರಿಯೊಡನೆ ಮದ್ಯಪಾನವನ್ನು ಮಾಡಿದನು.

ಸುರಾಪಾನರತಂ ತೇನ ಸಭಾರ್ಯಂ ತತ್ಯಜುಸ್ತತಃ । ॥೧೧೬॥

ಗೀತವಾದ್ಯಾದಿವನಿತಾಭೋಗಸಂಸರ್ಗದೂಷಿತಮ್ ।
ಮನ್ಯಮಾನಾ ಮಹಾತ್ಮಾನಂ ತಯಾ ಸಹ ಬಹಿಷ್ಕ್ರಿಯಮ್॥೧೧೭॥

ನಾವಾಪ ದೋಷಂ ಯೋಗೀಶೋ ವಾರುಣೀಂ ಸ ಪಿಬನ್ನಪಿ ।
ಅನ್ತ್ಯಾವಸಾಯಿವೇಶ್ಮಾನ್ತರ್ಮಾತರಿಶ್ವಾ ಸ್ಪೃಶನ್ನಿವ ॥೧೧೮॥

ಸುರಾಂ ಪಿಬನ್ ಸಪತ್ನೀಕಸ್ತಪಸ್ತೇಪೇ ಸ ಯೋಗವಿತ್ ।
ಯೋಗೀಶ್ವರಶ್ಚಿನ್ತ್ಯಮಾನೋ ಯೋಗಿಭಿರ್ಮುಕ್ತಿಕಾಙ್ಕ್ಷಿಭಿಃ ॥೧೧೯॥

ಕಸ್ಯಚಿತ್ತ್ವಥ ಕಾಲಸ್ಯ ಕಾರ್ತವೀರ್ಯೋಽರ್ಜುನೋ ಬಲೀ ।
ಕೃತವೀರ್ಯೇ ದಿವಂ ಯಾತೇ ಮನ್ತ್ರಿಭಿಃ ಸಪುರೋಹಿತೈಃ ॥೧೨೦॥

---

೧೧೬. ಹೀಗೆ ನಾರೀಸಮೇತನಾಗಿ ಮದ್ಯಪಾನಮಾಡುತ್ತಿದ್ದುದರಿಂದ ಮುನಿಕುಮಾರರು ಅಂತಹ ದತ್ತಾತ್ರೇಯಮುನಿಯನ್ನು ತ್ಯಜಿಸಿದರು.

೧೧೭. ಆ ನಾರಿಯೊಡನೆ ಬಾಹ್ಯಕ್ರೀಡಾದಿಗಳಲ್ಲಿ ರತಿಯನ್ನು ತೋರಿಸಿದ ಮಹಾತ್ಮನಾದ ದತ್ತಾತ್ರೇಯಮುನಿಯನ್ನು ಗೀತ-ವಾದ್ಯಾದಿಭೋಗ, ಸ್ತ್ರೀಸಂಗ ಮುಂತಾದ ವಿಷಯಭೋಗವ್ಯಸನದಿಂದ ಕೆಟ್ಟುಹೋಗಿರುವನೆಂದು ಮುನಿಕುಮಾರರು ಅರಿತರು.

೧೧೮. ಆದರೆ ಯೋಗೀಶ್ವರನಾದ ದತ್ತಾತ್ರೇಯಮುನಿಯು ಮದ್ಯವನ್ನು ಸೇವಿಸುತ್ತಿದ್ದರೂ ಚಂಡಾಲನ ಮನೆಯೊಳಗೆ ಬೀಸುತ್ತಿದ್ದ ಗಾಳಿಯಂತೆ ಅದರಿಂದ ದೋಷವನ್ನು ಹೊಂದಲಿಲ್ಲ.

೧೧೯. ಮುಕ್ತಿಯನ್ನು ಬಯಸುವ ಯೋಗಿಗಳಿಂದ ಧ್ಯಾನಿಸಲ್ಪಡುತ್ತಿದ್ದ ಯೋಗೀಶ್ವರನಾದ ಮತ್ತು ಯೋಗಜ್ಞನಾದ ದತ್ತಾತ್ರೇಯಮುನಿಯು ಪತ್ನೀಸಮೇತನಾಗಿ ಸುರೆಯನ್ನು ಪಾನಮಾಡುತ್ತ ತಪಸ್ಸನ್ನು ಆಚರಿಸಿದನು.

೧೨೦. ಕೆಲವು ಕಾಲವು ಕಳೆಯಲು ಕೃತವೀರ್ಯರಾಜನ ಪುತ್ರನೂ ಬಲಿಷ್ಠನೂ ಆದ ಕಾರ್ತವೀರ್ಯಾರ್ಜುನನ ಬಳಿಯಲ್ಲಿ ಅವನ ತಂದೆಯಾದ ಕೃತವೀರ್ಯರಾಜನು ಸ್ವರ್ಗವನ್ನೈದಲು ಮಂತ್ರಿಪುರೋಹಿತರು ಪಟ್ಟಾಭಿಷೇಕವನ್ನು ಹೊಂದುವಂತೆ ಕೇಳಿಕೊಂಡರು.

ಪೌರೈಶ್ಚಾತ್ಮಾಭಿಷೇಕಾರ್ಥಂ ಸಮಾಹೂತೋಽಬ್ರವೀದಿದಮ್ ।
ನಾಹಂ ರಾಜ್ಯಂ ಕರಿಷ್ಯಾಮಿ ಮನ್ತ್ರಿಣೋ ನರಕೋತ್ತರಮ್॥೧೨೧॥

ಯದರ್ಥಂ ಗೃಹ್ಯತೇ ಶುಲ್ಕಂ ತದನಿಷ್ಪಾದಯನ್ ವೃಥಾ ।
ಪಣ್ಯಾನಾಂ ದ್ವಾದಶಂ ಭಾಗಂ ಭೂಪಾಲಾಯ ವಣಿಗ್ಜನಾಃ ॥೧೨೨॥

ದತ್ವಾತ್ಮರಕ್ಷಿಭಿರ್ಮಾರ್ಗೇ ರಕ್ಷಿತೋ ಯಾತಿ ದಸ್ಯುತಃ ।
ಗೋಪಾಶ್ಚ ಘೃತತಕ್ರಾದೇಃ ಷಡ್ಭಾಗಂ ಚ ಕೃಷೀವಲಾಃ ॥೧೨೩॥

ದತ್ವಾನ್ಯದ್ಭೂಭುಜೇ ದದ್ಯುರ್ಯದಿ ಭಾಗಂ ತತೋಽಧಿಕಮ್ ।
ಪಣ್ಯಾದೀನಾಮಶೇಷಾಣಾಂ ವಣಿಜೋ ಗೃಹ್ಣತಸ್ತತಃ ॥೧೨೪॥

---

೧೨೧. ಮತ್ತು ಪುರಜನರು ಕೂಡ ಕಾರ್ತವೀರ್ಯನನ್ನು ರಾಜ್ಯಾಭಿಷೇಕಕ್ಕೆ ಕರೆಯಲು ಕಾರ್ತವೀರ್ಯಾರ್ಜುನನು ಹೀಗೆಂದು ಹೇಳಿದನು. ಮಂತ್ರಿಗಳೆ! ನರಕಭೋಗವನ್ನು ಕೊಡುವ ರಾಜ್ಯಭಾರವನ್ನು ನಾನು ಮಾಡುವುದಿಲ್ಲ.

೧೨೨. ವರ್ತಕರು ವಿಕ್ರಯಿಸಿದ ವಸ್ತುಗಳಲ್ಲಿ ಹನ್ನೆರಡನೆಯ ಒಂದು ಭಾಗವನ್ನು ರಾಜನಿಗೆ ಶುಲ್ಕರೂಪದಲ್ಲಿ ಕೊಡುವರು. ಹಾಗೆ ಏತಕ್ಕಾಗಿ ಶುಲ್ಕವನ್ನು ತೆಗೆದುಕೊಳ್ಳಲಾಗುವುದೊ ; ಆ ಕಾರ್ಯವನ್ನು ಸಾಧಿಸದೇ ರಾಜ್ಯಭಾರಮಾಡುವುದು ಪಾಪಕರವು.

೧೨೩. ಹಾಗೆ ಗೊಲ್ಲರು ತುಪ್ಪ-ಮಜ್ಜಿಗೆಗಳಲ್ಲಿಯೂ ಕೃಷಿಮಾಡುವ ಜನರು ಬೆಳೆದ ವಸ್ತುಗಳಲ್ಲಿಯೂ ಆರನೆಯ ಒಂದು ಭಾಗವನ್ನು ಶುಲ್ಕವಾಗಿ ಕೊಡುವರು. ಮತ್ತು ರಾಜಕೀಯ ರಕ್ಷಿಜನರಿಂದ ರಕ್ಷಿಸಲ್ಪಟ್ಟವರಾಗಿ ಕಳ್ಳಕಾಕರ ಭಯವಿಲ್ಲದೆ ದಾರಿಯಲ್ಲಿ ಸಂಚರಿಸುವರು.

೧೨೪. ಹೀಗೆ ವರ್ತಕಜನ ಮುಂತಾದವರು ರಾಜನಿಗೆ ಒಪ್ಪಿಸಬೇಕಾದ ಭಾಗವನ್ನು ಒಪ್ಪಿಸಿ ಉಳಿದುದನ್ನು ತಾವು ಉಪಯೋಗಿಸಿಕೊಂಡು ವಿಕ್ರಯಿಸುವ ವಸ್ತುವನ್ನು ವಿಕ್ರಯಿಸಿ ಆದಾಯಹೊಂದುವರು.

ಅಗ್ನಿಹೋತ್ರಂ ತಪಸ್ಸತ್ಯಂ ವೇದಾನಾಂ ಚೈವ ಪಾಲನಮ್ ।
ಅತಿಥ್ಯಂ ವೈಶ್ವದೇವಂ ಚ ಇಷ್ಟಮಿತ್ಯಭಿಧೀಯತೇ ॥೧೨೫॥

ವಾಪೀಕೂಪತಡಾಗಾದಿದೇವತಾಯತನಾನಿ ಚ ।
ಅನ್ನಪ್ರದಾನಮರ್ಥಿಭ್ಯಃ ಪೂರ್ತಮಿತ್ಯಭಿಧೀಯತೇ ॥೧೨೬॥

ಇಷ್ಟಾಪೂರ್ತಂ ವಿನಾಶಾಯ ತದ್ರಾಜ್ಞಶ್ಚೌರಕರ್ಮಿಣಃ ।
ಯದನ್ಯೈಃ ಪಾಲ್ಯತೇ ಲೋಕಸ್ತದ್ವೃತ್ತ್ಯೇತರಸಂಶ್ರಿತಃ ॥೧೨೭॥

ಗೃಹ್ಣತೋ ಬಲಿಷಡ್ಭಾಗಂ ನೃಪತೇರ್ನರಕೋ ಧ್ರುವಮ್ ।
ನಿರೂಪಿತಮಿದಂ ರಾಜ್ಞಃ ಪೂರ್ವೈ ರಕ್ಷಣವೇತನಮ್ ॥೧೨೮॥

---

೧೨೫. ಅಗ್ನಿಹೋತ್ರ ಹೋಮ, ತಪಶ್ಚರ್ಯೆ, ಸತ್ಯವಚನ, ವೇದಾಧ್ಯಯನ, ಅತಿಥಿಸತ್ಕಾರ ಮತ್ತು ವೈಶ್ವದೇವ ಇವುಗಳನ್ನು ಇಷ್ಟಕರ್ಮಗಳೆಂದು ಪ್ರಾಜ್ಞರು ಹೇಳುವರು.

೧೨೬. ಭಾವಿ, ಕೆರೆ, ಕೊಳಗಳನ್ನು ನಿರ್ಮಿಸುವುದು, ದೇವಾಲಯಗಳನ್ನು ಕಟ್ಟಿಸುವುದು ಮತ್ತು ಅರ್ಥಿಗಳಿಗೆ ಅನ್ನದಾನಮಾಡುವುದು ಇವುಗಳನ್ನು ಪೂರ್ತಕರ್ಮವೆಂದು ಹೇಳುವರು.

೧೨೭. ಲೋಕವು ರಾಜನಿಂದ ಅಗುವ ರಕ್ಷಣೆಯ ಆಶ್ರಯವನ್ನು ಬೇರೊಬ್ಬರಿಂದ ಪಡೆಯುವುದು ಆದರೆ ಅವರವರ ಷಡ್ಭಾಗವೃತ್ತಿಯನ್ನು ತೆಗೆದುಕೊಳ್ಳುವ ಚೋರವೃತ್ತಿಯ ರಾಜನನ್ನು ಪ್ರಜೆಗಳು ಮಾಡುವ ಇಷ್ಟಾಪೂರ್ತಕರ್ಮಗಳು ನಾಶಮಾಡುತ್ತವೆ.

೧೨೮. ಹಾಗೆ ಶುಲ್ಕರೂಪವಾಗಿ ತೆಗೆದುಕೊಳ್ಳುವ ಷಡ್ಭಾಗವು ರಾಜನಿಗೆ ತಪ್ಪದೆ ನರಕವನ್ನು ಕೊಡುವುದು. ಪ್ರಾಚೀನ ವಿದ್ವಾಂಸರು ರಾಜನು ರಾಜ್ಯವನ್ನು ರಕ್ಷಿಸುತ್ತಿರುವುದಕ್ಕೆ ಷಡ್ಭಾಗವು ವೇತನವೆಂದು ಹೇಳಿರುವರು.

ಅರಕ್ಷಂಶ್ಚೋರತಶ್ಚೋರಸ್ತದ್ಧನಂ ನೃಪತೇರ್ಭವೇತ್ ।
ತಸ್ಮಾದ್ಯದಿ ತಪಸ್ತಪ್ತ್ವಾ ಪ್ರಾಪ್ತೋ ಯೋಗಿತ್ವಮೀಪ್ಸಿತಮ್ ॥೧೨೯॥

ಭುವಃ ಪಾಲನಸಾಮರ್ಥ್ಯಯುಕ್ತ ಏಕೋ ಮಹೀಪತಿಃ ।
ಪೃಥಿವ್ಯಾಮಸ್ತ್ರಭೃನ್ನಾದ್ಯಾಪ್ಯಹಮೇವರ್ಧಿಸಂಯುತಃ ॥೧೩೦॥

ತತೋ ಭವಿಷ್ಯೇ ನಾತ್ಮಾನಂ ಕರಿಷ್ಯೇ ಪಾಪಭಾಗಿನಮ್ ।
ತಸ್ಯ ತಂ ನಿಶ್ಚಯಂ ಜ್ಞಾತ್ವಾ ಮನ್ತ್ರಿಮಧ್ಯಸ್ಥಿತೋಽಬ್ರವೀತ್ ॥೧೩೧॥

ಗರ್ಗೋ ನಾಮ ಮಹಾಬುದ್ಧಿರ್ಮುನಿರ್ಭೂಪವಯೋಽತಿಗಃ ।
ಭಕ್ತ್ಯಾ ತು ಕೃಪಯಾವಿಷ್ಟಸ್ತಂ ತೋಷಯಿತುಮರ್ಹತಿ ॥೧೩೨॥

---

೧೨೯. ತನ್ನ ಕರ್ತವ್ಯವಾದ ರಕ್ಷಣವನ್ನು ಮಾಡಲು ಅಶಕ್ತನಾದ ರಾಜನಿಗೆ ಷಡ್ಭಾಗಧನವು ಚೋರಧನವಾಗುವುದು. ಆದುದರಿಂದ ತಪಸ್ಸನ್ನು ಮಾಡಿ ಇಷ್ಟವಾದ ಯೋಗಶಕ್ತಿಯನ್ನು ಹೊಂದಿದವನು ರಾಜ್ಯವನ್ನಾಳಲು ಸಮರ್ಥನಾಗುವನು.

೧೩೦. ಹಾಗೆ ಭೂಮಿಯನ್ನು ರಕ್ಷಿಸುವ ಸಾಮರ್ಥ್ಯವನ್ನು ಹೊಂದಿರುವ ರಾಜನೊಬ್ಬನು ಮಾತ್ರ ಭೂಮಿಯಲ್ಲಿ ಅಸ್ತ್ರಧಾರಿಯಾಗಿ ಶಾಸನ-ಮಾಡಬಲ್ಲವನು. ಇನ್ನೂ ನಾನು ಅಂತಹ ಶಕ್ತಿಯನ್ನು ಹೊಂದಿಲ್ಲ.

೧೩೧. ಆದುದರಿಂದ ನಾನು ರಾಜನಾಗುವುದಿಲ್ಲ. ಹಾಗೆ ರಾಜನಾಗಿದ್ದು ನನ್ನನ್ನು ಪಾಪಭಾಗಿಯನ್ನಾಗಿ ಮಾಡಿಕೊಳ್ಳುವುದೂ ಇಲ್ಲ. ಎಂದು ರಾಜಪುತ್ರ-ನಲ್ಲಿದ್ದ ನಿಶ್ಚಯವನ್ನು ತಿಳಿದು ಮಂತ್ರಿಗಳ ಗುಂಪಿನಲ್ಲಿದ್ದ ಮಂತ್ರಿಯೊಬ್ಬನು ಹೇಳಿದನು.

೧೩೨. ಗರ್ಗಮುನಿ ನಾಮಾಂಕಿತನಾದ ಆ ಮಂತ್ರಿಯು ಮಹಾಬುದ್ಧಿ-ಯುಳ್ಳವನೂ, ರಾಜನಿಗಿಂತಲೂ ಹೆಚ್ಚು ವಯಸ್ಸಿನವನೂ, ಮತ್ತು ರಾಜ-ಕುಮಾರನಲ್ಲಿ ಭಕ್ತಿ-ಕರುಣೆಗಳಿಂದ ಕೂಡಿದವನೂ ಆಗಿ ರಾಜಕುಮಾರನನ್ನು ಸಂತೋಷಪಡಿಸಲು ಅರ್ಹನಾಗಿದ್ದನು.

ಯದ್ಯೇವ ಕರ್ತುಕಾಮಸ್ತ್ವಂ ರಾಜ್ಯಂ ಸಮ್ಯಕ್ಪ್ರಶಾಸಿತುಮ್ |
ತತಃ ಶೃಣುಷ್ವ ಮೇ ವಾಕ್ಯಂ ಕುರುಷ್ವ ಚ ನೃಪಾತ್ಮಜ ||೧೩೩||

ದತ್ತಾತ್ರೇಯಂ ಮಹಾತ್ಮಾನಂ ಸಹ್ಯದ್ರೋಣೀಕೃತಾಶ್ರಮಮ್ |
ತಮಾರಾಧಯ ಭೂಪಾಲ ಪಾತಿ ಯೋ ಭುವನತ್ರಯಮ್ ||೧೩೪||

ಯೋಗಯುಕ್ತಂ ಮಹಾತ್ಮಾನಂ ಸರ್ವತ್ರ ಸಮದರ್ಶಿನಮ್ |
ವಿಷ್ಣೋರಂಶಂ ಜಗದ್ಧಾತುರವತೀರ್ಣಂ ಧರಾತಲೇ ||೧೩೫||

ಯಮಾರಾಧ್ಯ ಸಹಸ್ರಾಕ್ಷಃ ಪ್ರಾಪ್ತವಾನ್ ಪದಮಾತ್ಮನಃ |
ಹೃತಂ ದುರಾತ್ಮಭಿರ್ದೈತ್ಯೈರ್ಜಘಾನ ಚ ದಿತೇಃ ಸುತಾನ್ ||೧೩೬||

---

೧೩೩. ರಾಜಪುತ್ರನೆ! ನೀನು ಚೆನ್ನಾಗಿ ಶಾಸನವನ್ನು ಮಾಡುತ್ತ ರಾಜ್ಯಭಾರವನ್ನು ಕೈಗೊಳ್ಳಲು ಆಶಿಸುವೆಯಾದರೆ ನಾನು ಹೇಳುವ ವಾಕ್ಯವನ್ನು ಕೇಳು. ಮತ್ತು ಅದರಂತೆ ವರ್ತಿಸು.

೧೩೪. ಭೂಪಾಲಕನೆ! ಯಾವ ದತ್ತಾತ್ರೇಯ ಮುನಿಯು ಮೂರು ಭುವನಗಳನ್ನು ರಕ್ಷಿಸುವನೊ; ಅಂತಹ ಮಹಾತ್ಮನೂ ಸಹ್ಯಪರ್ವತದ ಕಣಿವೆಯಲ್ಲಿ ಮಾಡಿಕೊಂಡ ಆಶ್ರಮವುಳ್ಳವನೂ ಆದ ದತ್ತಾತ್ರೇಯ ಮುನಿಯನ್ನು ಆರಾಧಿಸು.

೧೩೫. ಯೋಗಯುಕ್ತನೂ, ಸರ್ವವಸ್ತುಗಳಲ್ಲಿ ಸಾಮ್ಯವನ್ನು ಅರಿತವನೂ, ಭೂಮಿಯಲ್ಲಿ ಅವತರಿಸಿದ ಜಗದ್ರಕ್ಷಕನಾದ ವಿಷ್ಣುವಿನ ಅಂಶರೂಪನೂ ಮತ್ತು ಮಹಾತ್ಮನೂ ಆದ ದತ್ತಾತ್ರೇಯಮುನಿಯನ್ನು ಆರಾಧಿಸು.

೧೩೬. ದೇವೇಂದ್ರನು ಯಾವ ದತ್ತಾತ್ರೇಯ ಮುನಿಯನ್ನು ಆರಾಧಿಸಿ ದುರಾತ್ಮರಾದ ದೈತ್ಯರಿಂದ ಆಕ್ರಮಿಸಲ್ಪಟ್ಟ ತನ್ನ ಪದವನ್ನು ಮತ್ತೆ ಹೊಂದಿದನೊ; ಹಾಗು ದಿತಿಯ ಪುತ್ರರಾದ ರಾಕ್ಷಸರನ್ನು ವಧಿಸಿದನೊ; ಅಂತಹ ದತ್ತಾತ್ರೇಯ ಮುನಿಯನ್ನು ಸೇವೆಮಾಡು.

ಅರ್ಜುನ ಉವಾಚ:—

ಕಥಮಾರಾಧಿತೋ ದೇವೈರ್ದತ್ತಾತ್ರೇಯಃ ಪ್ರತಾಪವಾನ್ ।
ಕಥಂ ವಾಪಹೃತಂ ದೈತ್ಯೈರಿನ್ದ್ರತ್ವಂ ಪ್ರಾಪ ವಾಸವಃ ॥೧೩೭॥

ಗರ್ಗ ಉವಾಚ:—

ದೈತ್ಯಾನಾಂ ದೇವತಾನಾಂ ಚ ಯುದ್ಧಮಾಸೀತ್ಸುದಾರುಣಮ್ ।
ದೈತ್ಯಾನಾಮೀಶ್ವರೇ ಜಮ್ಭೇ ದೇವಾನಾಂ ಚ ಶಚೀಪತೌ ॥೧೩೮॥

ತೇಷಾಂ ತು ಯುಧ್ಯಮಾನಾನಾಂ ದಿವ್ಯಃ ಸಂವತ್ಸರೋ ಗತಃ ।
ತತೋ ದೇವಾಃ ಪರಾಭೂತಾ ದೈತ್ಯಾ ವಿಜಯಿನೋಽಭವನ್॥೧೩೯॥

ವಿಪ್ರಚಿತ್ತಿಮುಖೈರ್ದೇವಾ ದಾನವೈಸ್ತೇ ಪರಾಜಿತಾಃ ।
ಪಲಾಯನಕೃತೋತ್ಸಾಹಾ ನಿರುತ್ಸಾಹಾ ದ್ವಿಷಜ್ಜಯೇ ॥೧೪೦॥

ಕಾರ್ತವೀರ್ಯಾರ್ಜುನನು ಇಂತೆಂದನು :—

೧೩೭. ದೇವತೆಗಳಿಂದ ಅಂತಹ ಪ್ರಭಾವಶಾಲಿಯಾದ ದತ್ತಾತ್ರೇಯ ಮುನಿಯು ಹೇಗೆ ಆರಾಧಿಸಲ್ಪಟ್ಟನು? ಮತ್ತು ದೇವೇಂದ್ರನು ದೈತ್ಯರಿಂದ ಅಪಹರಿಸಲ್ಪಟ್ಟ ತನ್ನ ಪದವಿಯನ್ನು ಮತ್ತೆ ಹೇಗೆ ಹೊಂದಿದನು?

ಗರ್ಗಮುನಿಯು ಹೇಳಿದನು :—

೧೩೮. ಜಂಭಾಸುರನು ದೈತ್ಯರಿಗೆ ಈಶ್ವರನೂ ಶಚೀದೇವಿಯ ಪತಿಯಾದ ಇಂದ್ರನು ದೇವತೆಗಳಿಗೆ ಈಶ್ವರನೂ ಆಗಿರಲು ಒಂದುಸಲ ದೇವ-ದಾನವರಿಗೆ ಭಯಂಕರವಾದ ಯುದ್ಧವು ಜರುಗಿತು.

೧೩೯. ಹಾಗೆ ದೇವ-ದಾನವರು ಯುದ್ಧಮಾಡುತ್ತಿರಲು ದೇವಮಾನದಿಂದ ಒಂದು ಸಂವತ್ಸರವು ಕಳೆಯಿತು. ತರುವಾಯ ದೇವತೆಗಳು ಅಪಜಯ ಹೊಂದಿ ದಾನವರು ಜಯಶಾಲಿಗಳಾದರು.

೧೪೦. ವಿಪ್ರಚಿತ್ತಿ ಮುಂತಾದ ದಾನವರಿಂದ ಪರಾಜಯಹೊಂದಿದ ದೇವತೆಗಳು ಯುದ್ಧದಿಂದ ಪಲಾಯನಮಾಡುವ ಉತ್ಸಾಹವುಳ್ಳವರೂ ಮತ್ತು ಶತ್ರುನಿಗ್ರಹದಲ್ಲಿ ನಿರಾಶೆಯುಳ್ಳವರೂ ಆದರು.

ಬೃಹಸ್ಪತಿಮುಪಾಗಮ್ಯ ದೈತ್ಯಸೈನ್ಯವಧೇಪ್ಸವಃ ।
ಅಮನ್ತ್ರಯನ್ತ ಸಹಿತಾ ವಾಲಖಿಲ್ಯೈಃ ಸಹರ್ಷಿಭಿಃ ॥೧೪೧॥

ಬೃಹಸ್ಪತಿರುವಾಚ :—

ದತ್ತಾತ್ರೇಯಂ ಮಹಾಭಾಗಮತ್ರೇಃ ಪುತ್ರಂ ತಪೋಧನಮ್ ।
ವಿಕೃತಾಚರಣಂ ಭಕ್ತ್ಯಾ ಸನ್ತೋಷಯಿತುಮರ್ಹಥ ॥೧೪೨॥

ಸ ವೋ ದೈತ್ಯವಿನಾಶಾಯ ವರದೋ ದಾಸ್ಯತೇ ವರಮ್ ।
ತತೋ ಹನಿಷ್ಯಥ ಸುರಾಃ ಸಹಿತಾನ್ ದೈತ್ಯದಾನವಾನ್ ॥೧೪೩॥

ಗರ್ಗ ಉವಾಚ :—

ಹನ್ತುಂ ಶಕ್ತಾ ನ ಸನ್ದೇಹೋ ದತ್ತಾತ್ರೇಯಪ್ರಸಾದತಃ ।
ಇತ್ಯುಕ್ತಾಸ್ತೇ ತದಾ ಜಗ್ಮುರ್ದತ್ತಾತ್ರೇಯಾಶ್ರಮಂ ಸುರಾಃ ॥೧೪೪॥

---

೧೪೧. ಆಗ ದೇವತೆಗಳು ವಾಲಖಿಲ್ಯ ಮಹರ್ಷಿಗಳೊಡನೆ ಬೃಹಸ್ಪತ್ಯಾಚಾರ್ಯನ ಸನ್ನಿಧಿಗೆ ಬಂದು ರಾಕ್ಷಸ ಸೈನ್ಯವನ್ನು ವಧಿಸುವ ಇಷ್ಟವುಳ್ಳವರಾಗಿ ಆ ವಿಷಯದಲ್ಲಿ ಉಪಾಯವನ್ನು ಚಿಂತಿಸಿದರು.

ಬೃಹಸ್ಪತಿಯು ಹೀಗೆಂದನು :—

೧೪೨. ಮಹಾಭಾಗ್ಯವಂತನೂ, ತಪಸ್ವಿಯೂ, ವಿಕಾರವಾದ ಆಚಾರದಲ್ಲಿ ತತ್ಪರನೂ, ಮತ್ತು ಅತ್ರಿಮುನಿಯ ಪುತ್ರನೂ ಆದ ದತ್ತಾತ್ರೇಯ ಮುನಿಯನ್ನು ನೀವು ಭಕ್ತಿಯಿಂದ ಆರಾಧಿಸಿ ಸಂತೋಷಪಡಿಸಿರಿ.

೧೪೩. ದೇವತೆಗಳೆ ! ವರದಾನವನ್ನು ಮಾಡುವ ಆ ದತ್ತಾತ್ರೇಯಮುನಿಯು ದೈತ್ಯರ ಸಂಹಾರವಾಗುವ ಹಾಗೆ ನಿಮಗೆ ವರವನ್ನು ಕೊಡುವನು. ಅದರಿಂದ ನೀವು ಒಟ್ಟಾಗಿ ಬಂದ ದೈತ್ಯ-ದಾನವರನ್ನು ವಧಿಸುತ್ತೀರಿ.

ಗರ್ಗಮುನಿಯು ಇಂತೆಂದನು :—

೧೪೪. ದತ್ತಾತ್ರೇಯ ಮುನಿಯ ಅನುಗ್ರಹದಿಂದ " ನೀವು ದೈತ್ಯರನ್ನು ವಧಿಸಲು ಶಕ್ತರಾಗುತ್ತೀರೆಂದು " ಬೃಹಸ್ಪತಿಯಿಂದ ಹೇಳಲ್ಪಟ್ಟ ದೇವತೆಗಳು ದತ್ತಾತ್ರೇಯ ಮುನಿಯ ಆಶ್ರಮಕ್ಕೆ ತೆರಳಿದರು.

ದದೃಶುಶ್ಚ ಮಹಾತ್ಮಾನಂ ಕಾನ್ತಂ ಲಕ್ಷ್ಮ್ಯಾ ಸಮನ್ವಿತಮ್ ।
ಉದ್ಗೀಯಮಾನಂ ಗನ್ಧರ್ವೈಃ ಸುರಾಪಾನರತಂ ಮುನಿಮ್ ॥೧೪೫॥

ತೇ ತಸ್ಯ ಗತ್ವಾ ಪ್ರಣತಿಂ ಚಕ್ರುಃ ಸರ್ವಾರ್ಥಸಾಧನೀಮ್ ।
ಭಕ್ತ್ಯಾ ತಸ್ಯೋಪಜಹ್ರುಶ್ಚ ಮದ್ಯಪಸ್ಯ ಸುರಾದಿಕಮ್ ॥೧೪೬॥

ತಿಷ್ಠನ್ತಮನುತಿಷ್ಠನ್ತಿ ಯಾನ್ತಂ ಯಾನ್ತಿ ದಿವೌಕಸಃ ।
ಆರಾಧಯಾಮಾಸುರಧಃ ಸ್ಥಿತಾಸ್ತಿಷ್ಠನ್ತಮಾಸನೇ ॥೧೪೭॥

ಸ ಪ್ರಾಹ ದೇವಾನ್ ಪ್ರಣತಾನ್ದತ್ತಾತ್ರೇಯಃ ಕಿಮಿಷ್ಯತೇ ।
ಮತ್ತೋ ಭವದ್ಭಿರ್ಯೇನೇಯಂ ಶುಶ್ರೂಷಾ ಕ್ರಿಯತೇ ಮಮ ॥೧೪೮॥

---

೧೪೫. ಮತ್ತು ಮಹಾತ್ಮನೂ, ಗಂಧರ್ವರಿಂದ ಸ್ತುತಿಸಲ್ಪಡುವವನೂ, ಲಕ್ಷ್ಮಿಯಿಂದ ಕೂಡಿದವನೂ ಮತ್ತು ಸುರಾಪಾನದಲ್ಲಿ ಆಸಕ್ತಿ ಹೊಂದಿದವನೂ ಆದ ದತ್ತಾತ್ರೇಯ ಮುನಿಯನ್ನು ನೋಡಿದರು.

೧೪೬. ದೇವತೆಗಳು ಅಲ್ಲಿಗೆ ಹೋಗಿ ಮುನಿಗೆ ತಮ್ಮ ಎಲ್ಲ ಮನೋರಥಗಳನ್ನು ಸಾಧಿಸಬಲ್ಲ ನಮಸ್ಕಾರಗಳನ್ನು ಮಾಡಿದರು. ಮತ್ತು ಮದ್ಯಪಾನ ಮಾಡುವ ದತ್ತಾತ್ರೇಯ ಮುನಿಗೆ ಮದ್ಯ ಮುಂತಾದುವನ್ನು ಭಕ್ತಿಯಿಂದ ಅರ್ಪಿಸಿದರು.

೧೪೭. ದತ್ತಾತ್ರೇಯ ಮುನಿಯು ನಿಂತುಕೊಂಡರೆ ತಾವು ನಿಂತುಕೊಳ್ಳುವುದು, ಮುನಿಯು ನಡೆದರೆ ತಾವು ಹಿಂಬಾಲಿಸಿ ನಡೆಯುವುದು, ಮತ್ತು ಮುನಿಯು ಆಸನವಲ್ಲಿ ಕುಳಿತಿದ್ದರೆ ತಾವು ಆ ಆಸನದ ಕೆಳಭಾಗದಲ್ಲಿ ಕುಳಿತುಕೊಳ್ಳುವುದು ಈ ಕ್ರಮದಲ್ಲಿ ದೇವತೆಗಳು ಮುನಿಯನ್ನು ಆರಾಧಿಸಿದರು.

೧೪೮. ಆಗ ದತ್ತಾತ್ರೇಯ ಮುನಿಯು ನಮಸ್ಕರಿಸಿ ಸೇವೆಮಾಡುತ್ತಿದ್ದ ದೇವತೆಗಳನ್ನು ಕೇಳಿದನು. ನನ್ನಿಂದ ನಿಮಗೆ ಏನು ಇಷ್ಟವು ಆಗಬೇಕಾಗಿದೆ ? ನೀವೇಕೆ ಹೀಗೆ ನನ್ನ ಶುಶ್ರೂಷೆಯನ್ನು ಮಾಡುತ್ತಿರುವಿರಿ ?

ದೇವಾ ಊಚುಃ :—

ದಾನವೈರ್ಮುನಿಶಾರ್ದೂಲ ಜಮ್ಭಾದ್ಯೈರ್ಭೂರ್ಭುವಾದಿಕಮ್ ।
ಹೃತಂ ತ್ರೈಲೋಕ್ಯಮಾಕ್ರಮ್ಯ ಕ್ರತುಭಾಗಾಶ್ಚ ಕೃತ್ಸ್ನಶಃ ॥೧೪೯॥

ತದ್ವಧೇ ಕುರು ಬುದ್ಧಿಂ ತ್ವಂ ಪರಿತ್ರಾಣಾಯ ನೋಽನಘ ।
ತ್ವತ್ಪ್ರಸಾದಾದಭೀಪ್ಸಾಮಃ ಪುನಃ ಪ್ರಾಪ್ತುಂ ತ್ರಿವಿಷ್ಟಪಮ್॥೧೫೦॥

ದತ್ತಾತ್ರೇಯ ಉವಾಚ :—

ಮದ್ಯಾಸಕ್ತೋಽಹಮುಚ್ಛಿಷ್ಟೋ ನ ಚೈವಾಹಂ ಜಿತೇನ್ದ್ರಿಯಃ ।
ಕಥಮಿಚ್ಛಥ ಮತ್ತೋಽಪಿ ದೇವಾಃ ಶತ್ರುಪರಾಭವಮ್ ॥೧೫೧॥

ದೇವತೆಗಳು ಹೀಗೆಂದರು :—

೧೪೯. ಮುನಿ ಶ್ರೇಷ್ಠನೆ ! ಜಂಭಾಸುರ ಮುಂತಾದ ದಾನವರಿಂದ ಭೂರ್ಲೋಕ, ಭುವರ್ಲೋಕ ಮುಂತಾದ ತ್ರೈಲೋಕ್ಯವು ಆಕ್ರಮಿಸಿ ಅಪಹರಿಸಲ್ಪಟ್ಟಿತು. ಮತ್ತು ನಾವು ಭುಂಜಿಸುವ ಯಜ್ಞಭಾಗಗಳು ಸಂಪೂರ್ಣವಾಗಿ ಕಿತ್ತುಕೊಳ್ಳಲ್ಪಟ್ಟಿವೆ.

೧೫೦. ನಿಷ್ಕಳಂಕನಾದ ಮುನಿಯೆ ! ನಮ್ಮನ್ನು ರಕ್ಷಿಸುವುದಕ್ಕೂ ಮತ್ತು ದಾನವರನ್ನು ವಧಿಸುವುದಕ್ಕೂ ಸಂಕಲ್ಪ ಮಾಡು. ನಿನ್ನ ಅನುಗ್ರಹದಿಂದ ಮತ್ತೆ ತ್ರಿಲೋಕಾಧಿಕಾರವನ್ನು ಹೊಂದಲು ಆಶಿಸುತ್ತಿದ್ದೇವೆ.

ದತ್ತಾತ್ರೇಯ ಮುನಿಯು ಹೇಳಿದನು :—

೧೫೧. ದೇವತೆಗಳಿರಾ ! ನಾನು ಮದ್ಯಪಾನ ಮಾಡುವವನೂ, ಉಚ್ಛಿಷ್ಟನಾಗಿರುವವನೂ, ಮತ್ತು ಜಿತೇಂದ್ರಿಯನಲ್ಲದವನೂ ಆಗಿರುವೆನು. ನೀವು ನನ್ನಿಂದ ಶತ್ರು ಪರಾಜಯವನ್ನು ಹೇಗೆ ಅಪೇಕ್ಷಿಸುತ್ತೀರಿ ?

ದೇವಾ ಊಚುಃ :—

ಅನಘಸ್ತ್ವಂ ಜಗನ್ನಾಥ ನ ಲೇಪಸ್ತವ ವಿದ್ಯತೇ ।
ವಿದ್ಯಾಕ್ಷಾಲನಶುದ್ಧಾನ್ತರ್ನಿವಿಷ್ಟಜ್ಞಾನದೀಧಿತೇ ॥೧೫೨॥

ದತ್ತಾತ್ರೇಯ ಉವಾಚ :—

ಸತ್ಯಮೇತತ್ಸುರಾ ವಿದ್ಯಾ ಮಮಾಸ್ತಿ ಸಮದರ್ಶಿನಃ ।
ಅಸ್ಯಾಸ್ತು ಯೋಷಿತಃ ಸಙ್ಗಾದಹಮುಚ್ಛಿಷ್ಟತಾಂ ಗತಃ ॥೧೫೩॥

ಸ್ತ್ರೀಸಮ್ಭೋಗೋಽತಿದುಃಖಾಯ ಸಾತತ್ಯೇನೋಪಸೇವಿತಃ ।
ಏವಮುಕ್ತಾಸ್ತತೋ ದೇವಾಃ ಪುನರ್ವಚನಮಬ್ರುವನ್ ॥೧೫೪॥

ದೇವಾ ಊಚುಃ :—

ಅನಘೇಯಂ ಮುನಿಶ್ರೇಷ್ಠ ಜಗನ್ಮಾತಾ ನ ದುಷ್ಯತಿ ।
ಯಥಾ ಸಾ ವಿದ್ಯಾ ತವ ವಿಭೋ ಸರ್ವಜ್ಞಸ್ಯ ಹೃದಿ ಸ್ಥಿತಾ ॥೧೫೫॥

ದೇವತೆಗಳು ಹೇಳಿದರು :—

೧೫೨. ತತ್ತ್ವಜ್ಞಾನದಿಂದ ತೊಳೆದು ಶುದ್ಧವಾದ ಅಂತಃಕರಣದಲ್ಲಿ ನೆಲೆಸಿದ ಜ್ಞಾನಕಿರಣವುಳ್ಳ ಮತ್ತು ಜಗತ್ಪ್ರಭುವಾದ ದತ್ತಾತ್ರೇಯ ಮುನಿಯೆ! ನೀನು ನಿಷ್ಕಳಂಕನಾಗಿದ್ದೀಯೆ. ನಿನ್ನಲ್ಲಿ ಯಾವ ಪಾಪಲೇಶವೂ ಇರುವುದಿಲ್ಲ.

ದತ್ತಾತ್ರೇಯ ಮುನಿಯು ನುಡಿದನು :—

೧೫೩. ದೇವತೆಗಳೆ! ಇದು ನಿಜವು. ಸಮಭಾವದ ದೃಷ್ಟಿಯುಳ್ಳ ನನ್ನಲ್ಲಿ ತತ್ತ್ವವಿದ್ಯೆಯು ಇದೆ. ಆದರೆ ಈ ನಾರಿಯ ಸಂಗದಿಂದ ನಾನು ಉಚ್ಛಿಷ್ಟನೂ ಅಶುಚಿಯೂ ಆಗಿರುವೆನು.

೧೫೪. ಸಂತತವಾಗಿ ಸೇವಿಸಿದ ಸ್ತ್ರೀಸಂಭೋಗವು ಅಶುಚಿತ್ವವನ್ನೂ ಅತಿದುಃಖವನ್ನೂ ಕೊಡುವುದು. ಈ ರೀತಿಯಾಗಿ ಹೇಳಲ್ಪಟ್ಟ ದೇವತೆಗಳು ತರುವಾಯ ಮುನಿಯನ್ನು ಕುರಿತು ಮತ್ತೆ ಈ ಮಾತನ್ನು ಹೇಳಿದರು.

ದೇವತೆಗಳು ಇಂತು ಹೇಳಿದರು :—

೧೫೫. ಮುನಿಶ್ರೇಷ್ಠನೆ! ಸರ್ವಶಕ್ತನೆ! ಸರ್ವಜ್ಞನಾದ ನಿನ್ನ ಹೃದಯದಲ್ಲಿ ಯಾವ ವಿದ್ಯೆಯು ಇರುವುದೊ; ಅಂತಹ ವಿದ್ಯಾಮೂರ್ತಿಯೂ, ಜಗನ್ಮಾತೆಯೂ, ನಿರ್ದುಷ್ಟಳೂ ಆದ ಈ ನಾರಿಯು ದೋಷಾಸ್ಪದಗಳಾಗಿಲ್ಲ.

ಯಥಾಂಶುಮಾಲಾ ಸೂರ್ಯಸ್ಯ ದ್ವಿಜಚಣ್ಡಾಲಸಙ್ಗಿನೀ ।
ನ ದುಷ್ಯತಿ ಜಗನ್ನಾಥ ತಥೇಯಂ ವರವರ್ಣಿನೀ ॥೧೫೬॥

ಗರ್ಗ ಉವಾಚ:—

ಏವಮುಕ್ತಸ್ತತೋ ದೇವೈರ್ದತ್ತಾತ್ರೇಯೋಽಬ್ರವೀದಿದಮ್ ।
ಪ್ರಹಸ್ಯ ತ್ರಿದಶಾನ್ಸರ್ವಾನ್ಯದ್ಯೇತದ್ಭವತಾಂ ಮತಮ್ ॥೧೫೭॥

ತದಾಹೂಯಾಸುರಾನ್ ಸರ್ವಾನ್ ಯುದ್ಧಾಯ ಸುರಸತ್ತಮಾಃ ।
ಇಹಾನಯತ ಮದ್ದೃಷ್ಟಿಗೋಚರಂ ಮಾ ವಿಲಮ್ಬತಾಮ್ ॥೧೫೮॥

ಮದ್ದೃಷ್ಟಿಪಾತಹುತಭುಕ್ಪ್ರಕ್ಷೀಣಬಲತೇಜಸಃ ।
ಯೇನ ನಾಶಮಶೇಷಾಸ್ತೇ ಪ್ರಯಾನ್ತಿ ಮಮ ದರ್ಶನಾತ್ ॥೧೫೯॥

---

೧೫೬. ಜಗತ್ಪ್ರಭುವೆ! ದ್ವಿಜರಲ್ಲಿಯೂ ಚಂಡಾಲರಲ್ಲಿಯೂ ಸಂಪರ್ಕಹೊಂದಿದ ಸೂರ್ಯನ ರಶ್ಮಿಮಾಲೆಯಂತೆ ಜಗನ್ಮಾತೆಯಾದ ಈ ಸ್ತ್ರೀಯು ದೋಷಭಾಗಿಯಾಗಿಲ್ಲ.

ಗರ್ಗಮುನಿಯು ಹೇಳಿದನು :—

೧೫೭. ತರುವಾಯ ದೇವತೆಗಳಿಂದ ಈ ವಿಧವಾಗಿ ಹೇಳಲ್ಪಟ್ಟ ದತ್ತಾತ್ರೇಯ ಮುನಿಯು ನಗುನಗುತ್ತ ಎಲ್ಲ ದೇವತೆಗಳನ್ನು ಕುರಿತು ಮತ್ತೆ ಈ ವಚನವನ್ನು ಹೇಳಿದನು. ನಿಮ್ಮ ಮತವು ಹೀಗಿರುವುದೆ ?

೧೫೮. ಅಮರಶ್ರೇಷ್ಠರೆ! ಹಾಗಾದರೆ ನೀವು ಹೋಗಿ ಆ ಎಲ್ಲ ಅಸುರರನ್ನು ಯುದ್ಧಕ್ಕೆ ಕರೆದು ಇಲ್ಲಿ ನನ್ನ ದೃಷ್ಟಿಗೋಚರಕ್ಕೆ ತನ್ನಿರಿ. ಇನ್ನು ವಿಲಂಬವನ್ನು ಮಾಡಬೇಡಿ.

೧೫೯. ಯಾವ ಕಾರಣದಿಂದ ಆ ರಾಕ್ಷಸರು ನನ್ನ ದರ್ಶನದಿಂದ ನನ್ನ ದೃಷ್ಟಿಪಾತವೆಂಬ ಅಗ್ನಿಯಿಂದ ಕ್ಷೀಣವಾದ ಬಲ-ತೇಜಸ್ಸುಗಳುಳ್ಳವರಾಗಿ ಸಂಪೂರ್ಣವಾಗಿ ನಾಶಹೊಂದುವರೊ, ಆ ಕಾರಣದಿಂದ ರಾಕ್ಷಸರನ್ನು ಇಲ್ಲಿಗೆ ಕರೆತನ್ನಿರಿ.

ಗರ್ಗ ಉವಾಚ :—

ತಸ್ಯ ತದ್ವಚನಂ ಶ್ರುತ್ವಾ ದೇವೈರ್ದೈತ್ಯಾ ಮಹಾಬಲಾಃ ।
ಆಹವಾಯ ಸಮಾಹೂತಾ ಜಗ್ಮುರ್ದೇವಗಣಾಶ್ರಮಮ್ ॥೧೬೦॥

ತೇ ಹನ್ಯಮಾನಾ ದೈತೇಯೈರ್ದೇವಾಃ ಸರ್ವೇ ಭಯಾತುರಾಃ ।
ದತ್ತಾತ್ರೇಯಾಶ್ರಮಂ ಜಗ್ಮುಃ ಸಮಸ್ತಾಃ ಶರಣಾರ್ಥಿನಃ ॥೧೬೧॥

ತಮೇವ ವಿವಿಶುರ್ದೈತ್ಯಾಃ ಕಾಲಯನ್ತೋ ದಿವೌಕಸಃ ।
ದದೃಶುಸ್ತಂ ಮಹಾತ್ಮಾನಂ ದತ್ತಾತ್ರೇಯಂ ಮದಾಲಸಮ್ ॥೧೬೨॥

ವಾಮಪಾರ್ಶ್ವಸ್ಥಿತಾಮಿಷ್ಟಾಮಶೇಷಜಗತಃ ಶುಭಾಮ್ ।
ಭಾರ್ಯಾಂ ಚಾಸ್ಯ ಸುಚಾರ್ವಙ್ಗೀಂ ಲಕ್ಷ್ಮೀಮಿನ್ದುನಿಭಾನನಾಮ್ ॥೧೬೩॥

ಗರ್ಗಮುನಿಯು ಹೀಗೆಂದು ಹೇಳಿದನು :—

೧೬೦. ದತ್ತಾತ್ರೇಯಮುನಿಯು ಆ ವಚನವನ್ನು ಕೇಳಿ ದೇವತೆಗಳಿಂದ ಯುದ್ಧಕ್ಕೆ ಕರೆಯಲ್ಪಟ್ಟ ಮಹಾಬಲಿಷ್ಠರಾದ ರಾಕ್ಷಸರು ದೇವತೆಗಳ ಗುಂಪಿರುವ ಆಶ್ರಮಕ್ಕೆ ಹೋದರು.

೧೬೧. ಆಗ ದೈತ್ಯರಿಂದ ವಧಿಸಲ್ಪಡುತ್ತಿದ್ದ ಆ ಎಲ್ಲ ದೇವತೆಗಳು ಸೇರಿಕೊಂಡು ಭಯಗ್ರಸ್ತರಾಗಿ ಶರಣಾರ್ಥಿಗಳಾಗಿ ದತ್ತಾತ್ರೇಯಮುನಿಯ ಆಶ್ರಮಕ್ಕೆ ಓಡಿಹೋದರು.

೧೬೨. ದೈತ್ಯರು ದೇವತೆಗಳನ್ನು ಬೆನ್ನಟ್ಟಿಕೊಂಡು ಧಾವಿಸುತ್ತ ಅದೇ ದತ್ತಾತ್ರೇಯಾಶ್ರಮವನ್ನು ಹೊಕ್ಕರು. ಮತ್ತು ಮದದಿಂದ ಅಲಸನೂ ಮಹಾತ್ಮನೂ ಆದ ದತ್ತಾತ್ರೇಯಮುನಿಯನ್ನು ನೋಡಿದರು.

೧೬೩. ಅಶೇಷಜಗತ್ತಿಗೆ ಮಾನ್ಯಳೂ, ಮಂಗಳಕರಳೂ, ಶೋಭಿಸುತ್ತಿದ್ದ ಅಂಗವುಳ್ಳವಳೂ, ಚಂದ್ರನಂತೊಪ್ಪುವ ಮುಖವುಳ್ಳವಳೂ, ಮತ್ತು ಮುನಿಯ ವಾಮಪಾರ್ಶ್ವದಲ್ಲಿ ಕುಳಿತುಕೊಂಡವಳೂ ಆದ ಮುನಿಯ ಭಾರ್ಯೆಯಾದ ಲಕ್ಷ್ಮಿಯನ್ನೂ ನೋಡಿದರು.

ನೀಲೋತ್ಪಲಾಭನಯನಾಂ ಪೀನಶ್ರೋಣಿಪಯೋಧರಾಮ್ ।
ಸುದತೀಂ ಮಧುರಾಭಾಷಾಂ ಸರ್ವಯೋಷಿದ್ಗುಣೈರ್ಯುತಾಮ್ ॥೧೬೪॥

ದೃಷ್ಟ್ವಾಗ್ರತಸ್ತದಾ ದೈತ್ಯಾಃ ಸಾಭಿಲಾಷಮನೋಭವಾಃ ।
ನ ಶೇಕುರುದ್ಧತಾ ದೈತ್ಯಾ ಮನಸಾ ವೋಢುಮಾತುರಾಃ ॥೧೬೫॥

ತ್ಯಕ್ತ್ವಾ ದೇವಾನ್ ಸ್ತ್ರಿಯಂ ತಾಂ ತು ಹರ್ತುಕಾಮಾ ಹತೌಜಸಃ ।
ಪ್ರೇರಿತಾಸ್ತೇನ ಪಾಪೇನ ಹ್ಯಾಸಕ್ತಾಸ್ತೇ ತತೋಽಬ್ರುವನ್ ॥೧೬೬॥

ಸ್ತ್ರೀರತ್ನಮೇತತ್ತ್ರೈಲೋಕ್ಯಸಾರಂ ಚೇದ್ವಿದಿತಂ ಭವೇತ್ ।
ಕೃತಕೃತ್ಯಾಸ್ತತಃ ಸರ್ವೇ ಇತಿ ನೋ ಭಾವಿತಂ ಮನಃ ॥೧೬೭॥

---

೧೬೪. ಆ ಮುನಿಯ ಭಾರ್ಯೆಯು ಕನ್ನೈದಿಲೆಯಂತೆ ಕಾಂತಿಯುಳ್ಳ ಕಣ್ಣುಗಳುಳ್ಳವಳೂ, ಸ್ಥೂಲವಾದ ನಿತಂಬ-ಸ್ತನಗಳಿಂದ ಕೂಡಿದವಳೂ, ಸುಂದರವಾದ ದಂತಪಂಕ್ತಿಯುಳ್ಳವಳೂ, ಮಧುರವಾದ ಭಾಷಣವುಳ್ಳವಳೂ ಮತ್ತು ಸ್ತ್ರೀಯರಲ್ಲಿ ಇರುವ ಸಮಸ್ತ ಗುಣಗಳಿಂದ ಕೂಡಿದವಳೂ ಆಗಿದ್ದಳು.

೧೬೫. ಆಗ ಅಂತಹ ಮುನಿಭಾರ್ಯೆಯನ್ನು ಎದುರುನೋಡಿ ಆಕೆಯಲ್ಲಿ ಅಭಿಲಾಷೆ-ಶೃಂಗಾರಭಾವಗಳನ್ನು ಹೊಂದಿದ ಉದ್ಧತರಾದ ದೈತ್ಯರು ಕಾಮಪೀಡೆಯುಳ್ಳವರಾಗಿ ಆ ಪೀಡೆಯನ್ನು ಮನಸ್ಸಿನಲ್ಲಿ ನಿಗ್ರಹಿಸಿಕೊಳ್ಳಲು ಅಶಕ್ತರಾದರು.

೧೬೬. ತರುವಾಯ ದೇವತೆಗಳನ್ನು ಬಿಟ್ಟು ಆ ಸ್ತ್ರೀಯನ್ನು ಅಪಹರಿಸುವ ಇಷ್ಟವುಳ್ಳವರೂ, ಆ ಪಾಪಸಂಪರ್ಕದಿಂದ ಧ್ವಂಸವಾದ ಬಲವುಳ್ಳವರೂ ಆದ ರಾಕ್ಷಸರು ಮುನಿಯ ಪತ್ನಿಯನ್ನು ಅಪಹರಿಸುವ ಆಸಕ್ತಿಯಿಂದ ಕೂಡಿ ಅನ್ಯೋನ್ಯವಾಗಿ ಹೀಗೆ ಮಾತನಾಡಿಕೊಂಡರು.

೧೬೭. ಮೂರು ಲೋಕಗಳಲ್ಲಿ ಸಾರಾಂಶರೂಪವಾದ ಈ ಸ್ತ್ರೀರತ್ನವು ನಮಗೆ ಲಭಿಸುವುದಾದರೆ ಆಗ ನಾವು ಎಲ್ಲರೂ ಕೃತಕೃತ್ಯರಾಗುವೆವು, ಎಂದು ನಮ್ಮ ಮನಸ್ಸಿನಲ್ಲಿ ಭಾವನೆಯುಂಟಾಗಿದೆ.

ತಸ್ಮಾತ್ಸರ್ವೇ ಸಮುತ್ಕ್ಷಿಪ್ಯ ಶಿಬಿಕಾಯಾಂ ಸುರಾರ್ದನಾಃ ।
ಆರೋಪ್ಯ ಸ್ವಮಧಿಷ್ಠಾನಂ ನಯಾಮ ಇತಿ ನಿಶ್ಚಿತಾಃ ॥೧೬೮॥

ಗರ್ಗ ಉವಾಚ:—

ಸಾನುರಾಗಾಸ್ತತಸ್ತೇ ತು ಮುನೇರನ್ತಿಕಮಾಗಮನ್ ।
ತಸ್ಯ ತಾಂ ಯೋಷಿತಂ ಸಾಧ್ವೀಂ ಸಮುತ್ಕ್ಷಿಪ್ಯ ಸ್ಮರಾತುರಾಃ॥೧೬೯॥

ಶಿಬಿಕಾಯಾಂ ಸಮಾರೋಪ್ಯ ಸಹಿತಾ ದೈತ್ಯದಾನವಾಃ ।
ಶಿರಸ್ಸು ಶಿಬಿಕಾಂ ಕೃತ್ವಾ ಸ್ವಸ್ಥಾನಾಭಿಮುಖಾ ಯಯುಃ ॥೧೭೦॥

ದತ್ತಾತ್ರೇಯಸ್ತಥಾ ದೇವಾನ್ವಿಹಸ್ಯೇದಮಥಾಬ್ರವೀತ್ ।
ದಿಷ್ಟ್ಯಾ ಚ ಹನ್ತ ದೈತ್ಯಾನಾಮೇಷಾ ಲಕ್ಷ್ಮೀಃ ಶಿರೋಗತಾ ॥೧೭೧॥

---

೧೬೮. ಆದುದರಿಂದ ದೇವಶತ್ರುಗಳಾದ ನಾವೆಲ್ಲರೂ ಈಕೆಯನ್ನು ಎತ್ತಿ ಪಲ್ಲಕ್ಕಿಯಲ್ಲಿಟ್ಟುಕೊಂಡು ನಮ್ಮ ವಾಸಸ್ಥಾನಕ್ಕೆ ಎತ್ತಿಕೊಂಡು ಹೋಗೋಣ ಎಂದು ನಿಶ್ಚಯಿಸಿಕೊಂಡರು.

ಗರ್ಗಮುನಿಯು ಇಂತೆಂದನು :—

೧೬೯. ತರುವಾಯ ಕಾಮಪೀಡಿತರೂ, ಆ ಸ್ತ್ರೀರತ್ನದಲ್ಲಿ ಅನುರಾಗಪೂರ್ಣರೂ ಆದ ರಾಕ್ಷಸರು ಮುನಿಯ ಸನ್ನಿಧಿಗೆ ಬಂದರು. ಮತ್ತು ಪತಿವ್ರತೆಯಾದ ದತ್ತಾತ್ರೇಯ ಮುನಿಯ ಪ್ರೇಯಸಿಯನ್ನು ಎತ್ತಿಕೊಂಡರು.

೧೭೦. ದೈತ್ಯದಾನವರೆಲ್ಲರೂ ಸೇರಿ ಆ ಮುನಿಭಾರ್ಯೆಯನ್ನು ಪಲ್ಲಕ್ಕಿಯಲ್ಲಿ ಇರಿಸಿಕೊಂಡು ಆ ಪಲ್ಲಕ್ಕಿಯನ್ನು ತಲೆಯಲ್ಲಿ ಹೊತ್ತುಕೊಂಡು ತಮ್ಮ ನಿವಾಸಕ್ಕೆ ಅಭಿಮುಖರಾಗಿ ಪ್ರಯಾಣಮಾಡಿದರು.

೧೭೧. ಅನಂತರ ಆ ಸನ್ನಿವೇಶದಲ್ಲಿ ದತ್ತಾತ್ರೇಯಮುನಿಯು ದೇವತೆಗಳನ್ನು ನೋಡಿ ನಗುತ್ತ ಮಾತನಾಡಿದನು. ಈ ಲಕ್ಷ್ಮಿಯು ದೈತ್ಯರ ಶಿರಸ್ಸಿನಲ್ಲಿರುವಂತಾದುದು ಸಂತೋಷಕರವಾದ ಭಾಗ್ಯವು.

ಸಪ್ತ ಸ್ಥಾನಾನ್ಯತಿಕ್ರಮ್ಯ ಲಯಮನ್ಯಮುಪೈಷ್ಯತಿ ॥೧೬೨॥

ದೇವಾ ಊಚುಃ :—

ಕಥಯಸ್ವ ಜಗನ್ನಾಥ ಕೇಷು ಸ್ಥಾನೇಷ್ವವಸ್ಥಿತಾ ।
ಪುರುಷಸ್ಯ ಫಲಂ ಕಿಂ ವಾ ಪ್ರಯಚ್ಛತ್ಯಥ ನಶ್ಯತಿ ॥೧೬೩॥

ದತ್ತಾತ್ರೇಯ ಉವಾಚ :—

ನೃಣಾಂ ಪಾದಸ್ಥಿತಾ ಲಕ್ಷ್ಮೀರ್ನಿಲಯಂ ಸಮ್ಪ್ರಯಚ್ಛತಿ ।
ಸಕ್ಥ್ನೋಶ್ಚ ಸಂಸ್ಥಿತಾ ವಸ್ತ್ರಂ ರತ್ನಂ ನಾನಾವಿಧಂ ವಸು ॥೧೬೪॥

ಕಲತ್ರದಾ ಗುಹ್ಯಸಂಸ್ಥಾ ಕ್ರೋಡಸ್ಥಾಪತ್ಯದಾಯಿನೀ ।
ಮನೋರಥಾನ್ಪೂರಯತಿ ಪುರುಷಾಣಾಂ ಹೃದಿ ಸ್ಥಿತಾ ॥೧೬೫॥

---

೧೬೨. ಲಕ್ಷ್ಮಿಯು ತಾನು ಇರಬಹುದಾದ ಪಾದ ಮುಂತಾದ ಏಳು ಸ್ಥಾನಗಳನ್ನು ಲಂಘಿಸಿ ಶಿರದಲ್ಲಿರುವುದರಿಂದ ರಾಕ್ಷಸರನ್ನು ಬಿಟ್ಟು ಮತ್ತೊಂದು ಆಧಾರವನ್ನು ಹೊಂದುವಳು.

ದೇವತೆಗಳು ಇಂತೆಂದರು :—

೧೬೩. ಜಗತ್ತಿನ ಪ್ರಭುವೆ! ಪುರುಷನ ಯಾವ ಯಾವ ಸ್ಥಾನದಲ್ಲಿದ್ದ ಲಕ್ಷ್ಮಿಯು ಯಾವ ಯಾವ ಫಲವನ್ನು ಕೊಡುವಳು, ಅಥವಾ ತಾನೇ ನಾಶವಾಗುವಳು? ಇದನ್ನು ಹೇಳು.

ದತ್ತಾತ್ರೇಯಮುನಿಯು ಹೇಳಿದನು :—

೧೬೪. ಪುರುಷರ ಪಾದದಲ್ಲಿದ್ದ ಲಕ್ಷ್ಮಿಯು ನಾಶವನ್ನು ಉಂಟುಮಾಡುವಳು. ತೊಡೆಗಳಲ್ಲಿ ಇದ್ದ ಲಕ್ಷ್ಮಿಯು ವಸ್ತ್ರ, ರತ್ನ ಮತ್ತು ನಾನಾವಿಧವಾದ ಐಶ್ವರ್ಯ ಇವುಗಳನ್ನು ಕೊಡುವಳು.

೧೬೫. ಹಾಗು ಗುಹ್ಯಸ್ಥಾನದಲ್ಲಿದ್ದ ಲಕ್ಷ್ಮಿಯು ಕಲತ್ರಫಲವನ್ನೂ ಭುಜಮಧ್ಯಭಾಗದಲ್ಲಿದ್ದ ಲಕ್ಷ್ಮಿಯು ಸಂತತಿಯನ್ನೂ ಕೊಡುವಳು. ಮತ್ತು ಪುರುಷರ ಹೃದಯದಲ್ಲಿದ್ದವಳು ಸಕಲ ಮನೋರಥಗಳನ್ನು ಪೂರ್ತಿಮಾಡುವಳು.

ಲಕ್ಷ್ಮೀರ್ಲಕ್ಷ್ಮೀವತಾಂ ಶ್ರೇಷ್ಠಾ ಕಣ್ಠಸ್ಥಾ ಕಣ್ಠಭೂಷಣಮ್ ।
ಅಭೀಷ್ಟಬನ್ಧುದಾರೈಶ್ಚ ತಥಾ ಶ್ಲೇಷಂ ಪ್ರವಾಸಿಭಿಃ ॥೧೭೬॥

ಮೃಷ್ಟಾನ್ನಂ ವಾಕ್ಯಲಾವಣ್ಯಮಾಜ್ಞಾಮವಿತಥಾಂ ತಥಾ ।
ಮುಖಸ್ಥಿತಾ ಕವಿತ್ವಂ ಚ ಯಚ್ಛತ್ಯುದಧಿಸಮ್ಭವಾ ॥೧೭೭॥

ಶಿರೋಗತಾ ಸನ್ತ್ಯಜತಿ ತತೋಽನ್ಯಂ ಯಾತಿ ಚಾಶ್ರಯಮ್ ।
ಸೇಯಂ ಶಿರೋಗತಾ ದೈತ್ಯಾನ್ಪರಿತ್ಯಜತಿ ಸಾಮ್ಪ್ರತಮ್ ॥೧೭೮॥

ಪ್ರಗೃಹ್ಯಾಸ್ತ್ರಾಣಿ ವಧ್ಯನ್ತಾಂ ತಸ್ಮಾದೇತೇ ಸುರಾರಯಃ ।
ನ ಭೇತವ್ಯಂ ಭೃಶಂ ತ್ವೇತೇ ಮಯಾ ನಿಸ್ತೇಜಸಃ ಕೃತಾಃ ॥೧೭೯॥

---

೧೭೬. ಹೀಗೆ ನಾನಾ ಸ್ಥಾನಗಳಲ್ಲಿ ಲಕ್ಷ್ಮಿಯನ್ನು ಹೊಂದಿದವರಲ್ಲಿ ಕಂಠಕ್ಕೆ ಭೂಷಣಪ್ರಾಯಳಾಗಿ ಕಂಠದಲ್ಲಿರುವುದು ಎಲ್ಲಕ್ಕೂ ಶ್ರೇಷ್ಠವಾದುದು. ಅಂತಹ ಲಕ್ಷ್ಮಿಯು ಪ್ರವಾಸಮಾಡಿದ ಆಪ್ತಬಂಧು, ಪತ್ನೀ ಮುಂತಾದವರ ಸಮಾಗಮವನ್ನು ಉಂಟುಮಾಡುವಳು.

೧೭೭. ಮತ್ತು ಮುಖಸ್ಥಾನದಲ್ಲಿದ್ದ ಲಕ್ಷ್ಮಿಯು ಮೃಷ್ಟಾನ್ನ, ವಾಗ್ಮಿತ್ವ, ಸೌಂದರ್ಯ, ಎಲ್ಲೆಲ್ಲೂ ಆಜ್ಞೆಮಾಡುವ ಪ್ರಭುತ್ವ ಹಾಗು ಕವಿತ್ವ ಇಷ್ಟು ಫಲಗಳನ್ನು ಕೊಡುವಳು.

೧೭೮. ಶಿರಸ್ಸಿನ ಸ್ಥಾನದಲ್ಲಿ ಇದ್ದರೆ ಆ ಆಧಾರವನ್ನು ಬಿಟ್ಟು ಬೇರೊಂದು ಆಶ್ರಯವನ್ನು ಹೊಂದುವಳು. ಅಂತಹ ಲಕ್ಷ್ಮಿಯು ಈಗ ಶಿರಸ್ಥಾನದಲ್ಲಿರುವುದರಿಂದ ದೈತ್ಯರನ್ನು ತ್ಯಜಿಸುವಳು.

೧೭೯. ಆದುದರಿಂದ ದೇವಕಂಟಕರಾದ ಈ ರಾಕ್ಷಸರು ನಿಮ್ಮಿಂದ ಅಸ್ತ್ರಗಳನ್ನು ಹಿಡಿದು ವಧಿಸಲ್ಪಡಲಿ. ಮತ್ತೆ ಇವರಿಂದ ಹೆದರುವುದುಬೇಡ. ನನ್ನಿಂದ ಇವರು ನಿಸ್ತೇಜರಾಗಿ ಮಾಡಲ್ಪಟ್ಟಿರುವರು.

ಪರದಾರಾವಮರ್ಶಾಚ್ಚ ದಗ್ಧಪುಣ್ಯಾ ಹತೌಜಸಃ ।
ತಸ್ಮಾದೇತೇಽಭಿಹನ್ಯನ್ತಾಂ ಭವದ್ಭಿರವಿಶಙ್ಕಿತೈಃ ॥೧೮೦॥

ಗರ್ಗ ಉವಾಚ:—

ತತಸ್ತೇ ವಿವಿಧೈರಸ್ತ್ರೈರ್ವಧ್ಯಮಾನಾಃ ಸುರಾರಯಃ ।
ಶಿರಸ್ಸು ಲಕ್ಷ್ಮ್ಯಾ ಭಾರಾಕ್ರಾನ್ತಾ ವಿನೇಶುರಿತಿ ನಃ ಶ್ರುತಮ್ ॥೧೮೧॥

ಲಕ್ಷ್ಮೀಶ್ಚೋತ್ಪತ್ಯ ಸಮ್ಪ್ರಾಪ್ತಾ ದತ್ತಾತ್ರೇಯಂ ಮಹಾಮುನಿಮ್ ।
ಸ್ತೂಯಮಾನಾ ಸುರೈಃ ಸೇನ್ದ್ರೈರ್ದೈತ್ಯನಾಶಾನ್ಮುದಾನ್ವಿತೈಃ॥೧೮೨॥

ಪ್ರಣಿಪತ್ಯ ತತೋ ದೇವಾ ದತ್ತಾತ್ರೇಯಂ ಮಹಾಮುನಿಮ್ ।
ಜಯ ಕೃಷ್ಣ ಜಗನ್ನಾಥ ದೈತ್ಯಾನ್ತಕ ಹರ ಪ್ರಭೋ ॥೧೮೩॥

---

೧೮೦. ಮತ್ತು ಇವರು ಪರಸ್ತ್ರೀಯನ್ನು ಅವಮಾನಮಾಡಿದ ಪಾಪದಿಂದ ಪುಣ್ಯಕ್ಷಯಹೊಂದಿದವರೂ ನಷ್ಟವಾದ ಬಲವುಳ್ಳವರೂ ಆಗಿದ್ದಾರೆ. ಆದ್ದರಿಂದ ನೀವು ನಿರ್ಭಯರಾಗಿ ವಧಿಸಿರಿ.

ಗರ್ಗಮುನಿಯು ಹೇಳಿದನು :—

೧೮೧. ತರುವಾಯ ದೇವತೆಗಳಿಂದ ಬಗೆಬಗೆಯ ಅಸ್ತ್ರಗಳಿಂದ ವಧಿಸಲ್ಪಡುತ್ತಿದ್ದ ದೈತ್ಯ-ದಾನವರು ಶಿರಸ್ಸಿನಲ್ಲಿ ಲಕ್ಷ್ಮಿಯಿಂದಲೂ ಭಾರಾ-ಕ್ರಮಣದಿಂದ ಪೀಡಿತರಾಗಿ ನಾಶಹೊಂದಿದರು—ಎಂದು ನಾವು ಕೇಳಿರುವೆವು.

೧೮೨. ದೈತ್ಯರ ನಾಶದಿಂದ ಸಂತೋಷಪಟ್ಟ ದೇವತೆಗಳಿಂದ ಸ್ತುತಿಸ-ಲ್ಪಡುತ್ತ ಲಕ್ಷ್ಮಿಯು ವಧಿಸಲ್ಪಡುತ್ತಿದ್ದ ರಾಕ್ಷಸರ ಗುಂಪಿನಿಂದ ಹಾರಿ ದತ್ತಾತ್ರೇಯ ಮಹಾಮುನಿಯ ಬಳಿಗೆ ಬಂದಳು.

೧೮೩. ತರುವಾಯ ದೇವತೆಗಳು ದತ್ತಾತ್ರೇಯ ಮಹಾಮುನಿಯನ್ನು ನಮಸ್ಕರಿಸಿ ಈ ರೀತಿಯಾಗಿ ಸ್ತುತಿಮಾಡಿದರು. ಸರ್ವಶಕ್ತನೆ! ದುಷ್ಟಸಂಹಾ-ರಕನೆ! ದೈತ್ಯಾಂತಕನೆ! ಜಗನ್ನಾಥನೆ! ಮತ್ತು ಕೃಷ್ಣರೂಪಿಯೆ! ಜಯಶಾಲಿ-ಯಾಗಿರುತ್ತೀಯೆ.

ನಾರಾಯಣಾಚ್ಯುತಾನನ್ತ ವಾಸುದೇವಾಕ್ಷಯಾಜರ ।
ತ್ವತ್ಪ್ರಸಾದಾತ್ಸುಖಂ ಲಕ್ಷ್ಮೀ ರಾಜ್ಯಂ ಸರ್ವ್ವಂ ಜನಾರ್ದನ ॥೧೮೪॥

ಶಾರ್ಙ್ಗಧನ್ವಂಶ್ಚಕ್ರಪಾಣೇ ಭಕ್ತಾನಾಂ ನಿತ್ಯವತ್ಸಲ ।
ಇತಿ ಸ್ತುತ್ವಾ ನಾಕಪೃಷ್ಠಂ ಯಥಾಪೂರ್ವಂ ಗತಾಃ ಸುರಾಃ ॥೧೮೫॥

ತಥಾ ತ್ವಮಪಿ ರಾಜೇನ್ದ್ರ ಯದೀಚ್ಛಸಿ ಯಥೇಪ್ಸಿತಮ್ ।
ಪ್ರಾಪ್ತುಮೈಶ್ವರ್ಯಮತುಲಂ ತೂರ್ಣಮಾರಾಧಯಸ್ವ ತಮ್ ॥೧೮೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದತ್ತಾತ್ರೇಯಮಾಹಾತ್ಮ್ಯ ವರ್ಣನಂ ನಾಮ ಷೋಡಶೋಽಧ್ಯಾಯಃ

---

೧೮೪. ಮತ್ತು ನಾರಾಯಣಮೂರ್ತಿಯೆ! ಚ್ಯುತಿವರ್ಜಿತನೆ! ಅಂತವಿಲ್ಲದವನೆ! ಪ್ರಕಾಶಸ್ವರೂಪನೆ! ಶಾಶ್ವತನೆ! ಜರಾಮರಣವಿಲ್ಲದವನೆ! ಮತ್ತು ಜನಾರ್ದನಸ್ವಾಮಿಯೆ! ನಿನ್ನ ಅನುಗ್ರಹದಿಂದ ನಮಗೆ ಸಂಪತ್ತು, ಲಕ್ಷ್ಮಿಯು, ರಾಜ್ಯ, ಸುಖಗಳು ದೊರಕಿರುವುವು.

೧೮೫. ಶಾರ್ಙ್ಗಯುಧವನ್ನು ಧರಿಸಿದವನೆ! ಚಕ್ರಪಾಣಿಯೆ! ಭಕ್ತರಲ್ಲಿ ನಿತ್ಯವಾತ್ಸಲ್ಯವುಳ್ಳವನೆ! ನೀನೇ ನಮಗೆ ರಕ್ಷಕನು. ದೇವತೆಗಳು ಹೀಗೆಂದು ಸ್ತುತಿಮಾಡಿ ಬಂದಹಾಗೆ ಸ್ವರ್ಗಲೋಕಕ್ಕೆ ತೆರಳಿದರು.

೧೮೬. ರಾಜೇಂದ್ರನೆ! ಹಾಗೆಯೇ ನೀನು ಇಷ್ಟದಂತೆ ಸಮೃದ್ಧಿಯಾದ ಮತ್ತು ನಿರುಪಮವಾದ ಐಶ್ವರ್ಯವನ್ನು ಹೊಂದಲು ಅಪೇಕ್ಷಿಸುವೆಯಾದರೆ ದತ್ತಾತ್ರೇಯ ಮುನಿಯನ್ನು ಬೇಗ ಆರಾಧಿಸು.

ಮಾರ್ಕಂಡೇಯ ಮಹಾಪುರಾಣದಲ್ಲಿ ಹದಿನಾರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತದಶೋಽಧ್ಯಾಯಃ

(ಕಾರ್ತವೀರ್ಯಾರ್ಜುನಸ್ಯ ದತ್ತಾತ್ರೇಯಾಭಿಗಮನಮ್)

ಪುತ್ರ ಉವಾಚ :—

ಇತ್ಯೃಷೇರ್ವಚನಂ ಶ್ರುತ್ವಾ ಕಾರ್ತವೀರ್ಯೋ ನರೇಶ್ವರಃ ।
ದತ್ತಾತ್ರೇಯಾಶ್ರಮಂ ಗತ್ವಾ ತಂ ಭಕ್ತ್ಯಾ ಸಮಪೂಜಯತ್ ॥೧॥

ಪಾದಸಂವಾಹನಾದ್ಯೇನ ಅರ್ಘ್ಯಾದ್ಯಾಹರಣೇನ ಚ ।
ಸ್ರಕ್ಚನ್ದನಾದಿಗನ್ಧಾಮ್ಬುಫಲಾದ್ಯಾನಯನೇನ ಚ ॥೨॥

ಹದಿನೇಳನೆಯ ಅಧ್ಯಾಯ

ಪುತ್ರನು ಹೀಗೆಂದನು :—

೧. ಕಾರ್ತವೀರ್ಯಾರ್ಜುನ ರಾಜನು ಈ ವಿಧವಾಗಿ ಗರ್ಗಮುನಿಯ ವಚನವನ್ನು ಕೇಳಿ ದತ್ತಾತ್ರೇಯ ಮುನಿಯ ಆಶ್ರಮಕ್ಕೆ ಹೋಗಿ ಭಕ್ತಿಯಿಂದ ಆ ಮುನಿಯನ್ನು ಆರಾಧಿಸಿದನು.

೨. ಮುನಿಗೆ ಕಾಲುಗಳನ್ನು ಒತ್ತುವುದು, ಅರ್ಘ್ಯ ಮುಂತಾದುದನ್ನು ಒಪ್ಪಿಸುವುದು, ಮತ್ತು ಪುಷ್ಪಮಾಲೆ-ಚಂದನ- ಗಂಧ-ಜಲ-ಫಲ ಮುಂತಾದುದನ್ನು ತಂದುಕೊಡುವುದು—ಈ ಬಗೆಯಿಂದ ರಾಜಕುಮಾರನು ಮುನಿಯನ್ನು ಸೇವಿಸಿದನು.

ತಥಾನ್ನಸಾಧನೈಸ್ತಸ್ಯ ಉಚ್ಛಿಷ್ಟಾಪೋಹನೇನ ಚ ।
ಪರಿತುಷ್ಟೋ ಮುನಿರ್ಭೂಪಂ ತಮುವಾಚ ತಥೈವ ಸಃ ॥೩॥

ಯಥೈವೋಕ್ತಾಃ ಪುರಾ ದೇವಾ ಮದ್ಯಭೋಜ್ಯಾದಿ ಕುತ್ಸನಮ್ ।
ಸ್ತ್ರೀ ಚೇಯಂ ಮಮ ಪಾರ್ಶ್ವಸ್ಥೇತ್ಯೇತದ್ಭೋಗಾನುಕುತ್ಸಿತಃ ॥೪॥

ಸದೈವಾಹಂ ನ ಮಾಮೇವಮುಪರೋದ್ಧುಂ ತ್ವಮರ್ಹಸಿ ।
ಅಶಕ್ತಮುಪಕಾರಾಯ ಶಕ್ತಮಾರಾಧಯಸ್ವ ಭೋಃ ॥೫॥

ಪುತ್ರ ಉವಾಚ :—

ತೇನೈವಮುಕ್ತೋ ಮುನಿನಾ ಸ್ಮೃತ್ವಾ ಗರ್ಗವಚಶ್ಚ ತತ್ ।
ಪ್ರತ್ಯುವಾಚ ಪ್ರಣಮ್ಯೈನಂ ಕಾರ್ತವೀರ್ಯಸ್ತತೋಽರ್ಜುನಃ ॥೬॥

---

೩. ಮತ್ತು ಆಹಾರವನ್ನು ಸಿದ್ಧಗೊಳಿಸುವುದು, ಉಚ್ಛಿಷ್ಟವನ್ನು ಎತ್ತಿಹಾಕುವುದು ಹೀಗೆ ಅನೇಕ ಬಗೆಯ ಸೇವೆಯಿಂದ ತೃಪ್ತಿಯನ್ನು ಹೊಂದಿದ ಮುನಿಯು ಆ ರಾಜನನ್ನು ಕುರಿತು ಹಾಗೆಯೇ ಹೇಳಿದನು.

೪. ಹಿಂದೆ ದೇವತೆಗಳು ಹೇಗೆ ಹೇಳಲ್ಪಟ್ಟಿದ್ದರೊ ಅದೇ ರೀತಿಯಾಗಿ ರಾಜನು ಹೇಳಲ್ಪಟ್ಟನು. ನನ್ನಲ್ಲಿ ಮದ್ಯಸೇವನ ಮುಂತಾದ ಹೀನವೃತ್ತಿಯು ಇದೆ. ಹಾಗು ನನ್ನ ಪಾರ್ಶ್ವದಲ್ಲಿ ಸ್ತ್ರೀಯು ಇರುವಳು. ಸ್ತ್ರೀಭೋಗದಿಂದಲೂ ನಾನು ನಿಂದ್ಯನಾಗಿರುವೆನು.

೫. ಎಲೈ ರಾಜನೆ ! ನಾನು ಯಾವಾಗಲೂ ಹೀಗೆ ವಾಮಾಚಾರ-ದಲ್ಲಿರುವುದರಿಂದ ಉಪಕಾರಮಾಡಲು ಅಶಕ್ತನಾದ ನನ್ನನ್ನು ಹೀಗೆ ನಿರ್ಬಂಧಿಸ-ಲಾಗದು. ಉಪಕಾರಮಾಡಲು ಶಕ್ತನಾದವನನ್ನು ನೋಡಿ ಸೇವೆಮಾಡು.

ಪುತ್ರನು ಹೀಗೆ ಹೇಳಿದನು :—

೬. ಆ ದತ್ತಾತ್ರೇಯ ಮುನಿಯಿಂದ ಈ ರೀತಿಯಾಗಿ ನುಡಿಯಲ್ಪಟ್ಟ ಕಾರ್ತವೀರ್ಯಾರ್ಜುನನು ಆ ಗರ್ಗಮುನಿಯು ಹೇಳಿದ ವಚನವನ್ನು ನೆನೆಸಿ-ಕೊಂಡು ದತ್ತಾತ್ರೇಯ ಮುನಿಗೆ ವಂದಿಸಿ ಪ್ರತ್ಯುತ್ತರವಿತ್ತನು.

ಅರ್ಜುನ ಉವಾಚ :—

ದೇವಸ್ತ್ವಂ ಹಿ ಪುರಾಣೋ ಯಃ ಸ್ವಾಂ ಮಾಯಾಂ ಸಮುಪಾಶ್ರಿತಃ |
ಅನಘಸ್ತ್ವಂ ತಥೈವೇಯಂ ದೇವೀ ಸರ್ವಭವಾರಣಿಃ ||೭||

ಇತ್ಯುಕ್ತಃ ಪ್ರೀತಿಮಾನ್ದೇವೋ ಭೂಯಸ್ತಂ ಪ್ರತ್ಯುವಾಚ ಹ |
ಕಾರ್ತವೀರ್ಯಂ ಮಹಾವೀರ್ಯಂ ವಶೀಕೃತಮಹೀತಲಮ್ ||೮||

ವರಂ ವೃಣೀಷ್ವ ಗುಹ್ಯಂ ಮೇ ತ್ವಯಾ ನಾಮ ಯದೀರಿತಮ್ |
ತೇನ ತುಷ್ಟಿಃ ಪರಾ ಜಾತಾ ತ್ವಯ್ಯದ್ಯ ಮಮ ಪಾರ್ಥಿವ ||೯||

ಯೇ ಚ ಮಾಂ ಪೂಜಯಿಷ್ಯನ್ತಿ ಗನ್ಧಮಾಲ್ಯಾದಿಭಿರ್ನರಾಃ |
ಮಾಂಸಮದ್ಯೋಪಹಾರೈಶ್ಚ ಮೃಷ್ಟಾನ್ನೈಶ್ಚಾತ್ಮಸಮ್ಮತೈಃ ||೧೦||

ಕಾರ್ತವೀರ್ಯಾರ್ಜುನನು ಹೇಳಿದನು :—

೭. ತನ್ನದೇ ಆದ ಮಾಯೆಯನ್ನು ಅವಲಂಬಿಸಿರುವ ಪುರಾಣನಾದ ಪರಮಾತ್ಮನೇ ನೀನಾಗಿದ್ದೀಯೆ. ಆದ್ದರಿಂದ ನೀನು ನಿರ್ದುಷ್ಟನು. ಹಾಗೆಯೇ ಪ್ರಪಂಚದ ಉತ್ಪತ್ತಿಗೆ ಕಾರಣಳಾದ ದೇವಿಯೇ ಇವಳು.

೮. ಈ ರೀತಿಯಾಗಿ ನುಡಿಯಲ್ಪಟ್ಟು ಪ್ರೀತಿಪೂರ್ಣನಾದ ದತ್ತಾತ್ರೇಯಮುನಿಯು ವಶಗೊಳಿಸಿದ ಭೂಮಂಡಲವುಳ್ಳ, ಮಹಾವೀರ್ಯಸಂಪನ್ನನಾದ ಆ ಕಾರ್ತವೀರ್ಯ ರಾಜನನ್ನು ಕುರಿತು ಮತ್ತೆ ಹೇಳಿದನು.

೯. ರಾಜನೆ! ವರವನ್ನು ಕೇಳು; ಕೊಡುವೆನು. ಯಾವ ಕಾರಣದಿಂದ ನಿನ್ನಿಂದ ನನ್ನ ರಹಸ್ಯನಾಮವು ಕೀರ್ತಿಸಲ್ಪಟ್ಟಿತೊ; ಅದರಿಂದ ಇಂದು ನನಗೆ ನಿನ್ನಲ್ಲಿ ಹೆಚ್ಚಾದ ಪ್ರೀತಿಯು ಉಂಟಾಗಿರುವುದು.

೧೦. ಯಾವ ಮಾನವರು ಗಂಧ-ಮಾಲ್ಯ ಮುಂತಾದುವುಗಳಿಂದಲೂ, ಮಾಂಸ-ಮದ್ಯ ಮುಂತಾದ ಉಪಹಾರಗಳಿಂದಲೂ, ತಮಗೆ ಪ್ರೀತಿಯಾದ ಮೃಷ್ಟಾನ್ನದಿಂದಲೂ ನನ್ನನ್ನು ಪೂಜಿಸುವರೊ; ಅವರು ನನ್ನ ಪ್ರೀತಿಗೆ ಪಾತ್ರರಾಗುವರು.

ಲಕ್ಷ್ಮ್ಯಾ ಸಮೇತಂ ಗೀತೈಶ್ಚ ಬ್ರಾಹ್ಮಣಾನಾಂ ತಥಾರ್ಚನೈಃ ।
ವಾದ್ಯೈರ್ಮನೋರಮೈರ್ವೀಣಾವೇಣುಶಙ್ಖಾದಿಭಿಸ್ತಥಾ ॥೧೧॥

ತೇಷಾಮಹಂ ಪರಾಂ ಪುಷ್ಟಿಂ ಪುತ್ರದಾರಧನಾದಿಕೀಮ್ ।
ಪ್ರದಾಸ್ಯಾಮ್ಯವಧೂತಶ್ಚ ಹನಿಷ್ಯಾಮ್ಯವಮನ್ಯತಾಮ್ ॥೧೨॥

ಸ ತ್ವಂ ವರಯ ಭದ್ರಂ ಮೇ ವರಂ ಯಂ ಮನಸೇಚ್ಛಸಿ ।
ಪ್ರಸಾದಸುಮುಖಸ್ತೇಽಹಂ ಗುಹ್ಯನಾಮಪ್ರಕೀರ್ತನಾತ್ ॥೧೩॥

ಕಾರ್ತವೀರ್ಯ ಉವಾಚ :—

ಯದಿ ದೇವ ಪ್ರಸನ್ನಸ್ತ್ವಂ ತತ್ಪ್ರಯಚ್ಛರ್ಧಿಮುತ್ತಮಾಮ್ ।
ಯಥಾ ಪ್ರಜಾಂ ಪಾಲಯೇಯಂ ನ ಚಾಧರ್ಮಮವಾಪ್ನುಯಾಮ್
॥೧೪॥

---

೧೧. ಲಕ್ಷ್ಮೀದೇವಿಯಿಂದ ಕೂಡಿದ ನನ್ನನ್ನು ಸಂಗೀತಸೇವೆಯಿಂದಲೂ, ಬ್ರಾಹ್ಮಣ ಸತ್ಕಾರಗಳಿಂದಲೂ ಮತ್ತು ವೀಣೆ, ಕೊಳಲು, ಶಂಖ ಮುಂತಾದ ವಾದ್ಯಘೋಷಗಳಿಂದಲೂ ಸೇವೆ ಮಾಡುವವರಲ್ಲಿ ಹೆಚ್ಚಾದ ಪ್ರೀತಿಯನ್ನು ಇಡುವೆನು.

೧೨. ಹಾಗೆ ನನ್ನನ್ನು ಪೂಜಿಸುವ ಭಕ್ತರಿಗೆ ಪುತ್ರ-ಕಲತ್ರ ಧನ ಮುಂತಾದ ಅತಿಶಯವಾದ ಸಮೃದ್ಧಿಯನ್ನು ನಾನು ಕೊಡುವೆನು. ಹಾಗು ತಿರಸ್ಕರಿಸಲ್ಪಟ್ಟ ನಾನು ಅವಮಾನ ಮಾಡಿದವರನ್ನು ನಿಗ್ರಹಿಸುವೆನು.

೧೩. ಭಕ್ತನಾದ ನೀನು ಉತ್ತಮವಾದ ಯಾವ ವರವನ್ನು ಮನಸ್ಸಿನಲ್ಲಿ ಆಶಿಸುತ್ತಿರುವೆಯೊ ; ಅದನ್ನು ಕೇಳು. ನನ್ನ ರಹಸ್ಯನಾಮವನ್ನು ಕೀರ್ತನ ಮಾಡಿರುವುದರಿಂದ ನಿನ್ನಲ್ಲಿ ನಾನು ಅನುಗ್ರಹ ಮಾಡುವ ಸಂಕಲ್ಪವುಳ್ಳವನಾಗಿದ್ದೇನೆ.

ಕಾರ್ತವೀರ್ಯರಾಜನು ಹೇಳಿದನು :—

೧೪. ಸ್ವಾಮಿಯೆ ! ನೀನು ನನ್ನಲ್ಲಿ ಪ್ರಸನ್ನನಾಗಿರುವೆಯಾದರೆ ನಾನು ಎಂತಹ ಸಮೃದ್ಧಿಯಿಂದ ಪ್ರಜೆಗಳನ್ನು ಪಾಲಿಸಲು ಸಮರ್ಥನಾಗುವೆನೊ ; ಮತ್ತು ಅಧರ್ಮಕ್ಕೆ ಭಾಗಿಯಾಗಲಾರೆನೊ ; ಅಂತಹ ಉತ್ತಮ ಸಮೃದ್ಧಿಯನ್ನು ಅನುಗ್ರಹಿಸು.

ಪರಾನುಸ್ಮರಣಂ ಜ್ಞಾನಮಪ್ರತಿದ್ವನ್ದ್ವತಾಂ ರಣೇ ।
ಸಹಸ್ರಮಾಪ್ತುಮಿಚ್ಛಾಮಿ ಬಾಹೂನಾಂ ಲಘುತಾಗುಣಮ್ ॥೧೫॥

ಅಸಙ್ಗಾ ಗತಯಃ ಸನ್ತು ಶೈಲಾಕಾಶಾಮ್ಬುಭೂಮಿಷು ।
ಪಾತಾಲೇಷು ಚ ಸರ್ವೇಷು ವಧಶ್ಚಾಪ್ಯಧಿಕಾನ್ನರಾತ್ ॥೧೬॥

ತಥಾಮಾರ್ಗಪ್ರವೃತ್ತಸ್ಯ ಸನ್ತು ಸನ್ಮಾರ್ಗದೇಶಿಕಾಃ ।
ಸನ್ತು ಮೇಽತಿಥಯಃ ಶ್ಲಾಘ್ಯಾ ವಿತ್ತಂ ಚಾನ್ಯತ್ತಥಾಕ್ಷಯಮ್ ॥೧೭॥

ಅನಷ್ಟದ್ರವ್ಯತಾ ರಾಷ್ಟ್ರೇ ಮಮಾನುಸ್ಮರಣೇನ ಚ ।
ತ್ವಯಿ ಭಕ್ತಿಶ್ಚ ದೇವಾಸ್ತು ನಿತ್ಯಮವ್ಯಭಿಚಾರಿಣೀ ॥೧೮॥

---

೧೫. ಅದಕ್ಕಾಗಿ ಪರತತ್ತ್ವದ ಅನುಸಂಧಾನವು ತಪ್ಪದಂತಿರುವ ಜ್ಞಾನವನ್ನೂ, ಸಂಗ್ರಾಮದಲ್ಲಿ ಪ್ರತಿದ್ವಂದ್ವಿಯೆ ಇಲ್ಲದಿರುವಂತಹ ಶಕ್ತಿಯನ್ನೂ ಮತ್ತು ಲಘುತ್ವಗುಣದಿಂದ ಕೂಡಿದ ಸಹಸ್ರ ಬಾಹುಗಳನ್ನೂ ನನಗೆ ಕರುಣಿಸಬೇಕು.

೧೬. ಬೆಟ್ಟ, ಆಕಾಶ, ನೀರು, ಭೂಮಿ—ಇವುಗಳಲ್ಲಿಯೂ ಪಾತಾಳಲೋಕಗಳಲ್ಲಿಯೂ ಮತ್ತು ಎಲ್ಲೆಲ್ಲಿಯೂ ತಡೆಯಿಲ್ಲದ ಗಮನಶಕ್ತಿಯು ಉಂಟಾಗಲಿ. ಮತ್ತು ನನಗಿಂತಲೂ ಮಹಾತ್ಮನಾದ ವ್ಯಕ್ತಿಯಿಂದ ನನಗೆ ವಧವು ಸಂಭವಿಸಲಿ.

೧೭. ಹಾಗು ಅಮಾರ್ಗದಲ್ಲಿ ಪ್ರವರ್ತಿಸಿದ ನನಗೆ ಮಾರ್ಗೋಪದೇಶಕರು ದೊರೆಯಲಿ. ಶ್ಲಾಘ್ಯರಾದ ಅತಿಥಿ ಜನರು ಯಥೇಚ್ಛವಾಗಿ ಬರಲಿ. ಇನ್ನೂ ಇತರ ವಿಧವಾದ ವಿತ್ತವು ಅಕ್ಷಯವಾಗಿ ದೊರೆಯಲಿ.

೧೮. ಮತ್ತು ರಾಷ್ಟ್ರದಲ್ಲಿ ನನ್ನ ಸ್ಮರಣಮಾಡುವುದರಿಂದ ದ್ರವ್ಯನಾಶವಾಗದಂತೆ ಇರಲಿ. ಸ್ವಾಮಿಯೆ! ನಿನ್ನಲ್ಲಿ ಭಕ್ತಿಯೂ ಎಂದೆಂದೂ ತಪ್ಪದಂತೆ ಇರಲಿ.

ದತ್ತಾತ್ರೇಯ ಉವಾಚ :—

ಯ ಏತೇ ಕೀರ್ತಿತಾಃ ಸರ್ವೇ ತಾನ್ಸರ್ವಾನ್ ಸಮವಾಪ್ಸ್ಯಸಿ ।
ಮತ್ಪ್ರಸಾದಾತ್ಪ್ರಭವಿತಾ ಚಕ್ರವರ್ತಿತ್ವಮೈಶ್ವರಮ್ ॥೧೯॥

ಪುತ್ರ ಉವಾಚ :—

ಪ್ರಣಿಪತ್ಯ ತತಸ್ತಸ್ಮೈ ದತ್ತಾತ್ರೇಯಾಯ ಸೋಽರ್ಜುನಃ ।
ಆನೀಯ ಪ್ರಕೃತೀಃ ಸಮ್ಯಗಭಿಷೇಕಮಗೃಹ್ಣತ ॥೨೦॥

ಆಗತಾಶ್ಚಾಪಿ ಗನ್ಧರ್ವಾಸ್ತಥೈವಾಪ್ಸರಸಾಂ ಗಣಾಃ ।
ಋಷಯಶ್ಚ ವಸಿಷ್ಠಾದ್ಯಾ ಮೇರ್ವಾದ್ಯಾಃ ಪರ್ವತಾಸ್ತಥಾ ॥೨೧॥

ಗಙ್ಗಾದ್ಯಾಃ ಸರಿತಃ ಸರ್ವಾಃ ಸಮುದ್ರಾ ರತ್ನಸಮ್ಭವಾಃ ।
ಪ್ಲಕ್ಷಾದ್ಯಾಶ್ಚ ತಥಾ ವೃಕ್ಷಾ ದೇವಾ ವೈ ವಾಸವಾದಯಃ ॥೨೨॥

ದತ್ತಾತ್ರೇಯ ಮುನಿಯು ಹೇಳಿದನು :—

೧೯. ಪುತ್ರನೆ! ನಿನ್ನಿಂದ ಯಾವ ಫಲಗಳು ಕೀರ್ತಿಸಲ್ಪಟ್ಟಿರುವುವೊ; ನನ್ನ ಅನುಗ್ರಹದಿಂದ ಅವೆಲ್ಲವನ್ನೂ ನೀನು ಹೊಂದುತ್ತೀಯೆ. ಇಷ್ಟೇ ಅಲ್ಲ. ಸರ್ವನಿಯಾಮಕವಾದ ಚಕ್ರವರ್ತಿಪದವೂ ನಿನಗೆ ಲಭಿಸಲಿ.

ಪುತ್ರನು ಹೀಗೆಂದನು :—

೨೦. ತರುವಾಯ ಆ ಕಾರ್ತವೀರ್ಯಾರ್ಜುನನು ಆ ದತ್ತಾತ್ರೇಯ ಮುನಿಗೆ ನಮಸ್ಕಾರಮಾಡಿ ಎಲ್ಲ ಪ್ರಜೆಗಳನ್ನೂ ಬರಮಾಡಿಕೊಂಡು ಯಥಾ-ವಿಧಿಯಾಗಿ ರಾಜ್ಯಪಟ್ಟಾಭಿಷೇಕವನ್ನು ಅಂಗೀಕರಿಸಿದನು.

೨೧. ಕಾರ್ತವೀರ್ಯಾರ್ಜುನರಾಜನ ಪಟ್ಟಾಭಿಷೇಕಸಮಾರಂಭದಲ್ಲಿ ಗಂಧರ್ವರೂ, ಅಪ್ಸರಸ್ತ್ರೀಯರ ಗುಂಪುಗಳೂ, ವಸಿಷ್ಠ ಮುಂತಾದ ಮುನಿವರ್ಯರೂ ಮತ್ತು ಮೇರುಗಿರಿ ಮುಂತಾದ ಪರ್ವತಗಳೂ ಬಂದರು.

೨೨. ಮತ್ತು ಗಂಗೆ ಮುಂತಾದ ಪುಣ್ಯನದಿಗಳೂ, ರತ್ನಾಕರವೆನಿಸಿದ ಎಲ್ಲ ಸಮುದ್ರಗಳೂ, ಆಲ ಮುಂತಾದ ವೃಕ್ಷಗಳೂ, ಮತ್ತು ಇಂದ್ರನೇ ಆದಿಯಾಗಿ ಸಮಸ್ತ ದೇವತೆಗಳೂ ಸಮಾರಂಭಕ್ಕೆ ಬಂದರು.

ವಾಸುಕಿಪ್ರಮುಖಾ ನಾಗಾ ಅಭಿಷೇಕಾರ್ಥಮಾಗತಾಃ ।
ತಾರ್ಕ್ಷ್ಯಾದ್ಯಾಃ ಪಕ್ಷಿಣಶ್ಚೈವ ಪೌರಾ ಜಾನಪದಾಸ್ತಥಾ ॥೨೩॥

ಸಮ್ಭಾರಾಃ ಸಮ್ಭೃತಾಃ ಸರ್ವೇ ದತ್ತಾತ್ರೇಯಪ್ರಸಾದತಃ ॥೨೪॥

ಅಥ ಸಞ್ಜ್ವಾಲ್ಯ ತೈರ್ವಹ್ನಿಂ ದೇವೈರ್ಬ್ರಹ್ಮಾದಿಭಿಃ ಸಹ ।
ನಾರಾಯಣೇನಾಭಿಷಿಕ್ತೋ ದತ್ತಾತ್ರೇಯಸ್ವರೂಪಿಣಾ ॥೨೫॥

ಸಮುದ್ರೈಶ್ಚ ನದೀಭಿಶ್ಚ ಋಷಿಭಿಶ್ಚಾಭಿಷೇಚಿತಃ ।
ಆಘೋಷಯಾಮಾಸ ತದಾ ಸ್ಥಿತೋ ರಾಜ್ಯೇ ಸ ಹೈಹಯಃ ॥೨೬॥

ದತ್ತಾತ್ರೇಯಾತ್ಪರಾಮೃದ್ಧಿಮವಾಪ್ಯಾತಿಬಲಾನ್ವಿತಃ ॥೨೭॥

---

೨೩. ಹಾಗು ವಾಸುಕಿ ಮುಂತಾದ ನಾಗೇಂದ್ರರು, ಗರುಡ ಮುಂತಾದ ಪಕ್ಷಿಗಳು ಮತ್ತು ಸಮಸ್ತ ಪುರಜನಪದ ವಾಸಿಗಳು ಇವರೆಲ್ಲರೂ ಕಾರ್ತವೀರ್ಯಾರ್ಜುನರಾಜನ ಪಟ್ಟಾಭಿಷೇಕಸಮಯದಲ್ಲಿ ನೆರೆದರು.

೨೪. ಆಗ ಕಾರ್ತವೀರ್ಯಾರ್ಜುನನು ದತ್ತಾತ್ರೇಯಮುನಿಯ ಅನುಗ್ರಹಕ್ಕೆ ಪಾತ್ರನಾದುದರಿಂದ ಮುನಿಯ ಅನುಗ್ರಹಬಲದಿಂದ ಪಟ್ಟಾಭಿಷೇಕದ ಎಲ್ಲ ಸಂಭಾರಗಳು ಸಿದ್ಧವಾದುವು.

೨೫. ತರುವಾಯ ಬ್ರಹ್ಮನೇ ಮುಂತಾದ ಆ ದೇವತೆಗಳು ಅಗ್ನಿಯನ್ನು ಪ್ರಜ್ವಲನಮಾಡಿದರು. ಆಗ ದತ್ತಾತ್ರೇಯ ಮುನಿಯ ರೂಪದಿಂದಿರುವ ಶ್ರೀಮನ್ನಾರಾಯಣನಿಂದ ಕಾರ್ತವೀರ್ಯಾರ್ಜುನನು ಪಟ್ಟಾಭಿಷಿಕ್ತನಾದನು.

೨೬. ಅನಂತರ ಕ್ರಮವಾಗಿ ಸಮುದ್ರಗಳಿಂದಲೂ, ನದಿಗಳಿಂದಲೂ ಮತ್ತು ಋಷಿಗಳಿಂದಲೂ ಪಟ್ಟಾಭಿಷೇಕಮಾಡಲ್ಪಟ್ಟನು. ಆಗ ರಾಜ್ಯಸಿಹ್ಮಾಸನದಲ್ಲಿರುವ ಆ ಹೈಹಯರಾಜನು ರಾಜ್ಯದಲ್ಲಿ ಡಂಗುರ ಹೊಡೆಯಿಸಿದನು.

೨೭. ದತ್ತಾತ್ರೇಯಮುನಿಯ ಅನುಗ್ರಹದಿಂದ ಲಭಿಸಿದ ಉತ್ತಮ ಐಶ್ವರ್ಯ ಮತ್ತು ಅತಿಬಲದಿಂದ ಕೂಡಿದ ಕಾರ್ತವೀರ್ಯಾರ್ಜುನರಾಜನು ರಾಜ್ಯದಲ್ಲಿ ಘೋಷಣಮಾಡಿದನು.

ಅದ್ಯಪ್ರಭೃತಿ ಯಃ ಶಸ್ತ್ರಂ ಮಾಮೃತೇಽನ್ಯೋ ಗ್ರಹೀಷ್ಯತಿ ।
ಹನ್ತವ್ಯಃ ಸ ಮಯಾ ದಸ್ಯುಃ ಪರಹಿಂಸಾರತೋಽಪಿ ವಾ ॥೨೮॥

ಇತ್ಯಾಜ್ಞಪ್ತೇ ನ ತದ್ರಾಜ್ಯೇ ಕಶ್ಚಿದಾಯುಧಭೃನ್ನರಃ ।
ತಮೃತೇ ಪುರುಷವ್ಯಾಘ್ರಂ ಬಭೂವೋರುಪರಾಕ್ರಮಮ್ ॥೨೯॥

ಸ ಏವ ಗ್ರಾಮಪಾಲೋಽಭೂತ್ಪಶುಪಾಲಃ ಸ ಏವ ಚ ।
ಕ್ಷೇತ್ರಪಾಲಃ ಸ ಏವಾಸೀದ್ದ್ವಿತೀಯೋ ನ ಚ ರಕ್ಷಿತಾ ॥೩೦॥

ತಪಸ್ವಿನಾಂ ಪಾಲಯಿತಾ ಸಾರ್ಥಪಾಲಶ್ಚ ಸೋಽಭವತ್ ।
ದಸ್ಯುವ್ಯಾಲಾಗ್ನಿಶಸ್ತ್ರಾರಿಭಯೇಷ್ವಬ್ಧೌ ನಿಮಜ್ಜತಾಮ್ ॥೩೧॥

---

೨೮. ಇಂದಿನ ಮೊದಲುಗೊಂಡು ನನ್ನನ್ನು ಹೊರತು ಯಾವ ಮಾನವನು ಶಸ್ತ್ರವನ್ನು ಗ್ರಹಿಸುವನೊ; ಅಥವಾ ಪರಹಿಂಸೆಯಲ್ಲಿ ಅಭಿರುಚಿಯನ್ನು ಹೊಂದುವನೊ; ಅಂತಹ ಶತ್ರುವು ನನ್ನಿಂದ ವಧಿಸಲ್ಪಡುವನು.

೨೯. ಈ ರೀತಿಯಾಗಿ ಆಜ್ಞೆ ಮಾಡಲು ಅವನ ರಾಜ್ಯದಲ್ಲಿ ಅಪಾರವಾದ ಪರಾಕ್ರಮವುಳ್ಳವನೂ ಮತ್ತು ಏಕಮಾತ್ರವೀರನೂ ಆದ ರಾಜನೊಬ್ಬನನ್ನು ಬಿಟ್ಟು ಮತ್ತಾವ ಮನುಜನು ಶಸ್ತ್ರಧಾರಿಯಾಗಿರಲಿಲ್ಲ.

೩೦. ಹೀಗಿರಲು ಕಾರ್ತವೀರ್ಯಾರ್ಜುನರಾಜನೊಬ್ಬನೇ ಗ್ರಾಮಗಳನ್ನು ಪಾಲಿಸುವವನಾದನು. ಅವನೇ ಪಶುಪಾಲಕನೂ ಆಗಿದ್ದನು ಮತ್ತು ಅವನೇ ಕ್ಷೇತ್ರಗಳನ್ನು ಪಾಲಿಸುತ್ತಿದ್ದನು. ಅವನ ಹೊರತು ಬೇರೊಬ್ಬ ಪಾಲಕನು ಇರಲಿಲ್ಲ.

೩೧. ತಪಸ್ವಿಗಳಿಗೆ ಪಾಲಕನೂ, ವರ್ತಕರ ಗುಂಪಿಗೆ ರಕ್ಷಕನೂ, ಕಳ್ಳ-ಕಾಕರು, ದುಷ್ಟಪ್ರಾಣಿ, ಅಗ್ನಿ, ಶಸ್ತ್ರ, ಶತ್ರು ಇವುಗಳಿಂದ ಭಯಪಟ್ಟವರಿಗೆ ಶರಣನೂ ಮತ್ತು ಸಮುದ್ರದಲ್ಲಿ ಮುಳುಗುತ್ತಿರುವವರಿಗೆ ಉದ್ಧಾರಕನೂ ಅವನೇ ಆಗಿದ್ದನು.

ಅನ್ಯಾಸು ಚೈವ ಮಗ್ನಾನಾಮಾಪತ್ಸು ಪರವೀರಹಾ ।
ಸ ಏವ ಸಂಸ್ಮೃತಃ ಸದ್ಯಃ ಸಮುದ್ಧರ್ತಾಭವನ್ನೃಣಾಮ್ ॥೩೨॥

ಅನಷ್ಟದ್ರವ್ಯತಾ ಚಾಸೀತ್ತಸ್ಮಿಞ್ಶಾಸತಿ ಪಾರ್ಥಿವೇ ।
ತೇನೇಷ್ಟಂ ಬಹುಭಿರ್ಯಜ್ಞೈಃ ಸಮಾಪ್ತವರದಕ್ಷಿಣೈಃ ॥೩೩॥

ತಪಶ್ಚ ತಪ್ತಂ ಸುಮಹತ್ಸಙ್ಗ್ರಾಮೇ ವಾತಿಚೇಷ್ಟಿತಮ್ ।
ತಸ್ಯರ್ಧಿಮಹಿಮಾನಂ ಚ ದೃಷ್ಟ್ವಾ ಪ್ರಾಹಾಙ್ಗಿರಾ ಮುನಿಃ ॥೩೪॥

ನ ನೂನಂ ಕಾರ್ತವೀರ್ಯಸ್ಯ ಗತಿಂ ಯಾಸ್ಯನ್ತಿ ಪಾರ್ಥಿವಾಃ ।
ಯಜ್ಞೈರ್ದಾನೈಸ್ತಪೋಭಿರ್ವಾ ಸಙ್ಗ್ರಾಮೇ ಚಾತಿಚೇಷ್ಟಿತೈಃ॥೩೫॥

ದತ್ತಾತ್ರೇಯಾದ್ದಿನೇ ಯಸ್ಮಿನ್ಸಮ್ಪ್ರಾಪ್ತರ್ಧಿರ್ನರೇಶ್ವರಃ ।
ತಸ್ಮಿಂಸ್ತಸ್ಮಿನ್ದಿನೇ ಯಾಗಂ ದತ್ತಾತ್ರೇಯಸ್ಯ ಸೋಽಕರೋತ್ ॥೩೬॥

---

೩೨. ಇವಲ್ಲದೆ ಬೇರೆ ವಿಧವಾದ ಆಪತ್ತುಗಳಲ್ಲಿ ಮುಳುಗಿರುವ ಮಾನವರಿಗೂ ಶತ್ರುಗಳನ್ನು ಮರ್ದಿಸುವ ಕಾರ್ತವೀರ್ಯಾರ್ಜುನರಾಜನು ಸ್ಮರಿಸಿದ ಕೂಡಲೆ ಬಂದು ಉದ್ಧಾರಮಾಡುವವನಾದನು.

೩೩. ಕಾರ್ತವೀರ್ಯರಾಜನು ರಾಜ್ಯವಾಳುತ್ತಿರಲು ದ್ರವ್ಯವು ನಷ್ಟ-ವಾಗುತ್ತಿರಲಿಲ್ಲ. ಮತ್ತು ಸಂಪೂರ್ಣವಾಗಿ ಉತ್ತಮ ದಕ್ಷಿಣಾದಾನದಿಂದ ಕೂಡಿದ ಅನೇಕ ಯಜ್ಞಗಳನ್ನು ಆಚರಿಸಿದನು.

೩೪. ಮತ್ತು ಅವನಿಂದ ಮಹತ್ತಾದ ತಪಸ್ಸು ಮಾಡಲ್ಪಟ್ಟಿತು. ಹೀಗೆ ಅವನ ಅತಿಶಯವಾದ ಸಮೃದ್ಧಿಮಹಿಮೆಯನ್ನು ಕಂಡು ಅಂಗಿರಮುನಿಯು ಈ ರೀತಿಯಾಗಿ ಕೊಂಡಾಡಿದನು.

೩೫. ಇತರ ರಾಜರು ಯಾರೂ ಯಜ್ಞ-ದಾನ-ತಪಸ್ಸು ಮತ್ತು ಸಂಗ್ರಾಮದಲ್ಲಿ ತೋರಿಸುವ ವಿಕ್ರಮಕಾರ್ಯ ಇವುಗಳಿಂದ ಕಾರ್ತವೀರ್ಯಾ-ರ್ಜುನರಾಜನಿಗೆ ಸಮಾನವಾದ ಪದವನ್ನು ಹೊಂದುವುದಿಲ್ಲ.

೩೬. ಆ ರಾಜನು ಯಾವ ದಿನದಲ್ಲಿ ದತ್ತಾತ್ರೇಯಮುನಿಯಿಂದ ಸಮೃದ್ಧಿಯನ್ನು ಹೊಂದಿದವನಾದನೊ, ಅಂದಿನಿಂದ ಪ್ರತಿದಿನವೂ ದತ್ತಾತ್ರೇಯ ಮುನಿಯ ಪೂಜಾಸತ್ಕಾರವನ್ನು ಮಾಡಿದನು.

ತಥೈವ ಚ ಪ್ರಜಾಃ ಸರ್ವಾಸ್ತಸ್ಮಿನ್ನಹನಿ ಭೂಪತೇ ।
ತಸ್ಯರ್ಧಿಂ ಪರಮಾಂ ದೃಷ್ಟ್ವಾ ಯಾಗಂ ಚಕ್ರುಃ ಸಮಾಧಿನಾ ॥೩೭॥

ಇತ್ಯೇತತ್ತಸ್ಯ ಮಾಹಾತ್ಮ್ಯಂ ದತ್ತಾತ್ರೇಯಸ್ಯ ಧೀಮತಃ ।
ವಿಷ್ಣೋಶ್ಚರಾಚರಗುರೋರನನ್ತಸ್ಯ ಮಹಾತ್ಮನಃ ॥೩೮॥

ಪ್ರಾದುರ್ಭಾವಃ ಪುರಾಣೇಷು ಕಥ್ಯತೇ ಶಾರ್ಙ್ಗಧನ್ವನಃ ।
ಅನನ್ತಸ್ಯಾಪ್ರಮೇಯಸ್ಯ ಶಙ್ಖಚಕ್ರಗದಾಭೃತಃ ॥೩೯॥

ಏತಸ್ಯ ಪರಮಂ ರೂಪಂ ಯಶ್ಚಿನ್ತಯತಿ ಮಾನವಃ ।
ಸ ಸುಖೀ ಸ ಚ ಸಂಸಾರಾತ್ಸಮುತ್ತೀರ್ಣೋಽಚಿರಾದ್ಭವೇತ್ ॥೪೦॥

ಸದೈವ ವೈಷ್ಣವಾನಾಂ ಚ ಭಕ್ತ್ಯಾಹಂ ಸುಲಭೋಽಸ್ಮಿ ಭೋಃ ॥೪೧॥

---

೩೭. ರಾಜನೆ! ಆ ರಾಜನ ಸಮೃದ್ಧಿಯಾದ ಐಶ್ವರ್ಯವನ್ನು ಕಂಡು ಅವನ ಪ್ರಜೆಗಳೆಲ್ಲರೂ ಹಾಗೆಯೆ ಅಂದಿನಿಂದಲೆ ಭಕ್ತಿ-ಸಮಾಧಾನಗಳಿಂದ ಕೂಡಿ ದತ್ತಾತ್ರೇಯಮುನಿಯನ್ನು ಅರ್ಚಿಸಿದರು.

೩೮. ಚರಾಚರಪ್ರಪಂಚಕ್ಕೆ ಗುರುವೂ, ಅಂತವಿಲ್ಲದವನೂ, ಮಹಾತ್ಮನೂ ಮತ್ತು ವಿಷ್ಣುವಿನ ಅವತಾರಸ್ವರೂಪನೂ ಆದ ದತ್ತಾತ್ರೇಯಮುನಿಯ ಮಾಹಾತ್ಮ್ಯವು ಹೀಗೆ ವರ್ಣಿಸಲ್ಪಟ್ಟಿತು.

೩೯. ಈ ರೀತಿಯಾಗಿ ಅಂತವಿಲ್ಲದವನೂ, ಅಳೆಯಲಾಗದವನೂ, ಶಂಖ-ಚಕ್ರ-ಗದೆಗಳನ್ನು ಧರಿಸಿದವನೂ, ಮತ್ತು ಶಾರ್ಙ್ಗಬಿಲ್ಲನ್ನು ಧರಿಸಿದವನೂ ಆದ ಮಹಾವಿಷ್ಣುವಿನ ಅವತಾರ ಚರಿತ್ರೆಯು ಪುರಾಣಗಳಲ್ಲಿ ವರ್ಣಿಸಲ್ಪಡುವುದು.

೪೦. ಯಾವ ಮಾನವನು ವಿಷ್ಣುವಿನ ಉತ್ಕೃಷ್ಟವಾದ ಪರಮಾರ್ಥರೂಪವನ್ನು ಧ್ಯಾನಿಸುವನೊ, ಅವನು ಸುಖಭೋಗಿಯಾಗಿ ಕ್ಷಿಪ್ರದಲ್ಲಿ ಸಂಸಾರದುಃಖದಿಂದ ದಾಟಿದವನು ಆಗುವನು.

೪೧. ಎಲೈ ಮಾನವರೆ! ಯಾವಾಗಲೂ ವಿಷ್ಣುಭಕ್ತರಿಗೆ ಅವರ ಭಕ್ತಿಬಲದಿಂದ ನಾನು ಸುಲಭನಾಗಿರುವೆನು. ಪತ್ರ-ಪುಷ್ಪ-ಫಲಮಾತ್ರದಿಂದ ಪೂಜಿಸಲ್ಪಟ್ಟ ನಾನು ಭಕ್ತರಿಗೆ ಮುಕ್ತಿಯನ್ನು ಕೊಡುವೆನು.

ಪತ್ರಪುಷ್ಪಫಲೇನಾಹಂ ಪೂಜಿತೋ ಮೋಕ್ಷದೋಽಸ್ಮಿ ವೈ ।
ಇತ್ಯೇವಂ ಯಸ್ಯ ವೈ ವಾಚಸ್ತಂ ಕಥಂ ನಾಶ್ರಯೇಜ್ಜನಃ ॥೪೨॥

ಅಧರ್ಮಸ್ಯ ವಿನಾಶಾಯ ಧರ್ಮಾಧಾರಾರ್ಥಮೇವ ಚ ।
ಅನಾದಿನಿಧನೋ ದೇವಃ ಕರೋತಿ ಸ್ಥಿತಿಪಾಲನಮ್ ॥೪೩॥

ತಥೈವ ಜನ್ಮ ಚಾಖ್ಯಾತಮಾಲರ್ಕಂ ಕಥಯಾಮಿ ತೇ ॥೪೪॥

ಯಥಾ ಚ ಯೋಗಃ ಕಥಿತೋ ದತ್ತಾತ್ರೇಯೇಣ ತಸ್ಯ ವೈ ।
ಪಿತೃಭಕ್ತಸ್ಯ ರಾಜರ್ಷೇರಲರ್ಕಸ್ಯ ಮಹಾತ್ಮನಃ ॥೪೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದತ್ತಾತ್ರೇಯೋಪಾಖ್ಯಾನಂ ನಾಮ ಸಪ್ತದಶೋಽಧ್ಯಾಯಃ

---

೪೨. ಈ ವಿಧವಾಗಿ ಭಕ್ತರಲ್ಲಿ ಸತ್ಯಪ್ರತಿಜ್ಞೆಮಾಡಿದಂತೆ ವಿಷ್ಣು-ಪರಮಾತ್ಮನ ಮಾತುಗಳನ್ನು ಕೇಳಿರುವ ಜನರು ಅಂತಹ ವಿಷ್ಣುಪರಮಾತ್ಮನನ್ನು ಹೇಗೆತಾನೆ ಭಜಿಸದಿರುವರು ?

೪೩. ಉತ್ಪತ್ತಿ-ನಾಶಗಳಿಲ್ಲದ ವಿಷ್ಣುಪರಮಾತ್ಮನು ಅಧರ್ಮವನ್ನು ನಾಶಮಾಡುವುದಕ್ಕೂ ಹಾಗು ಧರ್ಮವನ್ನು ಪಾಲಿಸುವುದಕ್ಕೂ ಅವತಾರಮಾಡಿ ಬಂದು ಸ್ಥಿತಿ-ಪಾಲನಗಳನ್ನು ಮಾಡುತ್ತಿರುವನು.

೪೪. ಹೀಗೆ ದತ್ತಾತ್ರೇಯ ಉಪಾಖ್ಯಾನವನ್ನು ಹೇಳಿರುವ ಹಾಗೆ ಹಿಂದೆ ಹೇಳಿದ ಅಲರ್ಕನ ಜನ್ಮ ಮುಂತಾದ ಚರಿತ್ರೆಯನ್ನು ನಿನಗೆ ವರ್ಣಿಸುತ್ತೇನೆ. ಕೇಳು.

೪೫. ಮತ್ತು ಪಿತೃಭಕ್ತ, ರಾಜರ್ಷಿ, ಮಹಾತ್ಮನೆನಿಸಿಕೊಂಡಿರುವ ಅಲರ್ಕನಿಗೆ ದತ್ತಾತ್ರೇಯಮುನಿಯು ಯಾವ ರೀತಿಯಾಗಿ ಯೋಗವಿಧಾನವನ್ನು ಉಪದೇಶಿಸಿರುವನೊ, ಅದನ್ನೂ ಹೇಳುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾದಶೋಽಧ್ಯಾಯಃ

(ಗಾಲವಮುನೇಸ್ತನ್ಪೋರಕ್ಷಣಪ್ರಾರ್ಥನಾ)

ಪುತ್ರ ಉವಾಚ :—

ಪ್ರಾಗ್ಬಭೂವ ಮಹಾವೀರ್ಯಃ ಶತ್ರುಜಿನ್ನಾಮ ಪಾರ್ಥಿವಃ ।
ತುತೋಷ ಯಸ್ಯ ಯಜ್ಞೇಷು ಸೋಮಾಪ್ತ್ಯಾ ಪುರನ್ದರಃ ॥೧॥

ತಸ್ಯಾತ್ಮಜೋ ಮಹಾವೀರ್ಯೋ ಬಭೂವಾರಿವಿದಾರಣಃ ।
ನಾಮ್ನಾ ಋತಧ್ವಜಃ ಖ್ಯಾತಃ ಸರ್ವಲಕ್ಷಣಸಂಯುತಃ ॥೨॥

ಬುದ್ಧಿವಿಕ್ರಮಲಾವಣ್ಯೈರ್ಗುರುಶುಕ್ರಾಶ್ವಿನಾಂ ಸಮಃ ॥೩॥

ಹದಿನೆಂಟನೆಯ ಅಧ್ಯಾಯ

ಪುತ್ರನು ಇಂತೆಂದನು :—

೧. ಹಿಂದಿನ ಕಾಲದಲ್ಲಿ ಮಹಾವೀರ್ಯಸಂಪನ್ನನಾದ ಶತ್ರುಜಿತ್ ಎಂಬ ನಾಮಾಂಕನವುಳ್ಳ ಒಬ್ಬ ರಾಜನಿದ್ದನು. ಅವನು ಮಾಡಿರುವ ಯಜ್ಞ-ಗಳಲ್ಲಿ ಸೋಮರಸವನ್ನು ಭುಂಜಿಸಿ ದೇವೇಂದ್ರನು ತೃಪ್ತಿಪಟ್ಟಿರುವನು.

೨. ಶತ್ರುಜಿತ್ ರಾಜನಿಗೆ ಅಮಿತವಾದ ವೀರ್ಯಶಾಲಿಯೂ ಶತ್ರು-ವಿಧ್ವಂಸಕನೂ, ಸಕಲ ರಾಜಲಕ್ಷಣಗಳಿಂದ ಕೂಡಿದವನೂ ಮತ್ತು ಋತಧ್ವಜ ಎಂಬ ನಾಮಾಂಕನದ ಖ್ಯಾತಿಯನ್ನು ಗಳಿಸಿದವನೂ ಆದ ಪುತ್ರನಿದ್ದನು.

೩. ಮತ್ತು ಋತಧ್ವಜಕುಮಾರನು ಸದ್ಬುದ್ಧಿ-ವಿಕ್ರಮ-ಸೌಂದರ್ಯ ಈ ಗುಣಗಳ ವಿಷಯದಲ್ಲಿ ಕ್ರಮವಾಗಿ ಬೃಹಸ್ಪತಿ-ಶುಕ್ರ-ಅಶ್ವಿನೀದೇವತೆ ಇವರಂತೆ ಒಪ್ಪುವವನಾಗಿದ್ದನು.

ಸ ಸಮಾನವಯೋಬುದ್ಧಿಸತ್ತ್ವವಿಕ್ರಮಚೇಷ್ಟಿತೈಃ ।
ನೃಪಪುತ್ರೋ ನೃಪಸುತೈರ್ನಿತ್ಯಮಾಸ್ತೇ ಸಮಾವೃತಃ ||೪||

ಕದಾಚಿಚ್ಛಾಸ್ತ್ರಸದ್ಭಾವವಿವೇಕಕೃತನಿಶ್ಚಯಃ ।
ಕದಾಚಿತ್ಕಾವ್ಯಸಲ್ಲಾಪಗೀತನಾಟಕಸಂಭವೈಃ ||೫||

ತಥೈವಾಕ್ಷವಿನೋದೈಶ್ಚ ಶಸ್ತ್ರಾಸ್ತ್ರವಿನಯೇಷು ಚ ।
ಯೋಗ್ಯೋ ನಿಯುದ್ಧನಾಗಾಶ್ವಸ್ಯನ್ದನಾಭ್ಯಾಸತತ್ಪರಃ ||೬||

ರೇಮೇ ನೃಪೇನ್ದ್ರಪುತ್ರೋಽಸೌ ನರೇನ್ದ್ರತನಯೈರ್ವೃತಃ ।
ಯಥೈವ ಹಿ ದಿವಾ ತದ್ವದ್ರಾತ್ರಾವಪಿ ಮುದಾ ಯುತಃ ||೭||

ತೇಷಾಂ ತು ಕ್ರೀಡತಾಂ ತತ್ರ ದ್ವಿಜಭೂಪವಿಶಾಂ ಸುತಾಃ ।
ಸಮಾನವಯಸಃ ಪ್ರೀತ್ಯಾ ರನ್ತುಮಾಯಾನ್ತ್ಯನೇಕಶಃ ||೮||

---

೪. ಆ ರಾಜಪುತ್ರನು ತನಗೆ ಅನುರೂಪವಾದ ವಯಸ್ಸು, ಬುದ್ಧಿ, ಸಾತ್ವಿಕತೆ, ವಿಕ್ರಮ ಮತ್ತು ಸಾಧುವಾದ ನಡತೆ ಇವುಗಳಿಂದ ತುಲ್ಯರಾದ ಇತರ ರಾಜಕುಮಾರರೊಡನೆ ಸೇರಿಕೊಂಡಿದ್ದನು.

೫. ರಾಜಕುಮಾರನು ಒಂದು ಸಮಯದಲ್ಲಿ ಶಾಸ್ತ್ರದ ತತ್ತ್ವವನ್ನು ವಿವೇಚಿಸಿ ನಿರ್ಣಯವನ್ನು ಹೊಂದುತ್ತ ಇನ್ನೊಂದು ಸಮಯದಲ್ಲಿ ಕಾವ್ಯಾಲಾಪ-ಸಂಗೀತ-ನಾಟಕಗಳ ವ್ಯಾಸಂಗಮಾಡುತ್ತ ಕಾಲಕಳೆಯುವವನಾಗಿದ್ದನು.

೬. ಮತ್ತು ಯೋಗ್ಯನಾದ ಆ ರಾಜಪುತ್ರನು ಕೆಲವುವೇಳೆ ಅಕ್ಷಕ್ರೀಡೆಯ ವಿನೋದ, ಶಸ್ತ್ರ-ಅಸ್ತ್ರಗಳ ಶಿಕ್ಷಣಗಳಲ್ಲಿಯೂ ಮತ್ತೆ ಕೆಲವುವೇಳೆ ಬಾಹುಯುದ್ಧ-ಆನೆ, ಕುದುರೆ, ರಥಗಳಲ್ಲಿ ಸವಾರಿ ಇವುಗಳಲ್ಲಿಯೂ ಅಭ್ಯಾಸಪರನಾಗಿದ್ದನು.

೭. ಹೀಗೆ ಋತಧ್ವಜನು ಇತರ ರಾಜಕುಮಾರರೊಡನೆ ಹಗಲು ಹೊತ್ತಿನಲ್ಲಿ ಹೇಗೋ ಹಾಗೆಯೆ ರಾತ್ರಿಹೊತ್ತಿನಲ್ಲಿ ಕೂಡ ವಿವಿಧವಾದ ವಿನೋದ-ಗಳಿಂದ ಕೂಡಿ ರಮಿಸುತ್ತಿದ್ದನು.

೮. ಹೀಗೆ ರಾಜಪುತ್ರರು ಸೇರಿ ಆಟವಾಡುತ್ತಿರಲು ಅವರಿಗೆ ಸಮಾನ-ವಾದ ವಯಸ್ಸುಳ್ಳ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯರ ಕುಮಾರರನೇಕರು ಪ್ರೀತಿ-ಯಿಂದ ಆಟವಾಡಲು ಬರುತ್ತಿದ್ದರು.

ಕಸ್ಯಚಿತ್ತ್ವಥ ಕಾಲಸ್ಯ ನಾಗಲೋಕಾನ್ಮಹೀತಲಮ್ ।
ಕುಮಾರಾವಾಗತೌ ನಾಗೌ ಪುತ್ರಾವಶ್ವತರಸ್ಯ ತು ॥೯॥

ಬ್ರಹ್ಮರೂಪಪ್ರತಿಚ್ಛನ್ನೌ ತರುಣೌ ಪ್ರಿಯದರ್ಶನೌ ॥೧೦॥

ತೌ ತೈರ್ನೃಪಸುತೈಃ ಸಾರ್ಧಂ ತಥೈವಾನ್ಯೈರ್ದ್ವಿಜಾತ್ಮಜೈಃ ।
ವಿನೋದೈರ್ವಿವಿಧೈಸ್ತತ್ರ ತಸ್ಥತುಃ ಪ್ರೀತಿಸಂಯುತೌ ॥೧೧॥

ಸರ್ವೇ ಚ ತೇ ನೃಪಸುತಾಸ್ತೇ ಚ ಬ್ರಹ್ಮವಿಶಾಂ ಸುತಾಃ ।
ನಾಗರಾಜಾತ್ಮಜೌ ತೌ ಚ ಸ್ನಾನಸಂವಾಹನಾದಿಕಾಮ್ ॥೧೨॥

ವಸ್ತ್ರಗನ್ಧಾನ್ನಸಂಯುಕ್ತಾಂ ಚಕ್ರುರ್ಭೋಗಭುಜಿಕ್ರಿಯಾಮ್ ॥೧೩॥

---

೯. ಹೀಗೆ ಕೆಲವು ಕಾಲ ಕಳೆಯಲಾಗಿ ಅಶ್ವತರ ಎಂಬ ನಾಗನ ಪುತ್ರರಾದ ಇಬ್ಬರು ನಾಗರು ನಾಗಲೋಕದಿಂದ ಭೂಲೋಕಕ್ಕೆ ಬಂದು ರಾಜಕುಮಾರರೊಡನೆ ಸೇರಿದರು.

೧೦. ಆ ಇಬ್ಬರು ನಾಗರು ತರುಣರೂ ಪ್ರಿಯವಾದ ದರ್ಶನವುಳ್ಳವರೂ ಆಗಿದ್ದರಲ್ಲದೆ ಬ್ರಾಹ್ಮಣ ವೇಷದಿಂದ ಮರೆಮಾಚಿಕೊಂಡವರಾಗಿದ್ದುದರಿಂದ ಗುರ್ತಿಸುವಂತೆ ಇರಲಿಲ್ಲ.

೧೧. ಆ ಇಬ್ಬರು ನಾಗಕುಮಾರರು ರಾಜಪುತ್ರರು ಮತ್ತು ಇತರ ದ್ವಿಜಪುತ್ರರು ಇವರೊಡನೆ ಸೇರಿ ವಿವಿಧವಾದ ವಿನೋದಗಳಿಂದ ರಮಿಸುತ್ತ ಪ್ರೀತಿಪೂರ್ಣರಾಗಿ ಅಲ್ಲಿ ಇದ್ದರು.

೧೨. ಎಲ್ಲ ರಾಜಕುಮಾರರೂ, ಬ್ರಾಹ್ಮಣ-ವೈಶ್ಯಕುಮಾರರೂ ಮತ್ತು ಇಬ್ಬರು ನಾಗಕುಮಾರರೂ ಎಲ್ಲರೂ ಅಲ್ಲಿಯೇ ಸೇರಿ ಸ್ನಾನ-ಅಂಗಮರ್ದನ ಮುಂತಾದ ಭೋಗವನ್ನು ಭುಂಜಿಸಿದರು.

೧೩. ಮತ್ತು ವಸ್ತ್ರಧಾರಣ, ಸುಗಂಧಲೇಪನ, ಮಿಷ್ಟಾನ್ನ ಭೋಜನ-ಗಳಿಂದ ಕೂಡಿದ ಉತ್ತಮವಾದ ಭೋಗಸುಖವನ್ನು ಎಲ್ಲ ಕ್ರೀಡಾಪರರಾದ ಸಮಾನವಯಸ್ಸಿನ ಕುಮಾರರು ಸೇರಿ ಅನುಭವಿಸಿದರು.

ಅಹನ್ಯಹನ್ಯನುಪ್ರಾಪ್ತೌ ತೌ ಚ ನಾಗಕುಮಾರಕೌ ।
ಆಜಗ್ಮತುರ್ಮುದಾ ಯುಕ್ತೌ ಪ್ರೀತ್ಯಾ ಸೂನೋರ್ಮಹೀಪತೇಃ
॥೧೪॥

ಸ ಚ ತಾಭ್ಯಾಂ ನೃಪಸುತಃ ಪರಂ ನಿರ್ವಾಣಮಾಪ್ತವಾನ್ ।
ವಿನೋದೈರ್ವಿವಿಧೈರ್ಹಾಸ್ಯಸಂಲಾಪಾದಿಭಿರೇವ ಚ ॥೧೫॥

ವಿನಾ ತಾಭ್ಯಾಂ ನ ಬುಭುಜೇ ನ ಸಸ್ನೌ ನ ಪಪೌ ಮಧು ।
ನ ರೇಮೇ ಚ ನ ಜಗ್ರಾಹ ಶಾಸ್ತ್ರಾಣ್ಯಾತ್ಮಗುಣರ್ಧಯೇ ॥೧೬॥

ರಸಾತಲೇ ಚ ತೌ ರಾತ್ರಿಂ ವಿನಾ ತೇನ ಮಹಾತ್ಮನಾ ।
ನಿಃಶ್ವಾಸಪರಮೌ ನೀತ್ವಾ ಜಗ್ಮತುಸ್ತಂ ದಿನೇ ದಿನೇ ॥೧೭॥

---

೧೪. ಪ್ರತಿದಿನವೂ ಬೆಳಗಾದ ಕೂಡಲೆ ಆ ನಾಗಕುಮಾರರಿಬ್ಬರು ರಾಜಕುಮಾರನ ಪ್ರೀತಿಯಿಂದ ಆಕರ್ಷಿಸಲ್ಪಟ್ಟವರಾಗಿ ಸಂತೋಷದಿಂದ ಕೂಡಿ ನಾಗಲೋಕದಿಂದ ಭೂಲೋಕಕ್ಕೆ ಬರುತ್ತಿದ್ದರು.

೧೫. ಆ ಋತಧ್ವಜ ರಾಜಕುಮಾರನು ಇಬ್ಬರು ನಾಗಕುಮಾರರೊಡನೆ ವಿವಿಧವಾದ ವಿನೋದ-ಹಾಸ್ಯ-ಸಂಲಾಪ ಮುಂತಾದುವುಗಳನ್ನು ನಡೆಸುತ್ತ ಅತಿಶಯವಾದ ಆನಂದವನ್ನು ಹೊಂದಿದನು.

೧೬. ಹೀಗೆ ನಾಗುಕುಮಾರರಲ್ಲಿ ಉದ್ಭವಿಸಿದ ಸ್ನೇಹದಿಂದ ರಾಜ-ಕುಮಾರನು ನಾಗಕುಮಾರರಿಲ್ಲದೆ ಭೋಜನಮಾಡಲಿಲ್ಲ, ಸ್ನಾನಮಾಡಲಿಲ್ಲ, ಮದ್ಯಪಾನಮಾಡಲಿಲ್ಲ ಮತ್ತು ತನ್ನ ಗುಣಗಳನ್ನು ಹೆಚ್ಚಿಸಿಕೊಳ್ಳಲು ಶಾಸ್ತ್ರ-ಗ್ರಂಥಗಳನ್ನು ಪಠಿಸುತ್ತಿರಲಿಲ್ಲ.

೧೭. ನಾಗಕುಮಾರರು ಆ ಋತಧ್ವಜನನ್ನು ಅಗಲಿ ದುಃಖದಿಂದ ಹೆಚ್ಚಾಗಿ ಉಸಿರುಬಿಡುತ್ತ ಪಾತಾಲಲೋಕದಲ್ಲಿ ರಾತ್ರಿಯನ್ನು ಕಳೆದು ಹಗಲಾದ ಕೂಡಲೆ ರಾಜಪುತ್ರನ ಬಳಿಗೆ ಬರುತ್ತಿದ್ದರು.

ಮರ್ತ್ಯಲೋಕೇ ಪರಾ ಪ್ರೀತಿರ್ಭವತೋಃ ಕೇನ ಪುತ್ರಕೌ ।
ಸಹೇತಿ ಚ ಪ್ರಲಪಿತೌ ತಾವುಭೌ ನಾಗದಾರಕೌ ॥೧೮॥

ದೃಷ್ಟಯೋರತ್ರ ಪಾತಾಲೇ ಬಹೂನಿ ದಿವಸಾನಿ ಮೇ ।
ದಿವಾ ರಜನ್ಯಾಮೇವೋಭೌ ಪಶ್ಯಾಮಿ ಪ್ರಿಯದರ್ಶನೌ ॥೧೯॥

ಜಡ ಉವಾಚ :—

ಇತಿ ಪಿತ್ರಾ ಸ್ವಯಂ ಪೃಷ್ಟೌ ಪ್ರಣಿಪತ್ಯ ಕೃತಾಞ್ಜಲೀ ।
ಪ್ರತ್ಯೂಚತುರ್ಮಹಾಭಾಗಾವುರಗಾಧಿಪತೇಃ ಸುತೌ ॥೨೦॥

ಪುತ್ರಾವೂಚತುಃ :—

ಪುತ್ರಃ ಶತ್ರುಜಿತಸ್ತಾತ ನಾಮ್ನಾ ಖ್ಯಾತ ಋತಧ್ವಜಃ ।
ರೂಪವಾನಾರ್ಜವೋಪೇತಃ ಶೂರೋ ಮಾನೀ ಪ್ರಿಯಂವದಃ ॥೨೧॥

---

೧೮. ಹೀಗಿರಲು ಪುತ್ರರೆ! ನಿಮಗೆ ಮರ್ತ್ಯಲೋಕದಲ್ಲಿ ಪ್ರೀತಿಯು ಹೆಚ್ಚಾಗಿ ಉಂಟಾಗಲು ಏನು ಕಾರಣ? ಎಂದು ಆ ಇಬ್ಬರು ನಾಗಪುತ್ರರು ಜೊತೆಯಲ್ಲಿರುವಾಗ ಕೇಳಲ್ಪಟ್ಟರು.

೧೯. ಮತ್ತು ಈ ಪಾತಾಳಲೋಕದಲ್ಲಿ ಹಗಲುಹೊತ್ತಿನಲ್ಲಿ ನಿಮ್ಮನ್ನು ಕಾಣದೆ ಅನೇಕ ದಿನಗಳು ಕಳೆದುವು. ಪ್ರಿಯವಾದ ದರ್ಶನವುಳ್ಳ ನಿಮ್ಮಿಬ್ಬರನ್ನು ರಾತ್ರಿಯಲ್ಲಿ ಮಾತ್ರ ನೋಡುತ್ತಿದ್ದೇನೆ.

ಪುತ್ರನು ಇಂತೆಂದನು :—

೨೦. ಹೀಗೆಂದು ತಂದೆಯಿಂದ ತಾನಾಗಿ ಪ್ರಶ್ನಿಸಲ್ಪಟ್ಟ ಮಹಾಭಾಗ್ಯಶಾಲಿಗಳೂ ನಾಗರಾಜನ ಪುತ್ರರೂ ಆದ ಕುಮಾರರು ತಂದೆಗೆ ನಮಸ್ಕಾರಮಾಡಿ ಅಂಜಲಿಯನ್ನು ಕಟ್ಟಿಕೊಂಡು ಪ್ರತ್ಯುತ್ತರವನ್ನು ಹೇಳಿದರು.

ನಾಗಕುಮಾರರು ಹೇಳಿದರು :—

೨೧. ತಂದೆಯೆ! ಶತ್ರುಜಿತ್ ಎಂಬ ರಾಜನಿಗೆ ಋತಧ್ವಜ ಎಂಬ ಹೆಸರಿನಿಂದ ಪ್ರಖ್ಯಾತನಾದ ಪುತ್ರನು ಇರುವನು. ಆ ರಾಜಕುಮಾರನು ರೂಪವಂತನೂ ಸರಲಬುದ್ಧಿಯುಳ್ಳವನೂ, ಶೂರನೂ, ಮಾನಿಯೂ ಮತ್ತು ಪ್ರಿಯವಾಗಿ ಮಾತನಾಡುವವನೂ ಆಗಿದ್ದಾನೆ.

ಅನಾವೃತಕಥೋ ವಾಗ್ಮೀ ವಿದ್ವಾನ್ಮೈತ್ರೋ ಗುಣಾಕರಃ ।
ಮಾನ್ಯಮಾನಯಿತಾ ಧೀಮಾನ್ ಹ್ರೀಮಾನ್ವಿನಯಭೂಷಣಃ ॥೨೨॥

ತಸ್ಯೋಪಚಾರಸಮ್ಪ್ರೀತಿಸಮ್ಭೋಗಾಪಹೃತಂ ಮನಃ ।
ನಾಗಲೋಕೇಽನ್ಯಲೋಕೇ ವಾ ನ ರತಿಂ ವಿನ್ದತೇ ಪಿತಃ ॥೨೩॥

ತದ್ವಿಯೋಗೇನ ನೌ ತಾತ ನಿಶಾ ಪಾತಾಲಶೀತಲಾ ।
ಪರಿತಾಪಾಯ ತತ್ಸಙ್ಗಶ್ಚಾಹ್ಲಾದಾಯ ರವಿರ್ದಿವಾ ॥೨೪॥

ಪಿತೋವಾಚ :—

ಪುತ್ರಃ ಪುಣ್ಯವತೋ ಧನ್ಯಃ ಸ ಯಸ್ಯೈವಂ ಭವದ್ವಿಧೈಃ ।
ಪರೋಕ್ಷಸ್ಯಾಪಿ ಗುಣಿಭಿಃ ಕ್ರಿಯತೇ ಗುಣಕೀರ್ತನಮ್ ॥೨೫॥

---

೨೨. ಮತ್ತು ಆ ವ್ಯಕ್ತಿಯು ಏನೂ ಮರೆಮಾಚದ ಮಾತುಕಥೆಯುಳ್ಳವನೂ, ವಾಗ್ಮಿಯೂ, ವಿದ್ವಾಂಸನೂ, ಮೈತ್ರೀಪ್ರಿಯನೂ, ಗುಣಗಳಿಗೆ ನಿಧಿಯೂ, ಮಾನ್ಯರನ್ನು ಮಾನಿಸುವವನೂ, ಬುದ್ಧಿವಂತನೂ, ಲಜ್ಜಾವಂತನೂ ಮತ್ತು ವಿನಯದಿಂದ ಶೋಭಿಸುವವನೂ ಆಗಿರುವನು.

೨೩. ತಂದೆಯೆ ! ಆ ರಾಜಕುಮಾರನ ಉಪಚಾರ-ಪ್ರೀತಿ-ಸುಖಭೋಗಗಳಿಂದ ಆಕರ್ಷಿಸಲ್ಪಟ್ಟ ನಮ್ಮ ಮನಸ್ಸು ನಾಗಲೋಕದಲ್ಲಿಯೂ ಅಥವಾ ಇನ್ನಾವ ಲೋಕದಲ್ಲಿಯೂ ಪ್ರೀತಿಯನ್ನು ಹೊಂದುವುದಿಲ್ಲ.

೨೪. ಆ ರಾಜಕುಮಾರನ ವಿಯೋಗದಿಂದ ಪಾತಾಳದಲ್ಲಿ ಅತಿ ಶೀತಲವಾದ ರಾತ್ರಿಯು ನಮ್ಮನ್ನು ತಪಿಸುತ್ತಿದೆ. ಅವನ ಸಹವಾಸವಿರುವ ಹಗಲು ಹೊತ್ತಿನಲ್ಲಿ ಸೂರ್ಯನು ತಣ್ಣಗಿದ್ದು ನಮ್ಮನ್ನು ಸಂತೋಷಗೊಳಿಸುವವನಾಗಿದ್ದಾನೆ.

ತಂದೆಯು ಹೇಳಿದನು :—

೨೫. ನಿಮ್ಮಂತಹ ಗುಣವಂತರಿಂದ ಪರೋಕ್ಷದಲ್ಲಿರುವ ಯಾವ ರಾಜಕುಮಾರನ ಗುಣಪ್ರಶಂಸೆಯು ಹೀಗೆ ಮಾಡಲ್ಪಡುವುದೊ, ಪುಣ್ಯವಂತನಾದ ಜನಕನಿಂದ ಜನಿಸಿದ ಆ ಪುತ್ರನು ಧನ್ಯನು.

ಸನ್ತಿ ಶಾಸ್ತ್ರವಿದೋಽಶೀಲಾಃ ಸನ್ತಿ ಮೂರ್ಖಾಃ ಸುಶೀಲಿನಃ ।
ಶಾಸ್ತ್ರಶೀಲೇ ಸಮಂ ಮನ್ಯೇ ಯಸ್ಮಿನ್ಧನ್ಯತರಂ ತು ತಮ್ ॥೨೬॥

ಯಸ್ಯ ಮಿತ್ರಗುಣಾನ್ಮಿತ್ರಾಣ್ಯಮಿತ್ರಾಶ್ಚ ಪರಾಕ್ರಮಮ್ ।
ಕಥಯನ್ತಿ ಸದಾ ಸತ್ಸು ಪುತ್ರವಾಂಸ್ತೇನ ವೈ ಪಿತಾ ॥೨೭॥

ತಸ್ಯೋಪಕಾರಿಣಃ ಕಚ್ಚಿದ್ಭವದ್ಭ್ಯಾಮಭಿವಾಞ್ಛಿತಮ್ ।
ಕಿಂಚಿನ್ನಿಷ್ಪಾದಿತಂ ವತ್ಸೌ ಪರಿತೋಷಾಯ ಚೇತಸಃ ॥೨೮॥

ಸ ಧನ್ಯೋ ಜೀವಿತಂ ತಸ್ಯ ತಸ್ಯ ಜನ್ಮ ಸುಜನ್ಮನಃ ।
ಯಸ್ಯಾರ್ಥಿನೋ ನ ವಿಮುಖಾ ಮಿತ್ರಾರ್ಥೇ ನ ಚ ದುರ್ಬಲಃ॥೨೯॥

---

೨೬. ಶಾಸ್ತ್ರಾರ್ಥವೇತ್ತರಾದರೂ ಒಳ್ಳೆಯ ಶೀಲವಿಲ್ಲದವರು ಕೆಲವು ಮಂದಿ ಇರುವರು. ಹಾಗು ಶೀಲವಂತರಾಗಿದ್ದರೂ ಶಾಸ್ತ್ರಾರ್ಥವಿವೇಕವಿಲ್ಲದವರೂ ಇರುವರು. ಯಾರಲ್ಲಿ ಜ್ಞಾನ-ಶೀಲಗಳು ಎರಡೂ ಇರುತ್ತವೆಯೊ, ಅವನನ್ನು ಬಹಳ ಧನ್ಯನೆಂದು ನಾನು ಅರಿಯುವೆನು.

೨೭. ಮಿತ್ರರು ಯಾವ ವ್ಯಕ್ತಿಯಲ್ಲಿದ್ದ ಮಿತ್ರಗುಣಗಳನ್ನೂ ಶತ್ರುಗಳು ಯಾವ ವ್ಯಕ್ತಿಯಲ್ಲಿದ್ದ ಪರಾಕ್ರಮವನ್ನೂ ಸಜ್ಜನರಲ್ಲಿ ಯಾವಾಗಲೂ ವರ್ಣಿಸುವರೋ, ಅಂತಹ ವ್ಯಕ್ತಿಯಿಂದ ತಂದೆಯು ಸತ್ಪುತ್ರವಂತನಾಗುವನು.

೨೮. ಪುತ್ರರೆ! ಅಂತಹ ಉಪಕಾರಿಯಾದ ರಾಜಕುಮಾರನಿಗೆ ಯಾವುದಾದರೊಂದು ಇಷ್ಟವು ನಿಮ್ಮಿಂದ ನೆರವೇರಿಸಲ್ಪಟ್ಟರೆ ಆಗ ನನ್ನ ಮನಸ್ಸಿಗೆ ಸಂತೋಷಮಾಡಿದಂತಾಗುವುದು.

೨೯. ಯಾರ ಬಳಿಗೆ ಬಂದ ಅರ್ಥಿಗಳು ನಿರಾಶರಾಗಿ ಹೋಗುವುದಿಲ್ಲವೊ, ಯಾರು ಮಿತ್ರಕಾರ್ಯದಲ್ಲಿ ದುರ್ಬಲನಲ್ಲವೊ, ಅಂತಹ ಶ್ಲಾಘ್ಯಜನ್ಮವೆತ್ತಿದವನ ಜನ್ಮವು ಸಾರ್ಥಕವು. ಅವನೇ ಧನ್ಯನು.

ಮದ್ಗೃಹೇ ಯತ್ಸುವರ್ಣಾದಿ ರತ್ನವಾಹನಮಾಸನಮ್ ।
ಯದ್ವಾನ್ಯತ್ಪ್ರೀತಯೇ ತಸ್ಯ ತದ್ದೇಯಮವಿಶಙ್ಕಯಾ ॥೩೦॥

ಧಿಕ್ತಸ್ಯ ಜೀವಿತಂ ಪುಂಸೋ ಮಿತ್ರಾಣಾಮುಪಕಾರಿಣಃ ।
ಪ್ರತಿರೂಪಮಕುರ್ವನ್ನೋ ಜೀವಾಮೀತ್ಯವಗಚ್ಛತಿ ॥೩೧॥

ಉಪಕಾರಂ ಸುಹೃದ್ವರ್ಗೇಷ್ವಪಕಾರಂ ಚ ಶತ್ರುಷು ।
ನೃಮೇಘೋ ವರ್ಷತಿ ಪ್ರಾಜ್ಞಾಸ್ತಸ್ಯೇಚ್ಛನ್ತಿ ಸದೋನ್ನತಿಮ್॥೩೨॥

ಪುತ್ರಾವೂಚತುಃ :—

ಕಿಂ ತಸ್ಯ ಕೃತಕೃತ್ಯಸ್ಯ ಕರ್ತುಂ ಶಕ್ಯೇತ ಕೇನ ಚಿತ್ ।
ಯಸ್ಯ ಸರ್ವಾರ್ಥಿನೋ ಗೇಹೇ ಸರ್ವಕಾಮೈಃ ಸದಾರ್ಚಿತಾಃ ॥೩೩॥

---

೩೦. ನನ್ನ ಮನೆಯಲ್ಲಿರುವ ಸುವರ್ಣ, ರತ್ನ, ವಾಹನ, ಆಸನ ಇವುಗಳಲ್ಲಿ ಶ್ಲಾಘ್ಯವಾದುದು ಯಾವುದನ್ನಾದರೂ ಅಥವಾ ಮತ್ತಾವ ಅಮೂಲ್ಯ ವಸ್ತುವನ್ನಾದರೂ ಆ ರಾಜಕುಮಾರನ ಪ್ರೀತಿಗೆ ಏನೂ ಯೋಚಿಸದೆ ಕೊಡಬೇಕು.

೩೧. ಮಿತ್ರರಲ್ಲಿ ಅಪಕಾರವನ್ನು ಎಸಗುವ ಪುರುಷನ ಜೀವಿತಕ್ಕೆ ಧಿಕ್ಕಾರವು. ಯಾವನು ಮಿತ್ರನ ಉಪಕಾರಕ್ಕೆ ಅನುರೂಪವಾದ ಪ್ರತ್ಯುಪಕಾರವನ್ನು ಮಾಡಲಾಗದೆ " ನಾನು ಬದುಕುತ್ತೇನೆಂದು " ತಿಳಿದಿರುವನೊ ಅವನಿಗೆ ಧಿಕ್ಕಾರವು.

೩೨. ಯಾವ ಮಾನವರು ಮಿತ್ರವರ್ಗದಲ್ಲಿ ಉಪಕಾರವನ್ನೂ ಶತ್ರುಗಳಲ್ಲಿ ಅಪಕಾರವನ್ನೂ ಮಳೆಗರೆಯಬಲ್ಲನೊ ; ಮೇಘದಂತಿರುವ ಆ ಪುರುಷನಿಗೆ ಪ್ರಾಜ್ಞರು ಯಾವಾಗಲೂ ಉನ್ನತಿಯನ್ನು ಹಾರೈಸುತ್ತಾರೆ.

ಪುತ್ರರು ಹೇಳಿದರು :—

೩೩. ಯಾವ ರಾಜಕುಮಾರನ ಮನೆಯಲ್ಲಿ ಯಾವಾಗಲೂ ಅರ್ಥಿಗಳು ಅವರವರ ಸರ್ವಕಾಮಗಳಿಂದಲೂ ಸತ್ಕರಿಸಲ್ಪಡುತ್ತಿರುವರೊ, ಕೃತಕೃತ್ಯನಾಗಿರುವ ಅವನಿಗೆ ಯಾರಿಂದ ತಾನೆ ಏನು ಉಪಕಾರಮಾಡಲಾಗುವುದು.

ಯಾನಿ ರತ್ನಾನಿ ತದ್ಗೇಹೇ ಪಾತಾಲೇ ತಾನಿ ನಃ ಕುತಃ ।
ವಾಹನಾಸನಯಾನಾನಿ ಭೂಷಣಾನ್ಯಮ್ಬರಾಣಿ ಚ ॥೩೪॥

ವಿಜ್ಞಾನಂ ಯಚ್ಚ ತತ್ರಾಸ್ತಿ ತದನ್ಯತ್ರ ನ ವಿದ್ಯತೇ ।
ಪ್ರಾಜ್ಞಾನಾಮುಪ್ಯಸೌ ತಾತ ಸರ್ವಸನ್ದೇಹಹೃತ್ತಮಃ ॥೩೫॥

ಏಕಂ ತಸ್ಯಾಸ್ತಿ ಕರ್ತವ್ಯಮಸಾಧ್ಯಂ ತಚ್ಚ ನೋ ಮತಮ್ ।
ಹಿರಣ್ಯಗರ್ಭಗೋವಿನ್ದಶರ್ವಾದೀನಾಂ ವರಾದೃತೇ ॥೩೬॥

ಪಿತೋವಾಚ :—

ತಥಾಪಿ ಶ್ರೋತುಮಿಚ್ಛಾಮಿ ತಸ್ಯ ಯತ್ಕಾರ್ಯಮುತ್ತಮಮ್ ।
ಅಸಾಧ್ಯಮಥವಾ ಸಾಧ್ಯಂ ಕಿಂಚಾಸಾಧ್ಯಂ ವಿಪಶ್ಚಿತಾಮ್ ॥೩೭॥

---

೩೪. ಆ ರಾಜಪುತ್ರನ ಮನೆಯಲ್ಲಿ ರತ್ನ, ವಾಹನ, ಆಸನ, ಯಾನ, ಭೂಷಣ ಮತ್ತು ವಸ್ತ್ರ ಮುಂತಾದ ಯಾವ ಅಮೂಲ್ಯವಸ್ತುಗಳು ಹೇರಳವಾಗಿ ಇವೆಯೊ, ಅಂತಹ ವಸ್ತುಗಳು ನಮ್ಮ ಪಾತಾಳಲೋಕದಲ್ಲಿ ಎಲ್ಲಿವೆ ?

೩೫. ತಂದೆಯೆ ! ಮತ್ತು ಅಲ್ಲಿ ಯಾವ ಶಿಲ್ಪಕಲೆಯು ಇದೆಯೊ ಅದು ಬೇರೆ ಕಡೆಯಲ್ಲಿ ಇಲ್ಲ. ಈ ರಾಜಕುಮಾರನು ವಿದ್ಯಾವಂತರಿಗೆಲ್ಲ ಸರ್ವಸಂದೇಹ-ಗಳನ್ನು ನಿವಾರಣಮಾಡಬಲ್ಲ ಪ್ರಾಜ್ಞತಮನಾಗಿರುವನು.

೩೬. ಆದರೆ ಅವನಲ್ಲಿ ಕರ್ತವ್ಯವಾದ ಒಂದು ಉಪಕಾರವಿದೆ. ಅದು ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ದೇವತೆಗಳ ವರದಾನವಿಲ್ಲದೆ ನಮಗೆ ಅಸಾಧ್ಯವಾದುದೆಂದು ತೋರುವುದು.

ತಂದೆಯು ಹೇಳಿದನು :—

೩೭. ಆ ರಾಜಕುಮಾರನ ಉತ್ತಮವಾದ ಕರ್ತವ್ಯವು ಅಸಾಧ್ಯವೊ ಸಾಧ್ಯವೊ ಏನೇ ಆಗಿದ್ದರೂ ನಾನು ಅದನ್ನು ಕೇಳಲು ಇಷ್ಟಪಡುತ್ತೇನೆ. ಬುದ್ಧಿಶಾಲಿಗಳಿಗೆ ಅಸಾಧ್ಯವಾದುದು ಏನಿದೆ ?

ದೇವತ್ವಮಮರೇಶತ್ವಂ ತತ್ಪೂಜ್ಯತ್ವಂ ಚ ಮಾನವಾಃ ।
ಪ್ರಯಾನ್ತಿ ವಾಞ್ಛಿತಂ ಚಾನ್ಯದ್ದೃಢಂ ಯೇ ವ್ಯವಸಾಯಿನಃ ॥೩೮॥

ನಾವಿಜ್ಞಾತಂ ನ ಚಾಗಮ್ಯಂ ನಾಪ್ರಾಪ್ಯಂ ದಿವಿ ಚೇಹ ವಾ ।
ಉದ್ಯತಾನಾಂ ಮನುಷ್ಯಾಣಾಂ ಯತಚಿತ್ತೇನ್ದ್ರಿಯಾತ್ಮನಾಮ್ ॥೩೯॥

ಯೋಜನಾನಾಂ ಸಹಸ್ರಾಣಿ ಯಾತಿ ಗಚ್ಛನ್ ಪಿಪೀಲಿಕಃ ।
ಅಗಚ್ಛನ್ವೈನತೇಯೋಽಪಿ ಪದಮೇಕಂ ನ ಗಚ್ಛತಿ ॥೪೦॥

ಕ್ವ ಭೂತಲಂ ಕ್ವ ಚ ಧ್ರೌವ್ಯಂ ಸ್ಥಾನಂ ಯತ್ಪ್ರಾಪ್ತವಾನ್ಧ್ರುವಃ ।
ಉತ್ತಾನಪಾದನೃಪತೇಃ ಪುತ್ರಃ ಸನ್ಭೂಮಿಗೋಚರಃ ॥೪೧॥

ತತ್ಕಥ್ಯತಾಂ ಮಹಾಭಾಗೌ ಕಾರ್ಯಂ ವಾನ್ಯೇನ ಪುತ್ರಕೌ ।
ಸ ಭೂಪಾಲಸುತಃ ಸಾಧುರ್ಯೇನಾನೃಣ್ಯಂ ಲಭೇತ ವಾಮ್ ॥೪೨॥

---

೩೮. ದೃಢವಾದ ಉದ್ಯಮವುಳ್ಳ ಮಾನವರು ದೇವತ್ವವನ್ನೂ, ದೇವ-ರಾಜತ್ವವನ್ನೂ ಮತ್ತು ದೇವಪೂಜ್ಯತ್ವವನ್ನೂ ಹೊಂದುವರು. ಹಾಗು ಇತರ ಇಷ್ಟಫಲಗಳನ್ನೂ ಸಾಧಿಸುವರು.

೩೯. ಜಿತವಾದ ಚಿತ್ತ-ಇಂದ್ರಿಯ-ದೇಹಗಳುಳ್ಳ ಮತ್ತು ದೃಢ ಉದ್ಯಮಶಾಲಿಗಳಾದ ನರರಿಗೆ ತಿಳಿಯದಿರುವುದೂ, ಹೋಗಲು ಅಶಕ್ಯವೂ ಮತ್ತು ಹೊಂದಲು ಅಸಾಧ್ಯವೂ ಆದುದು ಇಲ್ಲ.

೪೦. ನಡೆಯುತ್ತಿದ್ದ ಇರುವೆಯು ಎಷ್ಟೋ ಸಹಸ್ರಯೋಜನಗಳನ್ನು ದಾಟಿ ನಡೆಯುತ್ತದೆ. ಹಾರದೆ ಕುಳಿತಿದ್ದರೆ ಗರುಡನು ಕೂಡ ಒಂದು ಹೆಜ್ಜೆಯಷ್ಟು ಮುಂದೆ ಹೋಗುವುದಿಲ್ಲ.

೪೧. ಉತ್ತಾನಪಾದರಾಜನ ಪುತ್ರನಾದ ಧ್ರುವಕುಮಾರನು ಭೂಮಿ-ವಾಸಿಯಾಗಿದ್ದರೂ ಯಾವ ಧ್ರುವಪದವನ್ನು ಹೊಂದಿದನೊ; ಅಂತಹ ಧ್ರುವ-ಪದವೆಲ್ಲಿ? ಭೂತಲವೆಲ್ಲಿ?

೪೨. ಮಹಾಭಾಗ್ಯಶಾಲಿಗಳಾದ ಪುತ್ರರೆ! ಋತಧ್ವಜನೆಂಬ ರಾಜ-ಕುಮಾರನು ಯಾವ ಉಪಕರ್ತವ್ಯವನ್ನು ಹೊಂದಿರುವನೊ; ಯಾವ ಉಪಕಾರದಿಂದ ನೀವಿಬ್ಬರು ಅವನಿಂದ ಆನೃಣ್ಯವನ್ನು ಹೊಂದಬಹುದೊ; ಅಂತಹ ಕರ್ತವ್ಯವು ಯಾವುದೆಂಬುದನ್ನು ಹೇಳಿರಿ.

ಪುತ್ರಾವೂಚತುಃ :—

ತೇನಾಖ್ಯಾತಮಿದಂ ತಾತ ಪೂರ್ವವೃತ್ತಂ ಮಹಾತ್ಮನಾ ।
ಕೌಮಾರಕೇ ಯಥಾ ತಸ್ಯ ವೃತ್ತಂ ಸದ್ವೃತ್ತಶಾಲಿನಃ ॥೪೩॥

ತಸ್ಯ ಶತ್ರುಜಿತಂ ತಾತಂ ಪೂರ್ವಂ ಕಶ್ಚಿದ್ದ್ವಿಜೋತ್ತಮಃ ।
ಗಾಲವೋಽಭ್ಯಾಗಮದ್ಧೀಮಾನ್ಗೃಹೀತ್ವಾ ತುರಗೋತ್ತಮಮ್॥೪೪॥

ಪ್ರತ್ಯುವಾಚ ಚ ರಾಜಾನಂ ಸಮುಪೇತ್ಯಾಶ್ರಮಂ ಮಮ ।
ಕೋಽಪಿ ದೈತ್ಯಾಧಮೋ ರಾಜನ್ವಿಧ್ವಂಸಯತಿ ಪಾಪಕೃತ್ ॥೪೫॥

ತತ್ತದ್ರೂಪಂ ಸಮಾಸ್ಥಾಯ ಸಿಹ್ಮೇಭವನಚಾರಿಣಾಮ್ ।
ಅನ್ಯೇಷಾಂ ಚಾತಿಕಾಯಾನಾಮಹರ್ನಿಶಮಕಾರಣಾತ್ ॥೪೬॥

ಪುತ್ರರು ಹೀಗೆಂದರು :—

೪೩. ತಂದೆಯೆ ! ಉತ್ತಮವಾದ ನಡತೆಯಿಂದ ಶೋಭಿಸುವ ಆ ರಾಜ-ಕುಮಾರನ ಕುಮಾರಾವಸ್ಥೆಯಲ್ಲಿ ಏನು ನಡೆದಿತ್ತೋ, ಅಂತಹ ಪೂರ್ವಚರಿತ್ರೆಯು ಆ ಮಹಾತ್ಮನಿಂದ ಈ ರೀತಿಯಾಗಿ ಹೇಳಲ್ಪಟ್ಟಿತು.

೪೪. ಪೂರ್ವಕಾಲದಲ್ಲಿ ಶತ್ರುಜಿತ್ತನೆಂಬ ಅವನ ತಂದೆಯ ಬಳಿಗೆ ಮೇಧಾವಿಯಾದ ಗಾಲವನೆಂಬ ಒಬ್ಬ ದ್ವಿಜೋತ್ತಮನು ಒಂದು ಕುದುರೆಯನ್ನು ಜೊತೆಯಲ್ಲಿ ತೆಗೆದುಕೊಂಡು ಬಂದನು.

೪೫. ಮತ್ತು ರಾಜನಲ್ಲಿ ಈ ರೀತಿಯಾಗಿ ಮಾತನಾಡಿದನು :—ರಾಜನೆ! ಪಾಪಿಷ್ಠನಾದ ಯಾವನೊ ಒಬ್ಬ ರಾಕ್ಷಸಾಧಮನು ಬಂದು ನನ್ನ ಆಶ್ರಮವನ್ನು ಧ್ವಂಸಗೊಳಿಸುತ್ತಿರುವನು.

೪೬. ಆ ರಾಕ್ಷಸನು ಸಿಹ್ಮ-ಆನೆ-ಇವುಗಳ ಮತ್ತು ಇತರ ದೊಡ್ಡ ಆಕಾರದ ದೇಹವುಳ್ಳ ಭಯಂಕರ ವನಚರಪ್ರಾಣಿಗಳ ಆಯಾಯ ರೂಪವನ್ನು ತೆಗೆದುಕೊಂಡು ಹಗಲು-ರಾತ್ರಿಗಳಲ್ಲಿ ನಿಷ್ಕಾರಣವಾಗಿ ಪೀಡೆಯನ್ನು ಕೊಡುವನು.

ಸಮಾಧಿಧ್ಯಾನಯುಕ್ತಸ್ಯ ಮೌನವ್ರತರತಸ್ಯ ಚ ।
ತಥಾ ಕರೋತಿ ವಿಘ್ನಾನಿ ಯಥಾ ನೇಚ್ಛಾಮಿ ಪಾರ್ಥಿವ ॥೪೭॥

ದಗ್ಧುಂ ಕೋಪಾಗ್ನಿನಾ ಸದ್ಯಃ ಸಮರ್ಥಾಸ್ತಂ ವಯಂ ನ ತು ।
ದುಃಖಾರ್ಜಿತಸ್ಯ ತಪಸೋ ವ್ಯಯಮಿಚ್ಛಾಮ ಪಾರ್ಥಿವ ॥೪೮॥

ಏಕದಾ ತು ಮಯಾ ರಾಜನ್ನತಿನಿರ್ವಿಣ್ಣಚೇತಸಾ ।
ತತ್ಕ್ಲೇಶಿತೇನ ನಿಶ್ವಾಸೋ ನಿರೀಕ್ಷ್ಯಾಮ್ಬರಮುಜ್ಝಿತಃ ॥೪೯॥

ತತೋಽಮ್ಬರತಲಾತ್ಸದ್ಯಃ ಪತಿತೋಽಯಂ ತುರಙ್ಗಮಃ ।
ವಾಕ್ಚಾಶರೀರಿಣೀ ಪ್ರಾಹ ನರನಾಥ ಶೃಣುಷ್ವ ತತ್ ॥೫೦॥

ಅಶ್ರಾನ್ತಃ ಸಕಲಂ ಭೂಮೇರ್ವಲಯಂ ತುರಗೋತ್ತಮಃ ।
ಸಮರ್ಥಃ ಕ್ರಾನ್ತುಮರ್ಕೇಣ ತವಾಯಂ ಪ್ರತಿಪಾದಿತಃ ॥೫೧॥

---

೪೭. ರಾಜನೆ! ಧ್ಯಾನ-ಸಮಾಧಿಗಳಲ್ಲಿ ಆಸಕ್ತನಾಗಿರುವಾಗಲೂ ಮೌನವ್ರತಾಚರಣೆಯಲ್ಲಿರುವಾಗಲೂ ನನಗೆ ಒದಗಬಾರದೆಂದಿರುವಂತಹ ವಿಘ್ನಗಳನ್ನು ಉಂಟುಮಾಡುವನು.

೪೮. ಪಾರ್ಥಿವನೆ! ಆದರೆ ನಾವು ಕೋಪಾಗ್ನಿಯಿಂದ ಕೂಡಲೆ ಅವನನ್ನು ಸುಟ್ಟುಹಾಕಲು ಶಕ್ತರಾಗಿದ್ದೇವೆ. ಹಾಗಿದ್ದರೂ ದುಃಖದಿಂದ ಆರ್ಜಿಸಿರುವ ತಪಸ್ಸನ್ನು ವ್ಯಯಮಾಡಲು ನಾವು ಇಷ್ಟಪಡುವುದಿಲ್ಲ.

೪೯. ರಾಜನೆ! ಒಂದು ಸಮಯದಲ್ಲಿ ಆ ರಾಕ್ಷಸನಿಂದ ಕ್ಲೇಶಗೊಳಿಸಲ್ಪಟ್ಟು ಬಹಳ ಬೇಸರಗೊಂಡ ಮನಸ್ಸುಳ್ಳ ನನ್ನಿಂದ ಆಕಾಶದ ಕಡೆಗೆ ನೋಡುತ್ತ ನಿಶ್ವಾಸವು ಬಿಡಲ್ಪಟ್ಟಿತು.

೫೦. ನರಪತಿಯೆ! ತರುವಾಯ ಈ ಕುದುರೆಯು ಆಕಾಶದಿಂದ ಕೂಡಲೆ ಕೆಳಗೆ ಬಿತ್ತು. ಅದೇ ಸಮಯದಲ್ಲಿ ಆಕಾಶವಾಣಿಯು ನುಡಿಯಿತು. ಅದನ್ನು ಕೇಳು.

೫೧. ಈ ಅಶ್ವರತ್ನವು ಶ್ರಮವಿಲ್ಲದ ಹಾಗೆ ಎಲ್ಲ ಅಖಂಡ ಭೂಮಂಡಲವನ್ನು ಸಂಚರಿಸಲು ಸಮರ್ಥವಾಗಿದೆ. ಈ ಕುದುರೆಯು ಸೂರ್ಯದೇವನಿಂದ ನಿನಗೆ ಅರ್ಪಿಸಲ್ಪಟ್ಟಿದೆ.

ಪಾತಾಲಾಮ್ಬರತೋಯೇಷು ನಾಸ್ಯ ಪ್ರತಿಹತಾ ಗತಿಃ ।
ಸಮಸ್ತದಿಕ್ಷು ವ್ರಜತೋ ನ ಸಙ್ಗಃ ಪರ್ವತೇಷು ಚ ॥೫೨॥

ಯತೋ ಭೂವಲಯಂ ಸರ್ವಮಶ್ರಾನ್ತೋಽಯಂ ಚರಿಷ್ಯತಿ ।
ತತಃ ಕುವಲಯೋ ನಾಮ್ನಾ ಖ್ಯಾತಿಂ ಲೋಕೇಷು ಯಾಸ್ಯತಿ ॥೫೩॥

ಕ್ಲಿಶ್ನಾತ್ಯಹರ್ನಿಶಂ ಪಾಪೋ ಯಶ್ಚ ತ್ವಾಂ ದಾನವಾಧಮಃ ।
ತಮಪ್ಯೇನಂ ಸಮಾರುಹ್ಯ ದ್ವಿಜಶ್ರೇಷ್ಠ ಹನಿಷ್ಯತಿ ॥೫೪॥

ಶತ್ರುಜಿನ್ನಾಮ ಭೂಪಾಲಸ್ತಸ್ಯ ಪುತ್ರ ಋತಧ್ವಜಃ ।
ಪ್ರಾಪ್ಯೈತದಶ್ವರತ್ನಂ ಚ ಖ್ಯಾತಿಮೇತೇನ ಯಾಸ್ಯತಿ ॥೫೫॥

---

೫೨. ಪಾತಾಳ, ಆಕಾಶ, ನೀರು ಇವುಗಳಲ್ಲಿ ಕೂಡ ಈ ಕುದುರೆಯ ಗಮನವು ತಡೆಯಲ್ಪಡುವುದಿಲ್ಲ. ಹಾಗು ಸಮಸ್ತ ದಿಕ್ಕುಗಳಲ್ಲಿಯೂ ಮತ್ತು ಪರ್ವತಗಳಲ್ಲಿಯೂ ಇದರ ಗತಿಗೆ ಭಂಗವಿಲ್ಲ.

೫೩. ಯಾವ ಕಾರಣದಿಂದ ಈ ಕುದುರೆಯು ಶ್ರಮವಿಲ್ಲದ ಹಾಗೆ ಎಲ್ಲ ಭೂಮಂಡಲವನ್ನು ಸಂಚಾರಮಾಡಬಲ್ಲುದೊ, ಅದರಿಂದ ಈ ಕುದುರೆಯು ಲೋಕದಲ್ಲಿ ಕುವಲಯ (ಕು=ಭೂಮಿ, ವಲಯ=ಮಂಡಲ) ಎಂಬ ಹೆಸರಿನಿಂದ ಖ್ಯಾತಿಯನ್ನು ಗಳಿಸುತ್ತದೆ.

೫೪. ದ್ವಿಜೋತ್ತಮನೆ! ಪಾಪಿಯಾದ ಯಾವ ರಾಕ್ಷಸಾಧಮನು ಹಗಲಿರುಳೂ ನಿನ್ನನ್ನು ಕ್ಲೇಶಪಡಿಸುತ್ತಿರುವನೊ, ಆ ರಾಕ್ಷಸನನ್ನು ಈ ಕುದುರೆಯನ್ನೇರಿಕೊಂಡು ವಧಿಸುವನು.

೫೫. ಶತ್ರುಜಿತರಾಜನ ಪುತ್ರನಾದ ಋತಧ್ವಜನು ರಾಕ್ಷಸಾಧಮನಿಗೆ ಘಾತಕನಾಗುವನು. ಮತ್ತು ಅವನು ಅಶ್ವರತ್ನವನ್ನು ಹೊಂದಿ ಇದರಿಂದಲೆ ಜಗತ್ತಿನಲ್ಲಿ ಖ್ಯಾತಿಯನ್ನು ಪಡೆಯುವನು.

ಸೋಽಹಂ ತ್ವಾಮನುಸಮ್ಪ್ರಾಪ್ತಸ್ತಪಸೋ ವಿಘ್ನಕಾರಿಣಮ್ ।
ತಂ ನಿವಾರಯ ಭೂಪಾಲ ಫಲಭಾಙ್ನೃಪತಿರ್ಯತಃ ॥೫೬॥

ತದೇತದಶ್ವರತ್ನಂ ತೇ ಮಯಾ ಭೂಪ ನಿವೇದಿತಮ್ ।
ಪುತ್ರಮಾಜ್ಞಾಪಯ ತಥಾ ಯಥಾ ಧರ್ಮೋ ನ ಲುಪ್ಯತೇ ॥೫೭॥

ಸ ತಸ್ಯ ವಚನಾದ್ರಾಜಾ ತಂ ವೈ ಪುತ್ರಮೃತಧ್ವಜಮ್ ।
ತದಶ್ವರತ್ನಮಾರೋಪ್ಯ ಕೃತಕೌತುಕಮಙ್ಗಲಮ್ ॥೫೮॥

ಅಪ್ರೈಷಯತ ಧರ್ಮಾತ್ಮಾ ಗಾಲವೇನ ಸಮಂ ತದಾ ।
ಸ್ವಮಾಶ್ರಮಪದಂ ಸೋಽಪಿ ತಮಾದಾಯ ಯಯೌ ಮುನಿಃ ॥೫೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಕುವಲಯಾಶ್ವಚರಿತೇ
ಗಾಲವ ಮುನಿಪ್ರಾರ್ಥನಾ ನಾಮ ಅಷ್ಟಾದಶೋಽಧ್ಯಾಯಃ

---

೫೬. ಹೀಗೆ ಆಕಾಶವಾಣಿಯನ್ನು ಕೇಳಿದ ನಾನು ಹಾಗೆಯೆ ನಿನ್ನ ಬಳಿಗೆ ಬಂದಿದ್ದೇನೆ. ರಾಜನೆ! ತಪಸ್ಸಿಗೆ ವಿಘ್ನಮಾಡುತ್ತಿರುವ ಆ ರಾಕ್ಷಸನನ್ನು ನಿವಾರಣಮಾಡು. ಹೀಗೆ ತಪಸ್ವಿಗಳನ್ನು ರಕ್ಷಿಸುವ ರಾಜನು ಧರ್ಮದಲ್ಲಿ ಭಾಗವನ್ನು ಗ್ರಹಿಸುವನಲ್ಲವೆ.

೫೭. ಭೂಪತಿಯೆ! ಅಂತಹ ಈ ಅಶ್ವರತ್ನವನ್ನು ನಾನು ನಿನ್ನಲ್ಲಿ ಅರ್ಪಿಸಿರುವೆನು. ಯಾವ ಬಗೆಯಿಂದ ನಮ್ಮ ಧರ್ಮಕ್ಕೆ ಲೋಪವಾಗಲಾರದೊ ಅದರಂತೆ ಮಾಡಿಕೊಡಲು ನೀನು ಪುತ್ರನಿಗೆ ಆಜ್ಞಾಪಿಸು.

೫೮. ಶತ್ರುಜಿದ್ರಾಜನು ಗಾಲವಬ್ರಾಹ್ಮಣನ ಮಾತಿನಂತೆ ತನ್ನ ಪುತ್ರನಾದ ಋತಧ್ವಜನಿಗೆ ಕೌತುಕಸೂತ್ರಬಂಧನ ಮುಂತಾದ ಮಂಗಳ-ಕರ್ಮವನ್ನು ನಡೆಯಿಸಿ ಆ ಅಶ್ವರತ್ನವನ್ನು ಏರಿಸಿ ಕಳುಹಿಸಿದನು.

೫೯. ಧರ್ಮಾತ್ಮನಾದ ರಾಜನು ಹಾಗೆ ತನ್ನ ಪುತ್ರನನ್ನು ಗಾಲವ-ನೊಡನೆ ಕಳುಹಿಸಿಕೊಟ್ಟನು. ಆಗ ಗಾಲವಮುನಿಯು ಅವನನ್ನು ಕರೆದು-ಕೊಂಡು ತನ್ನ ಆಶ್ರಮಕ್ಕೆ ತೆರಳಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಹದಿನೆಂಟನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನವಿಂಶತಿತಮೋಽಧ್ಯಾಯಃ

(ಕುವಲಯಾಶ್ವಸ್ಯ ಮದಾಲಸಾಪ್ರಾಪ್ತಿಃ)

ಪಿತೋವಾಚ :—

ಗಾಲವೇನ ಸಮಂ ಗತ್ವಾ ನೃಪಪುತ್ರೇಣ ತೇನ ಯತ್ ।
ಕೃತಂ ತತ್ಕಥ್ಯತಾಂ ಪುತ್ರೌ ವಿಚಿತ್ರಾಯುಧಯೋಧಿನಾ ||೧||

ಪುತ್ರಾವೂಚತುಃ :—

ಸ ಗಾಲವಾಶ್ರಮೇ ರಮ್ಯೇ ತಿಷ್ಠನ್ಭೂಪಾಲನನ್ದನಃ ।
ಸರ್ವವಿಘ್ನೋಪಶಮನಂ ಚಕಾರ ಬ್ರಹ್ಮವಾದಿನಾಮ್ ||೨||

ಹತ್ತೊಂಭತ್ತನೆಯ ಅಧ್ಯಾಯ

ತಂದೆಯು ಹೇಳಿದನು :—

೧. ಪುತ್ರರೆ! ವಿಚಿತ್ರವಾದ ಆಯುಧಗಳಿಂದ ಯುದ್ಧಮಾಡಲು ಬಲ್ಲ ಆ ರಾಜಪುತ್ರನು ಗಾಲವಮುನಿಯೊಂದಿಗೆ ಹೋಗಿ ಮುಂದೆ ಏನು ಮಾಡಿದನೊ ಅವನ್ನು ನನಗೆ ಹೇಳಿರಿ.

ಪುತ್ರರು ಇಂತೆಂದರು :—

೨. ಆ ರಾಜಕುಮಾರನು ರಮಣೀಯವಾದ ಗಾಲವಮುನಿಯ ಆಶ್ರಮದಲ್ಲಿ ಇದ್ದು ಬ್ರಹ್ಮವಾದಿಗಳಾದ ಅನೇಕ ತಪಸ್ವಿಗಳಿಗೆ ಎಲ್ಲ ವಿಘ್ನಗಳ ಶಮನವನ್ನು ಮಾಡುತ್ತಿದ್ದನು.

ವೀರಃ ಕುವಲಯಾಶ್ವಂ ತಂ ವಸನ್ತಂ ಗಾಲವಾಶ್ರಮೇ ।
ಮದಾವಲೇಪೋಪಹತೋ ನಾಜಾನಾದ್ದಾನವಾಧಮಃ ॥೩॥

ತತಸ್ತಂ ಗಾಲವಂ ವಿಪ್ರಂ ಸನ್ಧ್ಯೋಪಾಸನತತ್ಪರಮ್ ।
ಸೌಕರಂ ರೂಪಮಾಸ್ಥಾಯ ಪ್ರಧರ್ಷಯಿತುಮಾಗಮತ್ ॥೪॥

ಮುನಿಶಿಷ್ಯೈರಥೋತ್ಕ್ರುಷ್ಟೇ ಶೀಘ್ರಮಾರುಹ್ಯ ತಂ ಹಯಮ್ ।
ಅನ್ವಧಾವದ್ವರಾಹಂ ತಂ ನೃಪಪುತ್ರಃ ಶರಾಸನೀ ॥೫॥

ಆಜಘಾನ ಚ ಬಾಣೇನ ಚನ್ದ್ರಾರ್ಧಾಕಾರವರ್ಚಸಾ ।
ಆಕೃಷ್ಯ ಬಲವಚ್ಚಾಪಂ ಚಾರುಚಿತ್ರೋಪಶೋಭಿತಮ್ ॥೬॥

ನಾರಾಚಾಭಿಹತಃ ಶೀಘ್ರಮಾತ್ಮತ್ರಾಣಪರೋ ಮೃಗಃ ।
ಗಿರಿಪಾದಪಸಮ್ಬಾಧಾಂ ಸೋऽತ್ಯಕ್ರಾಮನ್ಮಹಾಟವೀಮ್ ॥೭॥

---

೩. ಮಹಾವೀರ, ವೀರ್ಯಮದ-ಅಹಂಕಾರಗಳಿಂದ ಮೈಮರೆತು ಹೋದ ದಾನವಾಧಮನು ಕುವಲಯ ಅಶ್ವವನ್ನು ಹೊಂದಿದ ಋತುಧ್ವಜನು ಗಾಲವಾಶ್ರಮದಲ್ಲಿ ವಾಸಮಾಡುತ್ತಿದ್ದುದನ್ನು ಅರಿಯಲಿಲ್ಲ.

೪. ತರುವಾಯ ಆ ಗಾಲವವಿಪ್ರನು ಸಂಧ್ಯೋಪಾಸನದ ಅನುಷ್ಠಾನದಲ್ಲಿ ತತ್ಪರನಾಗಿರುವಾಗ ದಾನವನು ಹಂದಿಯರೂಪವನ್ನು ಧರಿಸಿಕೊಂಡು ಭಂಗಪಡಿಸಲು ಬಂದನು.

೫. ಆಗ ಮುನಿಪುತ್ರರು ಎಲ್ಲರೂ ಕೂಗಿಕೊಳ್ಳುತ್ತಿರಲು ಆ ರಾಜಪುತ್ರನು ಬಿಲ್ಲು-ಬಾಣಗಳನ್ನು ಧರಿಸಿಕೊಂಡವನಾಗಿ ಆ ಅಶ್ವರತ್ನವನ್ನು ಏರಿಕೊಂಡು ಬೇಗ ಆ ಹಂದಿಯನ್ನು ಬೆನ್ನಟ್ಟಿಕೊಂಡು ಹೋದನು.

೬. ಮತ್ತು ಸುಂದರವಾದ ಚಿತ್ರಗಳಿಂದ ಅಲಂಕರಿಸಲ್ಪಟ್ಟ ತನ್ನ ಬಿಲ್ಲನ್ನು ದೃಢವಾಗಿ ಎಳೆದು ಅರ್ಧಚಂದ್ರನ ಆಕಾರವುಳ್ಳ ಬಾಣವನ್ನು ಪ್ರಯೋಗಿಸಿ ಆ ಹಂದಿಯನ್ನು ಹೊಡೆದನು.

೭. ಬಾಣದಿಂದ ಹೊಡೆಯಲ್ಪಟ್ಟ ಹಂದಿಯು ತನ್ನನ್ನು ಬದುಕಿಸಿಕೊಳ್ಳುವ ಆಶೆಯುಳ್ಳದ್ದಾಗಿ ಬೇಗ ಬೆಟ್ಟಗಳಲ್ಲಿ ವೃಕ್ಷಶ್ರೇಣಿಯಿಂದ ವಟ್ಟವಾದ ದೊಡ್ಡ ಕಾಡುಭೂಮಿಯನ್ನು ಹಾದು ಹೋಯಿತು.

ತಮನ್ವಧಾವದ್ವೇಗೇನ ತುರಗೋಽಸೌ ಮನೋಜವಃ ।
ಚೋದಿತೋ ರಾಜಪುತ್ರೇಣ ಪಿತುರಾದೇಶಕಾರಿಣಾ ॥೮॥

ಅತಿಕ್ರಮ್ಯಾಥ ವೇಗೇನ ಯೋಜನಾನಿ ಸಹಸ್ರಶಃ ।
ಧರಣ್ಯಾಂ ವಿವೃತೇ ಗರ್ತೇ ನಿಪಪಾತ ಲಘುಕ್ರಮಃ ॥೯॥

ತಸ್ಯಾನನ್ತರಮೇವಾಥ ಸ ಚಾಶ್ವೀ ನೃಪತೇಃ ಸುತಃ ।
ನಿಪಪಾತ ಮಹಾಗರ್ತೇ ತಿಮಿರೌಘಸಮಾವೃತೇ ॥೧೦॥

ತತೋ ನಾದೃಶ್ಯತ ಮೃಗಃ ಸ ತಸ್ಮಿನ್ರಾಜಸೂನುನಾ ।
ಪ್ರಕಾಶಂ ಚ ಸ ಪಾತಾಲಮಪಶ್ಯತ್ತತ್ರ ಚಾರ್ಚಿಷಾ ॥೧೧॥

ತತೋಽಪಶ್ಯತ್ಸ ಸೌವರ್ಣಂ ಪ್ರಾಸಾದಶತಸಙ್ಕುಲಮ್ ।
ಪುರನ್ದರಪುರಪ್ರಖ್ಯಂ ಪುರಂ ಪ್ರಾಕಾರಶೋಭಿತಮ್ ॥೧೨॥

---

೮. ಆಗ ತಂದೆಯ ಆದೇಶವನ್ನು ನಡೆಸುವ ಶ್ರದ್ಧೆಯುಳ್ಳ ಆ ಋತಧ್ವಜನೆಂಬ ರಾಜನಂದನನಿಂದ ಪ್ರೇರಿಸಲ್ಪಟ್ಟ ಮನೋವೇಗವುಳ್ಳ ಆ ಕುದುರೆಯು ವೇಗವಾಗಿ ಹಿಂಬಾಲಿಸಿ ಧಾವಿಸಿತು.

೯. ಬಲು ಶೀಘ್ರಗತಿಯಿಂದ ಬಂದ ಮೃಗವು ಸಹಸ್ರಾರು ಯೋಜನ ದೂರವನ್ನು ವೇಗದಿಂದ ಅತಿಕ್ರಮಿಸಿ ಒಂದುಕಡೆ ಭೂಮಿಯಲ್ಲಿ ಭಾರಿಯಾಗಿ ಕಾಣುವ ಹಳ್ಳದಲ್ಲಿ ಧುಮುಕಿತು.

೧೦. ತರುವಾಯ ಹಂದಿಯು ಧುಮುಕಿ ಹೋದ ಕೂಡಲೆ ಕುದುರೆಯನ್ನೇರಿದ ರಾಜಕುಮಾರನೂ ಅಂಧಕಾರದ ಪ್ರಾಬಲ್ಯದಿಂದ ತುಂಬಿಹೋದ ದೊಡ್ಡ ಹಳ್ಳದಲ್ಲಿ ಧುಮುಕಿದನು.

೧೧. ತರುವಾಯ ರಾಜಕುಮಾರನು ಹಳ್ಳದಲ್ಲಿ ಆ ಮೃಗವನ್ನು ಎಲ್ಲಿಯೂ ಕಾಣಲಿಲ್ಲ. ಮತ್ತು ಆ ಹಳ್ಳದಲ್ಲಿ ಕಾಂತಿಪುಂಜದಿಂದ ಪ್ರಕಾಶಮಯವಾದ ಪಾತಾಲವನ್ನು ಕಂಡನು.

೧೨. ಅನಂತರ ಆ ಪಾತಾಳದಲ್ಲಿ ಋತಧ್ವಜನು ಸುವರ್ಣಮಯವೂ, ನೂರಾರು ಪ್ರಾಸಾದಗಳಿಂದ ಕೂಡಿರುವುದೂ, ಪ್ರಾಕಾರಗಳಿಂದ ಸುತ್ತಲ್ಪಟ್ಟಿರುವುದೂ ಮತ್ತು ಅಮರಾವತಿಯಂತೆ ಕಂಗೊಳಿಸುವುದೂ ಆದ ನಗರವನ್ನು ನೋಡಿದನು.

ತತ್ಪ್ರವಿಶ್ಯ ಸ ನಾಪಶ್ಯತ್ತತ್ರ ಕಂಚಿನ್ನರಂ ಪುರೇ ।
ಭ್ರಮತಾ ಚ ತತೋ ದೃಷ್ಟಾ ತತ್ರ ಯೋಷಿತ್ತ್ವರಾನ್ವಿತಾ ॥೧೩॥

ಸಾ ಪೃಷ್ಟಾ ತೇನ ತನ್ವಙ್ಗೀ ಪ್ರಸ್ಥಿತಾ ಕ್ವೇತಿ ಕಸ್ಯ ವಾ ।
ನೋವಾಚ ಕಿಂಚಿತ್ಪ್ರಾಸಾದಮಾರುರೋಹ ಚ ಭಾಮಿನೀ ॥೧೪॥

ಸೋಽಪ್ಯಶ್ವಮೇಕತೋ ಬದ್ಧ್ವಾ ತಾಮೇವಾನುಸಸಾರ ವೈ ।
ವಿಸ್ಮಯೋತ್ಫುಲ್ಲನಯನೋ ನಿಶ್ಶಙ್ಕೋ ನೃಪತೇಃ ಸುತಃ ॥೧೫॥

ತತೋಽಪಶ್ಯತ್ಸುವಿಸ್ತೀರ್ಣೇ ಪರ್ಯಙ್ಕೇ ಸರ್ವಕಾಞ್ಚನೇ ।
ನಿಷಣ್ಣಾಂ ಕನ್ಯಕಾಮೇಕಾಂ ಕಾಮಯುಕ್ತಾಂ ರತಿಂ ಯಥಾ ॥೧೬॥

---

೧೩. ಆ ನಗರವನ್ನು ಪ್ರವೇಶಿಸಿದ ರಾಜಪುತ್ರನು ಆ ನಗರದಲ್ಲಿ ಯಾರೊಬ್ಬ ಮನುಷ್ಯನನ್ನೂ ಕಾಣಲಿಲ್ಲ. ಅನಂತರ ಹಾಗೆಯೆ ಸುತ್ತುತ್ತಿದ್ದ ರಾಜಪುತ್ರನಿಂದ ಅಲ್ಲಿ ತ್ವರೆಪಟ್ಟು ಹೋಗುತ್ತಿದ್ದ ಒಬ್ಬಳು ನಾರಿಯು ನೋಡಲ್ಪಟ್ಟಳು.

೧೪. "ನೀನು ಎಲ್ಲಿಗೆ ಹೊರಟಿರುವೆ? ನೀನು ಯಾರ ಪುತ್ರಿಯು?" ಹೀಗೆಂದು ರಾಜಪುತ್ರನಿಂದ ಆ ಕೋಮಲಾಂಗಿಯು ಪ್ರಶ್ನಿಸಲ್ಪಟ್ಟಳು. ಆ ಸುಂದರಿಯು ಏನೂ ಉತ್ತರ ಕೊಡಲಿಲ್ಲ. ಹಾಗೆಯೆ ಪ್ರಾಸಾದವನ್ನು ಹತ್ತಿದಳು.

೧೫. ಆ ಪ್ರಸಂಗದಲ್ಲಿ ವಿಸ್ಮಯದಿಂದ ಅರಳಿದ ಕಣ್ಣುಗಳುಳ್ಳವನೂ, ನಿರ್ಭಯನೂ ಆದ ಆ ಋತಧ್ವಜನು ತನ್ನ ಕುದುರೆಯನ್ನು ಅಲ್ಲಿ ಒಂದೆಡೆಯಲ್ಲಿ ಕಟ್ಟಿಹಾಕಿ ಅವಳನ್ನು ಹಿಂಬಾಲಿಸಿ ಹೋದನು.

೧೬. ತರುವಾಯ ಅವನು ಬಹಳ ವಿಸ್ತಾರವಾದ ಮತ್ತು ಸುವರ್ಣಮಯವಾದ ಮಂಚದಲ್ಲಿ ಕುಳಿತುಕೊಂಡಿರುವ, ಕಾಮದೇವನ ಪ್ರೇಯಸಿಯಾದ ರತಿಯಂತಿರುವ ಒಬ್ಬಳು ಕನ್ಯೆಯನ್ನು ನೋಡಿದನು.

ವಿಸ್ಪಷ್ಟೇನ್ದುಮುಖೀಂ ಸುಭ್ರೂಪೀನಶ್ರೋಣಿಪಯೋಧರಾಮ್ ।
ಬಿಮ್ಬಾಧರೋಷ್ಠಿಂ ತನ್ವಙ್ಗೀಂ ನೀಲೋತ್ಪಲವಿಲೋಚನಾಮ್ ॥೧೭॥

ರಕ್ತತುಙ್ಗನಖಾಂ ಶ್ಯಾಮಾಂ ಮೃದುತಾಮ್ರಕರಾಙ್ಘ್ರಿಕಾಮ್ ।
ಕರಭೋರುಂ ಸುದಶನಾಂ ನೀಲಸೂಕ್ಷ್ಮಸ್ಥಿರಾಲಕಾಮ್ ॥೧೮॥

ತಾಂ ದೃಷ್ಟ್ವಾ ಚಾರುಸರ್ವಾಙ್ಗೀಮನಙ್ಗಾಙ್ಗಲತಾಮಿವ ।
ಸೋಽಮನ್ಯತ್ಪಾರ್ಥಿವಸುತಸ್ತಾಂ ರಸಾತಲದೇವತಾಮ್ ॥೧೯॥

ಸಾ ಚ ದೃಷ್ಟ್ವೈವ ತಂ ಬಾಲಾ ನೀಲಕುಞ್ಚಿತಮೂರ್ಧಜಮ್ ।
ಪೀತೋರಃಸ್ಕನ್ಧಬಾಹುಂ ತಮಮಂಸ್ತ ಮದನಂ ಶುಭಾ ॥೨೦॥

---

೧೭. ಆ ಕನ್ಯೆಯು ಪೂರ್ಣಚಂದ್ರನಂತಿರುವ ಮುಖವುಳ್ಳವಳೂ, ಸುಂದರವಾದ ಹುಬ್ಬುಗಳುಳ್ಳವಳೂ, ಸ್ಥೂಲವಾದ ನಿತಂಬ-ಸ್ತನಗಳಿಂದ ಕೂಡಿದವಳೂ, ತೊಂಡೆಹಣ್ಣಿನಂತಿರುವ ತುಟಿಗಳಿಂದ ಶೋಭಿತಳೂ, ಕನ್ನೈದಿಲೆಯಂತೆ ಕಣ್ಣುಗಳುಳ್ಳವಳೂ ಮತ್ತು ಕೃಶಾಂಗಿಯೂ ಆಗಿದ್ದಳು.

೧೮. ಮತ್ತು ಆಕೆಯು ಕೆಂಪಾದ-ಎತ್ತರವಾದ ಉಗುರು, ಮೃದುವಾದ, ಕೆಂಪಾದ ಕೈಕಾಲುಗಳು, ಕಣಕೈಯಂತೆ ಇರುವ ತೊಡೆ, ಸುಂದರವಾದ ದಂತಪಂಕ್ತಿ, ಮತ್ತು ಕಪ್ಪಾದ-ಸೂಕ್ಷ್ಮವಾದ-ಸ್ಥಿರವಾದ ಮುಂಗೂದಲು—ಇವುಗಳಿಂದ ಕೂಡಿದವಳೂ ನವತಾರುಣ್ಯವತಿಯೂ ಆಗಿದ್ದಳು.

೧೯. ಸುಂದರವಾದ ಸರ್ವಾಂಗವುಳ್ಳವಳೂ, ಕಾಮದೇವನ ಅಂಗಲತೆಯಂತೆ ಇರುವವಳೂ ಆದ ಆ ಕನ್ಯೆಯನ್ನು ನೋಡಿ ಋತಧ್ವಜನು ಅವಳನ್ನು ಪಾತಾಳಲೋಕದ ದೇವತೆಯೆಂದು ಅರಿತನು.

೨೦. ಮಂಗಳಾಂಗಿಯಾದ ಆ ಬಾಲಿಕೆಯು ನೀಲವೂ ವಕ್ರವೂ ಆದ ಕೂದಲುಗಳುಳ್ಳವನೂ ವಿಶಾಲವೂ ಉನ್ನತವೂ ಆದ ಎದೆ, ಹೆಗಲು ಮತ್ತು ಬಾಹುಗಳುಳ್ಳವನೂ ಆದ ರಾಜಪುತ್ರನನ್ನು ನೋಡಿದ ಕೂಡಲೆ ಅವನನ್ನು ಮನ್ಮಥನೆಂದು ತಿಳಿದುಕೊಂಡಳು.

ಉತ್ತಸ್ಥೌ ಚ ಶುಭಾಚಾರಾ ಚಿತ್ತಕ್ಷೋಭಮವಾಪ ಸಾ ।
ಲಜ್ಜಾವಿಸ್ಮಯದೈನ್ಯಾನಾಂ ಸದ್ಯಸ್ತನ್ವೀ ವಶಂ ಗತಾ ॥೨೧॥

ಕೋಽಯಂ ದೇವೋಽಥ ಯಕ್ಷೋ ನು ಗನ್ಧರ್ವೋ ವೋರಗೋಽಪಿ ವಾ ।
ವಿದ್ಯಾಧರೋ ವಾ ಸಮ್ಪ್ರಾಪ್ತಃ ಕೃತಪುಣ್ಯಾಪತಿರ್ನರಃ ॥೨೨॥

ಏವಂ ವಿಚಿನ್ತ್ಯ ಬಹುಧಾ ನಿಶ್ವಸ್ಯ ಚ ಮಹೀತಲೇ ।
ಉಪವಿಶ್ಯ ತದಾ ಭೇಜೇ ಸಾ ಮೂರ್ಛಾಮಿನ್ದಿರೇಕ್ಷಣಾ ॥೨೩॥

ಸೋಽಪಿ ಕಾಮಶರಾಘಾತಮವಾಪ್ಯ ನೃಪತೇಃ ಸುತಃ ।
ತಾಂ ಸಮಾಶ್ವಾಸಯಾಮಾಸ ನ ಭೇತವ್ಯಮಿತಿ ಬ್ರುವನ್ ॥೨೪॥

ಸಾ ಚ ಸ್ತ್ರೀ ಯಾ ತದಾ ದೃಷ್ಟಾ ಪೂರ್ವಂ ತೇನ ಮಹಾತ್ಮನಾ ।
ತಾಲವೃನ್ತಮುಪಾದಾಯ ಪರ್ಯವೀಜಯದಾಕುಲಾ ॥೨೫॥

---

೨೧. ಪ್ರಶಸ್ತವಾದ ಆಚಾರವುಳ್ಳ ಆ ಬಾಲಿಕೆಯು ಮಂಚದಿಂದ ಎದ್ದುನಿಂತಳು. ಅತಿಶಯವಾದ ಚಿತ್ತಕ್ಷೋಭವನ್ನು ಹೊಂದಿದಳು. ಮತ್ತು ಆ ತನ್ವಿಯು ಲಜ್ಜೆ-ವಿಸ್ಮಯ-ದೈನ್ಯಭಾವಗಳಿಗೆ ಅಧೀನಳಾಗಿಹೋದಳು.

೨೨. ಇಲ್ಲಿಗೆ ಬಂದಿರುವ ಈ ವ್ಯಕ್ತಿಯು ಯಾರು? ದೇವತೆಯೆ? ಯಕ್ಷನೆ? ಗಂಧರ್ವನೆ? ನಾಗನೆ? ಅಥವಾ ವಿದ್ಯಾಧರನಿರಬಹುದೆ? ಇವನು ಯಾವಳೋ ಪುಣ್ಯವತಿಯಾದ ನಾರಿಯ ಪತಿಯೆ ಅಹುದು.

೨೩. ಕಾಂತಿಯಿಂದ ರಂಜಿಸುವ ದೃಷ್ಟಿಯುಳ್ಳ ಆ ತರುಣಿಯು ಆಗ ಹೀಗೆ ಬಹುವಿಧವಾಗಿ ಚಿಂತಿಸುತ್ತ ಉಸಿರುಬಿಟ್ಟು ನೆಲದಲ್ಲಿ ಕುಳಿತುಕೊಂಡು ಹಾಗೆ ಮೂರ್ಛೆಯನ್ನು ಹೊಂದಿದಳು.

೨೪. ಕಾಮಬಾಣಗಳ ಪ್ರಹಾರಕ್ಕೆ ಗುರಿಯಾಗುತ್ತಿದ್ದ ಆ ರಾಜ-ಕುಮಾರನೂ ಕೂಡ "ಹೆದರಬೇಡ" ಎಂದು ಅಭಯವಚನವನ್ನು ಆಡುತ್ತ ಆ ತರುಣಿಯನ್ನು ಸಂತೈಸಿದನು.

೨೫. ಮಹಾತ್ಮನಾದ ರಾಜನಂದನನಿಂದ ಹಿಂದೆ ನೋಡಲ್ಪಟ್ಟಿರುವ ಆ ನಾರಿಯೊಬ್ಬಳು ಆಗ ವ್ಯಾಕುಲತೆಯುಳ್ಳವಳಾಗಿ ಬೀಸಣಿಗೆಯನ್ನು ತೆಗೆದು-ಕೊಂಡು ಬೀಸಿದಳು.

ಸಮಾಶ್ವಸ್ತಾ ತದಾ ಪೃಷ್ಟಾ ತೇನ ಸಾ ಮೋಹಕಾರಣಮ್ ।
ಕಿಂಚಿಲ್ಲಜ್ಜಾನ್ವಿತಾ ಬಾಲಾ ತಸ್ಯೈ ಸಖ್ಯೈ ನ್ಯವೇದಯತ್ ॥೨೬॥

ಸಾ ಚಾಸ್ಮೈ ಕಥಯಾಮಾಸ ನೃಪಪುತ್ರಾಯ ವಿಸ್ತರಾತ್ ।
ಮೋಹಸ್ಯ ಕಾರಣಂ ಸರ್ವಂ ತದ್ದರ್ಶನಸಮುದ್ಭವಮ್ ॥೨೭॥

ಯಥಾ ತಯಾ ಸಮಾಖ್ಯಾತಂ ತದ್ವೃತ್ತಾನ್ತಂ ಚ ಭಾಮಿನೀ ॥೨೮॥

ಸಖ್ಯುವಾಚ :—

ವಿಶ್ವಾವಸುರಿತಿ ಖ್ಯಾತೋ ದಿವಿ ಗನ್ಧರ್ವರಾಟ್ಪ್ರಭೋ ।
ತಸ್ಯೇಯಮಾತ್ಮಜಾ ಸುಭ್ರೂರ್ನಾಮ್ನಾ ಖ್ಯಾತಾ ಮದಾಲಸಾ ॥೨೯॥

ವಜ್ರಕೇತೋಃ ಸುತಶ್ಚೋಗ್ರೋ ದಾನವೋಽರಿವಿದಾರಣಃ ।
ಪಾತಾಲಕೇತುರ್ವಿಖ್ಯಾತಃ ಪಾತಾಲಾನ್ತರಸಂಶ್ರಯಃ ॥೩೦॥

---

೨೬. ಸ್ವಲ್ಪ ಸಮಾಧಾನವನ್ನು ಹೊಂದಿದ ಬಳಿಕ ಆಗ ರಾಜಪುತ್ರನಿಂದ ಮೋಹವುಂಟಾಗಲು ಕಾರಣವೇನೆಂದು ಪ್ರಶ್ನಿಸಲ್ಪಟ್ಟ ಕನ್ಯೆಯು ಸ್ವಲ್ಪ ನಾಚಿಗೊಂಡವಳಾಗಿ ತನ್ನ ಸಖಿಗೆ ಹೇಳಿದಳು.

೨೭. ಆ ಸಖಿಯು ರಾಜಪುತ್ರನ ದರ್ಶನದಿಂದ ಉಂಟಾದ ಮೋಹಾವಸ್ಥೆಯ ಸಮಗ್ರಕಾರಣವನ್ನು ಪ್ರಶ್ನೆಮಾಡಿದ್ದ ರಾಜಪುತ್ರನಿಗೆ ವಿಸ್ತಾರವಾಗಿ ಹೇಳಿದಳು.

೨೮. ಆ ಕನ್ಯೆಯ ಸಖಿಯು ಎಲ್ಲ ವೃತ್ತಾಂತವನ್ನು ಕನ್ಯೆಯು ತನಗೆ ನಿವೇದಿಸಿದಂತೆ ಪರಮಾರ್ಥವಾಗಿ ರಾಜಪುತ್ರನಿಗೆ ತಿಳಿಸಿದಳು.

೨೯. ಪ್ರಭುವೆ! ದೇವಲೋಕದಲ್ಲಿ ವಿಶ್ವಾವಸು ಎಂಬ ಹೆಸರಿನಿಂದ ಪ್ರಖ್ಯಾತನಾದ ಗಂಧರ್ವರಾಜನು ಇರುವನು. ಈ ಸುಂದರಿಯು ಆ ವಿಶ್ವಾವಸುವಿನ ಮಗಳು. ಮತ್ತು ಮದಾಲಸೆಯೆಂಬ ಶುಭನಾಮಾಂಕಿತಳಾಗಿ ಪ್ರಸಿದ್ಧಿ ಹೊಂದಿರುವಳು.

೩೦. ಶತ್ರುಗಳನ್ನು ಭಂಜಿಸುವ, ಪಾತಾಳಕೇತು ಎಂದು ಪ್ರಸಿದ್ಧನಾದ, ಮತ್ತು ಅತ್ಯುಗ್ರರೂಪನಾದ ವಜ್ರಕೇತುವಿನ ಪುತ್ರ ದಾನವನೊಬ್ಬನು ಮತ್ತೊಂದು ಪಾತಾಳಪ್ರದೇಶವನ್ನು ಆಶ್ರಯಿಸಿಕೊಂಡಿರುವನು.

ತೇನೇಯಮುದ್ಯಾನಗತಾ ಕೃತ್ವಾ ಮಾಯಾಂ ತಮೋಮಯೀಮ್ ।
ಅಪಹೃತ್ಯ ಸಮಾನೀತಾ ಬಾಲೇಯಂ ದುಷ್ಟಬುದ್ಧಿನಾ ॥೩೧॥

ಆಗಾಮಿನ್ಯಾಂ ತ್ರಯೋದಶ್ಯಾಮುದ್ವಕ್ಷ್ಯತಿ ಕಿಲಾಸುರಃ ।
ಸ ತು ನಾರ್ಹತಿ ಚಾರ್ವಙ್ಗೀಂ ಶೂದ್ರೋ ವೇದಶ್ರುತಿಂ ಯಥಾ ॥೩೨॥

ಅತೀತೇ ಚ ದಿನೇ ಬಾಲಾಂ ಚಾತ್ಮವ್ಯಾಪಾದನೋದ್ಯತಾಮ್ ।
ಸುರಭಿಃ ಪ್ರಾಹ ನಾಯಂ ತ್ವಾಂ ಪ್ರಾಪ್ಸ್ಯತೇ ದಾನವಾಧಮಃ ॥೩೩॥

ಮರ್ತ್ಯಲೋಕಮನುಪ್ರಾಪ್ತಂ ಯ ಏನಂ ಭೇತ್ಸ್ಯತೇ ಶರೈಃ ।
ಸ ತೇ ಭರ್ತಾ ಮಹಾಭಾಗೇ ಹ್ಯಚಿರೇಣ ಭವಿಷ್ಯತಿ ॥೩೪॥

---

೩೧. ದುಷ್ಟಬುದ್ಧಿಯುಳ್ಳ ಆ ರಕ್ಕಸನಿಂದ ಉದ್ಯಾನವನದಲ್ಲಿ ವಿಹರಿಸುತ್ತಿದ್ದ ಈ ಬಾಲಿಕೆಯು ಅಂಧಕಾರಮಯವಾಗುವಂತೆ ಮಾಯೆಯನ್ನು ತೋರಿಸುತ್ತ ಅಪಹರಿಸಿ ತರಲ್ಪಟ್ಟಿರುವಳು.

೩೨. ಆ ಪಾತಾಲಕೇತುದಾನವನು ಮುಂದೆ ಬರುವ ತ್ರಯೋದಶೀ-ತಿಥಿಯಲ್ಲಿ ಈಕೆಯನ್ನು ಮದುವೆಯಾಗುವನಂತೆ. ಶೂದ್ರನು ವೇದಶ್ರವಣಕ್ಕೆ ಹೇಗೆ ಅರ್ಹನಲ್ಲವೊ ಹಾಗೆ ಆ ದಾನವಾಧಮನು ಈ ಸುಂದರಾಂಗಿಯನ್ನು ಭಾರ್ಯೆಯನ್ನಾಗಿ ಹೊಂದಲು ಅರ್ಹನಲ್ಲ.

೩೩. ನಿನ್ನೆಯದಿನ ಕಷ್ಟವನ್ನು ಸಹಿಸಲಾರದ ಈ ಬಾಲಿಕೆಯು ಪ್ರಾಣತ್ಯಾಗಕ್ಕೆ ಸಿದ್ಧಳಾಗಿರುವುದನ್ನು ನೋಡಿ ಕಾಮಧೇನುವು ನುಡಿಯಿತು. ಆ ದಾನವಾಧಮನು ನಿನ್ನನ್ನು ಮದುವೆಯಾಗುವುದಿಲ್ಲ.

೩೪. ಅತಿಶಯವಾದ ಮಾಹಾತ್ಮ್ಯಕ್ಕೆ ಅರ್ಹಳಾದವಳೆ! ಮರ್ತ್ಯ-ಲೋಕಕ್ಕೆ ಹೋಗಿರುವ ದಾನವಾಧಮನನ್ನು ಯಾರು ಬಾಣಗಳಿಂದ ಭೇದಿಸುವನೊ; ಅಂತಹ ಮಹಾತ್ಮನು ಕ್ಷಿಪ್ರದಲ್ಲಿಯೆ ನಿನಗೆ ಪತಿಯಾಗುವನು.

ಅಹಂ ತ್ವಸ್ಯಾಃ ಸಖೀ ನಾಮ್ನಾ ಕುಣ್ಡಲೇತಿ ಮನಸ್ವಿನೀ ।
ಸುತಾ ವಿನ್ಧ್ಯವತಃ ಪತ್ನೀ ವೀರಪುಷ್ಕರಮಾಲಿನಃ ||೩೫||

ಹತೇ ಭರ್ತರಿ ಶುಮ್ಭೇನ ತೀರ್ಥಾತ್ತೀರ್ಥಮನುವ್ರತಾ ।
ಚರಾಮಿ ದಿವ್ಯಯಾ ಗತ್ಯಾ ಪರಲೋಕಾರ್ಥಮುದ್ಯತಾ ||೩೬||

ಪಾತಾಲಕೇತುರ್ದುಷ್ಟಾತ್ಮಾ ವಾರಾಹಂ ವಪುರಾಸ್ಥಿತಃ ।
ಕೇನಾಪಿ ವಿದ್ಧೋ ಬಾಣೇನ ಮುನೀನಾಂ ತ್ರಾಣಕಾರಣೇ ||೩೭||

ತಥಾಹಂ ತತ್ತ್ವತೋಽನ್ವಿಷ್ಯ ತ್ವರಿತಾಹಮಿಹಾಗತಾ ।
ಸತ್ಯಮೇವ ಸ ಕೇನಾಪಿ ತಾಡಿತೋ ದೌಷ್ಟ್ಯಮಾಚರೇತ್ ||೩೮||

---

೩೫. ಜಿತಮನಸ್ಕಳಾದ ನಾನು ಇವಳ ಸಖಿಯು. ನಾನು ವಿಂಧ್ಯವಂತನ ಪುತ್ರಿಯೂ, ವೀರನಾದ ಪುಷ್ಕರಮಾಲಿ ಎಂಬುವನ ಪತ್ನಿಯೂ ಮತ್ತು "ಕುಂಡಲಾ" ಎಂಬ ನಾಮಾಂಕನವುಳ್ಳವಳೂ ಆಗಿದ್ದೇನೆ.

೩೬. ಶುಂಭಾಸುರನಿಂದ ನನ್ನ ಪತಿಯು ಹತನಾಗಿಹೋಗಲು ಒಂದು ತೀರ್ಥದಿಂದ ಮತ್ತೊಂದಕ್ಕೆ ನಿಯಮವಾಗಿ ಯಾತ್ರೆಮಾಡುತ್ತ ಪರಲೋಕದ ಸದ್ಗತಿಯನ್ನು ಸಾಧಿಸುವ ಉದ್ಯಮವುಳ್ಳವಳಾಗಿ ದಿವ್ಯಗತಿಯಿಂದ ಸಂಚರಿಸು-ತ್ತಿರುವೆನು.

೩೭. ಹಂದಿಯರೂಪವನ್ನು ಧರಿಸಿಕೊಂಡು ಹೋದ ಪಾತಾಲಕೇತು-ದಾನವನನ್ನು ಯಾರೊ ಒಬ್ಬನು ಮುನಿಜನರನ್ನು ರಕ್ಷಿಸುವಸಲುವಾಗಿ ತನ್ನ ಬಾಣದಿಂದ ಹೊಡೆದಿರುವನು.

೩೮. ನಾನು ಆ ವೃತ್ತಾಂತವನ್ನು ತಾತ್ತ್ವಿಕವೆಂದು ದೃಢಪಡಿಸಿಕೊಂಡು ತ್ವರೆಯಿಂದ ಇಲ್ಲಿಗೆ ಬಂದೆನು. ಆ ದಾನವಾಧಮನು ಯಾರಿಂದಲೊ ಪ್ರಹರಿಸಲ್ಪ-ಟ್ಟಿರುವುದರಿಂದ ನಿಜವಾಗಿ ಏನಾದರೂ ದುಷ್ಟತನವನ್ನು ತೋರಿಸಬಹುದು.

ಇಯಂ ಚ ಮೂರ್ಛಾಮಗಮದ್ಯೇನ ತತ್ಕಾರಣಂ ಶೃಣು ।
ತ್ವಯಿ ಪ್ರೀತಿಮತೀ ಬಾಲಾ ದರ್ಶನಾದೇವ ಮಾನದ ॥೩೯॥

ದೇವಪುತ್ರೋಪಮೇ ಚಾರುವಾಕ್ಯರೂಪಾದಿಶಾಲಿನಿ ।
ಭಾರ್ಯಾ ಚಾನ್ಯಸ್ಯ ವಿಹಿತಾ ಯೇನ ವಿದ್ಧಃ ಸ ದಾನವಃ ॥೪೦॥

ಏತಸ್ಮಾತ್ಕಾರಣಾನ್ಮೋಹಂ ಮಹಾನ್ತಮಿಯಮಾಗತಾ ।
ಯಾವಜ್ಜೀವಂ ಚ ತನ್ವಙ್ಗೀ ದುಃಖಮೇವೋಪಭೋಕ್ಷ್ಯತಿ ॥೪೧॥

ತ್ವಯ್ಯಸ್ಯಾ ಹೃದಯಂ ರಾಗಿ ಭರ್ತಾ ಚಾನ್ಯೋ ಭವಿಷ್ಯತಿ ।
ಯಾವಜ್ಜೀವಮತೋ ದುಃಖಂ ಸುರಭ್ಯಾ ನಾನ್ಯಥಾ ವಚಃ ॥೪೨॥

---

೩೯. ಈ ಕನ್ಯೆಯು ಯಾವ ಕಾರಣದಿಂದ ಮೂರ್ಛೆಯನ್ನು ಹೊಂದಿದಳೊ ಆ ಕಾರಣವನ್ನು ಕೇಳು. ಸನ್ಮಾನಮಾಡುವ ಶೀಲವುಳ್ಳವನೆ! ಈಕೆಯು ನಿನ್ನನ್ನು ನೋಡಿದ ಮಾತ್ರದಿಂದಲೆ ನಿನ್ನಲ್ಲಿ ಪ್ರೀತಿಹುಟ್ಟಿದವಳಾಗಿದಳು.

೪೦. ದೇವಕುಮಾರನಂತೆ ಸುಂದರನೂ, ಮಧುರವಾದ ವಾಣಿ-ಆಕಾರ ಮುಂತಾದ ಗುಣಗಳಿಂದ ಅಲಂಕೃತನೂ ಆದ ನಿನ್ನಲ್ಲಿ ಪ್ರೀತಿಹೊಂದಿದ ಇವಳು ಆ ದಾನವನನ್ನು ಹೊಡೆದಿರುವ ಬೇರೊಬ್ಬ ವೀರಪುರುಷನಿಗೆ ಪತ್ನಿಯಾಗಿ ವಿಹಿತಳಾಗಿರುವಳು.

೪೧. ಈ ಕಾರಣದಿಂದ ಈ ತರುಣಿಯು ಕಠಿನವಾದ ಮೋಹಾವಸ್ಥೆ-ಯನ್ನು ಹೊಂದಿದಳು. ಈ ಕೃಶಾಂಗಿಯು ಜೀವಂತಳಾಗಿರುವವರೆಗೂ ದುಃಖವನ್ನೇ ಅನುಭವಿಸುತ್ತಿರುವಂತೆ ಸನ್ನಿವೇಶವು ಒದಗಿರುವುದು.

೪೨. ಇವಳ ಹೃದಯವು ನಿನ್ನಲ್ಲಿ ಅನುರಾಗಪೂರ್ಣವಾಗಿದೆ. ಆದರೆ ಪತಿಯು ಬೇರೊಬ್ಬನಾಗುವನು. ಆದುದರಿಂದ ಆಕೆಗೆ ತನ್ನ ಜೀವನಕಾಲವೆಲ್ಲವೂ ದುಃಖಮಯವಾಗುವುದು. ಕಾಮಧೇನುವಿನ ವಚನವು ಸುಳ್ಳಾಗುವುದಿಲ್ಲ.

ಅಹಂ ತ್ವಸ್ಯಾಃ ಪ್ರಭೋಃ ಪ್ರೀತ್ಯಾ ದುಃಖಿತಾತ್ರ ಸಮಾಗತಾ ।
ಯತೋ ವಿಶೇಷೋ ನೈವಾಸ್ತಿ ಸ್ವಸಖೀನಿಜದೇಹಯೋಃ ॥೪೩॥

ಯದ್ಯೇಷಾಭಿಮತಂ ವೀರ ಪತಿಮಾಪ್ನೋತಿ ಶೋಭನಾ ।
ತತಸ್ತ್ವಹಂ ತಪಃ ಕುರ್ಯಾಂ ನಿರ್ವ್ಯಲೀಕೇನ ಚೇತಸಾ ॥೪೪॥

ತ್ವಂ ತು ಕೋ ವಾ ಕಿಮರ್ಥಂ ವಾ ಸಮ್ಪ್ರಾಪ್ತೋಽತ್ರ ಮಹಾಮತೇ ।
ದೇವೋ ದೈತ್ಯೋ ನು ಗನ್ಧರ್ವಃ ಪನ್ನಗಃ ಕಿನ್ನರೋಽಪಿ ವಾ ॥೪೫॥

ನ ಹ್ಯತ್ರ ಮಾನುಷಗತಿರ್ನ ಚೇದೃಙ್ಮಾನುಷೀ ಗತಿಃ ।
ತತ್ತ್ವಮಾಖ್ಯಾಹಿ ಕೋಽಸಿ ತ್ವಂ ಯಥೈವಾವಿತಥಂ ಮಯಾ ॥೪೬॥

---

೪೩. ನಾನಾದರೊ ಈಕೆಯ ಪ್ರಭುವಾದ ವಿಶ್ವಾವಸುವಿನ ಮೇಲಿನ ಪ್ರೀತಿಯಿಂದ ದುಃಖಿತಳಾಗಿ ಇಲ್ಲಿಗೆ ಬಂದೆನು. ಸಖಿಯಲ್ಲಿಯೂ ನನ್ನ ದೇಹದಲ್ಲಿಯೂ ಯಾವ ಭೇದಭಾವನೆಯೂ ನನಗೆ ಇರುವುದಿಲ್ಲ.

೪೪. ವೀರನೇ ! ಮಂಗಳಾಂಗಿಯಾದ ಈ ಕನ್ಯೆಯು ತನಗೆ ಅಭಿಮತ-ನಾದ ಪತಿಯನ್ನು ಹೊಂದಿ ಸುಖವಾಗಿ ಇದ್ದರೆ ಆಗ ನಾನು ಏನೂ ಕೊರತೆ-ಗಳಿಲ್ಲದ ಶುದ್ಧಮನಸ್ಸಿನಿಂದ ತಪವನ್ನು ಕೈಗೊಳ್ಳುವೆನು.

೪೫. ಮಹಾಪ್ರಾಜ್ಞನೆ ! ನೀನು ಯಾರು ? ಇಲ್ಲಿಗೆ ಏತಕ್ಕಾಗಿ ಬಂದಿರುವೆ ? ನೀನು ದೇವತೆಯೆ ? ದೈತ್ಯನೇ ? ಗನ್ಧರ್ವನೆ ? ನಾಗನೆ ? ಅಥವಾ ಕಿನ್ನರನಾಗಿರುವೆಯಾ ? ನೀನು ಯಾರೆಂಬುದನ್ನು ಹೇಳು.

೪೬. ಮಾನವರಿಗೆ ಇಲ್ಲಿ ಪ್ರವೇಶವಿಲ್ಲ. ಇಂತಹ ಸ್ಥಳವು ಮಾನವರಿಗೆ ಸುಗಮವಲ್ಲ. ನಾನು ಹೇಗೆ ನಿಜಾಂಶವನ್ನು ತಿಳಿಸಿದೆನೊ, ಹಾಗೆಯೆ ನೀನು ಯಾರು ? ಎಂಬುದನ್ನು ತಾತ್ತ್ವಿಕವಾಗಿ ತಿಳಿಸು.

ಕುವಲಯಾಶ್ವ ಉವಾಚ :—

ಯನ್ಮಾಂ ಪೃಚ್ಛಸಿ ಧರ್ಮಜ್ಞೇ ಕಸ್ತ್ವಂ ಕಿಂ ವಾ ಸಮಾಗತಃ ।
ತಚ್ಛೃಣುಷ್ವಾಮಲಪ್ರಜ್ಞೇ ಕಥಯಾಮ್ಯಾದಿತಸ್ತವ ॥೪೭॥

ರಾಜ್ಞಃ ಶತ್ರುಜಿತಃ ಪುತ್ರಃ ಪಿತ್ರಾ ಸಮ್ಪ್ರೇಷಿತಃ ಶುಭೇ ।
ಮುನಿರಕ್ಷಣಮುದ್ದಿಶ್ಯ ಗಾಲವಾಶ್ರಮಮಾಗತಃ ॥೪೮॥

ಕುರ್ವತೋ ಮಮ ರಕ್ಷಾಂ ಚ ಮುನೀನಾಂ ಧರ್ಮಚಾರಿಣಾಮ್ ।
ವಿಘ್ನಾರ್ಥಮಾಗತಃ ಕೋಽಪಿ ಸೌಕರಂ ವಪುರಾಸ್ಥಿತಃ ॥೪೯॥

ಮಯಾ ಸ ವಿದ್ಧೋ ಬಾಣೇನ ಚನ್ದ್ರಾರ್ಧಾಕಾರವರ್ಚಸಾ ।
ಅಪಕ್ರಾನ್ತೋಽತಿವೇಗೇನ ತಮಸ್ಮ್ಯನುಗತೋ ಹಯಾ ॥೫೦॥

ಕುವಲಯಾಶ್ವನು ಹೀಗೆ ಹೇಳಿದನು :—

೪೭. ನಿರ್ಮಲವಾದ ಬುದ್ಧಿಯುಳ್ಳವಳೆ ! ಧರ್ಮವನ್ನು ಅರಿತವಳೆ ! " ನೀನು ಯಾರು ? ಏಕೆ ಇಲ್ಲಿಗೆ ಬಂದಿರುವೆ " ಎಂದು ನನ್ನನ್ನು ಪ್ರಶ್ನಿಸಿದ್ದೀಯೆ. ಮೊದಲಿನಿಂದ ಆ ವೃತ್ತಾಂತವನ್ನು ನಿನಗೆ ಹೇಳುತ್ತೇನೆ, ಕೇಳು.

೪೮. ಮಂಗಳಕರಳೆ! ಶತ್ರುಜಿತರಾಜನ ಪುತ್ರನಾದ ನಾನು ಮುನಿಜನರ ರಕ್ಷಣಕಾರ್ಯದ ಉದ್ದೇಶದಿಂದ ತಂದೆಯಿಂದ ಕಳುಹಿಸಲ್ಪಟ್ಟವನಾಗಿ ಗಾಲವಮುನಿಯ ಆಶ್ರಮಕ್ಕೆ ಬಂದೆನು.

೪೯. ನಾನು ಧರ್ಮವನ್ನು ಆಚರಿಸುತ್ತಿದ್ದ ಮುನಿಗಳ ರಕ್ಷಣೆಯನ್ನು ಮಾಡುತ್ತಿರಲು ಧರ್ಮಾಚರಣೆಗೆ ವಿಘ್ನಮಾಡಲು ಹಂದಿಯ ಆಕಾರವನ್ನು ಧರಿಸಿದವನು ಯಾರೊ ಒಬ್ಬನು ಬಂದನು.

೫೦. ಆ ಹಂದಿಯು ಅರ್ಧಚಂದ್ರನ ಆಕಾರ-ಮತ್ತು ತೇಜಸ್ಸುಗಳಿಂದ ಕೂಡಿದ ಬಾಣದಿಂದ ನನ್ನಿಂದ ಹೊಡೆಯಲ್ಪಟ್ಟು ಹಿಂದಕ್ಕೆ ಓಡಿಹೋಯಿತು. ಆಗ ಕುದುರೆಯನ್ನು ಏರಿ ನಾನು ವೇಗವಾಗಿ ಆದನ್ನು ಅಟ್ಟಿಕೊಂಡುಹೋದೆನು.

ಪಪಾತ ಸಹಸಾ ಗರ್ತೇ ಸಕ್ರೋಧೋಽಶ್ವಶ್ಚ ಮಾಮಕಃ ।
ಸೋಽಹಮಶ್ವಂ ಸಮಾರೂಢಸ್ತಮಸ್ಯೇಕಃ ಪರಿಭ್ರಮನ್ ॥೩೧॥

ಪ್ರಕಾಶಮಾಸಾದಿತವಾನ್ ದೃಷ್ಟ್ವಾ ಚ ಭವತೀ ಮಯಾ ।
ಪೃಷ್ಟಾ ಚ ನ ಚ ಮೇ ಕಿಂಚಿದ್ಭವತ್ಯಾ ದತ್ತ ಮುತ್ತರಮ್ ॥೩೨॥

ತ್ವಾಂ ಚೈವಾನುಪ್ರವಿಷ್ಟೋಽಹಮಿಮಂ ಪ್ರಾಸಾದಮುತ್ತಮಮ್॥೩೩॥

ಇತ್ಯೇತತ್ಕಥಿತಂ ಸತ್ಯಂ ನ ದೇವೋಽಹಂ ನ ದಾನವಃ ।
ನ ಪನ್ನಗೋ ನ ಗನ್ಧರ್ವಃ ಕಿನ್ನರೋ ವಾ ಶುಚಿಸ್ಮಿತೇ ॥೩೪॥

ಸಮಸ್ತಾಃ ಪೂಜ್ಯಪಕ್ಷಾ ವೈ ದೇವಾದ್ಯಾ ಮಮ ಕುಣ್ಡಲೇ ।
ಮನುಷ್ಯೋಽಸ್ಮಿ ವಿಶಙ್ಕಾ ತೇ ನ ಕರ್ತವ್ಯಾತ್ರ ಕರ್ಹಿಚಿತ್ ॥೩೫॥

---

೩೧. ಕೂಡಲೆ ಕೋಪದಿಂದ ಕೂಡಿದ ನನ್ನ ಕುದುರೆಯು ಹಂದಿಯು ಧುಮುಕಿಹೋದ ಹಳ್ಳದಲ್ಲಿ ಧುಮುಕಿತು. ಕುದುರೆಯನ್ನು ಏರಿಕೊಂಡಿರುವ ನಾನು ಗಾಢಾಂಧಕಾರದಲ್ಲಿ ಏಕಾಕಿಯಾಗಿ ಭ್ರಮಿಸಿದೆನು.

೩೨. ನಾನು ಭ್ರಮಿಸುತ್ತ ಇದ್ದಹಾಗೆ ದೊಡ್ಡ ಬೆಳಕನ್ನು ಕಂಡೆನು. ಹಾಗು ಆಗ ನಿನ್ನನ್ನೂ ಕಂಡೆನು. ಆವರೆ ನಾನು ನಿನ್ನನ್ನು ಪ್ರಶ್ನೆಮಾಡಿದರೂ ನೀನು ಏನೊಂದು ಉತ್ತರವನ್ನೂ ಕೊಡದೆ ಮುಂದಕ್ಕೆ ಬಂದೆ.

೩೩. ಮುಂದಕ್ಕೆ ನಡೆದು ಬಂದ ನಿನ್ನನ್ನು ಹಿಂಬಾಲಿಸಿಕೊಂಡು ಬಂದ ನಾನು ಉತ್ತಮವಾದ ಈ ಪ್ರಾಸಾದಕ್ಕೆ ಪ್ರವೇಶಮಾಡಿದೆನು.

೩೪. ನಿರ್ಮಲವಾದ ನಗುವಿನ ಕಾಂತಿಯನ್ನು ಬೀರುವವಳೆ! ನನ್ನ ವೃತ್ತಾಂತವನ್ನು ಸತ್ಯವಾಗಿ ಹೇಳಿರುವೆನು. ನಾನು ದೇವತೆಯಲ್ಲ, ದಾನವನಲ್ಲ, ಪನ್ನಗನಲ್ಲ, ಗಂಧರ್ವನಲ್ಲ, ಕಿನ್ನರನೂ ಅಲ್ಲ.

೩೫. ಎಲೈ ಕುಂಡಲೆಯೆ! ದೇವತೆ ಮೊದಲಾದವರೆಲ್ಲರೂ ನನಗೆ ಪೂಜಾರ್ಹರ ಗುಂಪಿಗೆ ಸೇರಿದವರಾಗಿದ್ದಾರೆ. ನಾನು ಮನುಷ್ಯನಾಗಿದ್ದೇನೆ. ಈ ವೃತ್ತಾಂತದಲ್ಲಿ ಯಾವ ಅಂಶದಲ್ಲಿಯೂ ನೀನು ಸಂದೇಹಪಡಬೇಡ.

ಪುತ್ರಾವೂಚತುಃ :—

ತತಃ ಪ್ರಹೃಷ್ಟಾ ಸಾ ಕನ್ಯಾ ಸಖೀವದನಮುತ್ತಮಮ್ ।
ಲಜ್ಜಾಜಡಂ ವೀಕ್ಷಮಾಣಾ ಕಿಂಚಿನ್ನೋವಾಚ ಭಾಮಿನೀ ॥೫೬॥

ತತ್ಸಖೀ ಪುನರಪ್ಯೇನಾಂ ಪ್ರಹೃಷ್ಟಾ ಪ್ರತ್ಯುವಾಚ ಹ ।
ಯಥಾವತ್ಕಥಿತಂ ತೇನ ಸುರಭ್ಯಾ ವಚನಾನುಗಮ್ ॥೫೭॥

ಕುಣ್ಡಲೋವಾಚ :—

ವೀರ ಸತ್ಯಮಸನ್ದಿಗ್ಧಂ ಭವತಾಭಿಹಿತಂ ವಚಃ ।
ನಾನ್ಯತ್ರ ಹೃದಯಂ ಹ್ಯಸ್ಯಾ ದೃಷ್ಟ್ವಾ ಸ್ಥೈರ್ಯಂ ಪ್ರಯಾಸ್ಯತಿ॥೫೮॥

ಚನ್ದ್ರಮೇವಾಧಿಕಾ ಕಾನ್ತಿಃ ಸಮುಪೈತಿ ರವಿಂ ಪ್ರಭಾ ।
ಭೂತಿರ್ಧನ್ಯಂ ಧೃತಿರ್ಧೀರಂ ಕ್ಷಾನ್ತಿರಭ್ಯೇತಿ ಚೋತ್ತಮಮ್ ॥೫೯॥

ಪುತ್ರರು ಹೀಗೆ ಹೇಳಿದರು :—

೫೬. ತರುವಾಯ ವಿಲಾಸವತಿಯಾದ ಆ ಕನ್ಯೆಯು ಸಂತೋಷಗೊಂಡವಳಾಗಿ ಪ್ರಸನ್ನವಾದ ಸಖಿಯ ಮುಖವನ್ನು ನಾಚಿಕೆಯಿಂದ ಅಲಸವಾಗಿ ನೋಡುತ್ತಲಿದ್ದಳು. ಮುಂದೆ ಯಾವ ವಚನವನ್ನೂ ಮಾತನಾಡಲಿಲ್ಲ.

೫೭. ಸಖಿಯಾದ ಕುಂಡಲೆಯು ಸಂತೋಷವುಳ್ಳವಳಾಗಿ ಸುರಭಿಯ ವಚನಕ್ಕೆ ಅನುರೂಪವಾಗಿ ಋತಧ್ವಜನು ಹೇಳಿದ ಸಮಾಚಾರವನ್ನು ಅದರಂತೆ ಮದಾಲಸೆಗೆ ಮತ್ತೊಮ್ಮೆ ಹೇಳಿದಳು.

ಕುಂಡಲೆಯು ಹೇಳಿದಳು :—

೫೮. ವೀರನೆ! ನಿನ್ನಿಂದ ಪರಮಾರ್ಥವೂ ಸಂದೇಹವಿಲ್ಲದಿರುವುದೂ ಆದ ವಚನವು ಹೇಳಲ್ಪಟ್ಟಿದೆ. ನನ್ನ ಈ ಸಖಿಯ ಹೃದಯವು ಬೇರೊಂದು ವ್ಯಕ್ತಿಯಲ್ಲಿ ನೋಡಿದಮಾತ್ರದಿಂದ ಸ್ಥೈರ್ಯವನ್ನು ಹೊಂದಲಾರದು.

೫೯. ಅಧಿಕವಾದ ಕಾಂತಿಯು ಚಂದ್ರನನ್ನೇ ಆಶ್ರಯಿಸುವುದು. ಅಂತೆಯೆ ಪ್ರಭೆಯು ಸೂರ್ಯನನ್ನೂ, ಲಕ್ಷ್ಮಿಯು ಧನ್ಯನನ್ನೂ, ಧೃತಿಯು ಧೀರನನ್ನೂ ಮತ್ತು ಕ್ಷಮಾಶಕ್ತಿಯು ಉತ್ತಮಪುರುಷನನ್ನೂ ಹೊಂದುವುದಲ್ಲವೆ.

ತ್ವಯ್ಯೈವ ವಿದ್ಧೋಽಸನ್ದಿಗ್ಧಂ ಸ ಪಾಪೋ ದಾನವಾಧಮಃ ।
ಸುರಭಿಃ ಸಾ ಗವಾಂ ಮಾತಾ ಕಥಂ ಮಿಥ್ಯಾ ವದಿಷ್ಯತಿ ॥೬೦॥

ತದ್ಧನ್ಯೇಯಂ ಸಭಾಗ್ಯಾ ಚ ತ್ವತ್ಸಮ್ಬನ್ಧಮವೇತ್ಯ ವೈ ।
ಕುರುಷ್ವ ವೀರ ಯತ್ಕಾರ್ಯಂ ವಿಧಿನೈವ ಸಮಾಹಿತಮ್ ॥೬೧॥

ಪುತ್ರಾವೂಚತುಃ :—

ಪರವಾನಹಮಿತ್ಯಾಹ ರಾಜಪುತ್ರಃ ಸದಾ ಪಿತುಃ ।
ಸಾ ಚ ತಂ ಚಿನ್ತಯಾಮಾಸ ತುಮ್ಬುರುಂ ತತ್ಕುಲೇ ಗುರುಮ್॥೬೨॥

ಸ ಚಾಪಿ ತತ್ಕ್ಷಣಾತ್ಪ್ರಾಪ್ತೋ ನಿಗೃಹೀತಸಮಿತ್ಕುಶಃ ।
ಮದಾಲಸಾಯಾಃ ಸಮ್ಪ್ರೀತ್ಯಾ ಕುಣ್ಡಲಾಗೌರವೇಣ ಚ ॥೬೩॥

---

೬೦. ಪಾಪಿಯಾದ ಆ ರಾಕ್ಷಸಾಧಮನು ನಿಸ್ಸಂದೇಹವಾಗಿ ನಿನ್ನಿಂದಲೇ ಹೊಡೆಯಲ್ಪಟ್ಟಿರುವನು. ಗೋವುಗಳ ಮಾತೆಯಾದ ಆ ಸುರಭಿದೇವಿಯು ಏಕೆ ಸುಳ್ಳನ್ನು ಆಡುವುದು ?

೬೧. ವೀರನೇ ! ಆದ್ದರಿಂದ ಇವಳು ಧನ್ಯಳು ; ಇವಳು ನಿನ್ನ ಶ್ಲಾಘ್ಯವಾದ ಸಂಬಂಧವನ್ನು ಹೊಂದಿ ಮಹಾಭಾಗ್ಯವತಿಯೂ ಆಗಿರುವಳು. ವಿಧಿಯಿಂದಲೆ ಆತಂಕವಿಲ್ಲದ ಹಾಗೆ ಕಲ್ಪಿಸಲ್ಪಟ್ಟ ಮುಂದಿನ ಕರ್ತವ್ಯವನ್ನು ಮಾಡು.

ಪುತ್ರರಿಂತೆಂದರು :—

೬೨. ಆಗ ರಾಜಪುತ್ರನು "ನಾನು ಯಾವಾಗಲೂ ತಂದೆಗೆ ಪರತಂತ್ರನು" ಎಂದು ಹೇಳಿದನು. ಮದಾಲಸೆಯು ತನ್ನ ವಂಶದ ಕುಲಗುರುವಾದ ಆ ತುಂಬುರುವನ್ನು ಸ್ಮರಿಸಿಕೊಂಡಳು.

೬೩. ಮದಾಲಸೆಯಿಂದ ಸ್ಮರಿಸಲ್ಪಟ್ಟ ತುಂಬುರುವು ಮದಾಲಸೆಯಲ್ಲಿದ್ದ ಪ್ರೀತಿಯಿಂದಲೂ ಕುಂಡಲೆಯಲ್ಲಿರುವ ಗೌರವದಿಂದಲೂ ಆ ಕ್ಷಣದಲ್ಲಿ ಸಮಿತ್ತು-ದರ್ಭೆಗಳನ್ನು ತೆಗೆದುಕೊಂಡವನಾಗಿ ಅಲ್ಲಿಗೆ ಬಂದನು.

ಪ್ರಜ್ವಾಲ್ಯ ಪಾವಕಂ ಹುತ್ವಾ ಮನ್ತ್ರವಿತ್ಕೃತಮಙ್ಗಲಾಮ್ ।
ವೈವಾಹಿಕೇ ವಿಧೌ ಕನ್ಯಾಂ ಪ್ರತಿಪಾದ್ಯ ಯಥಾಗತಮ್ ॥೬೪॥

ಜಗಾಮ ತಪಸೇ ಧೀಮಾನ್ ಸ್ವಮಾಶ್ರಮಪದಂ ತತಃ ।
ಸಾ ಚಾಹ ತಾಂ ಸಖೀ ಬಾಲಾಂ ಕೃತಾರ್ಥಾಸ್ಮಿ ವರಾನನೇ ॥೬೫॥

ಸಂಯುಕ್ತಾಮಮುನಾ ದೃಷ್ಟ್ವಾ ತ್ವಾಮಹಂ ರೂಪಶಾಲಿನೀಮ್ ।
ತಪಸ್ತಪ್ಸ್ಯೇಽಹಮತುಲಂ ನಿರ್ವ್ಯಲೀಕೇನ ಚೇತಸಾ ॥೬೬॥

ತೀರ್ಥಾಮ್ಬುಧೌತಪಾಪಾ ಚ ಭವಿತ್ರೀ ನೇದೃಶೀ ಯಥಾ ॥೬೭॥

ತಂ ಚಾಹ ರಾಜಪುತ್ರಂ ಸಾ ಪ್ರಶ್ರಯೋಪನತಂ ವಚಃ ।
ಗನ್ತುಕಾಮಾ ನಿಜಸಖೀಸ್ನೇಹವಿಕ್ಲವಭಾಷಿಣೀ ॥೬೮॥

---

೬೪. ಮತ್ತು ಅಗ್ನಿಯನ್ನು ಪ್ರಜ್ವಲನಮಾಡಿ ಮಂತ್ರಪೂರ್ವಕವಾಗಿ ಹೋಮವಿಧಾನವನ್ನು ಪೂರೈಸಿ ಮಂಗಳಸಂಸ್ಕಾರದಿಂದ ಕೂಡಿದ ಕನ್ಯೆಯನ್ನು ವಿವಾಹವಿಧಿಯಿಂದ ದಾನಮಾಡಿ ಬಂದಹಾಗೆ ತಾನು ಹಿಂದಕ್ಕೆ ಹೊರಟನು.

೬೫. ತರುವಾಯ ಪ್ರಾಜ್ಞನಾದ ತುಂಬುರುವು ತಪಶ್ಚರ್ಯೆಗಾಗಿ ತನ್ನ ಆಶ್ರಮಕ್ಕೆ ತೆರಳಿದನು. ಆ ಸಖಿಯು ಆ ವಿವಾಹಿತಳಾದ ಬಾಲಿಕೆಗೆ ಹೇಳಿದಳು. ಸುಂದರಮುಖಿಯೆ ! ನಾನು ಕೃತಾರ್ಥಳಾದೆನು.

೬೬. ನಾನು ಸೌಂದರ್ಯಶಾಲಿನಿಯಾದ ನಿನ್ನನ್ನು ಈ ಪತಿಯ ಕೈಸೇರಿದುದನ್ನು ನೋಡಿ ಇನ್ನು ಏನೂ ಅಶಾಂತಿಯಿಲ್ಲದೆ ಶುದ್ಧವಾದ ಮನಸ್ಸಿನಿಂದ ಅಧಿಕವಾಗಿ ತಪಸ್ಸನ್ನು ಮಾಡುವೆನು.

೬೭. ಇನ್ನುಮುಂದೆ ತೀರ್ಥಯಾತ್ರೆಯನ್ನು ಮಾಡುತ್ತ ಅಲ್ಲಲ್ಲಿ ತೀರ್ಥೋದಕಗಳಲ್ಲಿ ಸ್ನಾನಮಾಡಿ ಪಾಪಗಳನ್ನು ಕಳೆದುಕೊಂಡು ಮತ್ತೆ ಹೀಗೆ ಭರ್ತೃವಿಯೋಗಿನಿಯಾಗದಂತೆ ಯತ್ನಿಸುವೆನು.

೬೮. ಇಷ್ಟು ಹೇಳಿ ಮುಂದೆ ಹೊರಡುವ ಇಷ್ಟವುಳ್ಳ ಕುಂಡಲೆಯು ತನ್ನ ಸಖಿಯ ಸ್ನೇಹದಿಂದ ಕಾತರವಾಗಿ ಮಾತನಾಡುತ್ತ ರಾಜಪುತ್ರನನ್ನು ಕುರಿತು ವಿನಯದಿಂದ ಕೂಡಿದ ಮಾತನ್ನು ಆಡಿದಳು.

ಕುಣ್ಡಲೋವಾಚ :—

ಪುಮ್ಭಿರಪ್ಯಮಿತಪ್ರಜ್ಞೈರ್ನೋಪದೇಶೋ ಭವದ್ವಿಧೇ ।
ದಾತವ್ಯಃ ಕಿಮುತ ಸ್ತ್ರೀಭಿರತೋ ನೋಪದಿಶಾಮಿ ತೇ ॥೬೯॥

ಕಿಂತ್ವಸ್ಯಾಸ್ತನುಮಧ್ಯಾಯಾಃ ಸ್ನೇಹಾಕೃಷ್ಟೇನ ಚೇತಸಾ ।
ತ್ವಯಾ ವಿಶ್ರಮ್ಭಿತಾ ಚಾಸ್ಮಿ ಸ್ಮಾರಯಾಮ್ಯರಿಸೂದನ ॥೭೦॥

ಭರ್ತವ್ಯಾ ರಕ್ಷಿತವ್ಯಾ ಚ ಭಾರ್ಯಾ ಹಿ ಪತಿನಾ ಸದಾ ।
ಧರ್ಮಾರ್ಥಕಾಮಸಂಸಿದ್ಧ್ಯೈ ಭಾರ್ಯಾ ಭರ್ತುಃ ಸಹಾಯಿನೀ॥೭೧॥

ಯಾ ಚ ಭಾರ್ಯಾ ಚ ಭರ್ತಾ ಚ ಪರಸ್ಪರಮನುವ್ರತೌ ।
ತದಾ ಧರ್ಮಾರ್ಥಕಾಮಾನಾಂ ತ್ರಯಾಣಾಮಪಿ ಸಙ್ಗತಮ್ ॥೭೨॥

ಕುಂಡಲಿಯು ಇತೆಂದಳು :—

೬೯. ಅಪಾರವಾದ ಪ್ರಜ್ಞೆಯುಳ್ಳ ನಿಮ್ಮಂತಹವರಿಗೆ ಪುರುಷರಿಂದ ಕೂಡ ಉಪದೇಶ ಮಾಡಬೇಕಾದುದಿಲ್ಲ. ಹೀಗಿರಲು ಸ್ತ್ರೀಯರು ಉಪದೇಶಿಸುವು-ದೆಂತು ? ಆದ್ದರಿಂದ ನಾನು ನಿನಗೆ ಉಪದೇಶಿಸುವುದಿಲ್ಲ.

೭೦. ಎಲೈ ಶತ್ರುಸಂಹಾರಕನೆ ! ಆದರೆ ಕೃಶಾಂಗಿಯಾದ ನನ್ನ ಸಖಿಯಲ್ಲಿದ್ದ ಪ್ರೀತಿಗೆ ಪರತಂತ್ರವಾದ ಮನಸ್ಸಿನಿಂದ ನಿನ್ನಿಂದ ವಿಶ್ವಾಸಯೋಗ್ಯ-ಳಾಗಿ ಮಾಡಲ್ಪಟ್ಟ ನಾನು ನಿನಗೆ ಜ್ಞಾಪಕಕ್ಕೆ ತರುವೆನು.

೭೧. ಧರ್ಮ-ಅರ್ಥ-ಕಾಮಪುರುಷಾರ್ಥಗಳನ್ನು ಸಾಧಿಸಲು ಪತಿಗೆ ಭಾರ್ಯೆಯು ಸಹಾಯಕಳಾಗುವಳು. ಅಂತಹ ಭಾರ್ಯೆಯನ್ನು ಪತಿಯು ಯಾವಾಗಲೂ ಇಷ್ಟವಂತೆ ನಡೆದು ಅನಿಷ್ಟವನ್ನು ಪರಿಹರಿಸಿ ರಕ್ಷಿಸಬೇಕು.

೭೨. ಯಾವ ಭಾರ್ಯೆ ಮತ್ತು ಪತಿ—ಈ ದಂಪತಿಗಳು ಪರಸ್ಪರವಾಗಿ ಐಕಮತ್ಯದಿಂದ ಹೊಂದಿಕೊಂಡಿರುವರೊ ; ಆ ದಂಪತಿಗಳಲ್ಲಿ ಧರ್ಮ-ಅರ್ಥ-ಕಾಮ ಈ ತ್ರಿವರ್ಗವು ಕೂಡಿಕೊಂಡು ಇರುವುದು.

ಕಥಂ ಭಾರ್ಯಾಮೃತೇ ಧರ್ಮಮರ್ಥಂ ವಾ ಪುರುಷಃ ಪ್ರಭೋ ।
ಪ್ರಾಪ್ನೋತಿ ಕಾಮಮಥ ವಾ ತಸ್ಯಾಂ ತ್ರಿತಯಮಾಹಿತಮ್ ॥೭೩॥

ತಥೈವ ಭರ್ತಾರಮೃತೇ ಭಾರ್ಯಾ ಧರ್ಮಾದಿಸಾಧನೇ ।
ನ ಸಮರ್ಥಾ ತ್ರಿವರ್ಗೋಽಯಂ ದಾಮ್ಪತ್ಯಂ ಸಮುಪಾಶ್ರಿತಃ ॥೭೪॥

ದೇವತಾಪಿತೃಭೃತ್ಯಾನಾಮತಿಥೀನಾಂ ಚ ಪೂಜನಮ್ ।
ನ ಪುಮ್ಭಿಃ ಶಕ್ಯತೇ ಕರ್ತುಮೃತೇ ಭಾರ್ಯಾಂ ನೃಪಾತ್ಮಜ ॥೭೫॥

ಪ್ರಾಪ್ತೋಽಪಿ ಚಾರ್ಥೋ ಮನುಜೈರಾನೀತೋಽಪಿ ನಿಜಂ ಗೃಹಮ್ ।
ಕ್ಷಯಮೇತಿ ವಿನಾ ಭಾರ್ಯಾಂ ಕುಭಾರ್ಯಾಸಙ್ಗ್ರಹೇಽಪಿ ವಾ ॥೭೬॥

ಕಾಮಸ್ತು ತಸ್ಯ ನೈವಾಸ್ತಿ ಪ್ರತ್ಯಕ್ಷೇಣೋಪಲಕ್ಷ್ಯತೇ ।
ದಮ್ಪತ್ಯೋಃ ಸಹಧರ್ಮೇಣ ತ್ರಯೀಧರ್ಮಮವಾಪ್ನುಯಾತ್ ॥೭೭॥

---

೭೩. ಪ್ರಭುವೆ! ಪುರುಷನು ಭಾರ್ಯೆಯಿಲ್ಲದೆ ಧರ್ಮ-ಅರ್ಥಗಳನ್ನು ಹೇಗೆ ಹೊಂದುವನು? ಮತ್ತು ಅರ್ಥ-ಕಾಮಗಳನ್ನು ಕೂಡ ಹೊಂದಲಾರನು. ಧರ್ಮ-ಅರ್ಥ-ಕಾಮ ಈ ತ್ರಿವರ್ಗವು ಭಾರ್ಯೆಗೆ ಅಧೀನವಾಗಿರುವುದು.

೭೪. ಹಾಗೆಯೆ ಭಾರ್ಯೆಯು ಪತಿಯನ್ನು ಬಿಟ್ಟು ಧರ್ಮಾದಿಗಳನ್ನು ಸಾಧಿಸಲು ಅರ್ಹಳಾಗಿಲ್ಲ. ಆದ್ದರಿಂದ ಪುರುಷಾರ್ಥಗಳ ತ್ರಿವರ್ಗವು ದಾಂಪತ್ಯ-ವನ್ನು ಅವಲಂಬಿಸಿದೆ.

೭೫. ರಾಜಪುತ್ರನೆ! ದೇವತೆ-ಪಿತೃ-ಭೃತ್ಯ ಮತ್ತು ಅತಿಥಿ ಇವರ ಪೂಜೆಯನ್ನು ಭಾರ್ಯೆಯನ್ನು ಬಿಟ್ಟು ಪುರುಷರಿಂದ ಮಾತ್ರ ಆಚರಿಸಲು ಶಕ್ಯವಿಲ್ಲ.

೭೬. ಪುರುಷರಿಂದ ಸಂಪಾದಿಸಲ್ಪಟ್ಟರೂ, ಒಂದು ವೇಳೆ ಅದು ಮನೆಗೆ ತರಲ್ಪಟ್ಟರೂ ಹಣವು ಅದನ್ನು ನೋಡಿಕೊಳ್ಳಲು ಭಾರ್ಯೆಯಿಲ್ಲದಿದ್ದರೂ ದುಷ್ಟಭಾರ್ಯೆಯಿದ್ದರೂ ನಾಶವಾಗುವುದು.

೭೭. ಭಾರ್ಯೆಯಿಲ್ಲದವನಿಗೆ ಕಾಮಸುಖವಿಲ್ಲವೆಂಬುದು ಪ್ರತ್ಯಕ್ಷ-ವಾಗಿಯೆ ತಿಳಿದಿದೆ. ದಂಪತಿಗಳು ಸಹಧರ್ಮಾಚರಣೆಯಿಂದ ವೇದವಿಹಿತ-ಧರ್ಮವನ್ನು ಮಾಡಿ ಶ್ರೇಯೋಭಾಗಿಗಳಾಗಬೇಕು.

ಪುತ್ರಾಣಾಂ ಯೋನಿರನ್ಯಾ ವೈ ನಾನ್ಯತೋ ಭಾರ್ಯಯಾ ವಿನಾ॥೭೮॥

ಪಿತೄನ್ ಪುತ್ರೈಸ್ತಥೈವಾನ್ನಸಾಧನೈರತಿಥೀನಪಿ ।
ಪೂಜಾಭಿರಮರಾಂಸ್ತದ್ವತ್ಸಾಧ್ವೀಂ ಭಾರ್ಯಾಂ ನರೋಽವತಿ ॥೭೯॥

ಸ್ತ್ರಿಯಾಶ್ಚಾಪಿ ವಿನಾ ಭರ್ತ್ರಾ ಧರ್ಮಕಾಮಾರ್ಥಸನ್ತತಿಃ ।
ನೈವ ತಸ್ಮಾತ್ತ್ರಿವರ್ಗೋಽಯಂ ದಾಮ್ಪತ್ಯಮಧಿಗಚ್ಛತಿ ॥೮೦॥

ಏತನ್ಮಯೋಕ್ತಂ ಯುವಯೋರ್ಗಮಿಷ್ಯಾಮಿ ಯಥೇಪ್ಸಿತಮ್ ।
ವರ್ಧ ತ್ವಮನಯಾ ಸಾರ್ಧಂ ಧನಪುತ್ರಸುಖಾಯುಷಾ ॥೮೧॥

ಪುತ್ರಾವೂಚತುಃ :—

ಇತ್ಯುಕ್ತ್ವಾ ಸಮ್ಪರಿಷ್ವಜ್ಯ ಸ್ವಸಖೀಂ ತಂ ನಮಸ್ಯ ಚ ।
ಜಗಾಮ ದಿವ್ಯಯಾ ಗತ್ಯಾ ಯಥಾಭಿಪ್ರೇತಮಾತ್ಮನಃ ॥೮೨॥

---

೭೮. ಪುರುಷನಿಗೆ ಭಾರ್ಯೆಯಿಲ್ಲದಿದ್ದರೆ ಪಿತೃಋಣಪರಿಹಾರಕ್ಕೆ ಅವಶ್ಯಹೊಂದಬೇಕಾದ ಪುತ್ರಸಂತತಿಗೆ ಬೇರೊಂದು ಉತ್ಪತ್ತಿಸ್ಥಾನವಿರುವುದಿಲ್ಲ.

೭೯. ಪುರುಷನು ಭಾರ್ಯಾವಂತನಾಗಿರುವುದರಿಂದ ಪುತ್ರೋತ್ಪತ್ತಿಯಿಂದ ಪಿತೃಗಳನ್ನೂ ಅನ್ನಸಿದ್ಧತೆಗಳಿಂದ ಅತಿಥಿಗಳನ್ನೂ ಮತ್ತು ಅರ್ಚನಾದಿಗಳಿಂದ ದೇವತೆಗಳನ್ನೂ ತೃಪ್ತಿಪಡಿಸುವನು. ಆದ್ದರಿಂದ ಧರ್ಮಮೂಲಳಾದ ಭಾರ್ಯೆಯನ್ನು ಪುರುಷನು ರಕ್ಷಿಸಬೇಕು.

೮೦. ನಾರಿಗೂ ಕೂಡ ಪತಿಯನ್ನು ಬಿಟ್ಟು ಧರ್ಮ-ಕಾಮ-ಅರ್ಥ ಮತ್ತು ಸಂತತಿ ಇವುಗಳ ಲಾಭವು ಇಲ್ಲ. ಆದುದರಿಂದ ಪುರುಷಾರ್ಥಗಳ ತ್ರಿವರ್ಗವು ದಾಂಪತ್ಯವನ್ನು ಅವಲಂಬಿಸಿರುವುದು.

೮೧. ನಿಮ್ಮಿಬ್ಬರಿಗೆ ಹೇಳಬೇಕಾದುದನ್ನು ನಾನು ಹೇಳಿರುವೆನು. ಮುಂದೆ ನನ್ನ ಇಷ್ಟದಂತೆ ನಾನು ಹೋಗುವೆನು. ನೀನು ಈ ಪತ್ನಿಯೊಡನೆ ಧನ-ಪುತ್ರ-ಸೌಖ್ಯ ಮತ್ತು ಆಯುಷ್ಯಗಳನ್ನು ಹೊಂದಿ ಚಿರಕಾಲ ಬಾಳು.

ಪುತ್ರರು ಹೀಗೆಂದರು :—

೮೨. ಹೀಗೆಂದು ಹೇಳಿ ಕುಂಡಲೆಯು ತನ್ನ ಸಖಿಯನ್ನು ಅಪ್ಪಿಕೊಂಡು ರಾಜಪುತ್ರನನ್ನು ನಮಸ್ಕರಿಸಿ ತನ್ನ ಇಷ್ಟವನ್ನು ಅನುಸರಿಸಿ ದಿವ್ಯಗತಿಯಿಂದ ಹೊರಟುಹೋದಳು.

ಸೋಽಪಿ ಶತ್ರುಜಿತಃ ಪುತ್ರಸ್ತಾಮಾರೋಪ್ಯ ತುರಙ್ಗಮಮ್ ।
ನಿರ್ಗನ್ತುಕಾಮಃ ಪಾತಾಲಾದ್ವಿಜ್ಞಾತೋ ದನುಸಮ್ಭವೈಃ ॥೮೩॥

ತತಸ್ತೈಃ ಸಹಸೋತ್ಕ್ರುಷ್ಟಂ ಹ್ರಿಯತೇ ಹ್ರಿಯತೇ ತ್ವಿತಿ ।
ಕನ್ಯಾರತ್ನಂ ಯದಾನೀತಂ ದಿವಃ ಪಾತಾಲಕೇತುನಾ ॥೮೪॥

ತತಃ ಪರಿಘನಿಸ್ತ್ರಿಂಶಗದಾಶೂಲಶರಾಯುಧಮ್ ।
ದಾನವಾನಾಂ ಬಲಂ ಪ್ರಾಪ್ತಂ ಸಹ ಪಾತಾಲಕೇತುನಾ ॥೮೫॥

ತಿಷ್ಠ ತಿಷ್ಠೇತಿ ಜಲ್ಪನ್ತಸ್ತೇ ತದಾ ದಾನವೋತ್ತಮಾಃ ।
ಶರವರ್ಷೈಸ್ತಥಾ ಶೂಲೈರ್ವವರ್ಷುರ್ನೃಪನನ್ದನಮ್ ॥೮೬॥

ಸ ತು ಶತ್ರುಜಿತಃ ಪುತ್ರಸ್ತತಸ್ತಾನ್ ಪ್ರತಿವೀರ್ಯವಾನ್ ।
ಚಿಚ್ಛೇದ ಶರಜಾಲೇನ ಪ್ರಹಸನ್ನಿವ ಲೀಲಯಾ ॥೮೭॥

---

೮೩. ಶತ್ರುಜಿತರಾಜನ ಪುತ್ರನಾದ ಋತಧ್ವಜನು ಮದಾಲಸೆಯನ್ನು ಕುದುರೆಯಮೇಲೆ ಕುಳ್ಳಿರಿಸಿಕೊಂಡು ಪಾತಾಲದಿಂದ ಮರ್ತ್ಯಲೋಕಕ್ಕೆ ಹೊರಡಲು ಇಷ್ಟಪಡುತ್ತಿರುವಷ್ಟರಲ್ಲಿ ದಾನವರಿಂದ ತಿಳಿಯಲ್ಪಟ್ಟನು.

೮೪. ತರುವಾಯ ಪಾತಾಲಕೇತುವಿನಿಂದ ಸ್ವರ್ಗಲೋಕದಿಂದ ಯಾವ ಕನ್ಯಾರತ್ನವು ತರಲ್ಪಟ್ಟಿತ್ತೋ ಆ ಕನ್ಯಾರತ್ನವು ಅಪಹರಿಸಲ್ಪಡುತ್ತಿದೆ ಎಂದು ದಾನವರು ಕೂಡಲೆ ಗಟ್ಟಿಯಾಗಿ ಕೂಗಿಕೊಂಡರು.

೮೫. ಅನಂತರದಲ್ಲಿ ಪರಿಘ, ಖಡ್ಗ, ಗದೆ, ಶೂಲ, ಬಾಣ ಮುಂತಾದ ಆಯುಧಗಳನ್ನು ಧರಿಸಿಕೊಂಡು ರಾಕ್ಷಸರ ಸೈನ್ಯವು ಪಾತಾಲಕೇತು ದಾನವನ ಸಂಗಡ ಬಂದಿತು.

೮೬. ಆಗ ಆ ಉತ್ತಮವೀರರಾದ ದಾನವರು ನಿಲ್ಲು; ನಿಲ್ಲು; ಎಂದು ಗರ್ಜಿಸುತ್ತ ಅನೇಕ ಬಾಣಗಳ ವೃಷ್ಟಿಯಿಂದಲೂ ಹಾಗು ಶೂಲಗಳ ಮಳೆಯಿಂದಲೂ ರಾಜಕುಮಾರನನ್ನು ಮುಚ್ಚಿಹಾಕಿದರು.

೮೭. ಆಮೇಲೆ ದಾನವರನ್ನು ಮೀರಿಸಿದ ವೀರ್ಯವುಳ್ಳ ಆ ಶತ್ರುಜಿತನ ಪುತ್ರನು ನಗುನಗುತ್ತ ಲೀಲೆಯಿಂದ ಆ ಶಸ್ತ್ರಗಳನ್ನು ತನ್ನ ಪ್ರತಿಶಸ್ತ್ರಗಳಿಂದ ಕತ್ತರಿಸಿದನು.

ಕ್ಷಣೇನ ಪಾತಾಲತಲಮಸಿಶಕ್ತ್ಯೃಷ್ಟಿಸಾಯಕೈಃ ।
ಛಿನ್ನೈಃ ಸಂಛನ್ನಮತ್ಯರ್ಥಮೃತಧ್ವಜಶರೋತ್ಕರೈಃ ॥೮೮॥

ತತೋಽಸ್ತ್ರಂ ತ್ವಾಷ್ಟ್ರಮಾದಾಯ ಚಿಕ್ಷೇಪ ಪ್ರತಿ ದಾನವಾನ್ ।
ತೇನ ತೇ ದಾನವಾಃ ಸರ್ವೇ ಸಹ ಪಾತಾಲಕೇತುನಾ ॥೮೯॥

ಜ್ವಾಲಾಮಾಲಾತಿತೀವ್ರೇಣ ಸ್ಫುಟದಸ್ಥಿಚಯಾಸ್ತದಾ ।
ನಿರ್ದಗ್ಧಾಃ ಕಾಪಿಲಂ ತೇಜಃ ಸಮಾಸಾದ್ಯೇವ ಸಾಗರಾಃ ॥೯೦॥

ತತಃ ಸ ರಾಜಪುತ್ರೋಽಶ್ವೀ ನಿಹತ್ಯಾಸುರಸತ್ತಮಾನ್ ।
ಸ್ತ್ರೀರತ್ನೇನ ಸಮಂ ತೇನ ಸಮಾಗಚ್ಛತ್ಪಿತುಃ ಪುರಮ್ ॥೯೧॥

---

೮೮. ಋತಧ್ವಜರಾಜನಂದನನ ಬಾಣರಾಶಿಯಿಂದ ಕತ್ತರಿಸಲ್ಪಟ್ಟ ದಾನವರ ಖಡ್ಗ, ಶಕ್ತಿ, ಋಷ್ಟಿ, ಮತ್ತು ಬಾಣ ಇವುಗಳಿಂದ ಪಾತಾಲವು ಒಂದು ಕ್ಷಣಮಾತ್ರದಲ್ಲಿ ತುಂಬ ತುಂಬಿಹೋಯಿತು.

೮೯. ತರುವಾಯ ರಾಜಪುತ್ರನು ತ್ವಷ್ಟೃ ಅಸ್ತ್ರವನ್ನು ತೆಗೆದುಕೊಂಡು ದಾನವರ ಮೇಲೆ ಪ್ರಯೋಗಮಾಡಿದನು. ಪಾತಾಲಕೇತುವಿನ ಸಮೇತರಾಗಿ ಆ ಎಲ್ಲ ದಾನವರು ತ್ವಷ್ಟೃ ಅಸ್ತ್ರದಿಂದ ಪರಾಜಯವನ್ನು ಹೊಂದಿದರು.

೯೦. ಆಗ ದಾನವರು ಜ್ವಾಲಾಮಾಲೆಗಳಿಂದ ಅತಿತೀಕ್ಷ್ಣವಾಗಿ ಉರಿಯುತ್ತಿರುವ ತೇಜಸ್ಸಿನಿಂದ ಒಡೆದು ಚೂರಾಗುವ ಎಲುಬು-ಮೂಳೆ-ಯುಳ್ಳವರಾಗಿ ಕಪಿಲಮುನಿಯ ತೇಜಃಪುಂಜದಿಂದ ಸಗರಪುತ್ರರು ದಗ್ಧರಾದ ಹಾಗೆ ದಗ್ಧರಾದರು.

೯೧. ತರುವಾಯ ಆ ರಾಜನಂದನನು ಮಹಾವೀರ ಅಸುರರನ್ನು ವಧಿಸಿ ಸ್ತ್ರೀರತ್ನವಾದ ಮದಾಲಸೆಯೊಡನೆ ಅಶ್ವಾರೂಢನಾಗಿ ಜನಕನ ನಗರಕ್ಕೆ ಹಿಂತಿರುಗಿ ಬಂದನು.

ಪ್ರಣಿಪತ್ಯ ಚ ತತ್ಸರ್ವಂ ಸ ತು ಪಿತ್ರೇ ನ್ಯವೇದಯತ್ ।
ಪಾತಾಲಗಮನಂ ಚೈವ ಕುಣ್ಡಲಾಯಾಶ್ಚ ದರ್ಶನಮ್ ॥೯೨॥

ತದ್ವನ್ಮದಾಲಸಾಪ್ರಾಪ್ತಿಂ ದಾನವೈಶ್ಚಾಪಿ ಸಙ್ಗರಮ್ ।
ವಧಶ್ಚ ತೇಷಾಮಸ್ತ್ರೇಣ ಪುನರಾಗಮನಂ ತಥಾ ॥೯೩॥

ಇತಿ ಶ್ರುತ್ವಾ ಪಿತಾ ತಸ್ಯ ಚರಿತಂ ಚಾರು ಚೇತಸಃ ।
ಪ್ರೀತಿಮಾನಭವಚ್ಚೈನಂ ಪರಿಷ್ವಜ್ಯಾಹ ಚಾತ್ಮಜಮ್ ॥೯೪॥

ಸತ್ಪುತ್ರೇಣ ತ್ವಯಾ ಪುತ್ರ ತಾರಿತೋಽಹಂ ಮಹಾತ್ಮನಾ ।
ಭಯೇಭ್ಯೋ ಮುನಯಸ್ತ್ರಾತಾ ಯೇನ ಸದ್ಧರ್ಮಚಾರಿಣಾ ॥೯೫॥

---

೯೨. ಋತಧ್ವಜನು ನಗರಕ್ಕೆ ಬಂದು ತಂದೆಗೆ ನಮಸ್ಕಾರಮಾಡಿ ನಡೆದ ವೃತ್ತಾಂತವನ್ನು ಎಲ್ಲ ನಿವೇದಿಸಿದನು. ತಾನು ಪಾತಾಲಕ್ಕೆ ಹೋದುದು, ಅಲ್ಲಿ ಕುಂಡಲೆಯನ್ನು ಮೊದಲು ನೋಡಿರುವುದು ಇವುಗಳನ್ನು ತಿಳಿಸಿದನು.

೯೩. ಮತ್ತು ಮದಾಲಸೆಯೆಂಬ ಕನ್ಯೆಯ ಪ್ರಾಪ್ತಿಯಾದುದನ್ನೂ, ಯುದ್ಧಕ್ಕಾಗಿ ದಾನವರು ಬಂದಿರುವುದನ್ನೂ, ಅಸ್ತ್ರದಿಂದ ಅವರನ್ನು ವಧಿಸಿದುದನ್ನೂ ಮತ್ತು ಮತ್ತೆ ನಗರಕ್ಕೆ ಬಂದಿರುವುದನ್ನೂ ಸಮಗ್ರವಾಗಿ ಹೇಳಿದನು.

೯೪. ತಂದೆಯು ಮನಸ್ಸನ್ನು ಆನಂದಿಸುವ ಪುತ್ರನ ಆ ಸಮಸ್ತ ಚರಿತ್ರೆಯನ್ನು ಕೇಳಿ ಪ್ರೀತಿಯುಳ್ಳವನಾದನು. ಮತ್ತು ಆ ಪುತ್ರನನ್ನು ಅಪ್ಪಿಕೊಂಡು ಈರೀತಿಯಾಗಿ ಹೇಳಿದನು.

೯೫. ಪುತ್ರನೆ! ನೀನು ಸದ್ಧರ್ಮವಂತನಾಗಿ ನಡೆದು ತಪಸ್ವಿಗಳನ್ನು ಭಯದಿಂದ ರಕ್ಷಣೆಮಾಡಿದ್ದೀಯೆ. ಇಂತಹ ಮಹಾತ್ಮನೂ, ಸತ್ಪುತ್ರನೂ ಆದ ನಿನ್ನಿಂದ ನಾನು ಉದ್ಧರಿಸಲ್ಪಟ್ಟಿರುವೆನು.

ಮತ್ಪೂರ್ವೈಃ ಖ್ಯಾತಿಮಾನೀತಂ ಮಯಾ ವಿಸ್ತಾರಿತಂ ಪುನಃ ।
ಪರಾಕ್ರಮವತಾ ವೀರ ತ್ವಯಾ ತದ್ಬಹುಲೀಕೃತಮ್ ॥೯೬॥

ಯದುಪಾತ್ತಂ ಯಶಃ ಪಿತ್ರಾ ಧನಂ ವೀರ್ಯಮಥಾಪಿ ವಾ ।
ತನ್ನ ಹಾಪಯತೇ ಯಸ್ತು ಸ ನರೋ ಮಧ್ಯಮಃ ಸ್ಮೃತಃ ॥೯೭॥

ತದ್ವೀರ್ಯಾದಧಿಕಂ ಯಸ್ತು ಪುನರನ್ಯತ್ಸ್ವಶಕ್ತಿತಃ ।
ನಿಷ್ಪಾದಯತಿ ತಂ ಪ್ರಾಜ್ಞಾ ವದನ್ತಿ ನರಮುತ್ತಮಮ್ ॥೯೮॥

ಯಃ ಪಿತ್ರಾ ಸಮುಪಾತ್ತಾನಿ ಧನವೀರ್ಯಯಶಾಂಸಿ ವೈ ।
ನ್ಯೂನತಾಂ ನಯತಿ ಪ್ರಾಜ್ಞಾಸ್ತಮಾಹುಃ ಪುರುಷಾಧಮಮ್ ॥೯೯॥

---

೯೬. ನನ್ನ ಕುಲದಲ್ಲಿ ವೀರ್ಯವು ನನ್ನ ಪೂರ್ವೀಕರಿಂದ ಖ್ಯಾತಿಗೊಳಿಸಲ್ಪಟ್ಟಿತು. ನನ್ನಿಂದ ಇನ್ನಷ್ಟು ಖ್ಯಾತಿಯು ಅದಕ್ಕೆ ತರಲ್ಪಟ್ಟಿತು. ವೀರಪುತ್ರನೆ! ಪರಾಕ್ರಮಶಾಲಿಯಾದ ನಿನ್ನಿಂದ ಮತ್ತಷ್ಟು ಕಂಗೊಳಿಸುವಂತೆ ಮಾಡಲ್ಪಟ್ಟಿತು.

೯೭. ತಂದೆಯಿಂದ ಯಾವ ಕೀರ್ತಿ, ಧನ ಅಥವಾ ವೀರ್ಯ ಇವುಗಳು ಎಷ್ಟು ಆರ್ಜಿತವಾಗಿದ್ದುವೊ; ಅವುಗಳಲ್ಲಿ ಸ್ವಲ್ಪವನ್ನೂ ಯಾವ ಪುತ್ರನು ಇಳಿಸುವುದಿಲ್ಲವೊ ಅವನು ಮಧ್ಯಮಮಾನವನೆಂದು ಕರೆಯಲ್ಪಡುವನು.

೯೮. ಯಾವ ಮಾನವನು ಸ್ವಶಕ್ತಿಯಿಂದ ಕುಲಕ್ರಮವಾಗಿ ಬಂದ ವೀರ್ಯಕ್ಕಿಂತಲೂ ಹೆಚ್ಚು ವೀರ್ಯವನ್ನು ತೋರಿಸುವನೊ; ಪ್ರಾಜ್ಞರು ಅವನನ್ನು ಉತ್ತಮಮಾನವನೆಂದು ಹೇಳುವರು.

೯೯. ಯಾವನು ತಂದೆಯಿಂದ ಆರ್ಜಿಸಲ್ಪಟ್ಟ ಧನ-ವೀರ್ಯ-ಕೀರ್ತಿಗಳನ್ನು ನ್ಯೂನಮಾಡುವನೊ ಅವನು ಪುರುಷಾಧಮನು ಎಂದು ಪ್ರಾಜ್ಞರು ಹೇಳುವರು.

ತನ್ಮಯಾ ಬ್ರಾಹ್ಮಣತ್ರಾಣಂ ಕೃತಮಾಸೀದ್ಯಥಾ ತ್ವಯಾ ॥೧೦೦॥

ಪಾತಾಲಗಮನಂ ಯಚ್ಚ ಯಚ್ಚಾಸುರವಿನಾಶನಮ್ ।
ಏತದಭ್ಯಧಿಕಂ ವತ್ಸ ತೇನ ತ್ವಂ ಪುರುಷೋತ್ತಮಃ ॥೧೦೧॥

ತದ್ಧನ್ಯೋಽಸ್ಮ್ಯಥವಾ ನ ತ್ವಮಹಮೇವ ಗುಣಾಧಿಕಃ ।
ತ್ವಾಂ ಪುತ್ರಮೀದೃಶಂ ಪ್ರಾಪ್ಯ ಶ್ಲಾಘ್ಯಂ ಪುಣ್ಯವತಾಮಪಿ ॥೧೦೨॥

ನ ಸತ್ಪುತ್ರಕೃತಾಂ ಪ್ರೀತಿಮನ್ಯಃ ಪ್ರಾಪ್ನೋತಿ ಮಾನವಃ ।
ಪುತ್ರೇಣ ನಾತಿಶಯಿತೋ ಯಃ ಪ್ರಜ್ಞಾದಾನವಿಕ್ರಮೈಃ ॥೧೦೩॥

ಧಿಕ್ತಸ್ಯ ಜನ್ಮ ಯಃ ಪಿತ್ರಾ ಲೋಕೇ ವಿಜ್ಞಾಯತೇ ನರಃ ।
ಯತ್ಪಿತ್ರಾತ್ಖ್ಯಾತಿಮಭ್ಯೇತಿ ತಸ್ಯ ಜನ್ಮ ಸುಜನ್ಮನಃ ॥೧೦೪॥

---

೧೦೦. ಪುತ್ರನೆ! ನಮ್ಮ ವಂಶದಲ್ಲಿ ಜನಿಸಿದ ನಾನು ಸ್ವಧರ್ಮದಲ್ಲಿದ್ದು-ಕೊಂಡು ಈಗ ನೀನು ಮಾಡಿರುವಹಾಗೆ ತಪಸ್ವಿಬ್ರಾಹ್ಮಣರ ರಕ್ಷಣೆಯನ್ನು ಮಾಡಿರುವೆನು. ಅಷ್ಟೆ!

೧೦೧. ಪಾತಾಲಕ್ಕೆ ಹೋದುದು, ಮತ್ತು ಅಲ್ಲಿ ಅಸುರರನ್ನು ನಾಶಮಾಡಿರುವುದು—ನಾನು ಮಾಡದಿರುವ ಈ ಸಾಹಸಗಳನ್ನು ನೀನು ಮಾಡಿದ್ದೀಯೆ. ವತ್ಸ! ಆದ್ದರಿಂದ ನೀನು ಪುರುಷೋತ್ತಮನಾಗಿರುವೆ.

೧೦೨. ಇದರಿಂದ ನಾನೂ ಧನ್ಯನಾಗಿರುತ್ತೇನೆ. ಅಥವಾ ಪುಣ್ಯ-ವಂತರಿಗೂ ಶ್ಲಾಘ್ಯನಾದ ಇಂತಹ ನಿನ್ನನ್ನು ಪುತ್ರನನ್ನಾಗಿಹೊಂದಿರುವ ನಾನು ಮಾತ್ರ ಅಧಿಕಗುಣವಂತನಾಗಿರುವೆನು; ನೀನು ಅಂತಹ ಗುಣವಂತನಲ್ಲ.

೧೦೩. ಯಾವ ಮಾನವನು ಪ್ರಜ್ಞಾ-ದಾನ-ವಿಕ್ರಮಗುಣಗಳಲ್ಲಿ ಪುತ್ರನಿಂದ ಮೀರಲ್ಪಡುವುದಿಲ್ಲವೊ ಅಂತಹ ಬೇರೊಬ್ಬ ಮಾನವನು ಸತ್ಪುತ್ರ-ನಿಂದ ಲಭಿಸುವ ತೃಪ್ತಿಯನ್ನು ಹೊಂದುವುದಿಲ್ಲ.

೧೦೪. ಯಾವ ಮನುಜನು ತಂದೆಯಿಂದಲೆ ಲೋಕದಲ್ಲಿ ಖ್ಯಾತಿಯನ್ನು ಹೊಂದುವನೊ; ಅವನ ಜನ್ಮಕ್ಕೆ ಧಿಕ್ಕಾರವು. ಯಾವ ತಂದೆಯು ಪುತ್ರನಿಂದ ಖ್ಯಾತಿಗಳಿಸುವನೊ; ಅವನ ಜನ್ಮವು ಸಾರ್ಥಕನಾದ ಜನ್ಮ.

ಆತ್ಮಜ್ಞಾನೀ ಯತೋ ಧನ್ಯೋ ಮಧ್ಯಃ ಪಿತೃಪಿತಾಮಹೈಃ ।
ಮಾತೃಪಕ್ಷೇಣ ಮಾತ್ರಾ ಚ ಖ್ಯಾತಿಂ ಯಾತಿ ನರಾಧಮಃ ॥೧೦೫॥

ತತ್ಪುತ್ರ ಧನವೀರ್ಯೈಸ್ತ್ವಂ ವಿವರ್ಧಸ್ವ ಸುಖೇನ ಚ ।
ಗನ್ಧರ್ವತನಯಾ ಚೇಯಂ ಮಾ ವಿಯುಜ್ಯತು ವೈ ತ್ವಯಾ ॥೧೦೬॥

ಇತಿ ಪಿತ್ರಾ ಬಹುವಿಧಂ ಪ್ರಿಯಮುಕ್ತ್ವಾ ಪುನಃ ಪುನಃ ।
ಪರಿಷ್ವಜ್ಯ ಸ್ವಮಾವಾಸಂ ಸಭಾರ್ಯಃ ಸ ವಿಸರ್ಜಿತಃ ॥೧೦೭॥

ಸ ತಯಾ ಭಾರ್ಯಯಾ ಸಾರ್ಧಂ ರೇಮೇ ತತ್ರ ಪಿತುಃ ಪುರೇ ।
ಅನ್ಯೇಷು ಚ ತಥೋದ್ಯಾನವನಪರ್ವತಸಾನುಷು ॥೧೦೮॥

---

೧೦೫. ತಾನೇ ಖ್ಯಾತಿಗಳಿಸಿದ ಮಾನವನು ಧನ್ಯನು. ತಂದೆ-ತಾತಂದಿರಿಂದ ಖ್ಯಾತಿಯುಳ್ಳವನು ಮಧ್ಯಮನು. ಮತ್ತು ಮಾತೃವರ್ಗದವರಿಂದ ಅಥವಾ ತಾಯಿಯಿಂದ ಖ್ಯಾತಿಹೊಂದಿದವನು ನರಾಧಮನು.

೧೦೬. ಆದುದರಿಂದ ಪುತ್ರನೆ! ಧನ-ವೀರ್ಯ ಮತ್ತು ಸುಖಭೋಗಗಳಿಂದ ನೀನು ವೃದ್ಧಿಹೊಂದು. ಮತ್ತು ಈ ಗಂಧರ್ವಪುತ್ರಿಯಾದ ನಿನ್ನ ಪತ್ನಿಯು ಎಂದೂ ನಿನ್ನ ವಿಯೋಗವನ್ನು ಹೊಂದದಂತಾಗಲಿ.

೧೦೭. ಹೀಗೆಂದು ತಂದೆಯಿಂದ ಮತ್ತೆ ಮತ್ತೆ ಅನೇಕ ವಿಧವಾಗಿ ಪ್ರಿಯವಾದ ಮಾತನ್ನು ನುಡಿದು ಪುತ್ರನನ್ನು ಅಪ್ಪಿಕೊಂಡು ಭಾರ್ಯೆಯೊಡನೆ ಅವನು ತನ್ನ ವಾಸಗೃಹಕ್ಕೆ ಕಳುಹಿಸಲ್ಪಟ್ಟನು.

೧೦೮. ಅನಂತರ ಋತಧ್ವಜನು ಆ ಭಾರ್ಯೆಯೊಡನೆ ತಂದೆಯ ನಗರದಲ್ಲಿಯೂ ಬೇರೆ ಉದ್ಯಾನ-ಅರಣ್ಯ-ಪರ್ವತಗಳ ತಪ್ಪಲುಗಳಲ್ಲಿಯೂ ತನ್ನ ಇಷ್ಟಬಂದಹಾಗೆ ವಿಹರಿಸಿದನು.

ಶ್ವಶ್ರೂಶ್ವಶುರಯೋಃ ಪಾದೌ ಪ್ರಣಿಪತ್ಯ ಚ ಸಾ ಶುಭಾ ।
ಪ್ರಾತಃ ಪ್ರಾತಸ್ತತಸ್ತಸ್ಯ ಪ್ರಣಿಪತ್ಯ ಸುಮಧ್ಯಮಾ ॥೧೦೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಕುವಲಯಾಶ್ವೀಯೇ
ಏಕೋನವಿಂಶೋಽಧ್ಯಾಯಃ

---

೧೦೯. ಸುಂದರಿಯೂ ಗಂಧರ್ವಪುತ್ರಿಯೂ ಆದ ಮದಾಲಸೆಯು ಪ್ರತಿದಿನ ಬೆಳಿಗ್ಗೆ ಅತ್ತೆಮಾವಂದಿರ ಪಾದಗಳಿಗೆ ವಂದಿಸಿ ತರುವಾಯ ತನ್ನ ಪತಿಯ ಪಾದಾರವಿಂದಗಳಿಗೆ ವಂದಿಸುತ್ತಿದ್ದಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ಹತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ವಿಂಶೋಽಧ್ಯಾಯಃ

(ತಾಲಕೇತೋಃ ಕುವಲಯಾಶ್ವಪ್ರತಾರಣಮ್)

ಪುತ್ರಾವೂಚತುಃ :—

ತತಃ ಕಾಲೇ ಬಹುತಿಥೇ ಗತೇ ರಾಜಾ ಪುನಃ ಸುತಮ್ ।
ಪ್ರಾಹ ಗಚ್ಛಾಶು ವಿಪ್ರಾಣಾಂ ತ್ರಾಣಾಯ ಚರ ಮೇದಿನೀಮ್ ॥೧॥

ಅಶ್ವಮೇತಂ ಸಮಾರುಹ್ಯ ಪ್ರಾತಃ ಪ್ರಾತರ್ದಿನೇ ದಿನೇ ।
ಆಬಾಧಾ ದ್ವಿಜಮುಖ್ಯಾನಾಮನ್ವೇಷ್ಟವ್ಯಾ ಸದೈವ ಹಿ ॥೨॥

ಇಪ್ಪತ್ತನೆಯ ಅಧ್ಯಾಯ

ಪುತ್ರರು ಹೀಗೆ ನುಡಿದರು :—

೧. ತರುವಾಯ ಹಾಗೆಯೆ ಕೆಲವು ಹೆಚ್ಚು ಕಾಲವು ಕಳೆಯಲು ತಂದೆಯು ಮತ್ತೆ ಪುತ್ರನನ್ನು ಕರೆದು ಹೇಳಿದನು. ಪುತ್ರನೆ! ಬೇಗ ಹೋಗು. ವಿಪ್ರರ ರಕ್ಷಣೆಗೋಸ್ಕರ ಭೂಸಂಚಾರವನ್ನು ಮಾಡು.

೨. ಪ್ರತಿ ದಿನದಲ್ಲಿಯೂ ಪ್ರತಿಯೊಂದು ಪ್ರಾತಃಕಾಲದ ಹೊತ್ತಿನ-ಲ್ಲಿಯೂ ಈ ಕುದುರೆಯನ್ನು ಏರಿಕೊಂಡುಹೋಗಿ ಯಾವಾಗಲೂ ದ್ವಿಜೋತ್ತಮ-ರಿಗೆ ಎಲ್ಲಿ ಯಾವ ಪೀಡೆಯಾಗುತ್ತಿದೆಯೆಂಬುದನ್ನು ಹುಡುಕಬೇಕು.

ದುರ್ವೃತ್ತಾಃ ಸನ್ತಿ ಶತಶೋ ದಾನವಾಃ ಪಾಪಬುದ್ಧಯಃ ।
ತೇಭ್ಯೋ ನ ಸ್ಯಾದ್ಯಥಾ ಬಾಧಾ ಮುನೀನಾಂ ತ್ವಂ ತಥಾ ಕುರು ॥೩॥

ಸ ತಥೋಕ್ತಸ್ತದಾ ಪಿತ್ರಾ ತಥಾ ಚಕ್ರೇ ನೃಪಾತ್ಮಜಃ ।
ಪರಿಕ್ರಮ್ಯ ಮಹೀಂ ಕೃತ್ಸ್ನಾಂ ವವನ್ದೇ ಚರಣೌ ಪಿತುಃ ॥೪॥

ಅಹನ್ಯಹನಿ ಸಮ್ಪ್ರಾಪ್ತೇ ಪೂರ್ವಾಹ್ಣೇ ನೃಪನನ್ದನಃ ।
ತತಶ್ಚ ಶೇಷಂ ದಿವಸಂ ತಯಾ ರೇಮೇ ಸುಮಧ್ಯಯಾ ॥೫॥

ಏಕದಾ ತು ಚರನ್ ಸೋಽಥ ದದರ್ಶ ಯಮುನಾತಟೇ ।
ಪಾತಾಲಕೇತೋರನುಜಂ ತಾಲಕೇತುಂ ಕೃತಾಶ್ರಮಮ್ ॥೬॥

ಮಾಯಾವೀ ದಾನವಃ ಸೋಽಥ ಮುನಿರೂಪಂ ಸಮಾಶ್ರಿತಃ ।
ಸ ಪ್ರಾಹ ರಾಜಪುತ್ರಂ ತಂ ಪೂರ್ವವೈರಮನುಸ್ಮರನ್ ॥೭॥

---

೩. ಕೆಟ್ಟ ನಡತೆಯುಳ್ಳವರೂ, ಪಾಪದಲ್ಲಿ ಅಭಿರುಚಿಯುಳ್ಳವರೂ ಆದ ದಾನವರು ನೂರಾರು ಮಂದಿ ಇರುವರು. ಅವರಿಂದ ಮುನಿಗಳಿಗೆ ಹೇಗೆ ಪೀಡೆಯುಂಟಾಗಲಾರದೊ, ಹಾಗೆ ನೀನು ಮಾಡು.

೪. ಆಗ ತಂದೆಯಿಂದ ಆ ರೀತಿಯಾಗಿ ಹೇಳಲ್ಪಟ್ಟಿರುವ ನೃಪಕುಮಾರನು ಹಾಗೆಯೆ ಮಾಡುತ್ತ ಸಂಪೂರ್ಣವಾಗಿ ಭೂಮಿಯಲ್ಲಿ ಸಂಚಾರಮಾಡಿ ತಂದೆಯ ಪಾದಗಳಿಗೆ ವಂದಿಸುತ್ತಿದ್ದನು.

೫. ರಾಜಪುತ್ರನು ಪ್ರತಿಯೊಂದು ದಿನದಲ್ಲಿಯೂ ಪೂರ್ವಾಹ್ಣ ಸಮಯದಲ್ಲಿ ಭೂಸಂಚಾರವನ್ನು ಮಾಡಿ ಮಿಕ್ಕ ದಿನದಲ್ಲೆಲ್ಲ ಸುಂದರಿಯಾದ ಮದಾಲಸೆಯೊಡನೆ ಸುಖವನ್ನು ಭುಂಜಿಸುತ್ತಿದ್ದನು.

೬. ಒಂದು ಸಮಯದಲ್ಲಿ ಸಂಚಾರಕ್ಕಾಗಿ ಹೊರಟ ರಾಜಪುತ್ರನು ಯಮುನಾನದಿಯ ದಡದಲ್ಲಿ ಆಶ್ರಮಮಾಡಿಕೊಂಡಿರುವ ಪಾತಾಲಕೇತುವಿನ ತಮ್ಮನಾದ ತಾಲಕೇತು ಎಂಬ ರಾಕ್ಷಸನನ್ನು ನೋಡಿದನು.

೭. ತರುವಾಯ ಮುನಿರೂಪವನ್ನು ಧರಿಸಿದ ಮಾಯಾವಿಯಾದ ಆ ತಾಲಕೇತು ದಾನವನು ರಾಜಪುತ್ರನಲ್ಲಿದ್ದ ಪೂರ್ವವೈರವನ್ನು ಸ್ಮರಿಸಿಕೊಂಡು ರಾಜಪುತ್ರನನ್ನು ಕುರಿತು ಹೇಳಿದನು.

ರಾಜಪುತ್ರ ಬ್ರವೀಮಿ ತ್ವಾಂ ತತ್ಕುರುಷ್ವ ಯದೀಚ್ಛಸಿ ।
ನ ಚ ತೇ ಪ್ರಾರ್ಥನಾಭಙ್ಗಃ ಕಾರ್ಯಃ ಸತ್ಯಪ್ರತಿಶ್ರವ ॥೮॥

ಯಕ್ಷ್ಯೇ ಯಜ್ಞೇನ ಧರ್ಮಾಯ ಕರ್ತವ್ಯಾಶ್ಚ ಮಯೇಷ್ಟಯಃ ।
ಚಿನ್ತಯೇ ತತ್ರ ಕರ್ತವ್ಯಾ ನಾಸ್ತಿ ಮೇ ದಕ್ಷಿಣಾ ಯತಃ ॥೯॥

ತತಃ ಪ್ರಯಚ್ಛ ಮೇ ವೀರ ದಕ್ಷಿಣಾರ್ಥೇ ಸ್ವಭೂಷಣಮ್ ।
ಯದೇತತ್ಕಣ್ಠಲಗ್ನಂ ತೇ ರಕ್ಷ ಚೇಮಂ ಮಮಾಶ್ರಮಮ್ ॥೧೦॥

ಯಾವದನ್ತರ್ಜಲೇ ದೇವಂ ವರುಣಂ ಯಾದಸಾಂ ಪತಿಮ್ ।
ವೈದಿಕೈರ್ವಾರುಣೈರ್ಮನ್ತ್ರೈಃ ಪ್ರಜಾನಾಂ ಪುಷ್ಟಿಹೇತುಕೈಃ ॥೧೧॥

ಅಭಿಷ್ಟೂಯ ತ್ವರಾಯುಕ್ತಃ ಸಮಭ್ಯೇಮೀತಿ ವಾದಿನಮ್ ।
ತಂ ಪ್ರಣಮ್ಯ ತತಃ ಪ್ರಾದಾತ್ಸ ತಸ್ಮೈ ಕಣ್ಠಭೂಷಣಮ್ ॥೧೨॥

---

೮. ರಾಜಪುತ್ರನೆ! ನಿನ್ನಲ್ಲಿ ಒಂದು ವಿಷಯವನ್ನು ಹೇಳುವೆನು. ನಿನಗೆ ಇಷ್ಟವಿದ್ದರೆ ಅದನ್ನು ಮಾಡು. ಸತ್ಯಪ್ರತಿಜ್ಞೆಯುಳ್ಳವನೆ! ನಿನಗೆ ನನ್ನ ಪ್ರಾರ್ಥನೆಯನ್ನು ಭಂಗಗೊಳಿಸುವುದು ಯೋಗ್ಯವಲ್ಲ.

೯. ನಾನು ಪುಣ್ಯಸಂಪಾದನೆಗೋಸ್ಕರ ಯಜ್ಞಗಳನ್ನು ಮಾಡುವೆನು. ನನಗೆ ಅನೇಕ ಇಷ್ಟಿಗಳು ಕರ್ತವ್ಯವಾಗಿವೆ. ಆದರೆ ಆ ಕರ್ಮಗಳಲ್ಲಿ ಕೊಡಬೇಕಾದ ದಕ್ಷಿಣಾಧನವು ನನ್ನಲ್ಲಿ ಇಲ್ಲವಾದ್ದರಿಂದ ಚಿಂತಿಸುತ್ತಿದ್ದೇನೆ.

೧೦. ಆದ್ದರಿಂದ ಎಲೈ ವೀರನೆ! ಈ ನಿನ್ನ ಕತ್ತಿನಲ್ಲಿ ಶೋಭಿಸುತ್ತಿದ್ದ ಒಡವೆಯನ್ನು ನನ್ನ ದಕ್ಷಿಣಾಧನಕ್ಕೋಸ್ಕರವಾಗಿ ಕೊಡು. ಮತ್ತು ನನ್ನ ಈ ಆಶ್ರಮಭೂಮಿಯನ್ನು ರಕ್ಷಿಸು.

೧೧. ನಾನು ನೀರಿನೊಳಗೆ ಪ್ರಜೆಗಳ ಪುಷ್ಟಿಗೆ ಕಾರಣವೂ, ವರುಣದೇವತೆಯನ್ನು ಪ್ರಶಂಸೆಮಾಡುವುದೂ ಆದ ವೈದಿಕಮಂತ್ರಗಳಿಂದ ಜಲಜಲಜಂತುಗಳಿಗೆ ಪತಿಯಾದ ವರುಣದೇವನನ್ನು ಸ್ತುತಿಸುವೆನು.

೧೨. ನಾನು ಹಾಗೆ ವರುಣನನ್ನು ಸ್ತೋತ್ರಮಾಡಿ ಬೇಗ ಬರುವೆನು–ಹೀಗೆಂದು ಹೇಳುತ್ತಿದ್ದ ಮುನಿರೂಪದಿಂದಿದ್ದ ತಾಲಕೇತುವಿಗೆ ಆ ರಾಜಪುತ್ರನು ವಂದಿಸಿ ಮತ್ತೆ ತನ್ನ ಕಂಠಾಭರಣವನ್ನು ಅವನಿಗೆ ಕೊಟ್ಟನು.

ಪ್ರಾಹ ಚೈನಂ ಭವಾನ್ಯಾತು ನಿರ್ವ್ಯಲೀಕೇನ ಚೇತಸಾ ।
ಸ್ಥಾಸ್ಯಾಮಿ ತಾವದತ್ರೈವ ತವಾಶ್ರಮಸಮೀಪತಃ ॥೧೩॥

ತವಾದೇಶಾನ್ಮಹಾಭಾಗ ಯಾವದಾಗಮನಂ ತವ ।
ನ ತೇಽತ್ರ ಕಶ್ಚಿದಾಬಾಧಾಂ ಕರಿಷ್ಯತಿ ಮಯಿ ಸ್ಥಿತೇ ॥೧೪॥

ವಿಶ್ರಬ್ಧಸ್ತ್ವಂ ಮುನಿಶ್ರೇಷ್ಠ ಕುರುಷ್ವ ಚ ಮನೋಗತಮ್ ।
ಏತದುಕ್ತಸ್ತತಸ್ತೇನ ಸ ಮಮಜ್ಜ ನದೀಜಲೇ ॥೧೫॥

ಅರಕ್ಷತ್ಸೋಽಪಿ ತಸ್ಯೈವ ಮಾಯಾವಿಹಿತಮಾಶ್ರಮಮ್ ॥೧೬॥

ಗತ್ವಾ ಜಲಾಶಯಾತ್ತಸ್ಮಾತ್ತಾಲಕೇತುಶ್ಚ ತತ್ಪುರಮ್ ।
ಮದಾಲಸಾಯಾಃ ಪ್ರತ್ಯಕ್ಷಮನ್ಯೇಷಾಂ ಚೈತದುಕ್ತವಾನ್ ॥೧೭॥

---

೧೩. ಮತ್ತು ಅವನಿಗೆ ಹೀಗೆಂದು ಹೇಳಿದನು. ನೀನು ಏನೂ ಆತಂಕವಿಲ್ಲದ ಚಿತ್ತದಿಂದ ಹೋಗಬಹುದು. ಅದುವರೆಗೂ ನಾನು ನಿನ್ನ ಆಶ್ರಮದ ಬಳಿಯಲ್ಲಿಯೆ ನಿಲ್ಲುವೆನು.

೧೪. ಮಹಾತ್ಮನೆ! ನಿನ್ನ ಆದೇಶದಂತೆ ನೀನು ಹಿಂತಿರುಗಿ ಬರುವವರೆಗೂ ನಾನು ಇಲ್ಲಿರುವೆನಾದ್ದರಿಂದ ಇಲ್ಲಿ ನಿನಗೆ ಯಾರೊಬ್ಬನೂ ಏನೂ ಪೀಡೆಯನ್ನು ಉಂಟುಮಾಡಲಾರನು.

೧೫. ಮುನಿಶ್ರೇಷ್ಠನೆ! ನೀನು ನೆಮ್ಮದಿಯಿಂದ ಕೂಡಿ ನಿನ್ನ ಮನೋಗತವಾದ ಇಷ್ಟವನ್ನು ನೆರವೇರಿಸು. ಹೀಗೆಂದು ರಾಜಪುತ್ರನಿಂದ ಹೇಳಲ್ಪಟ್ಟವನಾಗಿ ತಾಲಕೇತುವು ನದಿಯ ಜಲದಲ್ಲಿ ಮುಳುಗಿದನು.

೧೬. ರಾಜನಂದನನೂ ಅಲ್ಲಿಯೆ ಇದ್ದು ತಾಲಕೇತುವು ಮಾಯೆಯಿಂದ ರಚಿಸಿರುವ ಆಶ್ರಮವನ್ನು ರಕ್ಷಿಸುತ್ತಿದ್ದನು.

೧೭. ತಾಲಕೇತುವು ತಾನು ಮುಳುಗಿದ ಜಲಾಶಯದಿಂದ ಋತಧ್ವಜನ ನಗರಕ್ಕೆ ಹೋಗಿ ಮದಾಲಸೆ ಮತ್ತು ಇತರರು ಸೇರಿರುವಾಗ ಪ್ರತ್ಯಕ್ಷವಾಗಿ ಇದನ್ನು ಹೇಳಿದನು.

ವೀರಃ ಕುವಲಯಾಶ್ವೋಽಸೌ ಮಮಾಶ್ರಮಸಮೀಪತಃ ।
ಕೇನಾಪಿ ದುಷ್ಟದೈತ್ಯೇನ ಕುರ್ವನ್ರಕ್ಷಾಂ ತಪಸ್ವಿನಾಮ್ ॥೧೮॥

ಯುಧ್ಯಮಾನೋ ಯಥಾಶಕ್ತಿ ನಿಘ್ನನ್ ಬ್ರಹ್ಮದ್ವಿಷೋ ಯುಧಿ ।
ಮಾಯಾಮಾಶ್ರಿತ್ಯ ಪಾಪೇನ ಭಿನ್ನಃ ಶೂಲೇನ ವಕ್ಷಸಿ ॥೧೯॥

ಮ್ರಿಯಮಾಣೇನ ತೇನೇದಂ ದತ್ತಂ ಮೇ ಕಣ್ಠಭೂಷಣಮ್ ।
ಪ್ರಾಪಿತಶ್ಚಾಗ್ನಿಸಂಯೋಗಂ ಶೋಕಾರ್ತೈಃ ಸ ತು ತಾಪಸೈಃ ॥೨೦॥

ಕೃತಾರ್ತಹೇಷಾಶಬ್ದೋ ವೈ ತ್ರಸ್ತಃ ಸಾಶ್ರುವಿಲೋಚನಃ ।
ನೀತಃ ಸೋಽಶ್ವಶ್ಚ ತೇನೈವ ದಾನವೇನ ದುರಾತ್ಮನಾ ॥೨೧॥

ಏತನ್ಮಯಾ ನೃಶಂಸೇನ ದೃಷ್ಟಂ ದುಷ್ಕೃತಕಾರಿಣಾ ।
ಯದತ್ರಾನನ್ತರಂ ಕೃತ್ಯಂ ಕುರುಷ್ವೋತ್ತರಕಾಲಿಕಮ್ ॥೨೨॥

---

೧೮. ವೀರನಾದ ಕುವಲಯಾಶ್ವಕುಮಾರನು ತಪಸ್ವಿಗಳ ರಕ್ಷಣವನ್ನು ಮಾಡುತ್ತಲಿರಲು ನನ್ನ ಆಶ್ರಮದ ಬಳಿಯಲ್ಲಿ ಯಾರೊ ಒಬ್ಬ ದುಷ್ಟ ದೈತ್ಯನೊಡನೆ ಯುದ್ಧ ಮಾಡಿದನು.

೧೯. ಆದರೆ ತನ್ನ ಶಕ್ತಿಯಿರುವಷ್ಟು ಬ್ರಹ್ಮದ್ವೇಷಿಗಳನ್ನು ಸಂಹಾರ ಮಾಡುತ್ತಲಿದ್ದ ರಾಜನಂದನನು ಪಾಪಿಯಾದ ದೈತ್ಯನಿಂದ ಮಾಯಾಬಲವನ್ನು ಆಶ್ರಯಿಸಿ ಶೂಲದಿಂದ ಭೇದಿಸಲ್ಪಟ್ಟನು.

೨೦. ಹಾಗೆ ಮರಣವನ್ನು ಹೊಂದುತ್ತಿರುವ ರಾಜಕುಮಾರನು ಈ ಕಂಠಾಭರಣವನ್ನು ನನ್ನ ಕೈಯಲ್ಲಿ ಕೊಟ್ಟನು. ಆಗ ಶೋಕಪೀಡಿತರಾದ ತಪಸ್ವಿಗಳು ಅವನಿಗೆ ಅಗ್ನಿ ಸಂಸ್ಕಾರವನ್ನು ನಡೆಸಿದರು.

೨೧. ಆಗ ಬೆದರಿ ಆರ್ತವಾದ, ಹೇಷಾಶಬ್ದವನ್ನು ಮಾಡುತ್ತಲಿದ್ದ, ಮತ್ತು ಕಣ್ಣೀರು ಸುರಿಸುತ್ತಿದ್ದ ಕಣ್ಣುಗಳಿಂದ ಕೂಡಿದ ಆ ಅಶ್ವವು ಅದೇ ದುರಾತ್ಮನಾದ ರಾಕ್ಷಸನಿಂದ ಒಯ್ಯಲ್ಪಟ್ಟಿತು.

೨೨. ಹಿಂದೆ ಪಾಪವನ್ನುಗಳಿಸಿದ, ಅತಿಕ್ರೂರನಾದ ನನ್ನಿಂದ ಈ ವೃತ್ತಾಂತವು ನೋಡಲ್ಪಟ್ಟಿತು. ಇನ್ನು ಮುಂದೆ ಉತ್ತರಕಾಲದಲ್ಲಿ ನಡೆಸಬೇಕಾದ ಕೃತ್ಯವೇನಿದೆಯೊ ಅದನ್ನು ನೆರವೇರಿಸು.

ಹೃದಯಾಶ್ವಾಸನಂ ಚೈತದ್ಗೃಹ್ಯತಾಂ ಕಣ್ಠಭೂಷಣಮ್ ।
ನಾಸ್ಮಾಕಂ ಹಿ ಸುವರ್ಣೇನ ಕೃತ್ಯಮಸ್ತಿ ತಪಸ್ವಿನಾಮ್ ॥೨೩॥

ಇತ್ಯುಕ್ತ್ವೋತ್ಸೃಜ್ಯ ತದ್ಭೂಮೌ ಸ ಜಗಾಮ ಯಥಾಗತಮ್ ।
ನಿಪಪಾತ ಜನಃ ಸೋಽಥ ಶೋಕಾರ್ತೋ ಮೂರ್ಛಯಾತುರಃ ॥೨೪॥

ಕ್ಷಣೇನ ಚೇತನಾಂ ಪ್ರಾಪ್ಯ ಸರ್ವಾಸ್ತಾ ನೃಪಯೋಷಿತಃ ।
ರಾಜಪತ್ನ್ಯಶ್ಚ ರಾಜಾ ಚ ವಿಲೇಪುರತಿದುಃಖಿತಾಃ ॥೨೫॥

ಮದಾಲಸಾ ತು ತದ್ದೃಷ್ಟ್ವಾ ತದೀಯಂ ಕಣ್ಠಭೂಷಣಮ್ ।
ತತ್ಯಾಜ ಸುಪ್ರಿಯಾನ್ಪ್ರಾಣಾನ್ ಶ್ರುತ್ವಾ ವಿನಿಹತಂ ಪ್ರಿಯಮ್ ॥೨೬॥

ತತಃ ಪುರೇ ಮಹಾಕ್ರನ್ದಃ ಪೌರಾಣಾಂ ಭವನೇಷ್ವಭೂತ್ ।
ಯಥೈವ ತಸ್ಯ ನೃಪತೇಃ ಸ್ವಗೃಹೇ ಸಮವರ್ತತ ॥೨೭॥

---

೨೩. ಮನಸ್ಸಿಗೆ ನಂಬಿಕೆಯನ್ನು ಹುಟ್ಟಿಸುವಂತಹ ಈ ಕಂಠಾಭರಣವು ತೆಗೆದುಕೊಳ್ಳಲ್ಪಡಲಿ. ತಪಸ್ವಿಗಳಾದ ನಮಗೆ ಸುವರ್ಣಾಭರಣದಿಂದ ಏನೂ ಪ್ರಯೋಜನವಾಗಬೇಕಾದುದಿಲ್ಲ.

೨೪. ತಾಲಕೇತುವು ಹೀಗೆಂದು ಹೇಳಿ ಕಂಠಾಭರಣವನ್ನು ನೆಲದಲ್ಲಿ ಬಿಟ್ಟು ಬಂದಹಾಗೆ ಹಿಂದಕ್ಕೆಹೋದನು. ಅನಂತರ ಅಲ್ಲಿದ್ದ ಜನರು ಶೋಕ-ಪೀಡಿತರೂ ಮೂರ್ಛೆಯಿಂದ ಆವಿಷ್ಟರೂ ಆಗಿ ನೆಲದಲ್ಲಿ ಬಿದ್ದರು.

೨೫. ಮತ್ತೊಂದು ಕ್ಷಣದಲ್ಲಿ ಪ್ರಜ್ಞೆಯನ್ನುಹೊಂದಿದ ಆ ಎಲ್ಲ ರಾಜಸ್ತ್ರೀಯರೂ ರಾಜಮಹಿಷಿಯರೂ ಮತ್ತು ರಾಜನೂ ಕೂಡ ತಡೆಯಲಾರದ ದುಃಖವುಳ್ಳವರಾಗಿ ವಿಲಾಪಮಾಡಿದರು.

೨೬. ಮದಾಲಸೆಯಾದರೊ ಪ್ರಿಯನ ಕಂಠಾಭರಣವನ್ನು ನೋಡಿ ಮತ್ತು ಪ್ರಿಯನು ಹತನಾದುದನ್ನುಕೇಳಿ ದುಃಖಸಹಿಸಲಾರದೆ ಪ್ರಿಯವಾದ ಪ್ರಾಣಗಳನ್ನು ಕೂಡಲೆ ತ್ಯಜಿಸಿದಳು.

೨೭. ತರುವಾಯ ಆ ರಾಜನ ಅರಮನೆಯಲ್ಲಿ ದುಃಖದಿಂದ ಹೇಗೆ ಗೋಳಾಟವಾಯಿತೊ ಹಾಗೆ ಪುರದಲ್ಲಿ ಪೌರರಮನೆಗಳಲ್ಲೆಲ್ಲ ಭಾರಿಯಾಗಿ ವಿಲಾಪವು ಕೇಳಿಸಿತು.

ರಾಜಾ ಚ ತಾಂ ಮೃತಾಂ ದೃಷ್ಟ್ವಾ ವಿನಾ ಭರ್ತ್ರಾ ಮದಾಲಸಾಮ್ ।
ಪ್ರತ್ಯುವಾಚ ಜನಂ ಸರ್ವಂ ವಿಮೃಶ್ಯ ಸ್ವಸ್ಥಮಾನಸಃ ॥೨೮॥

ನ ರೋದಿತವ್ಯಂ ಪಶ್ಯಾಮಿ ಭವತಾಮಾತ್ಮನಸ್ತಥಾ ।
ಸರ್ವೇಷಾಮೇವ ಸಞ್ಚಿನ್ತ್ಯ ಸಮ್ಬಧಾನಾಮನಿತ್ಯತಾಮ್ ॥೨೯॥

ಕಿಂ ನು ಶೋಚಾಮಿ ತನಯಂ ಕಿಂ ನು ಶೋಚಾಮ್ಯಹಂ ಸ್ನುಷಾಮ್।
ವಿಮೃಶ್ಯ ಕೃತಕೃತ್ಯತ್ವಾನ್ಮನ್ಯೇಽಶೋಚ್ಯಾವುಭಾವಪಿ ॥೩೦॥

ಮಚ್ಛುಶ್ರೂಷುರ್ಮದ್ವಚನಾದ್ದ್ವಿಜರಕ್ಷಣತತ್ಪರಃ ।
ಪ್ರಾಪ್ತೋ ಮೇಽದ್ಯ ಸುತೋ ಮೃತ್ಯುಂ ಕಥಂ ಶೋಚ್ಯಃ ಸ
ಧೀಮತಾಮ್ ॥೩೧॥

ಅವಶ್ಯಂ ಯಾತಿ ಯದ್ದೇಹಂ ತದ್ದ್ವಿಜಾನಾಂ ಕೃತೇ ಯದಿ ।
ಮಮ ಪುತ್ರೇಣ ಸನ್ತ್ಯಕ್ತಂ ನನ್ವಭ್ಯುದಯಕಾರಿ ತತ್ ॥೩೨॥

---

೨೮. ಆಗ ರಾಜನು ಪತಿಯಿಂದ ವಿಯುಕ್ತಳಾಗಿ ಮರಣಹೊಂದಿದ ಮದಾಲಸೆಯನ್ನು ನೋಡಿ ಮನಸ್ಸಿನಲ್ಲಿ ವಿಚಾರಮಾಡಿಕೊಂಡು ಸ್ವಸ್ಥವಾದ ಮನಸ್ಸುಳ್ಳವನಾಗಿ ಸ್ವಜನರನ್ನು ನೋಡಿ ಹೀಗೆಂದು ಹೇಳಿದನು.

೨೯. ಎಲ್ಲವಿಧವಾದ ಸಂಸಾರ ಸಂಬಂಧಗಳು ಅನಿತ್ಯವಾದುದೆಂದು ತಿಳಿದು ಈ ಸನ್ನಿವೇಶದಲ್ಲಿ ನನಗಾಗಲಿ ನಿಮಗಾಗಲಿ ಅಳುವಂತಹ ಪ್ರಸಂಗವನ್ನು ನಾನೇನೂ ಕಾಣುವುದಿಲ್ಲ.

೩೦. ನಾನು ನನ್ನ ಪುತ್ರನಿಗಾಗಿ ಶೋಕಪಡಲಿ? ಅಥವಾ ಸೊಸೆ-ಯಾದ ಮದಾಲಸೆಗಾಗಿ ಶೋಕಪಡಲಿ? ವಿಚಾರದೃಷ್ಟಿಯಿಂದ ನೋಡಿದರೆ ಅವರಿಬ್ಬರೂ ಕೃತಕೃತ್ಯರಾದುದರಿಂದ ಶೋಚನೀಯರಾಗಿಲ್ಲ.

೩೧. ನನ್ನನ್ನು ಶುಶ್ರೂಷೆಮಾಡುತ್ತಿದ್ದು ನನ್ನ ವಚನದಿಂದ ದ್ವಿಜರ ರಕ್ಷಣೆಯಲ್ಲಿ ತತ್ಪರನಾಗಿಹೋದ ಪುತ್ರನು ಮರಣವನ್ನು ಹೊಂದಿರುವನು. ಅಂತಹವನು ಪ್ರಾಜ್ಞರಿಗೆ ಹೇಗೆ ಶೋಚನೀಯನಾಗುವನು ?

೩೨. ಯಾವ ದೇಹವು ಎಂದಾದರೂ ತಪ್ಪದೆ ಹೋಗುವುದಾಗಿದೆಯೊ; ಅಂತಹ ದೇಹವು ನನ್ನ ಪುತ್ರನಿಂದ ದ್ವಿಜರಿಗಾಗಿ ತ್ಯಜಿಸಲ್ಪಟ್ಟಿದ್ದರೆ ಆ ದೇಹ-ತ್ಯಾಗವು ಅಭ್ಯುದಯವನ್ನು ಮಾಡುವುದಲ್ಲವೆ!

ಇಯಂ ಚ ಸತ್ಕುಲೋತ್ಪನ್ನಾ ಭರ್ತಾರ್ಯೇವಮನುವ್ರತಾ ।
ಕಥಂ ತು ಶೋಚ್ಯಾ ನಾರೀಣಾಂ ಭರ್ತುರನ್ಯನ್ನ ದೈವತಮ್ ॥೩೩॥

ಅಸ್ಮಾಕಂ ಬಾನ್ಧವಾನಾಂ ಚ ತಥಾನ್ಯೇಷಾಂ ದಯಾವತಾಮ್ ।
ಶೋಚ್ಯಾ ಹ್ಯೇಷಾ ಭವೇದೇವಂ ಯದಿ ಭರ್ತ್ರಾ ವಿಯೋಗಿನೀ॥೩೪॥

ಯಾ ತು ಭರ್ತುರ್ವಧಂ ಶ್ರುತ್ವಾ ತತ್ಕ್ಷಣಾದೇವ ಭಾಮಿನೀ ।
ಭರ್ತಾರಮನುಯಾತೇಯಂ ನ ಶೋಚ್ಯಾತೋ ವಿಪಶ್ಚಿತಾಮ್॥೩೫॥

ತಾಃ ಶೋಚ್ಯಾ ಯಾ ವಿಯೋಗಿನ್ಯಃ ಸಹ ಭರ್ತ್ರಾ ಕುಲಾಙ್ಗನಾಃ ।
ಕಷ್ಟಭ್ರಾನ್ತ್ಯಾ ನ ಗಚ್ಛನ್ತಿ ಕಷ್ಟದಾಃ ಸ್ಯುಃ ಕುಲಾತ್ಮನೋಃ ॥೩೬॥

---

೩೩. ಸದ್ವಂಶದಲ್ಲಿ ಜನಿಸಿದ ಮತ್ತು ಪತಿಯಲ್ಲಿ ಹೀಗೆ ಭಕ್ತಿಯಿಂದ ಅನುವರ್ತಿಸಿದ ಈ ಮದಾಲಸೆಯು ಹೇಗೆ ಶೋಚ್ಯಳಾಗುವಳು? ನಾರಿಯರಿಗೆ ಪತಿಯನ್ನು ಬಿಟ್ಟು ಬೇರೆ ದೈವವಿಲ್ಲ.

೩೪. ಇವಳು ಪತಿಯ ವಿಯೋಗದುಃಖವನ್ನು ಅನುಭವಿಸುತ್ತ ಜೀವಿಸುವಂತಾಗಿದ್ದರೆ ನಮಗೂ ಬಂಧುಜನರಿಗೂ ಮತ್ತು ಕರುಣಾವಂತರಾದ ಇತರರಿಗೂ ಶೋಚ್ಯಳಾಗುತ್ತಿದ್ದಳು.

೩೫. ಯಾವ ಮದಾಲಸೆಯು ಪತಿಯ ಮರಣವನ್ನು ಕೇಳಿ ಆ ಕ್ಷಣದಲ್ಲಿಯೇ ಪ್ರಾಣವನ್ನು ತ್ಯಜಿಸಿ ಪತಿಯನ್ನು ಹಿಂಬಾಲಿಸಿದಳೊ, ಅಂತಹ ಪತಿವ್ರತೆಯು ಪ್ರಾಜ್ಞರಿಗೆ ಶೋಚ್ಯಳಲ್ಲ.

೩೬. ಯಾವ ಕುಲಾಂಗನೆಯರು ಪತಿಯಿಂದ ವಿಯುಕ್ತರಾಗಿದ್ದರೂ ಮರಣದುಃಖಭ್ರಾಂತಿಯಿಂದ ಸಹಗಮನ ಮಾಡುವುದಿಲ್ಲವೊ ಅಂತಹ ಸ್ತ್ರೀಯರು ಶೋಚ್ಯರು. ಮತ್ತು ತಮ್ಮ ವಂಶಕ್ಕೂ ತಮಗೂ ಕೇಡನ್ನು ಉಂಟುಮಾಡುವವರು.

ಭರ್ತುರ್ವಿಯೋಗಸ್ತ್ವನಯಾ ನಾನುಭೂತಃ ಕೃತಜ್ಞಯಾ ॥೩೭॥

ದಾತಾರಂ ಸರ್ವಸೌಖ್ಯಾನಾಮಿಹ ಚಾಮುತ್ರ ಚೋಭಯೋಃ ।
ಲೋಕಯೋಃ ಕಾ ಹಿ ಭರ್ತಾರಂ ನಾರೀ ಮನ್ಯೇತ ಮಾನುಷಮ್ ॥೩೮॥

ನ ಸ ಶೋಚ್ಯೋ ನ ಚೈವೇಯಂ ನಾಹಂ ತಜ್ಜನನೀ ನ ಚ ।
ತ್ಯಜತಾ ಬ್ರಾಹ್ಮಣಾರ್ಥಾಯ ಪ್ರಾಣಾನ್ ಸರ್ವೇ ಸ್ಮ ತಾರಿತಾಃ ॥೩೯॥

ವಿಪ್ರಾಣಾಂ ಮಮ ಧರ್ಮಸ್ಯ ಗತಃ ಸ ತು ಮಹಾಪತಿಃ ।
ಆನೃಣ್ಯಮರ್ಧಭುಕ್ತಸ್ಯ ತ್ಯಾಗಾದ್ದೇಹಸ್ಯ ಮೇ ಸುತಃ ॥೪೦॥

ಮಾತುಃ ಸತೀತ್ವಂ ಮದ್ವಂಶವೈಮಲ್ಯಂ ಶೌರ್ಯಮಾತ್ಮನಃ ।
ಸಙ್ಗ್ರಾಮೇ ಸನ್ತ್ಯಜನ್ ಪ್ರಾಣಾನ್ ಸೋಽವಿನ್ದದ್ದ್ವಿಜರಕ್ಷಣಾತ್ ॥೪೧॥

---

೩೭. ಈ ನನ್ನ ಸೊಸೆಯಾದ ಮದಾಲಸೆಯು ಪತಿಯಲ್ಲಿರುವ ಕೃತಜ್ಞತೆಯಿಂದ ಕೂಡಲೆ ಪ್ರಾಣತ್ಯಾಗ ಮಾಡಿದುದರಿಂದ ಪತಿವಿಯೋಗದುಃಖವನ್ನು ಅನುಭವಿಸಲಿಲ್ಲ.

೩೮. ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸಮಸ್ತ ಸೌಖ್ಯಗಳನ್ನೂ ಉಂಟುಮಾಡುವ ಪತಿದೇವನನ್ನು ಯಾವ ಸ್ತ್ರೀಯು ತಾನೆ ಮನುಷ್ಯನೆಂದು ಭಾವಿಸುವಳು ?

೩೯. ದಾನವನಿಂದ ಹತನಾದ ಪುತ್ರನು ಶೋಚ್ಯನಲ್ಲ. ಪತಿಗಾಗಿ ಪ್ರಾಣಗಳನ್ನು ತ್ಯಜಿಸಿದ ಈಕೆಯು ಶೋಚ್ಯಳಲ್ಲ. ನಾನು ಶೋಚ್ಯನಲ್ಲ. ಮತ್ತು ಅವನ ತಾಯಿಯು ಶೋಚ್ಯಳಲ್ಲ. ಬ್ರಾಹ್ಮಣರಿಗಾಗಿ ಪ್ರಾಣಗಳನ್ನು ತೆತ್ತ ನನ್ನ ಪುತ್ರನಿಂದ ನಾವೆಲ್ಲರೂ ಉದ್ಧಾರಹೊಂದಿರುವೆವು.

೪೦. ವಿಪ್ರರಿಗೆ, ನನಗೆ ಮತ್ತು ಧರ್ಮಕ್ಕೆ ಪಾಲಕನಾಗಿದ್ದ ಆ ಪುತ್ರನು ಅರ್ಧ ಆಯುಷ್ಯದವರೆಗೆ ಭುಂಜಿಸಿದ ದೇಹದ ತ್ಯಾಗದಿಂದ ವಿಪ್ರಾದಿ ಋಣವನ್ನು ಕಳೆದುಕೊಂಡಿರುವನು.

೪೧. ಮತ್ತು ನನ್ನ ಪುತ್ರನು ದ್ವಿಜರನ್ನು ರಕ್ಷಿಸಲು ಹೋಗಿ ಸಂಗ್ರಾಮದಲ್ಲಿ ಪ್ರಾಣತ್ಯಾಗಮಾಡಿದ್ದರಿಂದ ಜನನಿಗೆ ವೀರಜನನೀತ್ವವೂ ವಂಶಕ್ಕೆ ಕೀರ್ತಿಪ್ರಕಾಶವೂ ಮತ್ತು ತನಗೆ ಶೌರ್ಯಾಭಿಮಾನವೂ ಪ್ರಕಾಶಿಸಲ್ಪಟ್ಟುವು.

ತತಃ ಕುವಲಯಾಶ್ವಸ್ಯ ಮಾತಾ ಭರ್ತುರನನ್ತರಮ್ ।
ಶ್ರುತ್ವಾ ಪುತ್ರವಧಂ ತಾದೃಕ್ ಪ್ರಾಹ ಹೃಷ್ಟಾ ತು ತಂ ಪತಿಮ್॥೪೨॥

ನ ಮೇ ಮಾತ್ರಾ ನ ಮೇ ಸ್ವಸ್ರಾ ಪ್ರಾಪ್ತಾ ಪ್ರೀತಿರ್ನೃಪೇದೃಶೀ ।
ಶ್ರುತ್ವಾ ಮುನಿಪರಿತ್ರಾಣೇ ಹತಂ ಪುತ್ರಂ ಯಥಾ ಮಯಾ ॥೪೩॥

ಶೋಚತಾಂ ಬ್ರಾಹ್ಮಣಾನಾಂ ಯೇ ನಿಸ್ವನೇನಾತಿದುಃಖಿತಾಃ ।
ಮ್ರಿಯನ್ತೇ ವ್ಯಾಧಿನಾ ಕ್ಲಿಷ್ಟಾಸ್ತೇಷಾಂ ಮಾತಾ ವೃಥಾಪ್ರಜಾ ॥೪೪॥

ಸಙ್ಗ್ರಾಮೇ ಯುಧ್ಯಮಾನಾ ಯೇಽಭೀತಾ ಗೋದ್ವಿಜರಕ್ಷಣೇ ।
ಕ್ಷುಣ್ಣಾಃ ಶಸ್ತ್ರೈರ್ವಿಪದ್ಯನ್ತೇ ತ ಏವ ಭುವಿ ಮಾನವಾಃ ॥೪೫॥

---

೪೨. ತರುವಾಯ ಕುವಲಯಾಶ್ವನ ತಾಯಿಯು ತನ್ನ ಪತಿಗೆ ಪುತ್ರವಧವು ತಿಳಿದ ಮೇಲೆ ತಾನು ಪುತ್ರನಿಗೆ ಹಾಗೆ ಒದಗಿದ ಮರಣವನ್ನು ಕೇಳಿ ಸಂತುಷ್ಟಳಾಗಿ ತನ್ನ ಪತಿಗೆ ಹೀಗೆಂದಳು.

೪೩. ಮುನಿಪರಿತ್ರಾಣದ ನಿಮಿತ್ತವಾಗಿ ಪುತ್ರನು ಹತನಾಗಿ ಹೋದುದನ್ನು ಕೇಳಿ ನನಗೆ ಇಂದು ಎಷ್ಟು ಪ್ರೀತಿಯುಂಟಾಗಿದೆಯೊ ; ಇಂತಹ ಪ್ರೀತಿಯು ನನ್ನ ತಾಯಿ-ಅಕ್ಕ-ತಂಗಿಯರಿಂದಲೂ ದೊರೆಯಲಿಲ್ಲ.

೪೪. ಶೋಕಪಡುತ್ತಿದ್ದ ಬ್ರಾಹ್ಮಣರ ಆರ್ತನಾದವನ್ನು ಕೇಳಿ ಪರಿಹರಿಸುವ ಶಕ್ತಿಯಿಲ್ಲದೆ ಯಾರು ಬಹಳ ದುಃಖದಿಂದಲೂ ವ್ಯಾಧಿಯಿಂದಲೂ ಮೃತ್ಯುಹೊಂದುವರೊ, ಅವರನ್ನು ಪ್ರಸವಿಸಿದ ಜನನಿಯು ನಿರರ್ಥಕಪ್ರಜಾವತಿಯಾಗುವಳು.

೪೫. ಯಾವ ಮಾನವರು ಗೋವುಗಳನ್ನೂ ದ್ವಿಜರನ್ನೂ ರಕ್ಷಣೆಮಾಡುವ ನಿಮಿತ್ತದಿಂದ ನಿರ್ಭಯರಾಗಿ ಸಂಗ್ರಾಮದಲ್ಲಿ ಯುದ್ಧಮಾಡುತ್ತ ಶಸ್ತ್ರಪ್ರಹಾರದಿಂದ ಗಾಯಗೊಂಡವರಾಗಿ ಪ್ರಾಣವನ್ನು ನೀಗುವರೋ, ಅವರು ಮಾನವರೆಂಥಿಸುವರು.

ಅರ್ಥಿನಾಂ ಮಿತ್ರವರ್ಗಸ್ಯ ವಿದ್ವಿಷಾಂ ಚ ಪರಾಙ್ಮುಖಃ ।
ಯೋ ನ ಯಾತಿ ಪಿತಾ ತೇನ ಪುತ್ರೀ ಮಾತಾ ಚ ವೀರಸೂಃ ॥೪೬॥

ಗರ್ಭಕ್ಲೇಶಃ ಸ್ತ್ರಿಯೋ ಮನ್ಯೇ ಸಾಫಲ್ಯಂ ಭಜತೇ ತದಾ ।
ಯದಾರಿವಿಜಯೀ ವಾ ಸ್ಯಾತ್ಸಙ್ಗ್ರಾಮೇ ವಾ ಹತಃ ಸುತಃ ॥೪೭॥

ಪುತ್ರಾವೂಚತುಃ :—

ತತಃ ಸ ರಾಜಾ ಸಂಸ್ಕಾರಂ ಪುತ್ರಪತ್ನೀಮಲಮ್ಭಯತ್ ।
ನಿರ್ಗಮ್ಯ ಚ ಬಹಿಃ ಸ್ನಾತೋ ದದೌ ಪುತ್ರಾಯ ಚೋದಕಮ್॥೪೮॥

ತಾಲಕೇತುಶ್ಚ ನಿರ್ಗಮ್ಯ ತಥೈವ ಯಮುನಾಜಲಾತ್ ।
ರಾಜಪುತ್ರಮುವಾಚೇದಂ ಪ್ರಣಯಾನ್ಮಧುರಂ ವಚಃ ॥೪೯॥

---

೪೬. ಧನವನ್ನು ಬಯಸುವ ಅರ್ಥಿಗಳಲ್ಲಿಯೂ, ಉಪಕಾರಾರ್ಥಿಯಾದ ಮಿತ್ರವರ್ಗದಲ್ಲಿಯೂ, ಮತ್ತು ದ್ವೇಷಸಾಧಿಸುತ್ತಿರುವ ಶತ್ರುಗಳಲ್ಲಿಯೂ ಹಿಮ್ಮುಖನಾಗಿ ಯಾರು ಹೋಗುವುದಿಲ್ಲವೊ, ಅಂತಹನಿಂದಲೆ ಅವನ ತಂದೆಯು ಪುತ್ರವಂತನೂ ತಾಯಿಯು ವೀರಮಾತೆಯೂ ಆಗುವರು.

೪೭. ಪುತ್ರನು ಸಂಗ್ರಾಮದಲ್ಲಿ ಶತ್ರುಗಳನ್ನು ಗೆಲ್ಲಲಿ, ಅಥವಾ ತಾನು ಶತ್ರುಗಳಿಂದ ಹತನಾಗಲಿ ಆಗಲೆ ಅಂಥವನನ್ನು ಪ್ರಸವಿಸಿದ ಜನನಿಯ ಗರ್ಭ-ಧಾರಣ ಕ್ಲೇಶವು ಸಫಲತೆಯನ್ನು ಹೊಂದುವುದು.

ಪುತ್ರರು ಹೀಗೆಂದರು :—

೪೮. ತರುವಾಯ ಆ ಶತ್ರುಜಿತ್ ರಾಜನು ತನ್ನ ಸೊಸೆಯಾದ ಮದಾಲಸೆಗೆ ಕರ್ತವ್ಯವಾದ ಅಗ್ನಿಸಂಸ್ಕಾರಾದಿಗಳನ್ನು ಮಾಡಿಸಿದನು. ಮತ್ತು ರಾಜಮಂದಿರದಿಂದ ಹೊರಕ್ಕೆ ಬಂದು ಸ್ನಾನಮಾಡಿ ಪುತ್ರನಿಗೆ ಜಲಾಂಜಲಿ-ಯನ್ನು ಕೊಟ್ಟನು.

೪೯. ತಾಲಕೇತು ದಾನವನು ಹಾಗೆಯೆ ಋತಧ್ವಜನನ್ನು ಕುರಿತು ಪ್ರಣಯವನ್ನು ತೋರಿಸುತ್ತ ಮಧುರವಾದ ಮಾತುಗಳನ್ನು ಆಡಿದನು.

ಗಚ್ಛ ಭೂಪಾಲಪುತ್ರ ತ್ವಂ ಕೃತಾರ್ಥೋಽಹಂ ಕೃತಸ್ತ್ವಯಾ ।
ವಾಞ್ಛಿತಂ ತು ಕೃತಂ ಕಾರ್ಯಂ ತ್ವಯ್ಯತ್ರಾವಿಚಲೇ ಸ್ಥಿತೇ ॥೫೦॥

ವಾರುಣಂ ಯಜ್ಞಕಾರ್ಯಂ ಚ ಜಲೇಶಸ್ಯ ಮಹಾತ್ಮನಃ ।
ತನ್ಮಯಾ ಸಾಧಿತಂ ಸರ್ವಂ ಯನ್ಮಯಾಸೀದಭೀಪ್ಸಿತಮ್ ॥೫೧॥

ಪ್ರಣಿಪತ್ಯ ಸ ತಂ ಪ್ರಾಗಾದ್ರಾಜಪುತ್ರಃ ಪುರಂ ಪಿತುಃ ।
ಸಮಾರುಹ್ಯ ತಮೇವಾಶ್ವಂ ಸುಪರ್ಣಾನಿಲವಿಕ್ರಮಮ್ ॥೫೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಕುವಲಯಾಶ್ವೀಯೇ ವಿಂಶೋಽಧ್ಯಾಯಃ

---

೫೦. ರಾಜಪುತ್ರನೆ! ಇನ್ನು ನೀನು ಇಲ್ಲಿಂದ ಹೊರಟುಹೋಗು. ನಿನ್ನಿಂದ ನಾನು ಕೃತಕೃತ್ಯನಾಗಿ ಮಾಡಲ್ಪಟ್ಟಿರುವೆನು. ನೀನು ಇಲ್ಲಿ ಅಚಲನಾಗಿ ನಿಂತಿರುವಾಗ ನಾನು ನನ್ನ ಇಷ್ಟವಾದ ಕರ್ತವ್ಯವನ್ನು ಸಾಧಿಸಿಕೊಂಡೆನು.

೫೧. ಮಹಾತ್ಮನೂ ಜಲಕ್ಕೆ ಅಭಿಮಾನಿದೇವತೆಯೂ ಆದ ವರುಣ-ದೇವನ ಪ್ರೀತಿಗೆ ಮಾಡಬೇಕಾದ ಯಜ್ಞಾನುಷ್ಠಾನವು ಆದಂತೆ ಆಯಿತು. ಹೀಗೆ ನನಗೆ ಯಾವುದು ಕರ್ತವ್ಯವೆಂದು ಬಹಳ ಇಷ್ಟವಾಗಿದ್ದಿತೊ ಅದೆಲ್ಲವೂ ನನ್ನಿಂದ ಸಾಧಿಸಲ್ಪಟ್ಟಿತು.

೫೨. ತರುವಾಯ ಆ ರಾಜಪುತ್ರನು ಮಾಯಾತಪಸ್ವಿಯನ್ನು ನಮ-ಸ್ಕರಿಸಿ ಗರುಡ-ವಾಯುಗಳಿಗೆ ಸಮಾನವಾದ ವಿಕ್ರಮದಿಂದ ಶೋಭಿಸುವ ಅದೇ ಕುವಲಯ ಅಶ್ವವನ್ನು ಏರಿಕೊಂಡು ತಂದೆಯು ಇದ್ದ ಪುರಕ್ಕೆ ಹಿಂತಿರುಗಿ ಬಂದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕವಿಂಶೋಽಧ್ಯಾಯಃ

(ಅಶ್ವತರಪುತ್ರೀರೂಪೇಣ ಮದಾಲಸಾಯಾ ಆವಿರ್ಭಾವಃ)

ಪುತ್ರಾವೂಚತುಃ :—

ಸ ರಾಜಪುತ್ರಃ ಸಮ್ಪ್ರಾಪ್ಯ ವೇಗಾದಾತ್ಮಪುರಂ ತತಃ ।
ಪಿತ್ರೋರ್ವವನ್ದಿಷುಃ ಪಾದೌ ದಿದೃಕ್ಷುಶ್ಚ ಮದಾಲಸಾಮ್ ॥೧॥

ಸ ದದರ್ಶ ತದುದ್ವಿಗ್ನಮಪ್ರಹೃಷ್ಟಮುಖಂ ಪುರಮ್ ।
ಪುನಶ್ಚ ವಿಸ್ಮಿತಾಕಾರಂ ಪ್ರಹೃಷ್ಟವದನಂ ಪುನಃ ॥೨॥

ಇಪ್ಪತ್ತೊಂದನೆಯ ಅಧ್ಯಾಯ

ಪುತ್ರರು ಇಂತೆಂದರು :—

೧. ಆ ಋತಧ್ವಜ ರಾಜಕುಮಾರನು ತರುವಾಯ ತಂದೆ-ತಾಯಿಗಳ ಪಾದಗಳನ್ನು ವಂದಿಸುವ ಕುತೂಹಲವುಳ್ಳವನೂ ಮತ್ತು ಪ್ರಿಯೆಯಾದ ಮದಾ-ಲಸೆಯನ್ನು ನೋಡಬೇಕೆಂದಿರುವವನೂ ಆಗಿ ವೇಗದಿಂದ ತನ್ನ ನಗರಕ್ಕೆ ತೆರಳಿದನು.

೨. ನಗರಕ್ಕೆ ಹೋಗಿರುವ ರಾಜಕುಮಾರನು ಪುರದ್ವಾರದಲ್ಲಿಯೆ ಕಂಗೆಟ್ಟು ಇರುವಂತೆಯೂ ಹರ್ಷವಿಲ್ಲದಂತೆಯೂ ಕಾಣುವ ಪುರವನ್ನು ಕಂಡನು. ಮತ್ತೆ ತಾನು ಒಳಹೊಕ್ಕು ಕಾಣಿಸಿಕೊಂಡ ಹಾಗು ವಿಸ್ಮಯಗೊಂಡ ಆಕಾರ-ವುಳ್ಳದ್ದನ್ನೂ ಕಂಡನು.

ಅನ್ಯಮುತ್ಫುಲ್ಲನಯನಂ ದಿಷ್ಟ್ಯಾ ದಿಷ್ಟ್ಯೇತಿ ವಾದಿನಮ್ ।
ಪರಿಷ್ವಜನ್ತಮನ್ಯೋऽನ್ಯಮತಿಕೌತೂಹಲಾನ್ವಿತಮ್ ॥೩॥

ಸ ರಾಜಪುತ್ರೋ ಮಿತ್ರಂ ತು ಉತ್ಫುಲ್ಲನಯನಂ ಶುಭಮ್ ।
ಆಲಿಲಿಙ್ಗ ತದಾ ಕಾಲೇ ಸೌಹೃದೇನ ಪರೇಣ ಚ ॥೪॥

ತತಃ ಪೌರಾಸ್ತದಾಲೋಕ್ಯ ದಿಷ್ಟ್ಯಾ ದಿಷ್ಟ್ಯೇತಿ ವಾದಿನಃ ॥೫॥

ಚಿರಂ ಜೀವೋರುಕಲ್ಯಾಣ ಹತಾಸ್ತೇ ಪರಿಪನ್ಥಿನಃ ।
ಪಿತ್ರೋಃ ಪ್ರಹ್ಲಾದಯ ಮನಸ್ತಥಾಸ್ಮಾಕಮಕಣ್ಟಕಃ ॥೬॥

ಇತ್ಯೇವಂ ವಾದಿಭಿಃ ಪೌರೈಃ ಪುರಃ ಪೃಷ್ಠೇ ಚ ಸಂವೃತಃ ।
ತತ್ಕ್ಷಣಪ್ರಭವಾನನ್ದಃ ಪ್ರವಿವೇಶ ಪಿತುರ್ಗೃಹಮ್ ॥೭॥

---

೩. ಮತ್ತೊಂದು ಕಡೆ ಅರಳಿದ ಕಣ್ಣುಗಳುಳ್ಳವರೂ, "ಆನಂದ—ಆನಂದ" ಎಂದು ಹೇಳುವವರೂ ಆಗಿ ಬಹಳ ಕುತೂಹಲದಿಂದ ಒಬ್ಬರನ್ನೊಬ್ಬರು ಆಲಿಂಗಿಸಿಕೊಳ್ಳುತ್ತಿದ್ದ ಕೆಲವರನ್ನು ನೋಡಿದನು.

೪. ಅದೇ ಸಮಯದಲ್ಲಿ ಆ ರಾಜಪುತ್ರನು ಅರಳಿದ ಕಣ್ಣುಗಳುಳ್ಳವನೂ ಮತ್ತು ಮಂಗಳಾಕಾರವುಳ್ಳವನೂ ಆದ ಮುಂದುಗಡೆಯಲ್ಲಿ ಬಂದ ಮಿತ್ರನನ್ನು ಅತಿಶಯವಾದ ಮೈತ್ರೀಭಾವದಿಂದ ಆಲಿಂಗಿಸಿಕೊಂಡನು.

೫. ಮೃತನಾದನೆಂದು ತಿಳಿಯಲ್ಪಟ್ಟಿರುವ ರಾಜನಂದನನು ಬಂದಿರುವುದನ್ನು ಕಂಡು ಪುರಜನರು ಆಗ "ರಾಜಪುತ್ರನು ಜೀವಂತನಾಗಿ ಬಂದಿರುವುದು ನಮ್ಮ ಭಾಗ್ಯ, ನಮಗೆ ಅತ್ಯಾನಂದ" ಎಂದು ಹೇಳಿಕೊಂಡರು.

೬. ಅತಿಶಯವಾದ ಮಂಗಳಗಳಿಗೆ ಅರ್ಹನಾದ ಕುಮಾರನೆ! ಚಿರಕಾಲ ಬಾಳು, ನಿನ್ನ ಶತ್ರುಗಳು ಹತರಾಗಿ ಹೋಗಲಿ. ಮಾತಾಪಿತೃಗಳ ಮನಸ್ಸನ್ನು ಸಂತೋಷಗೊಳಿಸು. ಮತ್ತು ನಮ್ಮೆಲ್ಲರಿಗೂ ಕಂಟಕದಂತಾಗದೆ ಆನಂದಕರನಾಗಿರು.

೭. ಹೀಗೆಂದು ಹಾರೈಸುತ್ತಿದ್ದ ಪುರಜನರಿಂದ ಹಿಂಭಾಗ-ಮುಂಭಾಗಗಳಲ್ಲಿ ಸುತ್ತಲ್ಪಟ್ಟವನಾಗಿ ಆ ಕ್ಷಣದಲ್ಲಿ ಹುಟ್ಟಿದ ಅಮಿತಾನಂದವುಳ್ಳವನಾಗಿ ತಂದೆಯ ವಾಸಗೃಹಕ್ಕೆ ಹೋದನು.

ಪಿತಾ ಚ ತಂ ಪರಿಷ್ವಜ್ಯ ಮಾತಾ ಚಾನ್ಯೇ ಚ ಬಾನ್ಧವಾಃ ।
ಚಿರಂ ಜೀವ್ಯೋರುಕಲ್ಯಾಣ ದದೌ ಚಾಸ್ಮೈ ತದಾಶಿಷಃ ॥೮॥

ಪ್ರಣಿಪತ್ಯ ತತಃ ಸೋಽಥ ಕಿಮೇತದಿತಿ ವಿಸ್ಮಿತಃ ।
ಪಪ್ರಚ್ಛ ಪಿತರಂ ಚಾಥ ಸೋಽಸ್ಮೈ ಸರ್ವಂ ತದುಕ್ತವಾನ್ ॥೯॥

ಸ ಭಾರ್ಯಾಂ ತಾಂ ಮೃತಾಂ ಶ್ರುತ್ವಾ ಹೃದಯೇಷ್ಟಾಂ ಮದಾಲ-
ಸಾಮ್ ।
ಪಿತರೌ ಚ ಪುರಾ ದೃಷ್ಟ್ವಾ ಲಜ್ಜಾಶೋಕವಿಮಧ್ಯಗಃ ॥೧೦॥

ಚಿನ್ತಯಾಮಾಸ ಸಾ ಬಾಲಾ ಮಾಂ ಶ್ರುತ್ವಾ ನಿಧನಂ ಗತಮ್ ।
ತತ್ಯಾಜ ಜೀವಿತಂ ಸಾಧ್ವೀ ಧಿಙ್ಮಾಂ ನಿಷ್ಠುರಮಾನಸಮ್ ॥೧೧॥

---

೮. ಆ ಸಮಯದಲ್ಲಿ ತಂದೆಯು ಪುತ್ರನನ್ನು ಆಲಿಂಗಿಸಿಕೊಂಡನು. ಮತ್ತೆ ತಾಯಿ, ಬಾಂಧವರು ಎಲ್ಲರೂ ಆಲಿಂಗಿಸಿ ಸಂತೋಷಪಟ್ಟರು. ತಂದೆಯು "ಹೆಚ್ಚಾದ ಶ್ರೇಯೋಭಾಗಿಯೆ! ಚಿರಂಜೀವಿಯಾಗು" ಹೀಗೆಂದು ಆಶೀರ್ವಚನವನ್ನು ಇತ್ತನು.

೯. ಅನಂತರದಲ್ಲಿ ಋತಧ್ವಜನು ತಂದೆಗೆ ನಮಸ್ಕಾರಮಾಡಿ ಆ ಸನ್ನಿವೇಶದಿಂದ ಆಶ್ಚರ್ಯಗೊಂಡವನಾಗಿ ತಂದೆಯನ್ನು ನೋಡಿ "ಇದೇನು?" ಎಂದು ಪ್ರಶ್ನಿಸಿದನು. ಆಗ ತಂದೆಯು ಪುತ್ರನಿಗೆ ನಡೆದ ಎಲ್ಲ ಸಂಗತಿಯನ್ನು ಹೇಳಿದನು.

೧೦. ಋತಧ್ವಜನು ತನ್ನ ಹೃದಯಕ್ಕೆ ಮೆಚ್ಚಿನ ಪ್ರಿಯೆಯಾದ ಮದಾಲಸೆಯು ಮರಣಹೊಂದಿರುವುದನ್ನು ಕೇಳಿ ಮುಂಭಾಗದಲ್ಲಿ ತಾಯಿ-ತಂದೆಗಳು ನಿಂತಿರುವುದನ್ನು ಕಂಡು ಪಿತೃಗೌರವದಿಂದ ಲಜ್ಜೆಯ, ಪತ್ನೀಮರಣದಿಂದ ಶೋಕದ ಅಂತರಾಳಕ್ಕೆ ಸಿಲುಕಿಕೊಂಡನು.

೧೧. ಆಗ ಆ ರಾಜಕುಮಾರನು ಇಂತು ಚಿಂತಿಸಿದನು :—ಪತಿವ್ರತೆಯಾದ ಆ ಮದಾಲಸೆಯು ನಾನು ಮರಣವನ್ನು ಹೊಂದಿದೆನೆಂದು ಅರಿತು ತನ್ನ ಜೀವನವನ್ನು ತ್ಯಜಿಸಿದಳು. ಈ ದಶೆಯಲ್ಲಿಯೂ ಸ್ವಸ್ಥನಾಗಿರುವುದರಿಂದ ನಿಷ್ಠುರವಾದ ಮಾನಸವುಳ್ಳ ನನಗೆ ಧಿಕ್ಕಾರವು.

ನೃಶಂಸೋಽಹಮನಾರ್ಯೋಽಹಂ ವಿನಾ ತಾಂ ಮೃಗಲೋಚ-
ನಾಮ್ ।
ಮತ್ಕೃತೇ ನಿಧನಂ ಪ್ರಾಪ್ತಾಂ ಯಜ್ಜೀವಾಮ್ಯತಿನಿರ್ಘೃಣಃ ॥೧೨॥

ಪುನಃ ಸ ಚಿನ್ತಯಾಮಾಸ ಪರಿಸಂಸ್ತಭ್ಯ ಮಾನಸಮ್ ।
ಮೋಹೋದ್ಗಮಮುಪಾಸ್ಯೈವಂ ನಿಶ್ವಸ್ಯೋಚ್ಛ್ವಸ್ಯ ಚಾತುರಃ ॥೧೩॥

ಮೃತೇತಿ ಸಾ ಮನ್ನಿಮಿತ್ತಂ ತ್ಯಜಾಮಿ ಯದಿ ಜೀವಿತಮ್ ।
ಕಿಂ ಮಯೋಪಕೃತಂ ತಸ್ಯಾಃ ಶ್ಲಾಘ್ಯಮೇತತ್ತು ಯೋಷಿತಾಮ್
॥೧೪॥

ಯದಿ ರೋದಿಮಿ ವಾ ದೀನಂ ಹಾ ಪ್ರಿಯೇತಿ ವದನ್ಮುಹುಃ ।
ತಥಾಪ್ಯಶ್ಲಾಘ್ಯಮೇತನ್ನೋ ವಯಂ ಹಿ ಪುರುಷಾಃ ಕಿಲ ॥೧೫॥

---

೧೨. ನನಗೋಸ್ಕರ ಮರಣವನ್ನೈದಿರುವ ಮೃಗಾಕ್ಷಿಯಾದ ನನ್ನ ಪ್ರಿಯೆಯನ್ನು ಕಳೆದುಕೊಂಡು ನಿಷ್ಕರುಣನಾದ ನಾನು ಜೀವಂತನಾಗಿರುವೆನು, ಆದುದರಿಂದ ನಾನು ಕ್ರೂರಸ್ವಭಾವದವನು ಮತ್ತು ಆರ್ಯಶೀಲವಿಲ್ಲದವನು.

೧೩. ಹೀಗೆ ವಿಯೋಗದುಃಖಪೀಡಿತನಾಗಿ ಅತಿಯಾಗಿ ಮತ್ತೆ ಮತ್ತೆ ಉಸಿರುಬಿಡುತ್ತ ಯೋಚಿಸಿ ಹಾಗೆ ಉಕ್ಕಿಬರುವ ಮೋಹವಿಕಾರವನ್ನು ತಡೆದು-ಕೊಂಡು ಮತ್ತು ತನ್ನ ಮನಸ್ಸನ್ನು ದೃಢಪಡಿಸಿಕೊಂಡು ಮತ್ತೆ ಈ ಬಗೆಯಾಗಿ ಚಿಂತಿಸಿದನು.

೧೪. ಪ್ರಿಯೆಯು ನನ್ನ ನಿಮಿತ್ತದಿಂದ ಮೃತ್ಯುವನ್ನೈದಿದಳೆಂದು ನಾನು ಜೀವಿತವನ್ನು ತ್ಯಜಿಸಿದರೆ ನಾನು ಪ್ರಿಯೆಗೆ ಏನು ಉಪಕಾರಮಾಡಿ-ದಂತಾಗುವುದು? ಸ್ತ್ರೀಯರು ಕಾಂತನ ವಿಯೋಗದಿಂದ ಜೀವಿತವನ್ನು ತ್ಯಜಿಸು-ವುದು ಅವರಿಗೆ ಶ್ಲಾಘ್ಯವಾದುದು.

೧೫. ಅಯ್ಯೋ! ಪ್ರಿಯೆ! ಎಂದು ಮತ್ತೆ ಮತ್ತೆ ಕೂಗಿಕೊಳ್ಳುತ್ತ ದೀನಭಾವದಿಂದ ಕೂಡಿ ಒಂದುವೇಳೆ ಸಂತತವಾಗಿ ಅತ್ತರೂ ಹಾಗೆ ಅಳುವುದೂ ನನಗೆ ಶ್ಲಾಘ್ಯವೆನಿಸುವುದಿಲ್ಲ. ನಾವು ಪುರುಷರಾಗಿ ಜನ್ಮವೆತ್ತಿರುವೆವು.

ಅಥ ಶೋಕಜಡೋ ದೀನೋಽಸೃಜಾ ಹೀನೋಽಬಲಾನ್ವಿತಃ ।
ವಿಪಕ್ಷಸ್ಯ ಭವಿಷ್ಯಾಮಿ ತತಃ ಪರಿಭವಾಸ್ಪದಮ್ ||೧೬||

ಮಯಾರಿಶಾತನಾತ್ಕಾರ್ಯಂ ರಾಜ್ಞಃ ಶುಶ್ರೂಷಣಂ ಪಿತುಃ ।
ಜೀವಿತಂ ತಸ್ಯ ಚಾಯತ್ತಂ ಸನ್ತ್ಯಾಜ್ಯಂ ತತ್ಕಥಂ ಮಯಾ ||೧೭||

ಕಿಂ ತ್ವತ್ರ ಮೇಽನ್ಯತ್ಕರ್ತವ್ಯಂ ತ್ಯಾಗೋ ಭೋಗಸ್ಯ ಯೋಷಿತಃ ।
ಸ ಚಾಪಿ ನೋಪಕಾರಾಯ ತನ್ವಙ್ಗ್ಯಾಃ ಕಿಂ ತು ಸರ್ವಥಾ ||೧೮||

ಮಯಾನೃಶಂಸ್ಯಂ ಕರ್ತವ್ಯಂ ನಾಪಕಾರ್ಯುಪಕಾರಿ ವಾ ।
ಯಾ ಮದರ್ಥೇಽತ್ಯಜತ್ಪ್ರಾಣಾಂಸ್ತದರ್ಥೇಽಲ್ಪಮಿದಂ ಮಮ ||೧೯||

---

೧೬. ಮತ್ತು ಶೋಕದಿಂದ ಕರ್ತವ್ಯದಲ್ಲಿ ಮೂರ್ಖನಾಗಿಯೂ ಮತ್ತು ರಕ್ತ-ಬಲಗಳನ್ನು ಕಳೆದುಕೊಂಡವನಾಗಿಯೂ ಇದ್ದರೆ ನಾನು ಅದರಿಂದ ನನ್ನ ಶತ್ರುಜನರಿಗೆ ಅವಮಾನಾಸ್ಪದನಾಗುವೆನು.

೧೭. ಶತ್ರುಗಳನ್ನು ನಾಶಮಾಡುತ್ತಲಿದ್ದು ನನ್ನಿಂದ ರಾಜನಾದ ತಂದೆಯ ಶುಶ್ರೂಷೆಯು ಮಾಡಲ್ಪಡಬೇಕು. ಆದ್ದರಿಂದ ನನ್ನ ಜೀವಿತವು ರಾಜನಿಗೆ ಅಧೀನವಾದುದು. ಹೀಗಿರಲು ಅಂತಹ ಜೀವಿತವನ್ನು ನಾನು ಹೇಗೆ ಬಿಡಲಿ?

೧೮. ಆದರೆ ಈ ಸಮಯದಲ್ಲಿ ಸ್ತ್ರೀಯರೊಡನೆ ರತಿಸುಖಭೋಗವನ್ನು ತ್ಯಾಗಮಾಡುವುದೆಂಬುದು ಯೋಗ್ಯವಾದ ಒಂದು ಕರ್ತವ್ಯವು. ಹಾಗೆ ಸ್ತ್ರೀಭೋಗತ್ಯಾಗವು ಮೃತಿಹೊಂದಿದ ಪ್ರಿಯೆಯ ಉಪಕಾರಕ್ಕೋಸ್ಕರ ಅಲ್ಲ. ಆದರೆ ಅವಶ್ಯಕರ್ತವ್ಯವೇ ಸರಿ.

೧೯. ಪ್ರಿಯೆಗೆ ಅಪಕಾರ ಅಥವಾ ಉಪಕಾರಗಳಾಗಬೇಕೆಂಬ ಭಾವನೆಯು ಇಲ್ಲ. ಅವಳ ವಿಷಯದಲ್ಲಿ ಕನಿಕರವು ನನ್ನಿಂದ ತೋರಿಸಲ್ಪಡಬೇಕು. ಆಕೆಯು ನನಗೋಸ್ಕರವಾಗಿ ಪ್ರಾಣಗಳನ್ನು ತ್ಯಜಿಸಿರುವಳು. ಅವಳ ವಿಷಯದಲ್ಲಿ ಇದೊಂದು ಅಲ್ಪವಾದ ಕರ್ತವ್ಯವು.

ಪುತ್ರಾವೂಚತುಃ :—

ಇತಿ ಕೃತ್ವಾ ಮತಿಂ ಸೋಽಥ ನಿಷ್ಪಾದ್ಯೋದಕದಾನಿಕಮ್ ।
ಕ್ರಿಯಾಶ್ಚಾನನ್ತರಂ ಕೃತ್ವಾ ಪ್ರತ್ಯುವಾಚ ಋತಧ್ವಜಃ ॥೨೦॥

ಯದಿ ಸಾ ಮಮ ತನ್ವಙ್ಗೀ ನ ಸ್ಯಾದ್ಭಾರ್ಯಾ ಮದಾಲಸಾ ।
ಅಸ್ಮಿನ್ಜನ್ಮನಿ ನಾನ್ಯಾ ಮೇ ಭವಿತ್ರೀ ಸಹಚಾರಿಣೀ ॥೨೧॥

ತಾಮೃತೇ ಮೃಗಶಾವಾಕ್ಷೀಂ ಗನ್ಧರ್ವತನಯಾಮಹಮ್ ।
ನ ಭೋಕ್ಷ್ಯೇ ಯೋಷಿತಂ ಕಾಂಚಿದಿತಿ ಸತ್ಯಂ ಮಯೋದಿತಮ್॥೨೨॥

ಸಧರ್ಮಚಾರಿಣೀಂ ಪತ್ನೀಂ ತಾಂ ಮುಕ್ತ್ವಾ ಗಜಗಾಮಿನೀಮ್ ।
ಕಾಂಚಿನ್ನಾನ್ಯಾಂ ಕರಿಷ್ಯಾಮಿ ತೇನ ಸತ್ಯಂ ಮಯೋದಿತಮ್ ॥೨೩॥

ಪುತ್ರರು ಹೀಗೆ ನುಡಿದರು :—

೨೦. ತರುವಾಯ ಆ ರಾಜಪುತ್ರನು ಹೀಗೆಂದು ದೃಢವಾದ ಸಂಕಲ್ಪ-ವನ್ನು ಮಾಡಿಕೊಂಡು ತನ್ನ ಪತ್ನಿಗೆ ಜಲಾಂಜಲಿದಾನ ಮತ್ತು ಉತ್ತರಕ್ರಿಯೆ-ಗಳನ್ನು ನೆರವೇರಿಸಿದನು. ಮತ್ತು ಆ ಸಂಕಲ್ಪವನ್ನು ದೃಢಪಡಿಸಿ ಹೀಗೆ ಪ್ರತಿಜ್ಞೆಮಾಡಿದನು.

೨೧. ಕೃಶಾಂಗಿಯಾದ ಮದಾಲಸೆಯು ನನಗೆ ಭಾರ್ಯೆಯಾಗಿ ದೊರೆಯದಿದ್ದರೆ ಈ ಜನ್ಮದಲ್ಲಿ ಇನ್ನಾವ ನಾರಿಯೂ ನನಗೆ ಸಹಚರಿಯಾದ ಪತ್ನಿಯು ಆಗಲಾರಳು.

೨೨. ನಾನು ಜಿಂಕೆಯ ಮರಿಯ ಹಾಗೆ ಸುಂದರವಾದ ನಯನವುಳ್ಳ ಗಂಧರ್ವಪುತ್ರಿಯಾದ ಮದಾಲಸೆಯನ್ನು ಬಿಟ್ಟು ಇನ್ನಾವ ವಧುವಿನೊಡನೆಯೂ ಸ್ತ್ರೀಭೋಗವನ್ನು ಅನುಭವಿಸುವುದಿಲ್ಲ. ನಾನು ಹೇಳಿದ ಈ ವಚನವು ಸತ್ಯವಾದುದು.

೨೩. ಮದ್ದಾನೆಯಂತೆ ಮಂದಗಮನೆಯುಳ್ಳ ಸಹಧರ್ಮಚಾರಿಣಿಯಾದ ಮದಾಲಸೆಯನ್ನು ಕಳೆದುಕೊಂಡು ಇನ್ನಾವ ಅಂಗನೆಯನ್ನೂ ಸಹಧರ್ಮ-ಚಾರಿಣಿಯನ್ನಾಗಿ ಮಾಡಿಕೊಳ್ಳುವುದಿಲ್ಲ. ಇದು ನನ್ನ ಸತ್ಯ ಪ್ರತಿಜ್ಞೆಯು.

ಏವಂ ಸರ್ವಾನ್ಪರಿತ್ಯಜ್ಯ ಸ್ತ್ರೀಭೋಗಾಂಸ್ತಾತ ಸರ್ವದಾ ।
ಕ್ರೀಡನ್ನಾಸ್ತೇ ಸಮಂ ತುಲ್ಯೈರ್ವಯಸ್ಯೈಃ ಶೀಲಸಮ್ಪದಾ ॥೨೪॥

ಏತತ್ತಸ್ಯ ಪರಂ ಕಾರ್ಯಂ ತಾತ ತತ್ಕೇನ ಸಾಧ್ಯತೇ ।
ಕರ್ತುಮತ್ಯನ್ತದುಷ್ಪ್ರಾಪ್ಯಮೀಶ್ವರೈಃ ಕಿಮುತೇತರೈಃ ॥೨೫॥

ಜಡ ಉವಾಚ :—

ಇತಿ ವಾಕ್ಯಂ ತಯೋಃ ಶ್ರುತ್ವಾ ವಿಮರ್ಶಮಗಮತ್ಪಿತಾ ।
ವಿಮೃಶ್ಯ ಚಾಹ ತೌ ಪುತ್ರೌ ನಾಗರಾಟ್ಪ್ರಹಸನ್ನಿವ ॥೨೬॥

ಯದ್ಯಶಕ್ಯಮಿತಿ ಶ್ರುತ್ವಾ ನ ಕರಿಷ್ಯನ್ತಿ ಮಾನವಾಃ ।
ಕರ್ಮಣ್ಯುದ್ಯಮಮುದ್ಯೋಗಹಾನ್ಯಾ ಹಾನಿಸ್ತತಃ ಪರಮ್ ॥೨೭॥

---

೨೪. ತಂದೆಯೆ! ಹೀಗೆ ಪ್ರತಿಜ್ಞೆಮಾಡಿ ಎಲ್ಲ ವಿಧವಾದ ಸ್ತ್ರೀಸಂಗದ ಸುಖಭೋಗಗಳನ್ನು ಬಿಟ್ಟು ಶ್ಲಾಘ್ಯವಾದ ಶೀಲಸಂಪತ್ತಿನಿಂದ ತನಗೆ ಸಮಾನ-ರಾದ ಮಿತ್ರರೊಂದಿಗೆ ಸರ್ವಕಾಲದಲ್ಲಿಯೂ ವಿಹರಿಸುತ್ತ ಇರುವನು.

೨೫. ಪಿತನೆ! ಋತಧ್ವಜನಿಗೆ ಉಪಕಾರಮಾಡುವುದಾದರೆ ಇದೊಂದೆ ಅವನ ಇಷ್ಟಕರ್ತವ್ಯವಿರುವುದು. ಆದರೆ ಇದನ್ನು ಯಾರಿಂದ ತಾನೆ ಮಾಡಲು ಸಾಧ್ಯವು? ಈಶ್ವರರಿಂದ ಕೂಡ ಈ ಕಾರ್ಯವು ಕಷ್ಟಸಾಧ್ಯವೆನಿಸುವುದು. ಹೀಗಿರಲು ಇತರರಿಗೆ ಸಾಧ್ಯವಾದೀತೆ?

ಜಡಪುತ್ರನಿಂತೆಂದನು :—

೨೬. ನಾಗರಾಜನಾದ ಅಶ್ವತರನು ಪುತ್ರರ ಈ ವಚನವನ್ನು ಕೇಳಿ ವಿಚಾರಪರನಾದನು. ಮತ್ತು ಬಹಳ ಹೊತ್ತು ವಿಮರ್ಶಮಾಡಿ ನಗುನಗುತ್ತ ಪುತ್ರರನ್ನು ಕುರಿತು ಹೇಳಿದನು.

೨೭. ಪುತ್ರರೇ! ಮಾನವರು ಯಾವುದಾದರೊಂದು ಕರ್ತವ್ಯವನ್ನು ಅಶಕ್ಯವಾದುದೆಂದು ಕೇಳಿ ಆ ಕರ್ತವ್ಯದಲ್ಲಿ ಉದ್ಯಮವನ್ನು ಮಾಡದಿದ್ದರೆ ಉದ್ಯಮದ ಹಾನಿಯಿಂದಲೆ ಕರ್ತವ್ಯದ ಹಾನಿಯೂ ಸಂಭವಿಸುವುದು.

ಆರಭೇತ ನರಃ ಕರ್ಮ ಸ್ವಪೌರುಷಮಹಾಪಯನ್ ।
ನಿಷ್ಪತ್ತಿಃ ಕರ್ಮಣಾಂ ದೈವೇ ಪೌರುಷೇ ಚ ವ್ಯವಸ್ಥಿತಾ ॥೨೮॥

ತಸ್ಮಾದಹಂ ತಥಾ ಯತ್ನಂ ಕರಿಷ್ಯೇ ಪುತ್ರಕಾರ್ಯತಃ ।
ತಪಶ್ಚರ್ಯಾಂ ಸಮಾಸ್ಥಾಯ ಯಥೈತತ್ಸಾಧ್ಯತೇಽಚಿರಾತ್ ॥೨೯॥

ಪುತ್ರ ಉವಾಚ :—

ಏವಮುಕ್ತ್ವಾ ಸ ನಾಗೇನ್ದ್ರಃ ಪ್ಲಕ್ಷಾವತರಣಂ ಗಿರೇಃ ।
ತೀರ್ಥಂ ಹಿಮವತೋ ಗತ್ವಾ ತಪಸ್ತೇಪೇ ಸುದುಶ್ಚರಮ್ ॥೩೦॥

ತುಷ್ಟಾವ ವಾಗ್ಭಿರಿಷ್ಟಾಭಿಸ್ತತ್ರ ದೇವೀಂ ಸರಸ್ವತೀಮ್ ।
ತನ್ಮನಾ ನಿಯತಾಹಾರೋ ಭೂತ್ವಾ ತ್ರಿಷವಣಾಪ್ಲುತಃ ॥೩೧॥

---

೨೮. ಮಾನವನು ತನ್ನ ಪೌರುಷಕ್ಕೆ ಅವಕಾಶಭಂಗವನ್ನು ಮಾಡದೆ ಕೆಲಸವನ್ನು ಪ್ರಾರಂಭಿಸಬೇಕು. ಆ ಕೆಲಸಗಳ ಫಲಸಿದ್ಧಿಯು ದೈವ ಮತ್ತು ಪೌರುಷ-ಇವೆರಡರನ್ನೂ ಅವಲಂಬಿಸಿರುವುದು.

೨೯. ಆದ್ದರಿಂದ ತಪಶ್ಚರ್ಯೆಯನ್ನು ಕೈಗೊಂಡು ಯಾವ ಬಗೆಯಿಂದ ಈ ಕಾರ್ಯವನ್ನು ಶೀಘ್ರದಲ್ಲಿ ಸಾಧಿಸಲಾದೀತೊ ; ಹಾಗೆ ಪುತ್ರರ ಇಷ್ಟವನ್ನು ಸಾಧಿಸಲು ನಾನು ತಪಶ್ಚರ್ಯೆಯಲ್ಲಿ ಯತ್ನವನ್ನು ಮಾಡುವೆನು.

೩೦. ನಾಗರಾಜನಾದ ಅಶ್ವತರನು ಪುತ್ರರಿಗೆ ಹೀಗೆಂದು ಹೇಳಿ ಹಿಮಾಲಯಪರ್ವತದ ಪ್ಲಕ್ಷಾವತರಣವೆಂಬ ತೀರ್ಥಸನ್ನಿಧಿಗೆ ಹೋಗಿ ಅಲ್ಲಿ ಕಠಿನವಾದ ತಪವನ್ನು ಆಚರಿಸಿದನು.

೩೧. ನಾಗರಾಜನು ಆ ತೀರ್ಥದಲ್ಲಿ ತ್ರಿಷವಣಸ್ನಾನವನ್ನು ಮಾಡಿದವನೂ, ನಿಯಮವಾದ ಆಹಾರವುಳ್ಳವನೂ, ಮತ್ತು ಏಕಾಗ್ರವಾದ ಮನಸ್ಸುಳ್ಳವನೂ ಆಗಿ ದೇವಿಗೆ ಇಷ್ಟವಾದ ಸ್ತುತಿವಾಕ್ಯಗಳಿಂದ ಸರಸ್ವತೀದೇವಿಯನ್ನು ಸ್ತೋತ್ರಮಾಡಿದನು.

ಅಶ್ವತರ ಉವಾಚ :—

ಜಗದ್ಧಾತ್ರೀಮಹಂ ದೇವೀಮಾರಿರಾಧಯಿಷುಃ ಶುಭಾಮ್ ।
ಸ್ತೋಷ್ಯೇ ಪ್ರಣಮ್ಯ ಶಿರಸಾ ಬ್ರಹ್ಮಯೋನಿಂ ಸರಸ್ವತೀಮ್ ॥೩೨॥

ಸದಸದ್ದೇವಿ ಯತ್ಕಿಂಚಿನ್ಮೋಕ್ಷಬನ್ಧಾರ್ಥವತ್ಪದಮ್ ।
ತತ್ಸರ್ವಂ ತ್ವಯ್ಯಸಂಯೋಗಂ ಯೋಗವದ್ದೇವಿ ಸಂಸ್ಥಿತಮ್ ॥೩೩॥

ತ್ವಮಕ್ಷರಂ ಪರಂ ದೇವಿ ಯತ್ರ ಸರ್ವಂ ಪ್ರತಿಷ್ಠಿತಮ್ ।
ಅಕ್ಷರಂ ಪರಮಂ ಬ್ರಹ್ಮ ಜಗಚ್ಚೈತತ್ಕ್ಷರಾತ್ಮಕಮ್ ॥೩೪॥

ದಾರುಣ್ಯವಸ್ಥಿತೋ ವಹ್ನಿರ್ಭೌಮಾಶ್ಚ ಪರಮಾಣವಃ ।
ತಥಾ ತ್ವಯಿ ಸ್ಥಿತಂ ಬ್ರಹ್ಮ ಜಗಚ್ಚೇದಮಶೇಷತಃ ॥೩೫॥

ಅಶ್ವತರನು ಹೀಗೆ ಸ್ತುತಿಮಾಡಿದನು :—

೩೨. ಜಗತ್ತಿಗೆ ಕಾರಣಳೂ, ಮಂಗಳಮಯಳೂ, ಮತ್ತು ವೇದವಿದ್ಯಾಪ್ರಕಾಶಕಳೂ ಆದ ಸರಸ್ವತೀದೇವಿಯನ್ನು ಆರಾಧಿಸುವ ಇಷ್ಟವುಳ್ಳ ನಾನು ತಲೆಬಾಗಿ ವಂದಿಸಿ ದೇವಿಯನ್ನು ಸ್ತುತಿಸುವೆನು.

೩೩. ಮಹಾದೇವಿಯೆ! ಸತ್ಯ-ಅಸತ್ಯವೆಂಬ ವಸ್ತುಗಳಾಗಲಿ ಮೋಕ್ಷ-ಬಂಧಗಳಿಗಾಗಿ ಇರುವ ವಸ್ತುಗಳಾಗಲಿ ಎಲ್ಲವೂ ಪರಮಾರ್ಥವಾಗಿ ನಿನ್ನಲ್ಲಿಲ್ಲ-ವಾದರೂ ನಿನ್ನಲ್ಲಿಯೆ ನೆಲೆಸಿರುವುವು.

೩೪. ಯಾವ ತತ್ತ್ವದಲ್ಲಿ ಜಗತ್ತೆಲ್ಲವೂ ಪ್ರತಿಷ್ಠಿತವಾಗಿದೆಯೊ ಅಂತಹ ಸರ್ವೋತ್ತಮವೂ, ನಾಶವಿಲ್ಲದ್ದೂ, ಪರಬ್ರಹ್ಮಸ್ವರೂಪವೂ ಮತ್ತು ಅಕ್ಷರವೆಂದು ಕರೆಯಲ್ಪಡುವುದೂ ಆದ ತತ್ತ್ವವು ನೀನೆ ಆಗಿದ್ದೀಯೆ. ಜಗತ್ತೆಲ್ಲವೂ ನಾಶವಾಗು-ವುದರಿಂದ "ಕ್ಷರ" ಎಂದು ಕರೆಯಲ್ಪಡುವುದು.

೩೫. ಭೌತಿಕವಾದ ಮರದಲ್ಲಿ ಬೆಂಕಿಯೂ, ಪೃಥಿವೀತತ್ತ್ವದ ಪರಮಾಣುಗಳೂ ಅಡಗಿರುವುವು. ಅವೆರಡೂ ಪರಸ್ಪರ ವಿರೋಧವುಳ್ಳ ತತ್ತ್ವಗಳು. ಒಂದು ಆಧಾರದಲ್ಲಿ ಅವು ಅಡಗಿರುವಂತೆ ನಿನ್ನಲ್ಲಿ ಬ್ರಹ್ಮವಸ್ತುವು ಮತ್ತು ಅಶೇಷವಾದ ಜಗತ್ತು ಅಡಗಿವೆ.

ಓಂಕಾರಾಕ್ಷರಸಂಸ್ಥಾನಂ ಯತ್ತೇ ದೇವಿ ಸ್ಥಿರಾಸ್ಥಿರಮ್ ।
ತತ್ರ ಮಾತ್ರಾತ್ರಯಂ ಸರ್ವಮಸ್ತಿ ಯದ್ದೇವಿ ನಾಸ್ತಿ ಚ ॥೩೬॥

ತ್ರಯೋ ಲೋಕಾಸ್ತ್ರಯೋ ದೇವಾಸ್ತ್ರೈವಿದ್ಯಂ ಪಾವಕತ್ರಯಮ್ ।
ತ್ರೀಣಿ ಜ್ಯೋತೀಂಷಿ ವರ್ಗಾಶ್ಚ ತ್ರಯೋ ಧರ್ಮಾದಯಸ್ತಥಾ॥೩೭॥

ತ್ರಯೋ ಗುಣಾಸ್ತ್ರಯಃ ಶಬ್ದಾಸ್ತ್ರಯೋ ದೋಷಾಸ್ತಥಾಶ್ರಮಾಃ ।
ತ್ರಯಃ ಕಾಲಾಸ್ತಥಾವಸ್ಥಾಃ ಪಿತರೋಽಹರ್ನಿಶಾದಯಃ ॥೩೮॥

---

೩೬. ಎಲೈ ದೇವಿಯೆ! ನಿನಗೆ ವಾಚಕವಾದ, ಓಂಕಾರವೆಂಬ ಅಕ್ಷರದ ಸ್ವರೂಪವು ಸ್ಥಾವರ-ಜಂಗಮರೂಪವಾದ ಪ್ರಪಂಚವನ್ನು ವ್ಯಾಪಿಸಿದೆ. ವಾಚ್ಯ ವಸ್ತುವು ವಾಚಕಶಬ್ದದಲ್ಲಿ ಐಕ್ಯವಾಗಿರುವುದು. ವಾಚಕಶಬ್ದಗಳು ಓಂಕಾರದಲ್ಲಿ ಐಕ್ಯವಾಗಿವೆ. ಆ ಓಂಕಾರಾಕ್ಷರದಲ್ಲಿ ಮೂರು ಮಾತ್ರಾರೂಪವಾದ ವರ್ಣಗಳು ಖಂಡವಾಗಿ ಸೇರಿದಂತೆ ಇವೆ. ಆದರೆ ಅಖಂಡವಾದ ವರ್ಣದಲ್ಲಿ ಖಂಡಗಳು ಸೇರಿರುವುದು ಪರಮಾರ್ಥವಲ್ಲ.

೩೭. ನಿನ್ನ ಸ್ವರೂಪವಾದ ಓಂಕಾರದಲ್ಲಿ ಮೂರು ಮಾತ್ರೆಗಳು ಭೂಃ-ಭುವಃ-ಸುವಃ ಎಂಬ ಮೂರು ಲೋಕಗಳೂ, ಬ್ರಹ್ಮ-ವಿಷ್ಣು-ಶಿವ ಎಂಬ ಮೂರು ದೇವತೆಗಳೂ, ಋಕ್-ಯಜುಃ-ಸಾಮ ಎಂಬ ಮೂರು ವೇದಗಳೂ, ದಕ್ಷಿಣಾಗ್ನಿ-ಗಾರ್ಹಪತ್ಯ-ಆಹವನೀಯ ಎಂಬ ಮೂರು ಅಗ್ನಿಗಳೂ, ಸುಕೃತ-ದುಷ್ಕೃತ-ಮಿಶ್ರಿತ ಎಂಬ ಮೂರು ವರ್ಗಗಳೂ, ಬ್ರಹ್ಮಚರ್ಯ-ಗೃಹಸ್ಥ-ವಾನಪ್ರಸ್ಥ ಎಂಬ ಮೂರು ಧರ್ಮಸ್ಕಂಧಗಳೂ ಮತ್ತು ಅಗ್ನಿ-ಸೂರ್ಯ-ಚಂದ್ರ ಎಂಬ ಮೂರು ಜ್ಯೋತಿಗಳೂ ಆಗಿರುವುವು.

೩೮. ಮತ್ತು ಸತ್ತ್ವ-ರಜ-ತಮ ಎಂಬ ಮೂರು ಗುಣಗಳೂ, ಪಶ್ಯನ್ತೀ-ಮಧ್ಯಮಾ-ವೈಖರೀ ಎಂಬ ಮೂರು ಶಬ್ದಗಳೂ, ರಾಗ-ದ್ವೇಷ-ಮೋಹ ಎಂಬ ಮೂರು ದೋಷಗಳೂ, ಬ್ರಹ್ಮಚಾರಿ-ಗೃಹಸ್ಥ-ವಾನಪ್ರಸ್ಥ ಎಂಬ ಮೂರು ಆಶ್ರಮಧರ್ಮಗಳೂ, ಭೂತ-ಭವಿಷ್ಯ-ವರ್ತಮಾನ ಎಂಬ ಮೂರುಕಾಲಗಳೂ, ಜಾಗ್ರತ್-ಸ್ವಪ್ನ-ಸುಷುಪ್ತಿ ಎಂಬ ಮೂರು ಅವಸ್ಥೆಗಳೂ ಮತ್ತು ಪಿತೃದೇವತೆ-ಅಹಸ್ಸು-ರಾತ್ರಿ ಮುಂತಾದುವುಗಳೂ ಆಗಿವೆ.

ಏತನ್ಮಾತ್ರಾತ್ರಯಂ ದೇವಿ ತವ ರೂಪಂ ಸರಸ್ವತಿ ।
ವಿಭಿನ್ನದರ್ಶಿನಾಮಾದ್ಯಾ ಬ್ರಹ್ಮಣೋ ಹಿ ಸನಾತನಾಃ ॥೩೯॥

ಸೋಮಸಂಸ್ಥಾ ಹವಿಃಸಂಸ್ಥಾಃ ಪಾಕಸಂಸ್ಥಾಶ್ಚ ಸಪ್ತ ಯಾಃ ।
ತಾಸ್ತ್ವದುಚ್ಚಾರಣಾದ್ದೇವಿ ಕ್ರಿಯನ್ತೇ ಬ್ರಹ್ಮವಾದಿಭಿಃ ॥೪೦॥

ಅನಿರ್ದೇಶ್ಯಂ ತಥಾ ಚಾನ್ಯದರ್ಧಮಾತ್ರಾಶ್ರಿತಂ ಪರಮ್ ।
ಅವಿಕಾರ್ಯಕ್ಷರಂ ದಿವ್ಯಂ ಪರಿಣಾಮವಿವರ್ಜಿತಮ್ ॥೪೧॥

---

೩೯. ಸರಸ್ವತಿದೇವಿಯೆ! ಹೀಗೆ ನಿನ್ನ ರೂಪವಾದ ಓಂಕಾರಾಕ್ಷರದಲ್ಲಿರುವ ಮೂರು ಮಾತ್ರಾವರ್ಣಗಳು ಹಿಂದೆ ಹೇಳಿದಂತೆ ಅನೇಕ ಬಗೆಗಳಾಗಿವೆ. ಬ್ರಹ್ಮವಸ್ತುವಿನಲ್ಲಿ ಭೇದವನ್ನು ಕಾಣುವ ಅಜ್ಞಾನಿಗಳ ದೃಷ್ಟಿಯಲ್ಲಿ ಇಂತಹ ಭೇದಪರಂಪರೆಗಳು ಅನಾದಿಯಾಗಿ ಬಂದಿವೆ.

೪೦. ಕರ್ಮಯೋಗವೇ ಶ್ರೇಯಸ್ಕರವಾದ ಬ್ರಹ್ಮವಸ್ತುವೆಂದು ವಾದಿಸುವ ಕರ್ಮಶ್ರದ್ಧಾವಂತರು ಸೋಮಲತೆಯನ್ನು ಉಪಯೋಗಿಸಿ ಆಚರಿಸುವ ಏಳುಬಗೆಯಾದ ಸೋಮಸಂಸ್ಥೆಯೆಂಬ ಕರ್ಮಗಳೂ, ಹವಿಸ್ಸನ್ನು ಉಪಯೋಗಿಸಿಮಾಡುವ ಏಳುಬಗೆಯಾದ ಇಷ್ಟಿಕರ್ಮಗಳೂ, ಮತ್ತು ಸ್ಮಾರ್ತಕರ್ಮಗಳಲ್ಲಿ ಸೇರಿದ ಏಳುಬಗೆಯ ಪಾಕಸಂಸ್ಥೆಗಳೂ ನಿನ್ನ ಸ್ವರೂಪವಾದ ಪ್ರಣವಾಕ್ಷರವನ್ನು ಉಚ್ಚಾರಣೆಮಾಡಿದನಂತರವೆ ಆಚರಿಸಲ್ಪಡುತ್ತವೆ.

೪೧. ಪ್ರಣವಾಕ್ಷರದಲ್ಲಿ ಸೇರಿದ ಮಾತ್ರಾತ್ರಯವು ಸಮಸ್ತ ಜಗತ್ತನ್ನು ವ್ಯಾಪಿಸಿಕೊಂಡಿರುವುದು. ಅದು ನಿನ್ನ ಅಪರರೂಪವು. ಹಾಗೆಯೆ ವ್ಯಂಜನರೂಪವಾದ ಅರ್ಧಮಾತ್ರೆಯನ್ನು ಅವಲಂಬಿಸಿರುವುದು ಪರರೂಪವು. ಅದು ವಾಙ್ಮಾನಸಗಳಿಗೆ ಅಗೋಚರವೂ, ಕ್ಷಯ-ವಿಕಾರಗಳು ಇಲ್ಲದಿರುವುದೂ, ಪರಿಣಾಮಶೂನ್ಯವೂ ಮತ್ತು ದಿವ್ಯವೂ ಆಗಿದೆ.

ತವೈವ ಚ ಪರಂ ರೂಪಂ ಯನ್ನ ಶಕ್ಯಂ ಮಯೇರಿತುಮ್ ।
ನ ಚಾಸ್ಯೇನ ನ ವಾ ಜಿಹ್ವಾತಾಲ್ವೋಷ್ಠಾದಿಭಿರುಚ್ಯತೇ ॥೪೨॥

ಇನ್ದ್ರೋಽಪಿ ವಸವೋ ಬ್ರಹ್ಮಾ ಚನ್ದ್ರಾರ್ಕೌ ಜ್ಯೋತಿರೇವ ಚ ।
ವಿಶ್ವಾವಾಸಂ ವಿಶ್ವರೂಪಂ ವಿಶ್ವೇಶಂ ಪರಮೇಶ್ವರಮ್ ॥೪೩॥

ಸಾಙ್ಖ್ಯವೇದಾನ್ತವೇದೋಕ್ತಂ ಬಹುಶಾಖಾಸ್ಥಿರೀಕೃತಮ್ ।
ಅನಾದಿಮಧ್ಯನಿಧನಂ ಸದಸನ್ನಃ ಸದೇವ ತು ॥೪೪॥

ಏಕಂ ತ್ವನೇಕಮಪ್ಯೇಕಂ ಭವಭೇದಸಮಾಶ್ರಿತಮ್ ।
ಅನಾಖ್ಯಂ ಷಡ್ಗುಣಾಖ್ಯಂ ಚ ಷಟ್ಕಾಖ್ಯಂ ತ್ರಿಗುಣಾಶ್ರಯಮ್॥೪೫॥

---

೪೨. ದೇವಿಯೆ ! ನಿನ್ನ ಆ ಪರರೂಪವನ್ನು ನನ್ನಿಂದ ವರ್ಣಿಸಲು ಸಾಧ್ಯವೇ ಇಲ್ಲ. ಶಬ್ದವನ್ನು ಉಚ್ಚಾರಮಾಡಲು ಸಾಧನವಾದ ಮುಖ-ಕಂಠ-ಓಷ್ಠ-ನಾಲಿಗೆ ಮುಂತಾದ ಸ್ಥಾನಗಳು ಪರರೂಪವನ್ನು ತಿಳಿಸುವ ಶಬ್ದವನ್ನು ಉಚ್ಚರಿಸಲಾರವು. ನಾನು ಹೇಗೆ ಅದನ್ನು ವರ್ಣಿಸಲಿ ?

೪೩. ದೇವರಾಜನಾದ ಇಂದ್ರ, ವಸುದೇವತೆ, ಬ್ರಹ್ಮ, ಚಂದ್ರ-ಸೂರ್ಯ ಮತ್ತು ಇತರ ತೇಜಸ್ಸು—ಇವೆಲ್ಲವೂ ನಿನ್ನ ರೂಪವೇ ಆಗಿದೆ. ಆದ್ದರಿಂದ ನಿನ್ನ ಪರತತ್ತ್ವವು ವಿಶ್ವಕ್ಕೆ ಆಧಾರವಾಗಿಯೂ, ವಿಶ್ವದರೂಪದಿಂದ ಕಾಣಿಸುವುದಾಗಿಯೂ, ವಿಶ್ವಕ್ಕೆ ನಿಯಾಮಕವಾಗಿಯೂ, ಮತ್ತು ಸರ್ವೇಶ್ವರ-ರೂಪವಾಗಿಯೂ ಇರುವುದು.

೪೪. ಮತ್ತು ನಿನ್ನ ಸರ್ವೋತ್ಕೃಷ್ಟವಾದ ತತ್ತ್ವವು ವೇದ-ಸಾಂಖ್ಯ-ವೇದಾಂತಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುದೂ, ಅನೇಕ ಶಾಖೆಗಳಿಂದ ಸ್ಥಿರಪಡಿಸಲ್ಪಟ್ಟಿರುವುದೂ, ಉತ್ಪತ್ತಿ-ನಿಧನಗಳಿಲ್ಲದ್ದೂ, ಸತ್ಯ-ಅಸತ್ಯ ವಸ್ತು-ಸ್ವರೂಪವೂ ಮತ್ತು ಜ್ಞಾನಿಗಳಿಗೆ ಸನ್ಮಾತ್ರರೂಪವೂ ಆಗಿದೆ.

೪೫. ಮತ್ತು ಜೀವಾತ್ಮರ ಅನಾದಿ ಕರ್ಮಾಧೀನವಾದ ಸಂಸಾರಭೇದ-ವನ್ನು ಆಶ್ರಯಿಸಿದ ನಿನ್ನ ತತ್ತ್ವವು ಏಕ-ಅನೇಕರೂಪವಾಗಿ ಸ್ಫುರಿಸುವುದಾದರೂ ಪರಮಾರ್ಥವಾಗಿ ಒಂದೇ ಆಗಿರುವುದು. ಮತ್ತು ಸತ್ತ್ವ-ರಜ-ತಮೋಗುಣಗಳಿಂದ ಕಾಲ ಮುಂತಾದ ಆರು ಸಂಜ್ಞೆಗಳನ್ನು ಹೊಂದಿರುವುದೂ, ಜನ್ಮ ಮುಂತಾದ ಆರು ವಿಕಾರಗುಣಗಳನ್ನು ಹೊಂದಿರುವುದೂ ವಸ್ತುದೃಷ್ಟಿಯಿಂದ ನಾಮ-ರೂಪ ವರ್ಜಿತವೂ ಆಗಿದೆ.

ನಾನಾಶಕ್ತಿಮತಾಮೇಕಂ ಶಕ್ತಿವೈಭಾವಿಕಂ ಪರಮ್ ।
ಸುಖಾಸುಖಮಹತ್ಸೌಖ್ಯರೂಪಂ ತವ ವಿಭಾವ್ಯತೇ ॥೪೬॥

ಏವಂ ದೇವಿ ತ್ವಯಾ ವ್ಯಾಪ್ತಂ ಸಕಲಂ ನಿಷ್ಕಲಂ ಜಗತ್ ।
ಅದ್ವೈತಾವಸ್ಥಿತಂ ಬ್ರಹ್ಮ ಯಚ್ಚ ದ್ವೈತೇ ವ್ಯವಸ್ಥಿತಮ್ ॥೪೭॥

ಯೇಽರ್ಥಾ ನಿತ್ಯಾ ಯೇ ವಿನಶ್ಯನ್ತಿ ಚಾನ್ಯೇ
ಯೇ ವಾ ಸ್ಥೂಲಾ ಯೇ ಚ ಸೂಕ್ಷ್ಮಾಚ್ಚ ಸೂಕ್ಷ್ಮಾಃ ।
ಯೇ ವಾ ಭೂಮೌ ಯೇಽನ್ತರಿಕ್ಷೇಽನ್ಯತೋ ವಾ
ತೇಷಾಂ ಸತ್ಯಂ ತ್ವತ್ತ ಏವೋಪಲಬ್ಧಿಃ ॥೪೮॥

---

೪೬. ಮತ್ತು ಅನೇಕವಿಧವಾದ ಶಕ್ತಿಗಳಿಂದ ಕೂಡಿದ ವಸ್ತುಜಾಲದಲ್ಲಿ ಶಕ್ತಿಸಮಷ್ಟಿರೂಪಳಾದ ನಿನ್ನ ಶಕ್ತಿಕಿರಣಗಳು ವ್ಯಾಪಿಸಿಕೊಂಡಿರುವುವು. ಬೆಂಕಿಯಲ್ಲಿರುವ ಸುಡುವ ಶಕ್ತಿ ; ಶಸ್ತ್ರದಲ್ಲಿರುವ ಕತ್ತರಿಸುವ ಶಕ್ತಿ ಇವುಗಳೆಲ್ಲವೂ ನಿನ್ನ ವಿಭವರೂಪವಾದುವು. ಲೋಕದಲ್ಲಿ ಪರಸ್ಪರವಾಗಿ ವಿರೋಧಭಾವನೆಗೆ ಎಡೆಯಾದ ಸುಖ-ದುಃಖಗಳು ಮಾತ್ರವಲ್ಲದೆ ಇವುಗಳನ್ನು ಮೀರಿಸಿದ ಪರಮಸೌಖ್ಯಸ್ವರೂಪಳೂ ಆಗಿ ಸ್ಫುರಿಸುತ್ತೀಯೆ.

೪೭. ದೇವಿಯೆ ! ಅದ್ವೈತಭಾವನೆಯಿಂದ ಸ್ಫುರಿಸುವ ಬ್ರಹ್ಮತತ್ತ್ವವೂ ದ್ವೈತದಶೆಯಲ್ಲಿ ವ್ಯವಸ್ಥಿತವಾದ ಬ್ರಹ್ಮತತ್ತ್ವವೂ, ಸಖಂಡ-ಅಖಂಡರೂಪವಾದ ಜಗತ್ತೂ ಹೀಗೆ ನಿನ್ನಿಂದ ವ್ಯಾಪಿಸಲ್ಪಟ್ಟಿರುವುದು.

೪೮. ಜಗತ್ತಿನಲ್ಲಿ ತೋರುವ ವಸ್ತುಗಳಲ್ಲಿ ಯಾವ ವಸ್ತುಗಳು ಸ್ಥೂಲ ಅಥವಾ ಸೂಕ್ಷ್ಮಕ್ಕಿಂತ ಸೂಕ್ಷ್ಮವೆನಿಸಿಕೊಂಡಿವೆಯೊ ; ಮತ್ತು ಯಾವ ವಸ್ತುಗಳು ಭೂಮಿ-ಅಂತರಿಕ್ಷ ಅಥವಾ ಬೇರೊಂದು ಕಡೆಗಳಲ್ಲಿ ಇರುವುವೊ ; ಅವುಗಳ ಸತ್ತಾ ಪ್ರಕಾಶವು ಸತ್ಯವಾಗಿ ನಿನ್ನಿಂದಲೇ ಆಗುವುದು.

ಯಚ್ಚಾಮೂರ್ತಂ ಯಚ್ಚ ಮೂರ್ತಂ ಸಮಸ್ತಂ
ಯದ್ವಾ ಭೂತೇಷ್ವೇಕಮೇಕಂ ಚ ಕಿಂಚಿತ್ ।
ಯದ್ದಿವ್ಯೇಽಸ್ತಿ ಕ್ಷ್ಮಾತಲೇ ಖೇಽನ್ಯತೋ ವಾ
ತತ್ಸಮ್ಬನ್ಧಂ ತ್ವತ್ಸ್ವರೈರ್ವ್ಯಞ್ಜನೈಶ್ಚ ॥೪೯॥

ಜಡ ಉವಾಚ:—

ಏವಂ ಸ್ತುತಾ ತದಾ ದೇವೀ ವಿಷ್ಣೋರ್ಜಿಹ್ವಾ ಸರಸ್ವತೀ ।
ಪ್ರತ್ಯುವಾಚ ಮಹಾತ್ಮಾನಂ ನಾಗಮಶ್ವತರಂ ತತಃ ॥೫೦॥

ಸರಸ್ವತ್ಯುವಾಚ :—

ವರಂ ತೇ ಕಮ್ಬಲಭ್ರಾತಃ ಪ್ರಯಚ್ಛಾಮ್ಯುರಗಾಧಿಪ ।
ತದುಚ್ಯತಾಂ ಪ್ರದಾಸ್ಯಾಮಿ ಯತ್ತೇ ಮನಸಿ ವರ್ತತೇ ॥೫೧॥

---

೪೯. ಹಾಗು ಪ್ರಪಂಚದ ತತ್ತ್ವಗಳಲ್ಲಿ ಮೂರ್ತ-ಅಮೂರ್ತಗಳೆಂಬ ಎಲ್ಲ ವಸ್ತುಗಳೂ, ಭೂತಗಳಲ್ಲಿ ಸಮಷ್ಟಿ-ವ್ಯಷ್ಟಿಗಳಿಂದ ಆಗುವ ಏಕ-ಅನೇಕ ವಸ್ತುಗಳೂ, ಮತ್ತು ಭೂಮಿ ಆಕಾಶ ಅಥವಾ ಬೇರೊಂದು ಆಧಾರದಲ್ಲಿ ತೋರುವ ವಸ್ತುಗಳೂ ಸ್ವರ-ವ್ಯಂಜನರೂಪವಾದ ವರ್ಣಮಾಲೆಯಿಂದ ಕೂಡಿರುವ ನಿನ್ನ ಶಬ್ದ ಶರೀರದಲ್ಲಿ ಸಂಬಂಧಿಸಿಕೊಂಡಿರುವುವು.

ಜಡ ಪುತ್ರನು ಇಂತೆಂದನು :—

೫೦. ತರುವಾಯ ಅಶ್ವತರ ನಾಗನಿಂದ ಈ ರೀತಿಯಾಗಿ ಸ್ತುತಿಸಲ್ಪಟ್ಟವಳೂ ಪರಮಾತ್ಮನ ನಾಲಿಗೆಯಂತಿರುವವಳೂ ಆದ ಸರಸ್ವತೀದೇವಿಯು ಮಹಾತ್ಮನಾದ ಅಶ್ವತರ ನಾಗೇಂದ್ರನನ್ನು ಕುರಿತು ಹೀಗೆ ನುಡಿದಳು.

ಸರಸ್ವತೀ ದೇವಿಯು ಹೇಳಿದಳು :—

೫೧. ಕಂಬಲನೆಂಬ ನಾಗನ ಭ್ರಾತೃವೆ! ನಾನು ನಿನಗೆ ವರವನ್ನು ಕೊಡುವೆನು. ನಿನ್ನ ಮನಸ್ಸಿನಲ್ಲಿ ಯಾವ ವಿಷಯದಲ್ಲಿ ಇಷ್ಟವಿದೆಯೊ ಅದನ್ನು ಹೇಳು. ಆ ವರವನ್ನು ಕೊಡುವೆನು.

ಅಶ್ವತರ ಉವಾಚ :—

ಸಾಹಾಯ್ಯಂ ದೇವಿ ದೇಹಿ ತ್ವಂ ಪೂರ್ವಂ ಕಮ್ಬಲಮೇವ ಚ ।
ಸಮಸ್ತಸ್ವರಸಮ್ಬದ್ಧಮುಭಯೋಃ ಸಮ್ಪ್ರಯಚ್ಛ ಚ ॥೫೨॥

ಸರಸ್ವತ್ಯುವಾಚ :—

ಸಪ್ತ ಸ್ವರಾ ಗ್ರಾಮರಾಗಾಃ ಸಪ್ತ ಪನ್ನಗಸತ್ತಮ ।
ಗೀತಕಾನಿ ಚ ಸಪ್ತೈವ ತಾವತ್ಯಶ್ಚಾಪಿ ಮೂರ್ಛನಾಃ ॥೫೩॥

ತಾನಾಶ್ಚೈಕೋನಪಞ್ಚಾಶತ್ತಥಾ ಗ್ರಾಮತ್ರಯಂ ಚ ಯತ್ ।
ಏತತ್ಸರ್ವಂ ಭವಾನ್ಗೀತಾ ಕಮ್ಬಲಶ್ಚೈವ ತೇಽನಘ ॥೫೪॥

ಜ್ಞಾಸ್ಯತೇ ಮತ್ಪ್ರಸಾದೇನ ಭುಜಗೇನ್ದ್ರ ಪರಂ ತಥಾ ।
ಚತುರ್ವಿಧಂ ಪರಂ ತಾಲಂ ತ್ರಿಃಪ್ರಕಾರಂ ಲಯತ್ರಯಮ್ ॥೫೫॥

ಅಶ್ವತರನು ಹೇಳಿದನು :—

೫೨. ದೇವಿಯೆ! ಸ್ವರಶಾಸ್ತ್ರಕ್ಕೆ ಸಂಬಂಧಿಸಿರುವ ತತ್ತ್ವಗಳಲ್ಲಿ ಸರ್ವಜ್ಞತ್ವವನ್ನು ನನಗೂ ನನ್ನ ಸಹೋದರನಾದ ಕಂಬಲನಿಗೂ ಕೊಟ್ಟು ನೀನು ಮೊದಲನೆಯ ಸಹಾಯವನ್ನು ಮಾಡು.

ಸರಸ್ವತಿಯು ಇಂತೆಂದಳು :—

೫೩. ಸರ್ಪಾಧಿಪನೆ! ಏಳು ಸ್ವರಗಳೂ, ಏಳು ಗ್ರಾಮಗಳೂ, ಏಳು ರಾಗಗಳೂ, ಏಳು ಗೀತಗಳೂ ಮತ್ತು ಏಳು ಮೂರ್ಛನೆಗಳೂ ನಿನಗೂ ಕಂಬಲ ನಾಗನಿಗೂ ತಿಳಿಯುವಂತೆ ಆಗುವುವು.

೫೪. ನಿಷ್ಕಲಂಕನಾದ ಅಶ್ವತರನೆ! ನೀನು ಮತ್ತು ನಿನ್ನ ಸಹೋದರ ಕಂಬಲನೂ ನಲವತ್ತೊಂಭತ್ತು ತಾನಗಳನ್ನೂ ಮೂರು ವಿಧವಾದ ಗ್ರಾಮವಿಶೇಷಗಳನ್ನೂ ತಿಳಿಯುವವರಾಗುತ್ತೀರಿ.

೫೫. ನಾಗಾಧಿಪತಿಯೆ! ಮತ್ತು ನನ್ನ ಅನುಗ್ರಹದಿಂದ ಹೆಚ್ಚಾದ ಜ್ಞಾನವನ್ನು ಹೊಂದುತ್ತೀರಿ. ನಾಲ್ಕು ಬಗೆಯಾದ ಉತ್ತಮ ಕಾಲವನ್ನೂ ಮತ್ತು ಮೂರು ಬಗೆಗಳಿಂದ ಕೂಡಿರುವ ಲಯ ತ್ರಯವನ್ನೂ ತಿಳಿಯುತ್ತೀರಿ.

ಗತಿತ್ರಯಂ ತಥಾ ಕಾಲಂ ಮಯಾ ದತ್ತಂ ಚತುರ್ವಿಧಮ್ ।
ಏತದ್ಭವಾನ್ ಮತ್ಪ್ರಸಾದಾತ್ಪನ್ನಗೇನ್ದ್ರ ಪರಂ ಚ ಯತ್ ॥೫೬॥

ಆಸ್ಯಾನ್ತರ್ಗತಮಾಯತ್ತಂ ಸ್ವರವ್ಯಞ್ಜನಯೋಶ್ಚ ಯತ್ ।
ತದಶೇಷಂ ಮಯಾ ದತ್ತಂ ಭವತಃ ಕಮ್ಬಲಸ್ಯ ಚ ॥೫೭॥

ಯಥಾ ನಾನ್ಯಸ್ಯ ಭೂಲೋಕೇ ಪಾತಾಲೇ ವಾಪಿ ಪನ್ನಗ ॥೫೮॥

ಪ್ರಣೇತಾರೌ ಭವನ್ತೌ ಚ ಸರ್ವಸ್ಯಾದ್ಯ ಭವಿಷ್ಯತಃ
ಪಾತಾಲೇ ದೇವಲೋಕೇ ಚ ಭೂರ್ಲೋಕೇ ಚೈವ ಪನ್ನಗೌ ॥೫೯॥

---

೫೬. ಹಾಗು ಮೂರು ಬಗೆಯ ಗತಿಗಳೂ, ನಾಲ್ಕುವಿಧವಾದ ಕಾಲಗಳೂ ತಿಳಿಯುವಂತೆ ನನ್ನಿಂದ ವರವು ಕೊಡಲ್ಪಟ್ಟಿದೆ. ಪನ್ನಗರಾಜನೆ! ಇದೆಲ್ಲವನ್ನೂ ನೀವು ತಿಳಿಯುತ್ತೀರಿ. ಮತ್ತು ಇದಕ್ಕಿಂತಲೂ ಹೆಚ್ಚಿನ ಜ್ಞಾನವನ್ನು ಹೊಂದುವಿರಿ.

೫೭. ಮುಖದೊಳಗಿನ ಸ್ಥಾನಗಳಿಂದ ಉಚ್ಚರಿಸುವ ವ್ಯಂಜನಗಳಿಗೆ ಸೇರಿದ ಶಾಸ್ತ್ರವೆಲ್ಲವೂ ನಿನಗೂ, ಕಂಬಲನಿಗೂ ಸ್ಫುರಿಸುವಂತೆ ನನ್ನಿಂದ ವರವು ನೀಡಲ್ಪಟ್ಟಿದೆ.

೫೮. ಅಶ್ವತರನೆ! ಪಾತಾಲಲೋಕದಲ್ಲಿಯಾಗಲಿ, ಅಥವಾ ಮರ್ತ್ಯಲೋಕದಲ್ಲಿಯಾಗಲಿ ಯಾರಿಗೂ ಇಲ್ಲದಂತಹ ವಿಶೇಷವಾದ ಸ್ವರಶಾಸ್ತ್ರವಿಷಯದ ಜ್ಞಾನವನ್ನು ನಿಮ್ಮಿಬ್ಬರಿಗೆ ನಾನು ಅನುಗ್ರಹಿಸಿರುವೆನು.

೫೯. ನನ್ನ ಅನುಗ್ರಹಕ್ಕೆ ಪಾತ್ರರಾದ ನೀವು ಇಂದು ಪಾತಾಲ-ದೇವಲೋಕ ಅಥವಾ ಮಧ್ಯಮಲೋಕಗಳಲ್ಲಿ ಸಮಸ್ತವಿಧವಾದ ಸಂಗೀತಶಾಸ್ತ್ರಕ್ಕೆ ಪ್ರಕಾಶಕರಾಗುತ್ತೀರಿ. ಮೂರುಲೋಕಗಳಲ್ಲಿ ನಿಮ್ಮಿಂದ ಸ್ವರವಿದ್ಯೆಯು ಪ್ರಕಾಶವಾಗುವುದು,

ಜಡ ಉವಾಚ :—

ಇತ್ಯುಕ್ತ್ವಾ ಸಾ ತದಾ ದೇವೀ ಸರ್ವಜಿಹ್ವಾ ಸರಸ್ವತೀ ।
ಜಗಾಮಾದರ್ಶನಂ ಸದ್ಯೋ ನಾಗಸ್ಯ ಕಮಲೇಕ್ಷಣಾ ॥೬೦॥

ತಯೋಶ್ಚ ತದ್ಯಥಾವೃತ್ತಂ ಭ್ರಾತ್ರೋಃ ಸರ್ವಮಜಾಯತ ।
ವಿಜ್ಞಾನಮುಭಯೋರಗ್ರ್ಯಂ ಪದತಾಲಸ್ವರಾದಿಕಮ್ ॥೬೧॥

ತತಃ ಕೈಲಾಸಶೈಲೇನ್ದ್ರಶಿಖರಸ್ಥಿತಮೀಶ್ವರಮ್ ।
ಗೀತಕೈಃ ಸಪ್ತಭಿರ್ನಾಗೌ ತನ್ತ್ರೀಲಯಸಮನ್ವಿತೈಃ ॥೬೨॥

ಆರಿರಾಧಯಿಷುರ್ದೇವಮನಙ್ಗಾಙ್ಗಹರಂ ಹರಮ್ ।
ಪ್ರಚಕ್ರತುಃ ಪರಂ ಯತ್ನಮುಭೌ ಸಂಹತವಾಕ್ಕಲೌ ॥೬೩॥

ಜಡಪುತ್ರನು ಇಂತೆಂದನು :—

೬೦. ಆಗ ತಾವರೆಹೂವಿನಂತೆ ಕಣ್ಣುಗಳುಳ್ಳವಳೂ, ಸಮಸ್ತಜನರ ಜಿಹ್ವಾಸ್ವರೂಪಳೂ, ಆದ ಸರಸ್ವತೀದೇವಿಯು ಅಶ್ವತರನಾಗನಿಗೆ ಈ ರೀತಿಯಾಗಿ ವರವನ್ನು ಕೊಟ್ಟು ಕೂಡಲೆ ಅದರ್ಶನವನ್ನು ಹೊಂದಿದಳು.

೬೧. ತರುವಾಯ ಸಹೋದರರಾದ ಆ ಕಂಬಲ-ಅಶ್ವತರನಾಗರಿಗೆ ಸರಸ್ವತೀ ದೇವಿಯಿಂದ ವರದಾನವಾದಂತೆ ಪದ-ತಾಲ-ಸ್ವರ ಮುಂತಾದ ವಿಷಯಗಳಲ್ಲಿ ಅತ್ಯುತ್ತಮವಾದ ಜ್ಞಾನವು ಉಂಟಾಯಿತು.

೬೨. ಅನಂತರ ಆ ಇಬ್ಬರು ನಾಗೇಂದ್ರರು ಕೈಲಾಸವೆಂಬ ಶ್ರೇಷ್ಠ-ಪರ್ವತದ ಶಿಖರದಲ್ಲಿ ವಾಸವಾಗಿರುವ ಪರಮೇಶ್ವರನನ್ನು ತಂತ್ರೀವಾದ್ಯದ ನಾದ ಮತ್ತು ಲಯಗಳಿಂದ ಕೂಡಿದ ಸಪ್ತಗೀತಗಳಿಂದ ಸೇವೆಮಾಡುವ ಇಷ್ಟವನ್ನು ಹೊಂದಿದರು.

೬೩. ಆಗ ಹೊಂದಿಕೊಂಡಿರುವ ಮಧುರಧ್ವನಿಯುಳ್ಳ ಇಬ್ಬರು ನಾಗೇಂದ್ರರು ಕಾಮನ ದೇಹವನ್ನು ಭಸ್ಮಮಾಡಿರುವ ಈಶ್ವರನನ್ನು ಆರಾಧಿಸಲು ಇಷ್ಟವುಳ್ಳವರಾಗಿ ಅದಕ್ಕೋಸ್ಕರ ಅತಿಶಯವಾದ ಯತ್ನವನ್ನು ಮಾಡಿದರು.

ಪ್ರಾತರ್ನಿಶಾಯಾಂ ಮಧ್ಯಾಹ್ನೇ ಸನ್ಧ್ಯಯೋಶ್ಚಾಪಿ ತತ್ಪರೌ ॥೬೪॥

ತತಃ ಕಾಲೇನ ಮಹತಾ ಸ್ತೂಯಮಾನೋ ವೃಷಧ್ವಜಃ ।
ತುತೋಷ ಗೀತಕೈಸ್ತೌ ಚ ಪ್ರಾಹ ಸಂಗೃಹ್ಯತಾಂ ವರಃ ॥೬೫॥

ತತಃ ಪ್ರಣಮ್ಯಾಶ್ವತರಃ ಕಮ್ಬಲೇನ ಸಮಂ ತದಾ ।
ವಿಜ್ಞಾಪಯನ್ಮಹಾದೇವಂ ಶಿತಿಕಣ್ಠಮುಮಾಪತಿಮ್ ॥೬೬॥

ಯದಿ ನೌ ಭಗವನ್ಪ್ರೀತೋ ದೇವದೇವ ತ್ರಿಲೋಚನ ।
ತತೋ ಯಥಾಭಿಲಷಿತಂ ವರಮೇನಂ ಪ್ರಯಚ್ಛ ನೌ ॥೬೭॥

ಮೃತಾ ಕುವಲಯಾಶ್ವಸ್ಯ ಪತ್ನೀ ದೇವ ಮದಾಲಸಾ ।
ತೇನೈವ ವಯಸಾ ಸದ್ಯೋ ದುಹಿತೃತ್ವಂ ಪ್ರಯಾತು ಮೇ ॥೬೮॥

---

೬೪. ಹಾಗೆ ಆರಾಧಿಸಲು ತೊಡಗಿರುವ ಕಂಬಲ ಮತ್ತು ಅಶ್ವತರರು ಪ್ರಾತಃಕಾಲ-ಮಧ್ಯಾಹ್ನ-ಸಂಧ್ಯಾಕಾಲ ಮತ್ತು ರಾತ್ರಿ ವೇಳೆಗಳಲ್ಲಿ ಯಥಾವಿಧಿಯಾಗಿ ಈಶ್ವರ ಸೇವೆಯನ್ನು ಮಾಡಿದರು.

೬೫. ತರುವಾಯ ಹಾಗೆ ಚಿರಕಾಲದಿಂದ ಸಪ್ತಗೀತಗಳನ್ನು ಪಠಿಸಿ ಸ್ತುತಿಸಲ್ಪಡುತ್ತಿದ್ದ, ವೃಷಭಚಿಹ್ನದ ಧ್ವಜವುಳ್ಳ ಪರಮೇಶ್ವರನು ಪ್ರಸನ್ನನಾದನು. ಮತ್ತು ಆ ನಾಗೇಂದ್ರರನ್ನು ಕುರಿತು ಇಷ್ಟವಾದ ವರವನ್ನು ಕೇಳುವಂತೆ ಹೇಳಿದನು.

೬೬. ಅನಂತರದಲ್ಲಿ ಅಶ್ವತರನು ಕಂಬಲನಾಗನೊಡನೆ ಈಶ್ವರನನ್ನು ವಂದಿಸಿ ಆಗ ನೀಲವಾದ ಕತ್ತು ಉಳ್ಳವನೂ, ದೇವೋತ್ತಮನೂ ಮತ್ತು ಪಾರ್ವತೀರಮಣನೂ ಆದ ಈಶ್ವರನಲ್ಲಿ ವಿಜ್ಞಾಪಿಸಿಕೊಂಡನು.

೬೭. ಷಡ್ಗುಣೈಶ್ವರ್ಯಪರಿಪೂರ್ಣನೆ! ದೇವೋತ್ತಮನೆ! ಮತ್ತು ಮೂರುಕಣ್ಣುಗಳಿಂದ ಶೋಭಿತನೆ! ನಮ್ಮಲ್ಲಿ ನೀನು ಪ್ರಸನ್ನನಾಗಿದ್ದರೆ ನಮಗೆ ಇಷ್ಟವಾಗಿರುವ ಈ ವರವನ್ನು ಅನುಗ್ರಹಿಸು.

೬೮. ಸ್ವಾಮಿಯೆ! ಮರಣವನ್ನೈದಿದ, ಕುವಲಯಾಶ್ವ ರಾಜಕುಮಾರನ ಪತ್ನಿಯಾದ, ಮದಾಲಸೆಯು ಮರಣದಶೆಯಲ್ಲಿ ಅವಳಿಗಿದ್ದ ವಯಃಪ್ರಮಾಣದಿಂದಲೆ ಕೂಡಲೆ ನನಗೆ ಪುತ್ರಿಯಾಗಿ ಜನಿಸಲಿ.

ಜಾತಿಸ್ಮರಾ ಯಥಾಪೂರ್ವಂ ತದ್ವತ್ಕಾನ್ತಿಸಮನ್ವಿತಾ ।
ಯೋಗಿನೀ ಯೋಗಮಾತಾ ಚ ವಚನಾಜ್ಜಾಯತಾಂ ತವ ॥೬೯॥

ಈಶ್ವರ ಉವಾಚ :—

ಯಥೋಕ್ತಂ ಪನ್ನಗಶ್ರೇಷ್ಠ ಸರ್ವಮೇತದ್ಭವಿಷ್ಯತಿ ।
ಮತ್ಪ್ರಸಾದಾದಸನ್ದಿಗ್ಧಂ ಶೃಣು ಚೇದಂ ಭುಜಙ್ಗಮ ॥೭೦॥

ಶ್ರಾದ್ಧಾವಸಾನೇ ಪ್ರಾಶ್ನೀಥಾ ಮಧ್ಯಮಂ ಪಿಣ್ಡಮಾತ್ಮನಾ ।
ಕಾಮಂ ಚೇಮಮನುಧ್ಯಾಯನ್ಕುರು ತ್ವಂ ಪಿತೃಪೂಜನಮ್ ॥೭೧॥

ತತ್ಕ್ಷಣಾದೇವ ಸಾ ಸುಭ್ರೂರ್ಭವತೋ ಮಧ್ಯಮಾತ್ಫಣಾತ್ ।
ಸಮುತ್ಪತ್ಸ್ಯತಿ ಕಲ್ಯಾಣೀ ತಥಾರೂಪಾ ಯಥಾ ಮೃತಾ ॥೭೨॥

---

೬೯. ಮತ್ತು ಆ ಮದಾಲಸೆಯು ಹಿಂದಿನಜನ್ಮದಲ್ಲಿ ನಡೆದಂತೆ ಎಲ್ಲ ವೃತ್ತಾಂತವನ್ನು ಸ್ಮರಿಸುವವಳೂ, ಮೊದಲಿನಂತೆ ಕ್ಷಮಾಗುಣದಿಂದ ಶೋಭಿತಳೂ, ಯೋಗಿನಿಯೂ ಮತ್ತು ಯೋಗಮಾತೆಯೂ ಆಗಿ ನಿನ್ನ ವರದಾನದಿಂದ ಈಗ ಜನಿಸಲಿ.

ಈಶ್ವರನು ಇಂತೆಂದನು :—

೭೦. ಸರ್ಪರಾಜನೆ! ನನ್ನ ಅನುಗ್ರಹದಿಂದ ನಿನ್ನಿಂದ ಕೇಳಲ್ಪಟ್ಟಂತೆ ನಿನ್ನ ಇಷ್ಟವೆಲ್ಲವೂ ಹಾಗೆಯೆ ನಿಸ್ಸಂದೇಹವಾಗಿ ಲಭಿಸುವುದು. ನಾಗೇಂದ್ರನೆ! ನಾನು ಹೇಳುವ ಮಾತನ್ನು ಕೇಳಿ ಅದರಂತೆ ವರ್ತಿಸು.

೭೧. ನೀನು ಶ್ರಾದ್ಧಕರ್ಮವನ್ನು ಮುಗಿಸಿದ ಕೂಡಲೆ ಪಿತೃಗಳಿಗೆ ಅರ್ಪಿಸಿದ ಪಿಂಡಗಳಲ್ಲಿ ಮಧ್ಯದ ಪಿಂಡವನ್ನು ಭಕ್ಷಣಮಾಡು. ಹಾಗು ನಿನ್ನ ಇಷ್ಟವನ್ನು ಧ್ಯಾನಿಸುತ್ತ ಶ್ರಾದ್ಧಕರ್ಮದಲ್ಲಿ ಪಿತೃದೇವತೆಗಳ ಪೂಜೆಯನ್ನು ಮಾಡು.

೭೨. ಅದೇಕ್ಷಣದಲ್ಲಿ ಮಂಗಳಮೂರ್ತಿಯೂ, ಸುಂದರಾಂಗನೆಯೂ ಆದ ಮದಾಲಸೆಯು ಯಾವ ರೂಪದಿಂದ ಮರಣಹೊಂದಿದಳೊ; ಅದೇರೂಪ-ದಿಂದ ಕಂಗೊಳಿಸುವವಳಾಗಿ ನಿನ್ನ ನಡುಭಾಗದ ಹೆಡೆಯಿಂದ ಹುಟ್ಟುವಳು.

ಸ್ವಯಮೇವೋಪಭುಙ್ಕ್ಷ್ವ ತತಃ ಸರ್ವಂ ಭವಿಷ್ಯತಿ ।
ಉತ್ಪತ್ಸ್ಯತೇ ತತಃ ಸಾ ತು ಸತ್ಯಂ ವೈ ಮಧ್ಯಮಾತ್ಫಣಾತ್ ॥೭೩॥

ಏತಚ್ಛ್ರುತ್ವಾ ತತಸ್ತೌ ತು ಪ್ರಣಿಪತ್ಯ ಮಹೇಶ್ವರಮ್ ।
ರಸಾತಲಮನುಪ್ರಾಪ್ತೌ ಪರಿತೋಷಸಮನ್ವಿತೌ ॥೭೪॥

ತಥಾ ಚ ಕೃತವಾನ್ ಶ್ರಾದ್ಧಂ ಸ ನಾಗಃ ಕಮ್ಬಲಾನುಜಃ ।
ಪಿಣ್ಡಂ ಚ ಮಧ್ಯಮಂ ತದ್ವದ್ಯಥಾವದುಪಭುಕ್ತವಾನ್ ॥೭೫॥

ಉಪಭುಕ್ತೇ ತತಃ ಪಿಣ್ಡೇ ತಸ್ಯ ಸಾ ತನುಮಧ್ಯಮಾ ।
ಜಜ್ಞೇ ನಿಶ್ವಸತಃ ಸದ್ಯಸ್ತದ್ರೂಪಾ ಮಧ್ಯಮಾತ್ಫಣಾತ್ ॥೭೬॥

ನ ಚಾಪಿ ಕಥಯಾಮಾಸ ಕಸ್ಯಚಿತ್ಸ ಭುಜಙ್ಗಮಃ ।
ಅನ್ತರ್ಗೃಹೇ ತಾಂ ಸುದತೀಂ ಸ್ತ್ರೀಭಿರ್ಗುಪ್ತಾಮಧಾರಯತ್ ॥೭೭॥

---

೭೩. ಮಧ್ಯಮ ಪಿಂಡವನ್ನು ನೀನೇ ಭುಂಜಿಸಬೇಕು. ಅದರಿಂದ ನಿನ್ನ ಇಷ್ಟವು ಹಾಗೆಯೆ ಸಮಗ್ರವಾಗಿ ಲಭಿಸುವುದು. ಮದಾಲಸೆಯು ಸತ್ಯವಾಗಿಯೂ ನಿನ್ನ ಮಧ್ಯಭಾಗದ ಹೆಡೆಯಲ್ಲಿ ಹುಟ್ಟಿಬರುವಳು.

೭೪. ಈಶ್ವರನು ಆಡಿದ ಈ ವಚನವನ್ನು ಕೇಳಿ ನಾಗೇಂದ್ರರಿಬ್ಬರು ಈಶ್ವರನನ್ನು ನಮಸ್ಕಾರಮಾಡಿ ಅಧಿಕವಾದ ಆನಂದದಿಂದ ಕೂಡಿದವರಾಗಿ ತಮ್ಮ ವಾಸಸ್ಥಾನವಾದ ಪಾತಾಲವನ್ನು ಸೇರಿದರು.

೭೫. ಕಂಬಲನ ತಮ್ಮನಾದ ಅಶ್ವತರನಾಗನು ಅದರಂತೆ ಯಥಾವಿಧಿಯಾಗಿ ಶ್ರಾದ್ಧವನ್ನು ಆಚರಿಸಿದನು. ಮತ್ತು ಹಾಗೆಯೆ ಮಧ್ಯಮ ಪಿಂಡವನ್ನು ಈಶ್ವರಾಜ್ಞೆಯಂತೆ ತಾನು ಭುಂಜಿಸಿದನು.

೭೬. ಮಧ್ಯಮ ಪಿಂಡವನ್ನು ಭುಂಜಿಸಲಾಗಿ ಕೂಡಲೆ ನಿಶ್ವಾಸಬಿಡುತ್ತಿದ್ದ ಅಶ್ವತರನಾಗನ ಮಧ್ಯಭಾಗದಲ್ಲಿರುವ, ಮದಾಲಸೆಯ ಉತ್ಪತ್ತಿಗೆ ಕಾರಣವಾದ ಹೆಡೆಯಿಂದ ಕೃಶಾಂಗಿಯಾದ ಮದಾಲಸೆಯು ಜನಿಸಿದಳು.

೭೭. ಆಗ ಅಶ್ವತರನಾಗನು ಮದಾಲಸೆಯು ಹುಟ್ಟಿದುದನ್ನು ಯಾರೊಬ್ಬನಿಗೂ ಹೇಳಲಿಲ್ಲ. ಸುಂದರವಾದ ದಂತಪಂಕ್ತಿಯುಳ್ಳ ಆ ಮಗಳು ಮನೆಯೊಳಗೆ ಗೂಢವಾಗಿ ಸ್ತ್ರೀಯರಿಂದ ಸುರಕ್ಷಿತಳಾಗಿರುವಂತೆ ಏರ್ಪಡಿಸಿದನು.

ತೌ ಚಾನುದಿನಮಾಗತ್ಯ ಪುತ್ರೌ ನಾಗಪತೇಃ ಸುಖಮ್ ।
ಋತಧ್ವಜೇನ ಸಹಿತೌ ಚಿಕ್ರೀಡಾತೇಽಮರಾವಿವ ॥೭೮॥

ಏಕದಾ ತು ಸ ತೌ ಪ್ರಾಹ ಸ ನಾಗೋಽಶ್ವತರೋ ಮುದಾ ।
ತನ್ಮಯಾ ಪೂರ್ವಮುಕ್ತಂ ತು ಕ್ರಿಯತೇ ಕಿಂ ನು ತತ್ತಥಾ ॥೭೯॥

ಸ ರಾಜಪುತ್ರೋ ಯುವಯೋರುಪಕಾರೀ ಮಮಾನ್ತಿಕಮ್ ।
ಕಿಂ ನು ನಾನೀಯತೇ ವತ್ಸಾವುಪಕಾರಾಯ ಮಾನದಃ ॥೮೦॥

ಏವಮುಕ್ತೌ ಪುನಸ್ತೇನ ಪುತ್ರೌ ಸ್ನೇಹವತಾ ತು ತೌ ।
ಗತ್ವಾ ತಸ್ಯ ಪುರಂ ಸಖ್ಯು ರೇಮಾತೇ ತೇನ ಧೀಮತಾ ॥೮೧॥

---

೭೮. ಹೀಗಿರಲು ಅಶ್ವತರನ ಇಬ್ಬರು ಪುತ್ರರು ಪ್ರತಿದಿನವೂ ನಾಗಲೋಕದಿಂದ ಮರ್ತ್ಯಲೋಕಕ್ಕೆ ಬಂದು ದೇವಕುಮಾರರಂತೆ ಋತಧ್ವಜನ ಸಂಗಡ ಸುಖವಾಗಿ ಕ್ರೀಡಿಸುತ್ತಿದ್ದರು.

೭೯. ಒಂದು ಸಮಯದಲ್ಲಿ ಆ ಅಶ್ವತರನೆಂಬ ನಾಗೇಂದ್ರನು ತನ್ನ ಪುತ್ರರನ್ನು ಕುರಿತು ಸಂತೋಷದಿಂದ ಹೇಳಿದನು. ನನ್ನಿಂದ ನಿಮ್ಮೆದುರಿಗೆ ಹಿಂದೆ ಏನುಹೇಳಲ್ಪಟ್ಟಿದೆಯೊ ಅದರಂತೆ ಮಾಡಬಹುದಾಗಿದೆಯಲ್ಲವೆ ?

೮೦. ಪುತ್ರರೆ! ಎಲ್ಲರಲ್ಲಿಯೂ ಗೌರವವನ್ನು ತೋರಿಸುವವನೂ, ನಿಮಗೆ ಉಪಕಾರಿಯೂ ಆದ ರಾಜಪುತ್ರನು ಪ್ರತ್ಯುಪಕಾರವನ್ನು ನಮ್ಮಿಂದ ಹೊಂದುವಂತೆ ನನ್ನ ಬಳಿಗೆ ನಿಮ್ಮಿಂದ ಏಕೆ ಕರೆತರಲ್ಪಡುವುದಿಲ್ಲ ?

೮೧. ಬಹಳ ಪ್ರೇಮದಿಂದ ಕೂಡಿದ ತಂದೆಯಿಂದ ನಾಗಪುತ್ರರು ಮತ್ತೆ ಮತ್ತೆ ಹೀಗೆ ಹೇಳಲ್ಪಟ್ಟರು. ಆಗ ಋತಧ್ವಜನ ನಗರಕ್ಕೆ ಹೋಗಿ ಮೇಧಾವಿಯಾದ ಆ ಮಿತ್ರನೊಡನೆ ನಾಗಪುತ್ರರು ವಿಹರಿಸುತ್ತಿದ್ದರು.

ತತಃ ಕುವಲಯಾಶ್ವಂ ತಂ ಕೃತ್ವಾ ಕಿಂಚಿತ್ಕಥಾನ್ತರಮ್ ।
ಅಬ್ರೂತಾಂ ಪ್ರಣಿಪಾತೇನ ಸ್ವಗೃಹಾಗಮನಂ ಪ್ರತಿ ||೮೨||

ತಾವಾಹ ನೃಪಪುತ್ರೋಽಸೌ ನನ್ವಿದಂ ಭವತೋರ್ಗೃಹಮ್ ।
ಧನವಾಹನವಸ್ತ್ರಾದಿ ಯನ್ಮದೀಯಂ ತದೇವ ವಾಮ್ ||೮೩||

ಯಸ್ಯ ವಾಂ ವಾಞ್ಛಿತಂ ದಾತುಂ ಧನಂ ರತ್ನಮಥಾಪಿ ವಾ ।
ತದ್ದೀಯತಾಂ ದ್ವಿಜಸುತೌ ಯದಿ ವಾಂ ಪ್ರಣಯೋ ಮಯಿ ||೮೪||

ಏತಾವತಾಹಂ ದೈವೇನ ವಞ್ಚಿತೋಽಸ್ಮಿ ದುರಾತ್ಮನಾ ।
ಯದ್ಭವದ್ಭ್ಯಾಂ ಮಮತ್ವಂ ನೋ ಮದೀಯೇ ಕ್ರಿಯತಾಂ ಗೃಹೇ ||೮೫||

---

೮೨. ತರುವಾಯ ನಾಗಕುಮಾರರು ಋತಧ್ವಜನೊಡನೆ ಯಾವುದೊ ಸಂಭಾಷಣೆಯನ್ನು ಮಾಡುತ್ತಿದ್ದ ಪ್ರಸಂಗದಲ್ಲಿ ಋತಧ್ವಜನನ್ನು ತಮ್ಮ ಮನೆಗೆ ಕರೆದುಕೊಂಡುಹೋಗುವ ವಿಷಯದಲ್ಲಿ ನಮಸ್ಕಾರಪೂರ್ವಕವಾಗಿ ಕೇಳಿಕೊಂಡರು.

೮೩. ರಾಜಪುತ್ರನು ನಾಗಕುಮಾರರನ್ನು ಕುರಿತು ಹೀಗೆ ಪ್ರತ್ಯುತ್ತರವಿತ್ತನು. ಮಿತ್ರರೆ! ಇದು ನಿಮ್ಮ ಮಂದಿರವೇ ಆಗಿದೆ! ಇಲ್ಲಿ ನನ್ನದಾಗಿರುವ ಧನ-ವಾಹನ-ವಸ್ತ್ರ ಮುಂತಾದ ಸಕಲ ವಸ್ತುಗಳೂ ನಿಮ್ಮದೇ ಆಗಿರುವುವು.

೮೪. ದ್ವಿಜಕುಮಾರರೆ! ನಿಮಗೆ ನಿಜವಾಗಿ ನನ್ನಲ್ಲಿ ಪ್ರಣಯವಿರುವುದಾದರೆ ಇಲ್ಲಿರುವ ಧನ-ರತ್ನ ಮುಂತಾದುವುಗಳಲ್ಲಿ ಯಾರಿಗೆ ಯಾವುದನ್ನು ಕೊಡಲು ಇಷ್ಟಪಡುವಿರೊ; ಅದನ್ನು ಅವರಿಗೆ ಅರ್ಪಿಸಿರಿ.

೮೫. ಇಷ್ಟು ಕಾಲವು ಕಳೆದರೂ ನೀವು ನನ್ನ ಮನೆಯಲ್ಲಿ ಮಮತ್ವವನ್ನು ಇರಿಸದೇ ಇರುವುದೆಂಬ ಒಂದು ನೀಚಸ್ವಭಾವವುಳ್ಳ ದುರ್ದೈವದಿಂದ ನಾನು ವಂಚಿಸಲ್ಪಟ್ಟಿರುವೆನು.

ಯದಿ ವಾ ಮೇ ಪ್ರಿಯಂ ಕಾರ್ಯಮನುಗ್ರಾಹ್ಯೋಽಸ್ಮಿ ವಾ ಯದಿ ।
ತದ್ಧನೇ ಮಮ ಗೇಹೇ ಚ ಮಮತ್ವಮನುಕಲ್ಪ್ಯತಾಮ್ ॥೮೬॥

ಯುವಯೋರ್ಯನ್ಮದೀಯಂ ತನ್ಮಾಮಕಂ ಯುವಯೋಃ ಸ್ವಯಮ್
ಏತತ್ಸರ್ವಂ ವಿಜಾನೀಯಾಃ ಸಖಾ ಪ್ರಾಣೋ ಬಹಿಶ್ಚರಃ ॥೮೭॥

ಪುನರ್ನೈವಂ ವಿಭಿನ್ನಾರ್ಥಂ ವಕ್ತವ್ಯಂ ದ್ವಿಜಸತ್ತಮೌ ।
ಮತ್ಪ್ರಸಾದಪರೌ ಪ್ರೀತ್ಯಾ ಶಾಪಿತೌ ಹೃದಯೇನ ಮೇ ॥೮೮॥

ತತಃ ಸ್ನೇಹಾರ್ದ್ರವದನೌ ತಾವುಭೌ ನಾಗನನ್ದನೌ ।
ಊಚತುರ್ನೃಪತೇಃ ಪುತ್ರಂ ಕಿಂಚಿತ್ಪ್ರಣಯಕೋಪಿತಮ್ ॥೮೯॥

---

೮೬. ಇನ್ನಾದರೂ ನೀವು ನನಗೆ ಪ್ರಿಯವನ್ನು ಮಾಡಲೆಣಿಸುವುದಾದರೆ ಮತ್ತು ನಾನು ನಿಮ್ಮ ಅನುಗ್ರಹಕ್ಕೆ ಪಾತ್ರನಾಗಬಹುದಾದರೆ ಆಗ ನನ್ನ ಐಶ್ವರ್ಯದಲ್ಲಿಯೂ ಮನೆಯಲ್ಲಿಯೂ ನೀವು ಮಮತ್ವವನ್ನು ಇರಿಸಿಕೊಳ್ಳಬೇಕು.

೮೭. ನಿಮಗೆ ಸೇರಿರುವ ಧನ-ಕನಕ ಮುಂತಾದ ವಸ್ತುವು ನನ್ನದಾಗಿದೆ. ಹಾಗು ನನ್ನ ವಸ್ತುಗಳು ನಿಮಗೆ ತಾನಾಗಿ ಸೇರಿದ್ದಾಗಿವೆ. ಇದು ಸಾಮಾನ್ಯವಾಗಿ ಮಿತ್ರರಲ್ಲಿರುವ ವ್ಯವಹಾರಧರ್ಮವೆಂದು ಅರಿಯಬೇಕು. ಎಲ್ಲರಿಗೂ ಮಿತ್ರನೆಂಬುದು ಬಹಿಶ್ಚರ ಪ್ರಾಣವಲ್ಲವೆ!

೮೮. ದ್ವಿಜೋತ್ತಮರೆ! ಪ್ರೀತಿಯಿಂದ ನನ್ನನ್ನು ಅನುಗ್ರಹಿಸಬೇಕೆಂಬ ಧ್ಯೇಯವುಳ್ಳ ನೀವು ಮತ್ತೊಮ್ಮೆ ನನ್ನ ಇಷ್ಟಕ್ಕೆ ವಿರೋಧವಾದ ಅರ್ಥವುಳ್ಳ ವಚನವನ್ನು ಆಡಲಾಗದು. ನನ್ನ ಹೃದಯದ ಆಣೆಯನ್ನಿಟ್ಟು ಹೇಳುವೆನು.

೮೯. ಆಮೇಲೆ ಇಂತಹ ಮಾತನ್ನು ಕೇಳಿದ್ದರಿಂದ ಸ್ನೇಹಭಾವದ ಇಂಗಿತದಿಂದ ತುಂಬಿಹೋದ ಮುಖವುಳ್ಳ ಆ ಇಬ್ಬರು ನಾಗಕುಮಾರರು ಪ್ರಣಯಪೂರ್ವಕವಾದ ಕೋಪಕಲೆಯನ್ನು ಹೊಂದಿದ ರಾಜಪುತ್ರನನ್ನು ನೋಡಿ ಹೇಳಿದರು,

ಋತಧ್ವಜ ನ ಸನ್ದೇಹೋ ಯಥೈವಾಹ ಭವಾನಿದಮ್ ।
ತಥೈವ ಚಾಸ್ಮನ್ಮನಸಿ ನಾತ್ರ ಚಿನ್ತ್ಯಮತೋಽನ್ಯಥಾ ॥೯೦॥

ಕಿಂ ತ್ವಾವಯೋಃ ಸಮಂ ಪಿತ್ರಾ ಪ್ರೋಕ್ತಮೇತನ್ಮಹಾತ್ಮನಾ ।
ದ್ರಷ್ಟುಂ ಕುವಲಯಾಶ್ವಂ ತಮಿಚ್ಛಾಮೀತಿ ಪುನಃ ಪುನಃ ॥೯೧॥

ತತಃ ಕುವಲಯಾಶ್ವೋಽಥ ಸಮುತ್ಥಾಯ ವರಾಸನಾತ್ ।
ಯಥಾಹ ತಾತೇತಿ ವದನ್ಪ್ರಣಾಮಮಕರೋದ್ಭುವಿ ॥೯೨॥

ಕುವಲಯಾಶ್ವ ಉವಾಚ :—

ಧನ್ಯೋಽಹಮತಿಪುಣ್ಯೋಽಹಂ ಕೋಽನ್ಯೋಽಸ್ತಿ ಸದೃಶೋ ಮಯಾ
ಯತ್ತಾತೋ ಮಾಮಭಿದ್ರಷ್ಟುಂ ಕರೋತಿ ಪ್ರವಣಂ ಮನಃ ॥೯೩॥

---

೯೦. ಋತಧ್ವಜನೆ! ನೀನು ಎಂತು ಹೇಳಿದೆಯೊ ಅದೆಲ್ಲವೂ ನಿಜವಾದುದು. ಅದರಲ್ಲಿ ಯಾವ ಸಂದೇಹವೂ ಇಲ್ಲ. ನಮ್ಮ ಮನಸ್ಸಿನಲ್ಲಿಯೂ ನೀನು ಹೇಳಿದಂತೆಯೆ ಭಾವನೆಯಿರುವುದು. ಬೇರೆ ವಿಧವಾಗಿ ಯೋಚಿಸಲಾಗದು.

೯೧. ಆದರೆ ಮಹಾತ್ಮನಾದ ನಮ್ಮ ತಂದೆಯಿಂದ " ಕುವಲಯಾಶ್ವನನ್ನು ನೋಡಲು ಆಶೆಪಡುತ್ತಿದ್ದೇನೆ " ಎಂದು ಮತ್ತೆ ಮತ್ತೆ ನಮ್ಮ ಎದುರಿನಲ್ಲಿ ಹೇಳಲ್ಪಟ್ಟಿತು.

೯೨. ಇದನ್ನು ಕೇಳಿದನಂತರ ಕುವಲಯಾಶ್ವನು ಉತ್ತಮವಾದ ತನ್ನ ಆಸನದಿಂದ ಎದ್ದು ನಿಂತು " ತಂದೆಯು ಹಾಗೆ ಹೇಳಿದನೆ! " ಎಂದು ಹೇಳುತ್ತ ನೆಲದಲ್ಲಿ ದಂಡಾಕಾರವಾಗಿ ಪ್ರಣಾಮಮಾಡಿದನು.

ಕುವಲಯಾಶ್ವನು ಇಂತೆಂದನು :—

೯೩. ನಾನು ಧನ್ಯನಾದೆನು; ನಾನು ಬಹುಪುಣ್ಯಶಾಲಿಯಾದೆನು. ನನಗೆ ಸರಿಸಮಾನನಾದ ಬೇರೊಬ್ಬನು ಯಾರಿರುವನು? ತಾತನು ನನ್ನನ್ನು ನೋಡಲು ಮನಸ್ಸಿನಲ್ಲಿ ಕುತೂಹಲದಿಂದ ತುಂಬಿರುವನು.

ತದುತ್ತಿಷ್ಠತ ಗಚ್ಛಾವಃ ತಾತಾಜ್ಞಾಂ ಕ್ಷಣಮುಪ್ಯಹಮ್ ।
ನಾತಿಕ್ರಾನ್ತುಮಿಹೇಚ್ಛಾಮಿ ಪದ್ಭ್ಯಾಂ ತಸ್ಯ ಶಪಾಮ್ಯಹಮ್ ॥೯೪॥

ಜಡ ಉವಾಚ :—

ಏವಮುಕ್ತ್ವಾ ಯಯೌ ಸೋಽಥ ಸಹ ತಾಭ್ಯಾಂ ನೃಪಾತ್ಮಜಃ ।
ಪ್ರಾಪ್ತಶ್ಚ ಗೌತಮೀಂ ಪುಣ್ಯಾಂ ನಿರ್ಗಮ್ಯ ನಗರಾದ್ಬಹಿಃ ॥೯೫॥

ತನ್ಮಧ್ಯೇನ ಯಯುಸ್ತೇ ವೈ ನಾಗೇನ್ದ್ರನೃಪನನ್ದನಾಃ ।
ಮೇನೇ ಚ ರಾಜಪುತ್ರೋಽಸೌ ಪಾರೇ ತಸ್ಯಾಸ್ತಯೋರ್ಗೃಹಮ್ ॥೯೬॥

ತತಶ್ಚಾಕೃಷ್ಯ ಪಾತಾಲಂ ತಾಭ್ಯಾಂ ನೀತೋ ನೃಪಾತ್ಮಜಃ ।
ಪಾತಾಲೇ ದದೃಶೇ ಚೋಭೌ ಸ ಪನ್ನಗಕುಮಾರಕೌ ॥೯೭॥

---

೯೪. ಆದುದರಿಂದ ಮೇಲಕ್ಕೆ ಏಳಿ, ನಿಮ್ಮ ಮನೆಗೆ ಹೋಗೋಣ. ತಾತನ ಆಜ್ಞೆಯನ್ನು ಈಗ ಒಂದುಕ್ಷಣಕಾಲವಾದರೂ ಉಲ್ಲಂಘಿಸಲು ನಾನು ಇಷ್ಟಪಡುವುದಿಲ್ಲ. ತಾತನ ಪಾದದ ಆಣೆಯಿಟ್ಟು ಹೇಳುವೆನು.

ಜಡಪುತ್ರನು ಇಂತೆಂದನು :—

೯೫. ಹೀಗೆಂದು ಹೇಳಿ ರಾಜಕುಮಾರನಾದ ಋತಧ್ವಜನು ನಾಗನಂದನರೊಡನೆ ಪ್ರಯಾಣಮಾಡಿದನು ಮತ್ತು ಹಾಗೆ ನಗರದಿಂದ ಹೊರಗೆ ಹೊರಟು ಪವಿತ್ರವಾದ ಗೌತಮಿನದಿಯನ್ನು ತಲುಪಿದನು.

೯೬. ಹೀಗೆ ಆ ನಾಗಕುಮಾರರೂ ಮತ್ತು ರಾಜನಂದನನೂ ಗೌತಮೀನದಿಯ ಮಧ್ಯದಲ್ಲಿ ನಡೆದರು. ರಾಜಪುತ್ರನು ಗೌತಮಿಯ ತೀರದಲ್ಲಿ ಅವರ ಮನೆಯು ಇರಬಹುದೆಂದು ತಿಳಿದುಕೊಂಡಿದ್ದನು.

೯೭. ತರುವಾಯ ರಾಜನಂದನನು ನಾಗಕುಮಾರರಿಂದ ಸೆಳೆದು ಪಾತಾಲಲೋಕಕ್ಕೆ ಒಯ್ಯಲ್ಪಟ್ಟನು. ಆಗ ಋತಧ್ವಜನು ಆ ಇಬ್ಬರು ನಾಗಕುಮಾರರನ್ನು ಪಾತಾಲಲೋಕದಲ್ಲಿ ನಾಗರೂಪದಿಂದ ನೋಡಿದನು.

ಫಣಾಮಣಿಕೃತೋದ್ಯೋತೌ ವ್ಯಕ್ತೌ ಸ್ವಸ್ತಿಕಲಕ್ಷಣೌ ।
ವಿಲೋಕ್ಯ ತೌ ಸುರೂಪಾಙ್ಗೌ ವಿಸ್ಮಯೋತ್ಫುಲ್ಲಲೋಚನಃ ॥೯೮॥

ವಿಹಸ್ಯ ಚಾಬ್ರವೀತ್ಪ್ರೇಮ್ಣಾ ಸಾಧು ಭೋ ದ್ವಿಜಸತ್ತಮೌ ।
ಕಥಯಾಮಾಸತುಸ್ತೌ ತು ಪಿತರಂ ಪನ್ನಗೇಶ್ವರಮ್ ॥೯೯॥

ಶಾನ್ತಮಶ್ವತರಂ ನಾಗಂ ಮಾನನೀಯಂ ದಿವೌಕಸಾಮ್ ।
ರಮಣೀಯಂ ತತೋಽಪಶ್ಯತ್ಪಾತಾಲಂ ಸ ನೃಪಾತ್ಮಜಃ ॥೧೦೦॥

ಕುಮಾರೈಸ್ತರುಣೈರ್ವೃದ್ಧೈರುರಗೈರುಪಶೋಭಿತಮ್ ।
ತಥೈವ ನಾಗಕನ್ಯಾಭಿಃ ಕ್ರೀಡನ್ತೀಭಿರಿತಸ್ತತಃ ॥೧೦೧॥

---

೯೮. ಹೆಡೆಗಳಲ್ಲಿರುವ ನಾಗರತ್ನಗಳಿಂದ ಬೆಳಗಿದ ಕಾಂತಿಯುಳ್ಳವರೂ, ಸ್ಪಷ್ಟವಾಗಿ ಕಾಣುವ ಸ್ವಸ್ತಿಕದ ಚಿಹ್ನೆಯುಳ್ಳವರೂ ಮತ್ತು ಬಲುಸುಂದರವಾದ ಅಂಗವುಳ್ಳವರೂ ಆದ ನಾಗಕುಮಾರರನ್ನು ನೋಡಿ ರಾಜಕುಮಾರನು ವಿಸ್ಮಯದಿಂದ ಅರಳಿದ ಕಣ್ಣುಗಳುಳ್ಳವನಾದನು.

೯೯. ಮತ್ತು ಋತಧ್ವಜನು ಪ್ರೇಮದಿಂದ "ದ್ವಿಜೋತ್ತಮರೆ! ಬಹಳ ಸಾಧುವಾಯಿತು" ಎಂದು ನಗುತ್ತ ಹೇಳಿದನು. ಆ ಕುಮಾರರು ನಾಗೇಂದ್ರನಾದ ತಂದೆಗೆ ತಾವು ಬಂದಿರುವುದನ್ನು ತಿಳಿಸಿದರು.

೧೦೦. ಶಾಂತಿಯಿಂದ ಕೂಡಿದವನೂ, ದೇವತೆಗಳಿಗೆ ಮಾನ್ಯನೂ ಆದ ಅಶ್ವತರ ನಾಗೇಂದ್ರನು ಋತಧ್ವಜನು ಬಂದಿರುವುದನ್ನು ತಿಳಿದನು. ಹಾಗು ಋತಧ್ವಜನು ರಮಣೀಯವಾದ ಪಾತಾಲವನ್ನು ನೋಡಿದನು.

೧೦೧. ಆ ಪಾತಾಲಲೋಕವು ಕುಮಾರ-ತರುಣ-ವೃದ್ಧ ಎಂಬ ನಾನಾವಿಧವಾದ ಅವಸ್ಥೆಯುಳ್ಳ ನಾಗಗಳಿಂದಲೂ ಅಲ್ಲಲ್ಲಿ ಕ್ರೀಡಿಸುತ್ತಿದ್ದ ನಾಗಕನ್ಯೆಯರಿಂದಲೂ ಶೋಭಿಸುತ್ತಿತ್ತು.

ಚಾರುಕುಣ್ಡಲಹಾರಾಭಿಸ್ತಾರಾಭಿರ್ಗಗನಂ ಯಥಾ ।
ಗೀತಶಬ್ದೈಸ್ತಥಾನ್ಯತ್ರ ವೀಣಾವೇಣುಸ್ವರಾನುಗೈಃ ॥೧೦೨॥

ಮೃದಙ್ಗಪಣವಾತೋದ್ಯಹಾರಿವೇಶ್ಮಶತಾಕುಲಮ್ ।
ವೀಕ್ಷಮಾಣಃ ಸ ಪಾತಾಲಂ ಯಯೌ ಶತ್ರುಜಿತಃ ಸುತಃ ॥೧೦೩॥

ಸಹ ತಾಭ್ಯಾಮಭೀಷ್ಟಾಭ್ಯಾಂ ಪನ್ನಗಾಭ್ಯಾಮರಿನ್ದಮಃ ॥೧೦೪॥

ತತಃ ಪ್ರವಿಶ್ಯ ತೇ ಸರ್ವೇ ನಾಗರಾಜನಿವೇಶನಮ್ ।
ದದೃಶುಸ್ತಂ ಮಹಾತ್ಮಾನಮುರಗಾಧಿಪತಿಂ ಸ್ಥಿತಮ್ ॥೧೦೫॥

ದಿವ್ಯಮಾಲ್ಯಾಮ್ಬರಧರಂ ಮಣಿಕುಣ್ಡಲಭೂಷಣಮ್ ।
ಸ್ವಚ್ಛಮುಕ್ತಾಫಲಲತಾಹಾರಿಹಾರೋಪಶೋಭಿತಮ್ ॥೧೦೬॥

---

೧೦೨. ಮತ್ತು ಸುಂದರವಾದ ಕುಂಡಲ-ಹಾರ ಮುಂತಾದ ಆಭರಣಗಳನ್ನು ಧರಿಸಿ ಗಗನದಲ್ಲಿ ತಾರೆಯರಂತಿದ್ದ ನಾಗಕನ್ಯೆಯರು ಕ್ರೀಡಿಸುತ್ತಿದ್ದ ಹಾಗೆ ಒಂದುಕಡೆ ವೀಣೆ-ಕೊಳಲುಗಳ ಶ್ರುತಿಗೆ ಸರಿಹೋಗುವ ಗೀತಧ್ವನಿಯಿಂದಲೂ ಕೂಡಿ ರಂಜಕವಾಗಿತ್ತು.

೧೦೩. ಶತ್ರುಜಿತರಾಜನ ಪುತ್ರನಾದ ಕುವಲಯಾಶ್ವನು ಮೃದಂಗ-ಪಣವ ಮುಂತಾವ ಬಗೆಬಗೆಯ ವಾದ್ಯಗಳಿಂದ ಮನವನ್ನು ಆಕರ್ಷಿಸುವ ನೂರಾರು ಮನೆಗಳಿಂದ ಕೂಡಿದ ಪಾತಾಲಲೋಕವನ್ನು ನೋಡಿದನು.

೧೦೪. ಹೀಗೆ ತನ್ನ ಪ್ರಣಯಿಗಳಾದ ನಾಗಕುಮಾರರೊಡನೆ ಶತ್ರುಂಜಯನಾದ ಋತಧ್ವಜರಾಜಕುಮಾರನು ಅಲ್ಲಲ್ಲಿ ಸಂಚರಿಸುತ್ತ ಪಾತಾಲದ ಸೌಂದರ್ಯವನ್ನು ನೋಡಿ ಆನಂದಿಸಿದನು.

೧೦೫. ತರುವಾಯ ಅವರೆಲ್ಲರೂ ನಾಗೇಂದ್ರನ ಮನೆಯ ಒಳಗೆ ಹೋಗಿ ಅಲ್ಲಿದ್ದ ಮಹಾತ್ಮನೂ ಸರ್ಪಗಳಿಗೆ ರಾಜನೂ ಆದ ಅಶ್ವತರನನ್ನು ನೋಡಿದರು.

೧೦೬. ಅಶ್ವತರನು ದಿವ್ಯವಾದ ಮಾಲ್ಯವನ್ನೂ ವಸ್ತ್ರಗಳನ್ನೂ ಧರಿಸಿದವನೂ, ರತ್ನಮಯವಾದ ಕುಂಡಲಗಳನ್ನು ಇಟ್ಟುಕೊಂಡವನೂ, ನಿರ್ಮಲವಾದ ಜಾತಿಯ ಮುತ್ತುಗಳಿಂದ ಶೋಭಿಸುವ ಹಾರಗಳಿಂದ ಶೋಭಿತನೂ ಆಗಿದ್ದನು.

ಕೇಯೂರಿಣಂ ಮಹಾಭಾಗವಾಸನೇ ಸರ್ವಕಾಞ್ಚನೇ |
ಮಣಿವಿದ್ರುಮವೈಡೂರ್ಯಜಾಲಾನ್ತರಿತರೂಪಕೇ ||೧೦೭||

ಸ ತಾಭ್ಯಾಂ ದರ್ಶಿತಸ್ತಸ್ಯ ತಾತೋಽಸ್ಮಾಕಮಸಾವಿತಿ |
ವೀರಃ ಕುವಲಯಾಶ್ವೋಽಯಂ ಪಿತ್ರೇ ಚಾಸೌ ನಿವೇದಿತಃ ||೧೦೮||

ತತೋ ನನಾಮ ಚರಣೌ ನಾಗೇನ್ದ್ರಸ್ಯ ಋತಧ್ವಜಃ |
ಸಮುತ್ಥಾಪ್ಯ ಬಲಾದ್ಗಾಢಂ ಸ ನಾಗಃ ಪರಿಷಸ್ವಜೇ ||೧೦೯||

ಮೂರ್ಧ್ನಿ ಚೈನಮುಪಾಘ್ರಾಯ ಚಿರಂ ಜೀವೇತ್ಯುವಾಚ ಹ |
ನಿಹತಾಮಿತ್ರವರ್ಗಶ್ಚ ಪಿತ್ರೋಃ ಶುಶ್ರೂಷಣಂ ಕುರು ||೧೧೦||

---

೧೦೭. ಮತ್ತು ರತ್ನ-ಹವಳ-ವೈಡೂರ್ಯ ಮುಂತಾದುವುಗಳಿಂದ ತುಂಬಿಹೋದ ಆಕಾರವುಳ್ಳ ಸುವರ್ಣಮಯವಾದ ಆಸನದಲ್ಲಿ ಕುಳಿತುಕೊಂಡವನೂ, ಭುಜಕೀರ್ತಿಯನ್ನು ಧರಿಸಿದವನೂ ಆದ ಮಹಾತ್ಮನನ್ನು ನೋಡಿದರು.

೧೦೮. ಆಗ ಅಂತಹ ಅಶ್ವತರ ನಾಗರಾಜನನ್ನು ಕುಮಾರರು " ಇವನು ನಮ್ಮ ತಂದೆ " ಎಂದು ಋತಧ್ವಜನಿಗೆ ತೋರಿಸಿದರು. ಹಾಗು ಋತಧ್ವಜನನ್ನು " ಇವನು ವೀರನಾದ ಕುವಲಯಾಶ್ವನು " ಎಂದು ತಂದೆಗೆ ತಿಳಿಸಿದರು.

೧೦೯. ತರುವಾಯ ಋತಧ್ವಜನು ನಾಗೇಂದ್ರನಾದ ಅಶ್ವತರನ ಪಾದಗಳಿಗೆ ವಂದಿಸಿದನು. ಆ ನಾಗೇಂದ್ರನು ತನ್ನ ಕಾಲುಗಳಲ್ಲಿ ನಮಸ್ಕಾರಮಾಡಿಕೊಂಡಿದ್ದ ರಾಜಕುಮಾರನನ್ನು ಮೇಲಕ್ಕೆ ಎತ್ತಿ ಬಿಗಿಯಾಗಿ ಅಪ್ಪಿಕೊಂಡನು.

೧೧೦. ಮತ್ತು ತಲೆಯಲ್ಲಿ ಮೂಸಿನೋಡುತ್ತ ಆಶೀರ್ವಾದಮಾಡಿದನು. " ರಾಜಪುತ್ರನೆ! ನೀನು ಚಿರಜೀವಿಯಾಗು. ನಾಶಮಾಡಿದ ಶತ್ರುವರ್ಗವೆಂಬ ಕಂಟಕವುಳ್ಳವನಾಗಿ ಮಾತಾಪಿತೃಗಳ ಶುಶ್ರೂಷೆಯನ್ನು ಮಾಡು " ಎಂದನು.

ವತ್ಸ ಧನ್ಯಸ್ಯ ಕಥ್ಯನ್ತೇ ಪರೋಕ್ಷಸ್ಯಾಪಿ ತೇ ಗುಣಾಃ ।
ಭವತೋ ಮಮ ಪುತ್ರಾಭ್ಯಾಮಾಭ್ಯಾಂ ಯೇ ಮೇ ನಿವೇದಿತಾಃ ॥೧೧೧॥

ತದೇತೈರೇವ ವರ್ಧೇಥಾ ಮನೋವಾಕ್ಕಾಯಚೇಷ್ಟಿತೈಃ ।
ಜೀವಿತಂ ಗುಣಿನಃ ಶ್ಲಾಘ್ಯಂ ಜೀವನ್ನಪಿ ಮೃತೋಽಗುಣೀ ॥೧೧೨॥

ಗುಣವಾನ್ನಿರ್ವೃತಿಂ ಪಿತ್ರೋಃ ಶತ್ರೂಣಾಂ ಹೃದಯೇ ಜ್ವರಮ್ ।
ಕರೋತ್ಯಾತ್ಮಹಿತಂ ಕುರ್ವನ್ನಿಶ್ವಾಸಂ ಚ ಮಹಾಜನೇ ॥೧೧೩॥

ದೇವತಾಃ ಪಿತರೋ ವಿಪ್ರಾ ಮಿತ್ರಾರ್ಥಿವಿಭವಾದಯಃ ।
ಬಾನ್ಧವಾಶ್ಚ ತಥೇಚ್ಛನ್ತಿ ಜೀವಿತಂ ಗುಣಿನಶ್ಚಿರಮ್ ॥೧೧೪॥

---

೧೧೧. ಮತ್ತು ಅಶ್ವತರನು ಋತಧ್ವಜನಿಗೆ ಹೀಗೆ ಹೇಳಿದನು. ಕುಮಾರನೆ! ನನ್ನ ಈ ಪುತ್ರರಿಂದ ನೀನು ಪರೋಕ್ಷನಾಗಿದ್ದಾಗ ನಿನ್ನ ಗುಣಗಳು ನನಗೆ ತಿಳಿಸಲ್ಪಟ್ಟವೆ. ನೀನೆ ಧನ್ಯನಾಗಿದ್ದೀಯೆ.

೧೧೨. ಆದ್ದರಿಂದ ಮುಂದೆ ನೀನು ಇದೇತರದ ಮನಸ್ಸು-ವಾಕ್-ಕಾಯಗಳ ಶ್ಲಾಘ್ಯವ್ಯಾಪಾರಗಳಿಂದ ವೃದ್ಧಿಹೊಂದು. ಗುಣವಂತನ ಜೀವಿತವು ಶ್ಲಾಘ್ಯವಾದುದು. ನಿರ್ಗುಣನಾದವನು ಜೀವಂತನಾಗಿದ್ದರೂ ಮೃತನಂತೆಯೆ ಆಗುವನು.

೧೧೩. ಗುಣವಂತನಾದ ವ್ಯಕ್ತಿಯು ಮಾತಾಪಿತೃಗಳಿಗೆ ಸುಖವನ್ನೂ, ಶತ್ರುಗಳ ಹೃದಯಕ್ಕೆ ಜ್ವರವನ್ನೂ, ತನಗೆ ಹಿತಪರಂಪರೆಯನ್ನೂ ಮತ್ತು ಜನಸಮಾಜದಲ್ಲಿ ವಿಶ್ವಾಸವನ್ನೂ ಮಾಡುವನು.

೧೧೪. ದೇವತೆಗಳೂ, ಪಿತೃಗಳೂ, ವಿಪ್ರರೂ, ಅರ್ಥಿಜನರೂ, ಸಂಪತ್ತಿನ ಸಮೃದ್ಧಿಗಳೂ, ಮತ್ತು ಬಂಧುಜನರೂ ಗುಣವಂತನಲ್ಲಿ ಚಿರಂಜೀವಿತ್ವವನ್ನು ಕೋರುವರು.

ಪರವಾದನಿವೃತ್ತಾನಾಂ ದುರ್ಗತೇಷು ದಯಾವತಾಮ್ ।
ಗುಣಿನಾಂ ಸಫಲಂ ಜನ್ಮ ಸಂಶ್ರಿತಾನಾಂ ವಿಪದ್ಗತೈಃ ॥೧೧೫॥

ಪುತ್ರ ಉವಾಚ: —

ಏವಮುಕ್ತ್ವಾ ಸ ತಂ ವೀರಂ ಪುತ್ರಾವಿದಮಥಾಬ್ರವೀತ್ ।
ಪೂಜಾಂ ಕುವಲಯಾಶ್ವಸ್ಯ ಕರ್ತುಕಾಮೋ ಭುಜಙ್ಗಮಃ ॥೧೧೬॥

ಸ್ನಾನಾದಿಕಕ್ರಮಂ ಕೃತ್ವಾ ಸರ್ವಮೇವ ಯಥಾಕ್ರಮಮ್ ।
ಮಧುಪಾನಾದಿಸಂಭೋಗಮಾಹಾರಂ ಚ ಯಥೇಪ್ಸಿತಮ್ ॥೧೧೭॥

ತತಃ ಕುವಲಯಾಶ್ವೇನ ಹೃದಯೋತ್ಸವಭೂತಯಾ ।
ಕಥಯಾ ಸ್ವಲ್ಪಕಂ ಕಾಲಂ ಸ್ಥಾಸ್ಯಾಮೋ ಹೃಷ್ಟಚೇತಸಃ ॥೧೧೮॥

---

೧೧೫. ಪರನಿಂದೆಯನ್ನು ಬಿಟ್ಟವರೂ, ದರಿದ್ರರಲ್ಲಿ ಕರುಣಾಳುಗಳೂ, ಮತ್ತು ಕಷ್ಟಭಾಗಿಗಳಿಂದ ಶರಣವಾಗಿ ಆಶ್ರಯಿಸಲ್ಪಟ್ಟವರೂ ಆದ ಗುಣವಂತರ ಜೀವನವು ಸಫಲವಾದುದು.

ಜಡಪುತ್ರನಿಂತೆಂದನು :—

೧೧೬. ಅಶ್ವತರನಾಗೇಂದ್ರನು ವೀರನಾದ ಋತಧ್ವಜನ ಸಂಗಡ ಹೀಗೆಂದು ಹೇಳಿ ಋತಧ್ವಜನಿಗೆ ಸತ್ಕಾರವನ್ನು ಮಾಡಲು ಇಷ್ಟವುಳ್ಳವನಾಗಿ ತನ್ನ ಪುತ್ರರನ್ನು ಕುರಿತು ಹೀಗೆಂದನು.

೧೧೭. ಪುತ್ರರೆ! ಈಗ ಕರ್ತವ್ಯವಾದ ಸ್ನಾನಾದಿ ಕರ್ಮವನ್ನು ಕ್ರಮವಾಗಿ ಸಂಪೂರ್ಣ ಮುಗಿಸಿಕೊಂಡು ಮನಸ್ಸಿಗೆ ಇಷ್ಟವಾದ ಮಧುಪಾನ ಭೋಗ ಹಾಗು ಆಹಾರಸೇವನೆ ಇವುಗಳನ್ನು ಮುಗಿಸಿಕೊಳ್ಳೋಣ.

೧೧೮. ತರುವಾಯ ಹೃದಯಕ್ಕೆ ದೊಡ್ಡ ಉತ್ಸವದಂತೆಯಿರುವ ಕಥಾಗೋಷ್ಠಿಯನ್ನು ನಡೆಸುತ್ತ ಸ್ವಲ್ಪಹೊತ್ತು ಕುವಲಯಾಶ್ವನ ಸಂಗಡ ಇದ್ದು ಸಂತೋಷಗೊಂಡ ಮನಸ್ಸುಳ್ಳವರಾಗೋಣ. ಹೀಗೆಂದು ಅಶ್ವತರನು ಕುಮಾರರಿದುರಿಗೆ ಹೇಳಿದನು.

ಅನುಮೇನೇ ಚ ತಂ ಮೌನೀ ವಚಃ ಶತ್ರುಜಿತಃ ಸುತಃ ।
ತಥಾ ಚಕಾರ ಚ ಪತಿಃ ಪನ್ನಗಾನಾಮುದಾರಧೀಃ ॥೧೧೯॥

ಸಮೇತ್ಯ ತೈರಾತ್ಮಜಭೂಪನನ್ದನೈ-
ರ್ಮಹೋರಗಾಣಾಮಧಿಪಃ ಸ ಸತ್ಯವಾಕ್ ।
ಮುದಾ ಯುತೋಽನ್ನಾನಿ ಮಧೂನಿ ಚಾತ್ಮನಾ-
ನ್ಯಥೋಪಜೋಷಂ ಬುಭುಜೇ ಸ ಭೋಗಭಾಕ್ ॥೧೨೦॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಕುವಲಯಾಶ್ವಸ್ಯ ಪಾತಾಲಪ್ರವೇಶೋ ನಾಮ ಏಕವಿಂಶೋಽಧ್ಯಾಯಃ

---

೧೧೯. ಅದುವರೆಗೂ ಮೌನದಿಂದ ಇದ್ದ ಶತ್ರುಜಿತನ ಕುಮಾರನು ನಾಗೇಂದ್ರನ ವಚನವನ್ನು ಸಮ್ಮತಿಸಿದನು. ಉದಾರವಾದ ಬುದ್ಧಿಯುಳ್ಳ, ನಾಗರಾಜನಾದ ಅಶ್ವತರನು ಹಾಗೆಯೆ ಎಲ್ಲ ಉಪಚಾರಗಳನ್ನು ಮಾಡಿಸಿದನು.

೧೨೦. ಆಗ ಆತ್ಮಸಂಸ್ಕೃತಿಯುಳ್ಳವನೂ, ಸತ್ಯವಂತನೂ, ಮತ್ತು ನಾನಾವಿಧವಾದ ಉತ್ತಮ ಭೋಗವುಳ್ಳವನೂ ಆದ ನಾಗರಾಜನು ತನ್ನ ಪುತ್ರರ ಮತ್ತು ರಾಜನಂದನನ ಒಡಗೂಡಿ ಬಹಳ ಸಂತೋಷಗೊಂಡವನಾಗಿ ಅನ್ನ ಮುಂತಾದ ಆಹಾರವನ್ನೂ ಮಧು ಮುಂತಾದ ಪಾನೀಯಗಳನ್ನೂ ತನ್ನ ಇಷ್ಟದಂತೆ ಸೇವಿಸಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಾವಿಂಶೋಽಧ್ಯಾಯಃ

(ಮದಾಲಸಾಯಾಃ ಪ್ರಾಪ್ತಿಃ)

ಪುತ್ರ ಉವಾಚ :—

ಕೃತಾಹಾರಂ ಮಹಾತ್ಮಾನಮಧಿಪಃ ಪವನಾಶಿನಾಮ್ ।
ಉಪಾಸಾಂಚಕ್ರಿರೇ ಪುತ್ರೌ ಭೂಪಾಲತನಯಸ್ತಥಾ ॥೧॥

ಕಥಾಭಿರನುರೂಪಾಭಿಃ ಪ್ರಹೃಷ್ಟಾತ್ಮಾ ಭುಜಙ್ಗಮಃ ।
ಪ್ರೀತಿಂ ಸಞ್ಜನಯಾಮಾಸ ಪುತ್ರಸಖ್ಯುರುವಾಚ ಹ ॥೨॥

ಇಪ್ಪತ್ತೆರಡನೆಯ ಅಧ್ಯಾಯ

ಜಡಪುತ್ರನು ಹೀಗೆ ಹೇಳಿದನು :—

೧. ಆಹಾರವನ್ನು ಸೇವಿಸಿರುವವನೂ, ಸರ್ಪಗಳಿಗೆ ಅಧಿಪತಿಯೂ ಮತ್ತು ಮಹಾತ್ಮನೂ ಆದ ಅಶ್ವತರನನ್ನು ಇಬ್ಬರು ನಾಗಪುತ್ರರೂ ಮತ್ತು ರಾಜಪುತ್ರನೂ ಸೇವೆಮಾಡುತ್ತ ನಿಂತರು.

೨. ಆಗ ಬಹಳ ಸಂತುಷ್ಟವಾದ ಅಂತರಂಗವುಳ್ಳ ನಾಗೇಂದ್ರನು ಅನುರೂಪವಾದ ಕಥೆಗಳ ಗೋಷ್ಠಿಗಳಿಂದ ಪ್ರೀತಿಯನ್ನು ತೋರ್ಪಡಿಸುತ್ತ ತನ್ನ ಪುತ್ರರ ಮಿತ್ರನಾದ ರಾಜಕುಮಾರನಿಗೆ ಹೇಳಿದನು.

ತವ ಭದ್ರ ಸುಖಂ ಬ್ರೂಹಿ ಗೇಹಮಭ್ಯಾಗತಸ್ಯ ಯತ್ ।
ಕರ್ತವ್ಯಮುತ್ಸೃಜಾಶಙ್ಕಾಂ ಪಿತರೀವ ಸುತೋ ಮಯಿ ॥೩॥

ಹಿರಣ್ಯಂ ವಾ ಸುವರ್ಣಂ ವಾ ವಸ್ತ್ರಂ ವಾಹನಮಾಸನಮ್ ।
ಯದ್ವಾಭಿಮತಮತ್ಯರ್ಥಂ ದುರ್ಲಭಂ ತದ್ವೃಣುಷ್ವ ಮಾಮ್ ॥೪॥

ಕುವಲಯಾಶ್ವ ಉವಾಚ:—

ಭವತ್ಪ್ರಸಾದಾದ್ಭಗವನ್ ಸುವರ್ಣಾದಿ ಗೃಹೇ ಮಮ ।
ಪಿತುರಸ್ತಿ ಮಮಾದ್ಯಾಪಿ ನ ಕಿಂಚಿತ್ಕಾರ್ಯಮೀದೃಶೈಃ ॥೫॥

ತಾತೇ ವರ್ಷಸಹಸ್ರಾಯುಃ ಶಾಸತೀಮಾಂ ವಸುನ್ಧರಾಮ್ ।
ತಥೈವ ತ್ವಯಿ ಪಾತಾಲಂ ನ ಮೇ ಯಾಚ್ಞೋನ್ಮುಖಂ ಮನಃ ॥೬॥

---

೩. ಮಂಗಳಭಾಗಿಯೆ! ನನ್ನ ಮನೆಗೆ ಅತಿಥಿಯಾಗಿ ಬಂದ ನಿನಗೆ ಸುಖವಾಗುವಂತೆ ಯಾವ ಕರ್ತವ್ಯವಿದೆಯೊ ಅದನ್ನು ಹೇಳು. ಪುತ್ರನು ತಂದೆಯಲ್ಲಿ ವಿಶ್ವಾಸವಿಡುವಂತೆ ನೀನು ನನ್ನಲ್ಲಿ ವಿಶ್ವಾಸವಿಟ್ಟು ಶಂಕೆಯಿಲ್ಲದೇ ಹೇಳು.

೪. ಹಿರಣ್ಯ, ಸುವರ್ಣ, ವಸ್ತ್ರ, ವಾಹನ, ಆಸನ ಮುಂತಾದ ಭೋಗ್ಯ-ವಸ್ತುಗಳಲ್ಲಿ ಇಷ್ಟವಾದುದನ್ನು ಹೇಳು. ಅಥವಾ ಮನುಷ್ಯರಿಗೆ ಅತ್ಯಂತ ದುರ್ಲಭವಾಗಿದ್ದರೂ ಅಂತಹ ನಿನ್ನ ಇಷ್ಟವನ್ನು ಹೇಳು.

ಕುವಲಯಾಶ್ವನು ಹೇಳಿದನು :—

೫. ಪೂಜ್ಯನಾದ ನಾಗೇಂದ್ರನೆ! ಸುವರ್ಣ ಮೊದಲಾದ ವಸ್ತು-ಸಮೃದ್ಧಿಯು ನಿನ್ನ ಅನುಗ್ರಹದಿಂದ ನನ್ನ ತಂದೆಯ ಮನೆಯಲ್ಲಿ ಸಂಪೂರ್ಣ-ವಾಗಿದೆ. ಇಂದು ನನಗೆ ಅಂತಹ ವಸ್ತುಗಳಿಂದ ಆಗಬೇಕಾದ ಪ್ರಯೋಜನವು ಏನೂ ಇಲ್ಲ.

೬. ನಮ್ಮ ತಂದೆಯು ಹೀಗೆ ಸಹಸ್ರಾರು ವರ್ಷಗಳ ಪೂರ್ಣಾಯುಷ್ಯ-ದಿಂದ ಕೂಡಿ ಭೂಮಿಯನ್ನೂ ಮತ್ತು ನಾಗರಾಜನಾದ ನೀನು ಪಾತಾಲಲೋಕ-ವನ್ನೂ ಆಳುತ್ತಿರಲು ನನ್ನ ಮನಸ್ಸು ಯಾವುದನ್ನೂ ಯಾಚಿಸುವ ಆಶೆಯನ್ನು ಹೊಂದಲಾರದು.

ತೇ ಸುಭಾಗ್ಯಾಃ ಸುಪುಣ್ಯಾಶ್ಚ ಯೇಷಾಂ ಪಿತರಿ ಜೀವತಿ ।
ತೃಣಂ ಕೋಟಿಸಮಂ ವಿತ್ತಂ ತಾರುಣ್ಯಂ ವಿತ್ತಕೋಟಿಷು ॥೭॥

ಮಿತ್ರಾಣಿ ತುಲ್ಯಶಿಷ್ಟಾನಿ ತದ್ವದ್ದೇಹಮನಾಮಯಮ್ ।
ಜನೇ ವಾ ಧ್ರಿಯತೇ ವಿತ್ತಂ ಯೌವನಂ ಕಿಂ ತು ನಾಸ್ತಿ ಮೇ ॥೮॥

ಅಸತ್ಯರ್ಥೇ ನೃಣಾಂ ಯಾಚ್ಞಾಪ್ರವಣಂ ಜಾಯತೇ ಮನಃ ।
ಸತ್ಯಶೇಷೇ ಕಥಂ ಯಾಚ್ಞಾಂ ಮಮ ಜಿಹ್ವಾ ಕರಿಷ್ಯತಿ ॥೯॥

ಯೈರ್ನ ಚಿನ್ತ್ಯಂ ಧನಂ ಕಿಂಚಿನ್ಮಮ ಗೇಹೇಽಸ್ತಿ ನಾಸ್ತಿ ವಾ ।
ಪಿತೃಬಾಹುತರುಚ್ಛಾಯಾಂ ಸಂಶ್ರಿತಾಃ ಸುಖಿನೋ ಹಿ ತೇ ॥೧೦॥

---

೭. ಯಾರಿಗೆ ತಂದೆಯು ಜೀವಂತನಾಗಿರಲು ತೃಣಪ್ರಾಯವಾಗಿ ಎಣಿಸುವಂತಹ ಕೋಟ್ಯತೀತವಾದ ವಿತ್ತವೂ, ಕೋಟ್ಯಂತರ ವಿತ್ತದ ಜೊತೆಗೆ ತಾರುಣ್ಯವೂ ಇರುವುವೊ; ಅಂತಹವರು ಭಾಗ್ಯವಂತರೂ, ಸುಕೃತಶಾಲಿಗಳೂ ಆಗಿರುವರು.

೮. ಹಾಗು ಅನುರೂಪರೂ ಯೋಗ್ಯರೂ ಆದ ಮಿತ್ರರ ಸಂಪರ್ಕ, ಅರೋಗವಾದ ದೇಹ, ದೀನಾನಾಥಜನರಲ್ಲಿ ಧನವಿತರಣೆ ಮತ್ತು ಯೌವನ—ಇವುಗಳು ಭಾಗ್ಯಲಭ್ಯವಾದುವುಗಳು. ನನ್ನಲ್ಲಿ ಇವುಗಳಲ್ಲಿ ಏನು ತಾನೆ ಇಲ್ಲ?

೯. ಇಷ್ಟವಾದ ವಸ್ತುವು ತನ್ನಲ್ಲಿಲ್ಲದ ಮಾನವರ ಮನಸ್ಸು ಯಾಚನೆ-ಮಾಡಲು ಕೆಳಗೆ ಇಳಿಯುವುದು. ಸಮಸ್ತ ಸಂಪತ್ತು ನನ್ನಲ್ಲಿ ತುಂಬಿರಲು ನನ್ನ ನಾಲಿಗೆಯು ಯಾಚನೆಯ ಮಾತನ್ನು ಹೇಗೆ ತಾನೆ ಆಡುವುದು?

೧೦. ತಂದೆಯ ಬಾಹುಗಳೆಂಬ ಮರದ ಛಾಯೆಯನ್ನು ಆಶ್ರಯಿಸಿರುವ ಯಾವ ಮಾನವರು ನನ್ನ ಮನೆಯಲ್ಲಿ ಧನವು ಏನಾದರೂ ಇದೆಯೆ? ಇಲ್ಲವೆ? ಎಂಬುದನ್ನು ಚಿಂತಿಸುವಂತಹ ದಶೆಯನ್ನು ಹೊಂದುವುದಿಲ್ಲವೊ; ಅವರೇ ಸುಖವಂತರಾಗಿರುವರು.

ಯೇ ತು ಬಾಲ್ಯಾತ್ಪ್ರಭೃತ್ಯೇವ ವಿನಾ ಪಿತ್ರಾ ಕುಟುಮ್ಬಿನಃ ।
ತಾನ್ ಸುಖಸ್ವಾದವಿಭ್ರಂಶಾನ್ಮನ್ಯೇ ಧಾತ್ರೈವ ವಞ್ಚಿತಾನ್ ॥೧೧॥

ತದ್ವಯಂ ತತ್ಪ್ರಸಾದೇನ ಧನರತ್ನಾದಿಸಞ್ಚಯಮ್ ।
ಪಿತೃಭಕ್ತಾಃ ಪ್ರಯಚ್ಛಾಮಃ ಕಾಮತೋ ನಿತ್ಯಮರ್ಥಿನಾಮ್ ॥೧೨॥

ತತ್ಸರ್ವಮಿಹ ಸಮ್ಪ್ರಾಪ್ತಂ ಯದಙ್ಘ್ರಿಯುಗಲಂ ತವ ।
ಮಚ್ಚೂಡಾಮಣಿನಾ ಘೃಷ್ಟಂ ಯಚ್ಚಾಙ್ಗಸ್ಪರ್ಶಮಾಪ್ತವಾನ್॥೧೩॥

ಪುತ್ರ ಉವಾಚ :—

ಇತ್ಯೇವಂ ಪ್ರಶ್ರಿತಂ ವಾಕ್ಯಮುಕ್ತಃ ಪನ್ನಗಸತ್ತಮಃ ।
ಪ್ರಾಹ ರಾಜಸುತಂ ಪ್ರೀತ್ಯಾ ಪುತ್ರಯೋರುಪಕಾರಿಣಮ್ ॥೧೪॥

---

೧೧. ಯಾವ ಮಾನವರು ಬಾಲ್ಯ ಮೊದಲುಗೊಂಡು ತಂದೆಯಿಂದ ವಿಯುಕ್ತರಾಗಿ ಕುಟುಂಬ ಭಾರಾಕ್ರಾಂತರಾಗುವರೊ; ಸ್ವಲ್ಪವಾದರೂ ಸುಖಾ-ಸ್ವಾದನೆಯಿಲ್ಲದ ಅಂತಹವರನ್ನು ವಿಧಿವಂಚಿತರೆಂದು ನಾನು ತಿಳಿಯುವೆನು.

೧೨. ಆದ್ದರಿಂದ ತಂದೆಯಲ್ಲಿ ಭಕ್ತಿಯಿಂದ ವರ್ತಿಸುವ ನಾವು ತಂದೆಯ ಅನುಗ್ರಹದಿಂದ ಧನ-ರತ್ನ ಮುಂತಾದುವುಗಳನ್ನು ಪ್ರತಿದಿನವೂ ಅರ್ಥಿಗಳ ಮನ ಮೆಚ್ಚುವಂತೆ ದಾನಮಾಡುತ್ತೇವೆ.

೧೩. ಆದರೆ ನನ್ನ ಶಿರಸ್ಸಿನಲ್ಲಿರುವ ರತ್ನದಿಂದ ನಿನ್ನ ಪಾದಾರವಿಂದಕ್ಕೆ ವಂದಿಸಿ ಘರ್ಷಣೆಯಾದುದು, ಮತ್ತು ನಿನ್ನ ಪ್ರೇಮಪೂರ್ಣ ಆಲಿಂಗನದಿಂದ ನಿನ್ನ ದೇಹಸ್ಪರ್ಶವು ಲಭಿಸುದುದು ಇವುಗಳಿಂದ ನನ್ನ ಇಷ್ಟವೆಲ್ಲವೂ ಇಲ್ಲಿ ಲಭಿಸಿದಂತಾಗಿದೆ.

ಜಡಪುತ್ರನು ಇಂತು ಹೇಳಿದನು :—

೧೪. ನಾಗರಾಜನು ರಾಜಕುಮಾರನಿಂದ ಈ ರೀತಿಯಾಗಿ ಬಹು ವಿನಯಗರ್ಭಿತ ಮಾತಿನಿಂದ ಹೇಳಲ್ಪಟ್ಟನು. ತರುವಾಯ ತನ್ನ ಪುತ್ರರಿಗೆ ಉಪಕಾರಿಯಾಗಿರುವ ರಾಜಪುತ್ರನನ್ನು ನೋಡಿ ಪ್ರೀತಿಯಿಂದ ಮತ್ತೆ ನುಡಿದನು.

ಯದಿ ರತ್ನಸುವರ್ಣಾದಿ ಮತ್ತೋಽವಾಪ್ತುಂ ನ ತೇ ಮನಃ ।
ಯದನ್ಯನ್ಮನಸಃ ಪ್ರೀತ್ಯೈ ಬ್ರೂಹಿ ತತ್ತೇ ದದಾಮ್ಯಹಮ್ ॥೧೫॥

ಕುವಲಯಾಶ್ವ ಉವಾಚ :—

ಭಗವಂಸ್ತ್ವತ್ಪ್ರಸಾದೇನ ಪ್ರಾರ್ಥಿತಸ್ಯ ಗೃಹೇ ಮಮ ।
ಸರ್ವಮಸ್ತಿ ವಿಶೇಷೇಣ ಸಮ್ಪ್ರಾಪ್ತಂ ತವ ದರ್ಶನಾತ್ ॥೧೬॥

ಕೃತಕೃತ್ಯೋಽಸ್ಮಿ ಚೈತೇನ ಸಫಲಂ ಜೀವಿತಂ ಮಮ ।
ಯದಙ್ಗಸಂಶ್ಲೇಷಮಿತಸ್ತವ ದೇವಸ್ಯ ಮಾನುಷಃ ॥೧೭॥

ಮಮೋತ್ತಮಾಙ್ಗೇ ತ್ವತ್ಪಾದರಜಸಾ ಯದಿಹಾಸ್ಪದಮ್ ।
ಕೃತಂ ತೇನೈವ ನ ಪ್ರಾಪ್ತಂ ಕಿಂ ಮಯಾ ಪನ್ನಗೇಶ್ವರ ॥೧೮॥

---

೧೫. ಒಂದುವೇಳೆ ರತ್ನ-ಸುವರ್ಣ ಮುಂತಾದುದನ್ನು ನನ್ನಿಂದ ತೆಗೆದುಕೊಳ್ಳಲು ನಿನ್ನ ಮನಸ್ಸಿನಲ್ಲಿ ಇಷ್ಟವಿಲ್ಲದಿದ್ದರೆ ನಿನ್ನ ಮನಸ್ಸಿಗೆ ಪ್ರೀತಿಯನ್ನು ಕೊಡುವಂತಹ ಇನ್ನಾವುದನ್ನಾದರೂ ಹೇಳು. ನಾನು ಅದನ್ನು ನಿನಗೆ ಕೊಡುವೆನು.

ಕುವಲಯಾಶ್ವನು ಇಂತೆಂದನು :—

೧೬. ಪೂಜ್ಯನೆ! ನಿನ್ನ ಅನುಗ್ರಹದಿಂದ ನನ್ನ ಮನೆಯಲ್ಲಿ ಆಶಿಸು-ವಂತಹ ಸಮಸ್ತವಸ್ತುಗಳೂ ಇರುತ್ತವೆ. ಈಗ ನಿನ್ನ ದರ್ಶನಲಾಭದಿಂದ ವಿಶೇಷ-ವಾಗಿ ಪೂರ್ಣವಾಗಿವೆ.

೧೭. ನಿನ್ನ ದರ್ಶನದಿಂದ ನಾನು ಕೃತಕೃತ್ಯನಾಗಿರುವೆನು. ಇಂದು ನನ್ನ ಜೀವಿತವು ಸಾರ್ಥಕವಾಯಿತು. ಮಾನುಷನಾದ ನಾನು ದೇವತೆಯಾದ ನಿನ್ನ ಅಂಗಸಂಪರ್ಕವನ್ನು ಹೊಂದಿ ಭಾಗ್ಯವಂತನಾಗಿರುವೆನು.

೧೮. ಎಲೈ ನಾಗೇಂದ್ರನೆ! ಇಲ್ಲಿ ನನ್ನ ಶಿರಸ್ಸಿನಲ್ಲಿ ನಿನ್ನ ಪವಿತ್ರವಾದ ಪಾದಧೂಳಿಗೆ ಅವಕಾಶವು ಲಭಿಸಿದುದರಿಂದ ಅಷ್ಟರಿಂದಲೆ ನನಗೆ ಏನು ತಾನೆ ಲಭಿಸಿದಂತಾಗಲಿಲ್ಲ ?

ಯದಿ ತ್ವವಶ್ಯಂ ದಾತವ್ಯೋ ವರೋ ಮೇ ಮನಸೇಪ್ಸಿತಃ ।
ತತ್ಪುಣ್ಯಕರ್ಮಸಂಸ್ಕಾರೋ ಹೃದಯಾನ್ಮಾ ವ್ಯಪೈತು ಮೇ ॥೧೯॥

ಸುವರ್ಣಮಣಿರತ್ನಾದಿ ವಾಹನಂ ಗೃಹಮಾಸನಮ್ ।
ಸ್ತ್ರಿಯೋಽನ್ನಪಾನಂ ಪುತ್ರಾಶ್ಚ ಚಾರುಮಾಲ್ಯಾನುಲೇಪನಮ್ ॥೨೦॥

ಏತೇ ಚ ವಿವಿಧಾ ಭೋಗಾ ಗೀತವಾದ್ಯಾದಿಕಂ ಚ ಯತ್ ।
ಸರ್ವಮೇತನ್ಮಮ ಮತಂ ಫಲಂ ಪುಣ್ಯವನಸ್ಪತೇಃ ॥೨೧॥

ತಸ್ಮಾನ್ನರೇಣ ತತ್ಮೂಲಸೇಕೇ ಯತ್ನಃ ಕೃತಾತ್ಮನಾ ।
ಕರ್ತವ್ಯಃ ಪುಣ್ಯಸಕ್ತಾನಾಂ ನ ಕಿಂಚಿದ್ಭುವಿ ದುರ್ಲಭಮ್ ॥೨೨॥

---

೧೯. ಆದರೂ ನನಗೆ ಮನಸ್ಸಿಗೆ ಇಷ್ಟವಾದ ವರವನ್ನು ಕೊಡಲೇಬೇಕೆಂಬುದು ಇದ್ದರೆ ಆ ಪಕ್ಷದಲ್ಲಿ ನಿನ್ನ ವರದಾನ ಪ್ರಭಾವದಿಂದ ಪುಣ್ಯಕರ್ಮದ ಸಂಸ್ಕಾರವು ನನ್ನ ಹೃದಯದಿಂದ ಎಂದೂ ಹೋಗದಂತೆ ಆಗಲಿ.

೨೦. ಪುಣ್ಯಕರ್ಮಸಂಸ್ಕಾರದ ಮುಂದೆ ಕೇಳಬೇಕಾದ ವರವು ಇನ್ನೇನು ತಾನೆ ಇದೆ? ಸುವರ್ಣ-ಮಣಿ-ರತ್ನ-ವಾಹನ-ಗೃಹ-ಆಸನ-ಸ್ತ್ರೀಯರು-ಅನ್ನ-ಪಾನೀಯ-ಪುತ್ರ-ಸುಗಂಧ-ಸುಮಾಲ್ಯ ಮುಂತಾದುವುಗಳೆಲ್ಲವೂ ಪುಣ್ಯಧನ-ದಿಂದ ಲಭ್ಯವಾದುದಲ್ಲವೆ?

೨೧. ಇಂತಹ ವಿವಿಧವಾದ ವಿಷಯಭೋಗಗಳು, ಗೀತ, ವಾದ್ಯ ಮುಂತಾದ ಭೋಗಗಳು—ಇವೆಲ್ಲವೂ ಪುಣ್ಯವೆಂಬ ವೃಕ್ಷದಿಂದ ಲಭಿಸುವ ಫಲ-ಗಳೆಂದು ನನ್ನ ಭಾವನೆಯು.

೨೨. ಆದುದರಿಂದ ವಿವೇಕದಿಂದ ಕೂಡಿದ ಮನಸ್ಸುಳ್ಳ ಮಾನವನು ಪುಣ್ಯವೆಂಬ ವನಸ್ಪತಿಯ ಮೂಲಕ್ಕೆ ನೀರೆರೆಯುವುದರಲ್ಲಿ ಯತ್ನವನ್ನು ತೋರಿಸಬೇಕು. ಭೂಲೋಕದಲ್ಲಿ ಪುಣ್ಯಕರ್ಮದಲ್ಲಿ ಆಸಕ್ತಿ ಹೊಂದಿದವರಿಗೆ ಏನೂ ದುರ್ಲಭವಾಗುವುದಿಲ್ಲ.

ಅಶ್ವತರ ಉವಾಚ :—

ಏವಂ ಭವಿಷ್ಯತಿ ಪ್ರಾಜ್ಞ ತವ ಧರ್ಮಾಶ್ರಿತಾ ಮತಿಃ ।
ಸತ್ಯಂ ಚ ತತ್ಫಲಂ ಸರ್ವಂ ಧರ್ಮಸ್ಯೋಕ್ತಂ ಯಥಾ ತ್ವಯಾ ॥೨೩॥

ತಥಾಪ್ಯವಶ್ಯಂ ಮದ್ಗೇಹಮಾಗತೇನ ತ್ವಯಾಧುನಾ ।
ಗ್ರಾಹ್ಯಂ ಯನ್ಮಾನುಷೇ ಲೋಕೇ ದುಷ್ಪ್ರಾಪಂ ಭವತೋ ಮತಮ್ ॥೨೪॥

ಪುತ್ರ ಉವಾಚ :—

ತಸ್ಯ ತದ್ವಚನಂ ಶ್ರುತ್ವಾ ಸ ತದಾ ನೃಪನನ್ದನಃ ।
ಮುಖಾವಲೋಕನಂ ಚಕ್ರೇ ಪನ್ನಗೇಶ್ವರಪುತ್ರಯೋಃ ॥೨೫॥

ತತಸ್ತೌ ಪ್ರಣಿಪತ್ಯೋಭೌ ರಾಜಪುತ್ರಸ್ಯ ಯನ್ಮತಮ್ ।
ತತ್ಪಿತುಃ ಸಕಲಂ ವೀರೌ ಕಥಯಾಮಾಸತುಃ ಸ್ಫುಟಮ್ ॥೨೬॥

ಅಶ್ವತರನು ಹೇಳಿದನು :—

೨೩. ಪ್ರಾಜ್ಞನೆ! ನಿನ್ನ ಇಷ್ಟದಂತೆ ನಿನ್ನ ಬುದ್ಧಿಯು ಯಾವಾಗಲೂ ಧರ್ಮಾವಲಂಬಿಯಾಗುವುದು. ಸುವರ್ಣ-ರತ್ನ ಮುಂತಾದ ಸಂಪತ್ತು ಪುಣ್ಯದ ಫಲವೆಂದು ನಿನ್ನಿಂದ ನುಡಿಯಲ್ಪಟ್ಟಿರುವ ವಚನವು ಸತ್ಯವಾದುದು.

೨೪. ಹಾಗಿದ್ದರೂ ಮನುಷ್ಯಲೋಕದಲ್ಲಿ ದುರ್ಲಭವೆಂದು ಭಾವಿಸಿರುವ ಯಾವುದಾದರೊಂದು ನಿನ್ನ ಇಷ್ಟವನ್ನು ನನ್ನ ಮನೆಗೆ ಅತಿಥಿಯಾಗಿ ಬಂದಿದ್ದ ನೀನು ಈಗ ಸ್ವೀಕರಿಸಬೇಕು.

ಜಡಪುತ್ರನು ಇಂತೆಂದನು :—

೨೫. ಆಗ ಆ ರಾಜಪುತ್ರನಾದ ಕುವಲಯಾಶ್ವನು ಅಶ್ವತರನು ಆಡಿದ ಮಾತುಗಳನ್ನು ಕೇಳಿ ಸಮೀಪದಲ್ಲಿ ಇದ್ದ ನಾಗಕುಮಾರರ ಮುಖವನ್ನು ನೋಡಿದನು.

೨೬. ತರುವಾಯ ವೀರರಾದ ಇಬ್ಬರು ನಾಗಕುಮಾರರು ನಮಸ್ಕಾರ ಮಾಡಿ ರಾಜಪುತ್ರನಿಗೆ ಯಾವುದು ಇಷ್ಟವಾಗಿದ್ದಿತೊ ; ಅದೆಲ್ಲವನ್ನೂ ತಂದೆಯ ಬಳಿಯಲ್ಲಿ ಸ್ಪಷ್ಟವಾಗಿ ಹೇಳಿದರು.

ತಾತಾಸ್ಯ ಪತ್ನೀ ದಯಿತಾ ಶ್ರುತ್ವೇಮಂ ವಿನಿಪಾತಿತಮ್ ।
ಅತ್ಯಜದ್ದಯಿತಾ ಪ್ರಾಣಾನ್ವಿಪ್ರಲಬ್ಧಾ ದುರಾತ್ಮನಾ ॥೨೭॥

ಕೇನಾಪಿ ಕೃತವೈರೇಣ ದಾನವೇನ ಕುಬುದ್ಧಿನಾ ।
ಗನ್ಧರ್ವರಾಜಸ್ಯ ಸುತಾ ನಾಮ್ನಾ ಖ್ಯಾತಾ ಮದಾಲಸಾ ॥೨೮॥

ಕೃತಜ್ಞೋಽಯಂ ತತಸ್ತಾತ ಪ್ರತಿಜ್ಞಾಂ ಕೃತವಾನಿಮಾಮ್ ।
ನಾನ್ಯಾ ಭಾರ್ಯಾ ಭವಿತ್ರೀ ಮೇ ವರ್ಜಯಿತ್ವಾ ಮದಾಲಸಾಮ್ ॥೨೯॥

ದ್ರಷ್ಟುಂ ತಾಂ ಚಾರುಸರ್ವಾಙ್ಗೀಮಯಂ ವೀರ ಋತಧ್ವಜಃ ।
ತಾತ ವಾಞ್ಛತಿ ಯದ್ಯೇತತ್ಕ್ರಿಯತೇ ತತ್ಕೃತಂ ಭವೇತ್ ॥೩೦॥

---

೨೭. ತಂದೆಯೆ! ಇವನ ಪ್ರಾಣಪ್ರಿಯೆಯಾದ ಪತ್ನಿಯು ಯಾರೊ ನೀಚನಿಂದ ವಂಚಿಸಲ್ಪಟ್ಟವಳಾಗಿ ಪತಿಯಾದ ಇವನು ವಧಿಸಲ್ಪಟ್ಟಿರುವನೆಂದು ತಿಳಿದು ವಿಯೋಗದುಃಖವನ್ನು ಸಹಿಸಲಾರದ ಆ ಪ್ರೇಯಸಿಯು ಪ್ರಾಣಗಳನ್ನು ತ್ಯಜಿಸಿದಳು.

೨೮. ಗಂಧರ್ವರಾಜನ ಪುತ್ರಿಯೂ, ಮದಾಲಸೆ ಎಂಬ ನಾಮಾಂಕನದಿಂದ ಖ್ಯಾತಿಗಳಿಸಿದವಳೂ ಆದ ಇವನ ಪತ್ನಿಯು ಹಿಂದಿನಿಂದ ವೈರವನ್ನು ಕಟ್ಟಿಕೊಂಡಿದ್ದ, ನೀಚಾತ್ಮನಾದ ಯಾರೊ ಒಬ್ಬ ದಾನವನ ನಿಮಿತ್ತದಿಂದ ಪ್ರಾಣತ್ಯಾಗಮಾಡಿದಳು.

೨೯. ತಂದೆಯೆ! ಆಮೇಲೆ ಆಕೆಯಲ್ಲಿ ಕೃತಜ್ಞನಾದ ಈ ರಾಜಪುತ್ರನು "ಪ್ರಿಯೆಯಾದ ಮದಾಲಸೆಯನ್ನು ಬಿಟ್ಟು ಇನ್ನೊಬ್ಬಳು ನಾರಿಯು ತನಗೆ ಭಾರ್ಯೆಯಾಗುವುದಿಲ್ಲ" ಎಂಬ ಪ್ರತಿಜ್ಞೆಯನ್ನು ಕೈಗೊಂಡನು.

೩೦. ಪಿತನೆ! ವೀರನಾದ ಈ ಋತಧ್ವಜನು ಸುಂದರವಾದ ಸರ್ವಾವಯವಗಳಿಂದ ರಾಜಿಸುವ ತನ್ನ ಪ್ರೇಯಸಿಯನ್ನು ನೋಡಲು ಇಷ್ಟವುಳ್ಳವನಾಗಿದ್ದಾನೆ. ಅದನ್ನು ಸಾಧಿಸುವುದಾದರೆ ಇವನಿಗೆ ಉಪಕಾರಮಾಡಿದಂತಾಗುವುದು.

ಅಶ್ವತರ ಉವಾಚ :—

ಭೂತೈರ್ವಿಯೋಗಿನೋ ಯೋಗಸ್ತಾದೃಶೈರೇವ ತಾದೃಶಃ ।
ಕಥಮೇತದ್ವಿನಾ ಸ್ವಪ್ನಂ ಮಾಯಾಂ ವಾ ಶಮ್ಬರೋದಿತಾಮ್॥ ೩೦॥

ಪುತ್ರ ಉವಾಚ :—

ಪ್ರಣಿಪತ್ಯ ಭುಜಙ್ಗೇಶಂ ಪುತ್ರಃ ಶತ್ರುಜಿತಸ್ತತಃ ।
ಪ್ರತ್ಯುವಾಚ ಮಹಾತ್ಮಾನಂ ಪ್ರೇಮಲಜ್ಜಾಸಮನ್ವಿತಃ　　॥೩೨॥

ಮಾಯಾಮಯೀಮಪ್ಯಧುನಾ ಮಮ ತಾತೋ ಮದಾಲಸಾಮ್ ।
ಯದಿ ದರ್ಶಯತೇ ಮನ್ಯೇ ಪರಂ ಕೃತಮನುಗ್ರಹಮ್　　॥೩೩॥

ಅಶ್ವತರನು ಹೇಳಿದನು :—

೩೧. ಹಿಂದೆ ಇದ್ದ ಪಂಚಭೂತ ಪರಿಣಾಮವಾದ ದೇಹದಿಂದ ವಿಯೋಗ ಹೊಂದಿದ ಆತ್ಮನಿಗೆ ಮತ್ತೆ ಅಂತಹ ಭೂತಸಂಯೋಗವು ಅಂತಹುದೆ ಆಗುವುದುಂಟೆ? ಆದರೆ ಈಗ ಸ್ವಪ್ನ ಅಥವಾ ಶಂಬರಮಾಯೆ—ಇವುಗಳನ್ನು ಹೊರತು ಪಾರಮಾರ್ಥಿಕವಾಗಿ ಮದಾಲಸಾದರ್ಶನವು ಹೇಗೆ ಆದೀತು?

ಜಡಪುತ್ರನು ಇಂತೆಂದನು :—

೩೨. ತರುವಾಯ ಶತ್ರುಜಿತರಾಜನ ಪುತ್ರನು ಮಹಾತ್ಮನಾದ ನಾಗಾಧಿರಾಜನನ್ನು ನಮಸ್ಕಾರಮಾಡಿ ಪ್ರೇಮ ಮತ್ತು ಲಜ್ಜೆ ಇವುಗಳಿಂದ ಕೂಡಿದವನಾಗಿ ಪ್ರತ್ಯುತ್ತರವನ್ನಿತ್ತನು.

೩೩. ತಂದೆಗೆ ಸಮಾನನಾದ ನಾಗೇಂದ್ರನೆ! ನೀನು ಮಾಯಾರೂಪಳಾದ ಮದಾಲಸೆಯನ್ನಾದರೂ ಈಗ ತೋರಿಸುವುದಾದರೆ ನನ್ನಲ್ಲಿ ದೊಡ್ಡ ಅನುಗ್ರಹವನ್ನು ತೋರಿಸಿದಂತೆ ನಾನು ತಿಳಿಯುತ್ತೇನೆ.

ಆಶ್ವತರ ಉವಾಚ :—

ತಸ್ಮಾತ್ಪಶ್ಯೇಹ ವತ್ಸ ತ್ವಂ ಮಾಯಾಂ ಚೇದ್ದ್ರಷ್ಟುಮಿಚ್ಛಸಿ ।
ಅನುಗ್ರಾಹ್ಯೋ ಭವಾನ್ಗೇಹೇ ಬಾಲೋಽಪ್ಯಭ್ಯಾಗತೋ ಗುರುಃ ॥೩೪॥

ಪುತ್ರ ಉವಾಚ :—

ಆನಯಾಮಾಸ ನಾಗೇನ್ದ್ರೋ ಗೃಹೇ ಗುಪ್ತಾಂ ಮದಾಲಸಾಮ್ ।
ದರ್ಶಯಾಮಾಸ ಚ ತದಾ ರಾಜಪುತ್ರಾಯ ತಾಂ ಶುಭಾಮ್ ॥೩೫॥

ತೇಷಾಂ ಸಂಮೋಹನಾರ್ಥಾಯ ಜಜಲ್ಪ ಚ ತತಃ ಸ್ಫುಟಮ್ ।
ಸೇಯಂ ನ ವೇತಿ ತೇ ಭಾರ್ಯಾ ರಾಜಪುತ್ರ ಮದಾಲಸಾ ॥೩೬॥

ಅಶ್ವತರನು ಹೀಗೆಂದನು :—

೩೪. ವತ್ಸನೆ! ನೀನು ಮಾಯಾರೂಪಿಣಿಯಾದ ಮದಾಲಸೆಯನ್ನು ನೋಡಲು ಇಷ್ಟಪಡುವೆಯಾದರೆ ಅವಳನ್ನು ಇಲ್ಲಿ ನೋಡುತ್ತೀಯೆ. ನನ್ನ ಮನೆಗೆ ಅತಿಥಿಯಾಗಿಬಂದಿರುವ ನೀನು ಬಾಲಕನಾಗಿದ್ದರೂ ಗುರುವಿನಂತೆ ಅನುಗ್ರಹಕ್ಕೆ ಪಾತ್ರನಾಗಿರುತ್ತೀಯೆ.

ಜಡಪುತ್ರನು ಹೇಳಿದನು :—

೩೫. ಆಗ ನಾಗರಾಜನಾದ ಅಶ್ವತರನು ತನ್ನ ಮನೆಯಲ್ಲಿ ರಹಸ್ಯವಾಗಿ ರಕ್ಷಿಸಲ್ಪಟ್ಟಿರುವ ಮದಾಲಸೆಯನ್ನು ಕರೆಯಿಸಿದನು. ಮತ್ತು ರಾಜಪುತ್ರನಿಗೆ ಆ ಮಂಗಳಾಂಗಿಯಾದ ಮದಾಲಸೆಯನ್ನು ತೋರಿಸಿದನು.

೩೬. ಮತ್ತು ಆ ಕುಮಾರರನ್ನು ವಿನೋದವಾಗಿ ಮೋಹಗೊಳಿಸುವುದಕ್ಕೋಸ್ಕರ ಆಗ ಈ ರೀತಿಯಾಗಿ ಹೇಳಿದನು. ರಾಜಪುತ್ರನೆ! ಇವಳು ನಿನ್ನ ಭಾರ್ಯೆಯಾದ ಮದಾಲಸೆಯು ಅಹುದೆ? ಅಲ್ಲವೆ? ಎಂದು ಸ್ಪಷ್ಟವಾಗಿ ಪ್ರಶ್ನೆ ಮಾಡಿದನು.

ಜಡ ಉವಾಚ :—

ಸ ದೃಷ್ಟ್ವಾ ತಾಂ ತದಾ ತನ್ವೀಂ ತತ್ಕ್ಷಣಾದ್ವಿಗತತ್ರಪಃ ।
ಪ್ರಿಯೇತಿ ತಾಮಭಿಮುಖಂ ಯಯೌ ವಾಚಮುದೀರಯನ್ ॥೩೭॥

ನಿವಾರಯಾಮಾಸ ಚ ತಂ ನಾಗಃ ಸೋಽಶ್ವತರಸ್ತ್ವರನ್ ॥೩೮॥

ಅಶ್ವತರ ಉವಾಚ :—

ಮಾಯೇಯಂ ಪುತ್ರ ಮಾ ಸ್ಪ್ರಾಕ್ಷೀಃ ಪ್ರಾಗೇವ ಕಥಿತಂ ತವ ।
ಅನ್ತರ್ಧಾನಮುಪೈತ್ಯಾಶು ಮಾಯಾ ಸಂಸ್ಪರ್ಶನಾದಿಭಿಃ ॥೩೯॥

ತತಃ ಪಪಾತ ಮೇದಿನ್ಯಾಂ ಸ ತು ಮೂರ್ಛಾಪರಿಪ್ಲುತಃ ।
ಹಾ ಪ್ರಿಯೇತಿ ವದನ್ ಸೋಽಥ ಚಿನ್ತಯಾಮಾಸ ಭಾಮಿನೀಮ್ ॥೪೦॥

ಜಡಪುತ್ರನು ಹೇಳಿದನು :—

೩೭. ಆಗ ಋತಧ್ವಜನು ತನ್ವಿಯಾದ ಆ ಮದಾಲಸೆಯನ್ನು ನೋಡಿ ಆಕ್ಷಣದಲ್ಲಿ ಹೊರಟು ಹೋದ ನಾಚಿಕೆಯುಳ್ಳವನಾಗಿ ಪ್ರಿಯೆ! ಎಂದು ಕೂಗಿ-ಕೊಳ್ಳುತ್ತ ಅವಳಿಗೆ ಅಭಿಮುಖವಾಗಿ ಹೋದನು.

೩೮. ಹಾಗೆ ಪ್ರಿಯೆಯಲ್ಲಿನ ಪ್ರೇಮೋದ್ರೇಕದಿಂದ ಮದಾಲಸೆಯ ಅಭಿಮುಖವಾಗಿ ಹೋಗುತ್ತಿದ್ದ ರಾಜಪುತ್ರನನ್ನು ನಾಗೇಂದ್ರನು ತ್ವರೆಪಟ್ಟು ನಿವಾರಣ ಮಾಡಿದನು.

ಅಶ್ವತರ ನಾಗೇಂದ್ರನು ನುಡಿದನು :—

೩೯. ಪುತ್ರನೆ! ಇದೊಂದು ಮಾಯೆಯು, ನೀನು ಇದನ್ನು ಮುಟ್ಟ-ಬೇಡ. ನಾನು ಮೊದಲೆ ನಿನಗೆ ಹೇಳಿರುವೆನು. ಮಾಯೆಯು ಸ್ಪರ್ಶನ-ಮುಂತಾದುದರಿಂದ ಬೇಗ ಅಂತರ್ಧಾನವನ್ನು ಹೊಂದುವುದು.

೪೦. ತರುವಾಯ ಆ ಋತಧ್ವಜನು ಮೂರ್ಛೆ ಆವರಿಸಿದವನಾಗಿ ನೆಲದಲ್ಲಿ ಬಿದ್ದನು. ಸ್ವಲ್ಪ ಹೊತ್ತಿನಲ್ಲಿ ಎಚ್ಚರಗೊಂಡ ಮೇಲೆ ಆ ಸತಿಯನ್ನು ಸ್ಮರಿಸಿ ಅಯ್ಯೋ! ಪ್ರಿಯೆ! ಎಂದು ಹೇಳುತ್ತ ಚಿಂತಿಸತೊಡಗಿದನು.

ಮೋಹೋ ಮಮಾಯಂ ನೋ ವೇತಿ ನಾಲಂ ಪ್ರತ್ಯಯಮಾನಹಮ್ ||೪೧||

ಅಹೋ ಮಮೇತ್ಯಹಂ ಚೇತಿ ಬಲಂ ಪ್ರತ್ಯಯಯೋರ್ಮಹತ್ ।
ಯೇನಾಹಂ ಪಾತನೋಽರೀಣಾಂ ವಿನಾ ಶಸ್ತ್ರಂ ನಿಪಾತಿತಃ ||೪೨||

ಮಮೇತಿ ದರ್ಶಿತಾನೇನ ಮಿಥ್ಯಾ ಮಾಯೇತಿ ವಿಸ್ಫುಟಮ್ ।
ವಾಯ್ವಮ್ಬುತೇಜಸಾಂ ಭೂಮೇರಾಕಾಶಸ್ಯ ಚ ಚೇಷ್ಟಯಾ ||೪೩||

ಪುತ್ರ ಉವಾಚ :—

ತತಃ ಕುವಲಯಾಶ್ವಂ ಸ ಸಮಾಶ್ವಾಸ್ಯ ಭುಜಙ್ಗಮಃ ।
ಕಥಯಾಮಾಸ ತತ್ಸರ್ವಂ ಮೃತಸಞ್ಜೀವನಾದಿಕಮ್ ||೪೪||

---

೪೧. ಈಗ ನನಗೆ ಲಭಿಸಿರುವ ಮದಾಲಸೆಯ ದರ್ಶನವು ಭ್ರಾಂತಿಯೆ? ಅಲ್ಲವೆ? ಎಂದು ನಾನು ಸ್ಥಿರವಾದ ನಂಬಿಕೆಯನ್ನು ಹೊಂದಲಾರದಿರುವೆನು.

೪೨. ಲೋಕದಲ್ಲಿ ಅಹಂತೆ, ಮಮತೆ ಎಂಬ ಎರಡು ಭಾವನೆಗಳಿಗೆ ಇರುವ ಅತಿಶಯವಾದ ಬಲವು ಆಶ್ಚರ್ಯಕರವಾಗಿದೆ. ಶಸ್ತ್ರದಿಂದ ಶತ್ರುಗಳನ್ನು ಪತನಮಾಡಿಸುವ ನಾನು ಮಮತೆಯಿಂದ ಶಸ್ತ್ರವಿಲ್ಲದೆ ಕೆಡವಲ್ಪಟ್ಟೆನು.

೪೩. ಈ ನಾಗೇಂದ್ರನಿಂದ ಭೂಮಿ-ಜಲ-ತೇಜಸ್ಸು-ವಾಯು ಮತ್ತು ಆಕಾಶ—ಈ ಪಂಚ ಮಹಾ ಭೂತಗಳ ಚೇಷ್ಟಾ ಪ್ರಭಾವದಿಂದ ಮಮತೆಗೆ ಆಸ್ಪದವಾದ ಮತ್ತು ಮಿಥ್ಯಾರೂಪವಾದ ಮಾಯೆಯು ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ.

ಜಡಪುತ್ರನು ಹೀಗೆ ಹೇಳಿದನು :—

೪೪. ತರುವಾಯ ಆ ಅಶ್ವತರ ನಾಗೇಂದ್ರನು ರಾಜಪುತ್ರನಾದ ಕುವಲಯಾಶ್ವನನ್ನು ಸಮಾಧಾನಗೊಳಿಸಿ ಮರಣಹೊಂದಿದ ಮದಾಲಸೆಯನ್ನು ಸಂಜೀವನಗೊಳಿಸಿದ ಸಕಲವೃತ್ತಾಂತವನ್ನು ಹೇಳಿದನು.

ತತಃ ಪ್ರಹೃಷ್ಟಃ ಪ್ರತಿಲಭ್ಯ ಕಾನ್ತಾಂ
ಪ್ರಣಮ್ಯ ನಾಗಂ ನಿಜಮಾಜಗಾಮ ।
ಸಂಸ್ತೂಯಮಾನಶ್ಚ ಪುರಂ ತಮಶ್ವ-
ಮಾರುಹ್ಯ ಸಞ್ಚಿನ್ತಿತಮಭ್ಯುಪೇತಮ್ ॥೪೫॥

ಶೃಣುಯಾದ್ಭಕ್ತಿಪೂರ್ವಂ ಯೋ ನೈರನ್ತರ್ಯೇಣ ಮಾನವಃ ।
ವೇದಘೋಷಫಲಂ ತೇನ ಪ್ರಾಪ್ತಂ ವೈ ಭುವಿ ದುರ್ಲಭಮ್ ॥೪೬॥

ಸಮ್ಪ್ರಾಪ್ನೋತಿಸುಖಂ ನಿತ್ಯಂ ಸರ್ವಕಾಮಸಮನ್ವಿತಃ ।
ಲೋಕೇ ಚ ದುರ್ಲಭಂ ತಸ್ಯ ನಾಸ್ತಿ ಕಿಂಚಿನ್ನ ವಿದ್ಯತೇ ॥೪೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮದಾಲಸಾಪ್ರಾಪ್ತಿ-
ನಿರೂಪಣಂ ನಾಮ ದ್ವಾವಿಂಶೋಽಧ್ಯಾಯಃ

---

೪೫. ಅನಂತರ ಪ್ರೇಯಸಿಯನ್ನು ಹೊಂದಿ ಸಂತೋಷಗೊಂಡಿರುವ ಕುವಲಯಾಶ್ವನು ನಾಗೇಂದ್ರನಿಗೆ ನಮಸ್ಕರಿಸಿ ಧ್ಯಾನಮಾತ್ರದಿಂದ ಸಮೀಪಕ್ಕೆ ಬಂದ ಕುವಲಯವೆಂಬ ಅಶ್ವವನ್ನು ಏರಿಕೊಂಡು ನಾಗೇಂದ್ರಕುಮಾರರಿಂದ ಸ್ತುತಿಸಲ್ಪಡುತ್ತ ತನ್ನ ನಗರಕ್ಕೆ ಬಂದನು.

೪೬. ಈ ಕುವಲಯಾಶ್ವ ಚರಿತ್ರೆಯನ್ನು ಯಾವ ಮಾನವನು ಭಕ್ತಿ. ಪೂರ್ವಕವಾಗಿ ಶ್ರವಣಮಾಡುವನೊ; ಅವನು ಭೂಲೋಕದಲ್ಲಿ ದುರ್ಲಭವಾದ, ವೇದಘೋಷ ಪುಣ್ಯದಿಂದ ಲಭ್ಯವಾದ ಫಲವನ್ನು ಹೊಂದುವನು.

೪೭. ಮತ್ತು ಹಾಗೆ ಪವಿತ್ರ ಚರಿತ್ರೆಯನ್ನು ಶ್ರವಣಮಾಡಿದವನು ಎಲ್ಲ ಇಷ್ಟಾರ್ಥಗಳನ್ನು ಹೊಂದಿದವನಾಗಿ ಸೌಖ್ಯವನ್ನು ಹೊಂದುವನು. ಅವನಿಗೆ ಲೋಕದಲ್ಲಿ ದುರ್ಲಭವಾದುದು ಏನೂ ಇಲ್ಲ. ಅವನಿಗೆ ಪ್ರಾಪ್ಯವಾಗದಿರುವ ಫಲವು ಯಾವುದೂ ಇಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು
ಮುಗಿದುದು.